# ರೂಹಿಲ್ಲದ ಚೆಲುವೆ

ಅಕ್ಕನ ವಚನ-ನಿರ್ವಚನ



ಬಸವರಾಜ ಸ್ವಾಮಿ

G. T. Reddy Adv

# ರೂಹಿಲ್ಲದ ಚೆಲುವೆ

ಅಕ್ಕಮಹಾದೇವಿ ಅವರ ವಚನಾನುಭವ

ಬಸವರಾಜ ಸ್ವಾಮಿ

ಪ್ರಕಾಶಕರು
ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್
ಸುದ್ದಿಮೂಲ ಕಾರ್ಯಾಲಯ, ಸಿಯಾತಲಾಬ,
ರಾಯಚೂರು -584102 ಕರ್ನಾಟಕ

# ರೂಹಿಲ್ಲದ ಚೆಲುವೆ

ಅಕ್ಕಮಹಾದೇವಿ ಅವರ ವಚನಾನುಭವ

| | |
|---|---|
| ಲೇಖಕರು | : ಬಸವರಾಜ ಸ್ವಾಮಿ |
| ಪ್ರಕಾಶಕರು | : **ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್**<br>ಸುದ್ದಿಮೂಲ ಕಾರ್ಯಾಲಯ, ಅಂಚೆ ಪೆಟ್ಟಿಗೆ 350,<br>ಸೀಯಾತಲಾಬ, ರಾಯಚೂರು -584102. |
| ಮೊದಲ ಮುದ್ರಣ | : 2012 |
| ಪ್ರತಿಗಳು | : 1000 |
| ಹಕ್ಕುಗಳು | : ಲೇಖಕರವು |
| ಪುಟಗಳು | : 212+ XV |
| ಆಕಾರ | : 1/8 ಡೆಮಿ |
| ಒಳಪುಟಕಾಗದ | : 80 ಜಿಎಸ್ಎಂ ಎನ್ ಎಸ್ ಮ್ಯಾಪ್‌ಲಿಥೋ |
| ಬೆಲೆ | : **200 / -ರೂ.** |
| ಮುದ್ರಣ | : ಶುಭೋದಯ ಪ್ರಿಂಟರ್ಸ್ ಬೆಂಗಳೂರು |
| ಮುಖಪುಟ ಚಿತ್ರ | : ಶ್ರೀ ಮುರಳೀಧರ ರಾಠೋಡ |

ROOHILLADA CHELUVE
Akkamahadevi avara Vachananubhava
by: Basavraj Swamy
Editor, Suddimoola Kannada Daily
Siyatalab, Raichur -584102.

| | |
|---|---|
| Published by | : Suddimoola Publishers India Limited<br>Suddimoola Kannada Daily<br>Siya Talab, Raichur -584102 Karnataka<br>: Ph 08532-235730, 236413 , Fax - 235293 |
| First Edition | : 2012 |
| Copyright | : Author |
| Pages | : 212 + xv |
| Size | : 1/8th Demy |
| Paper used | : 80 GSM NS Maplitho |
| Copies | : 1000 |
| Price | : Rs. 200/- |
| Printed at | : Shubhodaya Printers<br>No.35, I st Cross, Nanjamba Agrahara ,<br>Chamarajpet, Bangalore-18, |

# ಅರ್ಪಣೆ



ಶಿವಶರಣರಂತೆ ಬದುಕಿದ
ಮಾತೋಶ್ರೀ ನೀಲಮ್ಮ ತಾಯಿಯವರಿಗೆ

# ಓದುವ ಮುನ್ನ .......

ಶಿವಶರಣೆ ಅಕ್ಕಮಹಾದೇವಿ ಸಾವಿಲ್ಲದ ಚಲುವೆ. ಸಾವಕೆಡುವ ಗಂಡ ಕೌಶಿಕನನ್ನು ಕೊಡವಿ; ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಸಹಜ ಚೆಲುವನಿಗೆ ಒಲಿದಳು. ಆತನನ್ನೇ ಗಂಡನನ್ನಾಗಿ ಮಾಡಿಕೊಂಡಳು. ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವನ ದರ್ಶನ ಭಾಗ್ಯ ಸಾವಿಲ್ಲದ ಚಲುವೆಗೆ ಮಾತ್ರ ಸಾಧ್ಯವಾಗುತ್ತದೆ.

ದೇಹಕ್ಕೆ ಎಡೆಯಿದೆ, ಕಡೆಯಿದೆ, ಕುರುಹೂ ಇದೆ. ಚೆಲುವು ಕುಂದುತ್ತಾ ಬಂದು ವಿಕಾರಹೊಂದಿ ಮರಣದೊಂದಿಗೆ ಇಲ್ಲವಾಗುತ್ತದೆ. ಆದರೆ ಅಕ್ಕ ಸಾವಿಲ್ಲದ ಕೇಡಿಲ್ಲದ ಕಡೆಯಿಲ್ಲದ ಎಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವನಿಗೆ ನಾನೊಲಿದೆ ಎಂದಿದ್ದಾಳೆ. ಅಂತಹ ಚೆಲುವ ಯಾರಿರಬಹುದು?

ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದೆ, ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ಒಲಿದೆ, ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ ಎಂದು ತನ್ನ ಚಲುವ ಗಂಡನ ಪರಿಚಯ ಎಲ್ಲರಿಗೂ ಮಾಡಿಕೊಟ್ಟಿದ್ದಾಳೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನನ್ನು ಕೂಡಲು ಅಕ್ಕ ಎಲೆ ಅವ್ವಗಳಿರಾ ಎಂದು ಸರ್ವರನ್ನು ಕೈಮಾಡಿ ಕರೆದಿದ್ದಾಳೆ.

ದೇಹ ಎನ್ನುವ ಕುರುಹು ಹೆಣ್ಣು ಅಲ್ಲ, ಗಂಡೂ ಅಲ್ಲ, ಹೆಣ್ಣು ಎಂದು ಕರೆಯಿಸಿಕೊಳ್ಳುವ ದೇಹವು ದೇಹವೇ, ಗಂಡು ಎಂದು ಕರೆಯಿಸಿಕೊಳ್ಳುವ ದೇಹವೂ ದೇಹವೆ! ಜೀವ ಜಲಬಿಂದು ದೇಹದ ಮೂಲಕ ಗರ್ಭ ಪ್ರವೇಶ ಮಾಡಿ, ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದಿಂದ ಬಂಧಿಸಲ್ಪಟ್ಟು ದೇಹ ಎಂದು ಹೆಸರು ಪಡೆಯುತ್ತದೆ. ಮೊಲೆ ಮುಡಿ ಮೀಸೆ ಕಾಸೆಗಳನ್ನು ನೋಡಿ ಹೆಣ್ಣು ಗಂಡೆಂದು ಕರೆಯಿಸಿಕೊಳ್ಳುತ್ತದೆ, ಅರಿವಿನಿಂದ ನೋಡಿದರೆ ದೇಹ ಹೆಣ್ಣೂ ಅಲ್ಲ ಗಂಡೂ ಅಲ್ಲ!

ಜಲ ಕಾಣುತ್ತದೆ, ಜಲಕ್ಕೆ ಆಕಾರ ಇಲ್ಲ, ಬಣ್ಣ ಇಲ್ಲ, ವಾಸನೆ ಇಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ.

ಜಲದ ಮೂಲ ಜಲಜನಕ ಆಮ್ಲಜನಕ ! ಇವು ಕಾಣುವುದಿಲ್ಲ . ಇವುಗಳ ವಾಸ ಬಯಲಿನಲ್ಲಿ! ಇವುಗಳಲ್ಲಿ ಬಯಲು ಬೆರೆತು; ಜಲವಾಗಿ, ಜೀವಜಲವಾಗಿ ಗರ್ಭಸೇರಿ ದೇಹವಾಗಿ ಹೊರ ಬಂದಿದೆ.

ಜಲಜನಕಕ್ಕೂ ಆಮ್ಲಜನಕಕ್ಕೂ ಬಯಲಿಗೂ ಸಾವಿಲ್ಲ! ಜಲಜನಕ ಆಮ್ಲಜನಕ ಇಲ್ಲದ ನಿರ್ವಾತ ಪ್ರದೇಶ ಗಮನಕ್ಕಿದೆ; ಆದರೆ ಬಯಲು ಇಲ್ಲದ ಸ್ಥಳವೇ ಇಲ್ಲ. ಭೂಮಿ ನೀರು ಗಾಳಿ ಬೆಂಕಿ ಸೂರ್ಯ ಚಂದ್ರ ನಕ್ಷತ್ರಗಳ ವಾಸ ಬಯಲಗರ್ಭದಲ್ಲಿಯೇ! ಗ್ರಹಗಳು ಇಲ್ಲವಾಗಬಹುದು ಬಯಲು ಇಲ್ಲವಾಗಲು ಸಾಧ್ಯವೇ ಇಲ್ಲ. ಬಯಲ ಗರ್ಭದಿಂದ ಹೊರಬಂದು ವಸ್ತುಗಳಾಗಿ ಕಂಡು ಒಮ್ಮೆ ಇಲ್ಲವಾಗಿ ಬಯಲ ಗರ್ಭದಲ್ಲಿ ಲೀನವಾಗಿ ಬಯಲಾಗುತ್ತವೆ.

ಭೂಮಿಯನ್ನು ಇದರ ಮೇಲೆ ಬೆಳೆದ ಗಿಡ ಮರ ಬಳ್ಳಿ; ಪಶು ಪಕ್ಷಿ ಪ್ರಾಣಿ, ಜಲ,

ಜಲಚರಗಳನ್ನು; ಮನುಕುಲವನ್ನು ಹಡೆದದ್ದು ಕೂಡಾ ಬಯಲಾಗಲಿಲ್ಲವೇ? ಬಯಲಿನ ಸೃಷ್ಟಿಯು ಜಲಬಿಂದುವೇ ದೇಹಕ್ಕೆ ಜನ್ಮ ನೀಡಿತು. ಆ ದೇಹದ ಕಣಕಣದಲ್ಲಿ ಬೆರೆತು ಅರಿವಾಯಿತು, ದೇಹದ ದಾರಿದೀಪವಾಯಿತು, ಬೆಳಗಿಂಗೆ ಬೆಳಕಾಗಿ ಬೆಳಗಾಯಿತು.

ಈ ಬೆಳಕೆ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ ಚೆನ್ನಮಲ್ಲಿಕಾರ್ಜುನ! ಈ ಚಲುವನನ್ನು ಪುರಾತನರು ಸೂರ್ಯಕೋಟಿ ಸಮಪ್ರಭ : ಕೋಟಿ ಸೂರ್ಯರಿಗೆ ಸಮನಾದವನು ಎಂದು ಬಣ್ಣಿಸಿದ್ದಾರೆ.

ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು ನೀನಲ್ಲದೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವಾ ಹಾಲಲ್ಲಾದರೂ ಅದ್ದು, ನೀರಲ್ಲಾದರೂ ಅದ್ದು ನಿಮ್ಮ ಧರ್ಮ ಎಂದು ಬಸವಣ್ಣ ಅರಿವಿನ ಬಯಲನ್ನೇ ತಂದೆ ತಾಯಿ ಬಂಧು ಬಳಗವಾಗಿಸಿಕೊಂಡರು.

ಅರಿವೆಂಬ ಬಯಲು: ಜಗದಗಲ ಮುಗಿಲಗಲ ಚಾಚಿಕೊಂಡಿದೆ, ಪಾತಾಳದಿಂದಲೂ ಅತ್ತತ್ತ; ಬ್ರಹ್ಮಾಂಡದಿಂದಲೂ ಅತ್ತತ್ತ ವ್ಯಾಪಿಸಿದೆ, ಗಮನಕ್ಕೆ ನಿಲುಕದ ಬಯಲು, ಅಗೋಚರವಾದ ಬಯಲು, ಯಾರೂ ಪ್ರಮಾಣಿಸದ ಬಯಲು ಅರಿವಾಗಿ ಅಪ್ರತಿಮ ಲಿಂಗವಾಗಿ ಅಂಗದಲ್ಲಿ ಬಂದು ಚುಳುಕಾಗಿದೆ; ನ್ಯಾನೊ ಆಗಿದೆ ಎಂದು ಶರಣರು ಹಾಡಿದ್ದಾರೆ.

ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ? ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕಿನ ಗಂಡರೆಲ್ಲಾ ಮುಗಿಲ ಮರೆಯ ಬೊಂಬೆಯಂತೆ ಎಂದು ಅಕ್ಕ ಹೇಳಿದ್ದಾಳೆ.

ಅರಿವೆಂಬ ಚೆಲುವು ದೇಹಕ್ಕೆ ಜನ್ಮಕೊಟ್ಟು ತಂದೆಯಾಗಿದೆ, ಗಂಡನಾಗಿ ಗುರುವಾಗಿ ಚೆನ್ನಮಲ್ಲಿಕಾರ್ಜುನನಾಗಿದೆ, ದೇಹವನ್ನು ಪೋಷಿಸುತ್ತಾ ಆ ದೇಹದ ಕಣಕಣದಲ್ಲಿ ವ್ಯಾಪಿಸಿದೆ, ಆಯುಷ್ಯ ಇರುವವರೆಗೆ ತನುವಿನ ಮನವೆಂಬ ಚೆಲುವೆಯನ್ನು ಮತ್ತೆ ಮತ್ತೆ ತನ್ನತ್ತ ಸವಿ ನುಡಿಗಳಿಂದ ಸೆಳೆದು ಅರಿವಿನ ಸುಖವನುಣಿಸುವ ಕಾತುರದಲ್ಲಿದೆ, ಆ ಮಿಲನ ಕೂಡದಗಲದ ಮಿಲನ !

'ಒಂದೂ ಇಲ್ಲದ ಬಿಂದುವ ತಂದೆ ಇಲ್ಲದ ಕಂದನ, ಮಾತೆ ಇಲ್ಲದ ಜಾತನ, ಗಮನವಿಲ್ಲದ ಗಮ್ಯನ, ಮೂವರರಿಯದ ಮುಗ್ಧನ ಠಾವ ತೋರಿಸು ಗುಹೇಶ್ವರಾ!' ಎಂದು ಅಲ್ಲಮ ಪ್ರಭುಗಳು ಬಯಲ ಚೆಲುವನನ್ನು ಕೊಂಡಾಡಿದ್ದಾರೆ.

'ಬಯಲು ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ' ಎಂದಿದ್ದಾರೆ ದಾಸೀಮಾರ್ಯರು.

'ಎಲ್ಲರ ಗಂಡನ ಪರಿಯಂತಲ್ಲ ನೋಡವ್ವಾ ನಮ್ಮ ನಲ್ಲ; ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ; ಕೂಡಲ ಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ'. ಬಸವಣ್ಣ ಲೋಕಕ್ಕೆ ಗಂಡಾಗಿದ್ದರೂ ತಾನು ಹೆಣ್ಣಾಗಿ ಕೂಡಲ ಸಂಗಮದೇವನೆಂಬ ಅರಿವಿನ ಚೆಲುವನನ್ನು ಗಂಡನನ್ನಾಗಿಸಿಕೊಂಡು ದೇಹದಲ್ಲಿ ಬಚ್ಚಿಟ್ಟುಕೊಂಡಿದ್ದಾರೆ.

ಶ್ರೀಕೃಷ್ಣನೊಬ್ಬನೇ ಗಂಡ ; ಗೋಪಿಕಾ ಸ್ತ್ರೀಯರು ಹದಿನಾರು ಸಾವಿರ ! ತನುವಿನಲ್ಲಿರುವ ಅರಿವು ತಿಳಿದು ತಾನೇ ಅರಿವಾದ ಶ್ರೀ ಕೃಷ್ಣ! ಆ ಅರಿವು ತಿಳಿಯಲು ಹದಿನಾರು ಸಾವಿರ ತನುಗಳು

ಶ್ರೀ ಕೃಷ್ಣನಿಗೆ ಹೆಂಡಂದಿರಾದರು ; ಶಿಷ್ಯರಾದರು. ಕಾಲ ಕಳೆಯಿತು. ಜನ ಬೆಡಗಿನ ಈ ಮಾತನ್ನು ತಿಳಿಯಲಿಲ್ಲ. ದ್ವಾರಕಾ ನಗರಿಯ ಶ್ರೀಕೃಷ್ಣ ಮಂದಿರದಲ್ಲಿ ಹೆಣ್ಣುಮಕ್ಕಳ ಪ್ರವೇಶಕ್ಕೆ ನಿಷೇಧ ಹೇರಿದ್ದರು. ಬಿಚ್ಚುಗತ್ತಿಯ ಕಾವಲು ಗಾರನನ್ನು ಹಾಕಿದ್ದರು. ಒಳನುಗ್ಗಿದ ಮಹಿಳೆಯನ್ನು ಕಡಿಯಲು ಆದೇಶ ಹೊರಡಿಸಿದ್ದರು.

ಮೀರಾ ಶ್ರೀಕೃಷ್ಣನ ಭಕ್ತೆ. ಆತನನ್ನೇ ಸಖನನ್ನಾಗಿ ಮಾಡಿಕೊಂಡು ತಾನು ಸಖಿಯಾದವಳು. ಕೃಷ್ಣಮಂದಿರ ಪ್ರವೇಶಿಸಿದಳು. ಕಾವಲುಗಾರನಿಗೆ ತಡೆಯಲಾಗಲಿಲ್ಲ. ಪೂಜಾರಿ ಮೀರಾಳನ್ನು ನೋಡಿ ಹೌಹಾರಿದ. ನೀನು ಒಳಗೆ ಹೇಗೆ ಬಂದೆ ? ಕಾವಲುಗಾರ ನಿನ್ನನ್ನು ಕೊಲ್ಲಲಿಲ್ಲವೆ ? ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲವೆಂದು ನಿನಗೆ ತಿಳಿದಿಲ್ಲವೆ ?

ಮೀರಾ ಅತ್ಯಂತ ಶಾಂತತೆಯಿಂದ 'ಶ್ರೀಕೃಷ್ಣನನ್ನು ಬಿಟ್ಟು ಯಾರೂ ಗಂಡಸರಲ್ಲ; ಆತನೊಬ್ಬನೇ ಪರಮ ಪುರುಷ! ನೀನಾವಾಗ ಪುರುಷನಾದೆ ? ಉಳಿದವರೆಲ್ಲ ಸ್ತ್ರೀ ಯರೆಂದು ನಿನಗೆ ತಿಳಿದಿಲ್ಲವೆ !' ಎನ್ನುತ್ತಾಳೆ. ಈಕೆ ಸತ್ಯ ತಿಳಿದ ಮಹಾಶರಣೆ ಎಂದು ಪೂಜಾರಿ ಹಿರಿಯರೊಂದಿಗೆ ಚರ್ಚಿಸಿ, ಅಂದಿನಿಂದ ಮಹಿಳೆಯರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಯಿತಂತೆ.

ಮೀರಾ ಕೃಷ್ಣನನ್ನು ಒಲಿಸಿಕೊಂಡು ಸಖನನ್ನಾಗಿ ಮಾಡಿಕೊಂಡರೆ, ಅಕ್ಕಮಹಾದೇವಿ ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದಳು. ಸೀಮೆಯಿಲ್ಲದ ನಿಸ್ಸೀಮ ಚೆಲುವ ಚೆನ್ನಮಲ್ಲಿಕಾರ್ಜುನನನ್ನು ಗಂಡನನ್ನಾಗಿಸಿಕೊಂಡಳು.

ಭವವಿಲ್ಲದ, ಭಯವಿಲ್ಲದ ನಿರ್ಭಯ ಬಯಲೆಂಬ ಚೆಲುವನಿಂದಲೇ ದೇಹ. ಆ ಚೆಲುವ ಚೆನ್ನಮಲ್ಲಿಕಾರ್ಜುನ ಒಂದೂ ಇಲ್ಲದ ಬಿಂದು. ತಂದೆ ಇಲ್ಲದ ಕಂದ. ಮಾತೇ ಇಲ್ಲದ ಜಾತ. ಗಮನವಿಲ್ಲದ ಗಮ್ಯನೆಂಬ ಬಯಲ ಬೆಳಕು ದೇಹದಲ್ಲಿ ಚುಳುಕಾಗಿ ಅರಿವಾಗಿ ಬೆಳಗಿದೆ. ಆ ಬೆಳಗಿನ ನೆರಳಾಗಿ ಮನ ಸೃಷ್ಟಿಯಾಗಿದೆ. ಬೆಳಕಿನಿಂದಲೇ ನೆರಳು. ಬೆಳಕಿಗೂ ನೆರಳಿಗೂ ನಂಟು. ಬೆಳಕು ಪತಿಯಾದರೆ ನೆರಳು ಸತಿ. ಬೆಳಕು ಲಿಂಗವಾದರೆ ನೆರಳು ಅದಕ್ಕೆ ಶರಣು ಹೋಗಿ ಶರಣಾಗಬೇಕು. ಬೆಳಕಿಗೂ ಸಾವಿಲ್ಲ. ಆ ಬೆಳಕಿನಿಂದ ಜನ್ಮ ಪಡೆದೆನೆಂದು ತಿಳಿದ ನೆರಳಿಗೂ ಸಾವಿಲ್ಲ. ಅರಿವು ಬೆಳಗಿ ಮನವೆಂಬ ನೆರಳಾಯ್ತು. ಬೆಳಕು ತಿಳಿದ ನೆರಳು ಬೆಳಕಿನಲ್ಲಿ ಲೀನವಾಗಿ ಬೆಳಕಾಯಿತು. ಮತ್ತೆ ನೆರಳಾಗದೇ ರೂಹಿಲ್ಲದ ಚೆಲುವಾಯಿತು.

ದೇಹದಲ್ಲಿಯ ಅರಿವು ನುಡಿದು ಬೆಳಗುತ್ತದೆ. ದೇಹದಲ್ಲಿಯ ಮನ ಆ ಬೆಳಗನುಂಡು ಬೆಳಗಿನ ನುಡಿ ನುಡಿಯುತ್ತದೆ. ಬೆಳಕನರಿಯದ ಮನ ಕತ್ತಲು ; ಬೆಳಕೂ ಕತ್ತಲೂ ದೇಹದಲ್ಲಿಯೇ ವಾಸ ! 'ಬೆಳಕೂ ಇದೆ ಕತ್ತಲೂ ಇದೆ ಇದೇನು ಚೋದ್ಯವೊ ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ' ಎಂದು ಅಲ್ಲಮಪ್ರಭು ಹೇಳುತ್ತಾರೆ. ಒಡಲೊಳಗಿದ್ದು ಒಡಲಿಂಗಾಧಾರವಾಗಿ, ಒಡಲ ಸೋಂಕದೆ ; ಒಡಲ ಬೆಳಗುವ , ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕನ್ನು ಬೆಳಕಿನಿಂದಲೇ ಹುಟ್ಟಿದ ಮನ ತಿಳಿಯಬೇಕು. ತಿಳಿದು ಆ ಬೆಳಕಿನಲ್ಲಿಯೇ ಲೀನವಾಗಬೇಕು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನಲ್ಲಿ ಒಡಲಿದ್ದಾಗಲೇ ಮನ ಸತಿ ಹೋಗಬೇಕು. ಸಾವಿಲ್ಲದ ರೂಹಿಲ್ಲದ ಚೆಲುವೆಯಾಗಿ ; ಸತಿ ಪತಿಗಳೊಂದಾಗಿ ಹಿತವಾದ ಬೆಳಕಾಗಬೇಕು. ಆ ಬೆಳಕೇ ಜಗದಗಲ ಮುಗಿಲಗಲ ಬೆಳಗಿ, ಪಾತಾಳದಿಂದತ್ತತ್ತ, ಬ್ರಹ್ಮಾಂಡದಿಂದತ್ತತ್ತಲೂ ಬೆಳಗಿ ವಿರಾಟ ಸ್ವರೂಪವನ್ನೇ ತಾಳಿ ತಾನೇ ರೂಹಿಲ್ಲದ ಚೆಲುವನಾಗಬೇಕು.

* * * *

ಅಕ್ಕ ತನು ಮನ ಅರಿವು ಕುರಿತು ಕಾರ್ಯ ನಿರ್ವಹಿಸಿದ್ದಾಳೆ. ಜ್ಞಾನಕ್ಕೆ ಹೋಗುವ ಸರಳ ಮಾರ್ಗವನ್ನು ಸೂತ್ರ ರೂಪದಲ್ಲಿ ಬಂಧಿಸಿದ್ದಾಳೆ. ಈ ವಚನಗಳಲ್ಲಿ ಸಾಮಾಜಿಕ ಸ್ಥಿತಿಗತಿ, ಜಾತ್ಯಾತೀತತೆ, ಆರ್ಥಿಕ ಸಮಾನತೆ, ಕಾಯಕ , ಮಹಿಳಾ ಸಮಾನತೆ ಮುಂತಾದ ವಿಷಯಗಳನ್ನು ಆಧುನಿಕರು, ಸಾಹಿತಿಗಳು ಕಂಡುಕೊಂಡರೂ ವಚನಗಳು ಅವೆಲ್ಲವುಗಳಿಂದಲೂ ಅತ್ತತ್ತ.

ಅಕ್ಕ ಅನುಭವಿಸಿ ಸುಖಪಟ್ಟ ಅರಿವಿನ ಸಿಹಿಫಲದ ಸೂತ್ರಗಳೆ ವಚನಗಳು. ಆ ಸೂತ್ರವೇ ಎಲ್ಲ ಅಲ್ಲ. ಅದರ ಹಿಂದೆ ಸೂತ್ರದ ತಿರುಳಿದೆ. ಗುರುವಿನ ಮುಖಾಂತರ ಸೂತ್ರದ ಸುಳುಹು ತಿಳಿದುಕೊಂಡಾಗ ಮಾತ್ರ ತನುವಿನಲ್ಲಿ ಸಂಗ್ರಹವಾದ ಕಹಿ ಕಳಚಿ ಸಿಹಿ ಫಲ ಉದಯವಾಗುತ್ತದೆ. ಆಗ ತನು ನುಡಿದದ್ದೆಲ್ಲ ವಚನ. ಓದಿದ ಅಕ್ಕನ ವಚನಗಳೆಲ್ಲಾ ಪಚನ. ಅಕ್ಕನ ಆಶಯ ಅರ್ಥವಾಗುತ್ತ ಹೋಗುತ್ತದೆ. ಅವರ ಆಶಯದಂತೆ ಓದಿದ ಪ್ರತಿ ತನು ಅರಿವಿನ ತನುವಾಗಿ ಸಿದ್ಧವಾಗುತ್ತದೆ. ಆದರೆ ಇವೆಲ್ಲದಕ್ಕೂ ಸಮರ್ಥ ಗುರುವಿನ ಅವಶ್ಯಕತೆಯಿದೆ.

ಹಸಿವಾದರೆ ಮಾತ್ರ ಊಟ ರುಚಿಸುತ್ತದೆ. ಪ್ರತಿ ಊಟಕ್ಕೂ ಹಸಿವು ಬೇಕೇ ಬೇಕು. ಹಾಗೆಯೇ ಮನಕ್ಕೆ ಜ್ಞಾನದ ಬಯಕೆಯಾಗಬೇಕು, ಹಸಿವಾಗಬೇಕು. ಸಮರ್ಥ ಗುರುವಿನ ಹುಡುಕಾಟದಲ್ಲಿ ತೊಡಗಿದ್ದರೆ, ತನುವಿನ ಯೋಗವಿದ್ದರೆ ಆ ತನುವನ್ನು ಕ್ಷಣಾರ್ಧದಲ್ಲಿ ತನ್ನಂತೆ ಮಾಡಿಕೊಳ್ಳುವ ಗುರು ತಪ್ಪದೇ ದೊರಕುತ್ತಾನೆ.

ಸದಾ ಗುರುವಾಗಿರುವ ಗುರು ಗುರುವಲ್ಲ. ಸದಾ ಶಿಷ್ಯನಾಗಿರುವ ಶಿಷ್ಯ ಶಿಷ್ಯನಲ್ಲ. ಇವರು ಪರಂಪರೆಯ ಗುರು ಶಿಷ್ಯರು ! ಶಿಷ್ಯನಲ್ಲಿ ಅರಿವೆಂಬ ಗುರುವಿನ ಸುಳುಹು ತೋರಿ ಹಿಂದಕ್ಕೆ ಸರಿಯುವ ಗುರು ಅವಶ್ಯ . ಉರಿಯುವ ಪ್ರಣತಿ ಮತ್ತೊಂದು ಪ್ರಣತಿಯ ಬತ್ತಿಗೆ ಚುಂಬಿಸುವ ಶಿಕ್ಷಣ ಸಾಕು. ಎರಡೂ ಉರಿಯುತ್ತವೆ. ಚುಂಬಿಸಿ ಬೆಳಗಿದ ದೀಪ ಗುರುವಲ್ಲ. ಬೆಳಗಿದ್ದು ಶಿಷ್ಯನಲ್ಲ. ಎರಡೂ ದೀಪಗಳು ಪ್ರಕಾಶ ಮಾನವಾದ ಬೆಳಕು !

ಅಕ್ಕ ಸಕಲ ತನುವಿನಲ್ಲಿರುವ ಅಕ್ಷರೋತ್ತಮನನ್ನು ಗುರುತಿಸಿದ್ದಾಳೆ. ಜ್ಞಾನಿಯಾಗಲು ಅಕ್ಷರದ ಅವಶ್ಯವಿಲ್ಲ. ತನುವು ಹಾಗೂ ತನುವಿನಲ್ಲಿರುವ ಅಗಾಧವಾದ ಅರಿವು ನೋಡುವ ಸುಳುಹಿನ ಅವಶ್ಯಕತೆ ಮಾತ್ರ ಇದೆ. ಮನ ತನುವಿನಲ್ಲಿರುವ ಜ್ಞಾನದ ಸುಳುಹಿನತ್ತ ವಾಲದೆ, ಹೊರಗಿನ ವಸ್ತು ಸಂಗ್ರಹದಲ್ಲಿ ನಿರತವಾಗಿ ರೋಗದ ತನುವನ್ನಾಗಿಸಿದೆ. ಬಡವ ಶ್ರೀಮಂತ, ಉತ್ತಮ ಅಧಮನನ್ನಾಗಿ ಮಾಡಲು ಕಾರಣವಾಗಿದೆ . ಹೊರ ನೋಡುವ ಮನ ಒಳ ನೋಡಿದರೆ ಸಾಕು ನಷ್ಟವಾಗುತ್ತದೆ. ಉಳಿದದ್ದು ಘನ ತನು. ಜ್ಞಾನ ತನು ! ಹೊರ ನೋಡುವ ಮನ ತನುವಿನೊಳಗಣ ಜ್ಞಾನಕ್ಕೆ ದಾಸನಾಗುತ್ತದೆ . ಜ್ಞಾನದಿಂದ ನೋಡಲು ವಸ್ತುಗಳು ತನುವನ್ನು ಕೈ ಮಾಡಿ ಕರೆಯಲೇ ಇಲ್ಲ. ತನುವಿನ ಮನ ಜ್ಞಾನಕ್ಕೆ ಶರಣು ಹೋಯಿತು. ಶರಣ ತನುವಾಯಿತು. ಮನ ಜ್ಞಾನಕ್ಕೆ ದಾಸನಾಯಿತು. ದಾಸ ತನುವಾಯಿತು! ಇದು ಅಕ್ಕನ ಸರಳ ಹಾಗೂ ಸಹಜ ಶಿಕ್ಷಣ.

ತನು ಕಲಿಯುವಂಥದ್ದು ಏನೂ ಇಲ್ಲ. ಸಾಧ್ಯವಾದರೆ ಮಾಹಿತಿ ಸಂಗ್ರಹಿಸಬಹುದು. ಮಾಹಿತಿ ಶಿಕ್ಷಣವಲ್ಲ. ಜ್ಞಾನವೂ ಅಲ್ಲ. ತನುವಿನಲ್ಲಿ ಜ್ಞಾನ ಸಿದ್ಧವಸ್ತುವಿನಂತಿದೆ. ಸರಿಯಾಗಿ ನೋಡಬೇಕಷ್ಟೆ.

ಕಣ್ಣಿಗೆ ನೋಡುವ ಜ್ಞಾನವನ್ನು ಯಾರೂ ಕಲಿಸಲು ಸಾಧ್ಯವಿಲ್ಲ. ನೋಡುವುದೇ ಅದರ ಧರ್ಮ. ಆದರೆ ನೋಡುವುದನ್ನು ನೋಡಲು ಅರಿಯದೆ ಕೆಟ್ಟಿದೆ. ನೋಡುವ ವಸ್ತುವನ್ನು ನೋಡಬೇಕಷ್ಟೆ. ವಸ್ತುವನ್ನು ನೋಡುವ ಸುಳುಹು ಬೇಕಷ್ಟೆ. ಸುಳುಹು ಸಿಕ್ಕರೆ ಸಾಕು ನೋಡುವ

ವಸ್ತುವನ್ನು ಕಣ್ಣು ಬೇಡುವುದೇ ಇಲ್ಲ. ಕಣ್ಣು ಬೇಡದಿದ್ದರೆ ತನುವು ಚಂಚಲವಾಗುವುದಿಲ್ಲ. ಚಂಚಲವಾಗದ ತನು ಸದಾ ಸುಖಿ.

ಹೀಗೆ ಕೇಳುವ ಕಿವಿಗೂ ಕಲಿಕೆ ಬೇಕಿಲ್ಲ. ಸ್ಪರ್ಶಿಸುವ ಚರ್ಮಕ್ಕೂ, ವಾಸಿಸುವ ಮೂಗಿಗೂ, ರುಚಿಸುವ ನಾಲಿಗೆಗೂ ಕಲಿಕೆ ಬೇಕಿಲ್ಲ. ತನ್ನಲ್ಲಿರುವ ಅಪಾರವಾದ ಜ್ಞಾನವನ್ನು ನೋಡುವ, ಬಳಕೆ ಮಾಡುವ ಸುಳುಹು ಬೇಕಷ್ಟೆ. ಆ ಜ್ಞಾನ ಪಡೆಯಬೇಕೆಂಬ ಹಸುವು ಬೇಕಷ್ಟೆ. ಹಸಿವಾದರೆ ಸಾಕು ಹುಡುಕುವ ಉತ್ಕಟೇಚ್ಛೆ ತಾನೇ ಆಗುವುದು. ಹಸಿವಾಗದಿದ್ದರೆ ಪಂಡಿತನಾಗುವ ಬಯಕೆಯಾಗುವುದು. ಕಲಿಯುವ ಬಯಕೆ, ಪುಸ್ತಕ ಓದುವ ಬಯಕೆ, ಉಪನ್ಯಾಸ ಕೇಳುವ ಬಯಕೆ, ಸಿಕ್ಕಿದ್ದೆಲ್ಲ ಓದಿ ಧರ್ಮ ಪಂಥ ಪಂಗಡದಲ್ಲಿ ಸೇರಿ ಅನುಯಾಯಿ ಯಾಗುವ ಹಂಬಲ. ಮತ್ತೊಂದನ್ನು ಹಳಿಯುವ ಅಲ್ಲಗಳೆಯುವ ಕಾಯಕದಲ್ಲಿ ತನು ತೊಡಗುತ್ತದೆ. ಅಜ್ಞಾನ ಅಧಿಕವಾಗುತ್ತದೆ. ಜ್ಞಾನ ತನುವಿನಲ್ಲಿದ್ದರೂ ಅದು ಬಹುದೂರವಾಗುತ್ತದೆ.

ತನುವಿನಿಂದ ಬಂದ ಪುಸ್ತಕ ತನುವೇ ಓದಿ ಸಂಗ್ರಹಿಸುತ್ತದೆ. ಅದೇ ಪದಗಳನ್ನು ಡೆಲಿವರಿ ಮಾಡುತ್ತದೆ. ಓದಿದ ಪುಸ್ತಕಗಳನ್ನೆಲ್ಲ ಉದಾಹರಿಸಿ ಪಂಡಿತನಾಗುತ್ತದೆ. ತನುವಿನಲ್ಲಿದ್ದ ಮೀಸಲು ಜ್ಞಾನ ಮಾತ್ರ ಬಳಕೆಯಾಗುವುದೇ ಇಲ್ಲ.

ತನುವಿನ ಜ್ಞಾನ ಬಳಕೆಯಾಗದಿದ್ದಕ್ಕಾಗಿ ಎಲ್ಲೆಡೆಯೂ ಭ್ರಷ್ಟಾಚಾರ, ಕಳುವು, ದರೋಡೆ, ಕೊಲೆ, ಸುಲಿಗೆ, ಅತ್ಯಾಚಾರ, ಗುಂಡಾಗಿರಿಯಲ್ಲಿ ತನು ಭಾಗಿಯಾಗಿ ತನುವಿನಿಂದಲೇ ತನು ಕೆಟ್ಟ ಹಣೆಪಟ್ಟಿ ಹಚ್ಚಿಕೊಳ್ಳುವಂತಾಗಿದೆ.

ಅಲ್ಲದ ಕೆಲಸದಲ್ಲಿ ಭಾಗಿಯಾದ ತನುವನ್ನು , ಹೌದಾದ ಕೆಲಸದಲ್ಲಿ ಭಾಗಿಯಾದ ತನು ನಿಂದೆ ಮಾಡುತ್ತದೆ. ತನುಗಳು ಒಂದೇ ಆದರೂ ಕೆಲಸಗಳು ಬೇರೆ ಬೇರೆ. ಒಂದು ತನುವಿನದು ನಿಂದಿಸಿಕೊಳ್ಳುವ ಕಾಯಕ, ಮತ್ತೊಂದು ತನುವಿನದು ಹೊಗಳಿಸಿಕೊಳ್ಳುವ ಕಾಯಕ. ಇವೆರಡೂ ಅರ್ಥವಿಲ್ಲದ್ದು ಎಂದು ಕಂಡುಕೊಳ್ಳುವುದೇ ಜಟಿಲ.

ಮನ ತನುವಿನೊಂದಿಗೆ ಹಾದರ ಮಾಡುತ್ತ ಉತ್ತಮ ಕೆಲಸದ ಸೋಗು ಹಾಕುವುದು ಅದೆಂಥ ನೀಚತನವೆಂದು ತನುವಿಗೆ ಅರ್ಥವಾಗದೆ ಇರದು. ಮನದ ಹಾದರಕ್ಕೆ ದಿಟ್ಟತನದಿಂದ ಸ್ಪಂದಿಸುವ ತನುವಿನ ಗುಣ ಉತ್ತಮವೋ ? ಮನದಲ್ಲಿ ಹಾದರ ತುಂಬಿಕೊಂಡು ಸೋಗಿನ ಕೆಲಸದಲ್ಲಿ ನಿರತವಾದ ತನು ಉತ್ತಮವೋ ?

ಕೊಲೆ ಸುಲಿಗೆ ದರೋಡೆ ಹಲ್ಲೆ, ಅತ್ಯಾಚಾರ ಹಾದರ, ಕಳುವು ಭ್ರಷ್ಟಾಚಾರದಲ್ಲಿ ನಿರತರಾದ ವರದೊಂದು ವರ್ಗ, ಇದ್ಯಾವುದರಲ್ಲಿ ಸಿಕ್ಕಿ ಹಾಕಿಕೊಳ್ಳದೆ ಮನದಲ್ಲೇ ಸುಖಿಸಿ ಹಾದರ ಮಾಡುತ್ತ ಉತ್ತಮರೆನಿಸಿಕೊಳ್ಳುವುದು ಮತ್ತೊಂದು ವರ್ಗ. ಒಂದು ವರ್ಗಕ್ಕೆ ಹಣೆಪಟ್ಟಿಯಿದೆ. ಮತ್ತೊಂದು ವರ್ಗಕ್ಕೆ ಹಣೆಪಟ್ಟಿಯಿಲ್ಲ ಅಷ್ಟೆ ! ಈ ಎರಡೂ ವರ್ಗಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡಕ್ಕೂ ಅರ್ಥವಿಲ್ಲ.

ಬುದ್ಧ, ಶಿಷ್ಯನ ವೇಷಗಳ ತನುಗಳನ್ನು ಧಿಕ್ಕರಿಸಿ ಅಂಗುಲಿಮಾಲನ ಹತ್ತಿರ ಹೋದ. ತನು ಅಂಗುಲಿ ಮಾಲನ ವೇಷ ಹಾಕಿ ಆ ವೇಷದೊಂದಿಗೆ ನೈಜವಾಗಿತ್ತು . ಬುದ್ಧನ (ಜ್ಞಾನ) ಒಂದಂಶವೂ ತನುವಿನಲ್ಲಿ ಬಳಕೆಯಾಗಿರಲಿಲ್ಲ. ಬುದ್ಧ ಅಂಗುಲಿಮಾಲನನ್ನು ಮಾತನಾಡಿಸಲಿಲ್ಲ. ಬುದ್ಧ ಬುದ್ಧನೊಂದಿಗೆ ಮಾತನಾಡಿದ . ಪಾತ್ರಧಾರಿ ಅಂಗುಲಿಮಾಲ ಬುದ್ಧನೊಂದಿಗೆ ಬೆರೆತು ಬುದ್ಧನೆ

ಆದ ಮತ್ತೆ ಅಂಗುಲಿಮಾಲನಾಗಲೇ ಇಲ್ಲ.

ಶಿಕ್ಷಣದಲ್ಲಿ ಎರಡು ವಿಧ ! ಒಂದು ಬ್ರಹ್ಮ ಶಿಕ್ಷಣ, ಮತ್ತೊಂದು ಭ್ರಮೆ ಶಿಕ್ಷಣ. ಭ್ರಮೆ ಶಿಕ್ಷಣ ಪ್ರಪಂಚದಾದ್ಯಂತ ಬಳಕೆಯಲ್ಲಿದೆ. ಬ್ರಹ್ಮ ಶಿಕ್ಷಣ ಭಾರತದಲ್ಲಿ ಮಾತ್ರ ಅಲ್ಲಲ್ಲಿ ಬಳಕೆಯಲ್ಲಿದೆ. ಬ್ರಹ್ಮ ಶಿಕ್ಷಣ ಪಡೆದವರನ್ನು ಸಾಧು, ಸಂತ, ದಾಸ, ಶರಣ, ಋಷಿ ಮುಂತಾದ ಹೆಸರಲ್ಲಿ ಕರೆದು ಅವರನ್ನು ಸಮಾಜ ಬೇರೆ ರೀತಿಯಲ್ಲಿಯೇ ನೋಡಲ್ಪಟ್ಟಿದೆ. ವೇಷಭೂಷಣಗಳಿಂದ ಕೂಡಿದ ಸಾಧು ಸಂತರೇ ಬೇರೆ, ಉಳಿದ ಜನ ಬೇರೆ ಎಂದು ಗುರುತಿಸಿ ಪೂಜಿಸಲ್ಪಟ್ಟಿತು. ಅವರ ದರ್ಶನಕ್ಕೆ ಮಾತ್ರ ಸಮೀಪ ಸುಳಿದರು. ಅವರ ಮಾತನ್ನು ಜನ ಕೇಳಲೇ ಇಲ್ಲ. ಪವಾಡಗಳನ್ನು ಸೃಷ್ಟಿಸಿ ಅವರನ್ನು ಪವಾಡ ಪುರುಷರನ್ನಾಗಿ ಮಾಡಿ ಬ್ರಹ್ಮ ಶಿಕ್ಷಣದಿಂದ ಬಹಳ ದೂರ ಉಳಿಯಲು ಕಾರಣವಾಯಿತು. ಮಠ, ಮಂದಿರ, ಸಮಾಧಿ ನಿರ್ಮಿಸಿ ಮೌಢ್ಯದಲ್ಲಿ ಉಳಿಯಲು ತೀರ್ಮಾನಿಸಿತು. ತತ್ಪರಿಣಾಮವಾಗಿ ಭ್ರಮಾ ಶಿಕ್ಷಣ ಸಾಮಾನ್ಯ ಜನಕ್ಕೆ ಮೀಸಲಾಯಿತು. ಬರುಬರುತ್ತಾ ಬ್ರಹ್ಮ ಶಿಕ್ಷಣ ನೆಪದಲ್ಲಿ ಕಾರ್ಪೊರೇಟ್ ಸಂಸ್ಥೆಗಳು ಹುಟ್ಟಿಕೊಂಡವು. ವ್ಯವಹಾರ ಪ್ರಾರಂಭವಾಯಿತು. ವೇಷ ಬೂಟಾಟಿಕೆ ಮಾತ್ರ ಕಂಡು ಬ್ರಹ್ಮ ಶಿಕ್ಷಣ ಹಿಂದಾಯಿತು.

ಬ್ರಹ್ಮ ಶಿಕ್ಷಣದ ಹೆಸರಿನಲ್ಲಿ ಮಠ, ಪೀಠ, ಪ್ರಾರ್ಥನಾ ಮಂದಿರಗಳು ಹುಟ್ಟಿಕೊಂಡವು. ಜಾತಿ ಮತ ಪಂಥ ಪಂಗಡಗಳು ಹುಟ್ಟಿಕೊಂಡವು. ಒಬ್ಬೊಬ್ಬ ಗುರುವಿಗೆ ಅನುಯಾಯಿಗಳ ದೊಡ್ಡ ಗುಂಪೇ ನಿರ್ಮಾಣವಾಯಿತು. ಜ್ಞಾನದ ನೆಪದಲ್ಲಿ ಅಜ್ಞಾನದ ದಂಡಿನದೇ ಕಾರುಬಾರು! ರಾಜಕಾರಣಿಗಳೂ ಪ್ರಜಾಪ್ರತಿನಿಧಿಗಳೂ ಬೆನ್ನು ಹತ್ತಿದರು. ಮೌಢ್ಯ ನಿಲ್ಲಿಸಲು ಸಾಧ್ಯವಿಲ್ಲವೇನೋ ಎನ್ನುವ ಹಂತಕ್ಕೆ ತಲುಪಿಯಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ತತ್ವಶಾಸ್ತ್ರದ ಪಾಠ ಮಾಡಿದರೂ ಆಯಾ ತತ್ವಗಳ ಪ್ರತಿಪಾದನೆಯಲ್ಲಿ ಪಾಂಡಿತ್ಯದ ಶಿಕ್ಷಣ ದೊರೆಯುತ್ತಿದೆಯೇ ಹೊರತು, ಜ್ಞಾನವಲ್ಲ. ಜ್ಞಾನ ಸಂಗ್ರಹದಲ್ಲಿ ಸಾಧ್ಯವಾಯಿತೇ ಹೊರತು ತನುವಿನಲ್ಲಿಯೇ ಜ್ಞಾನವಿದೆಯೆಂದು ವಿಶ್ವವಿದ್ಯಾಲಯಗಳು ವೈಜ್ಞಾನಿಕವಾಗಿ ದೃಢಪಡಿಸಿ ಪಾಠ ಮಾಡುತ್ತಿಲ್ಲ.

ಬ್ರಹ್ಮಜ್ಞಾನ ಒಂದು ಶಿಕ್ಷಣ. ಅದು ಎಲ್ಲರಿಗೂ ಸಾಧ್ಯವೆಂಬ ನಿಟ್ಟಿನಲ್ಲಿ ಅಕ್ಕ ಒಂದು ಬೃಹತ್ ವಿಶ್ವವಿದ್ಯಾಲಯದ ಮಾದರಿಯಲ್ಲಿ ಕೆಲಸ ಮಾಡಿದ್ದಾಳೆ . ಅಕ್ಕನ ಶಿಕ್ಷಣಕ್ಕೆ ಅಕ್ಷರದ ಅಗತ್ಯವಿಲ್ಲ. ಈ ಶಿಕ್ಷಣ ಕೈಗೆಟುಕಿದರೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತಿ ಮತ ಪಂಥ, ಕೊಲೆ, ಹಲ್ಲೆ, ದರೋಡೆ, ಕಳ್ಳತನ, ಹಾದರ ತನುವಿನಲ್ಲಿ ಸುಳಿಯುವುದೇ ಇಲ್ಲ.

ಸರಕಾರ ಅಕ್ಕನ ಈ ಶಿಕ್ಷಣಕ್ಕೆ ಮುಂದಾದಲ್ಲಿ ಏಕರೂಪದ ಜನ ನಾಡಿನಲ್ಲಿ ಬೆಳಗುತ್ತಾರೆ. ಜಾತಿ–ಮತ ಪಂಥ ಭ್ರಷ್ಟಾಚಾರ ಕೊಲೆ ದರೋಡೆ ಸುಲಿಗೆ ಹಾದರ ಅತ್ಯಾಚಾರಗಳಿಲ್ಲದ ಸಮಾಜ ನಿರ್ಮಾಣವಾಗುತ್ತದೆ.

ಅಕ್ಕನ ವಚನಗಳಲ್ಲಿ ಸಂಪೂರ್ಣ ಬ್ರಹ್ಮ ಶಿಕ್ಷಣವೇ ಅಡಗಿದೆ. ಆ ನಿಟ್ಟಿನಲ್ಲಿ ಕಲಿಯಲು ತನು ನಿರ್ಧಾರವಾಗಬೇಕು. ಅದಕ್ಕೆ ನುರಿತ ಶಿಕ್ಷಕರ ಅಥವಾ ಶಿಕ್ಷಕರಿಗೆ ಅನುಭಾವಿಗಳಿಂದ ಶಿಬಿರ ಉಪನ್ಯಾಸಗಳ ಮುಖಾಂತರ ತರಬೇತಿಗೊಳಿಸ ಬಹುದಾಗಿದೆ.

ರೂಹಿಲ್ಲದ ಚೆಲುವೆ ಪುಸ್ತಕದಲ್ಲಿ ಅಕ್ಕಮಹಾದೇವಿಯವರ 104 ವಚನಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಆ ವಚನಗಳಿಗೆ ಸಾಧ್ಯವಾದ ಮಟ್ಟಿಗೆ ವೈಜ್ಞಾನಿಕವಾಗಿ ಜ್ಞಾನಕ್ಕೆ ಹೋಗುವ

ನಿಟ್ಟಿನಲ್ಲಿ ಅನುಭಾವ ಮಾಡಲಾಗಿದೆ. ಸದ್ಗುರು ಶ್ರೀ ವಿದ್ಯಾನಂದ ಶರಣರ ಅನುಗ್ರಹದಿಂದ,ಅಕ್ಕನ ಪ್ರೇರಣೆಯಿಂದ ಸಾಧ್ಯವಾಗಿದೆ. ನನಗೆ ಒಗ್ಗುವ ಭಾಷೆ ಈ ಪುಸ್ತಕದಲ್ಲಿ ಬಳಕೆಯಾಗಿದೆ. ಇದರಲ್ಲಿ ಜ್ಞಾನಕ್ಕೆ ಹೋಗುವ ಉಪಾಯಗಳಿವೆ. ಅವುಗಳನ್ನು ಬಳಸಿಕೊಂಡು ಮತ್ತಷ್ಟು ವಿಸ್ತಾರ ಮಾಡಿಕೊಳ್ಳಲು ಅನುಕೂಲ ವಾಗಲೆಂಬುದೇ ನನ್ನ ಆಶಯ.

ಬ್ರಹ್ಮ ಶಿಕ್ಷಣವೆಂದರೆ ತನುವಿನ ಸಹಜ ಶಿಕ್ಷಣ. ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿ ಸಹಜವಾಗಿಯೇ ಇವೆ. ಮನುಷ್ಯನೊಬ್ಬನೇ ಇಲ್ಲದ್ದನ್ನು ತುಂಬಿಕೊಂಡು ಅಸಹಜವಾಗಿದ್ದಾನೆ. ಸಹಜವಾಗಿದ್ದವನನ್ನು ಜನ ಪವಾಡ ಪುರುಷನೆಂದು ಕರೆದು ಬೇರ್ಪಡಿಸಿದ್ದೆ ಅನಾಹುತಕ್ಕೆ ಕಾರಣ. ಭಿನ್ನವಾಗಿ, ತನುವಿನೊಂದಿಗೆ ತನುವಿನ ಸಹಜ ಜ್ಞಾನದೊಂದಿಗೆ ಸರಳವಾಗಿ ಬದುಕುವ ಜ್ಞಾನಿ ತನ್ನಂತೆ ಇತರರನ್ನು ಸಹಜವಾಗಿ ಕಾಣುತ್ತಾನೆ. ಶಬ್ದಕ್ಕೆ, ಸ್ಪರ್ಶಕ್ಕೆ , ರುಚಿಗೆ, ದೃಶ್ಯಕ್ಕೆ, ವಾಸನೆಗೆ ಮಾರುಹೋಗುವುದಿಲ್ಲ. ವಸ್ತುಗಳ ಮೂಲ ನೋಡಿ ಸತ್ಯ ಕಂಡುಕೊಳ್ಳುತ್ತಾನೆ. ಚಿನ್ನ, ಆಭರಣ, ಕರೆನ್ಸಿ ಈತನಿಗೆ ನಗಣ್ಯ . ಸರ್ವರನ್ನು ಪ್ರೀತಿಸುತ್ತಾನೆ. ಗೌರವಿಸುತ್ತಾನೆ. ಸರಿಯಾದ ಸುಳುಹು ಸಿಕ್ಕರೆ ಸಾಕು ತನುವಿನ ಸಿದ್ಧ ಶಿಕ್ಷಣ ಸುಲಭವಾಗಿ ಕೈಗೆಟುಕುವುದು. ಓದುಗರು ದಯವಿಟ್ಟು ಸಾಧ್ಯವಾಗಿಸಿಕೊಂಡು ಈ ನಿಟ್ಟಿನಲ್ಲಿ ಓದಿ.

ಈ ಪುಸ್ತಕದಲ್ಲಿ ಬಂದದ್ದು ನನ್ನದಲ್ಲ. ಅಕ್ಕನ ವಚನಗಳ ಸೂತ್ರದಿಂದ ಬಂದದ್ದು. ಅಕ್ಕನಿಂದ ಬಂದದ್ದು. ಕಾಲಾನುಕಾಲದಿಂದ ಸರಳೀಕೃತವಾದದ್ದು. ಎಲ್ಲರ ಹೃದಯದಲ್ಲಿ ಇದ್ದದ್ದು. ಈ ವಸ್ತುವನ್ನು ಯಾರು ಬೇಕಾದರೂ ಬಳಸಿಕೊಳ್ಳಬಹುದು. ಮಾಧ್ಯಮಗಳಿಗೂ ಅಳವಡಿಸಿಕೊಳ್ಳಬಹುದು. ಅರಿವು ಮಾರುವ ವಸ್ತುವಲ್ಲ, ಕೊಳ್ಳುವ ವಸ್ತುವೂ ಅಲ್ಲ. ಸರಳವಾಗಿ ಹಂಚಿದರೂ ಸುಲಭವಾಗಿ ದೊರೆಯುವ ವಸ್ತುವೂ ಅಲ್ಲ.

ದಾಸರು ಕಲ್ಲು ಸಕ್ಕರೆ ಕೊಳ್ಳಿರೋ ಎಂದು ಗೆಜ್ಜೆ ಕಟ್ಟಿಕೊಂಡು ಸಂತೆಯಲ್ಲಿ ಕುಣಿದು ಉಚಿತವಾಗಿ ಮಾರಿದರೂ ಯಾರೂ ಕೊಳ್ಳಲಿಲ್ಲ. ಅಂತೆಯೇ ಕಲ್ಯಾಣದಲ್ಲಿ ಶರಣರು ನೀಡುವವರಾಗಿದ್ದರು. ಬೇಡುವವರಿಲ್ಲದ ನಿಮಿತ್ತ ಶರಣರ ಗರ್ಭದಲ್ಲಿಯೇ ತತ್ವ ಉಳಿಯಿತು. ವಚನ ರೂಪದಲ್ಲಿ ಬೆಡಗಾಗಿ ಬಂದು ಪುಸ್ತಕದಲ್ಲಿಯೇ ಉಳಿಯಿತು. ತನುವಿಗೆ ಪ್ರಸಾದವಾಗಲಿಲ್ಲ. ತನ್ನಲ್ಲಿದ್ದ ಅರಿವು ತಾನೇ ಹೊಂದಬೇಕು. ತಾನೇ ಸವಿಯಬೇಕೆಂಬ ಬಯಕೆ ತನಗೆ, ತನ್ನ ಮನಕ್ಕೆ ಆಗಬೇಕು. ಆ ಹಸಿವು ತನುವಿನಲ್ಲಿ ಹುಟ್ಟಬೇಕು. ಆಗ ಮಾತ್ರ ಈ ಕೆಲಸ ಸಾಧ್ಯವಾಗುವುದು.

ಸದ್ಗುರು ಶ್ರೀವಿದ್ಯಾನಂದ ಶರಣರಂತೆ ಮನೆ ಮನೆಗೆ ಹೋಗಿ ಅರಿವಿನ ಕ್ರಾಂತಿಯಲ್ಲಿ ತಮ್ಮನ್ನು ಪೂರ್ಣಾವಧಿಯಾಗಿ ತೊಡಗಿಸಿಕೊಂಡ ಬೆನಕನಹಳ್ಳಿಯ ಶ್ರೀ ದೇವಾನಂದ ಶರಣರನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು. ಅರಿವಿನ ಹಸಿವುಳ್ಳವರು ಅವರನ್ನು ಭೇಟಿಯಾಗಲೇಬೇಕು. ಅವರಿಗೆ ಶರಣು ಶರಣಾರ್ಥಿ. ಪುಸ್ತಕಕ್ಕೆ ಹೆಸರಿಸಿದ ಮಗಳು ಮುಕ್ತಾಯಕ್ಕ ಹಾಗು ಶರಣ ಶ್ರೀ ಬಿ.ಜಿ.ಹುಲಿಯವರಿಗೂ, ಕರಡು ಪ್ರತಿ ಓದಿ ನಲ್ನುಡಿ ಬರೆದು ಕೊಟ್ಟ ಪ್ರಾಧ್ಯಾಪಕರಾದ ಡಾ.ಬಸವಲಿಂಗ ಸೊಪ್ಪಿಮಠರಿಗೂ, ಪ್ರತಿ ದಿನ ಅಂಕಣವಾಗಿ ಪ್ರಕಟಿಸಿದ ಸುದ್ದಿಮೂಲ ಪತ್ರಿಕೆಯ ಸಹೋದರರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಗಿರೀಶ ದಂಪತಿಗಳಿಗೂ ಶರಣು

**ಶರಣು ಶರಣಾರ್ಥಿ**

**- ಬಸವರಾಜ ಸ್ವಾಮಿ**

# ನಲ್ನುಡಿ

ನಿಜದ ಹಾದಿಯಲ್ಲಿ ನಿಂತವರ ಸಂಖ್ಯೆ ಮತ್ತು ಹಾದಿಗೆ ಬರುವವರ ಸಂಖ್ಯೆ ವಿರಳಾತಿವಿರಳವಾಗುತ್ತ ನಡೆದಿರುವ ಸಂದರ್ಭದಲ್ಲಿ, ಹನ್ನೆರಡನೆಯ ಶತಮಾನದ ಶರಣರ ವಚನಗಳ ಬೆಳಕಿನಲ್ಲಿ ಅರಿವಿನ ಸೂತ್ರಗಳನ್ನು ಬೋಧಿಸುತ್ತ , ಬರೆದು ತಮ್ಮ ಪತ್ರಿಕೆಯಲ್ಲಿ ಮಾಲೆ ಮಾಲೆಯಾಗಿ ಪ್ರಕಟಿಸುತ್ತಲೇ ಅವುಗಳಿಗೆ ಪುಸ್ತಕ ರೂಪವನ್ನು ಕೊಡುತ್ತಿರುವ, ಅರಿವು ಅನುಭಾವಗಳ ಹಿರಿಯರಾದ ಶ್ರೀ ಬಸವರಾಜಸ್ವಾಮಿ ಅವರು ಪತ್ರಿಕೋದ್ಯಮದ ಹೊಣೆಗಾರಿಕೆ ನಡುವೆ ಇಷ್ಟೆಲ್ಲ ಸಾಧಿಸುತ್ತಿರುವುದು ನಾಡಿನ ಶುಭೋದಯವೇ ಆಗಿದೆ .

ಅವರ ಗುರುಗಳು ಸದ್ಗುರು ವಿದ್ಯಾನಂದರು ಅದ್ವೈತದ ನೆಲೆಗಟ್ಟಿನಲ್ಲಿ ವಚನಗಳು ನೋಡಿದವರು . ಸೈದ್ಧಾಂತಿಕ ಶಿಸ್ತು, ಪರಿಣಾಮಕಾರಿ ಮಾತು ಅವರ ಅನುಭಾವ ಬದುಕಿನ ವಿಶೇಷತೆಯಾಗಿತ್ತು . ವಚನಗಳಿಗೆ ಅರ್ಥ ಬರೆಯುವುದೇ ಅವರ ಪ್ರೀತಿಯ ಕಾಯಕವಾಗಿತ್ತು . ಗುರುಗಳ ಹಾದಿಯಲ್ಲಿ ನಡೆದೂ ತಮ್ಮತನ ಉಳಿಸಿಕೊಂಡಿರುವ ಬಸವರಾಜಸ್ವಾಮಿಯವರು , ವಚನಕಥನಕ್ಕೆ ನಿಲ್ಲುವ ಪರಿ ಅವರಿಗೇ ವಿಶಿಷ್ಟವಾದದ್ದು. ಸರಳತೆ, ಅನುಭವದ ಪ್ರಾಮಾಣಿಕತೆ, ಕಳಕಳಿ ಅವರ ವಚನ ವಿಶ್ಲೇಷಣೆಯ ಎಲ್ಲ ಮುಖಗಳಲ್ಲಿ ಒಡೆದು ಕಾಣುತ್ತದೆ . ವಚನ ಅನುಷ್ಠಾನದ ನಿಷ್ಠುರ ಹಠ ಅವರಲ್ಲಿ ದಟ್ಟವಾಗಿರುವುದು ಅವರ ನಿರ್ವಚನಕ್ಕೆ ಬೆನ್ನೆಲುಬಾಗಿ ನಿಂತ ಶಕ್ತಿಯಾಗಿದೆ.

ಈಗಾಗಲೇ ಬೆಳಕಿನ ಬಳ್ಳಿ ಬಯಲಬೀಜಗಳು ಎಂಬ ಎರಡು ಅಪರೂಪದ ವಚನಾನುಭವ ಕೃತಿಗಳನ್ನು ಸಾಹಿತ್ಯಲೋಕಕ್ಕೆ ಹೇಗೋ ಅರುಹೃದಯಕ್ಕೆ ಹಾಗೆ ಕೊಡುಗೆಯಾಗಿ ನೀಡಿರುವ ಬಸವರಾಜ ಸ್ವಾಮಿಯವರು , ಪ್ರಸ್ತುತ ರೂಹಿಲ್ಲದ ಚೆಲುವೆ ಕೃತಿಯಲ್ಲಿ ಅಕ್ಕಮಹಾದೇವಿಯ ವಚನಗಳನ್ನು ಅನುಭಾವಕಥನಕ್ಕೆ ಎತ್ತಿಕೊಂಡಿದ್ದಾರೆ . ಬೇರೆಬೇರೆ ವಚನಕಾರರನ್ನು ತಮ್ಮ ಹಿಂದಿನ ಕೃತಿಗಳಲ್ಲಿ ಲಕ್ಷಿಸಿದ ಅವರು , ಇಲ್ಲಿ ಒಬ್ಬ ವಚನಕಾರರ ಮೇಲೇ ಗಮನ ಕೇಂದ್ರೀಕರಿಸಿರುವುದರಿಂದ, ಶರಣನ ಬೆಳವಣಿಗೆ, ಸಮಗ್ರವ್ಯಕ್ತಿತ್ವದ ಪೃಥಕ್ಕರಣೆಗೆ ಅವಕಾಶವಾಗಿದೆ ಎಂದು ಹೇಳಬೇಕು .

ನುಡಿಜಾಣರಲ್ಲದ ಶರಣರು ನಡೆಪ್ರಾಣವಾಗಿ ಬಾಳಿದವರು . ಅವರ ವಚನಗಳು ಓದಿಗೆ ಸರಳ , ಅರ್ಥಕ್ಕೆ ಜಟಿಲ, ಅನುಭವಕ್ಕೆ ಸಂಕೀರ್ಣ ಎನ್ನಬಹುದು . ಅವರ ಸಾಹಿತ್ಯದ ನಿಜವಾದ ಸವಾಲು, ಬುದ್ಧಿ ಹಿಂದಿಟ್ಟು ಹೃದಯ ಮುಂದಿಟ್ಟು ಶುದ್ಧಾಂಗ ಸಮೀಪಿಸುವುದು ಆಗಿದೆ. ಇದನ್ನು ಮೊದಲ ಪಾಠವಾಗಿ ಸ್ವೀಕರಿಸಿರುವ ಬಸವರಾಜ ಸ್ವಾಮಿಯವರು, ಶುದ್ಧೀಕರಣದ ನೆಲೆಗಳನ್ನು ಮುಟ್ಟಿ ಮುಟ್ಟಿ ಮಾತಾಡಿದ್ದಾರೆ . ಅರಿವಿನ ತನುವಿನೊಂದಿಗೆ ಮನಸತಿಯ ಸುಂದರ ದಾಂಪತ್ಯದ ವಿವರಗಳನ್ನು ಪರಮಾದರ್ಶವಾಗಿ ಕಟ್ಟಿದ್ದಾರೆ .

ಬಸವರಾಜ ಸ್ವಾಮಿಯವರಿಗೆ ವಚನಾನುಭವದ ರಚನೆ ಬರಹದ ಒತ್ತಡವಾಗಿ ಬಂದದ್ದಲ್ಲ, ಅನುಭಾವ ಬದುಕಿನ ಅನಿವಾರ್ಯತೆಯಾಗಿ ಬಂದದ್ದು. ಆ ಅನುಭವದ ಸವಿಯನ್ನು ಎಲ್ಲರಿಗೆ ಉಣಬಡಿಸಬೇಕೆಂಬ ಉತ್ಕಟೇಚ್ಛೆ ಅವರಲ್ಲಿ ಗರಿಷ್ಠವಾಗಿದೆ. ಅದೇ ಅವರ ಬರೆಹದ ಜೀವದ್ರವ್ಯವೂ ಆಗಿದೆ . ಅಂತೆಯೇ ಪಾಂಡಿತ್ಯದ ಸೋಗು, ಕೂದಲು ಸೀಳುವ ವಿದ್ವತ್ತಿಗೆ ಅವರ ಬರಹ ಹೊರತಾಗಿದೆ. ಅರಿವಿನ ಇರವನ್ನು, ಅದರ ಸಹಜತೆಯನ್ನು, ಅದು ತರುವ ಪರಿಣಾಮದ ಪರಾಮಾವಧಿ ಸುಖವನ್ನು,

ಬುದ್ಧಿಭಾವಗಳ ಸಮತೂಕದಲ್ಲಿ, ಆಪ್ತವಾದ ಭಾಷೆಯಲ್ಲಿ, ಲೋಕದ ಸಾಮತಿಗಳೊಂದಿಗೆ ಲಿಂಗಪರಿಭಾಷೆ ಉಳಿಸಿಕೊಂಡು ಬಣ್ಣಿಸುವುದು ಅವರ ರೀತಿಯಾಗಿದೆ. ಇವರ ವಿಶ್ಲೇಷಣೆ ವಚನಾರ್ಥವನ್ನು ಅಂತರಂಗಕ್ಕೆ ತಾಕಿಸುವಷ್ಟೇ, ವಚನ ಮರೆತು ಓದಿದಾಗಲೂ ವಚನ ವಿಶ್ಲೇಷಣೆ ಅರಿವಿನ ವಿಶ್ಲೇಷಣೆಯಾಗಿ ಸ್ವತಂತ್ರವಾಗಿ ನಿಂತುಕೊಳ್ಳುವುದು ಬಸವರಾಜ ಸ್ವಾಮಿಯವರ ಬರವಣಿಗೆಯ ರೀತಿಯಾಗಿದೆ. ಅರಿವು ತಾವೇ ಆದವರು ಮಾತ್ರ ವಚನ ನೆವ ಮಾಡಿಕೊಂಡು ಅರಿವನ್ನು ವಚನ-ಹಾದಿಯಲ್ಲಿ ವಿಸ್ತರಿಸಬಲ್ಲರು ಎಂಬುದಕ್ಕೆ ಸ್ವಾಮಿಯವರು ಉತ್ತಮ ನಿದರ್ಶನವಾಗಿದ್ದಾರೆ. ಸತ್ಯ ಶೋಧದ ಶರಣರು ನಿಜದ ವಿಜ್ಞಾನಿಗಳು ಎಂಬುದು ಅವರ ಗಾಢ ನಂಬುಗೆ. ಆ ನಂಬುಗೆಯ ಬುನಾದಿಯ ಮೇಲೆ ಅವರ ಬರಹಗಳು ಎದ್ದು ನಿಲ್ಲುವುದರಿಂದ, ವಸ್ತುನಿಷ್ಠೆಯನ್ನು ಕಾಯ್ದುಕೊಂಡುಬರಲು ಸಾಧ್ಯವಾಗಿದೆ.

ಶರಣ ಬದುಕಿನ ಆಗಸದಲ್ಲಿ ಧ್ರುವತಾರೆಯಂತೆ ಹೊಳೆಯುತ್ತಿರುವ ಮಹಾದೇವಿಯಕ್ಕನ ವಚನಗಳಲ್ಲಿ ಒಂದು ವಿಶೇಷತೆ ಇದೆ. ಬಸವಣ್ಣ, ಪ್ರಭುದೇವರು, ಅಜಗಣ್ಣರಿಗೂ ಒಂದು ತೂಕ ಮಿಗಿಲು ಎಂದು ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ ಆಕೆಯ ಮಹೋನ್ನತ ವ್ಯಕ್ತಿತ್ವವನ್ನು ಕೊಂಡಾಡುತ್ತಾರೆ. ಅದು ಆಕೆಯ ವಚನಶಕ್ತಿಯನ್ನು, ಅನುಭಾವದ ಔನ್ನತ್ಯವನ್ನು ಒಟ್ಟಿಗೇ ತೂಗಲಾದ ಮೌಲಿಕ ವಿಮರ್ಶೆ ಎನ್ನಬೇಕು. ಅಂತಹ ಅಸಾಧಾರಣ ಪ್ರತಿಭೆ ಪರಿಶ್ರಮಗಳ ಅಕ್ಕನ ವಚನಗಳ ನಿರ್ವಚನಕ್ಕೆ ನಿಲ್ಲುವುದು ಅಗ್ನಿದಿವ್ಯಕ್ಕೆ ಒಡ್ಡಿಕೊಂಡಂತೆ. ಆದರೆ ಆ ತಾಯಿಯ ಅನುಭವದ ನುಡಿಗಳ ಅನುಸಂಧಾನವನ್ನು ವ್ರತದಂತೆ ಸ್ವೀಕರಿಸಿರುವ ಬಸವರಾಜಸ್ವಾಮಿಯವರು, ವಿಶ್ಲೇಷಣೆಯಲ್ಲಿ ಆಕೆಯ ವಚನಗಳಿಗೆ ನ್ಯಾಯ ಒದಗಿಸಿದ್ದಾರೆ.

ವಚನಾನುಸಂಧಾನದ ಅವರ ಈ ಕಾಯಕ ನಿರಂತರ ನಡೆದು, ನಮ್ಮ ಮರವೆಯ ನಿದ್ದೆಗೆ ಭಂಗತರಲಿ ಎಂದು ಹಾರೈಸುತ್ತೇನೆ.

**ಡಾ.ಬಸವಲಿಂಗ ಸೊಪ್ಪಿಮಠ**

ರಾಯಚೂರು

# ರೂಹಿಲ್ಲದ ಚೆಲುವೆಯ ಗರ್ಭದಲ್ಲಿ

# ಅಕ್ಕ ಅಂಗಕ್ಕೆ ಬೋಧಿಸಿದ ಅರಿವಿನ ಸೂತ್ರ

**ಅಂಗ ಕ್ರಿಯಾ ಲಿಂಗವ ವೇಧಿಸಿ,**
**ಅಂಗ ಲಿಂಗದೊಳಗಾಯಿತ್ತು.**
**ಮನ ಅರಿವ ಬೆರಸಿ ಜಂಗಮ ಸೇವೆಯ ಮಾಡಿ,**
**ಮನ ಜಂಗಮದೊಳಗಾಯಿತ್ತು. ಭಾವ ಗುರುಲಿಂಗದೊಳಗೆ ಬೆರಸಿ,**
**ಮಹಾ ಪ್ರಸಾದವ ಭೋಗಿಸಿ, ಭಾವ ಗುರುಲಿಂಗದೊಳಗಾಯಿತ್ತು.**
**ಚೆನ್ನ ಮಲ್ಲಿಕಾರ್ಜುನಾ, ನಿಮ್ಮ ಒಲುಮೆಯಿಂದ ಸಂದಳಿದು**
**ಸ್ವಯಲಿಂಗವಾದೆನಯ್ಯಾ ಪ್ರಭುವೆ.**
**ಅಂಗ ಕ್ರಿಯಾಲಿಂಗವ ವೇಧಿಸಿ, ಅಂಗ ಲಿಂಗದೊಳಗಾಯಿತ್ತು:**

ಅಂಗದ ಕಣ ಕಣದಲ್ಲಿ ಅರಿವೇ ತುಂಬಿದೆ. ಅಂಗಕ್ಕೆ ಅರಿವಿನ ಪರಿಚಯವಿಲ್ಲ. 'ಬೊಟ್ಟಿಡಲೆಡೆ ತೆರೆಹಿಲ್ಲದ ಘನ 'ವೆಂದು ಪ್ರಭು ಹೇಳುತ್ತಾರೆ. ಅರಿವಿನ ಘನದ ಪರಿಚಯ ವಿಲ್ಲದ ನಿಮಿತ್ತ ಶಬ್ದ ಬಡಿದರೆ ಅಂಗ ಮಂಗನಂತೆ ಕುಣಿಯುತ್ತದೆ. ರೂಪ ನೋಡಿದರೆ ನಾಯಿಯಂತೆ ಜೊಲ್ಲು ಸುರಿಸುತ್ತದೆ. ರುಚಿಗೂ, ಸ್ಪರ್ಶಕ್ಕೂ, ವಾಸನೆಗೂ ತನ್ನ ಅರಿವಿನ ಕಟ್ಟಳೆ ಯನ್ನು ಮೀರಿ ರಕ್ಕಸನಂತೆ ವರ್ತಿಸುತ್ತದೆ. ಕುಡಿಯದಿದ್ದರೂ ಅಂಗ ಅರಿವಿನ ಸ್ವಾಧೀನದಲ್ಲಿ ವಿರಮಿಸದೆ ಕುಡಿದಂತೆ ವರ್ತಿಸುತ್ತದೆ. ಅಂಗಕ್ಕೆ ಬಯಕೆಗಳಾದಾಗಲೆಲ್ಲಾ ; ತನ್ನ ಪದವಿ, ಪೀಠ, ಸ್ಥಾನಮಾನಗಳನ್ನೆಲ್ಲ ಮರೆತು ಶಬ್ದ, ಸ್ಪರ್ಶ, ರೂಪ, ರಸ , ವಾಸನೆಯ ರುಚಿಗಾಗಿ ಬಯಕೆ ಮಾಡಿದೆಡೆ ವಾಲುತ್ತದೆ.

ಅಂಗದ ಕಣ ಕಣದಲ್ಲಿರುವ ಅರಿವು ಘನ ಲಿಂಗವಾಗಿ ಅಂಗಕ್ಕೆ ಪಾಠ ಮಾಡಿದರೂ; ಅರಿವಿನ ಪರಿಚಯ ಅಂಗಕ್ಕೆ ಇಲ್ಲದ ನಿಮಿತ್ತ ತಾನು ಬಯಸಿದೆಡೆಯಲ್ಲೆಲ್ಲಾ ವಾಲುತ್ತದೆ. ಕಳ್ಳ, ಸುಳ್ಳ, ಭ್ರಷ್ಟ , ವಿಷಯ ಲಂಪಟ, ಶ್ರೀಮಂತ, ಬಡವ, ಭಿಕ್ಷುಕ, ರಾಜಕಾರಣಿ, ಪೀಠಾಧಿಪತಿ, ಸ್ವಾಮಿ, ವೇಶ್ಯೆ ಎಂಬ ಹಣೆಪಟ್ಟಿಯನ್ನು ಅಂಗ ಕಟ್ಟಿಕೊಳ್ಳುತ್ತದೆ. ಸಹಜ ಅರಿವಿನ ಕ್ರಿಯೆಯಿಂದ ದೂರ ಉಳಿಯುತ್ತದೆ.

ಅಂಗ ಅಂಗದಲ್ಲಿರುವ ಅರಿವಿನ ಕ್ರಿಯೆಯನ್ನು ಭೇದಿಸಿ, ಅಂಗದ ಕಣ ಕಣದಲ್ಲಿರುವ ಆ ಅರಿವೇ ತಾನಾಗುವ ಶಿಕ್ಷಣ ತನಗೆ ಸಿದ್ಧಿಸಿದ ನಿಮಿತ್ತ ಅಂಗ ಲಿಂಗದೊಳಗಾಯಿತ್ತು; ಅಂಗವೇ ಲಿಂಗವಾಯಿತ್ತು; ಅರಿವಿನ ಅಂಗವಾಯಿತ್ತು ಎಂದು ಅಂಗದಲ್ಲಿ ಕ್ರಿಯಾನಿರತ ಅರಿವಿನ ಪರಿಚ ಯವನ್ನು ಓದುಗರಿಗೆ ವಚನದ ಒಂದು ಸಾಲಿನ ಸೂತ್ರದ ಮೂಲಕ ಮಾಡಿಸಿದ್ದಾರೆ ಶರಣೆ ಅಕ್ಕ ಮಹಾದೇವಿ.

**ಮನ ಅರಿವ ಬೆರಸಿ ಜಂಗಮ ಸೇವೆಯ ಮಾಡಿ, ಮನ ಜಂಗಮ ಲಿಂಗದೊಳಗಾಯಿತ್ತು:**

ಅಕ್ಕ ಮಹಾದೇವಿಯವರು ಈ ವಚನದಲ್ಲಿ ಅಂಗ,ಲಿಂಗ, ಮನ, ಅರಿವು, ಜಂಗಮ, ಭಾವ, ಗುರು, ಪ್ರಸಾದ ಎನ್ನುವ ಎಂಟು ಶಬ್ದಗಳನ್ನು ಬಳಸಿದ್ದಾರೆ. ಅಂಗದಲ್ಲಿ ಏಳೂ ಶಬ್ದಗಳು ಅಡಕವಾಗಿವೆ.

ಅಂಗದಲ್ಲಿರುವ ಮನ ಅಂಗದ ಅರಿವನ್ನು ಬೆರಸಿ ವಸ್ತುಗಳನ್ನು ನೋಡಿದರೆ, ಕಣ್ಣಿನಲ್ಲಿ ಆವರಿಸಿದ ವಸ್ತುವಿನ ಭ್ರಮೆ ಕಳಚಿ ಬೀಳುತ್ತದೆ. ಕಣ್ಣು ವಸ್ತುವಿನ ಮೂಲ ನೋಡಿ ಮುಟ್ಟದಿರಲು ಅಂಗಕ್ಕೆ ಆದೇಶ ರವಾನಿಸುತ್ತದೆ.

ಉದಾ: ಮನ ಅಂಗದ ಅರಿವನ್ನು ಬೆರಸದೆ ಆಭರಣವನ್ನು ನೋಡಿದರೆ ಆಭರಣದ ಡಿಸೈನ್ ಮತ್ತು ಬಣ್ಣಕ್ಕೆ ಕಣ್ಣು ಮರುಳಾಗಿ ಆಭರಣ ಪಡೆಯುವಂತೆ ಅಂಗಕ್ಕೆ ಆದೇಶ ನೀಡುತ್ತದೆ. ಆಭರಣ ಪಡೆಯಲು ಮನ ಅಂಗಕ್ಕೆ ಕಳ್ಳ, ಸುಳ್ಳ, ಭ್ರಷ್ಟ, ಲಂಚಕೋರ, ಪ್ರಾಮಾಣಿಕ ಎಂಬ ನಾನಾ ವೇಷ ಹಾಕಿ ಆಭರಣ ಪಡೆಯುತ್ತದೆ. ಅಂಗದ ಅರಿವಿನ ಪಾಠ ಅಂಗಕ್ಕೂ ಅಂಗದ ಮನಕ್ಕೂ ರುಚಿಸುವುದಿಲ್ಲ. ಹೀಗಾಗಿ ಕಳ್ಳ, ಭ್ರಷ್ಟಾಚಾರಿ, ಪ್ರಾಮಾಣಿಕ, ಮುಂತಾದ ಹಣೆಪಟ್ಟಿಯನ್ನು ಕಟ್ಟಿಕೊಳ್ಳುತ್ತದೆ. ಜನಕ್ಕೆ , ಕೋರ್ಟಿಗೆ , ಸರಕಾರಕ್ಕೆ ಮನವನ್ನು ನೋಡಲು ಬರುವುದಿಲ್ಲ. ಮನ ಮಾಡಿದ ಅಪರಾಧಕ್ಕೆ ಅಂಗಕ್ಕೆ ಶಿಕ್ಷೆ ಕೊಡುತ್ತಾರೆ. ಮನದ ಹಗರಣದಿಂದಾಗಿ ಅರಿವಿನ ಅಂಗಕ್ಕೆ ಶಿಕ್ಷೆಯಾಗುತ್ತದೆ.

ಅಂಗದ ಮನವು, ಅಂಗದ ಅರಿವನ್ನು ಬೆರಸಿ ಆಭರಣ ನೋಡಿದರೆ ಅದೊಂದು ಹಳದಿ ಬಣ್ಣದಿಂದ ಕೂಡಿದ ಲೋಹದ ಡಿಸೈನ್. ಡಿಸೈನ್,ಬಣ್ಣ ಮತ್ತು ಲೋಹಕ್ಕೆ ಮರುಳಾಗಿ ಅದನ್ನು ಪಡೆಯಲು ಪ್ರಾಮಾಣಿಕನಾಗಿ ಹಗಲಿರುಳು ದುಡಿಯಬೇಕೇ? ಕಳ್ಳನಾಗಿ ಮತ್ತೊಂದು ಅಂಗವನ್ನು ಕೊಂದು ಅಂಗದ ಮೇಲಿದ್ದ ಆಭರಣ ಪಡೆಯಬೇಕೆ ? ಭ್ರಷ್ಟಾಚಾರಿಯಾಗಿ ಲಂಚ ಪಡೆದು ಆಭರಣ ಕೊಳ್ಳಬೇಕೆ ? ಎನ್ನುವ ಅರಿವಿನ ಪಾಠ ಮನಕ್ಕೆ ಮನದಟ್ಟಾಗುತ್ತದೆ. ಆಗ ಮನ ಅರಿವಿನ ಸುಳಿವನ್ನು ಛಲದಿಂದ ಪಾಲಿಸಿ ಜಂಗಮವೆಂದು ಹೆಸರು ಪಡೆಯುತ್ತದೆ. ಅಂಗದ ಮೂಲಕ ಅರಿವಿನ ಸೇವೆಯ ಮಾಡಿದ ಮನ ಅರಿವಿನ ಅಂಗದೊಳಗೆ ಬೆರೆತು ಲಿಂಗಾಂಗವಾಗುತ್ತದೆ. ಜಂಗಮ ಲಿಂಗವಾಗುತ್ತದೆ.

**ಭಾವ ಗುರುಲಿಂಗದೊಳಗೆ ಬೆರಸಿ,ಮಹಾಪ್ರಸಾದವ ಭೋಗಿಸಿ,ಭಾವ ಗುರು ಲಿಂಗದೊಳಗಾಯಿತ್ತು :**

ಅಂಗದೊಳಗಿದ್ದ ಭಾವ ಅಂಗವನ್ನು ಒಮ್ಮೆ ಅರಳಿಸುತ್ತದೆ ಮತ್ತೊಮ್ಮೆ ಕೆರಳಿಸುತ್ತದೆ. ಉದಾ: ಎಂಟ್ಹತ್ತು ದಿನಗಳಿಂದ ಉಪವಾಸವಿದ್ದ ಅಂಗವನ್ನು ಮತ್ತೊಂದು ಅಂಗ ಭಾವದಿಂದ ಮನೆಯಲ್ಲಿ ಕರೆದು ಊಟ ನೀಡಿ ತಾನು ದಾನಿಯಾಗಿ ಹಸಿದ ಅಂಗವನ್ನು ಆದರಿಸುತ್ತದೆ. ಹಸಿವಿನಿಂದ ಸಂತೃಪ್ತಿ ಹೊಂದಿದ ಅಂಗ ಊಟ ನೀಡಿದ ಅಂಗವನ್ನು ಭಾವದಿಂದ ಹೊಗಳುತ್ತದೆ. ಅನ್ನದ ಹಸಿವು ತೀರಿದ ನಂತರ ಅಂಗಕ್ಕೆ ಆಭರಣದ ಹಸಿವು, ಆಭರಣ ಹೊತ್ತ ಅಂಗದೊಂದಿಗೆ ಭೋಗಿಸುವ ಹಸಿವು ಉಂಟಾಗುತ್ತದೆ. ಅನ್ನ ನೀಡಿದ ಅಂಗ ಇದನ್ನು ಸಹಿಸುವುದಿಲ್ಲ. ಅಂಗದ ಭಾವ ದುರ್ಭಾವವಾಗಿ ವಿಷಯದ ಹಸಿವು ಹೊತ್ತ ಅಂಗವನ್ನು ಕೊಲೆ ಮಾಡುತ್ತದೆ. ಹಸಿದ ಅಂಗಕ್ಕೆ ಅನ್ನ ನೀಡಲು ಕಾರಣವಾದ ಅಂಗದ ಭಾವ, ನಿರಪರಾಧಿ ಅಂಗಕ್ಕೆ ಕೊಲೆಗಡುಕನ ಪಟ್ಟ ಕಟ್ಟುತ್ತದೆ. ಹಾಗೆಯೇ ನಿರಪರಾಧಿ ಅಂಗವನ್ನು ಕೊಲೆ ಮಾಡುತ್ತದೆ.

ಇಂತಹ ಅಂಗದ ಭಾವವನ್ನು ಅಂಗದಲ್ಲಿಯೇ ಇರುವ ಅರಿವೆಂಬ ಗುರುವಿನಲ್ಲಿ ಬೆರಸಿ ಅರಿವಿನಿಂದ ನೋಡಿದಾಗ ಅನ್ನದ ಹಸಿವು, ಆಭರಣದ ಹಸಿವು ತನ್ನಂತೆ ಇರುವ ಅಂಗದೊಂದಿಗೆ

ಕೂಡಿ ಸುಖಿಸುವ ಮೂರು ವಿಧದ ಹಸಿವು ಅಂಗದ ಮನಕ್ಕೆ ಬರುತ್ತದೆ. ಇದಕ್ಕೆ ಕಾರಣ ಮಾದದ್ದು ಭಾವ. ಅಂಗದ ಭಾವವನ್ನು ಅಂಗದ ಅರಿವೆಂಬ ಗುರುವಿನಲ್ಲಿ ಬೆರಸಿದಾಗ, ಗುರುವು ಈ ಮೂರೂ ಭಾವಗಳನ್ನು ಅರಿವಿನ ಪ್ರಸಾದದಿಂದ ಸ್ವೀಕರಿಸಿ ನಿರ್ಭಾವಗೊಳಿಸಿ ಗುರುಲಿಂಗವಾಗಿ ಉಳಿಯುತ್ತಾನೆ. ಈ ಪಾತವನ್ನು ತಾನು ಭೋದಿಸಿಕೊಂಡು,ಭೋಗಕ್ಕೆ ಕಾರಣವಾದ ಅಂಗಕ್ಕೂ ಭೋದಿಸಿ ತನ್ನಂತೆ ಮಾಡಿಕೊಳ್ಳುತ್ತಾನೆ.

ಅನ್ನ ನೀಡಿದ ಅಂಗ ಜೇಲಿಗೆ ಹೋಗುವುದಿಲ್ಲ, ಭೋಗಕ್ಕೆ ಕಾರಣವಾದ ಅಂಗವೂ ಸಾಯುವುದಿಲ್ಲ. ಇದಕ್ಕೆ ಕಾರಣವಾದ ಅಂಗದೊಳಗಿದ್ದ ಭಾವ ಸತ್ತು ನಿರ್ಭಾವವಾಗುತ್ತದೆ. ಆ ಭಾವವೇ ಗುರುಲಿಂಗವಾಗುತ್ತದೆ.

**ಚನ್ನ ಮಲ್ಲಿಕಾರ್ಜುನಾ, ನಿಮ್ಮ ಒಲುಮೆಯಿಂದ ಸಂದಳಿದು ಸ್ವಯಂ ಲಿಂಗವಾದೆನಯ್ಯಾ ಪ್ರಭುವೇ :**

ಕಲ್ಯಾಣದ ಶರಣರ ಅನುಭಾವ ಗೋಷ್ಠಿಯಲ್ಲಿ ನಿಂತ ಅಕ್ಕಳನ್ನು ಅಲ್ಲಮಪ್ರಭು ನೀನು ಬೆತ್ತಲೆಯಾದದ್ದು ಏಕೆ ? ನಿನ್ನ ಅಂಗದ ಅರಿವಿನ ಅನುಭವವನ್ನು ಪಡೆದುಕೊಂಡ ಬಗೆ ಹೇಗೆ ? ಎಂಬುದನ್ನು ಹೇಳಿದರೆ ಮಾತ್ರ ನಿನಗೆ ಇಲ್ಲಿ ಸ್ಥಾನ ಇಲ್ಲದಿದ್ದರೆ ನಡೆಯಾಚೆ ಎನ್ನುವ ಪ್ರಭುವಿನ ಕಾಠಿಣ್ಯದ ನುಡಿಗೆ ಅಕ್ಕ ಮಹಾದೇವಿ ತನ್ನ ಸ್ವಾನುಭವದ ವಚನದ ಮೂಲಕ ಶರಣ ಸಮೂಹಕ್ಕೆ ಉತ್ತರವಿತ್ತಿದ್ದಾಳೆ. ಹಾಗೆಯೇ ಪ್ರಪಂಚದ ಅಂಗಗಳಿಗೆ ಅರಿವಿನ ಸೂತ್ರವನ್ನು ಬಿತ್ತರಿಸಿದ್ದಾಳೆ. ತನ್ನ ಅಂಗದ ಅರಿವಿಗೆ ಚನ್ನಮಲ್ಲಿಕಾರ್ಜುನ ಎಂದು ನಾಮಕರಣ ಮಾಡಿ, ಸಾವ ಕೆಡುವ ಗಂಡನನ್ನು ಒಲೆಯೊಳಗಿಕ್ಕಿ ಒಲುಮೆಯಿಂದ ಅರಿವಿನ ಗಂಡನನ್ನು ಕೂಡಿದ್ದಾಳೆ. ಅಜ್ಞಾನದ ಸಂದಳಿದು ಸ್ವಯಂ ಅರಿವಿನ ಲಿಂಗವಾದ ಬಗೆಯನ್ನು ಅಕ್ಕ ವಚನದ ಮೂಲಕ ಪ್ರಭುವಿಗೆ ವಿವರಿಸಿದ್ದಾಳೆ.

□

---

**ಅರಿವಿನ ಪರಿಮಳ**

- □ ಅಂಗದ ಕಣ ಕಣದಲ್ಲಿರುವ ಅರಿವು ಘನ ಲಿಂಗವಾಗಿ ಅಂಗಕ್ಕೆ ಪಾಠ ಮಾಡಿದರೂ; ಅರಿವಿನ ಪರಿಚಯ ಅಂಗಕ್ಕೆ ಇಲ್ಲದ ನಿಮಿತ್ತ ತಾನು ಬಯಸಿದೆಡೆಯಲ್ಲೆಲ್ಲಾ ಹಾಲುತ್ತದೆ. ಕಳ್ಳ, ಸುಳ್ಳ, ಭ್ರಷ್ಟ , ವಿಷಯ ಲಂಪಟ, ಶ್ರೀಮಂತ, ಬಡವ, ಭಿಕ್ಷುಕ, ರಾಜಕಾರಣಿ, ಪೀಠಾಧಿಪತಿ, ಸ್ವಾಮಿ, ವೇಶ್ಯೆ ಎಂಬ ಹಣೆಪಟ್ಟಿಯನ್ನು ಅಂಗ ಕಟ್ಟಿಕೊಳ್ಳುತ್ತದೆ. ಸಹಜ ಅರಿವಿನ ಕ್ರಿಯೆಯಿಂದ ದೂರ ಉಳಿಯುತ್ತದೆ.
- □ ಅಂಗದ ಮನವು, ಅಂಗದ ಅರಿವನ್ನು ಬೆರಸಿ ಆಭರಣ ನೋಡಿದರೆ ಅದೊಂದು ಹಳದಿ ಬಣ್ಣದಿಂದ ಕೂಡಿದ ಲೋಹದ ಡಿಸೈನ್. ಬಣ್ಣ ಮತ್ತು ಲೋಹಕ್ಕೆ ಮರುಳಾಗಿ ಪಡೆಯಲು ಹಗಲಿರುಳು ದುಡಿಯಬೇಕೇ? ಕಳ್ಳನಾಗಿ ಅಂಗವನ್ನು ಕೊಂದು ಆಭರಣ ಪಡೆಯಬೇಕೆ ? ಭ್ರಷ್ಟಾಚಾರಿಯಾಗಿ ಲಂಚ ಪಡೆದು ಆಭರಣ ಕೊಳ್ಳಬೇಕೆ ?

# ಅಂಗದ ಭಂಗವನು ಅರಿವಿನಿಂದ ಗೆಲ್ಲುವ ಅಕ್ಕಳ ಸೂತ್ರ

**ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ.**
**ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ.**
**ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ.**
**ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ.**
**ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ**
**ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ**
**ಚೆನ್ನಮಲ್ಲಿಕಾರ್ಜುನ ,**
**ಕಾಮನ ಕೊಂದು ಮನಸಿಜನಾಗುಳುಹಿದಡೆ**
**ಮನಸಿಜನ ತಲೆಯ ಬರಹವ ತೊಡೆದೆನು.**
**ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ :**

ಕೌಶಿಕನನ್ನು ತೊರೆದು ಕಲ್ಯಾಣಕ್ಕೆ ಬಂದು ಶರಣರ ಸಮ್ಮುಖದಲ್ಲಿ ನಿಂದ ಅಕ್ಕಳನ್ನು ಕುರಿತು; ನೀನು ಯುವತಿ, ಗಂಡನನ್ನು ತೊರೆದು ಬಂದಿರುವೆ. ಅಂಗಕ್ಕಂಟಿದ ಕಾಮ ಹೇಗೆ ಗೆದ್ದೆ ಎಂಬುದನ್ನು ವಿವರಿಸು ಎಂದು ಶರಣರು ಕೇಳಿದ ಪ್ರಶ್ನೆಗೆ ಮೇಲ್ಕಂಡ ವಚನದ ಮೂಲಕ ಅಕ್ಕ ವಿವರಿಸಿದ್ದಾಳೆ.

ಅಂಗ ಸದಾ ಭಂಗ ಉಂಟು ಮಾಡುವುದೆ ಅದರ ಕೆಲಸ. ಇರುವುದೊಂದೆ ಅಂಗ ಆದರೂ ಹೆಣ್ಣಾಗಿದೆ ಗಂಡಾಗಿದೆ. ಅಂಗ ಒಂದೆ ಅಂಗದೊಳಗಿದ್ದ ಪದಾರ್ಥಗಳು ಒಂದೆ. ಅಂಗದ ಮೇಲ್ಭಾಗ ಚರ್ಮ ರೋಮಗಳಿಂದ ಕೂಡಿದ್ದು ಒಳಭಾಗ ರಕ್ತ, ಮೂಳೆ, ಮಾಂಸ ,ಮಜ್ಜ, ಮೇದಸ್ಸುಗಳಿಂದ ಕೂಡಿದೆ. ಅಂಗದ ಅರಿವು ಒಂದೆ ಮರೆವು ಒಂದೆ, ಮನ ಒಂದೆ, ಕಣ್ಣು ಅದರ ನೋಟ ಒಂದೆ, ಕಿವಿ ಅದರ ಶಬ್ದ ಜ್ಞಾನ ಒಂದೆ, ಚರ್ಮ ಅದರ ಸ್ಪರ್ಶ ಜ್ಞಾನ ಒಂದೆ, ನಾಲಗೆ ಅದರ ರುಚಿ ಜ್ಞಾನ ಒಂದೆ, ಮೂಗು ಅದರ ವಾಸನಾ ಜ್ಞಾನ ಒಂದೆ, ಹೀಗಿದ್ದೂ ಅಂಗಕ್ಕೆ ಹೆಣ್ಣು ಗಂಡು ಎನ್ನುವ ಭೇದ ಜ್ಞಾನದ ಭಂಗ ಉಂಟಾಗಿದೆ. ಶ್ರೀಮಂತ, ಬಡವ ಭಿಕ್ಷುಕ , ರಾಜ, ಪ್ರಧಾನಿ, ಕಾಲಾಳು, ಎನ್ನುವ ಭಂಗ ಅಂಗಕ್ಕೆ ಉಂಟಾಗಿದೆ. ಹೀಗೆ ಅಂಗಕ್ಕೆ ಉಂಟಾದ ಭಂಗವನ್ನು ಅಂಗದ ಹುಟ್ಟಿಗೆ ಕಾರಣವಾದ ಲಿಂಗದ (ಅರಿವಿನ) ಮುಖದಿಂದ ಗೆಲಿದೆ.

**ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ:**

ಸ್ಥೂಲಾಂಗ, ಸೂಕ್ಷ್ಮಾಂಗ, ಕಾರಣಾಂಗ ಎಂದು ಅಂಗದಲ್ಲಿ ಮೂರು ವಿಧ. ಸ್ಥೂಲಾಂಗ ಕಾಣುತ್ತದೆ. ಕಾರಣ ಸೂಕ್ಷ್ಮಾಂಗಗಳು ಕಾಣುವುದಿಲ್ಲ . ಕಾರಣಾಂಗದಿಂದಲೆ ಸ್ಥೂಲಾಂಗದ ಜನನ. ಕಾರಣಾಂಗದ ಬೆಳಕಿನಿಂದಲೆ ಸೂಕ್ಷ್ಮಾಂಗದ ಜನನ! ಸೂಕ್ಷ್ಮ, ಸ್ಥೂಲಾಂಗಗಳೆರಡಕ್ಕೂ ಕಾರಣಾಂಗವೆ ಮೂಲಾಧಾರ. ಕಾರಣಾಂಗದಿಂದ ಜನ್ಮ ಪಡೆದ ಸೂಕ್ಷ್ಮಾಂಗವೆಂಬ ಮನ ಸ್ಥೂಲಾಂಗವನ್ನು ನಿಯಂತ್ರಣದಲ್ಲಿಟ್ಟುಕೊಂಡು ಬಂಧಿ ಮಾಡಿದೆ. ತಾನು ಬಯಕೆ ಮಾಡಿದ ವಸ್ತುಗಳನ್ನೆಲ್ಲ

ಸ್ಥೂಲಾಂಗದಿಂದ ಪಡೆದು ಭೋಗಿಸಿ, ಸುಖಿಸಿ , ರುಚಿಸಿ, ಆನಂದ ಪಟ್ಟು ; ಸಿಗದಿದ್ದರೆ ಅಂಗಕ್ಕೆ ಭಂಗವನ್ನುಂಟು ಮಾಡುತ್ತದೆ. ಸೂಕ್ಷ್ಮಾಂಗ ಸೆರೆ ಕುಡಿಯಲು ಬಯಕೆ ಮಾಡಿ, ಅದನ್ನು ಸ್ಥೂಲಾಂಗಕ್ಕೆ ಕುಡಿಸಿ ತಾನು ಸುಖಿಸಿ ಸ್ಥೂಲಾಂಗಕ್ಕೆ ಕುಡುಕನ ಹಣೆ ಪಟ್ಟಿ ಕಟ್ಟಿ , ಅಂಗಕ್ಕೆ ಭಂಗವನ್ನುಂಟು ಮಾಡುತ್ತದೆ. ಹೀಗೆ ಅಂಗಕ್ಕೆ ಭಂಗ ಉಂಟುಮಾಡುವ ಮನದ ಭಂಗವನ್ನು, ಮನವನ್ನು ಸೃಷ್ಠಿಮಾಡಿದ ಅರಿವಿನ ಮುಖದಿಂದಲೇ ಗೆಲಿದೆ.

**ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ:**

ಅಂಗದ ಕಣ ಕಣದಲ್ಲಿ ಜೀವವೆ ತುಂಬಿದೆ. ಅಂಗ ಊನವಾದಾಗ ಜೀವ ತಲ್ಲಣಿಸುತ್ತದೆ. ಜೀವ ಇರುವವರೆಗೆ ಅಂಗದ ಭಯ ಜೀವಕ್ಕಿಲ್ಲ. ಅಂಗಕ್ಕೆ ಸಂಕಟ ಉಂಟಾದಾಗ ಜೀವ ತತ್ತರಿಸುತ್ತದೆ. ಅಂಗಕ್ಕೂ ಜೀವಕ್ಕೂ ಅರಿವಿಲ್ಲ. ಇವೆರಡಕ್ಕೂ ಅರಿವಿನ ಪರಿವೆಯೇ ಇಲ್ಲ. ಅರಿವಿರುವವರೆಗೂ ಅಂಗಕ್ಕೂ, ಜೀವಕ್ಕೂ ಅರ್ಥವಿದೆ. ಜೀವದೊಳಗು, ಅಂಗದೊಳಗೂ ಅರಿವು ತನ್ಮಯವಾಗಿ ಬೆರೆತಿದೆ.

ಅರಿವೆ ಗುರು, ಗುರುದೇವನೆ ಮಹಾದೇವ, ಮಹಾದೇವನೆ ಸದಾಶಿವ, ಆ ಸದಾಶಿವನೆ ಪರಬ್ರಹ್ಮ. ಹೀಗಿದ್ದಾಗ ಜೀವ ಶಿವನಿಂದ ಸೃಷ್ಠಿಯಾದಂತೆ. ಸೃಷ್ಠಿಯಾದ ಆ ಶಿವ(ಅರಿವು)ನಿಂದಲೆ ಜೀವದ ಭಂಗ ಕಳೆಯಲು ಸಾಧ್ಯ.

**ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ:**

ಅಂಗದ ಪಂಚೇಂದ್ರಿಯಗಳು ಜ್ಞಾನೇಂದ್ರಿಯಗಳು ಹೌದು. ಜ್ಞಾನೇಂದ್ರಿಯಗಳಿಗೆ ಮನ ವೆಂಬ ಕತ್ತಲೆ ಆವರಿಸಿರುವುದರಿಂದ ಕಣ್ಣಿಗೆ ನೋಡಲು ಬಂದರೂ ನೋಡುವ ವಸ್ತುವನ್ನು ಭ್ರಮೆ ಯಿಂದ ನೋಡುತ್ತದೆ. ಶಬ್ಧವನ್ನು ಭ್ರಮೆಯಿಂದ ಕೇಳುತ್ತದೆ. ಭ್ರಮೆಯಿಂದಲೆ ವಾಸಿಸಿ ಸ್ಪರ್ಶಿಸುತ್ತದೆ. ಹಾಗೂ ರುಚಿಸುತ್ತದೆ. ಈ ಭ್ರಮೆಯೆಂಬ ಕತ್ತಲನ್ನು ಬ್ರಹ್ಮನೆಂಬ ಬೆಳಗನುಟ್ಟು ಗೆಲಿದೆ.

**ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ:**

ಇನ್ನು ಶರಣರಿಗೆ ಕಾಣುವ ಈ ಅಂಗದ ಯೌವ್ವನದ ಹೊರಮಿಂಚು ಅದು ಕಾಮನನ್ನು ಸುಟ್ಟು ಉರುಹಿದ ಭಸ್ಮ. ನುಲಿ ಸುಟ್ಟಾಗ ಅದು ಕಾಣುತ್ತದೆ. ಹಿಡಿಯಲು ಹೋದರೆ ಬೂದಿ ಮಾತ್ರ ಕೈಗೆ ದಕ್ಕುತ್ತದೆ. ನುಲಿ ಸುಟ್ಟು ಭಸ್ಮವಾದ ಮೇಲೆ ನುಲಿಯ ಆಕಾರ ಕಂಡರೆ ಅದು ನುಲಿಯಲ್ಲ. ಹಾಗೆಯೆ ಈ ಅಂಗ, ಅಂಗದೊಳಗಿರುವ ಕಾಮ ಸುಟ್ಟು ಬರಿ ಭಸ್ಮಮಾತ್ರ ಉಳಿದಿದೆ. ಕಾಣುವುದು ಯೌವ್ವನದ ಹೊರಮಿಂಚು ಮಾತ್ರ!

**ಚೆನ್ನಮಲ್ಲಿಕಾರ್ಜುನ, ಕಾಮನ ಕೊಂದು ಮನಸಿಜನಾಗುಳುಹಿದಡೆ ಮನಸಿಜನ ತಲೆಯ ಬರಹವ ತೊಡೆದೆನು:**

ಅಂಗದಲ್ಲಿ ಬೆರೆತ ಅರಿವೆ ಚನ್ನಮಲ್ಲಿಕಾರ್ಜುನ. ಅಂಗಕ್ಕೆ ಆವರಿಸಿದ ಮನವೆ ನಾನು. ನಾನು ಎನ್ನುವ ಕಾಮವೆ ಅರಿವೆಂಬ ಚನ್ನಮಲ್ಲಿಕಾರ್ಜುನನ ಕೂಡಿ ಸುಖಿಸಿವ ಮೇಲೆ ಅಂಗಕ್ಕೆ ಅಂಟಿದ ಕಾಮ ಆಹಾರವಿಲ್ಲದೆ ಸತ್ತಂತೆ. ಇನ್ನು ಕಾಮನ ಕೊಂದು ಮನಸಿಜನಾಗುಳಿಹಿದ್ದು ನುಲಿಯಂತೆ ಕಾಣುವ ಬೂದಿ ಮಾತ್ರ. ಕಾಣುವ ಆ ಮನಸಿಜನ ಮುಟ್ಟಿದರೆ ಸಾಕು ಅದರ

ತಲೆಯ ಬರಹವೆ ಅಳಿಸಿ ಹೋಗುತ್ತದೆ ಎಂದು ಅಕ್ಕಮಹಾದೇವಿ ಅಂಗದ ಭಂಗವನ್ನು, ಮನದ ಭಂಗವನ್ನು, ಜೀವದ ಭಂಗವನ್ನು, ಕರಣದ ಕತ್ತಲೆಯನ್ನು ಹಾಗೂ ಯೌವ್ವನದ ಹೊರಮಿಂಚನ್ನು ಅರಿವಿನ ತಂತ್ರಗಾರಿಕೆಯಿಂದ ಸುಡುವ ವಿಧಾನವನ್ನು ವೈಜ್ಞಾನಿಕವಾಗಿ ಕಲ್ಯಾಣದ ಶರಣರಿಗೆ ಹಾಗೂ  ಜಗದ ಸಕಲ ಅಂಗಗಳಿಗೆ ಮನದಟ್ಟಾಗುವಂತೆ ತಮ್ಮ ವಚನದ ಸೂತ್ರದ ಮೂಲಕ ವಿವರಿಸಿದ್ದಾರೆ.

□

**ಅರಿವಿನ ಪರಿಮಳ**

- □ ಅಂಗ ಸದಾ ಭಂಗ ಉಂಟು ಮಾಡುವುದೆ ಅದರ ಕೆಲಸ. ಇರುವುದೊಂದೆ ಅಂಗ ಆದರೂ ಹೆಣ್ಣಾಗಿದೆ ಗಂಡಾಗಿದೆ. ಅಂಗ ಒಂದೆ ಅಂಗದೊಳಗಿದ್ದ ಪದಾರ್ಥಗಳು ಒಂದೆ. ಅಂಗದ ಮೇಲ್ಭಾಗ ಚರ್ಮ ರೋಮಗಳಿಂದ ಕೂಡಿದ್ದು ಒಳಭಾಗ ರಕ್ತ ಮೂಳೆ ಮಾಂಸ ,ಮಜ್ಜ, ಮೇದಸ್ಸುಗಳಿಂದ ಕೂಡಿದೆ. ಅಂಗದ ಅರಿವು ಒಂದೆ ಮರೆವು ಒಂದೆ, ಮನ  ಒಂದೆ, ಕಣ್ಣು ಅದರ ನೋಟ ಒಂದೆ, ಕಿವಿ ಅದರ ಶಬ್ದ  ಜ್ಞಾನ ಒಂದೆ, ಚರ್ಮ ಅದರ ಸ್ಪರ್ಶ ಜ್ಞಾನ ಒಂದೆ, ನಾಲಗೆ ಅದರ ರುಚಿ  ಜ್ಞಾನ ಒಂದೆ, ಮೂಗು ಅದರ ವಾಸನಾ ಜ್ಞಾನ ಒಂದೆ, ಹೀಗಿದ್ದೂ  ಅಂಗಕ್ಕೆ  ಹೆಣ್ಣು ಗಂಡು ಎನ್ನುವ ಭೇದ ಜ್ಞಾನದ ಭಂಗ ಉಂಟಾಗಿದೆ. ಶ್ರೀಮಂತ, ಬಡವ ಭಿಕ್ಷುಕ, ರಾಜ, ಪ್ರಧಾನಿ, ಕಾಲಾಳು, ಎನ್ನುವ ಭಂಗ ಅಂಗಕ್ಕೆ ಉಂಟಾಗಿದೆ.
- □ ಸ್ಥೂಲಾಂಗ, ಸೂಕ್ಷ್ಮಾಂಗ, ಕಾರಣಾಂಗ ಎಂದು ಅಂಗದಲ್ಲಿ ಮೂರು ವಿಧ. ಸ್ಥೂಲಾಂಗ ಕಾಣುತ್ತದೆ. ಕಾರಣ ಸೂಕ್ಷ್ಮಾಂಗಗಳು ಕಾಣುವುದಿಲ್ಲ . ಕಾರಣಾಂಗದಿಂದಲೆ ಸ್ಥೂಲಾಂಗದ ಜನನ. ಕಾರಣಾಂಗದ ಬೆಳಕಿನಿಂದಲೆ ಸೂಕ್ಷ್ಮಾಂಗದ ಜನನ! ಸೂಕ್ಷ್ಮ, ಸ್ಥೂಲಾಂಗಗಳೆರಡಕ್ಕೂ ಕಾರಣಾಂಗವೆ ಮೂಲಾಧಾರ. ಕಾರಣಾಂಗದಿಂದ ಜನ್ಮ ಪಡೆದ ಸೂಕ್ಷ್ಮಾಂಗವೆಂಬ ಮನ ಸ್ಥೂಲಾಂಗವನ್ನು ನಿಯಂತ್ರಣದಲ್ಲಿಟ್ಟುಕೊಂಡು ಬಂಧಿ ಮಾಡಿದೆ. ತಾನು ಬಯಕೆ ಮಾಡಿದ ವಸ್ತುಗಳನ್ನೆಲ್ಲ  ಸ್ಥೂಲಾಂಗದಿಂದ ಪಡೆದು ಭೋಗಿಸಿ, ಸುಖಿಸಿ , ರುಚಿಸಿ, ಆನಂದ ಪಟ್ಟು ; ಸಿಗದಿದ್ದರೆ ಅಂಗಕ್ಕೆ ಭಂಗವನ್ನುಂಟು ಮಾಡುತ್ತದೆ. ಸೂಕ್ಷ್ಮಾಂಗ ಸೆರೆ ಕುಡಿಯಲು ಬಯಕೆ ಮಾಡಿ, ಅದನ್ನು ಸ್ಥೂಲಾಂಗಕ್ಕೆ ಕುಡಿಸಿ ತಾನು ಸುಖಿಸಿ ಸ್ಥೂಲಾಂಗಕ್ಕೆ ಕುಡುಕನ ಹಣೆ ಪಟ್ಟಿ ಕಟ್ಟಿ , ಅಂಗಕ್ಕೆ ಭಂಗವನ್ನುಂಟು ಮಾಡುತ್ತದೆ.
- □ ಅಂಗದ ಪಂಚೇಂದ್ರಿಯಗಳು ಜ್ಞಾನೇಂದ್ರಿಯಗಳು ಹೌದು. ಜ್ಞಾನೇಂದ್ರಿಯಗಳಿಗೆ ಮನವೆಂಬ ಕತ್ತಲೆ ಅವರಿಸಿರುವುದರಿಂದ ಕಣ್ಣಿಗೆ ನೋಡಲು ಬಂದರೂ ನೋಡುವ ವಸ್ತುವನ್ನು ಭ್ರಮೆಯಿಂದ ನೋಡುತ್ತದೆ. ಶಬ್ದವನ್ನು ಭ್ರಮೆಯಿಂದ ಕೇಳುತ್ತದೆ. ಭ್ರಮೆಯಿಂದಲೆ ವಾಸಿಸಿ ಸ್ಪರ್ಶಿಸುತ್ತದೆ. ಹಾಗೂ ರುಚಿಸುತ್ತದೆ. ಈ ಭ್ರಮೆಯೆಂಬ ಕತ್ತಲನ್ನು ಬ್ರಹ್ಮನೆಂಬ ಬೆಳಗನುಟ್ಟು ಗೆಲ್ಲ ಬೇಕು.

# ಅಕ್ಕ ಅಂಗದಲ್ಲಿ ಬಿತ್ತಿದ ಅರಿವಿನ ಬೀಜಾಮೃತ

**ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ.**
**ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ.**
**ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ.**
**ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ.**
**ಜ್ಞಾನದೊಳಗೆ ಜ್ಞಾನವಾಗಿ ಜ್ಞಾನವ ಲಿಂಗೈಕ್ಯವ ಮಾಡಿದೆ.**
**ಕ್ರೀಗಳೆಲ್ಲವ ನಿಲಿಸಿ ಕ್ರೀಯಾತೀತವಾಗಿ**
**ನಿಃಪತಿ ಲಿಂಗೈಕ್ಯವ ಮಾಡಿದೆ.**
**ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯವ ಲಿಂಗೈಕ್ಯವ ಮಾಡಿದೆ.**
**ಚೆನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದೆನಾಗಿ**
**ಲಿಂಗವೆಂಬ ಘನವು ಎನ್ನಲ್ಲಿ**
**ಅಳಿಯಿತ್ತು ಕಾಣಾ ಸಂಗನಬಸವಣ್ಣಾ.**

ಅಂಗ, ಮನ, ಭಾವ ಅರಿವಿನಿಂದ ಗೆಲಿದೆನೆಂದು ಹೇಳುವ ಅಹಂಕಾರ ನಿನ್ನೊಳಗೆ ಉಳಿದಿದೆಯಲ್ಲ ತಾಯಿ ಅದನ್ನು ಹೇಗೆ ಕಳೆದುಕೊಂಡೆ ? ಎಂದು ಬಸವಣ್ಣನವರು ಕೇಳಿದ ಪ್ರಶ್ನೆಗೆ ಅಕ್ಕ ಮೇಲಿನಂತೆ ಉತ್ತರವಿತ್ತಿದ್ದಾಳೆ.

**ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ:**

ಸ್ಥೂಲಾಂಗ, ಸೂಕ್ಷ್ಮಾಂಗ, ಕಾರಣಾಂಗ ಇವು ಮೂರು ಅಂಗಗಳು. ಸ್ಥೂಲಾಂಗ ಮಾತ್ರ ಕಾಣುತ್ತದೆ. ಸೂಕ್ಷ್ಮಾಂಗ ಸ್ಥೂಲಾಂಗವನ್ನು ಹೊದ್ದಿದೆ. ಕಾರಣಾಂಗ ಸ್ಥೂಲಾಂಗಕ್ಕೆ ಜನ್ಮ ನೀಡಿದೆ. ಕಾರಣಾಂಗವೆ ಅರಿವಿನ ಅಂಗ. ಅರಿವಿನ ಅಂಗಕ್ಕೆ ಮಂಗನಂತೆ ಸೂಕ್ಷ್ಮಾಂಗ ಮುಸುಕಿದೆ. ಮನವೆಂಬ ಮಂಗ ಹೇಳಿದಂತೆ ಸ್ಥೂಲಾಂಗ ಕುಣಿಯುತ್ತದೆ. ಈ ತಂತ್ರಗಾರಿಕೆಯನ್ನು ತಿಳಿದ ಅಕ್ಕ ಮನವೆಂಬ ಮರ್ಕಟವನ್ನು ಕಾರಣಾಂಗವೆಂಬ ಅರಿವಿನ ಅಂಗದಲ್ಲಿ ಐಕ್ಯವ ಮಾಡಿ, ಸ್ಥೂಲಾಂಗವನ್ನು ಲಿಂಗಮಾಡಿ ಅರಿವಿನ ಅಂಗದಲ್ಲಿ ಲಿಂಗೈಕ್ಯ ಮಾಡಿದ್ದಾಳೆ.

**ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ:**

ಏನೂ ಅರಿಯದಿದ್ದಾಗ ಈ ಮೂರೂ ಅಂಗಗಳ ಪರಿಚಯವು ತನಗಿಲ್ಲ. ಒಮ್ಮೆ ಹೌದಾಗಿ ಕಾಣುತ್ತದೆ. ಒಮ್ಮೆ ಅಲ್ಲವಾಗಿ ಕಾಣುತ್ತದೆ. ಹೀಗಿದ್ದಾಗ ಅರಿವಿನಲ್ಲೂ ,ಮನದಲ್ಲೂ, ಅಂಗದಲ್ಲೂ ಮನವೇ ಎದ್ದು ಕಾಣುತ್ತದೆ. ಇವುಗಳನ್ನು ಅರಿವಿನಿಂದ ವಿಭಾಗಿಸಿ ಅರಿವಿನಲ್ಲಿ ಬೆರೆತ ಮನವನ್ನು ಅರಿವಿನೊಳಗೆ ಬೆರೆಸಿ, ಮನದೊಳಗೆ ಬೆರೆತ ಮನವನ್ನು ಅರಿವಿನೊಳಗೆ ಬೆರೆಸಿ, ಅಂಗದೊಳಗೆ ಬೆರೆತ ಮನವನ್ನು ಅರಿವಿನೊಳಗೆ ಬೆರೆಸಿ ಘನಮನವನ್ನಾಗಿ ಮಾಡಿದೆ.

**ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ:**

ಅಂಗದೊಳಗೆ, ಅರಿವಿನೊಳಗೆ, ಮನದೊಳಗೆ, ಭಾವ ಬೆರೆತಿದೆ. ಹೀಗೆ ಬೆರೆತ

ಭಾವ ಒಂದೇ ತೆರನಾಗಿರದೆ, ಒಮ್ಮೆ ಭಾವವಾಗುತ್ತದೆ ಮತ್ತೊಮ್ಮೆ ಸದ್ಭಾವವಾಗುತ್ತದೆ, ಮಗದೊಮ್ಮೆ ದುರ್ಭಾವವಾಗುತ್ತದೆ. ಹೀಗಿರುವ ಭಾವವನ್ನು ಅರಿವಿನೊಳಗೆ ಬೆರೆಸಿ ನಿರ್ಭಾವಗೊಳಿಸಿ ಲಿಂಗೈಕ್ಯವ ಮಾಡಿದೆ.

**ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ. ಜ್ಞಾನದೊಳಗೆ ಜ್ಞಾನವಾಗಿ ಜ್ಞಾನವ ಲಿಂಗೈಕ್ಯವ ಮಾಡಿದೆ:**

ಅಂಗಕ್ಕಂಟಿದ ಅಂಗದ ಗುಣ, ಮನಕ್ಕಂಟಿದ ಮನದ ಗುಣ, ಅರಿವಿಗಂಟಿದ ಮನದ ಗುಣ ಕಳೆದುಕೊಂಡಾಗ ಉಳಿಯುವುದೇ ಅರಿವು. ಆಗ ಅಂಗದಲ್ಲಿ ನಾನು ಅರಿವು - ಜ್ಞಾನ ಮಾತ್ರ ಎನ್ನುವ ಅಹಂಕಾರ ಉಳಿಯುತ್ತದೆ. ಅದನ್ನು ಕೂಡಾ ಲಿಂಗೈಕ್ಯವ ಮಾಡಿದೆ.

**ಕ್ರೀಗಳೆಲ್ಲವ ನಿಲಿಸಿ ಕ್ರೀಯಾತೀತವಾಗಿ ನಿಃಪತಿ ಲಿಂಗೈಕ್ಯವ ಮಾಡಿದೆ. ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯವ ಲಿಂಗೈಕ್ಯವ ಮಾಡಿದೆ:**

ಈ ಎಲ್ಲಾ ಕ್ರಿಯೆಗಳನ್ನು ನಿಲಿಸಿ ಕ್ರಿಯಾತೀತವಾಗಿ ಮಾಗಿ, ನಾನು ಸತಿಯಾಗಿ ನೀನು ಪತಿಯಾಗಿ, ನಾನೆಂಬ ಮನವನ್ನು ಅಳಿದು ನೀನೆಂಬ ಪತಿಯನ್ನು ಕೆಡಿಸಿ, ಆ ಪತಿಯನ್ನೆ ನಿಃಪತಿ ಮಾಡಿ ಪತಿಯೊಳಗೆ ಸತಿಯಾಗಿ ಎಂದೆಂದೂ ಅಗಲದಂತೆ ಕೂಡದಗಲದ ಕೂಟದಲ್ಲಿ ಲಿಂಗೈಕ್ಯಳಾದೆ.

**ಚೆನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನಬಸವಣ್ಣಾ:**

ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗಂಡನೊಳಗೆ ನಾನೆಂಬ ಮನದ ಸತಿಯು ಅಳಿದು, ಅರಿವು ಎಂಬ ಘನವು ಕೂಡಾ ಎನ್ನಲ್ಲಿ ಅಳಿದು ಬಚ್ಚಬರಿಯ ಬಯಲಾಯಿತ್ತು ಎಂದು ಬಸವಣ್ಣನವರ ಪ್ರಶ್ನೆಗೆ ಉತ್ತರಿಸುತ್ತ ಜಗದ ಅಂಗಗಳಿಗೆಲ್ಲ ಅರಿವಿನ ಅಮೃತದ ಬುತ್ತಿಯನ್ನು ವಚನದ ಮೂಲಕ ಬಿಚ್ಚಿಟ್ಟಿದ್ದಾಳೆ ಅಕ್ಕ.

□

---

**ಅರಿವಿನ ಪರಿಮಳ**

□ ಸ್ಥೂಲಾಂಗ, ಸೂಕ್ಷ್ಮಾಂಗ, ಕಾರಣಾಂಗ ಇವು ಮೂರು ಅಂಗಗಳು. ಸ್ಥೂಲಾಂಗ ಮಾತ್ರ ಕಾಣುತ್ತದೆ. ಸೂಕ್ಷ್ಮಾಂಗ ಸ್ಥೂಲಾಂಗವನ್ನು ಹೊದ್ದಿದೆ. ಕಾರಣಾಂಗ ಸ್ಥೂಲಾಂಗಕ್ಕೆ ಜನ್ಮ ನೀಡಿದೆ. ಕಾರಣಾಂಗವೆ ಅರಿವಿನ ಅಂಗ. ಅರಿವಿನ ಅಂಗಕ್ಕೆ ಮಂಗನಂತೆ ಸೂಕ್ಷ್ಮಾಂಗ ಮುಸುಕಿದೆ. ಮನವೆಂಬ ಮಂಗ ಹೇಳಿದಂತೆ ಸ್ಥೂಲಾಂಗ ಕುಣಿಯುತ್ತದೆ.

# ಮನ ಅರಿವಿನ ಸಂಗ ಮಾಡಿ ಸ್ವಯಲಿಂಗವಾಗುವ ಬಗೆ

**ಅಂಗ ಲಿಂಗವ ವೇಧಿಸಿ ಅಂಗ ಲಿಂಗದೊಳಗಾಯಿತ್ತು,**
**ಮನ ಲಿಂಗವ ವೇಧಿಸಿ ಮನ ಲಿಂಗದೊಳಗಾಯಿತ್ತು.**
**ಭಾವ ಲಿಂಗವ ವೇಧಿಸಿ ಭಾವ ಲಿಂಗದೊಳಗಾಯಿತ್ತು.**
**ಚೆನ್ನ ಮಲ್ಲಿಕಾರ್ಜುನಾ,**
**ನಿಮ್ಮ ಒಲುಮೆಯ ಸಂಗದಲ್ಲಿರ್ದು ಸ್ವಯಲಿಂಗವಾಯಿತ್ತು.**

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆನ್ನಮಲ್ಲಿಕಾರ್ಜುನನೆಂಬ ಚಲುವಂಗೆ ಒಲುಮೆಯಿಂದ ಒಲಿದು ಆತನ ಸಂಗದಲ್ಲಿದ್ದು ಸ್ವಯಲಿಂಗವಾಗಿದ್ದಳು ಅಕ್ಕ.

ದೇಹ ಸಾವು ಮತ್ತು ನೋವುಗಳಿಂದ ಕೂಡಿದೆ. ಹುಟ್ಟು ಸಾವುಗಳಿವೆ. ದೇಹ ಅಜ್ಞಾನ ದಿಂದಾಗಿ ಸಾಯುವ ಕೆಡುವ ದೇಹವನ್ನೇ ಗಂಡನನ್ನಾಗಿ, ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತದೆ. ಸಾವಿಲ್ಲದ, ಕೇಡಿಲ್ಲದ ಗಂಡನನ್ನು ಮಾಡಿಕೊಂಡ ಉದಾಹರಣೆಗಳು ಶರಣರನ್ನು, ಸಂತರನ್ನು, ದಾಸರನ್ನು ಹೊರತುಪಡಿಸಿದರೆ ಅತ್ಯಂತ ವಿರಳ.

ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿ ಮಸಣೆಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧವಿಲ್ಲದಿ ರ್ದೊಡೆ ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲ ಸಂಗಮದೇವ.

ದೇಹದಲ್ಲಿರುವ ಅರಿವೆಂಬ ಗಂಡ ಶಿವಲಿಂಗದೇವರ ಭಕ್ತನಾದರೆ, ದೇಹವನ್ನು ಆವರಿಸಿದ ಮನ ಮಾರಿಮಸಣೆಯ ಭಕ್ತೆ. ಮನ ಸುರೆ ಮಾಂಸ ಸೇವಿಸಲು ಹಾದರ, ಕಳುವು, ಭ್ರಷ್ಟಾಚಾರ, ಲಂಚದಲ್ಲಿ ಪಾಲ್ಗೊಳ್ಳಲು ದೇಹವನ್ನು ದುರ್ಬಳಕೆ ಮಾಡಿಕೊಂಡರೆ, ದೇಹದಲ್ಲಿರುವ ಅರಿವೆಂಬ ಗಂಡ ಕೂಡದು ಎಂದು ಮನಕ್ಕೆ ಆಜ್ಞೆ ಮಾಡಿ ತಡೆಯುತ್ತಾನೆ. ಹಾಗೆ ಆದೇಶ ನೀಡುವ ಅರಿವೆಂಬ ಗಂಡನನ್ನು ಮತ್ತು ಆತನ ಸಂಪದ್ಭರಿತ ದೇಹವನ್ನು ಮನ ಹೆಂಡದ ಅಂಗಡಿಗೆ ಕರೆದೊಯ್ದು ದೇಹಕ್ಕೆ ಕುಡಿಸಿ ತಾನು ಸಂತೋಷಪಡುತ್ತದೆ. ಇಂತಹ ಮನ ಅಂಗದಲ್ಲಿರುವ ಅರಿವೆಂಬ ಗಂಡನ ಜೊತೆಗೆ ಕೂಡುವುದೇ ಒಲುಮೆಯ ಸಂಗದ ಕೂಟ. ಇದು ಕೂಡದ, ಕೂಡಿ ಎಂದೆಂದು ಅಗಲದ ಅರಿವಿನ ಕೂಟ!

ಗಂಡು ಹೆಣ್ಣಿನ ಕೂಟ ಕೂಡಿ ಅಗಲುವ ಕೂಟ; ಇದು ಬಾಳ ಸಂಗಾತಿಗಳ ಕೂಟ; ಹೆಣ್ಣು ಹೆಣ್ಣು ಕೂಡುವ ಕೂಟ ! ಬಸವಣ್ಣ ಗಂಡಾದರೂ ತಾನು ಹೆಣ್ಣಾಗಿ ತನ್ನ ಅರಿವೆಂಬ ಗಂಡ ನೊಂದಿಗೆ ಕೂಡಿ ಕೂಡದಗಲದ ಕೂಟದ ಸವಿಯನು ಸವಿದಿದ್ದಾನೆ.

ಎಮ್ಮ ಗಂಡನು ಏಕಾಂತಂಬೊಕ್ಕನು ಬೇಗ ಬೇಗ ಹೊರನಡೆಯಿರಣ್ಣಗಳಿರಾ ಒಬ್ಬನಿ ದ್ದಡೂ ಸೈರಿಸ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಸಿದ್ಧರಾಮ ಶಿವಯೋಗಿಗಳು ತಾವು ಹೆಣ್ಣಾಗಿ ಅರಿವನ್ನು ಗಂಡನನ್ನಾಗಿ ಮಾಡಿಕೊಂಡು ದೇಹದಲ್ಲಿರುವ ಕಾಮ, ಕ್ರೋಧ,ಲೋಭ, ಮೋಹ, ಮದ, ಮತ್ಸರಗಳನ್ನು ಹೊರಗೆ ಕಳುಹಿಸಿ ಅರಿವೆಂಬ ನಲ್ಲನೊಂದಿಗೆ ಕೂಡಿ ಸಂಭ್ರಮಿಸಿ

ಸ್ವಯಲಿಂಗವಾಗಿದ್ದಾರೆ. ಹಾಗೆಯೇ ಅಕ್ಕಮಹಾದೇವಿ ಅಂಗದಲ್ಲಿರುವ ಅರಿವನ್ನು ಭೇದಿಸಿ ಅಂಗವನ್ನು ಅರಿವಿನ ಅಂಗವನ್ನಾಗಿ ಮಾಡಿದ್ದಾರೆ. ಅಂಗದಲ್ಲಿರುವ ಮನವು, ಅಂಗದಲ್ಲಿರುವ ಅರಿವನ್ನು ಭೇದಿಸಿ ಮನ ಅರಿವಿನೊಳಗು ಮಾಡಿ, ಘನಮನವನ್ನಾಗಿ ಮಾಡಿದ್ದಾರೆ. ಹಾಗೆಯೇ ಭಾವದಿಂದ ಅರಿವನ್ನು ಭೇದಿಸಿ, ಭಾವ ಅರಿವಿನೊಳಗೆ ಲೀನ ಮಾಡಿ ನಿರ್ಭಾವ ಮಾಡಿದ್ದಾರೆ. ಅಂಗ, ಅಂಗದೊಳಗಿರುವ ಮನ, ಭಾವಗಳು ಘನಲಿಂಗವಾಗಿ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಒಲುಮೆಯ ಗಂಡನ ಸಂಗದಲ್ಲಿದ್ದು ಸ್ವಯಂ ಲಿಂಗವೇ ತಾವಾದ ಬಗೆಯನ್ನು ಅಕ್ಕ ಓದುಗರಿಗೆ ತಮ್ಮ ವಚನದ ಮೂಲಕ ವಿವರಿಸಿದ್ದಾರೆ.

□

**ಅರಿವಿನ ಪರಿಮಳ**

□ ದೇಹದಲ್ಲಿರುವ ಅರಿವೆಂಬ ಗಂಡ ಶಿವಲಿಂಗದೇವರ ಭಕ್ತನಾದರೆ, ದೇಹವನ್ನು ಆವರಿಸಿದ ಮನ ಮಾರಿಮಸಣೆಯ ಭಕ್ತೆ. ಮನ ಸುರೆ ಮಾಂಸ ಸೇವಿಸಲು ಹಾದರ, ಕಳುವು, ಭ್ರಷ್ಟಾಚಾರ, ಲಂಚದಲ್ಲಿ ಪಾಲ್ಗೊಳ್ಳಲು ದೇಹವನ್ನು ದುರ್ಬಳಕೆ ಮಾಡಿಕೊಂಡರೆ, ದೇಹದಲ್ಲಿರುವ ಅರಿವೆಂಬ ಗಂಡ ಕೂಡದು ಎಂದು ಮನಕ್ಕೆ ಆಜ್ಞೆ ಮಾಡಿ ತಡೆಯುತ್ತಾನೆ. ಹಾಗೆ ಆದೇಶ ನೀಡುವ ಅರಿವೆಂಬ ಗಂಡನನ್ನು ಮತ್ತು ಆತನ ಸಂಪದ್ಭರಿತ ದೇಹವನ್ನು ಮನ ಹೆಂಡದ ಅಂಗಡಿಗೆ ಕರೆದೊಯ್ದು ದೇಹಕ್ಕೆ ಕುಡಿಸಿ ತಾನು ಸಂತೋಷಪಡುತ್ತದೆ. ಇಂತಹ ಮನ ಅಂಗದಲ್ಲಿರುವ ಅರಿವೆಂಬ ಗಂಡನ ಜೊತೆಗೆ ಕೂಡುವುದೇ ಒಲುಮೆಯ ಸಂಗದ ಕೂಟ. ಇದು ಕೂಡದ, ಕೂಡಿ ಎಂದೆಂದು ಅಗಲದ ಅರಿವಿನ ಕೂಟ!

□ ಗಂಡು ಹೆಣ್ಣಿನ ಕೂಟ ಕೂಡಿ ಅಗಲುವ ಕೂಟ; ಇದು ಬಾಳ ಸಂಗಾತಿಗಳ ಕೂಟ; ಹೆಣ್ಣು ಹೆಣ್ಣು ಕೂಡುವ ಕೂಟ ! ಬಸವಣ್ಣ ಗಂಡಾದರೂ ತಾನು ಹೆಣ್ಣಾಗಿ ತನ್ನ ಅರಿವೆಂಬ ಗಂಡನೊಂದಿಗೆ ಕೂಡಿ ಕೂಡದಗಲದ ಕೂಟದ ಸವಿಯನು ಸವಿದಿದ್ದಾನೆ.

# ಶರಣ ಸತಿ ಲಿಂಗ ಪತಿಯಾದ ಅಂಗ ಅನಂಗವಾಯಿತು

ಅಂಗವ ಲಿಂಗಮುಖದಲ್ಲಿ ಅರ್ಪಿಸಿ
ಅಂಗ ಅನಂಗವಾಯಿತ್ತು.
ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು.
ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು.
ಅಂಗ ಮನ ಭಾವವಳಿದ ಕಾರಣ
ಕಾಯ ಅಕಾಯವಾಯಿತ್ತು.
ಎನ್ನ ಕಾಯದ ಸುಖಭೋಗವ ಲಿಂಗವೆ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು.
ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ
ಒಳಹೊಕ್ಕು ಬೆರಸಿದೆನು.

**ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗ ಅನಂಗವಾಯಿತ್ತು :**

ಅಂಗ ಇದ್ದು ಅನಂಗವಾಗುವುದು ಕಠಿಣದ ಕೆಲಸ. ಅಂಗದಿಂದ ಉತ್ಪತ್ತಿಯಾದ ಶಬ್ದವನ್ನು ಅಂಗ ಸಮಾಧಾನದಿಂದ ಸ್ವೀಕರಿಸುವುದಿಲ್ಲ. ಹಾಗೆ ಸ್ವೀಕರಿಸಲಿಕ್ಕೆ ಅಂಗಕ್ಕೆ ಸಾಧ್ಯವಾಗುವುದೇ ಇಲ್ಲ. ಏಕೆಂದರೆ ಶಬ್ದವನ್ನು ನುಡಿದ ಅಂಗ ಮೊದಲು ಕುದಿಯುತ್ತದೆ. ಸ್ವೀಕರಿಸಿದ ಅಂಗ ನಂತರ ಕುದಿಯುತ್ತದೆ. ಅಂಗ ಅನಂಗವಾದರೆ; ನುಡಿಯುವ ಅಂಗವೂ ಅನಂಗವಾಗಿ ಕಾಣುತ್ತದೆ. ಅಂಗ ನುಡಿಯುವ ಶಬ್ದ ಅನಂಗದಲ್ಲಿ ಜ್ಞಾನದಿಂದ ಅರಳಿ, ಪರಿಮಳವಾಗಿ ಬೀರುತ್ತದೆ. ಶಬ್ದ ಕೇಳಿಸಿಕೊಂಡ ಅಂಗ ಹಸನ್ಮುಖಿಯಾಗುತ್ತದೆ. ಏಕೆಂದರೆ ಅಂಗ ಅರಿವಿಗೆ ಅರ್ಪಣೆಯಾಗಿ ಅರಿವೆ ತಾನಾಗಿ ಅನಂಗವಾಗಿದೆ.

ಜಲಬಿಂದು ಗರ್ಭಸೇರಿ ರಕ್ತ ಮಾಂಸ ಮೂಳೆ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚದಿಂದ ಬಂಧಿಸಲ್ಪಟ್ಟು ನವಮಾಸ ತುಂಬಿದ ಮೇಲೆ ಗರ್ಭದಿಂದ ಹೊರಬಂದು ಅಂಗವಾಗಿದೆ.

ಜಲವು ಜಲವಲ್ಲ ; ಜಲಜನಕದ ಎರಡು ಪರಮಾಣು ಆಮ್ಲಜನಕದ ಒಂದು ಪರಮಾಣು ಬಯಲಿನ ಸಹಾಯದಿಂದ ಬೆರೆತು ಜಲವಾಗಿ ಕಾಣುತ್ತದೆ. ಜಲವು ಜಲವಲ್ಲ, ಜಲಜನಕವು ಜಲವಲ್ಲ, ಆಮ್ಲಜನಕವು ಜಲವಲ್ಲ, ಇವು ಎರಡೂ ಬಯಲ ಗರ್ಭದಲ್ಲಿಯೆ ಇದ್ದು ಬಯಲಿನಂತೆ ಬಯಲೆ ಆಗಿವೆ. ಬಯಲ ಸಹಾಯದಿಂದ ಜಲ ಬಿಂದುವಾಗಿ ತಂದೆಯ ಗರ್ಭದಿಂದ ತಾಯಿ ಗರ್ಭಸೇರಿ ಅಂಗವಾಗಿ ಪರಿವರ್ತನೆಯಾಗಿದೆ.

ಅಂಗದ ಮೂಲ ಜಲ, ಜಲದ ಮೂಲ ಜಲಜನಕ ಆಮ್ಲಜನಕ ! ಇವೆರಡರ ಮೂಲ ಬಯಲು!! ಅಂದರೆ ಅಂಗದ ಮೂಲ ಅರಿವಿನಿಂದ ಅನಂಗವಾದಂತಾಗಲಿಲ್ಲವೇ? ಆ ಅನಂಗವೆ ಅರಿವೆಂಬ ಲಿಂಗವಾಗಲಿಲ್ಲವೇ ? ಹೀಗೆ ಅಂಗದಿಂದ ಬಂದ ಪ್ರತಿ ಶಬ್ದಗಳನ್ನು ಅರಿವಿನಿಂದ ಕೇಳಿದಾಗ ಆ ಶಬ್ದಗಳೆಲ್ಲ ಜ್ಞಾನದಿಂದಲೆ ಕೂಡಿವೆ. ನಿಶಬ್ದಂ ಬ್ರಹ್ಮಮುಚ್ಚತೆ; ಶಬ್ದ ಕುಶಬ್ದ ಶಬ್ದದ

ಲ್ಲಿಯೆ ಅಡಗಿದೆ. ಕೆರಳಿ ರೋಷದಿಂದ ನುಡಿದ ಅಂಗದ ಶಬ್ದವು ಅನಂಗಕ್ಕೆ ಬಡಿದು ಜ್ಞಾನವಾಯಿತು. ಅನಂಗ ಪ್ರತಿ ನುಡಿಯಲಿಲ್ಲ, ಏಕೆಂದರೆ ಅದು ಅಂಗವಲ್ಲ.

**ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು:**

ಕಣ್ಣಿನಲ್ಲಿ ಕಿವಿಯಲ್ಲಿ ಚರ್ಮದಲ್ಲಿ ಮೂಗಿನಲ್ಲಿ ನಾಲಗೆಯಲ್ಲಿ ಮನ ಬೆರೆತುದ ರಿಂದ, ನೋಡುವಲ್ಲಿ ಕೇಳುವಲ್ಲಿ ಮುಟ್ಟುವಲ್ಲಿ ವಾಸಿಸುವಲ್ಲಿ ರುಚಿಸುವಲ್ಲಿ ಸ್ಪರ್ಶಿಸುವಲ್ಲಿ ಅಂಗಕ್ಕೆ ತೊಂದರೆ ಉಂಟಾದರೆ ಮನ ಅಂಗವನ್ನು ಸಂಕಟಕ್ಕೀಡು ಮಾಡಿ ತಾನು ಕುದಿಯು ತ್ತದೆ. ಇಂತಹ ಮನವನ್ನು ಅಂಗದ ಅರಿವಿಗೆ ಅರ್ಪಿಸಿರುವುದರಿಂದ ಮನ ಅರಿವಿನಲ್ಲಿ ಲಯ ವಾಗಿ ಘನಮನವಾಯಿತು.

**ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು:**

ಅಂಗದಲ್ಲಿ ಭಾವವಿದೆ. ಅದು ಒಮ್ಮೆ ಭಾವವಾದರೆ, ಮತ್ತೊಮ್ಮೆ ದುರ್ಭಾವವಾ ಗುತ್ತದೆ. ಅಂಗದ ಭಾವವನ್ನು ಅಂಗದ ಅರಿವಿನ ತೃಪ್ತಿಗೆ ಅರ್ಪಿಸಿರುವುದರಿಂದ ಭಾವ ಬಯ ಲಾಗಿ ನಿರ್ಭಾವವಾಯಿತ್ತು.

**ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು:**

ಅಂಗದ ಮೂಲ ನೋಡಿದಾಗ ಅದು ಜಲ; ಅದರ ಮೂಲ ನೋಡಿದಾಗ ಜಲಜ ನಕ ಆಮ್ಲಜನಕ ; ಅದರ ಮೂಲ ನೋಡಿದಾಗ ಅದು ಬಯಲು ಹೀಗೆ ಅಂಗದಲ್ಲಿ ಜನಿಸಿದ ಮನವು ಬಯಲು ; ಭಾವವು ಬಯಲು. ಇವು ಮೂರೂ ಅರಿವಿನಿಂದ ಅಳಿದ ಕಾರಣ ಕಾಯ ಅಕಾಯವಾಯಿತು.

**ಎನ್ನ ಕಾಯದ ಸುಖಭೋಗವ ಲಿಂಗವೆ ಭೋಗಿಸುವನಾಗಿ ಶರಣ ಸತಿ ಲಿಂಗ ಪತಿಯಾದೆನು:**

ಕಾಣುವ ಕಾಯ ಭೋಗಿಸುವುದನ್ನೆಲ್ಲ ಅರಿವಿನಿಂದ ನೋಡಿದರೆ ಸುಖವೂ ಅಲ್ಲ ದುಃಖವು ಅಲ್ಲ, ಸುಖ ದುಃಖಗಳಿಗೆ ಮೀರಿದ ಪರಮ ಸುಖ ಭೋಗಿಸುವುದು ಕಾಯವಲ್ಲ. ಕಾಯದ ಅರಿವೆಂಬ ಲಿಂಗವೆ ಭೋಗಿಸುವವನಾಗಿರುವುದರಿಂದ ಅವನು ಎನಗೆ ಪತಿಯಾದ. ನಾನು ಅವನಿಗೆ ಶರಣು ಹೋಗಿ ಸತಿಯಾದೆನು. ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗಂಡನ ಒಳಹೊಕ್ಕು ಬೆರಸಿ ಅರಿವೆ ನಾನಾಗಿ ಸುಖಿಸಿದೆನು ಎಂದು ಅಂಗದ ಕಣಕಣ ದಲ್ಲಿ ತುಂಬಿರುವ ಅರಿವಿನ ಲಿಂಗಾಂಗ ಸಾಮರಸ್ಯವನ್ನು ಅಕ್ಕ ಸೂತ್ರ ರೂಪದಲ್ಲಿ ಜಗದ ಅಂಗ ಗಳಿಗೆ ಉಣಬಡಿಸಿದ್ದಾಳೆ.

□

---

**ಅರಿವಿನ ಪರಿಮಳ**

□ ಅಂಗ ನುಡಿಯುವ ಶಬ್ದ ಅನಂಗದಲ್ಲಿ ಜ್ಞಾನದಿಂದ ಅರಳಿ, ಪರಿಮಳವಾಗಿ ಬೀರುತ್ತದೆ. ಶಬ್ದ ಕೇಳಿಸಿಕೊಂಡ ಅಂಗ ಹಸನ್ಮುಖಿಯಾಗುತ್ತದೆ. ಏಕೆಂದರೆ ಅಂಗ ಅರಿವಿಗೆ ಅರ್ಪಣೆಯಾಗಿ ಅರಿವೆ ತಾನಾಗಿ ಅನಂಗವಾಗಿದೆ.

# ಕಾಮವಿಕಾರ ಕಳೆಯುವ ಅಕ್ಕನ ಅರಿವಿನ ಸೂತ್ರ

**ಅಂಗವಿಕಾರಸಂಗವ ಮರೆದು,**
**ಲಿಂಗವನೊಡಗೂಡುತಿಪ್ಪವರ ತೋರಾ ಎನಗೆ.**
**ಕಾಮವಿಕಾರಕತ್ತಲೆಯಳಿದು,**
**ಭಕ್ತಿ ಪ್ರಾಣವಾಗಿಪ್ಪವರ ತೋರಾ ಎನಗೆ.**
**ತ್ರಿಕರಣ ಶುದ್ಧವಾಗಿ ನಿಮ್ಮ ನೆರೆ ನಂಬಿದ**
**ಸದ್ಭಕ್ತರ ತೋರಾ ಎನಗೆ ಚೆನ್ನಮಲ್ಲಿಕಾರ್ಜುನಾ.**

ಅನಂತ ಕಾಲದಿಂದಲೂ ಭಾರತದೇಶದಲ್ಲಿ ಜನ ಅರಿವನ್ನು ದೇವರೆಂದು ದೈವವೆಂದು ಪಶುಪತಿಯೆಂದು ಶಿವನೆಂದು ಪೂಜಿಸುತ್ತಾ ಬಂದಿದ್ದಾರೆ. ದೇಹದಲ್ಲಿಯ ಅರಿವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಂಡವನೆ ಮಹಾಂತ. ಅವನಿಗೆ ಲೋಕದ ಜಂಜಡಗಳು ಇಲ್ಲ. ಜನಕ್ಕಿಂತ ಭಿನ್ನ ರೀತಿಯಲ್ಲಿ ಮಹಾಂತ, ಶರಣ, ದಾಸನಾದವನು ಅರಿವಿನಿಂದ ಬದುಕುತ್ತಿರುವುದರಿಂದ ಜನ ಅವರನ್ನು ಪೂಜಿಸಿದರು. ಸತ್ತ ಮೇಲೆ ಸಮಾಧಿ ಕಟ್ಟಿದರು. ರಥ ಉತ್ಸವಗಳನ್ನು ಮಾಡಿ ದೇವರಾಗಿಸಿದರು. ದೇಹದ ಅರಿವನ್ನು ಬಳಕೆಮಾಡಿಕೊಂಡು ಶಾಶ್ವತ ಸುಖದಲ್ಲಿ ಇರಲು ಪ್ರಯತ್ನಿಸಲಿಲ್ಲ. ಕಾಲಾನುಕಾಲ ಗತಿಸುತ್ತ ಬಂದಿತು. ಇಲ್ಲದ ಹೊರಗಿನ ದೇವರೆ ಸತ್ಯವಾದ ದೇಹದಲ್ಲಿ ಇರುವ ಅರಿವೆಂಬ ದೇವರೆ ಸುಳ್ಳಾದ.

ಅಂಗದ ಮನ ಹೊರಗಿನ ದೇವರ ಸಂಗ ಮಾಡಿತು. ಒಂದು ಕುಟುಂಬದ ಅಂಗಗಳ ಗುಂಪಿಗೆ ಒಂದು ದೇವರು ಬೇಕಾಯಿತು. ಮತ್ತೊಂದು ಗುಂಪಿಗೆ ಮತ್ತೊಂದು ದೇವರು ಬೇಕಾಯಿತು. ಒಂದು ದೇವರು ಶ್ರೇಷ್ಠ, ಮತ್ತೊಂದು ದೇವರು ಕನಿಷ್ಠವಾಯಿತು. ದೇವರನ್ನು ಕೆತ್ತಿದ ಕಲ್ಲು ಒಂದೆ, ದೇವಸ್ಥಾನಕ್ಕೆ ಬಳಸಿದ ಕಲ್ಲು ಒಂದೆ. ಆದರೂ ಕಲ್ಲನ್ನು ನೋಡದ ಅಂಗ ಮೂರ್ತಿಯನ್ನು ಭಂಗ ಪಡಿಸಿ ತನ್ನ ದೇವರ ಹಿರಿಮೆಯನ್ನು ಮೆರೆಯಿತು. ಮೂರ್ತಿ ಒಡೆದಾಗಲೂ ದೇವರು ಸಾಯಲಿಲ್ಲ. ಮೂರ್ತಿ ಒಡೆದ ಅಂಗಕ್ಕೆ ಕಲ್ಲು ಕಾಣಲೆಯಿಲ್ಲ.ಎಲ್ಲೆಲ್ಲೂ ಅಜ್ಞಾನವೆ ಕಾಣುತ್ತಲಿದೆ. ಅಜ್ಞಾನದ ಆಚಾರವೆ ಗೋಚರಿಸುತ್ತಲಿದೆ. ಅರಿವಿನ ಆಚಾರದಲ್ಲಿದ್ದ ಅಂಗ ಅತ್ಯಂತ ವಿರಳ. ಹೀಗೆ ಖೇದ ವ್ಯಕ್ತಪಡಿಸಿದ ಅಕ್ಕಮಹಾದೇವಿ ಇಂತಹ ವಿಕೃತ ಸಂಗವನ್ನು ಮಾಡುವ ಅಂಗಗಳನ್ನು ತೋರದೆ ಅರಿವನ್ನು ಒಡಗೂಡಿ ಸದಾ ಅರಿವಿನ ಸಂಗ ಮಾಡುವ ಶರಣ, ದಾಸ, ಸಂತ ತನುಗಳನ್ನು ತೋರಿಸು ಎನಗೆ ಎಂದು ಚೆನ್ನಮಲ್ಲಿಕಾರ್ಜುನನೆಂಬ ತನ್ನಂಗದ ಅರಿವನ್ನು ಬೇಡಿಕೊಂಡಿದ್ದಾಳೆ.

**ಕಾಮವಿಕಾರ ಕತ್ತಲೆಯಳಿದು, ಭಕ್ತಿ ಪ್ರಾಣವಾಗಿಪ್ಪವರ ತೋರಾ ಎನಗೆ:**

ಒಂದು ಅಂಗ ಮತ್ತೊಂದು ಅಂಗದೊಂದಿಗೆ ಕೂಡಿ ಸುಖಿಸುವ ಕಾತುರ ಅಂಗಕ್ಕೆ. ಬಾಳ ಸಂಗಾತಿ ಅಂಗಕ್ಕೆ ಇದ್ದರೂ ಅಂಗ ಮತ್ತೊಂದು ಅಂಗದೊಂದಿಗೆ ವಿಕೃತ ಕಾಮ ಬಯಸಿ ವಿಕಾರ ಹೊಂದುತ್ತದೆ. ದಕ್ಕಿದರೆ ಅಂಗದೊಂದಿಗೆ ಸಂಗ ಮಾಡಿ ವಿಟ-ವೇಶ್ಯೆ- ಜಾರ-ವಿಕೃತ ಕಾಮುಕನೆನಿಸಿಕೊಳ್ಳುತ್ತದೆ. ದಕ್ಕದಿದ್ದರೆ ಮನದಲ್ಲಿಯೆ ಹಾದರ ಮಾಡುತ್ತದೆ .

ಅಂಗದಲ್ಲಿ ತನ್ನಂತೆ ಇರುವ ಅಂಗದೊಂದಿಗೆ ಕೂಡಿ ಸುಖಿಸುವ ಬಯಕೆ ಕಣ್ಣಿನಲ್ಲಿ ಹುಟ್ಟಿ, ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ಕೂಡುವ ಕಾತುರ ಅಧಿಕವಾಗುತ್ತದೆ. ಅಂಗ ತನ್ನ ಪದವಿ ಗೌರವವನ್ನು ಲೆಕ್ಕಿಸುವುದಿಲ್ಲ. ಹೀಗೆ ಏಕೆ ಆಗುತ್ತದೆ ಎನ್ನುವ ಕಿಂಚಿತ್ ಅರಿವು ಕೂಡಾ ಅಂಗದಲ್ಲಿ ಹುಟ್ಟುವುದಿಲ್ಲ. ಅಂಗ ಅಂಗದೊಂದಿಗೆ ಬೆರೆತಾಗ ಹೊರಚೆಲ್ಲುವ ಸುಖದ ದ್ರವವು ತನ್ನದೆ. ತನ್ನ ಸುಖದ ದ್ರವ ತಾನೇ ಚೆಲ್ಲಿಕೊಂಡು ತನ್ನಂತೆ ಇರುವ ಮತ್ತೊಂದು ಅಂಗದಿಂದ ಸುಖವಾಯಿತ್ತೆಂದು ತಿಳಿದುಕೊಂಡ ಅಂಗ ಅಜ್ಞಾನಿ ಅಂಗವಲ್ಲವೆ ? ತನ್ನ ಚರ್ಮದ ಕವಚ , ಅದರೊಳಗಿದ್ದ ಮಟೀರಿಯಲ್ ಹಾಗೂ ಮತ್ತೊಂದು ಚರ್ಮದ ಕವಚ ಅದರೊಳಗಿದ್ದ ಮಟೀರಿಯಲ್ ಒಂದೆ. ಆದರೂ ಈ ರಾಸಾಯನಿಕ ಕ್ರಿಯೆ ಏಕಾಯಿತೆಂದು ಅರಿವಿನಿಂದ ತನ್ನನ್ನೆ ಪ್ರಶ್ನಿಸಿಕೊಳ್ಳುವ ಶಿಕ್ಷಣ ಅಂಗಕ್ಕೆ ಇಲ್ಲದ ನಿಮಿತ್ಯ, ಅಂಗದ ಮನ ಅಂಗವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ಹೀಗೆ ಅಂಗದ ಮನ ಅಂಗದ ಅರಿವಿಗೆ ಭಕ್ತನಾದರೆ , ಅಂಗ ಅಂಗದೊಂದಿಗೆ ಕೂಡುವ ಬಯಕೆ ಮನಕ್ಕೆ ಆಗುವುದಿಲ್ಲ. ಹೀಗೆ ಮನಕ್ಕೆ ಆ ಅರಿವೇ ಪ್ರಾಣವಾಗಿ ಇರುವ ವರನ್ನು ತೋರು ಎನಗೆ ಎಂದು ಅಕ್ಕ ಚೆನ್ನಮಲ್ಲಿಕಾರ್ಜುನನ್ನು ಪ್ರಾರ್ಥಿಸಿದ್ದಾಳೆ.

**ತ್ರಿಕರಣ ಶುದ್ಧವಾಗಿ ನಿಮ್ಮ ನೆರೆ ನಂಬಿದ ಸದ್ಭಕ್ತರ ತೋರಾ ಎನಗೆ ಚೆನ್ನ ಮಲ್ಲಿಕಾರ್ಜುನಾ:**

ಅಂಗದಿಂದಲೂ, ಅಂಗದ ಅರಿವಿನಿಂದಲೂ, ಅಂಗದ ಮನದಿಂದಲೂ ಶುದ್ಧವಾಗಿ, ಮನ ಅಂಗದ ಅರಿವನ್ನೆ ನಂಬಿ, ಅರಿವಿನಿಂದಲೆ ಬದುಕಿ, ಆ ಅರಿನಿಂದಲೆ ನುಡಿದು, ಆ ಅರಿವಿಗೆ ಭಕ್ತಿಮಾಡುವ ಸದ್ಭಕ್ತರನ್ನು ಎನಗೆ ತೋರಿ ಕೃಪೆಮಾಡು ಚೆನ್ನಮಲ್ಲಿಕಾರ್ಜುನನೇ. ಎಂದು ಅಂಗದ ಅರಿವನ್ನು ಅಂಗಲಾಚಿ ಬೇಡಿದ್ದಾಳೆ ಅಕ್ಕಮಹಾದೇವಿ.

□

---

**ಅರಿವಿನ ಪರಿಮಳ**

- □ ಅಂಗ ಅಂಗದೊಂದಿಗೆ ಕೂಡಿ ಸುಖಿಸುವ ಕಾತುರ ಅಂಗಕ್ಕೆ. ಬಾಳ ಸಂಗಾತಿ ಅಂಗಕ್ಕೆ ಇದ್ದರೂ ಅಂಗ ಮತ್ತೊಂದು ಅಂಗದೊಂದಿಗೆ ವಿಕೃತ ಕಾಮ ಬಯಸಿ ವಿಕಾರ ಹೊಂದುತ್ತದೆ. ದಕ್ಕಿದರೆ ಅಂಗದೊಂದಿಗೆ ಸಂಗ ಮಾಡಿ ವಿಟ-ವೇಶ್ಯೆ- ಜಾರ-ವಿಕೃತ ಕಾಮುಕನೆನಿಸಿಕೊಳ್ಳುತ್ತದೆ. ದಕ್ಕದಿದ್ದರೆ ಮನದಲ್ಲಿಯೆ ಹಾದರ ಮಾಡುತ್ತದೆ.
- □ ಅಂಗದ ಮನ ಅಂಗದ ಅರಿವಿಗೆ ಭಕ್ತನಾದರೆ , ಅಂಗ ಅಂಗದೊಂದಿಗೆ ಕೂಡುವ ಬಯಕೆ ಮನಕ್ಕೆ ಆಗುವುದಿಲ್ಲ.

# ಮರೆವು - ಅರಿವಿನ ಸಂಗವರಿಯದ ಅರಿವಿನ ಅಂಗ

**ಅಂಗ ಸಂಗದಲ್ಲಿ ಲಿಂಗಸಂಗಿಯಾದೆನು.**
**ಲಿಂಗ ಸಂಗದಲ್ಲಿ ಅಂಗಸಂಗಿಯಾದೆನು.**
**ಉಭಯ ಸಂಗವನೂ ಅರಿಯದೆ ಪರಿಣಾಮಿಯಾದೆನು.**
**ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು.**
**ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರೆಸಿದ ಬಳಿಕ**
**ಎನ್ನ ನಾನು ಏನೆಂದೂ ಅರಿಯೆನಯ್ಯಾ.**

**ಅಂಗ ಸಂಗದಲ್ಲಿ ಲಿಂಗ ಸಂಗಿಯಾದೆನು:**

ಋತು ಕಾಲದಲ್ಲಿ ಚಿಗುರು, ಎಲೆ, ಹೂ, ಕಾಯಿ, ಹಣ್ಣಾಗಿ; ಮರದ ಎಲ್ಲ ಶಕ್ತಿಯನ್ನು ಹಣ್ಣಿನಲ್ಲಿ ತುಂಬಿ, ತೊಟ್ಟು ಕಳಚಿ ಕೆಳ ಬೀಳುವುದು. ಮರ ಮರವನ್ನು ಅಪ್ಪಿ ಸುಖ ಪಡದೆ, ತಂತಾನೆ ಮರದಲ್ಲಿಯೇ ಸುಖವಾಗಿ; ಮರ, ಬೀಜದಲ್ಲಿ ಮರವನ್ನಡಗಿಸಿ , ಬೀಜವನ್ನು ಭೂಮಿಗೆ ಬಿಡುವುದು. ಇದು ಮರ ! ಹೀಗೆಯೇ ಅಂಗ ಎನ್ನುವುದು ಕೂಡ ಬೇರಿಲ್ಲದ ವೃಕ್ಷವೇ ಆಗಿದೆ! ಇದರಂತೆ ಅಂಗ ಸಂಗದಲ್ಲಿಯೂ ಅರಿವಿನ ಆನಂದದ ಸುಖವಡಗಿದೆ. ಅಂಗ ಅಂಗ ಕೂಡುವ ಕ್ರಿಯೆ ಸಂತಾನಕ್ಕಾಗಿ ಮಾತ್ರ. ಅದಕ್ಕಾಗಿ ತಲೆ ಕೆಳೆದುಕೊಳ್ಳುವ ಕೆಲಸ ಅಂಗ ಮಾಡಿಕೊಳ್ಳಬೇಕಿಲ್ಲ.

**ಲಿಂಗ ಸಂಗದಲ್ಲಿ ಅಂಗ ಸಂಗಿಯಾದೆನು :**

ಅಂಗದಲ್ಲಿ ಅರಿವಿದೆ. ಅಂಗದಲ್ಲಿ ಮನವೂ ಇದೆ. ಮನ ಅಂಗ ನೋಡಿದರೆ; ಅಂಗದೊಂದಿಗೆ ಸಂಗ ಬಯಸಲು ಅಂಗಕ್ಕೆ ಪ್ರೇರಣೆ ನೀಡುತ್ತದೆ. ಮನ ಅರಿವಿನಿಂದ ಅಂಗ ನೋಡಿದರೆ; ಅಂಗದ ಅರಿವಿನ ಸಂಗದಲ್ಲಿ ಲೀನವಾಗಿ ಲಿಂಗ ಸಂಗಿಯಾಗುತ್ತದೆ. ಲಿಂಗ ಸಂಗದಲ್ಲಿ ಲೀಯವಾಗಿ ಅಂಗ ಸಂಗವಾಗುತ್ತದೆ. ಮನ ಅರಿವಿನ ಅಂಗವಾಗುತ್ತದೆ.

**ಉಭಯ ಸಂಗವನೂ ಅರಿಯದೆ ಪರಿಣಾಮಿಯಾದೆನು :**

ಮನ ಅರಿವಿನ ಸಂಗ ಮಾಡಿ; ಅಂಗವನ್ನು ಮರೆಯುತ್ತದೆ. ತನ್ನನ್ನೂ ಮರೆಯುತ್ತದೆ. ಅರಿವೇ ತಾನಾಗಿ ಉಭಯ ಸಂಗವನೂ ಅಳಿದು ಏನೇನೂ ಅರಿಯದಂತೆ ಪರಿಣಾಮಿಯಾಗುತ್ತದೆ.

**ನುಡಿಯಗಡಣವ ಮರೆದು ತೆರಹಿಲ್ಲದಿರ್ದೆನು:**

ನುಡಿ ಎನ್ನುವುದು ಅಂಗದ ಅರಿವಿನಿಂದ ಉತ್ಪತ್ತಿಯಾದದ್ದು. ಆದರೂ ಮನ ಸ್ವೀಕರಿಸಿ ಅಂಗವನ್ನು ಘಾಸಿಗೊಳಿಸುತ್ತದೆ. ಇಲ್ಲ ಕ್ಷಣಿಕ ಸುಖ ಆವರಿಸಿ ಸಂತೋಷಪಡುತ್ತದೆ. ಮನ ಸ್ವೀಕರಿಸುವ ನುಡಿಯಲ್ಲಿ ಸುಖವೂ ಇದೆ; ದುಃಖವೂ ಇದೆ. ಶಾಶ್ವತ ಸುಖವಿಲ್ಲ. ಅಂಗದಿಂದ ಹೊರಬಂದ ನುಡಿಯಲ್ಲಿ ಬೆರೆತ ಮನದ ಅಜ್ಞಾನವನ್ನು ಹೊರ ಕಿವಿಯಲ್ಲಿ ಸೋಸಿ ನಪುಂಸಕಗೊಳಿಸಿ ಅರಿವಿನಿಂದ ಸ್ವೀಕರಿಸಿದೆ. ಕಾರಣ ನುಡಿಯ ಸುಖ ದುಃಖವನರಿಯಲಿಲ್ಲ. ನುಡಿ ಕೇಳಿದ ಅಂಗ ಕೆರಳಲಿಲ್ಲ ಅರಳಲಿಲ್ಲ. ಅಂಗ ನುಡಿದ ಶಬ್ದ ಅಂಗದಲ್ಲಿಯೇ ಸಂದಿಲ್ಲದಂತೆ ಐಕ್ಯವಾಯಿತು ಎಂದಿದ್ದಾಳೆ ಅಕ್ಕ.

**ಎನ್ನ ದೇವ ಚೆನ್ನಮಲ್ಲಿಕಾರ್ಜುನ ಬೆರೆಸಿದ ಬಳಿಕ ಎನ್ನ ನಾನು ಏನೆಂದೂ ಅರಿಯೆನಯ್ಯಾ :**

ಅಂಗ ಸಂಗದ ಅರಿವೆಂಬ ಲಿಂಗದಲ್ಲಿ ಮನ ಸಂಗವಾಯಿತು. ಅರಿವಿನ ಸಂಗದಲ್ಲಿ ನಾನೆಂಬ ಮನ ಸಂಗವಾಗಿ ಅರಿವೇ ಆಯಿತು. ಅಂಗ ಮನವೆಂಬ ಉಭಯವನೂ ಅರಿಯದೆ ಚೆನ್ನಮಲ್ಲಿಕಾರ್ಜುನನೇ ತಾನಾಯಿತು. ನಾನೆಂಬ ಮನ ಎನ್ನದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ ಅಂಗ ಯಾವುದು, ಮನ ಯಾವುದು, ಅರಿವು ಯಾವುದು ಎಂದು ಏನೊಂದೂ ಅರಿಯದಾದೆನಯ್ಯಾ ಎಂದು ಅಕ್ಕಮಹಾದೇವಿ ನುಡಿಯಲ್ಲದ ನುಡಿಯ ನುಡಿದಿದ್ದಾಳೆ.

□

**ಅರಿವಿನ ಪರಿಮಳ**

- □ ಋತು ಕಾಲದಲ್ಲಿ ಚಿಗುರು, ಎಲೆ, ಹೂ, ಕಾಯಿ ಹಣ್ಣಾಗಿ; ಮರದ ಎಲ್ಲ ಶಕ್ತಿಯನ್ನು ಹಣ್ಣಿನಲ್ಲಿ ತುಂಬಿ ತೊಟ್ಟು ಕಳಚಿ ಕೆಳ ಬೀಳುವುದು. ಮರ ಮರವನ್ನು ಅಪ್ಪಿ ಸುಖ ಪಡದೆ, ತಂತಾನೆ ಮರದಲ್ಲಿಯೇ ಸುಖವಾಗಿ; ಮರ ಬೀಜದಲ್ಲಿ ಮರವನ್ನಡಗಿಸಿ ಬೀಜವನ್ನು ಭೂಮಿಗೆ ಬಿಡುವುದು. ಇದು ಮರ ! ಹೀಗೆಯೇ ಅಂಗ ಎನ್ನುವುದು ಕೂಡ ಬೇರಿಲ್ಲದ ವೃಕ್ಷವೇ ಆಗಿದೆ! ಇದರಂತೆ ಅಂಗ ಸಂಗದಲ್ಲಿಯೂ ಅರಿವಿನ ಆನಂದದ ಸುಖವಡಗಿದೆ. ಅಂಗ ಅಂಗ ಕೂಡುವ ಕ್ರಿಯೆ ಸಂತಾನಕ್ಕಾಗಿ ಮಾತ್ರ. ಅದಕ್ಕಾಗಿ ತಲೆ ಕಳೆದುಕೊಳ್ಳುವ ಕೆಲಸ ಅಂಗ ಮಾಡಿಕೊಳ್ಳಬೇಕಿಲ್ಲ.
- □ ಅಂಗದಲ್ಲಿ ಅರಿವಿದೆ. ಅಂಗದಲ್ಲಿ ಮನವೂ ಇದೆ. ಮನ ಅಂಗ ನೋಡಿದರೆ; ಅಂಗದೊಂದಿಗೆ ಸಂಗ ಬಯಸಲು ಅಂಗಕ್ಕೆ ಪ್ರೇರಣೆ ನೀಡುತ್ತದೆ. ಮನ ಅರಿವಿನಿಂದ ಅಂಗ ನೋಡಿದರೆ; ಅಂಗದ ಅರಿವಿನ ಸಂಗದಲ್ಲಿ ಲೀನವಾಗಿ ಲಿಂಗ ಸಂಗಿಯಾಗುತ್ತದೆ. ಲಿಂಗ ಸಂಗದಲ್ಲಿ ಲೀಯವಾಗಿ ಅಂಗ ಸಂಗವಾಗುತ್ತದೆ.
  ಮನ ಅರಿವಿನ ಅಂಗವಾಗುತ್ತದೆ.
- □ ನುಡಿ ಎನ್ನುವುದು ಅಂಗದ ಅರಿವಿನಿಂದ ಉತ್ಪತ್ತಿಯಾದದ್ದು. ಆದರೂ ಮನ ಸ್ವೀಕರಿಸಿ ಅಂಗವನ್ನು ಘಾಸಿಗೊಳಿಸುತ್ತದೆ. ಇಲ್ಲ ಕ್ಷಣಿಕ ಸುಖ ಆವರಿಸಿ ಸಂತೋಷಪಡುತ್ತದೆ. ಮನ ಸ್ವೀಕರಿಸುವ ನುಡಿಯಲ್ಲಿ ಸುಖವೂ ಇದೆ; ದುಃಖವೂ ಇದೆ. ಶಾಶ್ವತ ಸುಖವಿಲ್ಲ. ಅಂಗದಿಂದ ಹೊರಬಂದ ನುಡಿಯಲ್ಲಿ ಬೆರೆತ ಮನದ ಅಜ್ಞಾನವನ್ನು ಹೊರ ಕಿವಿಯಲ್ಲಿ ಸೋಸಿ ನಪುಂಸಕಗೊಳಿಸಿ ಅರಿವಿನಿಂದ ಸ್ವೀಕರಿಸಿದರೆ.ಅಂಗ ಕೆರಳುವುದಿಲ್ಲ ಅರಳುವುದಿಲ್ಲ.

# ಅರಿವಿನ ಐದು ಲಿಂಗಗಳ ಅಂಗವೇ ಅಂಗೈ

**ಅಂಗೈಯೊಳಗಣ ಲಿಂಗವ ಪೂಜಿಸುತ್ತ,**
**ಮಂಗಳಾರತಿಗಳನು ತೊಳಗಿ ಬೆಳಗುತ್ತಲಿದೆ ನೋಡಯ್ಯ.**
**ಕಂಗಳ ನೋಟ, ಕರವಿಟ್ಟ ಭಾವ, ಹಿಂಗದ ಮೋಹ-**
**ತೆರಹಿಲ್ಲದಿರ್ದೆ ನೋಡಯ್ಯಾ,**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.**

**ಅಂಗೈಯೊಳಗಣ ಲಿಂಗವ ಪೂಜಿಸುತ್ತ, ಮಂಗಳಾರತಿಗಳನು ತೊಳಗಿ ಬೆಳಗುತ್ತಲಿದೆ ನೋಡಯ್ಯ:**

ಅಂಗದೊಳಗೆ ಐದು ಅರಿವಿನ ಲಿಂಗಗಳಿವೆ. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ, ಇವೇ ಅಂಗದೊಳಗಣ ಐದು ಅರಿವಿನ ಲಿಂಗಗಳು. ನೋಡುವ ಲಿಂಗ, ಕೇಳುವ ಲಿಂಗ, ರುಚಿಸುವ ಲಿಂಗ, ವಾಸಿಸುವ ಲಿಂಗ, ಸ್ಪರ್ಶಿಸುವ ಲಿಂಗ.

ನೋಡುವುದನ್ನೆ ನೋಡುವ ಲಿಂಗ ಪೂಜಿಸುವ ಲಿಂಗ. ಆದರೆ ನೋಡುವ ಲಿಂಗದಲ್ಲಿ ನೋಡಬಾರದ್ದನ್ನು ನೋಡುವ ಅಜ್ಞಾನದ ಪೊರೆ ಅಂಟಿರುವುದರಿಂದ ನೋಡುವ ಕಣ್ಣು ಬಳಕೆಗೆ ಬಾರದಂತಾಗಿದೆ. ಪೂಜೆಗೂ ಬಾರದಂತಾಗಿದೆ.

ಉದಾ: ತನ್ನಂತೆ ಇರುವ ಚರ್ಮ, ಅದರೊಳಗಿರುವ ರಕ್ತ, ಮಾಂಸ, ಮೂಳೆ, ಮಜ್ಜೆ, ಮೇದಸ್ಸು ಇವೆಲ್ಲ ಒಂದೆ ; ಆದರೂ ನೋಡುವ ಕಣ್ಣು ಆ ಅಂಗವನ್ನು ಅಪ್ಪಿಕೊಂಡು ಸುಖಿಸಲು ತನ್ನಂಗಕ್ಕೆ ಆದೇಶ ನೀಡುತ್ತದೆ. ದೊರೆಯದಿದ್ದರೆ ಅತ್ಯಾಚಾರವೆಸಗಲು, ಕೊಲೆಮಾಡಲು ಸಂಚು ಹೂಡುತ್ತದೆ. ಅದೂ ಸಾಧ್ಯವಾಗದಿದ್ದಲ್ಲಿ ಮನದಲ್ಲಿಯೆ ತೋರುವ ಆ ಅಂಗದೊಂದಿಗೆ ಸುಖಿಸಲು ಆದೇಶ ನೀಡಿ ಹಾದರ ಮಾಡುತ್ತದೆ. ಕಣ್ಣಿನ ಈ ನೋಟ ಪೂಜೆಗೆ ಬಾರದ ನೋಟ; ರಕ್ಕಸ ನೋಟ.

**ಕಂಗಳ ನೋಟ, ಕರವಿಟ್ಟ ಭಾವ, ಹಿಂಗದ ಮೋಹ-ತೆರಹಿಲ್ಲದಿರ್ದೆ ನೋಡಯ್ಯಾ:**

ಕಣ್ಣೊಳಗೆ ಇರುವ ಕಣ್ಣು ಅರಿವಿನ ಕಣ್ಣು; ಮಂಗಳ ಕಣ್ಣು; ತೊಳಗಿ ಬೆಳಗುವ ಕಣ್ಣು. ಈ ಕಂಗಳ ನೋಟ ಇದರ ಭಾವ ಹಿಂಗದ ಭಾವ; ಹಿಂಗದ ಮೋಹ.

ನೋಡುವ ಅಂಗದಲ್ಲಿ ಸೌಂದರ್ಯವಿಲ್ಲ. ನೋಡುವ ಕಣ್ಣಿನೊಳಗಣ ಕಣ್ಣಿನಲ್ಲಿ ಸೌಂದರ್ಯ ಏದೆ. ಈ ಕಣ್ಣು ನೋಡುವ ಅಂಗವನ್ನು ತನ್ನಂತೆ ಇರುವ ಅರಿವಿನ ಅಂಗವೆಂದು ಅರಿವಿನ ಲಾಂಛನವೆಂದು ಭಾವಿಸಿ; ಆ ಅಂಗವನ್ನು ಮಂಗಳಕರವಾಗಿ ನೋಡಿ ತೊಳಗಿ ಬೆಳಗಿ ಆರತಿ ಎತ್ತಿ ಪೂಜಿಸುತ್ತದೆ. ನೋಡುವ ನೋಟದಲ್ಲಿ ಅಜ್ಞಾನದ ಸಂದಿಲ್ಲದಂತೆ ನೋಡುತ್ತದೆ. ನೋಡುವ ಆ ಅಂಗದಲ್ಲಿ ಹಿಂಗದ ಅರಿವಿನ ಮೋಹ ಮೂಡುತ್ತದೆ.

**ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ :**

ಅಂಗದಲ್ಲಿರುವ ಐದು ಮುಖಗಳು ಅವು ಶಿವನ ಮುಖಗಳು. ಸಾಕ್ಷಾತ್ ಚೆನ್ನಮಲ್ಲಿಕಾರ್ಜುನಯ್ಯನೆ ಅಲ್ಲಿ ನೆಲೆಸಿದ್ದಾನೆ. ಈ ಅಂಗವೇ ಅಂಗೈಯಾಗಿದೆ. ಆತ ನೋಡುವ ನೋಟವೆಲ್ಲ ಪೂಜೆಯೆ; ಆತ ಕೇಳುವ ಶಬ್ದವೆಲ್ಲ ಬ್ರಹ್ಮವೆ; ಆತ ರುಚಿಸುವ ಪದಾರ್ಥವೆಲ್ಲ ಪ್ರಸಾದವೆ; ಆತ ವಾಸಿಸುವ ವಾಸನೆಯೆಲ್ಲ ಪರಿಮಳವೆ; ಆತ ಸ್ಪರ್ಶಿಸುವ ವಸ್ತುಗಳೆಲ್ಲ ಅರಿವಿನ ಲಿಂಗಗಳೆ !

ಹೀಗೆ ಎನ್ನ ಮನ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಲಿಂಗದೊಳಗೆ ಸಿಲುಕಿ ಘನಮನವಾಗಿ ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ ಎಂದು ಅಂಗೈಯೊಳಗಣ ಲಿಂಗಗಳನ್ನು ಪೂಜಿಸುತ್ತಾ ಮಂಗಳದ ಆರತಿಯನು ಎತ್ತಿ ಹಾಡಿದ್ದಾಳೆ ಮಹಾದೇವಿಯಕ್ಕ.

□

**ಅರಿವಿನ ಪರಿಮಳ**

- □ ಅಂಗದೊಳಗೆ ಐದು ಅರಿವಿನ ಲಿಂಗಗಳಿವೆ. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ, ಇವೇ ಅಂಗದೊಳಗಣ ಐದು ಅರಿವಿನ ಲಿಂಗಗಳು. ನೋಡುವ ಲಿಂಗ, ಕೇಳುವ ಲಿಂಗ, ರುಚಿಸುವ ಲಿಂಗ, ವಾಸಿಸುವ ಲಿಂಗ, ಸ್ಪರ್ಶಿಸುವ ಲಿಂಗ.
- □ ಅಂಗದಲ್ಲಿರುವ ಐದು ಮುಖಗಳು ಅವು ಶಿವನ ಮುಖಗಳು. ಸಾಕ್ಷಾತ್ ಚೆನ್ನಮಲ್ಲಿಕಾರ್ಜುನಯ್ಯನೆ ಅಲ್ಲಿ ನೆಲೆಸಿದ್ದಾನೆ. ಈ ಅಂಗವೇ ಅಂಗೈಯಾಗಿದೆ. ಆತ ನೋಡುವ ನೋಟವೆಲ್ಲ ಪೂಜೆಯೆ; ಆತ ಕೇಳುವ ಶಬ್ದವೆಲ್ಲ ಬ್ರಹ್ಮವೆ; ಆತ ರುಚಿಸುವ ಪದಾರ್ಥವೆಲ್ಲ ಪ್ರಸಾದವೆ; ಆತ ವಾಸಿಸುವ ವಾಸನೆಯೆಲ್ಲ ಪರಿಮಳವೆ; ಆತ ಸ್ಪರ್ಶಿಸುವ ವಸ್ತುಗಳೆಲ್ಲ ಅರಿವಿನ ಲಿಂಗಗಳೆ !

# ಜಾಗ್ರದಲ್ಲಿಯೂ ಜ್ಞಾನಿ ಸುಷುಪ್ತಿಯಲ್ಲಿಯೂ ಜ್ಞಾನಿ

**ಅಕ್ಕ ಕೇಳೌ, ನಾನೊಂದು ಕನಸ ಕಂಡೆ.**
**ಅಕ್ಕಿ ಅಡಕೆ ಓಲೆ ತೆಂಗಿನಕಾಯಿ ಕಂಡೆ.**
**ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು**
**ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ.**
**ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.**
**ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.**

ಜಾಗ್ರತ್ ಸ್ವಪ್ನ ಸುಷುಪ್ತಿ ಇವು ದೇಹದ ಮೂರು ಅವಸ್ಥೆಗಳು. ಈ ಮೂರೂ ಅವಸ್ಥೆಗಳಲ್ಲಿ ದೇಹ ಅರಿವಿನಲ್ಲಿಯೆ ಇರಬೇಕು. ಆದರೆ ಜಾಗ್ರತ್‌ನಲ್ಲಿ ತನ್ನ ಹಾಗೂ ಇತರರ ಪರಿಚಯವಿರುತ್ತದೆ. ಸರ್ವ ವಸ್ತುಗಳನ್ನು ನೋಡುತ್ತದೆ. ಸ್ವಪ್ನದಲ್ಲಿ ತನ್ನ ಹಾಗೂ ಇತರರ ಪರಿಚಯವಿರುವುದಿಲ್ಲ. ತನ್ನ ಹೆಸರು, ತಾನು ಮಾಡುವ ವೃತ್ತಿ, ತಾನು ಹೆಣ್ಣೊ ಗಂಡೊ ಎನ್ನುವ ಪರಿಚಯವು ಕೂಡಾ ಇರುವುದಿಲ್ಲ. ರಾಜನಾದವನು ಸ್ವಪ್ನದಲ್ಲಿ ಸಿಪಾಯಿಯಾಗುತ್ತಾನೆ, ಭಿಕ್ಷುಕನಾಗುತ್ತಾನೆ, ಇನ್ನೂ ಏನೇನೊ ಆಗುತ್ತಾನೆ. ತಾನಾರು ಎನ್ನುವ ಪರಿಚಯ ಸ್ವಪ್ನದಲ್ಲಿ ಇರುವುದಿಲ್ಲ. ಸುಶುಪ್ತಿಯಲ್ಲಿ ತಾನು ಗಾಢವಾದ ನಿದ್ರೆಯಿಂದ ಮಲಗಿರುತ್ತಾನೆ. ಇದು ಸ್ವಪ್ನರಹಿತವಾದ ನಿದ್ರೆ. ಎಚ್ಚರವಾದಾಗ ಮಾತ್ರ ತಾನು ಮಲಗಿದ್ದೆ ಎನ್ನುವುದು ಗಮನಕ್ಕೆ ಬರುತ್ತದೆ.

ಜಾಗ್ರತ್ ಸ್ವಪ್ನ ಸುಷುಪ್ತಿ ಇವು ಮನುಷ್ಯನ ಸಹಜ ಅವಸ್ಥೆಗಳು. ಜಾಗ್ರತ್‌ನಲ್ಲಿ ನೋಡುವಾಗ ವಸ್ತುವಿನಲ್ಲಿ ಭ್ರಮೆ ಆವರಿಸಿರುವುದರಿಂದ, ವಸ್ತು ವಿಪರೀತವಾಗಿ ಕಾಣುತ್ತದೆ. ವಸ್ತುವಿನ ಮೇಲೆ ತನ್ನ ಭ್ರಮೆ ಚೆಲ್ಲಿ ಆ ವಸ್ತುವನ್ನು ಮನುಷ್ಯ ವಿಪರೀತವಾಗಿ ಪ್ರೀತಿಸುತ್ತಾನೆ. ವಸ್ತುವಿಲ್ಲದೆ ತಾನಿಲ್ಲ, ವಸ್ತುವೇ ಏನೆಲ್ಲ ಎಂದು ತಿಳಿದು ವಸ್ತುವಿಗಾಗಿ ಪ್ರಾಣ ತೆಗೆಯುತ್ತಾನೆ. ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ. ಅಂದ ಮೇಲೆ ಮನುಷ್ಯನಿಗೆ ಜಾಗ್ರದಲ್ಲಿಯೂ ಸತ್ಯ ಗೋಚರಿಸಲಿಲ್ಲ.

ಸ್ವಪ್ನದಲ್ಲಿ ಪ್ರಜೆ ರಾಜನಾಗುತ್ತಾನೆ, ರಾಜ ಭಿಕ್ಷುಕನಾಗುತ್ತಾನೆ. ಭಿಕ್ಷುಕ ಮಂತ್ರಿಯಾಗುತ್ತಾನೆ. ಸ್ವಪ್ನದಲ್ಲಿ ಇದೆಲ್ಲ ಸತ್ಯವೆಂದು ಗೋಚರಿಸಿದರೂ ಎದ್ದು ನೋಡಿದರೆ ಮೊದಲಿನಂತೆಯೆ ಇರುತ್ತಾನೆ. ಇದು ಸ್ವಪ್ನವೆಂದು ಅರಿವಿಗೆ ಬರುತ್ತದೆ. ಹಾಗೆಯೇ ಸುಷುಪ್ತಿಯಿಂದ ಎಚ್ಚರವಾದ ಮೇಲೆ ಮಲಗಿದ್ದೆ ಎಂದು ಗೋಚರಿಸುತ್ತದೆ.

ಜ್ಞಾನಿಯಲ್ಲದ ಸಾಮಾನ್ಯ ಮನುಷ್ಯನಿಗೆ ಜಾಗ್ರತ್‌ನಲ್ಲಿಯೂ ಭ್ರಮೆ, ಸ್ವಪ್ನದಲ್ಲಿಯೂ ಭ್ರಮೆ, ಸುಷುಪ್ತಿಯಲ್ಲಿಯೂ ಭ್ರಮೆ. ಸಾಮಾನ್ಯ ಮನುಷ್ಯ ಜೀವನ ಪರ್ಯಂತ ಭ್ರಮೆಯಲ್ಲಿಯೆ ಬದುಕುತ್ತಾನೆ. ಭ್ರಮೆಯಲ್ಲಿಯೆ ಸಾಯುತ್ತಾನೆ. ಸತ್ಯ ಗೋಚರಕ್ಕೆ ಬರುವುದೇ ಇಲ್ಲ. ಹಗಲು ರಾತ್ರಿಗಳೆರಡೂ ನರಕಯಾತನೆಯನ್ನುಂಟು ಮಾಡುತ್ತವೆ.

ಅಕ್ಕಮಹಾದೇವಿ ಹಗಲು ಅರಿವೆಂಬ ಚೆನ್ನಮಲ್ಲಿಕಾರ್ಜುನನ ಸಂಗದಲ್ಲಿ ಇದ್ದಾಳೆ. ರಾತ್ರಿ

ಅವನ ಕನಸೆ ಕಂಡು ಅವನೊಂದಿಗೆ ಸಲುಗೆಯಿಂದ ಇದ್ದಾಳೆ. ಅಕ್ಕ ತನ್ನ ಕನಸಿನಲ್ಲಿ ಅಕ್ಕಿ ಅಡಕೆ ಓಲೆ ತೆಂಗಿನಕಾಯಿ ಕಂಡು, ಚಿಕ್ಕ ಚಿಕ್ಕ ಜಡೆಗಳ ಚೆಲುವ , ಸುಲಿಪಲ್ಲ ಗೊರವನು ಭಿಕ್ಷೆಗೆಂದು ತನ್ನ ಮನೆಗೆ ಬಂದು ಅವನ ಕೈ ಹಿಡಿದು ಬೆನ್ನತ್ತಿ ಹೋಗುವುದನ್ನು ತಾನು ಅಕ್ಕಳಾದರೂ ತನ್ನ ಮನವನ್ನು ಅಕ್ಕಳನ್ನಾಗಿ ಮಾಡಿ ಆ ಅಕ್ಕಳಿಗೆ ಈ ಕತೆಯನ್ನು ವಿವರಿಸಿದ್ದಾಳೆ. ನಂತರ ಎಚ್ಚತ್ತು ತನ್ನ ತನುವಿನ ಅರಿವಿನ ನಲ್ಲ ಚೆನ್ನಮಲ್ಲಿಕಾರ್ಜುನನನ್ನು ಕಂಡು ಕಣ್ದೆರೆದೆನು ಎಂದಿದ್ದಾಳೆ.

ಸ್ವಪ್ನದಲ್ಲಿ ಸುಲಿಪಲ್ಲ ಗೊರವ ಚೆನ್ನಮಲ್ಲಿಕಾರ್ಜುನನನ್ನು ಕೂಡಿ ತನ್ನ ಮನವೆಂಬ ಅಕ್ಕಳಿಗೆ ವಿವರಿಸುವಾಗ ಎಚ್ಚರಗೊಂಡು ಪುನ: ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನೆಂದು ಕನಸಿಗೆ ವಿರಾಮ ನೀಡಿದ್ದಾಳೆ.

''ಕಂಡ ಕನಸ ನಿಧಾನವ ಕಂಡೆನಯ್ಯಾ, ಬಿಡಲಾರದ ನಿಧಾನವ ಕಂಡೆನಯ್ಯಾ, ಕೂಡಲ ಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.'' ಬಸವಣ್ಣನವರು ಕೂಡಾ ಕನಸಿನಲ್ಲಿ ದೇಹದ ಸಂಪತ್ತಾದ ಅರಿವನ್ನು ಕಂಡು ಎಂದೆಂದು ಬಿಡಲಾರದ ಸಂಪತ್ತನ್ನು ಕಂಡೆನಯ್ಯಾ ಕೂಡಲ ಸಂಗಯ್ಯನೆಂಬ ತನುವಿನ ಅರಿವಿನ ಸಂಪತ್ತನ್ನು ಕಂಡು ಬಿಡಲಾರೆನಯ್ಯ ಎಂದು ಹಾಡಿದ್ದಾರೆ.

ಮುಂದುವರಿದು 'ಜನವೆಲ್ಲಾ ಅರಿಯಲು ಎನಗೊಬ್ಬ ಗಂಡನುಂಟು; ಆನು ಮುತ್ತೈದೆ ಆನು ನಿಟ್ಟೈದೆ. ಕೂಡಲಸಂಗಯ್ಯನಂತಪ್ಪ ಎನಗೊಬ್ಬ ಗಂಡನುಂಟು.' ಎಂದು ಬಸವಣ್ಣ ಹೆಣ್ಣಾಗಿ ತನುವಿನ ಅರಿವಿಗೆ ಕೂಡಲ ಸಂಗಯ್ಯನೆಂದು ನಾಮಕರಣ ಮಾಡಿ ಆತನನ್ನು ಗಂಡನನ್ನಾಗಿ ಮಾಡಿಕೊಂಡಿದ್ದಾರೆ. ಜ್ಞಾನಿ ಹಗಲು ತನುವಿನ ಅರಿವನ್ನು ಎಚ್ಚರದಿಂದ ಬಳಸಿಕೊಳ್ಳುತ್ತಾನೆ. ಸ್ವಪ್ನದಲ್ಲಿಯೂ ಅರುವಿನ ಸ್ವಪ್ನವನ್ನೆ ಕಾಣುತ್ತಾನೆ. ಸುಷುಪ್ತಿಯಲ್ಲಿಯೂ ಅರಿವಾಗಿರುತ್ತಾನೆ. ಈ ಮೂರೂ ಅವಸ್ಥೆಗಳಲ್ಲಿಯೂ ಜ್ಞಾನಿ ಜ್ಞಾನಿಯೆ ಆಗಿರುತ್ತಾನೆ.

□

---

**ಅರಿವಿನ ಪರಿಮಳ**

- □ ಜಾಗ್ರತ್‌ನಲ್ಲಿ ನೋಡುವಾಗ ವಸ್ತುವಿನಲ್ಲಿ ಭ್ರಮೆ ಆವರಿಸಿರುವುದರಿಂದ, ವಸ್ತು ವಿಪರೀತವಾಗಿ ಕಾಣುತ್ತದೆ. ವಸ್ತುವಿನ ಮೇಲೆ ತನ್ನ ಭ್ರಮೆ ಚೆಲ್ಲಿ ಆ ವಸ್ತುವನ್ನು ಮನುಷ್ಯ ವಿಪರೀತವಾಗಿ ಪ್ರೀತಿಸುತ್ತಾನೆ. ವಸ್ತುವಿಲ್ಲದೆ ತಾನಿಲ್ಲ, ವಸ್ತುವೇ ಏನೆಲ್ಲ ಎಂದು ತಿಳಿದು ವಸ್ತುವಿಗಾಗಿ ಪ್ರಾಣ ತೆಗೆಯುತ್ತಾನೆ. ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ.
- □ ಜ್ಞಾನಿಯಲ್ಲದ ಸಾಮಾನ್ಯ ಮನುಷ್ಯನಿಗೆ ಜಾಗ್ರತ್‌ನಲ್ಲಿಯೂ ಭ್ರಮೆ, ಸ್ವಪ್ನದಲ್ಲಿಯೂ ಭ್ರಮೆ, ಸುಷುಪ್ತಿಯಲ್ಲಿಯೂ ಭ್ರಮೆ. ಸಾಮಾನ್ಯ ಮನುಷ್ಯ ಜೀವನ ಪರ್ಯಂತ ಭ್ರಮೆಯಲ್ಲಿಯೆ ಬದುಕುತ್ತಾನೆ. ಭ್ರಮೆಯಲ್ಲಿಯೆ ಸಾಯುತ್ತಾನೆ. ಸತ್ಯ ಗೋಚರಕ್ಕೆ ಬರುವುದೇ ಇಲ್ಲ. ಹಗಲು ರಾತ್ರಿಗಳೆರಡೂ ನರಕಯಾತನೆಯನ್ನುಂಟು ಮಾಡುತ್ತವೆ.
- □ ಜ್ಞಾನಿ ಹಗಲು ತನುವಿನ ಅರಿವನ್ನು ಎಚ್ಚರದಿಂದ ಬಳಸಿಕೊಳ್ಳುತ್ತಾನೆ. ಸ್ವಪ್ನದಲ್ಲಿಯೂ ಅರುವಿನ ಸ್ವಪ್ನವನ್ನೆ ಕಾಣುತ್ತಾನೆ. ಸುಷುಪ್ತಿಯಲ್ಲಿಯೂ ಅರಿವಾಗಿರುತ್ತಾನೆ. ಈ ಮೂರೂ ಅವಸ್ಥೆಗಳಲ್ಲಿಯೂ ಜ್ಞಾನಿ ಜ್ಞಾನಿಯೆ ಆಗಿರುತ್ತಾನೆ.

# ಸಂಗ್ರಹ ಜ್ಞಾನ ಅರಿವಿಗೆ ರುಚಿಸುವುದಿಲ್ಲ

**ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ**
**ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ ?**
**ಅರಿವಿಲ್ಲದವರಿಗೆ ಆಚಾರವಿದ್ದಡೆ**
**ಅರಕೆಗೆಟ್ಟು ಸುಖವೆಂದಪ್ಪುದಯ್ಯಾ ?**
**ಹೊರೆದ ಪರಿಮಳ ಸ್ಥಿರವಾಗಬಲ್ಲುದೆ ?**
**ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಅರಿಯದವರಿಗೆ**
**ಆಚಾರವಿಲ್ಲ ಕಾಣಿರಣ್ಣಾ!**

**ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ ?:**

ಕಾಳುಗಟ್ಟದ ನೆಲ್ಲಿನ ಹೊಟ್ಟಿಗೆ ನೀರನೆರೆದಡೆ ಫಲಬರಲು ಸಾಧ್ಯವಿಲ್ಲ. ಕಾಳು ಸಸಿಯಿಂದ ಬೆಳೆದು ಫಲ ನೀಡಬೇಕು. ಹೊಟ್ಟು ಎನ್ನುವುದು ಅಕ್ಕಿಯನ್ನು ಬಂಧಿಸಿ ಆ ಫಲದ ರಕ್ಷಣೆಗಾಗಿ ಸಿದ್ಧವಾದ ರಕ್ಷಾ ಕವಚ. ಆ ರಕ್ಷಾ ಕವಚವೆ ಅಕ್ಕಿಯಲ್ಲ. ಅಕ್ಕಿಯಿಲ್ಲದ ಆ ರಕ್ಷಾ ಕವಚಕ್ಕೆ ನೀರನೆರೆದೊಡೆ ಫಲವಿಲ್ಲ.

**ಅರಿವಿಲ್ಲದವರಿಗೆ ಆಚಾರವಿದ್ದಡೆ ಅರಕೆಗೆಟ್ಟು ಸುಖವೆಂದಪ್ಪುದಯ್ಯಾ ?:**

ಅರಿವು ಎನ್ನುವುದು ಅಂಗದ ಫಲ. ಅಂಗ ಅರಿವಲ್ಲ. ಹೊಟ್ಟು ಇದ್ದಡೆ ಮಾತ್ರ ಅಕ್ಕಿ ಕಾಳುಗಟ್ಟುತ್ತದೆ. ಹೊಟ್ಟು ಅಕ್ಕಿ ಹೇಗಲ್ಲವೊ ಹಾಗೆಯೆ ಅಂಗವು ಕೂಡಾ ಅರಿವಲ್ಲ. ಅಂಗ ಇಲ್ಲದೆ ಅರಿವಿಲ್ಲ. ಅರಿವಿಲ್ಲದೆ ಅಂಗವೂ ಇಲ್ಲ. ಅಂಗದೊಂದಿಗೆ ಮಾಡುವ ಆಚಾರಗಳೆಲ್ಲ ಗೋಚರದ ಆಚಾರಗಳು. ಅಜ್ಞಾನದ ಆಚಾರಗಳು. ಅರಿವಿನ ಆಚಾರವೆನ್ನುವುದು ಅಗೋಚರದ ಆಚಾರ.

ಕಣ್ಣಿಗೆ ದೇವಸ್ಥಾನ ಗೋಚರಿಸುತ್ತದೆ. ದೇವರನ್ನು ಸ್ತುತಿಸಿ ಪ್ರಾರ್ಥಿಸಲು ಅಂಗ ತಾನು ಸ್ನಾನ ಮಾಡಿ ಮಡಿಯಿಂದ ದೇವಸ್ಥಾನಕ್ಕೆ ತೆರಳುತ್ತದೆ. ಯಾರೊಂದಿಗೂ ಮಾತನಾಡುವುದಿಲ್ಲ, ಮುಟ್ಟಿಸಿಕೊಳ್ಳುವುದಿಲ್ಲ, ಮುಟ್ಟಿದರೆ ಮತ್ತೊಮ್ಮೆ ಸ್ನಾನ ಮಾಡುತ್ತದೆ. ಮನೆಯಲ್ಲಿ ಸ್ನಾನಕ್ಕೆ, ಪೂಜೆಗೆ ಅಡ್ಡಿ ಆತಂಕಗಳಾದರೆ ಸರ್ವರನ್ನು ನಿಂದೆ ಮಾಡುತ್ತದೆ. ಅಂಗಕ್ಕೆ ಅನ್ಯರಿಂದ ಸಂಗ್ರಹಗೊಂಡ ಆಚಾರ ಪ್ರಧಾನವಾಯಿತೆ ಹೊರತು ಅಂಗದಲ್ಲಿರುವ ಅರಿವು ಅಂಗಕ್ಕೆ ಬಳಕೆಯಾಗಲಿಲ್ಲ,

ಅರಿವಿನ ಆಚಾರದಿಂದ ದೇವಸ್ಥಾನ ನೋಡಿದರೆ ಹೊರಾವರಣದಲ್ಲಿ ಹಾಸಿದ ಕಲ್ಲುಗಳು ಹೇಗೆ ಕಲ್ಲುಗಳೊ ಹಾಗೆಯೇ ದೇವಸ್ಥಾನವನ್ನು , ಗರ್ಭಗುಡಿಯನ್ನು ಕೊನೆಗೆ ದೇವರನ್ನು ನಿರ್ಮಿಸಲ್ಪಟ್ಟ ಕಲ್ಲುಗಳು ಕೂಡಾ ಕಲ್ಲುಗಳೇ! ದೇವರ ಮೂರ್ತಿಯನ್ನು ಕೆತ್ತಲ್ಪಟ್ಟ ಕಲ್ಲು ಅರಿವಿನ ಗೋಚರಕ್ಕೆ ಬರುತ್ತದೆ. ದೇವಸ್ಥಾನವನ್ನು ನಿರ್ಮಿಸಿದ ಕಲೆ, ಮೂರ್ತಿಯನ್ನು ಕೆತ್ತಲ್ಪಟ್ಟ ಕಲಾವಿದನ ಚಾಕಚಕ್ಯತೆ ಅರಿವಿನ ಆಚಾರದಲ್ಲಿದ್ದವನ ಗಮನ ಸೆಳೆಯುತ್ತದೆ.

ಅರಿವಿಲ್ಲದೆ ಆಚಾರದಲ್ಲಿದ್ದ ಅಂಗ ದೇವಸ್ಥಾನದ ಹೊರಾವರಣದಲ್ಲಿ ಹಾಸಿದ ಕಲ್ಲಿಗೆ

ಕಲ್ಲೆಂದು ಹೇಳುತ್ತದೆ. ಕಲ್ಲಿನಿಂದ ಕಟ್ಟಲ್ಪಟ್ಟ ಗುಡಿಗೆ ಗರ್ಭ ಗುಡಿಯೆಂದು ನಮಸ್ಕರಿಸುತ್ತದೆ. ಕಲ್ಲಿನಿಂದ ಕೆತ್ತಲ್ಪಟ್ಟ ಮೂರ್ತಿಗೆ ಆಯಾ ದೇವರ ಹೆಸರು ಹೇಳಿ ಪೂಜಿಸುತ್ತದೆ. ಕೊನೆಗೆ ತನ್ನಂತೆ ಮದುವೆ ಮಾಡಿ, ಚತ್ರಿಚಾಮರ ಬೀಸಿ, ಶಯನ ಗೃಹಕ್ಕೊ ಕಳಿಸುತ್ತದೆ. ಕಲ್ಲಿಗೆ ಕಲ್ಲೆಂದು ಹೇಳುವ ಕಣ್ಣು; ಕೆತ್ತಿದ ಕಲ್ಲಿಗೆ ದೇವರೆಂದು ಹೇಳುತ್ತದೆ. ಹೀಗೆ ಕಲ್ಲಿನಲ್ಲಿ ದೇವರು ಕಂಡ ಅಂಗಕ್ಕೆ ಒಮ್ಮೆ ಸುಖವಿದೆ ಮತ್ತೊಮ್ಮೆ ದುಃಖವಿದೆ.

ಅಗೋಚರದ ಆಚಾರವಿದ್ದ ಕಣ್ಣಿಗೆ ಆವರಣದಲ್ಲಿದ್ದ ಕಲ್ಲು ಕಲ್ಲೆ; ಗರ್ಭಗುಡಿಯಲ್ಲಿದ್ದ ಕಲ್ಲು ಕಲ್ಲೆ. ಕಲ್ಲನ್ನು ಕಲ್ಲಿನಂತೆ ಕಾಣುವುದೆ ಅರಿವಿನ ಅಂಗ; ಅಗೋಚರದ ಆಚಾರದ ಅಂಗ. ಕಲ್ಲನ್ನು ದೇವರೆಂದು ಪೂಜಿಸುವುದೆ ಅಂಗದಲ್ಲಿ ಅರಿವಿದ್ದೂ ಬಳಕೆ ಮಾಡಿಕೊಳ್ಳದ ಆಚಾರದ ಅಂಗ. ಈ ಅಂಗಕ್ಕೆ ಸುಖವು ಎಂದು ಸಿಗುವುದಯ್ಯಾ? ಎಂದು ಪ್ರಶ್ನಿಸಿದ್ದಾರೆ ಅಕ್ಕ ಮಹಾದೇವಿ.

**ಹೊರೆದ ಪರಿಮಳ ಸ್ಥಿರವಾಗಬಲ್ಲುದೆ ? ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಅರಿಯದವರಿಗೆ ಆಚಾರವಿಲ್ಲ ಕಾಣಿರಣ್ಣಾ !**

ಅಂಗದಲ್ಲಿ ಅರಿವಿದೆ. ಆ ಅರಿವನ್ನು ಬಳಕೆ ಮಾಡಿಕೊಂಡು ಕಣ್ಣಿನಿಂದ ನೋಡಿದರೆ ರೂಪದಲ್ಲಿಯ ಸತ್ಯದ ಮೂಲ ಕಣ್ಣಿಗೆ ತಿಳಿಯುತ್ತದೆ. ಕಿವಿಗೆ ಬಡಿದ ಶಬ್ದದ ಮೂಲ ಕಿವಿಗೆ ತಿಳಿಯತ್ತದೆ. ಚರ್ಮದಿಂದ ಸ್ಪರ್ಶಿಸಿದರೆ ಸ್ಪರ್ಶಿಸಿದ ವಸ್ತುವಿನ ಮೂಲ ಚರ್ಮಕ್ಕೆ ತಿಳಿಯುತ್ತದೆ. ಮೂಗಿನಿಂದ ವಾಸಿಸಿದರೆ ವಾಸಿಸಿದ ವಾಸನೆಯ ಮೂಲ ಮೂಗಿನ ಅರಿವಿಗೆ ಬರುತ್ತದೆ. ನಾಲಗೆಯಿಂದ ರುಚಿಸಿದರೆ ರುಚಿಸಿದ ಪದಾರ್ಥದ ಮೂಲ ನಾಲಗೆಯ ಅರಿವಿಗೆ ಬರುತ್ತದೆ. ಹೀಗೆ ಅಂಗದಲ್ಲಿ ಐದು ಅರಿವಿನ ಉಪಕರಣಗಳಿವೆ. ಆ ಅಂಗದ ಕಣ ಕಣದಲ್ಲಿ ಆ ಐದೂ ಉಪಕರಣಗಳಿಗೆ ಪಾಠ ಮಾಡುವ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಒಡೆಯನಿದ್ದಾನೆ. ಅಂಗದ ಈ ಒಡೆಯನಿಗೆ ಸಂಗ್ರಹದ ಅವಶ್ಯಕತೆಯಿಲ್ಲ. ಯಾರೋ ಹೇಳಿದರೆಂದು ಈತ ಪೂಜಿಸುವುದಿಲ್ಲ; ರುಚಿಸುವುದಿಲ್ಲ; ಕುಡಿಯುವುದಿಲ್ಲ; ಹಾದರ ಮಾಡುವುದಿಲ್ಲ; ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವುದಿಲ್ಲ; ಲಂಚ ರುಶುವತ್ತುಗಳನ್ನು ಮುಟ್ಟುವುದಿಲ್ಲ; ಅಜ್ಞಾನದಿಂದ ನೋಡುವುದಿಲ್ಲ; ಕೇಳುವುದಿಲ್ಲ; ತನ್ನ ಅಂಗದ ಅರಿವಿನ ಪರಿಮಳವನ್ನು ತಾನೆ ಸವಿಯುತ್ತಾನೆ; ಹೊರೆದ ಪರಿಮಳ ಅಂದರೆ ಸಂಗ್ರಹ ಜ್ಞಾನದ ಆಚಾರದಿಂದ ದೂರ ಉಳಿಯುತ್ತಾನೆ.

**ಅರಿವಿನ ಪರಿಮಳ** □

- □ ಹೊಟ್ಟು ಎನ್ನುವುದು ಅಕ್ಕಿಯನ್ನು ಬಂಧಿಸಿ ಆ ಫಲದ ರಕ್ಷಣೆಗಾಗಿ ಸಿದ್ಧವಾದ ರಕ್ಷಾ ಕವಚ. ಆ ರಕ್ಷಾ ಕವಚವೆ ಅಕ್ಕಿಯಲ್ಲ. ಅಕ್ಕಿಯಿಲ್ಲದ ಆ ರಕ್ಷಾ ಕವಚಕ್ಕೆ ನೀರನೆರೆದೊಡೆ ಫಲವಿಲ್ಲ.
- □ ಅರಿವು ಎನ್ನುವುದು ಅಂಗದ ಫಲ. ಅಂಗ ಅರಿವಲ್ಲ. ಹೊಟ್ಟು ಇದ್ದಡೆ ಮಾತ್ರ ಅಕ್ಕಿ ಕಾಳು ಗಟ್ಟುತ್ತದೆ. ಹೊಟ್ಟು ಅಕ್ಕಿ ಹೇಗಲ್ಲವೊ ಹಾಗೆಯೆ ಅಂಗವು ಕೂಡಾ ಅರಿವಲ್ಲ. ಅಂಗ ಇಲ್ಲದೆ ಅರಿವಿಲ್ಲ. ಅರಿವಿಲ್ಲದೆ ಅಂಗವೂ ಇಲ್ಲ. ಅಂಗದೊಂದಿಗೆ ಮಾಡುವ ಆಚಾರಗಳೆಲ್ಲ ಗೋಚರದ ಆಚಾರಗಳು. ಅಜ್ಞಾನದ ಆಚಾರಗಳು. ಅರಿವಿನ ಆಚಾರವೆನ್ನುವುದು ಅಗೋಚರದ ಆಚಾರ.
- □ ದೇವಸ್ಥಾನವನ್ನು , ಗರ್ಭಗುಡಿಯನ್ನು ಕೊನೆಗೆ ದೇವರನ್ನು ನಿರ್ಮಿಸಲ್ಪಟ್ಟ ಕಲ್ಲುಗಳು ಕೂಡಾ ಕಲ್ಲುಗಳೇ! ದೇವರ ಮೂರ್ತಿಯನ್ನು ಕೆತ್ತಲ್ಪಟ್ಟ ಕಲ್ಲು ಅರಿವಿನ ಗೋಚರಕ್ಕೆ ಬರುತ್ತದೆ. ದೇವಸ್ಥಾನವನ್ನು ನಿರ್ಮಿಸಿದ ಕಲೆ, ಮೂರ್ತಿಯನ್ನು ಕೆತ್ತಲ್ಪಟ್ಟ ಕಲಾವಿದನ ಚಾಕಚಕ್ಯತೆ ಅರಿವಿನ ಆಚಾರದಲ್ಲಿದ್ದವನ ಗಮನ ಸೆಳೆಯುತ್ತದೆ.

# ಅರಿವಿನ ಒಡೆಯನಿಗೆ ತೊಡಿಗೆಯಾದ ಅಕ್ಕ

ಅಯ್ಯಾ , ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು .
ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು .
ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಪ್ರಾಣ ಶುದ್ಧವಾಯಿತ್ತು .
ಎನ್ನ ಒರೆದೊರೆದು ಆಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯಾ ,
ನಿಮಗಾನು ತೊಡಿಗೆಯಾದೆನು.

**ಅಯ್ಯಾ , ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು :**

ತನು ಎಂಬುದು ಅಮೇಧ್ಯದ ಮಡಿಕೆ ಮೂತ್ರದ ಕುಡಿಕೆ ಎಲುಬಿನ ತಡಿಕೆ ಕೀವಿನ ಹಡಿಕೆ ಸುಡಲೀ ದೇಹವ ಒಡಲವಿಡಿದು ಕೆಡುವುದು. ಕೆಡದಿರು ಚೆನ್ನಮಲ್ಲಿಕಾರ್ಜುನನ ಅರಿಯದೆ ಮರುಳೆ ಎಂದು ಅಕ್ಕಮಹಾದೇವಿ ತಮ್ಮ ಮತ್ತೊಂದು ವಚನದಲ್ಲಿ ತನುವನ್ನು ಕುರಿತು ಹೇಳಿದ್ದಾಳೆ.

ಅಂಗದಲ್ಲಿರುವ ಅರುವಿನ ಅನುಭಾವದ ಸಂಗದಿಂದ ಎನ್ನ ತನು ಶುದ್ಧವಾಯಿತ್ತು. ಆ ಅರುವನ್ನು ಎನ್ನ ಮನ ಅಂಗದೊಂದಿಗೆ ಬಳಕೆ ಮಾಡಿಕೊಳ್ಳುವ ತಂತ್ರಗಾರಿಕೆ ಕಲ್ಯಾಣದ ಅನುಭಾವಿಗಳ ಸಂಗದಿಂದ ಸಾಧ್ಯವಾಯಿತ್ತೆಂದು ಅಕ್ಕಮಹಾದೇವಿ ಶರಣರನ್ನು ನೆನೆಯುತ್ತಾ ಹಾಡಿದ್ದಾಳೆ.

**ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಮನ ಶುದ್ಧವಾಯಿತ್ತು :**

ಮನ ತನುವನ್ನು ತಾನು ಬಯಸಿದ ರುಚಿಯೆಡೆ ಕರೆದು ಕೊಂಡು ಹೋಗುತ್ತದೆ. ತನುವಿಗೆ ಆ ರುಚಿಯನ್ನು ಉಣಿಸುವ ಮೂಲಕ ತಾನು ಸುಖಿಸುತ್ತದೆ. ತನುವನ್ನು ಅಮೇಧ್ಯದ ಮಡಿಕೆಯನ್ನಾಗಿ ಮಾಡುತ್ತದೆ. ಇಂತಹ ರಕ್ಕಸ ಮನವನ್ನು ಯಾರೂ ಗುರುತಿಸುವುದಿಲ್ಲ. ಮನ ಮಾಡುವ ತನ್ನ ರಕ್ಕಸ ಪ್ರವೃತಿಗೆ ಜನ ತನುವಿಗೆ ಶಿಕ್ಷೆ ನೀಡುತ್ತಾರೆ. ಇದನ್ನರಿತು ಅಂಗದಲ್ಲಿರುವ ಅರಿವೆಂಬ ಗುರುವನ್ನು ಬಳಕೆ ಮಾಡಿಕೊಂಡು ಸದ್ಗುರುವೇ ತಾವಾದ ಅನುಭಾವಿಗಳ ಸಂಗದಿಂದ, ಶರಣರ ಸಂಗದಿಂದ, ಎನ್ನ ಮನ ಘನ ಮನವಾಯಿತ್ತು. ಅವರು ತನುವನ್ನು ಆವರಿಸಿಕೊಂಡ ರಕ್ಕಸನೆಂಬ ಎನ್ನ ಮನವನ್ನು ಅರಿವಿನ ತಂತ್ರಗಾರಿಕೆಯಿಂದ , ಅರಿವಿನಲ್ಲಿ ಲೀನಗೊಳಿಸಿ, ಶುದ್ದಗೊಳಿಸಿದರು. ಎಂದೆಂದು ಕೆಡದಂತೆ ಸಹಜ ಮನವನ್ನಾಗಿಸಿದರು.

**ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಪ್ರಾಣ ಶುದ್ಧವಾಯಿತ್ತು:**

ತನುವಿನಲ್ಲಿ ಪ್ರಾಣವಿದ್ದರೂ ಆ ಪ್ರಾಣ ಆಪತ್ಕಾಲದಲ್ಲಿದ್ದಾಗ ಅದನ್ನು ಯಾರೂ

ರಕ್ಷಿಸುವುದಿಲ್ಲ. ಹಾಗೆಯೆ ತನ್ನನ್ನು ತಾನು ರಕ್ಷಿಸಿಕೊಳ್ಳುವ ತಿಳುವಳಿಕೆ ತನುವಿನ ಪ್ರಾಣಕ್ಕಿಲ್ಲ. ತನುವಿಗೂ ಇಲ್ಲ. ತನುವು, ತನುವಿನ ಪ್ರಾಣ, ತನುವಿನ ಅರಿವಿನ ಅನುವಿನಿಂದಲೆ ಬದುಕಿವೆ. ಮನ ಅರಿವು ಮತ್ತು ಪ್ರಾಣ ತನುವಿನ ಉಪಕರಣಗಳು. ಅರಿವು ತನುವು ಬಿಟ್ಟು ಬಯಲಲ್ಲಿ ಬಯಲಾದಾಗ ತನುವಿನ ಪ್ರಾಣ ಪಕ್ಷಿ ಹಾರಿಹೋಗಿ ಶವವಾಗುತ್ತದೆ. ಪಂಚಭೂತಗಳಲ್ಲಿ ತನು ಲೀನವಾಗುತ್ತದೆ. ಅನುಭಾವಿಗಳ ಸಂಗವಿಲ್ಲದಿದ್ದರೆ ತನುವಿಗೆ ಅರಿವು ಬಳಕೆ ಆಗುವುದೆ ಇಲ್ಲ. ಅರಿವು ಸಂಪೂರ್ಣ ಬಳಕೆಯಾಗದ ತನು ಒಮ್ಮೆ ಸಾತ್ವಿಕ ಎನ್ನಿಸಿಕೊಂಡರೆ ಮತ್ತೊಮ್ಮೆ ರಾಜಸ ಮಗದೊಮ್ಮೆ ತಾಮಸ ಗುಣವನ್ನು ಪ್ರದರ್ಶಿಸುತ್ತದೆ. ಅನುಭಾವಿಗಳು ತನುವಿನ ಈ ಮೂರೂ ಗುಣಗಳನ್ನು ಕಳೆದು ನಿರ್ಗುಣಿಯಾಗಿಸಿದರು. ಎನ್ನ ಮನವನ್ನು ಘನ ಮನವಾಗಿಸಿದರು ; ತನುವು, ತನುವಿನ ಪ್ರಾಣ ಶುದ್ಧವಾಗಿಸಿದರು ಎಂದಿಂದ್ದಾರೆ ಅಕ್ಕಮಹಾದೇವಿ.

**ಎನ್ನ ಒರೆದೊರೆದು ಆಗುಮಾಡಿದ ಕಾರಣ ಚೆನ್ನಮಲ್ಲಿಕಾರ್ಜುನಯ್ಯಾ, ನಿಮಗಾನು ತೊಡಿಗೆಯಾದೆನು :**

ಕಲ್ಯಾಣದ ಶರಣರು ಅನುಭಾವಿಗಳು. ನನ್ನನ್ನು ಚಿನ್ನ ಪರೀಕ್ಷಿಸುವಂತೆ ಒರೆಗಲ್ಲಿಗೆ ತಿಕ್ಕಿ ತಿಕ್ಕಿ ಒರೆದೊರೆದು ನೋಡಿದರು. ಅಂಗದ ಅಜ್ಞಾನವನ್ನು ಕಳೆದರು. ಜ್ಞಾನವನ್ನು ಪಡೆಯುವ ತಂತ್ರಗಾರಿಕೆಯನ್ನು ಹೇಳಿಕೊಟ್ಟು ಕೃಪೆಮಾಡಿದರು. ಕಾರಣ ನಾನು ಅರಿವಿನ ಮನುಜಳಾದೆ. ಚೆನ್ನಮಲ್ಲಿಕಾರ್ಜುನನೆಂಬ ಅಂಗದ ಅರಿವಿನ ಒಡೆಯನಿಗೆ ತೊಡಿಗೆಯಾದೆನು ಎಂದಿದ್ದಾಳೆ ಅಕ್ಕಮಹಾದೇವಿ.

□

**ಅರಿವಿನ ಪರಿಮಳ**

□ ಮನ ತನುವನ್ನು ತಾನು ಬಯಸಿದ ರುಚಿಯೆಡೆ ಕರೆದು ಕೊಂಡು ಹೋಗುತ್ತದೆ. ತನುವಿಗೆ ಆ ರುಚಿಯನ್ನು ಉಣಿಸುವ ಮೂಲಕ ತಾನು ಸುಖಿಸುತ್ತದೆ. ತನುವನ್ನು ಅಮೇಧ್ಯದ ಮಡಿಕೆಯನ್ನಾಗಿ ಮಾಡುತ್ತದೆ. ಇಂತಹ ರಕ್ಕಸ ಮನವನ್ನು ಯಾರೂ ಗುರುತಿಸುವುದಿಲ್ಲ. ಮನ ಮಾಡುವ ತನ್ನ ರಕ್ಕಸ ಪ್ರವೃತಿಗೆ ಜನ ತನುವಿಗೆ ಶಿಕ್ಷೆ ನೀಡುತ್ತಾರೆ.

□ ಮನ ಅರಿವಿನ ತನುವು ಮತ್ತು ತನುವಿನ ಪ್ರಾಣ ಉಪಕರಣಗಳು. ಅರಿವು ತನುವು ಬಿಟ್ಟು ಬಯಲಲ್ಲಿ ಬಯಲಾದಾಗ ತನುವಿನ ಪ್ರಾಣ ಪಕ್ಷಿ ಹಾರಿಹೋಗಿ ಶವವಾಗುತ್ತದೆ.

□ ಅನುಭಾವಿಗಳ ಸಂಗವಿಲ್ಲದಿದ್ದರೆ ತನುವಿಗೆ ಅರಿವು ಬಳಕೆ ಆಗುವುದೆ ಇಲ್ಲ. ಅರಿವು ಸಂಪೂರ್ಣ ಬಳಕೆಯಾಗದ ತನು ಒಮ್ಮೆ ಸಾತ್ವಿಕ ಎನ್ನಿಸಿಕೊಂಡರೆ ಮತ್ತೊಮ್ಮೆ ರಾಜಸ ಮಗದೊಮ್ಮೆ ತಾಮಸ ಗುಣವನ್ನು ಪ್ರದರ್ಶಿಸುತ್ತದೆ.

# ಶರಣರ ಕೂಡಿದ ಕೂಟದ ಸುಖ

**ಅಯ್ಯಾ, ನಿಮ್ಮ ಶರಣರ ಕೂಡಿದ-**
**ಸುಖವನುಪಮೆಗೆ ತರಬಾರದಯ್ಯ.**
**ಅಯ್ಯಾ, ನಿಮ್ಮ ಮಹಾಂತರ ಕೂಡಿ ಅಗಲುವ ಧಾವತಿಗಿಂತ**
**ಸಾವುದೇ ಕರಲೇಸಯ್ಯಾ.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನಿಮ್ಮನರುಹಿದ ಮಹಿಮರನಗಲಿ**
**ಆನು ನಿಲ್ಲಲಾರೆನಯ್ಯಾ.**

**ಅಯ್ಯಾ, ನಿಮ್ಮ ಶರಣರ ಕೂಡಿದ-ಸುಖವನುಪಮೆಗೆ ತರಬಾರದಯ್ಯ:**

ಶಿವ ಶರಣೆ ಅಕ್ಕಮಹಾದೇವಿ ತನ್ನ ಅರಿವೆಂಬ ಚೆನ್ನಮಲ್ಲಿಕಾರ್ಜುನನೊಂದಿಗೆ ಸಂಭಾಷಣೆ ಮಾಡುತ್ತ, ಶರಣರು ನಿಮ್ಮನ್ನು ದರ್ಶಿಸಿದವರು ; ನಿಮ್ಮ ದರ್ಶನ ಭಾಗ್ಯ ದೊರೆತವರು,ಅಂಗದ ಅರಿವಿಗೆ ಶರಣು ಹೋಗಿ ಆ ಅರಿವನ್ನೆ ಒಲಿಸಿಕೊಂಡ ಶರಣರವರು. ಅಂಥವರನ್ನು ಕೂಡಿದ ಸುಖ ಯಾವ ಸುಖಕ್ಕೂ ಸರಿ ಸಾಟಿಯಲ್ಲ. ಆ ಸುಖವನ್ನು ಯಾವ ಸುಖದ ಹೋಲಿಕೆಗೂ ಹೊಂದಿಸುವಂತಿಲ್ಲ. ರತಿ ಸುಖವನ್ನು ಮತ್ತೊಬ್ಬರ ಮುಂದೆ ಹೇಳಿಕೊಳ್ಳಲು ಸಾಧ್ಯವೆ ? ಕೂಡಿ ಅಗಲುವ ಈ ಸುಖವೆ ಹೇಳಿಕೊಳ್ಳಲು ಸಾಧ್ಯವಿಲ್ಲ ಎಂದ ಮೇಲೆ ಶರಣರನ್ನು ಕೂಡಿದ ಕೂಟದ ಸುಖವನು ಹೇಳಿಕೊಳ್ಳಲು ಹೇಗೆ ಸಾಧ್ಯ ? ಅದು ಕೂಡದ ಅಗಲದ ಕೂಟ! ಅದನ್ನು ವರ್ಣಿಸಲು ಅಸದಳ ; ಉಪಮಿಸುವುದು ಅಸದಳ ಎಂದಿದ್ದಾರೆ ಅಕ್ಕಮಹಾದೇವಿ.

ಬಸವಣ್ಣನವರು ಕೂಡಾ ಶರಣರನ್ನು ಕೂಡಿದ ಸುಖವನ್ನು ಈ ಕೆಳಗಿನಂತೆ ಬಣ್ಣಿಸಿದ್ದಾರೆ. ''ಸಸಿಯಮೇಲೆ ಸಾಗರವರಿದಂತಾಯಿತ್ತಯ್ಯಾ. ಆನಂದದಿಂದ ನಲಿನಲಿದಾಡುವೆ, ಆನಂದ ದಿಂದ ಕುಣಿಕುಣಿದಾಡುವೆ, ಕೂಡಲಸಂಗನ ಶರಣರು ಬಂದಡೆ, ಉಬ್ಬಿ, ಕೊಬ್ಬಿ, ಹರುಷದ ಲೋಲಾಡುವೆ.''

ಸಸಿಯ ಮೇಲೆ ಸಾಗರ ಹರಿದರೆ ಸಸಿ ಬದುಕುವುದಿಲ್ಲ. ಸಾಗರ ಆವಿಯಾಗಿ ಆಕಾಶಕ್ಕೆ ಹಾರಿ ಹನಿ ಹನಿಗಳನ್ನು ತುಂತುರು ರೂಪದಲ್ಲಿ ಸಸಿಯ ಮೇಲೆ ಚೆಲ್ಲಿದಾಗ ಸಸಿಗೆ ಆಗುವ ಆನಂದ ಅಷ್ಟಿಷ್ಟಲ್ಲ! ಅದು ಅಮಿತಾನಂದ. ಸಸಿ ಉಬ್ಬಿ ಕೊಬ್ಬಿ ಹರುಷದಲ್ಲಿ ಓಲಾಡುವುದು. ಹಾಗೆಯೆ ಕೂಡಲ ಸಂಗನ ಶರಣರ ಗಣತಿಂತಿಣಿ ಬಂದಡೆ ಆನಂದದಿಂದ ನಲಿ ನಲಿದಾಡುವೆ ಕುಣಿ ಕುಣಿದಾಡುವೆ ಎಂದು ಅಕ್ಕಳಂತೆ ಹರುಷದಿಂದ ಹಾಡಿದ್ದಾರೆ ಬಸವಣ್ಣ.

**ಅಯ್ಯಾ, ನಿಮ್ಮ ಮಹಾಂತರ ಕೂಡಿ ಅಗಲುವ ಧಾವತಿಗಿಂತ ಸಾವುದೇ ಕರಲೇಸಯ್ಯಾ:**

ಶರಣರನ್ನು ಕೂಡಿ ಅಗಲುವುದು ಪ್ರೇಯಸಿ ಪ್ರಿಯಕರನನ್ನು ಅಗಲಿದಂತೆ. ಇಲ್ಲಿ

ಪ್ರೇಯಸಿ ಮನವಾದರೆ ಪ್ರಿಯಕರ ಅರಿವು. ಉಮರ್ ಖಯಾಮ್ ತಾನು ಪ್ರಿಯಕರನಾಗಿ ಅರಿವನ್ನೆ ಪ್ರೇಯಸಿಯನ್ನಾಗಿ ಮಾಡಿಕೊಂಡ. ಆ ಆನಂದದ ಮತ್ತಿನಲ್ಲಿ ಕೂಟದ ಸುಖವನ್ನು ಮದಿರೆಗೆ ಹೋಲಿಸಿದ. ಮೈಮರೆತು ಹಾಡಿದ. ಈ ಸುಖ ಶರಣರು ಮಾತ್ರ ಬಲ್ಲರು. ಸೂಫಿ ಸಂತರು, ದಾಸರು, ತತ್ವಪದಕಾರರು ಮಾತ್ರ ಬಲ್ಲರು. ಹಾಗೆಯೆ ಅರಿವಿಗೆ ಹೋಗಿ ಆ ಅರಿವಿನಲ್ಲಿ ಲೀನವಾದ ಪ್ರತಿ ಅಂಗ ಕೂಡಾ ಬಲ್ಲುದು. ಇದು ತಿಳಿದರೆ ಸರ್ವ ಅಂಗಗಳಿಗೂ ಈ ಸುಖ ದಕ್ಕುವುದು. ಅದಕ್ಕಾಗಿಯೆ ಶರಣೆ ಅಕ್ಕ ಮಹಾದೇವಿ ಅರಿವಿನ ಕೂಟದಲ್ಲಿ ಕೂಡಿ ಅಗಲುವ ಧಾವತಿಗಿಂತ ಸಾಯುವುದೆ ಕರಲೇಸು ಎಂದಿದ್ದಾಳೆ.

**ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮನರುಹಿದ ಮಹಿಮರನಗಲಿ ಆನು ನಿಲ್ಲಲಾರೆನಯ್ಯಾ:**

ಅಂಗದ ಅರಿವನ್ನೆ ಗಂಡನನ್ನಾಗಿ ಮಾಡಿಕೊಂಡ ಅಕ್ಕ, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆನ್ನಮಲ್ಲಿಕಾರ್ಜುನನೆಂಬ ಚೆಲುವನಿಗೆ ಹೇಳುವ ಮಾತಿದು. ನೀವು ಘನ ಮಹಿಮರು; ನಿಮ್ಮನ್ನು ತಿಳಿಯಲು ಕಾರಣೀಭೂತರಾದವರು ಶಿವಶರಣರು. ಅವರು ಮಹಾಮಹಿಮರು! ಅಂತಹ ಮಹಾಮಹಿಮರನ್ನು ಅಗಲಿ ಈ ಭೂಮಿಯ ಮೇಲೆ ನಿಲ್ಲಲು ನನಗೆ ಸಾಧ್ಯವಾಗುವುದಿಲ್ಲ. ಅವರನ್ನು ಎಂದೆಂದಿಗೂ ನನ್ನಿಂದ ಅಗಲದಂತೆ ಆ ಶರಣ ಗಣ ತಿಂತಿಣಿಯ ಕೂಟದಲ್ಲಿ ಸದಾ ವಿರಮಿಸುವಂತೆ ಮಾಡು ಎಂದು ಅರಿವಿನ ನಲ್ಲ ಚೆನ್ನಮಲ್ಲಿಕಾರ್ಜುನನನ್ನು ಬೇಡಿಕೊಂಡಿದ್ದಾಳೆ ಅಕ್ಕ.

□

**ಅರಿವಿನ ಪರಿಮಳ**

- □ ರತಿ ಸುಖವನ್ನು ಮತ್ತೊಬ್ಬರ ಮುಂದೆ ಹೇಳಿಕೊಳ್ಳಲು ಸಾಧ್ಯವೆ ? ಕೂಡಿ ಅಗಲುವ ಈ ಸುಖವೆ ಹೇಳಿಕೊಳ್ಳಲು ಸಾಧ್ಯವಿಲ್ಲ ಎಂದ ಮೇಲೆ ಶರಣರನ್ನು ಕೂಡಿದ ಕೂಟದ ಸುಖವನು ಹೇಳಿಕೊಳ್ಳಲು ಹೇಗೆ ಸಾಧ್ಯ ?
- □ ಶರಣರನ್ನು ಕೂಡಿ ಅಗಲುವುದು ಪ್ರೇಯಸಿ ಪ್ರಿಯಕರನನ್ನು ಅಗಲಿದಂತೆ. ಇಲ್ಲಿ ಪ್ರೇಯಸಿ ಮನವಾದರೆ ಪ್ರಿಯಕರ ಅರಿವು. ಉಮರ್ ಖಯಾಮ್ ತಾನು ಪ್ರಿಯಕರನಾಗಿ ಅರಿವನ್ನೆ ಪ್ರೇಯಸಿಯನ್ನಾಗಿ ಮಾಡಿಕೊಂಡ. ಆ ಆನಂದದ ಮತ್ತಿನಲ್ಲಿ ಕೂಟದ ಸುಖವನ್ನು ಮದಿರೆಗೆ ಹೋಲಿಸಿದ. ಮೈಮರೆತು ಹಾಡಿದ. ಈ ಸುಖ ಶರಣರು ಮಾತ್ರ ಬಲ್ಲರು. ಸೂಫಿ ಸಂತರು, ದಾಸರು, ತತ್ವಪದಕಾರರು ಮಾತ್ರ ಬಲ್ಲರು. ಹಾಗೆಯೆ ಅರಿವಿಗೆ ಹೋಗಿ ಆ ಅರಿವಿನಲ್ಲಿ ಲೀನವಾದ ಪ್ರತಿ ಅಂಗ ಕೂಡಾ ಬಲ್ಲುದು. ಇದು ತಿಳಿದರೆ ಸರ್ವ ಅಂಗಗಳಿಗೂ ಈ ಸುಖ ದಕ್ಕುವುದು.

# ಅರಿವಿನ ಬಯಕೆಯಿಲ್ಲದ ಮನ ಘನಮನವಾಗದು

**ಅರಸಿ ತೊಳಲಿದಡಿಲ್ಲ , ಹರಸಿ ಬಳಲಿದಡಿಲ್ಲ,**
**ಬಯಸಿ ಹೊಕ್ಕಡಿಲ್ಲ, ತಪಸ್ಸು ಮಾಡಿದಡಿಲ್ಲ.**
**ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು.**
**ಶಿವನೊಲಿದಲ್ಲದೆ ಕೈಗೂಡದು.**
**ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ**
**ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು.**

**ಅರಸಿ ತೊಳಲಿದಡಿಲ್ಲ,ಹರಸಿ ಬಳಲಿದಡಿಲ್ಲ,ಬಯಸಿ ಹೊಕ್ಕಡಿಲ್ಲ ,ತಪಸ್ಸು ಮಾಡಿದಡಿಲ್ಲ:**

ಇಡೀ ಪ್ರಪಂಚದ ಮನುಷ್ಯರೆಲ್ಲ ತಾವು ಸಮಾಧಾನಿಯಾಗಿರಬೇಕೆಂದು ಬಯಸುತ್ತಾರೆ. ಇದು ಮನುಷ್ಯನ ಸಹಜ ಗುಣ.ಅದಕ್ಕಾಗಿಯೆ ಪ್ರತಿಯೊಂದು ಮನೆಯಲ್ಲಿ ದೇವರಿಗಾಗಿ ಒಂದಿಷ್ಟು ಸ್ಥಳ ಕಾಯ್ದಿರಿಸುತ್ತಾನೆ. ಆ ಸ್ಥಳದಲ್ಲಿ ತನ್ನ ಆರಾಧ್ಯ ದೇವರನ್ನು , ಸಂತನನ್ನು ಪ್ರತಿಷ್ಠಾಪಿಸುತ್ತಾನೆ. ಇಲ್ಲ ಪ್ರಾರ್ಥನೆಗಾಗಿ ಸ್ಥಳವನ್ನು ಇಟ್ಟು ಆ ಸ್ಥಳದಲ್ಲಿ ಪ್ರಾರ್ಥಿಸುತ್ತಾನೆ. ಹೀಗೆ ಮಾಡುವುದರಿಂದ ಆನಂದವಾಗುತ್ತದೆ ಎಂದು ಭ್ರಮಿಸಿ ಆನಂದ ಪಡುತ್ತಾನೆ. ಕಾಲ ಕ್ರಮೇಣ ಪ್ರಾರ್ಥನೆ ಪೂಜೆ ಎನ್ನುವುದು ತನಗೆ ಆ ನಿರ್ಧಿಷ್ಟ ಸಮಯದಲ್ಲಿ ಒಂದು ಕೆಲಸವಾಗುತ್ತದೆ. ಪೂಜೆ ಪ್ರಾರ್ಥನೆ ಗೌಣವಾಗುತ್ತದೆ. ಹೀಗೆ ಮಾಡುವ ಕೆಲಸವೂ ಅರ್ಥವಿಲ್ಲದಂತೆ ಸಾಗುತ್ತದೆ. ಇದು ಯಾಕೆ ಮಾಡುತ್ತೇನೆ ಎನ್ನುವ ವಿಚಾರ ಹೊಳೆಯದೆ ಆಯುಷ್ಯ ಕಡಿಮೆಯಗುತ್ತಾ ಹೋಗುತ್ತದೆ.

ಪೂಜೆ ಪ್ರಾರ್ಥನೆ ಮಾಡುವುದರಿಂದ ತನುವಿನಲ್ಲಿ ಶಬ್ದದಿಂದ , ರೂಪದಿಂದ ,ರುಚಿಯಿಂದ , ಸ್ಪರ್ಶದಿಂದ ವಾಸನೆಯಿಂದ ಉಂಟಾಗುವ ಸಂಕಟಗಳು ನಿಲ್ಲುವುದಿಲ್ಲ. ಆ ಸಂಕಟ ಪರಿಹಾರಕ್ಕಾಗಿ ಮಾಡುವ ಪೂಜೆ ಪ್ರಾರ್ಥನೆಗಳೂ ನಿಲ್ಲುವುದಿಲ್ಲ. ಹೀಗೆ ಮಾಡುವುದು ಸಮಾಧಾನ ತರದೆ, ಪುಣ್ಯ ಕ್ಷೇತ್ರಗಳಿಗೆ , ದೇವಸ್ಥಾನಗಳಿಗೆ , ಸಂತರ ಸಮಾಧಿಗಳಿಗೆ ದರ್ಶನವಿತ್ತು ಭ್ರಮೆಯಿಂದ ಸಮಾಧಾನ ಪಟ್ಟುಕೊಳ್ಳಲು ಪ್ರಯತ್ನಿಸುತ್ತಾನೆ.

ಮನ ತನುವಿಗೆ ಆದೇಶ ನೀಡಿ ಹೀಗೆ ಸುತ್ತಾಡಲು ಪ್ರೇರೇಪಿಸುತ್ತದೆ. ಹಿಮಾಲಯಕ್ಕೆ ಹೋಗಿ ಜಪ ತಪ ಅನುಷ್ಠಾನ ಮಾಡಲು ಹಾತೊರೆಯುತ್ತಾನೆ. ಎಲ್ಲಿಗೆ ಹೋದರೂ ಸಮಾಧಾನ ಆಗುವುದೆ ಇಲ್ಲ. ಹೀಗೆ ತನಗೆ ಅನುಕೂಲವಾದ ದೇವರನ್ನು ಹಿಡಿದುಕೊಂಡು ಮನುಷ್ಯ ಆ ದೇವರ , ಸಂತರ ಸಮಾಧಿಗೆ ಫ್ಯಾನ್ ಆಗುತ್ತಾನೆ. ಹೀಗೆ ನಡೆದುಕೊಂಡಿದ್ದರಿಂದಲೆ ತನಗೆ ಲಾಭವಾಯಿತೆಂದು ಭ್ರಮಿಸುತ್ತಾನೆ. ಮತ್ತೊಂದು ಕುಟುಂಬವನ್ನು ಒಲೈಸುತ್ತಾನೆ. ಹೀಗೆ ತೊಳಲಿ ಬಳಲಿ ಬಯಸಿ ಜಪ ತಪ ಮಾಡಿ ಅನುಷ್ಠಾನಕ್ಕೆ ಕುಳಿತರೂ ತಾನು ಯಾರು ? ತನ್ನ ಜನನ ಏಕಾಯಿತು ? ತಾನು ಶಾಶ್ವತವಾಗಿ ಸಮಾಧಾನದಿಂದ ಇರಲು ಏಕೆ ಸಾಧ್ಯವಾಗುತ್ತಿಲ್ಲ. ನನ್ನಂತೆ ಇರುವ ನೋಡುವ ರೂಪ ತನ್ನನ್ನು ಏಕೆ ಬಾಧಿಸುತ್ತದೆ ? ತಾನು ಕೇಳುವ ಶಬ್ದ ತನುವನ್ನು ಏಕೆ ಬಾಧಿಸುತ್ತದೆ ? ತಿನ್ನುವ ಪದಾರ್ಥದ ರುಚಿಯಿಂದಾಗಿ ತಾನು ತಲ್ಲಣಗೊಳ್ಳುವುದೇಕೆ ? ತನ್ನಂತೆ ಇರುವ ಚರ್ಮ ತನ್ನನ್ನು ರಾಸಾಯನಿಕ ಕ್ರಿಯೆಗೆ

ಒಳಗು ಮಾಡಿ ಬಾಧಿಸುವುದಲ್ಲ ಇದಕ್ಕೆ ಪರಿಹಾರ ಇಲ್ಲವೆ ? ಮನುಷ್ಯನಿಂದಲೆ ಸೃಷ್ಟಿಸಿ ಹೆಸರಿಸಲ್ಪಟ್ಟ ಖನಿಜ ವಸ್ತುಗಳು ಸಂಪತ್ತುಗಳಾಗಿ ಮನುಷ್ಯನನ್ನು ಬಾಧೆಗೆ ಒಳಗುಮಾಡಿವೆಯಲ್ಲ? ಇವುಗಳ ಆಸೆಗಾಗಿಯೆ ಒಂದು ತನು ಕಳ್ಳನ ವೇಷ ಧರಿಸಿದರೆ, ಮತ್ತೊಂದು ತನು ಶ್ರೀಮಂತನ ವೇಷಧರಿಸಿದೆಯಲ್ಲ? ಮನುಷ್ಯನ ಈ ಬಾಧೆಗೆ ತಾನು ಪೂಜಿಸುವ ಪ್ರಾರ್ಥಿಸುವ ದೇವರಿಂದ ಪರಿಹಾರ ಇದೆಯೊ ಹೇಗೆ ಎಂದು ಕೂಡಾ ಯೋಚಿಸುವ ಶಕ್ತಿ ತನಗೆ ಸಾಧ್ಯವಾಗುತ್ತಿಲ್ಲ.

**ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು. ಶಿವನೊಲಿದಲ್ಲದೆ ಕೈಗೂಡದು:**

ಅಕ್ಕಮಹಾದೇವಿ ತನುವಿನಲ್ಲಿರುವ ಅರಿವನ್ನು ಗುರುವಿನ ಸಹಾಯದಿಂದ ಪಡೆದುಕೊಂಡ ಧೀರೆ. ಮಹಾ ಶಕ್ತಿಯೂ ಹೌದು . ತಾನು ಶಕ್ತಿಯಾಗಿ ತನುವಿನ ಅರಿವನ್ನೆ ಶಿವನನ್ನಾಗಿ ಮಾಡಿಕೊಂಡ ಶಿವಶರಣೆಯೂ ಹೌದು. ಆ ಅರಿವೆಂಬ ಶಿವನನ್ನು ಹೇಗೆ ಒಲಿಸಿಕೊಳ್ಳಬೇಕು ? ಆತ ಒಲಿಯಬೇಕಾದರೆ ನಾನೇನು ಮಾಡಬೇಕು ಎಂಬ ಅರಿವಿನ ತಂತ್ರಗಾರಿಕೆಯನ್ನು ತನ್ನ ಈ ಬೆಡಗಿನ ವಚನದ ತುಂಬ ಸೂತ್ರ ರೂಪದಲ್ಲಿ ಹೆಣೆದಿದ್ದಾಳೆ ಅಕ್ಕ .

ತನುವಿನ ಅರಿವು ತನುವಿನ ಮನವನ್ನು ಅರಿವಿನಲ್ಲಿ ಲೀನ ಮಾಡಿಕೊಂಡು ಅರಿವು ತನುವಿಗೆ ಒಲಿತಿದೆ. ಅರಿವೆಂಬ ಚೆನ್ನಮಲ್ಲಿಕಾರ್ಜುನನು ತನುವನ್ನು ತನುವಿನ ಮನವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅಕ್ಕಮಹಾದೇವಿಯ ಇಷ್ಟಾರ್ಥವನ್ನು ಅರಿವಿನ ರೂಪದಲ್ಲಿ ನೆರವೇರಿಸಿದ್ದಾನೆ.

**ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು :**

ನೋಡಲು ಬಸವಣ್ಣ ತನ್ನಂತೆಯೆ ಇದ್ದಾನೆ. ಇತರ ತನುಗಳು ತನ್ನಂತೆ ಇವೆ. ಬಸವಣ್ಣನಲ್ಲಿ ಇದ್ದ ಅರಿವು ಬಸವಣ್ಣ ಕಂಡುಕೊಂಡು ಸಂಗನ ಬಸವಣ್ಣನಾಗಿದ್ದಾನೆ. ಅರಿವಿನ ಶ್ರೀಪಾದವಾಗಿದ್ದಾನೆ. ನೋಡಲು ಬಸವಣ್ಣ ಅಕ್ಕಮಹಾದೇವಿಗೆ ತನುವಾಗಿ ಕಾಣಲಿಲ್ಲ. ಅರಿವಿನ ಶ್ರೀಪಾದವಾಗಿ ಕಂಡ.ಅಕ್ಕನ ಈ ನೋಟ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ತನಗೆ ಚೆನ್ನಮಲ್ಲಿಕಾರ್ಜುನನೆಂಬ ಅರಿವು ಒಲಿದುದಕ್ಕಾಗಿ ಅರಿವೆಂಬ ಶ್ರೀಪಾದವ ಕಂಡು ಬದುಕಿದೆನೆಂದು ಹಾಡಿದ್ದಾಳೆ.

ಜಗದ ಸಕಲ ತನುಗಳು ಅರಿವಿನ ಶ್ರೀಪಾದಗಳೆ ಆಗಿವೆ. ಅರಿವು ಇದೆ ಎಂದು ಮನಕ್ಕೆ ಅರಿವಾಗುವುದಿಲ್ಲ. ಅರಿವು ಮನಕ್ಕೆ ತಾನಾಗಿಯೆ ದರ್ಶನ ನೀಡುವುದಿಲ್ಲ. ಮನ ಅರಿವಿನ ದರ್ಶನಕ್ಕಾಗಿ ಹಪ ಹಪಿಸಬೇಕು. ತಾನಾಗಿಯೆ ಅದನ್ನು ಪಡೆಯಲು ಹಗಲಿರುಳು ತವಕಿಸಬೇಕು. ಅರಿವಿಗೆ ಹೋಗುವ ಮಾರ್ಗವನ್ನು ಮನಕ್ಕೆ ಬೋಧಿಸುವ ನಿಪುಣನು ದೊರಕಬೇಕು. ಆಗ ಅರಿವಿಗೆ ಮನ ಒಲಿತು ಆ ಮನವನ್ನು ಘನಮನವನ್ನಾಗಿಸುವುದು. ಹೀಗೆ ಅಕ್ಕನ ಮನ ಘನ ಮನವಾಗಿರುವುದರಿಂದ ಸಂಗನ ಬಸವಣ್ಣನ ಶ್ರೀಪಾದ ಕಂಡು ಬದುಕಿದೆನು ಎಂದು ಹೇಳಿದ್ದಾಳೆ. ಸಕಲ ತನುಗಳ ಮನ ಅರಿವಿಗೆ ಹೋಗುವ ಏಣಿಯನ್ನು ಪರಿಚಯಿಸಿದ್ದಾಳೆ.

☐

# ಮನ ಅರಿವಿಗೆ ಮೊರೆ ಹೋದಡೆ ಗುರುದರ್ಶನ !

**ಅರಸಿ ಮೊರೆವೊಕ್ಕಡೆ ಕಾವ ಗುರುವೆ,**
**ಜಯ ಜಯ ಗುರುವೆ,**
**ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ**
**ಹಿಡಿದೆನ್ನ ಕರದಲ್ಲಿ ತೋರಿದ ಗುರುವೆ,**
**ಚೆನ್ನಮಲ್ಲಿಕಾರ್ಜುನ ಗುರುವೆ, ಜಯ ಜಯ ಗುರುವೆ,**
**ಅರಸಿ ಮೊರೆವೊಕ್ಕಡೆ ಕಾವ ಗುರುವೆ, ಜಯ ಜಯ ಗುರುವೆ:**

ಹಿಂದಿನ ವಚನದಲ್ಲಿ ಅಕ್ಕಮಹಾದೇವಿ ಅರಸಿ ತೊಳಲಿದಡಿಲ್ಲ, ಹರಸಿ ಬಳಲಿದಡಿಲ್ಲ, ಬಯಸಿ ಹೊಕ್ಕಡಿಲ್ಲ, ತಪಸ್ಸು ಮಾಡಿದಡಿಲ್ಲ, ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು ಎಂದು ಖಚಿತವಾಗಿ ಹೇಳುತ್ತಾ , ಈ ವಚನದಲ್ಲಿ ಅರಸಿ ಮೊರೆವೊಕ್ಕಡೆ ಗುರು ಕಾಣುತ್ತಾನೆ ಎನ್ನುತ್ತಾಳೆ.

ವಚನದ ಜಾಡು ಬಲ್ಲ ಮಹಾಂತನಿಗೆ ಮಾತ್ರ ಶರಣರ ಬೆಡಗಿನ ಮಾತುಗಳು ಅರ್ಥವಾಗುತ್ತವೆ. ಮನದಿಂದ ತನುವಿನಲ್ಲಿರುವ ಅರಿವನ್ನು ಹುಡುಕಿ ಆ ಅರಿವಿಗೆ ಮೊರೆಹೊಕ್ಕಲ್ಲಿ ಆ ಅರಿವೇ ಗುರುವಾಗಿ ತನುವನ್ನು ಕಾಯುತ್ತಾನೆ.

ತನುವಿಗೆ ಕಂಟಕವಾಗಿರುವ ಮನವನ್ನು ಹಿಡಿದು ತನ್ನೊಳಗೆ ಲೀನ ಮಾಡಿಕೊಂಡು ತನ್ನಂತೆ ಮಾಡಿಕೊಳ್ಳುತ್ತಾನೆ. ಅಂತಹ ಗುರುವಿಗೆ ಜಯವಾಗಲಿ ಜಯ ಜಯ ಗುರುವೆ ಎಂದು ಹೃದಯ ತುಂಬಿ ಹಾಡಿದ್ದಾಳೆ ಅಕ್ಕ.

**ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ ತೋರಿದ ಗುರುವೆ:**

ತನುವಿನೊಳಗಿದ್ದ ಅರಿವು ತನುಗಳಿಗೆ ದಕ್ಕುವುದು ಶೇ. 0.1 ಎಂದರೆ ತಪ್ಪಾಗಲಿಕ್ಕಿಲ್ಲ. ಕೋಟಿಗೊಬ್ಬ ಶರಣ, ಲಕ್ಷಕ್ಕೊಬ್ಬ ಭಕ್ತ ಎಂದು ಶರಣರೇ ನಿರ್ಧರಿಸಿದ್ದಾರೆ.

ಕಲ್ಯಾಣದಲ್ಲಿ ಒಂದು ಲಕ್ಷ ತೊಂಬತ್ತೈದು ಸಾವಿರ ಜನ ತನುವಿನಲ್ಲಿರುವ ಅರಿವನ್ನು ಹುಡುಕುವುದಕ್ಕಾಗಿ ಕಾತುರದಿಂದ ಕಾದಿದ್ದರು. ಆದರೆ ಅವರಿಗೆ ದಕ್ಕಿದ್ದು ಕೇವಲ 770 ಸಂಖ್ಯೆಯಲ್ಲಿ ಮಾತ್ರ.

ಇದನ್ನು ಭಾಗಿಸಿದಾಗ 254 ಜನರಿಗೆ ಒಬ್ಬ ಶರಣ ತನ್ನ ತನುವಿನ ಅರಿವನ್ನು ಕಂಡುಕೊಂಡು ಆ ಅರಿವಿಗೆ ಶರಣು ಹೋಗಿ ಆ ಅರಿವಿನ ಇರುವಿನಲ್ಲಿ ಮೆರೆದ. ಉಳಿದವರಿಗೆ ಶರಣತ್ವವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಶರಣರೇ ಹೇಳುತ್ತಾರೆ.

ಕೋಟಿಗೊಬ್ಬ ಶರಣ ಎಂಬುದನ್ನು ಶರಣರೇ ಹುಸಿಗೊಳಿಸಿ 254 ಜನರಲ್ಲಿ ಒಬ್ಬರಂತೆ ಶರಣರನ್ನಾಗಿಸಿದರು.1,96,000 ಜನ ಬಂದು ಹೋದರು. 770 ಜನ ಶರಣರಾದರು.

25 ವರ್ಷಗಳ ನಿರಂತರ ಅರಿವಿನ ತಾಂತ್ರಿಕ ಶಿಕ್ಷಣದ ಪರಿಣಾಮದಿಂದ ಕಲ್ಯಾಣದಲ್ಲಿ ಇದು

ಸಾಧ್ಯವಾಯಿತು. ಈ ವಚನದಲ್ಲಿ ಅಕ್ಕಮಹಾದೇವಿ ಯಾರೂ ತಿಳಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ ತೋರಿದ ಗುರುವೆ ಎಂದು ಅರಿವನ್ನು ಕುರಿತು ಹಾಡಿದ್ದಾಳೆ.

ತನುವಿನ ಅರಿವು ಯಾರಿಗೂ ದಕ್ಕದಿದ್ದ ಸಂದರ್ಭದಲ್ಲಿ ಅದನ್ನು ಎನ್ನ ತನುವಿನೊಳಗೆ ತೋರಿದೆ. ತೋರುವ ಆ ತನುವನ್ನು ಬಯಲು ಮಾಡಿ ಬಯಲಾಗಿ ನಿಂದೆ; ಚೆನ್ನಮಲ್ಲಿಕಾರ್ಜುನ ಗುರುವೆ ಜಯ ಜಯ ಗುರುವೆ ಎಂದು ಅಕ್ಕ ತನ್ನ ತನುವಿನ ಅರಿವು ತನಗೆ ದಕ್ಕಿದುದಕ್ಕಾಗಿ ಆ ಅರಿವಿಗೆ ಚನ್ನಮಲ್ಲಿಕಾರ್ಜುನನೆಂದು ಕರೆದು ಗುರುವೆಂದು ಸಂಬೋಧಿಸಿದ್ದಾಳೆ.

ಶರಣರು ಅರಿವಿಗೆ ಗುರುವೆಂದು ಕರೆದಿದ್ದಾರೆ, ಗಂಡನೆಂದು ಕರೆದಿದ್ದಾರೆ, ದೇವರೆಂದು ಕರೆದಿದ್ದಾರೆ. ದೇವರು ಎನ್ನುವುದು ಹೊರಗಿಲ್ಲ, ಹೊರಗಿದ್ದರೂ ಅದನ್ನು ಯಾರೂ ನೋಡಿಲ್ಲ. ಕಲ್ಲು,ಕಟ್ಟಿಗೆ, ಲೋಹಗಳಿಂದ ಕೆತ್ತಲ್ಪಟ್ಟ ಮೂರ್ತಿಗಳನ್ನೇ ದೇವರೆಂದು ಹಲವರು ತಿಳಿದುಕೊಂಡಿದ್ದಾರೆ. ಆ ದೇವರು ಎರೆದರೆ ನೆನೆಯುವುದಿಲ್ಲ, ಮರೆತರೆ ಬಾಡುವುದಿಲ್ಲ ಅಂತಹ ದೇವರು ದೇವರಲ್ಲ.ತನುವು ಎರೆದರೆ ನೆನೆಯುತ್ತದೆ, ಮರೆತರೆ ಬಾಡುತ್ತದೆ. ತನುವಿನೊಳಗೆ ಇರುವ ಅರಿವೆಂಬ ದೇವರು ಆನಂದ ಪಡುತ್ತಾನೆ. ಆದರೆ ಮನ ಕಲ್ಲೆಂದು ವಿಶ್ವಾಸ ಮಾಡುವುದಿಲ್ಲ. ಕೆತ್ತಿದ ಕಲ್ಲನ್ನೇ ಭ್ರಮೆಯಿಂದ ದೇವರೆಂದು ನಂಬಿ ದೇವಾಲಯ, ರಥೋತ್ಸವ, ಕಳಶಾರೋಹಣ, ಛತ್ರಿ ಚಾಮರಗಳನ್ನು ಬೀಸಿ, ಅರಿಶಿಣ, ಕುಂಕುಮ ಗಂಧಾದಿಗಳನ್ನು ಲೇಪಿಸಿ ಹೂವು, ಪತ್ರೆಗಳಿಂದ ಪೂಜಿಸುತ್ತದೆ. ಇದಾವುದಕ್ಕೂ ಆ ಕಲ್ಲಿಗೆ ಆನಂದ ಎನ್ನಿಸುವುದಿಲ್ಲ. ಭ್ರಮೆಯಿಂದ ತಾನೇ ಆನಂದ ಪಡುತ್ತಾನೆ.

ಅರಿಶಿಣ, ಕುಂಕುಮ, ಗಂಧದ ತಿಲಕ ಹಣೆಗೆ ಧರಿಸಿದಾಗ ತನಗೆ ಆನಂದವಾಗುತ್ತದೆ. ಹೂಗಳನ್ನು ತಲೆಗೆ ಮುಡಿದಾಗ ವಾಸನೆಯಿಂದ ತನ್ನ ಮೂಗು ಅರಳಿ ಆನಂದ ಪಡುತ್ತದೆ. ಷಡ್ರಸ ಭಕ್ಷ್ಯಗಳನ್ನು ದೇವರಿಗೆ ಇಡುವುದರಿಂದ ಅದು ತಿನ್ನುವುದಿಲ್ಲ. ತಾನು ತಿಂದರೆ ತನಗೆ ಅಮಿತಾನಂದವಾಗುತ್ತದೆ. ಪಟ್ಟು ಪೀತಾಂಬರಗಳನ್ನು ದೇವರಿಗೆ ಉಡಿಸುತ್ತಾನೆ.ಅದು ಆನಂದಪಡುವುದಿಲ್ಲ. ಬತ್ತಲೆಯಿದ್ದರೆ ಅದಕ್ಕೆ ನಾಚಿಕೆಯೂ ಆಗುವುದಿಲ್ಲ. ಅದನ್ನು ತಾನು ತೊಟ್ಟರೆ ತನಗೆ ಅತ್ಯಂತ ಸಂತೋಷವಾಗುತ್ತದೆ. ಹೀಗೆ ವಿಚಾರಿಸುವ ಮನದಿಂದಲೇ ಅರಿವಿಗೆ ಹೋದಾಗ ಪೂಜಿಸುವ ವಸ್ತು ವಸ್ತುವಿನ ಮೂಲ ತನಗೇ ಗೋಚರಿಸುತ್ತದೆ. ಆಗ ದೇವರು, ಗುರು, ಗಂಡ ಯಾರೆಂದು ತನಗೆ ಗೋಚರಿಸುತ್ತದೆ.

ಅಕ್ಕಮಹಾದೇವಿ ಮತ್ತೊಂದು ವಚನದಲ್ಲಿ ಅರಿಯದವರೊಡನೆ ಸಂಗವ ಮಾಡಿದೊಡೆ ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ ಎಂದಿದ್ದಾರೆ. ಕಲ್ಲು ಕಿಡಿಯನ್ನು ಕೊಡಬಲ್ಲುದೇ ಹೊರತು,ಅರಿವನ್ನು ಕೊಡಲಾರದು. ತನಗೆ ಅರಿವಾದಾಗ ಕೆತ್ತಿದ ಮೂರ್ತಿ ಕಲ್ಲೆಂದು ಗೋಚರಿಸುತ್ತದೆ.

ಆಗ ಹುಡುಕುವ ದೇವರು ತನ್ನ ತನುವಿನಲ್ಲೇ ದಕ್ಕಿ ಕಲ್ಲಿಗೆ ಮೊರೆ ಹೋಗುವುದಿಲ್ಲ, ಮೂರ್ತಿಯನ್ನು ಕಲ್ಲೆಂದು ಗುರುತಿಸಿ ಕಲ್ಲನ್ನು ಪೂಜಿಸುವುದಿಲ್ಲ, ದೇವಸ್ಥಾನಕ್ಕೂ ಹೋಗುವುದಿಲ್ಲ.

□

# ಅರಿವಿನ ನಿರ್ಣಯವಿಲ್ಲದೆ ತನುವಿನ ಸೋಲು !

**ಅರಿದೆನೆಂದಡೆ ಅರಿಯಬಾರದು ನೋಡಾ.**
**ಘನಕ್ಕೆ ಘನ ತಾನೆ ನೋಡಾ.**
**ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು.**

**ಅರಿದೆನೆಂದಡೆ ಅರಿಯಬಾರದು ನೋಡಾ :**

ಅರಿಯುವ ಜ್ಞಾನ ಪುಸ್ತಕದಲ್ಲಿಲ್ಲ. ಶಾಲಾ ಕಾಲೇಜುಗಳಲ್ಲಿಯು ಇಲ್ಲ. ವಿಶ್ವವಿದ್ಯಾಲಯಗಳಲ್ಲಿ ಮೊದಲೆ ಇಲ್ಲ. ಅರಿಯುವ ಜ್ಞಾನ ಅರಿಯದಂತೆ ನೋಡುವ ಕಣ್ಣಿನಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ಕೇಳುವ ಕಿವಿಯಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ಸ್ಪರ್ಶಿಸುವ ಚರ್ಮದಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ರುಚಿಸುವ ನಾಲಗೆಯಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ವಾಸಿಸುವ ಮೂಗಿನಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ತನುವಿನ ಕಣ ಕಣದಲ್ಲಿ ನೆಲೆಸಿದೆ. ಹೀಗಿದ್ದರೂ ಅರಿಯಲು ಬಾರದಂತೆ ಆಗಿದೆ.

ಕಣ್ಣಿನಲ್ಲಿ ಸೃಷ್ಟಿಯಾದ ರೂಪ ತನ್ನಂತೆ ಇದ್ದರೂ ಕಾಮ ದ್ವೇಷ ಅಸಹ್ಯ ಪಡುವಂತಹ ಹಾಗೂ ಪ್ರೀತಿಸಿ ಆರಾಧಿಸುವಂತಹ ಬಯಕೆ ತನುವಿನಲ್ಲಿ ಹುಟ್ಟುತ್ತದೆ. ಇದು ಅಜ್ಞಾನದ ಕಣ್ಣು. ಹಾಗೆಯೆ ನೋಡುವ ಕಣ್ಣಿನ ಕಣ್ಣಿನಲ್ಲಿ ತನ್ನಂತಹದೆ ರೂಪಕ್ಕೆ ಕಾರಣವಾದ ನಿರೂಪ ಸೃಷ್ಟಿಯಾಗಿ; ಯಾವ ಭಾವವಿಲ್ಲದೆ ನಿರ್ಭಾವದಿಂದ ಸಹಜತೆಯಿಂದ ನೋಡುತ್ತದೆ. ಈ ಅರಿವು ಕೂಡಾ ಕಣ್ಣಿನಲ್ಲಿಯೆ ಇದೆ. ಒಂದು ತನುವಿನ ಮನದ ಅರಿವು ಆದರೆ ಮತ್ತೊಂದು ತನುವಿನ ಅರಿಯಬಾರದ ಅರಿವು !

**ಘನಕ್ಕೆ ಘನ ತಾನೆ ನೋಡಾ :**

ತನುವಿನ ರೂಪ ನೋಡಿ ಕಾಮುಕನಾಗುವುದು, ದ್ವೇಷಿಸುವುದು, ಪ್ರೀತಿಸುವುದು; ಇದರಿಂದ ಸುಖವು ಇದೆ ದು:ಖವು ಇದೆ. ಇದು ಕಣ್ಣನ್ನು ಆವರಿಸಿದ ಮನದ ಗುಣ. ತನುವಿನ ರೂಪಕ್ಕೆ ಕಾರಣವಾದ ನಿರೂಪ ನೋಡುವ ಕಣ್ಣು ಕೂಡಾ ಕಣ್ಣಿನಲ್ಲಿಯೆ ಇದೆ. ಇದು ಕಣ್ಣಿನ ಅರಿವಿನ ಸಹಜ ಗುಣ. ಇದರಲ್ಲಿ ಯಾವ ಲೋಪದೋಷಗಳು ಬೆರತಿಲ್ಲ. ಇದು ಘನಕ್ಕೆ ಘನವಾದ ಕಣ್ಣು ; ಅರಿವಿನ ಕಣ್ಣು!

**ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು :**

ತನುವಿನಲ್ಲಿ ಸಹಜ ಅರಿವಿನ ಬೆಳಕು ಇದೆ. ಆ ಬೆಳಕಿನಿಂದ ಮನ ಎಂಬ ಇಲ್ಲದ ಹೆಸರಿನ ಕತ್ತಲು ತನುವನ್ನು ಆವರಿಸಿಕೊಂಡಿದೆ. ಕತ್ತಲು ಸಕಲ ವಸ್ತುಗಳನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡು ಕಾಣದಂತೆ ಮಾಡುತ್ತದೆ. ಆ ವಸ್ತುಗಳನ್ನು ಪುನಃ ಸಹಜವಾಗಿ ನೋಡಬೇಕಾದರೆ ಸೂರ್ಯನ ಬೆಳಕಿನ ಅವಶ್ಯಕತೆ ಬೇಕು. ಬೆಳಕು ಆ ವಸ್ತುಗಳ ಮೇಲೆ ಬಿದ್ದಾಗ ಎಲ್ಲ ವಸ್ತುಗಳು ಕಾಣುತ್ತವೆ. ಬೆಳಕು ಯಾವ ವಸ್ತುಗಳನ್ನು ತೆಗೆದುಕೊಳ್ಳುವುದಿಲ್ಲ. ನೋಡಿ ಆನಂದ

ಪಡುವ ಗುಣವು ಸೂರ್ಯನ ಬೆಳಕಿಗಿಲ್ಲ. ಆದರೆ ಕಣ್ಣಿನಿಂದ ನೋಡುವ ತನು ಯಾವ ವಸ್ತುಗಳನ್ನು ಬಿಡುವುದಿಲ್ಲ. ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಕಣ್ಣು ಯಾವ ವಸ್ತುವನ್ನು ಮುಟ್ಟುವುದಿಲ್ಲ! ನೋಡಿ ಆನಂದ ಪಡುವ ಸಹಜ ಗುಣವು ಕೂಡಾ ಆತನ ಕಣ್ಣಿಗೆ ಇದೆ ! ಆ ಅರಿವೆಂಬ ಚೆನ್ನಮಲ್ಲಿಕಾರ್ಜುನನ್ನ ನಿರ್ಣಯವಿಲ್ಲದ ನಿಮಿತ್ತ ಕಳ್ಳ ಸುಳ್ಳ ಹಾದರಿಗ ಭ್ರಷ್ಟಾಚಾರಿ ಅಹಂಕಾರಿ ಕೊಲೆಗಡುಕ ವೇಶ್ಯೆ ವಿಟ ಮುಂತಾದ ಹಣೆ ಪಟ್ಟಿ ಹಚ್ಚಿಕೊಂಡು ತನು ಸೋಲುತ್ತದೆ. ಅರಿವಾಗದಿದ್ದರೆ ಅಂಗ ; ಅರಿವಾದರೆ ಅಂಗವೇ ಲಿಂಗ !

□

**ಅರಿವಿನ ಪರಿಮಳ**

□ ಅರಿಯುವ ಜ್ಞಾನ ಪುಸ್ತಕದಲ್ಲಿಲ್ಲ. ಶಾಲಾ ಕಾಲೇಜುಗಳಲ್ಲಿಯು ಇಲ್ಲ. ವಿಶ್ವವಿದ್ಯಾಲಯಗಳಲ್ಲಿ ಮೊದಲೆ ಇಲ್ಲ. ಅರಿಯುವ ಜ್ಞಾನ ಅರಿಯದಂತೆ ನೋಡುವ ಕಣ್ಣಿನಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ಕೇಳುವ ಕಿವಿಯಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ಸ್ಪರ್ಶಿಸುವ ಚರ್ಮದಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ರುಚಿಸುವ ನಾಲಗೆಯಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ವಾಸಿಸುವ ಮೂಗಿನಲ್ಲಿಯೆ ನೆಲೆಸಿದೆ. ಅರಿಯುವ ಜ್ಞಾನ ಅರಿಯದಂತೆ ತನುವಿನ ಕಣ ಕಣದಲ್ಲಿ ನೆಲೆಸಿದೆ. ಹೀಗಿದ್ದರೂ ಅರಿಯಲು ಬಾರದಂತೆ ಆಗಿದೆ.

□ ತನುವಿನ ರೂಪ ನೋಡಿ ಕಾಮುಕನಾಗುವುದು, ದ್ವೇಷಿಸುವುದು, ಪ್ರೀತಿಸುವುದು; ಇದರಿಂದ ಸುಖವು ಇದೆ ದು:ಖವು ಇದೆ. ಇದು ಕಣ್ಣನ್ನು ಆವರಿಸಿದ ಮನದ ಸಹಜ ಗುಣ. ತನುವಿನ ರೂಪಕ್ಕೆ ಕಾರಣವಾದ ನಿರೂಪ ನೋಡುವ ಕಣ್ಣು ಕೂಡಾ ಕಣ್ಣಿನಲ್ಲಿಯೆ ಇದೆ. ಇದು ಕಣ್ಣಿನ ಅರಿವಿನ ಸಹಜ ಗುಣ.

# ತನುವಿನ ಅರಿವು ಬಳಕೆ ಮಾಡಿಕೊಂಡವನೆ ಅರಿತವ

**ಅರಿಯದವರೊಡನೆ ಸಂಗವ ಮಾಡಿದೊಡೆ**
**ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ.**
**ಬಲ್ಲವರೊಡನೆ ಸಂಗವ ಮಾಡಿದೊಡೆ**
**ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.**
**ಚೆನ್ನಮಲ್ಲಿಕಾರ್ಜುನಯ್ಯ , ನಿಮ್ಮ ಶರಣರ ಸಂಗವ ಮಾಡಿದಡೆ**
**ಕರ್ಪುರದ ಗಿರಿಯನುರಿಕೊಂಬಂತೆ**

**ಅರಿಯದವರೊಡನೆ ಸಂಗವ ಮಾಡಿದೊಡೆ ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ:**

ಅರಿತವರೆಂದರೆ ತಮ್ಮನ್ನು ತಾವು ಅರಿತವರೆ ಅರಿತವರು. ಅರಿಯದವರೆಂದರೆ ತಮ್ಮನ್ನು ತಾವು ಅರಿಯದವರೆ ಅರಿಯದವರು. ತನ್ನನ್ನು ತಿಳಿಯಬೇಕೆಂಬ ಬಯಕೆ ತನಗಾದಾಗ, ತಮ್ಮನ್ನು ತಾವು ಅರಿಯದವರ ಸಂಗ ಮಾಡಿದರೆ ತನಗೂ ನಷ್ಟ ,ತನಗೆ ಪಾಠ ಹೇಳುವವನಿಗೂ ನಷ್ಟ. ತನುವಿನಲ್ಲಿ ಉಂಟಾಗುವ ತೊಂದರೆಗಳು ಮತ್ತು ಅದರ ನಿವಾರಣೆಗಳು ಪಾಠಮಾಡುವವನಿಗೆ ತಿಳಿದಿರಬೇಕು.ಅದನ್ನು ಭಗವದ್ಗೀತೆ, ಬೈಬಲ್, ವಚನಗಳು, ದಾಸರ ಪದ, ತತ್ವಪದಗಳು ನಿಜಗುಣಾರ್ಯರ ಶಂಕರರ ತತ್ವ ಪುಸ್ತಕಗಳ ಮೂಲಕ ಹೇಳಿ ಹಣ ಮಾಡುವವ, ಹಣಕೊಟ್ಟು ಕೇಳುವವ, ಇವರಿಬ್ಬರೂ ತಮ್ಮನ್ನು ತಾವು ಮೋಸ ಮಾಡಿಕೊಳ್ಳುವರು.

ಪುಸ್ತಕಗಳು ಓದಿದರೆ, ಓದುವುದನ್ನು ಕೇಳಿದರೆ, ಓದಿದ್ದನ್ನು ಉದಾಹರಿಸಿ ಹೇಳಿದರೆ ಸಂತೋಷವಾಗುತ್ತದೆ. ಆದರೆ ಕಣ್ಣು ಒಂದು ತನುವನ್ನು ನೋಡಿದಾಗ ತನ್ನ ತನುವಿನಲ್ಲಿ ತನಗೆ ಸಂಕಟ ಉಂಟಾಗುತ್ತದೆ. ತನುವು ತನುವಿನೊಂದಿಗೆ ಹಾದರ ಮಾಡುತ್ತದೆ. ಯಾರ ಸುಳಿವು ಇಲ್ಲದಿದ್ದಾಗ ತನುವು ತನುವಿನೊಂದಿಗೆ ಅತ್ಯಾಚಾರಕ್ಕೆಳೆಸುತ್ತದೆ . ಆಗ ತನಗೆ ಆಪತ್ಕಾಲ ಬಂದೊದಗಿರುತ್ತದೆ. ಅದನ್ನು ಪರಿಹರಿಸುವುದು ಕೇಳಿದ ಶಬ್ದಗಳಿಂದ, ಹೇಳಿದ ಪಾಠಗಳಿಂದ, ಓದಿದ ಪುಸ್ತಕಗಳಿಂದ ಸಾಧ್ಯವಾಗುವುದಿಲ್ಲ.

ಹಣದಾಸೆಗೆ ಗುರುವಾದವನು ಇದನ್ನು ಅರಿಯಲಾರ. ಹಣವೆ ಆತನ ಮೂಲವಸ್ತು. ಸ್ವತಹ ಗುರುವಾದವನು ಕೂಡಾ ಈ ಆಪತ್ಕಾಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ತಾನು ಏಕೆ ಗುರುವಾದೆನೆಂಬ ಅರಿವು ಕೂಡಾ ಅರಿಯದವನಿಗೆ ಸುಳಿಯುವುದಿಲ್ಲ. ಇದು ವೇಷ ಹಾಕಿಕೊಂಡು ಅರಿವು ಹೇಳುವ ಕಾಯಕದಲ್ಲಿದ್ದವನಿಗೆ ಎಟುಕದ ಮಾತು. ಈ ವಿಷಯದಲ್ಲಿ ಹಿಂದು, ಕ್ರೈಸ್ತ, ಫಾರ್ಸಿ, ಮುಸಲ್ಮಾನ ,ಬೌದ್ಧ , ಜೈನ,ವೀರಶೈವ, ಗುರುಗಳು ಎನ್ನುವಂತಿಲ್ಲ. ಹೀಗೆ ಹೆಸರಿಟ್ಟುಕೊಂಡವರೆಲ್ಲ ತನುವಿನ ಸಂಕಟದಿಂದ ಹೊರತಾದವರಲ್ಲ.

ಕಣ್ಣು ,ಕಿವಿ, ಮೂಗು, ಚರ್ಮ, ನಾಲಗೆ ಎಂಬ ಪಂಚೇಂದ್ರಿಯಗಳು ತನುವಿಗೆ ಉಂಟು ಮಾಡುವ ಆಪತ್ಕಾಲವನ್ನು ಕಳೆದುಕೊಳ್ಳಲು ಅರಿಯದವರೊಡನೆ ಸಂಗವ ಮಾಡಿ ದೊಡೆ ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ ಎಂದಿದ್ದಾಳೆ ಅಕ್ಕ.

**ಬಲ್ಲವರೊಡನೆ ಸಂಗವ ಮಾಡಿದೊಡೆ ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ:**

'ನಿತ್ಯನಿರಂಜನ ತಾನೆಂದರಿಯದೆ 'ತತ್ವಮಸಿ' ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿ ಸಾವ. ತಮ್ಮ ತಾವರಿಯದೆ ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರ.' ಎಂದು ಅಲ್ಲಮ ಪ್ರಭುಗಳು ತನ್ನನ್ನು ತಾನು ಅರಿಯುವ ಬಯಕೆಯಾದ ತನುವಿಗೆ ಸುಂದರವಾದ ಸೂತ್ರ ಕೊಟ್ಟಿದ್ದಾರೆ.

ಭಗವದ್ಗೀತೆ, ಬೈಬಲ್ ಮುಂತಾದ ಗ್ರಂಥಗಳನ್ನು ಸಂತರು ಅರಿಯುವ ತನುಗಳಿಗೆ ಅನುಕೂಲವಾಗಲೆಂದು ಬರೆದಿಟ್ಟು ಸತ್ತು ಹೋಗಿದ್ದಾರೆ. ಜಗತ್ತಿನ ಗ್ರಂಥಗಳೆಲ್ಲ ತನುವಿನಿಂದ ಹೊರಬಂದಿವೆ. ಅವುಗಳನ್ನು ಬರೆದವರೆಲ್ಲ ಇಲ್ಲ. ಅವು ಸತ್ತವರ ಪತ್ರಗಳು. ಅವುಗಳನ್ನು ಓದಿ ಪಠಿಸಿದರೆ, ತನುವಿನಲ್ಲಿ ಸಂಗ್ರಹಿಸಿಕೊಂಡರೆ ತನುವು ಆಪತ್ಕಾಲದಲ್ಲಿದ್ದಾಗ ತನುವನ್ನು ಅವು ಪಾರು ಮಾಡಲು ಅರಿಯವು. ತನುವಿನಲ್ಲಿದ್ದ ಅರಿವು ಬಳಕೆಯಾದರೆ ಮಾತ್ರ ತನುವು ಅಪರಾಧ ವೆಸಗುವುದಿಲ್ಲ. ಅಲ್ಲದೆ ಆಪತ್ಕಾಲದಿಂದಲೂ ಪಾರಾಗಬಲ್ಲದು. ಇದನ್ನು ಅರಿವು ಬಲ್ಲವರ ಸಂಗ ಮಾಡಿ ತನುವಿನ ಅರಿವನ್ನು ತನುವೆ ಪಡೆದುಕೊಳ್ಳಬೇಕು.

ಬಲ್ಲವರೆಂದರೆ ತನುವಿನಲ್ಲಿ ಬಲ್ಲುದುದನ್ನು ತನುವಿಗೆ ಹೇಳಿ, ತನುವಿನ ಸಂಕಟ ಕಳೆಯುವ ತಂತ್ರಜ್ಞರು. ಕೇಳಲು ಬಂದ ತನುವಿನಲ್ಲಿಯೆ ಪರಿಹಾರ ಸೂಚಿಸುವ ನಿಪುಣರು. ಅವರು ಗುರುಗಳು ಎಂದು ಹೇಳಿಕೊಳ್ಳುವುದಿಲ್ಲ. ಕೇಳಲು ಬಂದವರನ್ನು ಶಿಷ್ಯರು ಎಂದು ಹೇಳುವುದಿಲ್ಲ. ಏಕೆಂದರೆ ಹೇಳುವ ತನುವಿನಲ್ಲಿ ಮನ ಮತ್ತು ಅಜ್ಞಾನ ನಷ್ಟವಾಗಿ ಅರಿವು ಸಂಪೂರ್ಣ ಬಳಕೆಯಾಗುತ್ತದೆ. ಕೇಳಲು ಬಂದ ತನುವಿನಲ್ಲಿ ಮನ ಮತ್ತು ಮರೆವು ಮಾತ್ರ ಬಳಕೆಯಾಗುತ್ತದೆ. ಜ್ಞಾನ ಒಂದಿಷ್ಟೂ ಬಳಕೆಯಾಗದೆ ಹಾಗೆ ಉಳಿದಿದೆ. ಗುರುವಾದವನು ತನುವಿನ ಅರಿವನ್ನು ತಂತ್ರಗಾರಿಕೆಯಿಂದ ಬಳಕೆಮಾಡುವ ಬಗೆಯನ್ನು ಹೇಳಿದಂತೆಲ್ಲ; ಕೇಳುಗನ ತನುವಿನಲ್ಲಿ ಮೊಸರು ಹೊಸೆದು ಬೆಣ್ಣೆಯ ತೆಗೆದುಂಬುವ ಅನುಭವದ ಆನಂದವಾಗುತ್ತದೆ.

**ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗವ ಮಾಡಿದಡೆ ಕರ್ಪುರದ ಗಿರಿಯನು ಉರಿಕೊಂಬಂತೆ :**

ತನುವಿನ ಅರಿವೆಂಬ ಚೆನ್ನಮಲ್ಲಿಕಾರ್ಜುನಯ್ಯನೆ ನಿಮ್ಮನ್ನು ಬಲ್ಲವರೆ ಶರಣರು . ಅವರ ಸಂಗವ ಮಾಡಿದಡೆ ಕರ್ಪುರದ ಗಿರಿಯನ್ನು ಉರಿಯಕೊಂಬಂತೆ. ಕಲ್ಲು ಕಲ್ಲು ಹೊಡೆದರೆ ಕಿಡಿ ಹೊರಗೆ ಬರುತ್ತದೆ. ಕಲ್ಲುಗಳು ಹಾಗೆ ಉಳಿಯುತ್ತವೆ. ಕರ್ಪುರ ಕಾಣುತ್ತದೆ. ಉರಿಯು ಕಾಣುತ್ತದೆ. ಉರಿ ಕರ್ಪುರ ತಾಗಿದರೆ ಕರ್ಪುರವೂ ಕಾಣುವುದಿಲ್ಲ ಉರಿಯೂ ಕಾಣುವುದಿಲ್ಲ. ಎರಡು ಬಯಲಲ್ಲಿ ಬೆರೆತು ಬಯಲಾಗುತ್ತವೆ. ಹಾಗೆಯೆ ಜ್ಞಾನಿಗಳ ಶರಣರ ಸಂಗವು ಬೆಣ್ಣೆಯ ಮೆದ್ದಂತೆ ಹಿತವೆನಿಸುತ್ತದೆ ಎಂದಿದ್ದಾರೆ ಅಕ್ಕಮಹಾದೇವಿ.

□

# ತತ್ವವೇತ್ತ ತನುವೆ ಚತುರ್ವಿಧ ಹೊಲಬನರಿತ ತನು

ಅರ್ಥಸನ್ಯಾಸಿಯಾದಡೇನಯ್ಯಾ,
ಆವಂಗದಿಂದ ಬಂದಡೂ ಕೊಳದಿರಬೇಕು.
ರುಚಿಸನ್ಯಾಸಿಯಾದಡೇನಯ್ಯಾ,
ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು.
ಸ್ತ್ರೀ ಸನ್ಯಾಸಿಯಾದಡೇನಯ್ಯಾ,
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು.
ದಿಗಂಬರಿಯಾದಡೇನಯ್ಯಾ, ಮನ ಬತ್ತಲೆ ಇರಬೇಕು.
ಇಂತೀ ಚತುರ್ವಿಧದ ಹೊಲಬರಿಯದೆ ವೃಥಾ ಕೆಟ್ಟರು
ಕಾಣಾ ಚೆನ್ನಮಲ್ಲಿಕಾರ್ಜುನಾ.

**ಅರ್ಥಸನ್ಯಾಸಿಯಾದಡೇನಯ್ಯಾ, ಆವಂಗದಿಂದ ಬಂದಡೂ ಕೊಳದಿರಬೇಕು :**

ಸನ್ಯಾಸಿಯಾದವನು ಅರ್ಥ, ರುಚಿ, ಸ್ತ್ರೀ, ದಿಗಂಬರತ್ವ ಈ ನಾಲ್ಕು ತತ್ವಗಳನ್ನು ಸಹಜವಾಗಿ ಪಾಲಿಸುವ ಸೂತ್ರವನ್ನು ಬಲ್ಲವರಿಂದ ತಿಳಿದಿರಬೇಕು. ಇಲ್ಲದಿದ್ದರೆ ತೋರಿಕೆಗೆ ಮಾತ್ರ ದಿಗಂಬರಿಯಾಗಿರುತ್ತಾನೆ. ಅರ್ಥ ರುಚಿ ಮತ್ತು ಸ್ತ್ರೀ ಸಂಗದಲ್ಲಿಯೆ ಸದಾ ನಿರತನಾಗಿರುತ್ತಾನೆ.

ಸನ್ಯಾಸಿ ಎನ್ನುವುದು ಒಂದು ಗೌರವದ ವ್ಯವಹಾರವಾಗಿದೆ. ಮಠ ಪೀಠಗಳಿಗೆ ಆಶ್ರಮಗಳಿಗೆ ಪ್ರಾರ್ಥನಾ ಮಂದಿರಗಳಿಗೆ ವಟುಗಳನ್ನು ತಂದು ಕೂಡಿಸಿ ಪಟ್ಟಕ್ಕೆ ಹಾಕಿ ಸನ್ಯಾಸಿಗಳನ್ನು ಮಾಡುವುದು ಆಯಾ ಧರ್ಮದ ಸಂಪ್ರದಾಯವೆ ಆಗಿದೆ. ತಂದು ಕೂಡಿಸಿದವನಿಗೆ ಈ ನಾಲ್ಕು ತತ್ವಗಳನ್ನು ಪಾಲನೆ ಮಾಡಲು ಸಾಧ್ಯವಾಗುವುದಿಲ್ಲ. ಮಂಡೆ ಬೋಳಿಸಿಕೊಂಡು ದಿಗಂಬರಿಯಾಗಿರಬಹುದು ಅಥವಾ ಕಾವಿ ತೊಟ್ಟು ವೇಷಧಾರಿಯಾಗಿರಬಹುದು ಅರ್ಥ ರುಚಿ ಮತ್ತು ಸ್ತ್ರೀ ಸಂಗ ತೊರೆಯುವುದು ಸಾಧ್ಯವಾಗುವುದಿಲ್ಲ.

ಹಣ ಆಭರಣದ ಮೂಲ ತಿಳಿದರೆ ಮಾತ್ರ ಅದು ಯಾವ ರೂಪದಿಂದ ಬಂದರೂ ಅರ್ಥಕ್ಕೆ ಸನ್ಯಾಸಿ ಬಲಿಯಾಗಲಾರ. ಅರ್ಥವನ್ನೆ ನೆಚ್ಚಿಕೊಂಡು ಮಠಕ್ಕೆ ಬಂದ ಸನ್ಯಾಸಿಗೆ ಅರ್ಥಬಿಡಲು ಹೇಗೆ ಸಾಧ್ಯವಾಗುತ್ತದೆ. ಮಠದ ಆಸ್ತಿ ಭೂಮಿ ನಗದು ಹಣ ಬ್ಯಾಂಕ್ ಬ್ಯಾಲೆನ್ಸ್ ಇವೆಲ್ಲವುಗಳನ್ನು ನೋಡಿಯೇ ಮಠಕ್ಕೆ ಸ್ವಾಮಿಯಾಗಿರುತ್ತಾನೆ. ತಾನು ಪೀಠಕ್ಕೆ ಬಂದ ಮೇಲೆ ಹಣವುಳ್ಳ ಶಿಷ್ಯರನ್ನೆ ಬರಮಾಡಿಕೊಂಡು ಸನ್ಮಾನ ಮಾಡಿ ಅವರಿಂದ ಮತ್ತಷ್ಟು ಹಣ ಪಡೆದು ಮಠವನ್ನು ಆರ್ಥಿಕ ಸಂಪತ್ತಿನಿಂದ ಇಮ್ಮಡಿಗೊಳಿಸುತ್ತಾನೆ. ಶಾಲಾ ಕಾಲೇಜುಗಳನ್ನು ನಿರ್ಮಿಸಿ ತೋಟ ಪಟ್ಟಿಗಳನ್ನು ಕೊಂಡು ಓಡಾಡಲು ವಾಹನ ವಿಮಾನಗಳನ್ನು ಕೊಂಡು ಅದರಲ್ಲಿ ಮೆರೆಯುತ್ತಾನೆ. ಈತನೆ ನಿಜವಾದ ಸ್ವಾಮಿ ಎಂದು ಸ್ವಾಮಿಯಾದವನಿಗೆ ಹಾಗೂ ಸಮಾಜಕ್ಕೆ ದೃಢ ನಿರ್ಧಾರವಾಗಿದೆ. ಅರ್ಥದ ವ್ಯಾಮೋಹವನ್ನು ಬಿಡಬೇಕೆಂದು ಈತನಿಗೆ ತಿಳಿದಿರುವುದಿಲ್ಲ. ಇನ್ನು ಸಮಾಜಕ್ಕೆ ಅರ್ಥ ವ್ಯಾಮೋಹ ಬಿಡಿಸುವದಂತೂ ಈತನಿಗೆ ಸಾಧ್ಯವಾಗದ ಮಾತು.

ಅರ್ಥ ವಿನಿಮಯಕ್ಕಾಗಿ ಮಾತ್ರ ಬಳಕೆಯಾಗುವ ಸಂಪತ್ತು. ಇದರಲ್ಲಿ ಕರೆನ್ಸಿ, ಚಿನ್ನ, ಬೆಳ್ಳಿ, ವಜ್ರ, ಮುಂತಾದ ವಸ್ತುಗಳು ಬರುತ್ತವೆ. ಇವೆಲ್ಲ ಜಡ. ತಾನು ಮಾತ್ರ ಚೇತನ. ಚಿನ್ನದ ಮೂಲ ನೋಡಲು ಹೋದರೆ ಅದು ಮಣ್ಣಿನ ಗರ್ಭದಲ್ಲಿ ಸೃಷ್ಟಿಯಾದ ಲೋಹ. ಮಣ್ಣಿ ಮರೆಯಲ್ಲಿದ್ದು , ಮಣ್ಣಿನ ಪಾತ್ರೆಯಲ್ಲಿ ಕುದ್ದು ಹಳದಿ ಬಣ್ಣದಿಂದ ಅರಳಿದ ಒಂದು ಜಡ ವಸ್ತು. ಬಣ್ಣವೇ ಈ ಲೋಹಕ್ಕೆ ಪ್ರಧಾನ. ಅರಿವಿನಿಂದ ಕೂಡಿ ತತ್ವವೇತ್ತನೆಂದು ಮೆರೆಯುತ್ತಿರುವ ತಾನು, ಹಳದಿ ಬಣ್ಣ ಮತ್ತು ಮಾಟಕ್ಕೆ ಮೋಸ ಹೋಗುತ್ತಿರುವುದು ಒಂದು ದುರ್ದೈವದ ಸಂಗತಿಯಲ್ಲವೆ? ಹಾಗೆಯೇ ಕರೆನ್ಸಿ ಎನ್ನುವುದು ಕೂಡಾ ಒಂದು ಕಾಗದ. ಅದರ ಮೇಲೆ ಆ ನಾಡಿನ ಮುಖ್ಯಸ್ಥನ ಸಹಿಯೊಂದಿದೆ. ಅದಕ್ಕೆ ತತ್ವವೇತ್ತನಾದ ತಾನು ಮಾರು ಹೋಗುವುದೇ? ಶಬ್ದಕ್ಕಾಗಿ, ರುಚಿಗಾಗಿ, ಸಂಪತ್ತಿಗಾಗಿ,ಸಂಸಾರದಲ್ಲಿ ಕಂಗಾಲಾಗಿ ಶಾಂತಿ ಹುಡುಕುತ್ತ ಮಠಕ್ಕೆ ಬಂದ ಶಿಷ್ಯರಿಂದ ಇವುಗಳನ್ನು ಬೇಡಿ ಪಡೆಯುವುದೇ? ಇದು ಸನ್ಯಾಸಿಯಾದವನಿಗೆ ಉಚಿತವೆ? ಸಮಾಧಾನ ಬೇಡಲು ಬಂದವನನ್ನೇ ಬೇಡುವವನು ಸನ್ಯಾಸಿ ಹೇಗಾದಾನು? ಸಂಪತ್ತು ಯಾವ ಅಂಗದಿಂದ ಬಂದರೂ ಅದನ್ನು ಸೂತ್ರದಿಂದ ತಿಳಿದು ಸಹಜ ಭಾವದಿಂದ ತಿರಸ್ಕರಿಸುವವನೆ ನಿಜವಾದ ಅರ್ಥಸನ್ಯಾಸಿ ಎಂದು ಅಕ್ಕ ಘೋಷಿಸಿದ್ದಾಳೆ.

**ರುಚಿ ಸನ್ಯಾಸಿಯಾದಡೇನಯ್ಯಾ, ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು:**

ನಾನಾ ರುಚಿಕರವಾದ ಪದಾರ್ಥಗಳನ್ನು ಭೋಗಿಸುವ ಲಾಲಸೆಯಿಂದಾಗಿಯೆ ಸನ್ಯಾಸ ಸ್ವೀಕರಿಸಿದವರಿಗೆ ಇದು ಸಾಧ್ಯವಾಗದ ಮಾತು. ಸನ್ಯಾಸಿಯಾದವರು ರುಚಿಯ ಮೂಲದ ಗುಟ್ಟನ್ನು ತಿಳಿದು ಸ್ವಾಮಿಯಾಗಬೇಕು. ರುಚಿಯೆನ್ನುವುದು ಪದಾರ್ಥದಲ್ಲಿದೆಯೊ, ನಾಲಗೇಯಲ್ಲಿದೆಯೊ ಎಂಬುದನ್ನು ಸನ್ಯಾಸಿಯಾದವರು ತಮ್ಮ ದೀಕ್ಷಾ ಗುರುಗಳಿಂದ ತಿಳಿದಿರಬೇಕು. ಅಂದರೆ ಮಾತ್ರ ನಾಲಗೆಯ ಕೊನೆಯಲ್ಲಿ ತಾಗುವ ಪದಾರ್ಥದ ಮಧುರವನ್ನು ಅರಿಯುತ್ತಾನೆ. ಅದಕ್ಕಾಗಿ ತನ್ನ ಮಾನ ಕಳೆದುಕೊಳ್ಳುವುದಿಲ್ಲ. ಹಾಗೆಯೇ ರುಚಿಗಾಗಿ ನಡೆಯುವ ಕುಟುಂಬದ ಕಲಹಗಳ ಕುರಿತು ಶಿಷ್ಯರಿಗೆ ಮನದಟ್ಟಾಗುವಂತೆ ಹೇಳಿ ಸಮಾಧಾನ ಪಡಿಸುತ್ತಾನೆ.

ರುಚಿ ಎನ್ನುವುದು ಪದಾರ್ಥದಲ್ಲಿಯೂ ಇಲ್ಲ, ನಾಲಗೆಯಲ್ಲಿಯೂ ಇಲ್ಲ. ಜಲಬಿಂದು ಗರ್ಭಸೇರಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚ ಹೊಂದಿ ತನು ಹೊರಬಂದಿದೆ. ತನು ಜಲದಿಂದಾದದ್ದು. ಹಾಗೆಯೇ ಜಲಹರಿದು ಕಬ್ಬು ಬೇಳೆಕಾಳು ಮೆಣಸಿನಕಾಯಿ ಈರುಳ್ಳಿ ಬೆಳ್ಳುಳ್ಳಿ ನೆಲಗಡಲೆ ಹೀಗೆ ರುಚಿಯ ಪದಾರ್ಥಗಳು ಕೂಡಾ ಜಲದಿಂದಲೆ ಸೃಷ್ಟಿಯಾಗಿವೆ. ಒಂದರಿಂದ ನೂರು ಕೆಜಿ ತೂಕದ ಜಲಭರಿತ ತನುವಿಗೆ ಐದತ್ತು ಗ್ರಾಮಗಳ ಜಲಭರಿತ ಪದಾರ್ಥಗಳು ಸಿಹಿ ಕಾರ ಹುಳಿ ಎನ್ನಿಸುವುದಿಲ್ಲ. ತನುವಿನಜಲದಲ್ಲಿ ಪದಾರ್ಥದ ಜಲಬೆರೆಯಲು ಒಂದೆರಡು ನಿಮಿಷ ಜಾಣತನದಿಂದ ಕಾಯಬೇಕಷ್ಟೆ. ರುಚಿ ಅರುಚಿಯಾಗುವುದು. ಪದಾರ್ಥದಲ್ಲಿಯೂ ರುಚಿ ಇಲ್ಲ, ಜಲದಲ್ಲಿಯೂ ರುಚಿ ಇಲ್ಲ. ಏಕೆಂದರೆ ಜಲಕ್ಕೆ ಬಣ್ಣವಿಲ್ಲ, ರುಚಿಯಿಲ್ಲ, ಆಕಾರವಿಲ್ಲ , ವಾಸನೆಯಿಲ್ಲ. ಇದು ಅಕ್ಕಮಹಾದೇವಿಯ ಹಾಗೂ ಶರಣ ಸಂತರ ನಾಲಗೆಯ ಕೊನೆಯಲ್ಲಿಯೂ ಮಧುರವನರಿಯದ ಜಲ ತತ್ವ ! ಇದು ಸನ್ಯಾಸಿಯಾದವರು ತಿಳಿದಿರಲೇಬೇಕಾದ, ತಿಳಿದು ಪಾಲಿಸಲೇಬೇಕಾದ ಶರಣ ತತ್ವ.

**ಸ್ತ್ರೀ ಸನ್ಯಾಸಿಯಾದಡೇನಯ್ಯಾ,ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಿಲ್ಲದಿರಬೇಕು:**

ಸ್ತ್ರೀಗೆ ಮಾಯೆ ಪುರುಷನಾಗಿ ಕಾಡುತ್ತದೆ, ಪುರುಷನಿಗೆ ಮಾಯೆ ಸ್ತ್ರೀಯಾಗಿ ಕಾಡುತ್ತದೆ. ಸನ್ಯಾಸಿಯಾಗುವವರು ಸ್ತ್ರೀಯಾದರೂ ಆಗಬಹುದು ಪುರುಷನಾದರೂ ಆಗಬಹುದು. ದೇಹಕ್ಕೆ ಕಾವಿ ತೊಡಿಸಿದರೆ ಕಾಮ ನಿಲ್ಲುವುದಿಲ್ಲ. ಕಾಮದ ಸೂತ್ರವನ್ನು ಅರಿತು ಪಾಲಿಸಿದಾಗ ಮಾತ್ರ ಕಾಮ ಕಳೆಯುತ್ತದೆ. ತನುವಿಗೆ ವೇಷ ಹಾಕಿ ಸನ್ಯಾಸಿಯಾಗುವುದು ಗೊತ್ತು. ತನುವಿನ ಕಾಮದ ಲಾಲಸೆ ಕಳೆಯುವುದು ತಿಳಿಯುವುದಿಲ್ಲ.

ಹೆಣ್ಣಾದರೇನು ಗಂಡಾದರೇನು ಕಾಮ ಸಹಜ. ಅದು ಸಂತಾನ ಕ್ರಿಯೆಗೆ ಮಾತ್ರ ಎನ್ನುವುದು ಸಕಲ ಪ್ರಾಣಿ ಪಶು ಪಕ್ಷಿಗಳಿಗೆ ತಿಳಿದಿದೆ. ಆದರೆ ಮನುಷ್ಯನಿಗೆ ಮಾತ್ರ ತಿಳಿದಿಲ್ಲ. ತನುವಿನಲ್ಲಿ ಕಾಮದ ರುಚಿ ಸಂಗ್ರಹವಾಗಿ ಅದು ಕಣ್ಣು ಕಿವಿ ಮೂಗು ಚರ್ಮ ನಾಲಗೆಗೂ ವ್ಯಾಪಿಸಿದೆ. ತನುವು ಕಾಮದ ಸುಖಕ್ಕಾಗಿ ಅದರ ರುಚಿ ಸವಿಯಲು ಮತ್ತೊಂದು ತನುವನ್ನು ಕೂಡುವುದಕ್ಕಾಗಿ ಕಾತರಿಸುತ್ತದೆ. ತನುವು ತನುವಿನೊಂದಿಗೆ ಕೂಡುವುದು ತಡವಾದಲ್ಲಿ ತನುವಿನ ಸುಖದ ದ್ರವ ಕಳೆದು ತನುವಿಗೆ ಸುಖವಾಗುತ್ತದೆ. ಮತ್ತೆ ಸುಖಿಸಲು ತನುವಿಗೆ ತನು ಬೇಡ. ತನು ಊರ್ವಸಿ ರಂಬೆ ಮೇನಕೆ ಮನ್ಮಥ ಇಂದ್ರನಾದರೇನು? ಸುಖಿಸಲು ಮತ್ತೆ ತನುವು ಬೇಡವೇ ಬೇಡ. ಕಾಮದ ಸುಖ ತನ್ನ ತನುವಿನಲ್ಲಿತ್ತೊ ಅನ್ಯ ತನುವಿನಲ್ಲಿತ್ತೊ ಎನ್ನುವ ಸಾಮಾನ್ಯ ಸುಳುಹು ಸನ್ಯಾಸಿಯಾದವನಿಗೆ ತಿಳಿಯಬೇಕು. ಇದನ್ನು ಶಿಷ್ಯನಾದವನಿಗೆ ತಿಳಿ ಹೇಳಬೇಕು. ಜಾಗ್ರದಲ್ಲಿಯೂ ಸ್ವಪ್ನದಲ್ಲಿಯೂ ಸುಶುಪ್ತಿಯಲ್ಲಿಯೂ ಕೂಡಾ ಸನ್ಯಾಸಿ ತನು, ವಿಷಯದ ಸುಖಕ್ಕಾಗಿ ಅನ್ಯ ತನುವನ್ನು ತಟ್ಟದಿರಬೇಕು. ಎಂದು ಹೇಳಿದ್ದಾಳೆ ಅಕ್ಕಮಹಾದೇವಿ.

**ದಿಗಂಬರಿಯಾದಡೇನಯ್ಯಾ, ಮನ ಬತ್ತಲೆ ಇರಬೇಕು. ಇಂತೀ ಚತುರ್ವಿಧದ ಹೊಲಬರಿಯದೆ ವೃಥಾ ಕೆಟ್ಟರು ಕಾಣಾ ಚೆನ್ನಮಲ್ಲಿಕಾರ್ಜುನಾ :**

ಸಕಲ ತನುಗಳಲ್ಲಿಯೂ ಈ ನಾಲ್ಕು ತತ್ವಗಳನ್ನು ತಿಳಿಯುವ ಅರಿವಿದೆ. ಇದನ್ನು ತಿಳಿಹೇಳುವ ಸಮರ್ಥ ಗುರು ಬೇಕು. ತಿಳಿದರೆ ತನು ಬಟ್ಟೆ ಇದ್ದರೂ ಬತ್ತಲೆಯೆ. ತಿಳಿಯದಿದ್ದರೆ ತನುವಿಗೆ ಬಟ್ಟೆ ಇಲ್ಲದಿದ್ದರೂ ದಿಗಂಬರಿಯಲ್ಲ. ಆ ತನು ಸ್ವಾಮಿಯೂ ಅಲ್ಲ. ಪೀಠಾಧಿ ಪತಿಯೂ ಅಲ್ಲ. ತತ್ವವನ್ನು ತನು ತಿಳಿಯುವದಕ್ಕಾಗಿ. ತನುವಿನ ತತ್ವ ಪುಸ್ತಕದಲ್ಲಿದೆ. ಪುಸ್ತಕವೆ ಏನೆಲ್ಲ ಅಲ್ಲ. ಪುಸ್ತಕ ನೋಡಿ ಸಂಗ್ರಹಿಸಿ ಪಾಠ ಮಾಡುವಾತ ಗುರುವಲ್ಲ. ದಿಗಂಬರಿ ಅಲ್ಲ. ದಿಗಂಬರದ ವೇಷದಲ್ಲಿದ್ದ ತನು. ತನುವಿನ ಮನ ಬತ್ತಲೆಯಾಗದಿದ್ದರೆ ತನುವಿನ ತತ್ವ ತನುವಿಗೆ ತಿಳಿಯುವುದಿಲ್ಲ. ಮನ ಇಲ್ಲದ್ದು, ಇಲ್ಲದ ಮನ ತನುವನ್ನು ಆವರಿಸಿ ಅರ್ಥ, ರುಚಿ, ಸ್ತ್ರೀ ಎಡೆಗೆ ಕೊಂಡೊಯ್ದು ತನುವಿ ನೊಂದಿಗೆ ರುಚಿಸುತ್ತದೆ. ಹಾಗೆ ರುಚಿಸುವ ಮನಕ್ಕೆ ತನುವಿನ ತತ್ವದ ಸುಖ ತಿಳಿಯುವುದಿಲ್ಲ. ತಿಳಿದರೆ ತನುವಿನ ತತ್ವ ಸುಖಿಸಲು ಹೋಗಿ ಅಲ್ಲಿಯೆ ಲೀನವಾಗಿ ಇಲ್ಲವಾಗುತ್ತದೆ. ಮನ ಬತ್ತಲೆಯಾಗುತ್ತದೆ. ಆಗ ತನು ಬಟ್ಟೆ ಕಳಚಿದರೇನು? ಧರಿಸಿದರೇನು? ಅದುವೆ ತತ್ವವೇತ್ತ ತನು. ಚತುರ್ವಿಧದ ಹೊಲಬನರಿತ ತನು. ಚೆನ್ನಮಲ್ಲಿಕಾರ್ಜುನನಲ್ಲಿ ಲೀನವಾಗಿ ಆ ಮಲ್ಲಿಕಾರ್ಜುನನೆ ತಾನಾದ ತನು.

□

# ತನುವಿನ ಮನಕ್ಕೆ ತನುವಿನ ಅರಿವೇ ಮದ್ದು

**ಅಲ್ಲೆಂದಡೆ ಉಂಟೆಂಬುದೀ ಮಾಯೆ ;**
**ಒಲ್ಲೆನೆಂದಡೆ ಬಿಡದೀ ಮಾಯೆ !**
**ಚೆನ್ನಮಲ್ಲಿಕಾರ್ಜುನಯ್ಯಾ ,**
**ಒಪ್ಪಿ ಮರೆವೊಕ್ಕಡೆ ಮತ್ತುಂಟೆ ?**
**ಕಾಯಯ್ಯಾ ಶಿವಧೋ !**

**ಅಲ್ಲೆಂದಡೆ ಉಂಟೆಂಬುದೀ ಮಾಯೆ ; ಒಲ್ಲೆನೆಂದಡೆ ಬಿಡದೀ ಮಾಯೆ ! :**

ತನುವಿನ ಅರಿವು ಅಲ್ಲವೆಂದದ್ದನ್ನು ತನುವಿನ ಮನವೆಂಬ ಮಾಯೆ ಹೌದೆನ್ನುತ್ತದೆ. ಮನಕ್ಕೆ ಬೇಕಾದದ್ದನ್ನು ತನುವಿನೊಂದಿಗೆ ಮಾಡಿಸುತ್ತದೆ. ತನುವು ಅರಿವಿನ ಸಂಪತ್ತು. ಮನಕ್ಕೆ ಬೇಕಾದದ್ದು ತನು ಮಾಡಿದರೆ ಅದು ದೂಷಣೆಗೆ ಒಳಗಾಗುತ್ತದೆ. ಕಳ್ಳ ಹಾದರಿಗ ಭ್ರಷ್ಟ ಎನ್ನುವ ಪಟ್ಟ ತನು ಕಟ್ಟಿಕೊಳ್ಳುತ್ತದೆ.

ಅಲ್ಲ ಎಂದು ಅರಿವು ಹೇಳಿದರೆ ಹೌದೆಂದು ಮಾಯೆಯೆಂಬ ಮನ ಹೇಳುತ್ತದೆ. ಒಲ್ಲೆನೆಂದಡೂ ಬಿಡುವುದಿಲ್ಲ ; ಹಾದರದ ಸುಖ ನೆಚ್ಚಿಕೊಂಡ ಮನ, ಕಣ್ಣಿನ ನೋಟದಲ್ಲಿ ಬೆರೆತು ನೋಡಿದ್ದೆಲ್ಲಾ ಬೇಡುತ್ತದೆ. ಕಿವಿಯಲ್ಲಿ ಬೆರೆತು ಕೇಳಿದ್ದೆಲ್ಲಾ ಬೇಡುತ್ತದೆ. ಮೂಗಿನಲ್ಲಿ ಬೆರೆತು ವಾಸಿಸಿದ್ದೆಲ್ಲ ಬೇಡುತ್ತದೆ. ನಾಲಗೆಯಲ್ಲಿ ಬೆರೆತು ರುಚಿಸಿದ್ದೆಲ್ಲ ಬೇಡುತ್ತದೆ. ಚರ್ಮದಲ್ಲಿ ಬೆರೆತು ಸ್ಪರ್ಶ ಸುಖಕ್ಕೆ ಹಾತೊರೆಯುತ್ತದೆ.

ತನುವಿನಿಂದಲೇ ಸೃಷ್ಟಿಸಿದ ಪದಾರ್ಥಗಳನ್ನು ಮನ ತನುವಿನೊಂದಿಗೆ ಭೋಗಿಸಲು ಅಪೇಕ್ಷಿಸಿ ತನುವನ್ನೇ ಘಾಸಿಗೊಳಿಸುತ್ತದೆ.

ಅಕ್ಕಮಹಾದೇವಿ ತಮ್ಮ ವಚನದಲ್ಲಿಯ ''ಅಲ್ಲ ,ಉಂಟು, ಒಲ್ಲೆ '' ಎನ್ನುವ ಮೂರು ಪದಗಳಿಗೆ ಒತ್ತು ಕೊಟ್ಟು ಅರಿವಿನ ಸೂತ್ರ ಹೆಣೆದಿದ್ದಾಳೆ. ಅರಿವನ್ನು ಅಳವಡಿಸಿಕೊಳ್ಳಬೇಕಿಲ್ಲ. ತನುವಿನಲ್ಲಿದ್ದುದನ್ನು ಬಳಸಿಕೊಳ್ಳಬೇಕಿದೆ. ಆವರಿಸಿದ ಅಜ್ಞಾನವನ್ನು ಅರಿವಿನಿಂದಲೇ ಕಳೆಯಬೇಕಿದೆ ಎಂದು ಸಾರಿದ್ದಾಳೆ.

ಹಳದಿ ಲೋಹವು ತನಗಿಂತ ಶ್ರೇಷ್ಠ **ಅಲ್ಲ** ಎಂದು ಅರಿವು ಮನಕ್ಕೆ ಬೋಧಿಸುತ್ತದೆ. ಆದರೆ ತನುವನ್ನು ಆವರಿಸಿಕೊಂಡ ಕಳ್ಳನೆಂಬ ಮಾಯೆ ಅದರಲ್ಲಿಯೇ ಎಲ್ಲ **ಉಂಟು** ಎನ್ನುತ್ತದೆ. ಅನ್ಯ ತನುವನ್ನು ಕೊಂದಾದರೂ ಚಿನ್ನ ಪಡೆಯಲು ತನುವಿಗೇ ಆದೇಶ ನೀಡುತ್ತದೆ. ಹೀಗೆ ತನುವನ್ನು ಆವರಿಸಿಕೊಂಡ ಮಾಯಾ ಮೃಗವನ್ನು ತನುವಿನ ಅರಿವಿನಿಂದ ಕೊಲ್ಲದಿದ್ದರೆ, ತನುವಿಗೆ ಮುಪ್ಪು ಕಟ್ಟಿಟ್ಟ ಬುತ್ತಿ. ತನು ಮಾಯಾಮೃಗವೆಂಬ ಮನಕ್ಕೆ ಬಲಿಯಾಗಿ ಕಳ್ಳ ಸುಳ್ಳ ಹಾದರಿಗ ವಿಷಯ ಲಂಪಟ ಕೊಲೆಗಡುಕ ಎನ್ನುವ ಹೆಸರು ಪಡೆಯುತ್ತದೆ.

**ಚೆನ್ನಮಲ್ಲಿಕಾರ್ಜುನಯ್ಯಾ ಒಪ್ಪಿ ಮರೆವೊಕ್ಕಡೆ ಮತ್ತುಂಟೆ ? ಕಾಯಯ್ಯಾ ಶಿವಧೋ:**

ವಸ್ತುವಿನಲ್ಲಿ ಸುಖವಿಲ್ಲ ; ಅದು ಜಡ ; ಅದನ್ನು ಪ್ರೀತಿಸುವುದರಲ್ಲಿ ಅರ್ಥವಿಲ್ಲ; ಅದು ಅಲ್ಲವೇ **ಅಲ್ಲ** ಎಂದು ಅರಿವು ಮನಕ್ಕೆ ಬುದ್ದಿ ಹೇಳಿದರೆ; ಮನ ವಸ್ತುವಿನಲ್ಲಿಯೇ ಸಕಲವೂ **ಉಂಟೆಂದು** ತನುವಿನೊಂದಿಗೆ ಸುಖಿಸುತ್ತದೆ . ಅರಿವನ್ನು ಒಪ್ಪಿಯೂ ಮರೆವನ್ನು ಹೊಕ್ಕಡೆ ಸುಖವಿಲ್ಲ. ಹೀಗೆ ಸುಖಿಸುವ ಮನವನ್ನು ಅಕ್ಕ ಹಿಡಿದು ಕಟ್ಟಿ, ತನುವಿನ ಅರಿವೆಂಬ ಚೆನ್ನಮಲ್ಲಿಕಾರ್ಜುನಯ್ಯನ ಪಾದಕ್ಕೆ ಹಾಕಿ, ಕಾಯಯ್ಯ ಶಿವಧೋ ಎಂದು ಮೊರೆ ಹೊಕ್ಕಿದ್ದಾಳೆ. ಮನ ಅರಿವಿನಲ್ಲಿ ಲೀನಗೊಂಡು, ಆ ಅರಿವಿನಿಂದ ಚಿನ್ನ ನೋಡಲು ಅದು ಹಳದಿ ಲೋಹವಾಗಿ ಕಾಣುತ್ತದೆ. ಆಗ ಮನ ಘನಮನವಾಯಿತು. ಅರಿವಿನ ಮನವಾಯಿತು. ಮನಕ್ಕೆ ಮತ್ತೆ ಚಿನ್ನ ಕಾಣಲೇ ಇಲ್ಲ. ತನುವಿನ ಅರಿವು ತನುವಿನ ಮರೆವಿಗೆ ಮದ್ದಾಯಿತು. ಅಕ್ಕ ಮಹಾದೇವಿಯ ಅರಿವಿನ ಈ ಸೂತ್ರ ಜಗದ ಸಕಲ ತನುಗಳಿಗೆ ಬಳಕೆಯಾಗಬೇಕಷ್ಟೆ !

□

**ಅರಿವಿನ ಪರಿಮಳ**

- □ ತನುವಿನ ಅರಿವು ಅಲ್ಲವೆಂದದ್ದನ್ನು ತನುವಿನ ಮನವೆಂಬ ಮಾಯೆ ಹೌದೆನ್ನುತ್ತದೆ. ಮನಕ್ಕೆ ಬೇಕಾದದ್ದನ್ನು ತನುವಿನೊಂದಿಗೆ ಮಾಡಿಸುತ್ತದೆ. -ತನುವು ಅರಿವಿನ ಸಂಪತ್ತು. ಮನಕ್ಕೆ ಬೇಕಾದದ್ದು ತನು ಮಾಡಿದರೆ ಅದು ದೂಷಣೆಗೆ ಒಳಗಾಗುತ್ತದೆ. ಕಳ್ಳ ಹಾದರಿಗ ಭ್ರಷ್ಟ ಎನ್ನುವ ಪಟ್ಟ ತನು ಕಟ್ಟಿಕೊಳ್ಳುತ್ತದೆ.
- □ ಅರಿವನ್ನು ಅಳವಡಿಸಿಕೊಳ್ಳಬೇಕಿಲ್ಲ. ತನುವಿನಲ್ಲಿದ್ದುದನ್ನು ಬಳಸಿಕೊಳ್ಳಬೇಕಿದೆ. ಆವರಿಸಿದ ಅಜ್ಞಾನವನ್ನು ಅರಿವಿನಿಂದಲೇ ಕಳೆಯಬೇಕಿದೆ

# ತನುವಿನ ಅರಿವೇ ಮನಕ್ಕೆ ದೇವರಾಗಬೇಕು

ಆಕಾರವಲ್ಲದ ನಿರಾಕಾರ ಲಿಂಗವ
ಕೈಯಲ್ಲಿ ಹಿಡಿದು ಕಟ್ಟಿದೆವೆಂಬರು ಅಜ್ಞಾನಿ ಜೀವಿಗಳು.
ಹರಿಬ್ರಹ್ಮ ರು ವೇದ ಪುರಾಣ ಆಗಮಂಗಳು
ಅರಸಿ ಕಾಣದ ಲಿಂಗ
ಭಕ್ತಿಗೆ ಫಲವಲ್ಲದೆ ಲಿಂಗವಿಲ್ಲ.
ಕರ್ಮಕ್ಕೆ ನರಕವಲ್ಲದೆ ಲಿಂಗವಿಲ್ಲ.
ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ.
ವೈರಾಗ್ಯಕ್ಕೆ ಮುಕ್ತಿಯಲ್ಲದೆ ಲಿಂಗವಿಲ್ಲ.
ಇದು ಕಾರಣ ತನ್ನ ತಾನರಿದು ತಾನಾದಡೆ
ಚೆನ್ನಮಲ್ಲಿಕಾರ್ಜುನ ತಾನೆ ಬೇರಿಲ್ಲ.

ಆಕಾರವಲ್ಲದ ನಿರಾಕಾರದ ಅರಿವನ್ನು ಕೈಯ್ಯಲ್ಲಿ ಹಿಡಿದು ತನುವಿಗೆ ಕಟ್ಟಲು ಸಾಧ್ಯವಿಲ್ಲ? ಆದರೆ ಲಿಂಗವೆಂಬ ವಸ್ತುವನ್ನು ತನುವಿಗೆ ಕಟ್ಟುವ ಕ್ರಿಯೆ ನಡೆದಿದೆ. ತನುವಿಗೆ ಆಕಾರವಿದೆ. ಅದಕ್ಕೆ ಹೆಣ್ಣೆಂದು ಗಂಡೆಂದು ಕರೆಯುತ್ತಾರೆ. ಜಾತಿ ಮತ ಪಂಥಗಳಿಂದ ಗುರುತಿಸುತ್ತಾರೆ. ಆಯಾ ಧರ್ಮಕ್ಕನುಗುಣವಾಗಿ ತನುವಿಗೆ ಲಿಂಗ ಕಟ್ಟುತ್ತಾರೆ. ಜನಿವಾರ ಹಾಕುತ್ತಾರೆ. ಕೆಲವರು ಬಟ್ಟೆ ಧರಿಸಿದರೆ ಮತ್ತೆ ಕೆಲವರು ದಿಗಂಬರಿಗಳಾಗಿರುತ್ತಾರೆ. ಆಯಾ ಧರ್ಮದಲ್ಲಿ ಅರಿವಿನ ತನುವೆಂದು ಗುರುತಿಸುವ ಕ್ರಿಯೆ ಇದಾಗಿರಬೇಕೆಂದು ಗೋಚರಿಸುತ್ತದೆ. ಮತ್ತೆ ಕೆಲವು ಧರ್ಮಗಳಲ್ಲಿ ಹೆಣ್ಣು ಎಂದು ಕರೆಯಲ್ಪಡುವ ತನುವು ಯಾವ ಗುರುತು ಕಟ್ಟಳೆಗಳಿಲ್ಲದೆ ಹಾಗೆಯೇ ಉಳಿಯುತ್ತದೆ. ಹೆಣ್ಣಿಗೆ ಮೋಕ್ಷವಿಲ್ಲ ಎನ್ನುವುದೇ ಕೆಲವು ಧರ್ಮಗಳ ಅಭಿಪ್ರಾಯವಾಗಿದೆ. ಆದರೆ ತನುವಿಗೆ ಅರಿವು ಮಾತ್ರ ಒಂದೇ ಆಗಿದೆ. ಅದು ಹೆಣ್ಣಲ್ಲ, ಗಂಡೂ ಅಲ್ಲ. ಜಾತಿ ಮತ ಪಂಥಗಳು ಮೊದಲೇ ಅಲ್ಲ !

ಜಾತಿ ಗುರುತುಗಳಿಂದ ತನು ಜ್ಞಾನಿಯಾಗಲು ಸಾಧ್ಯವಿಲ್ಲ ಎಂದು ತನುವಿನ ಅರಿವಿಗೆ ಬರುವುದೇ ಇಲ್ಲ. ತನುವಿನ ಕಣ್ಣಿನಲ್ಲಿ ನೋಡುವ ಅರಿವಿನ ಧರ್ಮವಿದೆ. ಕಿವಿಯಲ್ಲಿ ಕೇಳುವ ಅರಿವಿನ ಧರ್ಮವಿದೆ. ಮೂಗಿನಲ್ಲಿ ವಾಸಿಸುವ ಅರಿವಿನ ಧರ್ಮವಿದೆ. ಚರ್ಮದಲ್ಲಿ ಸ್ಪರ್ಷಿಸುವ ಅರಿವಿನ ಧರ್ಮವಿದೆ. ನಾಲಿಗೆಯಲ್ಲಿ ರುಚಿಸುವ ಅರಿವಿನ ಧರ್ಮವಿದೆ. ತನುವಿನ ಈ ಪಂಚೇಂದ್ರಿಯಗಳಿಗೆ ಯಾರೂ ಬೋಧಿಸಬೇಕಾಗಿಲ್ಲ. ಅರಿವು ಹೇಳಬೇಕಾಗಿಲ್ಲ. ಅವುಗಳ ಧರ್ಮವನ್ನು ನಿರ್ವಹಿಸುವ ಶಕ್ತಿ ಅವುಗಳಿಗಿದೆ. ಲಿಂಗ ಕಟ್ಟಿ , ಜನಿವಾರ, ಶಿಲುಬೆ ಹಾಕಿ, ಪಟ್ಟು ಪೀತಾಂಬರ ಉಟ್ಟು, ಕೌಪೀನ ಧರಿಸಿ, ಮಂಡೆ ಬೋಳಿಸಿದಲ್ಲಿ ತನುವಿನ ಶಕ್ತಿ ವೃದ್ಧಿಯಾಗು ವುದಿಲ್ಲ. ನೋಡುವ ಹಾಗೂ ನೋಡಬಾರದ ಅರಿವು ಕಣ್ಣಿನಲ್ಲಿಯೇ ಇದೆ. ಕಿವಿ ಮೂಗು ನಾಲಗೆ ಚರ್ಮಗಳಲ್ಲಿದೆ. ಅದನ್ನು ತನುವಿನ ಅರಿವಿನಿಂದಲೇ ಪಡೆಯಬೇಕಾಗಿದೆ. ಆದರೂ ತನುವನ್ನು ಹಿಡಿದು ಆ ತನುವಿಗೆ ಜಾತಿ ಗುರುತು ಕಟ್ಟುವ, ಬೋಧಿಸುವ ಕೆಲಸ ನಡೆದೇ ಇದೆ.

ಹರಿ ಬ್ರಹ್ಮರು ವೇದ, ಪುರಾಣ, ಆಗಮಂಗಳಲ್ಲಿ ಹುಡುಕಿದರೂ ಕಾಣದ ಅರಿವು. ಹರಿ ಬ್ರಹ್ಮರ ಕುರಿತು ಜಪ ತಪಗಳನ್ನು ಮಾಡಬಹುದು, ವೇದ ಪುರಾಣ ಆಗಮಗಳನ್ನು ಅಭ್ಯಾಸ ಮಾಡಿ ಉಪನ್ಯಾಸ ನೀಡಬಹುದು. ಅವುಗಳನ್ನು ಸಂಗ್ರಹಿಸಿ ಉದಾಹರಿಸಬಹುದು. ಆದರೆ ಇವು ಯಾವೂ ತನುವಿನ ಇಂದ್ರಿಯಗಳಿಗೆ ಹಾಗೂ ತನುವಿಗೆ ಬೋಧಿಸಲರಿಯವು. ಏಕೆಂದರೆ ಈ ಎಲ್ಲಾ ಪುಸ್ತಕಗಳ ಹುಟ್ಟಿಗೆ ತನುವೇ ಕಾರಣವಾಗಿದೆ. ಒಡೆದ ಮಡಕೆಗೆ ಒತ್ತು ಮಣ್ಣು ನಿಲ್ಲುವುದಿಲ್ಲ. ಮಣ್ಣಿನಿಂದಲೇ ಮಡಕೆಯಾಗಿದೆ. ಅದೇ ಮಣ್ಣು ಒಡೆದ ಮಡಕೆಯನ್ನು ಭದ್ರಗೊಳಿಸಲಾರದು. ಅಂತೆಯೇ ತನುವಿನಿಂದ ಹುಟ್ಟಿದ ಪುಸ್ತಕ ತನುವನ್ನು ಅರಿವಿನಿಂದ ಶ್ರೀಮಂತಗೊಳಿಸಲಾರದು.

'' ಕಾಳಿ ಕಂಕಾಳದಿಂದ ಮುನ್ನ ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ. ಮುನ್ನ ಮುನ್ನ ಮುನ್ನ, ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿ ಕೂಡಲ ಸಂಗಮದೇವಾ ''

ಹೀಗೆ ಸಕಲ ದೇವರನ್ನು ತನು ಸೃಷ್ಟಿಸಿ, ಅರಿಯದೆ ಅವುಗಳ ಮೊರೆ ಹೋದರೆ ತನುವಿನ ಅರಿವು ತನುವಿಗೆ ದೂರವಾಗಿ ತನು ಸತ್ತು ಹೋಗುತ್ತದೆ ಹೊರತು ದೇವರು ಪ್ರತ್ಯಕ್ಷ ಆಗಲಾರ ಎಂದು ಬಸವಣ್ಣ ತಮ್ಮ ವಚನದ ಮೂಲಕ ಸ್ಪಷ್ಟೀಕರಿಸಿದ್ದಾರೆ.

ಪೂಜಿಸುವುದರಿಂದ ತನುವಿಗೆ ಸಮಾಜದಿಂದ ಫಲ ಸಿಕ್ಕೀತು. ಕಾಯಕ ಮಾಡುವದರಿಂದ ಕಾಯಕ್ಕೆ ಅನ್ನ ದಕ್ಕೀತು. ವೇದ, ಆಗಮ, ಉಪನಿಷತ್ತುಗಳನ್ನು ಓದುವದರಿಂದ ತನುವು ಜ್ಞಾನದ ಪರಿಭ್ರಮಣೆಯಿಂದ ಆನಂದ ಹೊಂದೀತು. ವೈರಾಗ್ಯದಿಂದ ಮುಕ್ತಿ ದೊರೆಯುತ್ತದೆಂದು ಭ್ರಮೆಯಿಂದ ಉನ್ಮತ್ತನಾದೀತು. ಆದರೆ ತನುವಿನ ಅರಿವು ತನುವಿಗೆ ದಕ್ಕುವುದು ಸಾಧ್ಯವಾಗುವುದೇ ಇಲ್ಲ. ಏಕೆಂದರೆ ತನುವಿನ ಮನ ಪಂಡಿತನಾಗಲು ತನುವಿನಿಂದ ಹೊರ ಬಂದ ಪುಸ್ತಕಗಳಿಗೆ ಮೊರೆ ಹೋಗುತ್ತದೆ. ಮುಕ್ತಿಗಾಗಿ ತನುವಿನಿಂದಲೇ ನಿರ್ಮಾಣವಾದ ದೇವಸ್ಥಾನಗಳಿಗೆ ಮೊರೆ ಹೋಗುತ್ತದೆ. ಭಕ್ತಿಗಾಗಿ ತನುವಿನಿಂದ ನಿರ್ಮಾಣವಾದ ದೇವರನ್ನು ಪೂಜಿಸುತ್ತದೆ. ಜ್ಞಾನಕ್ಕಾಗಿ ತನ್ನಂತೆಯೇ ಇರುವ ತನುವನ್ನು ಗುರುವೆಂದು ಸ್ವೀಕರಿಸಿ ತಾನು ಶಿಷ್ಯನಾಗಿ ಭಕ್ತಿ ಮಾಡುತ್ತದೆ. ಜ್ಞಾನ ಹೇಳುವುದಕ್ಕಾಗಿ ತನ್ನಂತೆಯೇ ಇರುವ ತನುವಿಗೆ ತಾನು ಗುರುವಾಗುತ್ತದೆ.

ಈ ಎಲ್ಲಾ ಕೆಲಸಗಳಲ್ಲಿ ಮನ ತನುವನ್ನು ತೊಡಗಿಸಿ ತನುವಿನಲ್ಲಿರುವ ಅರಿವನ್ನು ತಾನರಿಯುವುದನ್ನೇ ಮರೆಯುತ್ತದೆ. ತನ್ನ ತನುವಿನ ಅರಿವು ತಾನು ಅರಿತು ಆ ಅರಿವು ತಾನಾದರೆ ಚೆನ್ನ ಮಲ್ಲಿಕಾರ್ಜುನ ತಾನೆ ಬೇರಿಲ್ಲ ಎಂದು ಅಕ್ಕಮಹಾದೇವಿ ತನುವಿನಲ್ಲಿರುವ ಅರಿವನ್ನು ಯಾರ ಸಹಾಯವಿಲ್ಲದೆ ತಾನೇ ಪಡೆಯುವ ಸೂತ್ರವನ್ನು ಸಕಲ ತನುಗಳಿಗೂ ದಯ ಪಾಲಿಸಿದ್ದಾಳೆ.

□

---

**ಅರಿವಿನ ಪರಿಳ**

□ ತನುವಿಗೆ ಅರಿವು ಮಾತ್ರ ಒಂದೇ ಆಗಿದೆ. ಅದು ಹೆಣ್ಣಲ್ಲ, ಗಂಡೂ ಅಲ್ಲ. ಜಾತಿ ಮತ ಪಂಥಗಳು ಮೊದಲೇ ಅಲ್ಲ !

□ ಲಿಂಗ ಕಟ್ಟಿ ,ಜನಿವಾರ ಶಿಲುಬೆ ಹಾಕಿ, ಪಟ್ಟು ಪೀತಾಂಬರ ಉಟ್ಟು, ಕೌಪೀನ ಧರಿಸಿ ಮಂಡೆ ಬೋಳಿಸಿದಲ್ಲಿ ತನುವಿನ ಶಕ್ತಿ ವೃದ್ಧಿಯಾಗುವುದಿಲ್ಲ.

# ಅರಿತರೆ ಆಡುವುದು ಸರಳ

**ಆಡುವುದು ಹಾಡುವುದು ಹೇಳುವುದು ಕೇಳುವುದು**
**ನಡೆವುದು ನುಡಿವುದು**
**ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.**
**ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ**
**ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು.**

**ಆಡುವುದು ಹಾಡುವುದು ಹೇಳುವುದು ಕೇಳುವುದು ನಡೆವುದು ನುಡಿವುದು ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ:**

ತನ್ನನ್ನು ತಾನು ಅರಿತು ಆ ಅರಿವೇ ತಾನಾದ ಶರಣರೊಡನೆ ಆಡುವುದು. ಹಾಡಿದರೆ, ತನ್ನನ್ನು ತಾನು ಅರಿತವರ ಜೊತೆ ಹಾಡುವುದು. ಹೇಳಿದರೆ, ತನ್ನನ್ನು ತಾನು ಅರಿತವರೊಂದಿಗೆ ಹೇಳುವುದು. ಕೇಳಿದರೆ, ತನ್ನನ್ನು ತಾನು ಅರಿತವರಿಂದ ಕೇಳುವುದು. ನಡೆದರೆ ನಡೆಗೆಟ್ಟ ನಡೆಯ ಅರಿತವರೊಂದಿಗೆ ನಡೆಯುವುದು. ನುಡಿದರೆ ನುಡಿಗೆಟ್ಟ ನುಡಿಯ ನುಡಿಯುವವರೊಂದಿಗೆ ನುಡಿಯುವದು. ಇದು ತನ್ನನ್ನು ತಾನು ಅರಿತವನ ಸರಸ. ಇದು ತನ್ನನ್ನು ತಾನು ಅರಿತವನ ಸಮ್ಮೇಳನ. ಇದು ಅರಿತವನು ಸಕಲವನ್ನೂ ಅರಿತ ಶರಣ ಸಮೂಹದೊಡನೆ ಆಡುವ ಸರಸ ಸಮ್ಮೇಳನ.

**ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು :**

ಅಕ್ಕಮಹಾದೇವಿ ತಾನು ಹೆಣ್ಣಾಗಿ, ಹೆಂಡತಿಯಾಗಿ ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವ ಅರಿವಿನ ಗಂಡನೊಂದಿಗೆ ಸಂಭಾಷಣೆ ನಡೆಸಿದ್ದಾಳೆ. ತನುವಿಗೆ ಅರಿವು ಜನ್ಮಕೊಟ್ಟು, ತಂದೆ ತಾಯಿಯಾಗಿದೆ. ಗಂಡನಾಗಿ, ಗುರುವಾಗಿ, ಚೆನ್ನಮಲ್ಲಿಕಾರ್ಜುನನಾಗಿದೆ. ತನುವನ್ನು ಪೋಷಿಸುತ್ತಾ ಆ ತನುವಿನ ಕಣ ಕಣದಲ್ಲಿ ಉಳಿದಿದೆ. ಆಯುಷ್ಯ ಇರುವವರೆಗೆ ತನುವಿನ ಮನವನ್ನು ಮತ್ತೆ ಮತ್ತೆ ತನ್ನತ್ತ ಸೆಳೆದು ಅರಿವಿನ ಸುಖವನುಣಿಸುವ ಕಾತುರದಲ್ಲಿದೆ. ಆ ಮಿಲನ ಕೂಡದಗಲದ ಮಿಲನ. ಇದೇ, ಮನ ಅಂಗದೊಂದಿಗೆ ಅರಿವನ್ನು ಕೂಡುವ ಲಿಂಗ ಸುಖ. ಇದನ್ನು ಬಲ್ಲವರೇ ಲಿಂಗಸುಖಿಗಳು. ಇಂತಹ ಲಿಂಗ ಸುಖಿಗಳ ಸಂಗದಲ್ಲಿ ದಿನಗಳೆವೆನು ಎಂದಿದ್ದಾಳೆ ಅಕ್ಕ.

''ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು; ನೀನಲ್ಲದೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವಾ ಹಾಲಲ್ಲಾದರು ಅದ್ದು, ನೀರಲ್ಲಾದರು ಅದ್ದು ನಿಮ್ಮ ಧರ್ಮ'' ಎಂದಿದ್ದಾರೆ ಬಸವಣ್ಣ.

ಹಕ್ಕಿಗಳು ಹಾಡುತ್ತ ನಲಿಯುತ್ತ ದಿನಗಳೆಯುತ್ತವೆ. ಮನುಷ್ಯ ಅರಿವುಳ್ಳವನಾಗಿಯೂ

ಅರಿವಿನಿಂದ ಹಾಡುವುದನ್ನು ಆಡುವುದನ್ನು ಹೇಳುವುದನ್ನು ಕೇಳುವುದನ್ನು ಕೊನೆಗೆ ನುಡಿಯುವದನ್ನೂ ಮರೆತಿದ್ದಾನೆ. ಅದಕ್ಕಾಗಿ ಹಗಲಿರುಳು ದುಃಖಪಡುತ್ತಿದ್ದಾನೆ.

ಅರಿವಾಗಿ ಆ ಅರಿವು ತನಗೆ ಒಲಿತರೆ ಸಾಕು ಯಾರು ಏನೇ ಆಡಲಿ ಆಡಿದ ಶಬ್ದ ತನುವಿಗೆ ನೋವುಂಟು ಮಾಡದೆ ಜ್ಞಾನವಾಗುತ್ತದೆ. ಆಡುವ ತನುವಿನ ಅರಿವಿನೊಂದಿಗೆ ನುಡಿದು, ಆ ತನುವಿನ ಅಜ್ಞಾನವನ್ನು ಒಲಿಸಿಕೊಳ್ಳುತ್ತಾನೆ. ಆವರಿಸಿದ ಅಜ್ಞಾನವನ್ನು ಕಳೆಯುವಂತೆ ತನುವಿನ ಅರಿವಿನೊಂದಿಗೆ ನುಡಿದು, ಆ ತನುವಿನಲ್ಲಿ ತನುವು ಬೆರೆಸಿ, ಆ ಅರಿವಿನಲ್ಲಿ ಅರಿವು ಬೆರೆಸಿ, ಅಂಗದ ಹಂಗು ಕಳೆದುಕೊಂಡು ಅಂಗವನ್ನು ಲಿಂಗವಾಗಿ ಆಲಂಗಿಸುತ್ತಾನೆ.

ಅರಿವಾದರೆ ತನುವಿಗೆ ಆಡುವುದು, ಹಾಡುವುದು, ಹೇಳುವುದು, ಕೇಳುವುದು, ನುಡಿಯುವುದು ಸರಳವಾಗುತ್ತದೆ. ಈ ಯಾವುದರಲ್ಲಿಯೂ ತನು ಸಂಕಟ ಪಡುವುದಿಲ್ಲ. ಅನ್ಯ ತನುವನ್ನು ಸಂಕಟಕ್ಕೀಡು ಮಾಡುವುದಿಲ್ಲ. ಇದು ತನುವಿನ ಅರಿವನ್ನು ತನುವು ಬಳಕೆ ಮಾಡಿಕೊಳ್ಳುವ ಟೆಕ್ನಿಕ್; ತಂತ್ರಗಾರಿಕೆ. ಈ ತಂತ್ರಗಾರಿಕೆಯ ಬುತ್ತಿಯನ್ನು ಅಕ್ಕ ತನ್ನ ವಚನದ ಆರು ಸಾಲುಗಳಲ್ಲಿ ನೀಡಿದ್ದಾಳೆ. ಇದನ್ನು ಉಂಡು ಪ್ರಯೋಗಿಸಿಕೊಂಡ ತನುವೇ ಜಾಣ ತನು.

□

---

**ಅರಿವಿನ ಪರಿಮಳ**

□ ತನುವಿಗೆ ಅರಿವು ಜನ್ಮಕೊಟ್ಟು, ತಂದೆ ತಾಯಿಯಾಗಿದೆ. ಗಂಡನಾಗಿ, ಗುರುವಾಗಿ, ಚೆನ್ನಮಲ್ಲಿಕಾರ್ಜುನನಾಗಿದೆ. ತನುವನ್ನು ಪೋಷಿಸುತ್ತಾ ಆ ತನುವಿನ ಕಣ ಕಣದಲ್ಲಿ ಉಳಿದಿದೆ. ಆಯುಷ್ಯ ಇರುವವರೆಗೆ ತನುವಿನ ಮನವನ್ನು ಮತ್ತೆ ಮತ್ತೆ ತನ್ನತ್ತ ಸೆಳೆದು ಅರಿವಿನ ಸುಖವನುಣಿಸುವ ಕಾತುರದಲ್ಲಿದೆ. ಆ ಮಿಲನ ಕೂಡದಗಲದ ಮಿಲನ.

□ ಹಕ್ಕಿಗಳು ಹಾಡುತ್ತ ನಲಿಯುತ್ತ ದಿನಗಳೆಯುತ್ತವೆ. ಮನುಷ್ಯ ಅರಿವುಳ್ಳವನಾಗಿಯೂ ಅರಿವಿನಿಂದ ಹಾಡುವುದನ್ನು ಆಡುವುದನ್ನು ಹೇಳುವುದನ್ನು ಕೇಳುವುದನ್ನು ಕೊನೆಗೆ ನುಡಿಯುವದನ್ನೂ ಮರೆತಿದ್ದಾನೆ. ಅದಕ್ಕಾಗಿ ಹಗಲಿರುಳು ದುಃಖಪಡುತ್ತಿದ್ದಾನೆ.

□ ಅರಿವಾಗಿ ಆ ಅರಿವು ತನಗೆ ಒಲಿತರೆ ಸಾಕು ಯಾರು ಏನೇ ಆಡಲಿ ಆಡಿದ ಶಬ್ದ ತನುವಿಗೆ ನೋವುಂಟು ಮಾಡದೆ ಜ್ಞಾನವಾಗುತ್ತದೆ.

# ಮಾತಿನ ಮಾಲೆಗೆ ಸಿಲುಕದ ನಲ್ಲ

ಆತುರದ ಧ್ಯಾನದಿಂದ ಧಾವತಿಗೊಂಡೆ;
ಜ್ಯೋತಿರ್ಲಿಂಗವ ಕಾಣಿಸಬಾರದು.
ಮಾತಿನ ಮಾಲೆಗೆ ಸಿಲುಕುವನಲ್ಲ;
ಧಾತುಗೆಡಿಸಿ ಮನವ ನೋಡಿ ಕಾಡುವನು.
ಆತುಮನಂತರ ಪರವನರಿದಡೆ ಆತನೆ ಯೋಗಿ;
ಆತನ ಪಾದಕ್ಕೆ ಶರಣೆಂಬೆನಯ್ಯಾ
ಚೆನ್ನಮಲ್ಲಿಕಾರ್ಜುನಾ.

ಧ್ಯಾನ, ಜಪ, ತಪಗಳಿಂದ ಜ್ಯೋತಿರ್ಲಿಂಗವು ಕಾಣಲು ಆಗುವುದಿಲ್ಲ. ಧ್ಯಾನ ಜಪ ತಪಗಳಿಂದ ಆತ್ಮವನ್ನು ಒಲಿಸಿಕೊಳ್ಳುವ ಕೇಂದ್ರಗಳೇ ಇವೆ. ಅವು ವ್ಯವಹಾರಕ್ಕಾಗಿ ಪ್ರಾರಂಭವಾದ ಸಂಸ್ಥೆಗಳು. ಜ್ಯೋತಿರ್ಲಿಂಗವೆನ್ನುವುದು ಮಾತಿನ ಮಾಲೆಗೆ ಸಿಕ್ಕುವದಲ್ಲ.

ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದು ಎನಬೇಕು ಎಂದು ಬಸವಣ್ಣನವರು ನುಡಿಯಬಾರದ ನುಡಿಯ ಮೂಲಕ ನುಡಿದು ತೋರಿಸಿದ್ದಾರೆ.

ಮುತ್ತು ನುಡಿಯುವುದಿಲ್ಲ. ಅದು ಜಲದಿಂದ ನಿರ್ಮಾಣವಾಗಿದೆ. ಮತ್ತೆ ಜಲವಾಗದೆ ಬೆಳಗುವುದರ ಮೂಲಕ ನುಡಿಯುವುದೇ ಮುತ್ತಿನ ಕೆಲಸ. ಮಾಣಿಕ್ಯವೂ ನುಡಿಯುವುದಿಲ್ಲ. ಅದು ಜಲದಿಂದಲೇ ನಿರ್ಮಾಣವಾಗಿದೆ. ಮತ್ತೆ ಜಲವಾಗದೇ ನುಡಿಯುವುದರ ಮೂಲಕ ಬೆಳಗುತ್ತದೆ. ಹಾಗೆಯೆ ಸ್ಫಟಿಕವೂ ಜಲದಿಂದಲೇ ನಿರ್ಮಾಣವಾಗಿದೆ. ಮತ್ತೆ ಜಲವಾಗದೇ ಬೆಳಗುವುದರ ಮೂಲಕ ನುಡಿಯುತ್ತದೆ.

ತನು ಕೂಡಾ ಜಲ ಬಿಂದುವಿನಿಂದಲೇ ಜನ್ಮ ತಳೆದಿದೆ. ಜಲದಿಂದಲೇ ರಕ್ತ, ಮಾಂಸ, ಮೂಳೇ, ಮಜ್ಜ, ಮೇಧಸ್ಸು, ಚರ್ಮದ ಹೊದಿಕೆ ಸಿದ್ಧವಾಗಿ ತನುವಾಗಿ ಗರ್ಭದಿಂದ ಹೊರ ಬಂದಿದೆ. ಜಲ, ಜಲದಿಂದ ಬೆಳೆದ ಪದಾರ್ಥಗಳನ್ನೇ ಸೇವಿಸಿ ಜಲದಿಂದ ಮುತ್ತಿನಂತೆ ಗಟ್ಟಿಗೊಂಡು ಜ್ಞಾನದಿಂದ ಬೆಳಗುತ್ತಲಿದೆ. ಈ ತನುವಿನ ಕಣ ಕಣದಲ್ಲಿ ಅರಿವಿನ ಬೆಳಕಿದೆ, ಪರಿಮಳವಿದೆ. ಆದರೆ ಸಂಗ್ರಹದ ಮಾತಿನ ಮಾಲೆಗೆ ಸಿಲುಕಿ ನಲುಗುತ್ತಲಿದೆ.

ತನು ಸ್ಥೂಲಶರೀರ, ಇದಕ್ಕೆ ಜನ್ಮ ನೀಡಿದ್ದು ಕಾರಣ ಶರೀರ. ಇದನ್ನು ಆವರಿಸಿದ್ದು ಸೂಕ್ಷ್ಮ ಶರೀರ. ಇದಕ್ಕೆ ಮನ ಎಂದು ಕರೆಯುತ್ತಾರೆ. ತನುವಿಗೆ ಜನ್ಮ ನೀಡಿದ ಕಾರಣ ಶರೀರಕ್ಕೆ ಯಾರ ಬೋಧೆಯೂ ಬೇಡ. ಅದು ಸ್ವತಃ ಗುರುವಾಗಿ ಅರಿವಾಗಿ ಶಿವ ಸ್ವರೂಪವಾಗಿ ತನುವಿನ ಮನಕ್ಕೆ ಪಾಠ ಮಾಡುತ್ತದೆ. ತನ್ನ ವಶಕ್ಕೆ ತೆಗೆದುಕೊಳ್ಳಲು ಹಗಲಿರುಳೆನ್ನದೆ ತನುವಿನ ಜೀವನ ಪರ್ಯಂತ ಪ್ರಯತ್ನಿಸುತ್ತದೆ. ಮನ ಅರಿವೆಂಬ ಗುರುವಿನ ಮಾತು ಕೇಳದೆ ತನುವಿನೊಂದಿಗೆ ಭೌತಿಕ ವಸ್ತುಗಳನ್ನು ಪಡೆದು ಸುಖಿಸಲು ಹಾತೊರೆಯುತ್ತದೆ. ದೊರೆತರೆ ಕ್ಷಣಿಕ ಸುಖ,

ದೊರೆಯದಿದ್ದರೆ ದುಃಖ. ಹೀಗೆ ಜೀವನ ಪರ್ಯಂತರ ಮನ ತನುವನ್ನು ವಸ್ತುವನ್ನು ನೋಡಿ ನೋಡಿ ಧಾತುಗೆಡೆಸಿ ಕಾಡುತ್ತದೆ.

ಆತ್ಮವೇ ಏನೆಲ್ಲಾ ಅಲ್ಲ. ಆದರೂ ಮನ ಆತ್ಮವನ್ನು ತಿಳಿಯುವುದಿಲ್ಲ. ತಿಳಿ ಹೇಳುವವರ ಬಳಿ ತನುವನ್ನು ಸುಳಿಯಲೂ ಬಿಡುವುದಿಲ್ಲ. ತಿಳಿಯಲು ಅದು ಹೊರಗಿಲ್ಲ. ಅದನ್ನು ಕೊಂಡು ತರುವಂತೆಯೂ ಇಲ್ಲ. ಯಾರಿಂದಲೂ ಪಡೆಯುವಂತೆಯೂ ಇಲ್ಲ. ಆದರೂ ಕೊಡುವ ವ್ಯವಹಾರದ ವೇಷದಲ್ಲಿ ಕಾಷಾಯ, ಕಾವಿ ಧರಿಸಿದ ತನುಗಳು ಗುರುವಿನ ರೂಪದಲ್ಲಿ ಕಾಣಿಸಿ ಕೊಳ್ಳುತ್ತಲಿವೆ. ತನು ಅದನ್ನು ಹಣ ಕೊಟ್ಟು ಪಡೆಯುವ ಶಿಷ್ಯನ ವೇಷದಲ್ಲಿ ಸಮೀಪ ಸುಳಿಯುತ್ತವೆ. ಆತ್ಮ ತನುವಿಗೆ ದೂರವಿಲ್ಲ. ಸಮೀಪವೂ ಇಲ್ಲ. ಅದನ್ನು ಹೊರಗಿನಿಂದ ಪಡೆಯುವಂತೆಯೂ ಇಲ್ಲ. ಆದರೂ ಎಷ್ಟೊಂದು ಮೋಸದ ವ್ಯವಹಾರಗಳು ನಡೆಯುತ್ತವೆ. ಅದು ತನುವಿನ ಮನದ ಗಮನಕ್ಕೆ ಬರುತ್ತಲೂ ಇಲ್ಲ. ಅಷ್ಟು ಸೂಕ್ಷ್ಮವಾಗಿ ಕಾಲಾನುಕಾಲದಿಂದ ಹೀಗೆಯೇ ನಡೆಯುತ್ತಾ ಬಂದಿದೆ.

ಆತುಮನಂತರ ಪರವನರಿದಡೆ ಆತನೆ ಯೋಗಿ; ಆತನ ಪಾದಕ್ಕೆ ಶರಣೆಂಬೆನಯ್ಯಾ ಚೆನ್ನಮಲ್ಲಿಕಾರ್ಜುನಾ ಎಂದಿದ್ದಾಳೆ ಅಕ್ಕ.

ತನುವಿನ ಕಣ ಕಣದಲ್ಲಿ ಬೆರೆತ ಆತ್ಮವೇ ತಿಳಿಯುತ್ತಿಲ್ಲವೆಂದ ಮೇಲೆ, ಅದರ ನಂತರದ ಸೂಕ್ಷ್ಮಾತಿಸೂಕ್ಷ್ಮವಾದ ಪರವನರಿತವರನ್ನು ಮನ ಗುರುತಿಸಬೇಕಲ್ಲ? ಆ ಯೋಗಿಯಿಂದ ಪರವನರಿಯುವ ಅರಿವನ್ನು ಮನ ತಿಳಿಯಬೇಕಲ್ಲ? ತಿಳಿದು ಆ ಪರಾತ್ಪರ ಅರಿವು ತಾನೇ ಆಗಬೇಕಲ್ಲ? ಇದು ತನ್ನನ್ನು ತಾನು ತಿಳಿಯಲು ಹೋಗದ ತನುಗಳಿಗೆ ದೂರದ ಮಾತು. ತನುವಿಗೆ ವಯಸ್ಸಾದರೇನು? ಅದು ಸಾಕಷ್ಟು ಪದವಿಗಳನ್ನು ಪಡೆದು ಉನ್ನತ ಸ್ಥಾನದಲ್ಲಿದ್ದರೇನು? ಪೀಠಾಧಿಪತಿ ಮಠಾಧಿಪತಿಯಾದರೇನು? ಮಂತ್ರಿ ಶಾಸಕ ಅಧಿಕಾರಿಯಾದರೇನು? ಯಾವ ಧರ್ಮದ ತನುವಾದರೇನು? ಹೆಣ್ಣಾದರೇನು, ಗಂಡಾದರೇನು? ತಿಳಿಯುವ ಶಕ್ತಿ ಒಂದೇ. ತನ್ನನ್ನು ತಾನು ತಿಳಿಯಲು ಆಸ್ಪದ ಕೊಡದ ಮನವೂ ಒಂದೆ !

ತನುವಿನ ಮನವೇ ಅಜ್ಞಾನ. ತನುವಿನ ಅರಿವೇ ಮಹಾಜ್ಞಾನ. ತನುವಿನಲ್ಲಿಯೇ ಮಹಾ ಕಂದರ ನಿರ್ಮಾಣ ಮಾಡಿಕೊಂಡ ಮನಕ್ಕೆ ತನುವಿನ ಅರಿವು ತಿಳಿಯುವ ಹಸಿವಾಗಬೇಕು. ಹೀಗಾದರೆ ಪರಾತ್ಪರ ಪರಮನ ತಿಳಿದ ಯೋಗಿಯ ದರ್ಶನ ಕೂಡಲೇ ಮನಕ್ಕೆ ದಕ್ಕುವುದು. ಆತನಾದರೋ ಹೊರಗೆ ಹುಡುಕುವ ಮನದ ತನುವಿನಲ್ಲಿಯೇ ಪರಾತ್ಪರ ಅರಿವನ್ನು ದರ್ಶಿಸಿ ಆ ಅರಿವೆಂಬ ಚೆನ್ನಮಲ್ಲಿಕಾರ್ಜುನನಿಗೆ ತಾನು ಕೂಡಾ ಶರಣು ಹೋಗುವನು. ಅಂಥವರ ಪಾದಕ್ಕೆ ಶರಣೆಂಬೆನಯ್ಯಾ ಎಂದು ಅಕ್ಕ ನುಡಿದಿದ್ದಾಳೆ. ತೋರಿಕೆಯ ಗುರುಗಳಿಗೆ , ಪಾಂಡಿತ್ಯಕ್ಕೆ , ಶಾಸ್ತ್ರಕ್ಕೆ, ಇದು ಸಾಧ್ಯವಾಗದ ಮಾತು. ನಿಲುಕದ ಮಾತು.

□

# ಅರಿವನು ಹೊಕ್ಕು ಅರಿವೇ ಆದ ಮನ

**ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ,**
**ಕೂಡಿರ್ದ ಸತಿಸುತರು ತಮತಮಗೆ ಹರಿದು ಹೋಗುತ್ತೈದಾರೆ;**
**ಬೇಡ ಬೇಡವೆಲೆ ಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ,**
**ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ,**
**ಹೂಣೆ ಹೊಕ್ಕು ಬದುಕು ಕಂಡಾ , ಮನವೆ.**

ತನುವಿನ ಆಯುಷ್ಯ ತನುವಿನ ಅರಿವನ್ನು ಬಳಕೆ ಮಾಡಿಕೊಳ್ಳದೆ ವ್ಯರ್ಥವಾಗುತ್ತಲಿದೆ. ಹಾಗೆಯೇ ತನುವಿನ ಅರಿವಿನ ಸುಖ ಮನ ಸವಿಯದೆ ತನುವಿನ ಭವಿಷ್ಯ ವ್ಯರ್ಥವಾಗುತ್ತಲಿದೆ. ಕೂಡಿ ಒಂದಾಗಿ ಕುಟುಂಬ ಸುಖ ಅರಿವಿನೊಂದಿಗೆ ಸವಿಯ ಬೇಕಾದ ಸತಿಸುತರು ಕೂಡ ತಮ್ಮ ಸ್ವಾರ್ಥಕ್ಕಾಗಿ ಬಡಿದಾಡುತ್ತಿದ್ದಾರೆ. ಶಬ್ದದಲ್ಲಿ, ಸಂಪತ್ತಿನಲ್ಲಿ, ಸಂಬಂಧದಲ್ಲಿ, ತಾರತಮ್ಯವಾದರೆ ಸಾಕು ಸತಿ ಪತಿಯನ್ನು, ಪತಿ ಸತಿಯನ್ನು, ಮಗ ತಂದೆ ತಾಯಿಗಳನ್ನು, ತಂದೆ ತಾಯಿ ಮಕ್ಕಳನ್ನು, ಬಂಧು ಬಳಗವನ್ನು ಕೊಲ್ಲಲು ಹೇಸುವುದಿಲ್ಲ. ಸುಖಕ್ಕಾಗಿ ಕಟ್ಟಿಕೊಂಡ ಸಂಬಂಧ ಕಳಚಿ ಬೀಳುತ್ತದೆ. ಇದು ಮಾಧ್ಯಮಗಳ ಮೂಲಕ ಪ್ರತಿದಿನವೂ ಗೋಚರಿಸುತ್ತದೆ. ಆದರೆ ಹೀಗೇಕಾಗುತ್ತದೆ ಎನ್ನುವುದನ್ನು ಮಾತ್ರ ಪ್ರಶ್ನಿಸಿಕೊಳ್ಳುತ್ತಿಲ್ಲ. ನಡೆದ ಘಟನೆಗಳನ್ನು ತಿಳಿದು ಮನುಷ್ಯ ಲೊಚಗುಟ್ಟುತ್ತಾನೆಯೇ ಹೊರತು, ಆಪತ್ಕಾಲ ತನ್ನ ತನುವಿನಲ್ಲಿಯೇ ಘಟಿಸಿದಾಗ ಆ ಕ್ರೌರ್ಯಕ್ಕೆ ತುತ್ತಾಗುತ್ತಾನೆ. ಇಲ್ಲ ತಾನೆ ಕ್ರೂರಿಯಾಗಿ ಆ ಘಟನೆಗೆ ಕಾರಣವಾಗುತ್ತಾನೆ.

ಮನುಷ್ಯ ಸಾತ್ವಿಕನಾಗಿ ಇರಲು ಪ್ರಯತ್ನಿಸಬಹುದು. ತನಗೆ ಬಂದ ಆಪತ್ಕಾಲವನ್ನು ತಾನು ನೇರವಾಗಿ ಅಪ್ಲೈ ಮಾಡಿಕೊಂಡು ಕುದಿಯುತ್ತಾನೆ. ಆ ಸಂದರ್ಭದಲ್ಲಿ ತನ್ನ ಜ್ಞಾನ ತನಗೆ ಬಳಕೆಯಾಗುವುದಿಲ್ಲ. ಹೀಗಾಗಿ ಮನುಷ್ಯ ಕ್ಷಣ ಕ್ಷಣಕ್ಕೂ ತೊಂದರೆ ಅನುಭವಿಸುತ್ತಾನೆ.

ಪದಾರ್ಥ ರುಚಿಸದಿದ್ದರೆ ತನು ಕುದಿಯುತ್ತದೆ. ರೂಪ ಕಂಡರೆ ಸುಖಿಸಲು ಹಪಹಪಿಸುತ್ತದೆ. ಶಬ್ದಕ್ಕೆ ಕುದಿಯುತ್ತದೆ. ವಾಸನೆಗೂ ಸ್ಪರ್ಶ ಸುಖಕ್ಕೂ ಕುದಿಯುತ್ತದೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ತನುವಿನ ಸಂಪತ್ತು ; ತಿಳಿಯದ ನಿಮಿತ್ಯ ತನುವಿಗೇ ಆಪತ್ತು ತಂದಿವೆ.

ನನ್ನದು, ಪರರದು, ಎನ್ನುವ ಭೇದ ಭಾವಗಳು ತನುವಿನಲ್ಲಿ ಸೃಷ್ಟಿಯಾಗಿ ತನು ಇರುವವರೆಗೂ ನರಕ ಯಾತನೆ ಅನುಭವಿಸುತ್ತದೆ. ಹೀಗೆ ತನುವಿನ ಆಯುಷ್ಯ ಕಳೆಯುತ್ತಾ ಹೋಗುತ್ತದೆ. ವಸ್ತು, ಶಬ್ದ, ಸ್ಪರ್ಷ, ದೃಷ್ಯ, ವಾಸನೆ, ಭಾವದಿಂದ ಉಂಟಾಗುವ ಕ್ರಿಯೆಗಳಿಗೆ ಒಮ್ಮೆ ತಲ್ಲಣಿಸುತ್ತದೆ, ಮತ್ತೊಮ್ಮೆ ಸುಖಿಸುತ್ತದೆ. ಹೀಗೆ ಸುಖಿಸುವುದಕ್ಕಾಗಿ ತನ್ನ ಸುತ್ತಾ ತಾನೇ ಹುತ್ತ ನಿರ್ಮಾಣ ಮಾಡಿಕೊಳ್ಳುತ್ತದೆ. ಅದರೊಳಗಡೆ ಮನವೆಂಬ ಹಾವು ಸೇರಿಕೊಂಡು ಅವುಗಳ ಆಸೆಗಾಗಿ, ರುಚಿಗಾಗಿ, ತನುವನ್ನೇ ದುರ್ಬಳಕೆ ಮಾಡಿಕೊಳ್ಳುತ್ತದೆ. ತನುವಿನೊಂದಿಗೆ ರುಚಿ ಸವಿಯಲು ಹೋಗುತ್ತದೆ. ಸಿಗದಿದ್ದರೆ ತನುವಿನೊಂದಿಗೆ ಸೇಡು ತೀರಿಸಿಕೊಳ್ಳುತ್ತದೆ.

ಅದು ಸಾಧ್ಯವಾಗದಿದ್ದರೆ ತನುವಿನೊಂದಿಗೆ ಆತ್ಮಹತ್ಯೆಕ್ಕೆಳಿಸಲು ಪ್ರೇರೇಪಿಸುತ್ತದೆ. ಇಲ್ಲ ಅದಕ್ಕೆ ಕಾರಣವಾದ ತನುವನ್ನು ಕೊಲೆ ಮಾಡಲು ಆದೇಶಿಸುತ್ತದೆ. ಈ ಎಲ್ಲಾ ಪಟ್ಟವನ್ನು ಮನ ತನುವಿಗೆ ಕಟ್ಟಿ, ಆಯುಷ್ಯ ಪರ್ಯಂತ ತನುವನ್ನು ಚಿತ್ರಹಿಂಸೆಗೆ ಗುರಿ ಪಡಿಸುತ್ತದೆ.

ಹೀಗೆ ಮಾಡುವ ಮನಕ್ಕೆ ತನುವಿನ ಅರಿವು ಬಳಕೆಯಾಗಬೇಕು. ಆ ಅರಿವಿನೊಂದಿಗೆ ಮನ ಸಂಗ ಮಾಡಬೇಕು. ಶರಣ ಸಂತರ ತತ್ವಜ್ಞಾನಿಗಳ ಅಥವಾ ಅರಿವಿನ ತಾಂತ್ರಿಕ ಕಲೆ ಬಲ್ಲ ತನುಗಳ ಸಂಗ ಮಾಡಬೇಕು. ಅರಿವಿನ ಕಲೆ ಬಲ್ಲ ಗುರುಗಳು ತನುವಿನ ಅರಿವಿನೊಂದಿಗೆ ಮಾತನಾಡಿ ತನುವಿನ ಮನವನ್ನು ನಷ್ಟ ಮಾಡಿ ಆ ಮನಕ್ಕೆ ಅರಿವಿನೊಂದಿಗೆ ಸಂಗ ಮಾಡಲು ಸೂತ್ರದೊಂದಿಗೆ ಪಾಠ ಮಾಡುತ್ತಾರೆ. ಆಗ ಮನ ತನುವಿನ ಅರಿವಿನೊಂದಿಗೆ ಹೊರ ನೋಡುತ್ತದೆ. ನೋಡಿದ ವಸ್ತುಗಳೆಲ್ಲಾ ತನ್ನ ಸ್ವರೂಪವೇ ಆಗಿ ಕಾಣುತ್ತದೆ. ಬೆಳಕು ವಸ್ತುಗಳನ್ನು ನೋಡಿ ಮುಟ್ಟುವುದಿಲ್ಲ. ಹಾಗೆಯೇ ಪಡೆಯುವುದಿಲ್ಲ. ಅರಿವಿನ ತನು ವಸ್ತುವಿನ ಮೂಲ ನೋಡಿ ಆನಂದ ಪಡುತ್ತದೆ. ಬಳಕೆ ಮಾಡಿ ಸುಖಿಸುವ ಆಸೆ ತನುವಿಗೆ ಆಗುವುದಿಲ್ಲ.

ಮನ ಶರಣರ ಸಂಗ ಮಾಡಿ, ಚೆನ್ನಮಲ್ಲಿಕಾರ್ಜುನನೆಂಬ ತನುವಿನ ಅರಿವಿನಲ್ಲಿ ಹೊಕ್ಕು ಆ ಅರಿವೇ ತಾನಾಗಿ ಅರಿವಿನಿಂದ ನೋಡುತ್ತಾ, ಕೇಳುತ್ತಾ, ರುಚಿಸುತ್ತಾ, ಸ್ಪರ್ಷಿಸುತ್ತಾ, ವಾಸಿಸುತ್ತಾ, ಸುಖದ ಸುಖಿಯಾಗಿ ಆನಂದ ಪಡುತ್ತದೆ ಎಂದು ಅಕ್ಕ ತಮ್ಮ ವಚನದ ಮೂಲಕ ಬೆಡಗಿನಿಂದ ವಿವರಿಸಿದ್ದಾರೆ.

□

---

**ಅರಿವಿನ ಪರಿಮಳ**

- ಶಬ್ದದಲ್ಲಿ, ಸಂಪತ್ತಿನಲ್ಲಿ, ಸಂಬಂಧದಲ್ಲಿ, ತಾರತಮ್ಯವಾದರೆ ಸಾಕು ಸತಿ ಪತಿಯನ್ನು, ಪತಿ ಸತಿಯನ್ನು, ಮಗ ತಂದೆ ತಾಯಿಗಳನ್ನು, ತಂದೆ ತಾಯಿ ಮಕ್ಕಳನ್ನು, ಬಂಧು ಬಳಗವನ್ನು ಕೊಲ್ಲಲು ಹೇಸುವುದಿಲ್ಲ.
- ನಡೆದ ಘಟನೆಗಳನ್ನು, ತಿಳಿದು ಮನುಷ್ಯ ಲೊಚಗುಟ್ಟುತ್ತಾನೆಯೇ ಹೊರತು, ಆಪತ್ಕಾಲ ತನ್ನ ತನುವಿನಲ್ಲಿಯೇ ಘಟಿಸಿದಾಗ ಆ ಕ್ರೌರ್ಯಕ್ಕೆ ತುತ್ತಾಗುತ್ತಾನೆ. ಇಲ್ಲ ತಾನೆ ಕ್ರೂರಿಯಾಗಿ ಆ ಘಟನೆಗೆ ಕಾರಣವಾಗುತ್ತಾನೆ.
- ಅರಿವಿನ ತನು ವಸ್ತುವಿನ ಮೂಲ ನೋಡಿ ಆನಂದ ಪಡುತ್ತದೆ. ಬಳಕೆ ಮಾಡಿ ಸುಖಿಸುವ ಆಸೆ ತನುವಿಗೆ ಆಗುವುದಿಲ್ಲ.

# ಅರಿವು ಪಡೆಯುವ ಅಕ್ಕಳ ಟೆಕ್ನಿಕ್

ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡೆಯಾ ?
ಏನ ಮಾಡಿದಡೂ ಆನಂಜುವಳಲ್ಲ.
ತರಗೆಲೆಯ ಮೆಲಿದು ಆನಿಹೆನು ,
ಸರಿಯ ಮೇಲೊರಗಿ ಆನಿಹೆನು.
ಚೆನ್ನಮಲ್ಲಿಕಾರ್ಜುನಯ್ಯಾ , ಕರ ಕೇಡನೊಡ್ಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು.

ಅಕ್ಕಮಹಾದೇವಿಯ ಈ ಮಾತು ತಿಳಿಯದಿದ್ದರೆ ದೇವನನ್ನು ಪೂಜಿಸಿ ಪ್ರತ್ಯಕ್ಷ ಮಾಡಿಕೊಳ್ಳಬೇಕು ಎಂದು ಹಟ ಹಿಡಿದ ಭಕ್ತ ವ್ಯರ್ಥ ಪ್ರಾಣ ಕಳೆದುಕೊಳ್ಳುತ್ತಾನೆ. ದೇವನಿಗಾಗಿ ಪ್ರಾಣ ಕಳೆದುಕೊಳ್ಳಲು ಅವನು ಹೊರಗಿದ್ದಾನೆಯೆ ? ಭಕ್ತಿಯಿಂದ ಹೊರದೇವರನ್ನು ಪೂಜಿಸಿ ಜಪ ತಪಗಳನ್ನು ಮಾಡಿ ಒಲಿಯದಿದ್ದಾಗ ಪ್ರಾಣ ಕಳೆದುಕೊಂಡ ಭಕ್ತರು ನಮ್ಮ ದೇಶದಲ್ಲಿ ಎಷ್ಟೋ ಇದ್ದಾರೆ. ವೆಂಕಟರಮಣ ಒಲಿಯದಿದ್ದಾಗ ಅನ್ನಮಯ್ಯ ಪ್ರಾಣ ಕಳೆದುಕೊಂಡ. ಈಶ್ವರ ಒಲಿಯದಿದ್ದಾಗ ಬೇಡರ ಕಣ್ಣಪ್ಪ ಕಣ್ಣು ಕಳೆದುಕೊಂಡ. ಸಿರಿಯಾಳ ಮಗನನ್ನೆ ಕೊಂದು ಅಡುಗೆ ಮಾಡಿ ಉಣ ಬಡಿಸಿದ ಪುರಾಣಗಳಿಗೇನು ಕೊರತೆಯಿಲ್ಲ.

ಅಕ್ಕಮಹಾದೇವಿಯ ಈ ವಚನದಲ್ಲಿ ಅರಿವೆಂಬ ಗುರುದೇವನನ್ನು-ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗಂಡನನ್ನು ಒಲಿಸಿಕೊಳ್ಳಲು ಒಡಲನು ಪ್ರಾಣವನ್ನು ಅರ್ಪಿಸಿಯಾದರೂ ಶುದ್ಧಳಾಗುವೆನು ಎಂದು ಬೆಡಗಿನ ತಂತ್ರಗಾರಿಕೆಯ ಮಾತನಾಡಿದ್ದಾಳೆ.

ಸಾಹಿತಿಗಳಿಗೆ ಪುರಾಣಿಕರಿಗೆ ಬರಹಗಾರರಿಗೆ ತತ್ವವೇತ್ತರ ಮಾತು ಅರ್ಥವಾಗುವುದಿಲ್ಲ. ಕಣ್ಣಪ್ಪನಿಂದ ಈಶ್ವರನಿಗೆ ಕಣ್ಣು ಕೊಡಿಸಿ, ಅವನನ್ನು ಕುರಡನನ್ನಾಗಿಸಿ, ಈಶ್ವರನನ್ನು ಪ್ರತ್ಯಕ್ಷಗೊಳಿಸಿ, ಅವನಿಂದ ಮತ್ತೆ ಕಣ್ಣು ಕೊಡಿಸುವಂತೆ ಪುರಾಣ ಬರೆಯುತ್ತಾರೆ. ಇದ್ದ ಕಣ್ಣು ದೇವನಿಗೆ ಕೊಡುವುದು ಮತ್ತೆ ಕಣ್ಣು ದೇವನಿಂದ ಪಡೆಯುವುದು. ಇದು ತಿಳಿದು ನೋಡಿದರೆ ಕಣ್ಣಪ್ಪನ ಹುಡುಗಾಟವಾಗಲಿಲ್ಲವೇ ? ಇದನ್ನೇ ಪುರಾಣಿಕರು ವೈಭವೀಕರಿಸಿ ಓದುಗರನ್ನು, ಕೇಳುಗರನ್ನು ಪವಾಡ ರೂಪದಲ್ಲಿ ಮರಳು ಮಾಡುವುದು, ಪುರಾಣಗಳಲ್ಲಿ ಬರುತ್ತದೆ.

ಕಣ್ಣಪ್ಪ ತನ್ನ ಅಜ್ಞಾನದ ಕಣ್ಣನ್ನು ತನುವಿನಲ್ಲಿರುವ ಅರಿವೆಂಬ ಈಶನಿಗಿತ್ತು, ಈಶನ ಅರಿವಿನ ಕಣ್ಣನ್ನು ತಾನು ಪಡೆದ. ಅಜ್ಞಾನದ ಕಣ್ಣು ಕಣ್ಣಿನಲ್ಲಿಯೆ ಇದೆ. ಅರಿವಿನ ಕಣ್ಣು ಕಣ್ಣಿನಲ್ಲಿಯೆ ಇದೆ. ಕಣ್ಣೆರಡಾದರೂ ಕಾಣುವ ಶಕ್ತಿ ಒಂದೆ; ಆ ಕಣ್ಣಿನಲ್ಲಿಯೆ ಸಕಲವನ್ನು ನೋಡುವ ದೇವನಿದ್ದಾನೆ. ಅದನ್ನೆ ಅಜ್ಞಾನದಿಂದ ಪುರಾಣಿಕರ ಮಾತು ಕೇಳಿ ಭಕ್ತಿಯ ಉನ್ಮತ್ತನಾಗಿ ದೇವನಿಗಿತ್ತರೆ ಕುರುಡನಾಗುತ್ತಾನೆ. ಕಣ್ಣಪ್ಪನ ಕಥೆ ಕೇಳಿ ಬಾಗಲಕೋಟೆಯ ಒಬ್ಬ ಭಕ್ತ ಎರಡೂ ಕಣ್ಣುಗಳನ್ನು ದೇವನಿಗಿತ್ತು ಕುರುಡನಾದ. ದೇವರು ಪ್ರತ್ಯಕ್ಷವಾಗಿ ಆ ಭಕ್ತನಿಗೆ ಕಣ್ಣು ಕೊಡಲೆ ಇಲ್ಲ. ಇದು ಕಳೆದ ಮೂರ್ನಾಲ್ಕು ವರ್ಷಗಳ ಹಿಂದೆ ನಡೆದ ಸತ್ಯ ಘಟನೆ.

ಅಕ್ಕಮಹಾದೇವಿ ಯಾರೂ ಇಲ್ಲದವಳೇನಲ್ಲ. ಅರಿವನರಿಯದ ಕೌಶಿಕನೆಂಬ ಮಹಾರಾಜನನ್ನು ಬಿಟ್ಟು ಬಂದ ಮಹಾರಾಣಿ. ಅರಿತರೆ ತಾನು ವಿಶ್ವ ಸಂಬಂಧಿ, ವಿಶ್ವ ಮಾನವ. ಅರಿಯದಿದ್ದರೆ ಯಾರಿದ್ದರೂ ಇಲ್ಲದವರು. ವಿಶ್ವದ ತನುಗಳೆಲ್ಲ ಒಂದೆ. ತನುವಿನ ಅರಿವು ಒಂದೆ. ಆದರೂ ಹೆಣ್ಣು ಗಂಡು ಜಾತಿ ಮತ ಪಂಥ ಬಡವ ಶ್ರೀಮಂತ ಗ್ರಾಮ ರಾಜ್ಯ ದೇಶ ವಿದೇಶ ನನ್ನವರು ತನ್ನವರು ಎಂದು ವಿಭಾಗ ಮಾಡಲಾಗಿದೆ. ಪಶು ಪಕ್ಷಿ ಪ್ರಾಣಿ ಕೀಟ ಜಲವರ್ಗಗಳಲ್ಲಿ ಈ ಭೇದ ಕಂಡು ಬರುವುದಿಲ್ಲ.

ಈ ಅರಿವು ತನುವಿನಲ್ಲಿಯೆ ಇದೆ. ಅರಿವಿನ ನೆರಳು ತನುವನ್ನು ಮನವಾಗಿ ಅಜ್ಞಾನದ ರೋಗವಾಗಿ ಕಾಡುತ್ತಿದೆ , ಅರಿವಿನೊಂದಿಗೆ ಸಂಗ ಮಾಡಲು ಬಿಡದೆ ವಿಷಯಲಂಪಟನಾಗಿ, ಕಳ್ಳನಾಗಿ ಸುಳ್ಳನಾಗಿ ಭ್ರಷ್ಟಾಚಾರಿಯಾಗಿ ದರೋಡೆ ಕೋರ ಕೊಲೆಗಡುಕನಾಗಿ ನಾನಾ ರೀತಿಯ ಹಿಂಸೆಯನ್ನು ಮನ ತನುವಿಗೆ ನೀಡಿ ಜನ್ಮ ಜನ್ಮಗಳಿಂದಲೂ ತನುವಿನ ಬೆನ್ನುಬಿದ್ದಿದೆ. ನಾನಾ ಸುಖಗಳನ್ನು ಬೇಡಿ ತನುವನ್ನು ಕಾಡುವ ಈ ಮನಕ್ಕೆ ಅಂಜದೆ ಅಳುಕದೆ ತರಗೆಲೆಯ ಮೆದ್ದಾದರೂ ಬಂಡೆಯ ಮೇಲೆ ಒರಗಿಯಾದರೂ ನಾನಿರುವೆ. ಅರಿವೆಂಬ ಚೆನ್ನಮಲ್ಲಿಕಾರ್ಜುನನೇ ಕಳುಹಿಸಿದ ಮನಕ್ಕೆ ನಾನೊಲಿಯಲಾರೆ. ಈ ಒಡಲನು ಪ್ರಾಣವನು ನಿಮಗರ್ಪಿಸಿ ಆ ಅರಿವೆ ನಾನಾಗಿ ಶುದ್ಧನಾಗುವೆ ಎಂದು ತನುವಿನ ಅರಿವನ್ನೆ ದೇವರನ್ನಾಗಿ ಗಂಡನನ್ನಾಗಿ ಮಾಡಿಕೊಂಡು ಆ ಅರಿವಿಗೆ ಶರಣಾಗತಳಾಗಿದ್ದಾಳೆ ಅಕ್ಕ .

□

**ಅರಿವಿನ ಪರಿಮಳ**

□ ವೆಂಕಟರಮಣ ಒಲಿಯದಿದ್ದಾಗ ಅನ್ನಮಯ್ಯ ಪ್ರಾಣ ಕಳೆದುಕೊಂಡ. ಈಶ್ವರ ಒಲಿಯದಿದ್ದಾಗ ಬೇಡರ ಕಣ್ಣಪ್ಪ ಕಣ್ಣು ಕಳೆದುಕೊಂಡ. ಸಿರಿಯಾಳ ಮಗನನ್ನೆ ಕೊಂದು ಅಡುಗೆ ಮಾಡಿ ಉಣಬಡಿಸಿದ ಪುರಾಣಗಳಿಗೇನು ಕೊರತೆಯಿಲ್ಲ.

□ ಕಣ್ಣಪ್ಪ ತನ್ನ ಅಜ್ಞಾನದ ಕಣ್ಣನ್ನು ತನುವಿನಲ್ಲಿರುವ ಅರಿವೆಂಬ ಈಶನಿಗಿತ್ತು, ಈಶನ ಅರಿವಿನ ಕಣ್ಣನ್ನಿ ತಾನು ಪಡೆದ. ಅಜ್ಞಾನದ ಕಣ್ಣು ಕಣ್ಣಿನಲ್ಲಿಯೆ ಇದೆ. ಅರಿವಿನ ಕಣ್ಣು ಕಣ್ಣಿನಲ್ಲಿಯೆ ಇದೆ. ಕಣ್ಣೆರಡಾದರೂ ಕಾಣುವ ಶಕ್ತಿ ಒಂದೆ;

# ಅರಿವಿನಲ್ಲಿ ಹುಟ್ಟಿದ ಮರೆವು ಅರಿವಿನಲ್ಲಿಯೇ ಲೀನ

**ಆಶೆಯಾಮಿಷವಳಿದು, ಹುಸಿ ವಿಷಯಂಗಳೆಲ್ಲ ಹಿಂಗಿ,**
**ಸಂಶಯ ಸಂಬಂಧ ವಿಸಂಬಂಧವಾಯಿತ್ತು ನೋಡಾ.**
**ಎನ್ನ ಮನದೊಳಗೆ ಘನ ಪರಿಣಾಮವ ಕಂಡು**
**ಮನ ಮಗ್ನವಾಯಿತ್ತಯ್ಯಾ.**
**ಚೆನ್ನಮಲ್ಲಿಕಾರ್ಜುನ,**
**ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನಯ್ಯಾ.**

ಆಸೆ ಆಮಿಷ ಹುಸಿ ವಿಷಯಾದಿ ಸಂಶಯಗಳು ಹೆಣ್ಣು ಗಂಡೆನ್ನದೆ ತನು ಉಳ್ಳ ಎಲ್ಲರಿಗೂ ಸುಳಿಯುವುದು ಸಹಜ. ಈ ಸಂಬಂಧಗಳು ತನುವನ್ನು ಸಂಕಟಕ್ಕೀಡು ಮಾಡುತ್ತವೆ. ಇವು ತನುವಿನಲ್ಲಿಯೆ ಹುಟ್ಟಿ ತನುವಿನ ಸುಖಕ್ಕಾಗಿ ಹಪ ಹಪಿಸಿ ತನುವಿನ ಅವಸಾನಕ್ಕೆ ದಾರಿ ಮಾಡಿಕೊಡುತ್ತವೆ.

ರಾವಣನಿಗೆ ಸೀತೆಯ ಮೇಲೆ ವಿಷಯಾಸಕ್ತಿಯ ಆಸೆ ಉಂಟಾಗಿ, ರಾಜ್ಯವನ್ನು ತನ್ನ ತನುವನ್ನು ಕಳೆದುಕೊಂಡ. ತನ್ನ ಕುಟುಂಬ ಮತ್ತು ರಾಜ್ಯದ ಸೈನಿಕರ ಸಾವಿಗೆ ಕಾರಣನಾದ.

ಮನದಿಂದಲೆ ತನುವಿನಲ್ಲಿ ಆಸೆ ಆಮಿಷ ಹುಸಿ ವಿಷಯಂಗಳು ಹಾಗೂ ಸಂಶಯಗಳು ಹುಟ್ಟುತ್ತವೆ. ಮನ ಆಭರಣವನ್ನು ನೋಡಿ ಆಸೆ ಪಟ್ಟು ಅದರ ಮೇಲೆ ತನ್ನ ಭ್ರಮೆ ಚೆಲ್ಲುತ್ತದೆ. ಪ್ರೀತಿಸಿ ಅದನ್ನು ಪಡೆದು ಸುಖಿಸಲು ತನುವಿಗೆ ಆದೇಶ ನೀಡುತ್ತದೆ. ತನು ಸಾಧ್ಯವಾದರೆ ಖರೀದಿಸುತ್ತದೆ. ಇಲ್ಲ ಹುಸಿಯನಾಡಿ, ಕಳುವು ಮಾಡಿಯಾದರೂ ಪಡೆಯುತ್ತದೆ.

ಆಭರಣ ತನುವಿನೊಂದಿಗೆ ಸಂಬಂಧ ಬೆಳೆಸುವುದಿಲ್ಲ. ಮನ ತನುವಿನೊಂದಿಗೆ ಆಭರಣದ ಸಂಬಂಧ ಬೆಳೆಸುತ್ತದೆ. ಈ ಸಂಬಂಧದಲ್ಲಿ ಸ್ವಲ್ಪ ತಾರತಮ್ಯ ಉಂಟಾದರೂ ಸಂಶಯಗಳು ಸುಳಿದು ಕುಟುಂಬ ಸಂಬಂಧಗಳನ್ನು ಕೆಡಿಸುತ್ತದೆ. ಆದರೆ ಆಭರಣದ ಮೇಲಿದ್ದ ಆಸೆ ಆಮಿಷಗಳು ಅಳಿಯುವದಿಲ್ಲ, ತನುವಿರುವವರೆಗೆ ಆಭರಣ ದೊಡ್ಡದಲ್ಲವೆಂದು ತನುವಿನ ಮನಕ್ಕೆ ಹೊಳೆಯುವುದಿಲ್ಲ. ಆಭರಣ ಒಂದು ಉದಾಹರಣೆ ಅಷ್ಟೆ. ಹೀಗೆ ಮನಕ್ಕೆ ಸುಖ ಪಡಲು ಎಷ್ಟೋ ವಸ್ತುಗಳು ಹಾಗೂ ತನ್ನಂತೆ ಇರುವ ತನುಗಳು ಕೂಡಾ ಬೇಕಾಗುತ್ತವೆ. ಮನಕ್ಕೆ ಬೇಕಾದದ್ದನ್ನೆಲ್ಲ ತನುವಿನೊಂದಿಗೆ ಪಡೆದು ಮನ ಸುಖಿಸುತ್ತದೆ. ಮನ ಮಾಡಿದ ಕೆಟ್ಟ ಕೆಲಸದ ಪಟ್ಟವನ್ನು ತನುವಿಗೆ ಕಟ್ಟುತ್ತದೆ.

ಮನದಿಂದ ಉಂಟಾಗುವ ತನುವಿನ ತಲ್ಲಣ ಜಪ ತಪ ಮಾಡಿದರೂ ಹೋಗುವದಿಲ್ಲ. ದೇವಸ್ಥಾನ ಪುಣ್ಯ ಕ್ಷೇತ್ರಗಳಿಗೆ ಅಲೆದರೂ ಹೋಗುವದಿಲ್ಲ. ಅದು ಕೂಡಾ ತನುವಿಗೆ ಒಂದು ರೋಗವಾಗಿಯೇ ಪರಿಣಮಿಸುತ್ತದೆ. ಸಂಪ್ರದಾಯದ ಸಂಬಂಧಗಳೆಲ್ಲ ವಿಸಂಬಂಧವಾಗುವುದೆ ಇಲ್ಲ.

ಅಕ್ಕಮಹಾದೇವಿ ತಮ್ಮ ವಚನದಲ್ಲಿ ಎನ್ನ ಮನದೊಳಗೆ ಘನ ಪರಿಣಾಮವ ಕಂಡು

ಆಸೆ ಆಮಿಷ ಹುಸಿ ವಿಷಯಗಳೆಲ್ಲ ಹಿಂಗಿ, ಸಂಶಯ ಸಂಬಂಧಗಳೆಲ್ಲ ವಿಸಂಬಂಧವಾಗಿ ಮನ ಮಗ್ನವಾಯಿತ್ತು ಎಂಬ ಬೆಡಗಿನ ತಂತ್ರಗಾರಿಕೆಯನ್ನು ಪರಿಚಯಿಸಿದ್ದಾಳೆ.

ಮನ ಎನ್ನುವುದು ಕತ್ತಲು. ಅದು ತನುವಿನ ಅರಿವಿನ ಬೆಳಕಿನಿಂದ ನಿರ್ಮಾಣವಾದದ್ದು. ಕತ್ತಲು ಜಪ ತಪಗಳಿಂದ ಹೋಗುವುದಿಲ್ಲ. ಹಾಗೆಯೇ ಬೆಳಕಿನ ಮಾತನಾಡಿದರು ಹೋಗುವುದಿಲ್ಲ. ಕತ್ತಲು ಕಳೆಯಬೇಕಾದರೆ ಬೆಳಕು ಹಾಕಬೇಕು. ಆ ಬೆಳಕಿನಲ್ಲಿ ಕತ್ತಲು ಲೀನವಾಗಿ ಬೆಳಕೆ ಆಗುತ್ತದೆ. ಕತ್ತಲೆಲ್ಲ ಬೆಳಕೆ ಆಗುತ್ತದೆ.

ತನುವಿನ ಅರಿವು ಬೆಳಕು. ತನುವಿನ ಮನ ಕತ್ತಲು. ಕತ್ತಲ ಗರ್ಭದಲ್ಲಿ ಸೇರಿದ ವಸ್ತುಗಳೆಲ್ಲ ಕಾಣುವುದಿಲ್ಲ. ಸಕಲ ವಸ್ತುಗಳನ್ನು ಕತ್ತಲು ತನ್ನ ಗರ್ಭದಲ್ಲಿ ಇಟ್ಟುಕೊಂಡು ಕಾಣದಂತೆ ಪೋಷಿಸುತ್ತದೆ. ಅದಕ್ಕಾಗಿಯೆ ಮನಕ್ಕೆ ವಸ್ತುವಿನ ನಿಜ ತಿಳಿಯದೆ ಭ್ರಮೆಯಿಂದ ಅದನ್ನು ಪಡೆದು ತನುವಿನೊಂದಿಗೆ ಸುಖಿಸುತ್ತದೆ. ಮನ ತನುವಿನಲ್ಲಿರುವ ಅರಿವಿನ ಬೆಳಕಿನೊಂದಿಗೆ ವಸ್ತುವನ್ನು ನೋಡಿದರೆ ವಸ್ತುವಿನ ಸತ್ಯದ ಅರಿವು ಮನಕ್ಕೆ ಉಂಟಾಗಿ ವಸ್ತುವನ್ನು ಮುಟ್ಟುವುದಿಲ್ಲ. ಅಪೇಕ್ಷಿಸುವದಿಲ್ಲ.

ಉದಾಹರಣೆಗೆ ಆಭರಣವನ್ನು ಅರಿವಿನಿಂದ ನೋಡಿದರೆ ಅದು ಚಿನ್ನ. ಚಿನ್ನವನ್ನು ಅರಿವಿನಿಂದ ನೋಡಿದರೆ ಅದು ಮಣ್ಣ ಗರ್ಭದಲ್ಲಿ ಜನ್ಮ ತಳೆದ ಲೋಹ. ಅದಕ್ಕೆ ಹಳದಿ ಬಣ್ಣ ಮೆತ್ತಿಕೊಂಡಿದೆ. ಬಣ್ಣವಾಗಲಿ ಲೋಹವಾಗಲಿ ಮಾಟವಾಗಲಿ ಅರಿವನ್ನು ಮರಳು ಗೊಳಿಸುವುದಿಲ್ಲ. ಅರಿವಿನಿಂದಲೆ ಮಣ್ಣ ಗರ್ಭದಿಂದ ಲೋಹ ಹೊರತೆಗೆಯಲಾಗಿದೆ. ಹೇರಳವಾಗಿ ದೊರೆತ ಲೋಹಕ್ಕೆ ಕಬ್ಬಿಣವೆಂಬ ಹೆಸರು. ವಿರಳವಾಗಿ ದೊರೆತ ಲೋಹಕ್ಕೆ ಚಿನ್ನವೆಂಬ ಹೆಸರು ಅರಿವೆ ನಾಮಕರಣ ಮಾಡಿದೆ. ತನ್ನಿಂದ ಸೃಷ್ಟಿಯಾದ ವಸ್ತು ತನಗೆ ಬೇಡ. ಹೀಗೆ ಕಲ್ಯಾಣದ ಶರಣರ ಗೋಷ್ಠಿಯಲ್ಲಿ ಪ್ರಭುದೇವರ ಕರುಣೆಯಿಂದ ಮನ, ತನುವಿನ ಅರಿವಿನ ಸಂಬಂಧ ಮಾಡಿ, ಆಸೆ ಆಮಿಷ ಹುಸಿ ವಿಷಯಗಳೆಲ್ಲ ಹಿಂಗಿ ಸಂಬಂಧ ವಿಸಂಬಂಧವಾಯಿತ್ತು. ಪ್ರಭು ದೇವರ ಕರುಣೆಯಿಂದ ನನ್ನ ತನುವಿನ ಅರಿವೇ ನನಗೆ ಉಂಟಾಗಿ ಅರಿವೆಂಬ ಚೆನ್ನಮಲ್ಲಿಕಾರ್ಜುನನ ದರ್ಶನದಿಂದ ಬದುಕಿದೆನು ಎಂದು ಅಕ್ಕ ತನುವಿನ ಅರಿವು ತನುವೇ ಬಳಕೆ ಮಾಡಿಕೊಳ್ಳುವ ಪ್ರಭುದೇವರ ತಂತ್ರಗಾರಿಕೆಯನ್ನು ಸರ್ವರಿಗೂ ಕರುಣಿಸಿದ್ದಾಳೆ.

□

---

**ಅರಿವಿನ ಪರಿಮಳ**

- ಆಸೆ ಆಮಿಷ ಹುಸಿ ವಿಷಯಾದಿ ಸಂಶಯಗಳು ಹೆಣ್ಣು ಗಂಡೆನ್ನದೆ ತನು ಉಳ್ಳ ಎಲ್ಲರಿಗೂ ಸುಳಿಯುವುದು ಸಹಜ. ಈ ಸಂಬಂಧಗಳು ತನುವನ್ನು ಸಂಕಟಕ್ಕೀಡು ಮಾಡುತ್ತವೆ. ಇವು ತನುವಿನಲ್ಲಿಯೆ ಹುಟ್ಟಿ ತನುವಿನ ಸುಖಕ್ಕಾಗಿ ಹಪ ಹಪಿಸಿ ತನುವಿನ ಅವಸಾನಕ್ಕೆ ದಾರಿ ಮಾಡಿಕೊಡುತ್ತವೆ.
- ಮನ ಎನ್ನುವುದು ಕತ್ತಲು. ಅದು ತನುವಿನ ಅರಿವಿನ ಬೆಳಕಿನಿಂದ ನಿರ್ಮಾಣವಾದದ್ದು. ಕತ್ತಲು ಜಪ ತಪಗಳಿಂದ ಹೋಗುವುದಿಲ್ಲ. ಹಾಗೆಯೇ ಬೆಳಕಿನ ಮಾತನಾಡಿದರು ಹೋಗುವುದಿಲ್ಲ. ಕತ್ತಲು ಕಳೆಯಬೇಕಾದರೆ ಬೆಳಕು ಹಾಕಬೇಕು. ಆ ಬೆಳಕಿನಲ್ಲಿ ಕತ್ತಲು ಲೀನವಾಗಿ ಬೆಳಕೆ ಆಗುತ್ತದೆ.

# ಹೆಣ್ಣಿಗೂ ಗಂಡಿಗೂ ಗಂಡನೊಬ್ಬನೆ

**ಇಹಕ್ಕೊಬ್ಬ ಗಂಡನೆ ? ಪರಕ್ಕೊಬ್ಬ ಗಂಡನೆ ?**
**ಲೌಕಿಕಕ್ಕೊಬ್ಬ ಗಂಡನೆ ? ಪಾರಮಾರ್ಥಕ್ಕೊಬ್ಬ ಗಂಡನೆ ?**
**ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ**
**ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ.**

ಗಂಡ ಹೆಂಡತಿ, ಸತಿ ಪತಿ ಎನ್ನುವ ಶಬ್ದಗಳು ಈ ದೇಶದ ಜ್ಞಾನಕ್ಕೆ ಸಂಬಂಧಪಟ್ಟ ಸತ್ವಯುತ ಪದಗಳು. ಭಾರತ ಜ್ಞಾನ ಪ್ರಧಾನವಾದ ರಾಷ್ಟ್ರ. ರಾಷ್ಟ್ರದ ಮೂಲೆ ಮೂಲೆಯಲ್ಲಿ ಶರಣರು, ಸಂತರು ಈ ಎರಡು ಪದಗಳನ್ನು ಬಳಸಿಯೇ ಜ್ಞಾನದ ಸುಖವನ್ನು ಉಂಡಿದ್ದಾರೆ ಹಾಗೂ ಉಣಬಡಿಸಿದ್ದಾರೆ.

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ. ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ ! ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲೆದೆ ನಾನು. ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು. ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ' ಎಂದು ಸಾವ ಕೆಡದ ಸುಖ ಸಾರಾಯದ ಒಡಲ ಗಂಡನನ್ನು ಒಲಿಸಿಕೊಂಡು ಸುಖಿಸಿದ್ದಾಳೆ ಅಕ್ಕ.

'ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿ ಮಸಣೆಯ ಭಕ್ತೆ, ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ, ಭಾಂಡ ಭಾಜನ ಶುದ್ಧವಿಲ್ಲದಿದ್ದೊಡೆ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ'. ಎಂದು ಒಡಲ ಗಂಡನ ಕುರಿತು ಬಸವಣ್ಣ ಹಾಡಿದ್ದಾರೆ.

ಲೌಕಿಕ ಗಂಡ ಹೆಂಡತಿ ಇವರಿಬ್ಬರೂ ಬಾಳ ಸಂಗಾತಿಗಳು. ಹೆಂಡತಿಗೆ ಗಂಡನಿದ್ದಾನೆ, ಗಂಡನಿಗೆ ಹೆಂಡತಿಯಿದ್ದಾಳೆ. ಇವರಿಬ್ಬರೂ ಅವರವರ ಪಾತ್ರ ಬಲ್ಲರು.ಅರಿವೆಂಬ ಗಂಡನ ಮಾತು ಇವರಿಬ್ಬರಿಗೂ ತಿಳಿಯುವುದಿಲ್ಲ. ತಿಳಿದರೆ ಇವರಿಬ್ಬರು ನಾನು ಗಂಡ, ನಾನು ಹೆಂಡತಿ ಎಂದು ಜಗಳವಾಡುವುದಿಲ್ಲ.

ಗಂಡನಿಗೆ ಅರಿವೆಂಬ ಗಂಡನಿದ್ದಾನೆ ಇದು ಗಂಡನಿಗೆ ತಿಳಿದಿಲ್ಲ. ಹೆಂಡತಿಗೂ ಕೂಡಾ ಅರಿವೆಂಬ ಒಡಲ ಗಂಡನಿದ್ದಾನೆ ಇದು ಹೆಂಡತಿಗೂ ತಿಳಿದಿಲ್ಲ. ಸಿದ್ದರಾಮ ಶಿವಯೋಗಿ ತಾನು ಗಂಡಾಗಿಯೂ 'ಎಮ್ಮ ಗಂಡನು ಏಕಾಂತಂ ಬೊಕ್ಕನು, ಬೇಗ ಬೇಗ ಹೊರ ನಡಿಯಿರಣ್ಣಗಳಿರಾ ಒಬ್ಬನಿದ್ದಡೂ ಸೈರಿಸ ಕಪಿಲಸಿದ್ದ ಮಲ್ಲಿ ಕಾರ್ಜುನ ' ಎಂದು ಸ್ತುತಿಸಿದ್ದಾನೆ.

ಶಂಕರಾಚಾರ್ಯರು ಒಡಲ ಗಂಡನನ್ನು ಕುರಿತು ಶಿವಾನಂದ ಲಹರಿ, ಹೆಂಡತಿಯನ್ನು ಕುರಿತು ಸೌಂದರ್ಯ ಲಹರಿ ಎಂಬ ಎರಡು ಶತಕಗಳನ್ನು ಬರೆದಿದ್ದಾರೆ. ಒಡಲಲ್ಲಿಯೇ ಗಂಡನನ್ನು ಹೆಂಡತಿಯನ್ನು ಬಣ್ಣಿಸಿ ಆನಂದದ ತುತ್ತ ತುದಿಗೆ ತತ್ವವೇತ್ತ ಆಸಕ್ತ ಓದುಗರನ್ನು ಕರೆದುಕೊಂಡು ಹೋಗುತ್ತಾರೆ.

ಒಡಲಲ್ಲಿ ಗಂಡ ಮತ್ತು ಹೆಂಡತಿ ಎಂಬ ಎರಡು ಅರಿವಿನ ಉಪಕರಣಗಳಿವೆ. ಗಂಡನೆಂದರೆ ಅರಿವು, ಹೆಂಡತಿ ಎಂದರೆ ಮನ. ಅರಿವು ಅದು ಕಾರಣ ಶರೀರ. ತನುವಿಗೆ ಜನ್ಮ ನೀಡಿ ತನುವಿನ ಕಣ ಕಣದಲ್ಲಿ ಅರಿವು ವಾಸವಾಗಿದೆ. ಅರಿವಿನ ನೆರಳೆ ಮನ, ಇದು ಸೂಕ್ಷ್ಮ ಶರೀರ, ತನಗೆ ಅರಿವಾಗದಂತೆ ತನುವಿನ ತುಂಬ ಆವರಿಸಿಕೊಂಡಿದೆ. ತನು ಎನ್ನುವುದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಇದು ಸ್ಥೂಲ ಶರೀರ. ತನುವಿನ ಅರಿವೆ ಗಂಡು, ತನುವಿನ ಮನವೆ ಹೆಣ್ಣು. ಆದರೆ ಲೌಕಿಕದಲ್ಲಿ ಹೆಣ್ಣು ಮತ್ತು ಗಂಡು ತನುಗಳು ಎಂದು ಅಜ್ಞಾನದಿಂದ ದೃಢವಾಗಿದೆ. ಇದು ತನುವಿನ ಜ್ಞಾನದಿಂದಲೆ ನಷ್ಟವಾಗಬೇಕು.

ಗಂಡ ಸತ್ತರೆ ಹೆಂಡತಿಯೂ ಸಾಯುತ್ತಾಳೆ. ಇದಕ್ಕೆ ಸತಿ ಸಹಗಮನ ಎನ್ನುತ್ತಾರೆ. ಇದು ಭಾರತದ ಪುರಾತನ ಕಾಲದಿಂದಲೂ ಬಂದ ನೈಜ ಅರಿವು. ಬರು ಬರುತ್ತಾ ಇದು ಪದ್ಧತಿಯಾಯಿತು. ಪತಿ ಸತ್ತಾಗ ಸತಿ ಪತಿಯ ಕಿಚ್ಚಿನ ಮೇಲೆ ಕುಳಿತು ಸಾಯುವದು ಸಂಪ್ರದಾಯವಾಯಿತು. ಸಾಯಲು ಸತಿ ಹೆದರಿದಾಗ ಕುಟುಂಬ ಮತ್ತು ಸಮಾಜದ ಜನ ಒತ್ತಾಯದಿಂದ ಸತಿಯನ್ನು ಪತಿಯ ಕಿಚ್ಚಿನ ಮೇಲೆ ತಳ್ಳುವ ಕ್ರೂರ ರೂಢಿ ಬಳಕೆಗೆ ಬಂತು. ಇದು ಅಜ್ಞಾನ.

ತನುವಿನ ಅರಿವು ಎಂಬ ಗಂಡ ಅದು ಬಯಲು; ಆಕಾಶ ತತ್ವ. ಆ ಗಂಡ ತನು ಬಿಟ್ಟು ಅನಂತದಲ್ಲಿ ಲೀನವಾದರೆ ತನುವನ್ನು ಆವರಿಸಿಕೊಂಡ ಮನವೆಂಬ ಹೆಂಡತಿ ತನುವಿನೊಂದಿಗೆ ಸಾಯುವದು ಸಹಜ. ಇದು ಸಹಜ ಸತಿ ಸಹಗಮನ ! ಗಂಡನೂ ತಾನೆ ಹೆಂಡತಿಯೂ ತಾನೆ. ಇವೆರಡನ್ನೂ ಹೊತ್ತ ತನು ಕೂಡಾ ಅರಿವೆಂಬ ಗಂಡನ ಸೊತ್ತೆ ಆಗಿದೆ. ಅರಿವಿನ ದಾರಿಗೆ ಬರಲಿಲ್ಲವೆಂದು ಗಂಡ; ಮನ ಮತ್ತು ತನುವಿನ ಮೇಲೆ ಮುನಿಸಿಕೊಂಡು, ಅನಂತದತ್ತ ಸಾಗಿ ಬಯಲು ಸೇರಿದಾಗ, ಹೆಂಡತಿ ಮತ್ತು ತನು ಇರಲು ಸಾಧ್ಯವೇ ? ಅವು ಕೂಡಾ ಸತ್ಯದಲ್ಲಿ ಲೀನವಾಗುತ್ತವೆ. ಹೀಗಾಗಿ ತನುವನ್ನು ' ಸತ್ತ ' ಎನ್ನುತ್ತಾರೆ.

ತನುವಿನ ಮನಕ್ಕೆ ತನ್ನ ಒಡಲಿನ ವಿಷಯ ತಿಳಿಯದೆ ಇಹಕ್ಕೊಬ್ಬ ಗಂಡ, ಪರಕ್ಕೊಬ್ಬ ಗಂಡ, ಲೌಕಿಕಕ್ಕೊಬ್ಬ ಗಂಡ, ಪಾರಮಾರ್ಥಕ್ಕೊಬ್ಬ ಗಂಡನೆಂದು ಮಾಡಿಕೊಳ್ಳುತ್ತದೆ. ಅದಕ್ಕಾಗಿಯೇ ಅಕ್ಕಮಹಾದೇವಿ ಅರಿವೆಂಬ ಚೆನ್ನಮಲ್ಲಿಕಾರ್ಜುನನೆ ಎನ್ನ ಗಂಡ ಮಿಕ್ಕ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ ಎಂದಿದ್ದಾರೆ.

□

---

**ಅರಿವಿನ ಪರಿಮಳ**

□ ಒಡಲಲ್ಲಿ ಗಂಡ ಮತ್ತು ಹೆಂಡತಿ ಎಂಬ ಎರಡು ಅರಿವಿನ ಉಪಕರಣಗಳಿವೆ. ಗಂಡನೆಂದರೆ ಅರಿವು, ಹೆಂಡತಿ ಎಂದರೆ ಮನ. ಅರಿವು ಅದು ಕಾರಣ ಶರೀರ. ತನುವಿಗೆ ಜನ್ಮ ನೀಡಿ ತನುವಿನ ಕಣ ಕಣದಲ್ಲಿ ಅರಿವು ವಾಸವಾಗಿದೆ. ಅರಿವಿನ ನೆರಳೆ ಮನ, ಇದು ಸೂಕ್ಷ್ಮ ಶರೀರ, ತನಗೆ ಅರಿವಾಗದಂತೆ ತನುವಿನ ತುಂಬ ಆವರಿಸಿಕೊಂಡಿದೆ. ತನು ಎನ್ನುವುದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಇದು ಸ್ಥೂಲ ಶರೀರ. ತನುವಿನ ಅರಿವೆ ಗಂಡು, ತನುವಿನ ಮನವೆ ಹೆಣ್ಣು. ಆದರೆ ಲೌಕಿಕದಲ್ಲಿ ಹೆಣ್ಣು ಮತ್ತು ಗಂಡು ತನುಗಳು ಎಂದು ಅಜ್ಞಾನದಿಂದ ದೃಢವಾಗಿದೆ. ಇದು ತನುವಿನ ಜ್ಞಾನದಿಂದಲೆ ನಷ್ಟವಾಗಬೇಕು.

# ಬಯಲಿಂದಲೇ ಜಲ ! ಜಲದಿಂದಲೇ ರೂಪು-ರುಚಿ !

ಈಳೆ ನಿಂಬೆ ಮಾದಲಕ್ಕೆ ಹುಳಿನೀರನೆರೆದವರಾರಯ್ಯಾ ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯಾ ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯಾ ?
ಮರುಗ ಮಲ್ಲಿಗೆ ಪಚ್ಚೆ ಮಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ ?
ಇಂತೀ ಜಲವು ಒಂದೆ, ನೆಲವು ಒಂದೆ, ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು ? ತನ್ನ ಪರಿ ಬೇರೆ.

ಆಧ್ಯಾತ್ಮ ಎಂದರೆ ಶುದ್ಧ ಅರಿವು, ಮಹಾಜ್ಞಾನ. ಅದನ್ನು ಆಳವಾಗಿ ತಿಳಿಯಬೇಕಷ್ಟೆ. ಜಲ ಒಂದೆ, ನೆಲ ಒಂದೆ, ಆಕಾಶವು ಒಂದೆ, ವಾಯು ಒಂದೆ, ಅಗ್ನಿ ಒಂದೆ, ಆದರೂ ನೆಲದ ಮೇಲೆ ಬೆಳೆಯುವ, ವಾಸಿಸುವ, ಜಲದಲ್ಲಿ ಸುಳಿಯುವ, ಆಕಾಶದಲ್ಲಿ ಹಾರುವ, ಪ್ರಾಣಿ ಪಶು ಪಕ್ಷಿ ಜಲವರ್ಗ ಬೇರೆ ಬೇರೆಯಾಗಿ ಕಾಣುತ್ತದೆ.

ಮನುಕುಲದಲ್ಲಿ ಕೂಡಾ ತನು ಒಂದೆ ಆದರೂ ತಿಳಿಯುವ ಕೊರತೆ ಯಿಂದಾಗಿ ಹೆಣ್ಣು ಗಂಡು ಜಾತಿ ಮತ ಪಂಥ ಬೇರೆ ಬೇರೆಯಾಗಿ ಕಾಣುತ್ತವೆ.

ತಿಳಿದು ನೋಡಿದರೆ ಜಲಬಿಂದು ಒಂದೆ. ಗರ್ಭ ಸೇರಿ ತನುವಾಗಿದೆ. ಕಬ್ಬಿನ ಸಸಿಗೆ ಹರಿದು ಸಿಹಿಯಾಗಿದೆ. ಮೆಣಸಿನ ಸಸಿಗೆ ಹರಿದು ಕಾರವಾಗಿದೆ. ಬಳ್ಳೊಳ್ಳಿ ಈರುಳ್ಳಿ ಸಸಿಗೆ ಹರಿದು ಕಾಕು ಘಾಟು ಆಗಿದೆ. ಈಳೆ ನಿಂಬೆ ಮಾವು ಮಾದಲಕ್ಕೆ ಹರಿದು ಹುಳಿಯಾಗಿದೆ. ಬಾಳೆ ಹಲಸು ತೆಂಗಿಗೆ ಹರಿದು ಸಿಹಿಯಾಗಿದೆ. ಕವಳೆ ನವಣೆ ಶಾಲ್ಯಕ್ಕೆ ಹರಿದು ಅನ್ನವಾಗಿದೆ. ಮರುಗ ಮಲ್ಲಿಗೆ ಪಚ್ಚೆ ಕ್ಯಾದಿಗೆಗೆ ಹರಿದು ಪರಿಮಳವಾಗಿದೆ. ತನುವು ಒಂದೆ, ತನುವಿನ ಅರಿವು ಒಂದೆ ಆದರೂ ರೂಪ ಬೇರೆ ಬೇರೆಯಾಗಿ ಕಾಣುತ್ತದೆ.

ಜಲ ಒಂದೆ, ವಾಯು ಒಂದೆ, ಭೂಮಿ ಒಂದೆ, ಅಗ್ನಿ ಒಂದೆ, ಆಕಾಶ ಒಂದೆ ಆದರೂ ಅರಿವಿನ ಕೊರತೆಯಿಂದ ಬೇರೆ ಬೇರೆಯಾಗಿ ಕಾಣುತ್ತದೆ.

ಜಲಜನಕ+ಆಮ್ಲಜನಕ ಬಯಲಲ್ಲಿ ಬೆರೆತು ಒಂದಾಗಿ ಜಲವಾಗಿದೆ. ಆ ಜಲವೇ ಕುದ್ದು ಪಾಕವಾಗಿ ಗಟ್ಟಿಗೊಂಡು ಭೂಮಿಯಾಗಿದೆ. ಜಲದಲ್ಲಿ ಬೆರೆತ ಜಲಜನಕವೇ ಸುಡುವ ಗುಣಹೊಂದಿ ಅಗ್ನಿಯಾಗಿದೆ. ಬಯಲಲ್ಲಿ ಸೃಷ್ಟಿಯಾದ ಜಲಜನಕ, ಬಯಲಲ್ಲಿಯೇ ಸೃಷ್ಟಿಯಾದ ಆಮ್ಲಜನಕ, ಬಯಲಲ್ಲಿಯೆ ಸೃಷ್ಟಿಯಾದ ಅಗ್ನಿ, ಬಯಲಿನಿಂದಲೆ ಸೃಷ್ಟಿಯಾದ ಭೂಮಿ, ಬಯಲಿನಿಂದಲೆ ಸೃಷ್ಟಿಯಾದ ಜಲ. ಇವು ನಾಲ್ಕು ಭೂತಗಳು. ಇವುಗಳ ವೃತ್ತಿ ಪ್ರವೃತ್ತಿ ಬೇರೆ ಬೇರೆಯಾದರೂ ಇವುಗಳಿಗೆ ಜನ್ಮ ನೀಡಿದ ಬಯಲು(ಆಕಾಶ )ಮಾತ್ರ ಒಂದೆ. ಜಲ,ಅಗ್ನಿ, ಭೂಮಿ ಈ ನಾಲ್ಕು

ಭೂತಗಳು ಬಯಲ ಗರ್ಭದಿಂದ ಜನ್ಮ ಪಡೆದಿದೆ. ಮೂರು ಭೂತಗಳು ಕಾಣುತ್ತವೆ. ವಾಯು ಅನುಭವಕ್ಕೆ ಬರುತ್ತದೆ ಕಾಣುವುದಿಲ್ಲ. ಆಗಾಗ ವಿಕೃತಗೊಂಡರೂ ಇವುಗಳಿಗೆ ಜನ್ಮ ನೀಡಿದ ಬಯಲಿಗೆ ತೊಂದರೆ ಇಲ್ಲ.

ಉದಾಹರಣೆಗೆ ಗಾಳಿ ನೂರು ಕಿ.ಮಿ. ಗೂ ವೇಗವಾಗಿ ಬೀಸಿ ಜನ ಜೀವನ ತಲ್ಲಣಗೊಳಿಸಿ ವಿಕೃತಗೊಳ್ಳುತ್ತದೆ. ಭೂಮಿ ಬಿರಿದು ಲಾವಾರಸ ಚೆಲ್ಲಿ ವಿಕೃತಗೊಳ್ಳುತ್ತದೆ. ಜಲ ಅಧಿಕ ಪ್ರಮಾಣದಲ್ಲಿ ಸುರಿದು ಸುನಾಮಿಯೊಂದಿಗೆ ವಿಕೃತಗೊಳ್ಳುತ್ತದೆ. ಬೆಂಕಿ ಹೊತ್ತಿ ಉರಿದು ಜನಜೀವನವನ್ನು ತಲ್ಲಣಗೊಳಿಸಿ ವಿಕೃತಹೊಂದುತ್ತದೆ. ಆದರೆ ಈ ನಾಲ್ಕು ಭೂತಗಳ ವಿಕೃತ ಚೇಷ್ಟೆಯನ್ನು ಬಯಲು ತನ್ನ ಗರ್ಭದಲ್ಲಿಯೆ ಬಸಿರೆಯಂತೆ ಬಂಧಿಸಿ ಪುಳುಕಿತಗೊಳ್ಳುತ್ತದೆ.

ಬಸಿರೆಗೆ ತನ್ನ ಮಗು ಗರ್ಭದಲ್ಲಿ ತುಂಟಾಟ ನಡೆಸಿದರೆ ತಾಯಿಗೆ ಆನಂದವಾಗುತ್ತದೆ. ಅಂತೆಯೆ ನಾಲ್ಕು ಭೂತಗಳು ನಡೆಸುವ ವಿಕೃತ ತುಂಟಾಟ ತನ್ನ ಗರ್ಭದಲ್ಲಿ ಬಂಧಿಸಿದ ಬಯಲಿಗೆ ಆನಂದವನ್ನುಂಟು ಮಾಡುತ್ತದೆ.

ಭೂಮಿಯ ಮೇಲೆ ವಾಸಿಸುವ ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿ ಕೀಟ ಉರುಗ ಹಾಗೂ ಜಲಚರಗಳು ಮೈಥುನ, ಹಸಿವು ಹಾಗೂ ರಕ್ಷಣೆಗೆ ಬೇಕಾದ ಸಹಜ ಜ್ಞಾನವನ್ನು ಹೊಂದಿವೆ. ಮನಷ್ಯ ಇವೆಲ್ಲವನ್ನು ತಿಳಿಯುವ ಸಹಜ ಜ್ಞಾನವನ್ನು ಹೊಂದಿದ್ದಾನೆ. ಆದರೆ ತನ್ನಲ್ಲಿರುವ ಸಂಪೂರ್ಣ ಜ್ಞಾನವನ್ನು ತನಗೆ ಬಳಕೆ ಮಾಡಲು ಸಾಧ್ಯವಾಗುತ್ತಿಲ್ಲ.

ಹಸಿವೆ, ಮೈಥುನ, ರುಚಿ, ಹಾಗೂ ಇರುವಿಕೆಯ ಗುಟ್ಟು ಅರಿವಿನಿಂದ ತಿಳಿಯದೆ ಕ್ಷಣ ಕ್ಷಣಕ್ಕೂ ಹುಟ್ಟುತ್ತಾ . ಸಂಕಟಪಡುತ್ತಾ. ನೋವಿನಿಂದ ನರಳಿ ನರಳಿ ಸಾಯುತ್ತಾನೆ. ತನುವಿಗೆ ಸಾವು ಸಮೀಪ ಬಂದರೂ ತಿಳಿಯುವ ಕ್ರಿಯೆಯಲ್ಲಿ ಮಾತ್ರ ಮಾಗುವುದಿಲ್ಲ. ಹೊರಗೆ ಏನೆಲ್ಲ ತಿಳಿಯುತ್ತಾನೆ, ಪಡೆಯುತ್ತಾನೆ ಅವುಗಳಿಂದ ತನುವಿನ ಸಂಕಟ ನೀಗುವುದಿಲ್ಲ. ತನುವಿನಲ್ಲಿ ಹೊತ್ತಿದ ಸಂಕಟಕ್ಕೆ ತನುವಿನಲ್ಲಿಯೆ ಮದ್ದನರಿಯುವುದು ತನುವಿಗೆ ತಿಳಿಯದಂತಾಗಿದೆ.

ತನುವಿನ ಅರಿವು ತಿಳಿಯಲು ಪ್ರಾರ್ಥನಾ ಮಂದಿರ ಮಠ ಆಶ್ರಮ ಎಂಬ ಅಂಗಡಿಗಳೇನೊ ಹುಟ್ಟಿಕೊಂಡಿವೆ. ಅವುಗಳ ಮಾಲಿಕರು ಕೂಡಾ ತನುವುಳ್ಳವರೆ ಆಗಿದ್ದಾರೆ. ಅವರು ಕೂಡಾ ತನುವಿನ ಹಸಿವಿಗಾಗಿ ಅಂಗಡಿ ತೆರೆದಿದ್ದಾರೆ. ತನುವಿನಿಂದ ಬಂದ ಪುಸ್ತಕಗಳಿಂದ ತನುವಿನ ಸಂಕಟ ಶಮನಗೊಳ್ಳಲಾರದು. ಬದಲಾಗಿ ತನುವಿನಲ್ಲಿದ್ದ ದ್ದನ್ನೆ ತನು ಸಂಗ್ರಹಿಸಿಕೊಳ್ಳುತ್ತದೆ. ಆದಕ್ಕೆ ಪಂಡಿತನೆಂಬ ಹೆಸರಿನ ಮತ್ತೊಂದು ಅಜ್ಞಾನ ಸೇರುತ್ತದೆ.

ಅರಿವಿನ ಜಲಬಿಂದುವಿನಿಂದಾದ ಅಜ್ಞಾನ ತನುವಿಗೆ, ತನುವಿನ ಅರಿವೆ ಮದ್ದು. ಆ ಮದ್ದು ಕೂಡಾ ತನ್ನ ತನುವಿನಲ್ಲಿಯೆ ಇದೆ. ಅದು ಅನ್ಯ ಜ್ಞಾನವನ್ನು ಸೇರುವುದಿಲ್ಲ. ತನುವಿನ ಜ್ಞಾನದಿಂದ ಸಕಲ ರುಚಿಗಳನ್ನು ಸವಿದರೆ, ಪದಾರ್ಥವು ಜಲದಿಂದ, ತನುವು ಕೂಡಾ ಜಲದಿಂದಲೆ ಆಗಿದೆ. ಜಲ ಜಲದಲ್ಲಿ ಬೆರೆತು ರುಚಿ ಕಳೆದುಕೊಂಡು ಜಲವೆ ಆಗುತ್ತದೆ.ಆಗ ರುಚಿಗಾಗಿ ಜಗಳವಿಲ್ಲ.

ತನುವಿನ ರೂಪವನ್ನು ಅರಿವಿನಿಂದ ನೋಡಿದರೆ ತನುವಿನ ಜನನ ಜಲದಿಂದಲೆ.

ಕಾಣುವ ತನುವಿನ ಸೌಂದರ್ಯ ಸುಖ ಜಲದ ತನುವಿನಲ್ಲಿಯೆ ನಿರ್ಮಾಣವಾಗಿದೆ. ತನುವು ಹಲವು ಜಲ ದ್ರವ್ಯಂಗಳ ಅರಿವಿನಿಂದ ಕೂಡಿ, ಆ ಅರಿವಿನ ಆನಂದ ತನಗಾಗಿ; ತನ್ನ ಪರಿ ಬೇರಾಗಿ ತನಗೇ ಕಾಣುತ್ತದೆ. ಹಾಗೆಯೇ ಅರಿವೆಂಬ ಚೆನ್ನಮಲ್ಲಿಕಾರ್ಜುನಯ್ಯನು ಇಡೀ ಜಗದಲ್ಲಿ ಬಯಲ ಬೀಜದ ರೂಪದಲ್ಲಿ ಬಯಲಾಗಿ ಬೆರೆತಿದ್ದರೇನು ? ಕಂಡರೂ ಕಾಣದ ಕಣ್ಗಳೆ ಬೇರೆ, ಎಲ್ಲದರಲ್ಲಿಯೂ ಅರಿವನ್ನೇ ಕಾಣುವ ತನ್ನ ಪರಿಯೆ ಬೇರೆ ಎಂದು ಅಕ್ಕ ಹಾಡಿದ್ದಾಳೆ.

□

**ಅರಿವಿನ ಪರಿಮಳ**

- □ ತನುವಿನ ಅರಿವು ತಿಳಿಯಲು ಪ್ರಾರ್ಥನಾ ಮಂದಿರ ಮಠ ಆಶ್ರಮ ಎಂಬ ಅಂಗಡಿಗಳೇನೊ ಹುಟ್ಟಿಕೊಂಡಿವೆ. ಅವುಗಳ ಮಾಲಿಕರು ಕೂಡಾ ತನುವುಳ್ಳವರೆ ಆಗಿದ್ದಾರೆ. ಅವರು ಕೂಡಾ ತನುವಿನ ಹಸಿವಿಗಾಗಿ ಅಂಗಡಿ ತೆರೆದಿದ್ದಾರೆ. ತನುವಿನಿಂದ ಬಂದ ಪುಸ್ತಕಗಳಿಂದ ತನುವಿನ ಸಂಕಟ ಶಮನಗೊಳ್ಳಲಾರದು. ಬದಲಾಗಿ ತನುವಿನಲ್ಲಿದ್ದ ದ್ವನ್ನೆ ತನು ಸಂಗ್ರಹಿಸಿಕೊಳ್ಳುತ್ತದೆ. ಅದಕ್ಕೆ ಪಂಡಿತನೆಂಬ ಹೆಸರಿನ ಮತ್ತೊಂದು ಅಜ್ಞಾನ ಸೇರುತ್ತದೆ.
- □ ಅರಿವಿನ ಜಲಬಿಂದುವಿನಿಂದಾದ ಅಜ್ಞಾನ ತನುವಿಗೆ ತನುವಿನ ಅರಿವೆ ಮದ್ದು. ಆ ಮದ್ದು ಕೂಡಾ ತನ್ನ ತನುವಿನಲ್ಲಿಯೆ ಇದೆ. ಅದು ಅನ್ಯ ಜ್ಞಾನವನ್ನು ಸೇರುವುದಿಲ್ಲ. ತನುವಿನ ಜ್ಞಾನದಿಂದ ಸಕಲ ರುಚಿಗಳನ್ನು ಸವಿದರೆ, ಪದಾರ್ಥವು ಜಲದಿಂದ, ತನುವು ಕೂಡಾ ಜಲದಿಂದಲೆ ಆಗಿದೆ. ಜಲ ಜಲದಲ್ಲಿ ಬೆರೆತು ರುಚಿ ಕಳೆದುಕೊಂಡು ಜಲವೆ ಆಗುತ್ತದೆ. ಆಗ ರುಚಿಗಾಗಿ ಜಗಳವಿಲ್ಲ.
- □ ತನುವಿನ ರೂಪವನ್ನು ಅರಿವಿನಿಂದ ನೋಡಿದರೆ ತನುವಿನ ಜನನ ಜಲದಿಂದಲೆ. ಕಾಣುವ ತನುವಿನ ಸೌಂದರ್ಯ ಸುಖ ಜಲದ ತನುವಿನಲ್ಲಿಯೆ ನಿರ್ಮಾಣವಾಗಿದೆ. ತನುವು ಹಲವು ಜಲ ದ್ರವ್ಯಂಗಳ ಅರಿವಿನಿಂದ ಕೂಡಿ, ಆ ಅರಿವಿನ ಆನಂದ ತನಗಾಗಿ; ತನ್ನ ಪರಿ ಬೇರಾಗಿ ತನಗೇ ಕಾಣುತ್ತದೆ.

# ರೂಹಿಲ್ಲದ ಚೆಲುವೆ

**ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ .**
**ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ**
**ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ !**
**ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು .**
**ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು .**
**ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ**
**ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ .**

**ಸಾವಿಲ್ಲದ ಕೇಡಿಲ್ಲದ ರೊಹಿಲ್ಲದ ಚೆಲುವಂಗೆ ನಾನೊಲಿದೆ :**

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನ ದರ್ಶನ ಸಾವಿಲ್ಲದ ಚೆಲುವೆಗೆ ಮಾತ್ರ ಸಾಧ್ಯ. ಅಕ್ಕಮಹಾದೇವಿ ಸಾವಿಲ್ಲದ ಚೆಲುವೆ. ಸಾವಕೆಡುವ ಗಂಡ ಕೌಶಿಕನನ್ನು ಕೊಡವಿ; ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನಿಗೆ ಒಲಿದಳು. ಆತನನ್ನೇ ಗಂಡನನ್ನಾಗಿ ಮಾಡಿಕೊಂಡಳು.

**ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ:!**

ತನುವಿಗೆ ಎಡೆಯಿದೆ, ಕಡೆಯಿದೆ, ಕುರುಹೂ ಇದೆ. ಚೆಲುವು ಕುಂದುತ್ತಾ ಬಂದು ವಿಕಾರ ಹೊಂದಿ ಮರಣದೊಂದಿಗೆ ಇಲ್ಲವಾಗುತ್ತದೆ.ಅಕ್ಕ ಸಾವಿಲ್ಲದ ಕೇಡಿಲ್ಲದ ಎಡೆಯಿಲ್ಲದ ಕಡೆಯಿಲ್ಲದ ಕುರುಹೇ ಇಲ್ಲದ ಚೆಲುವನಿಗೆ ನಾನೊಲಿದೆ ಎಂದಿದ್ದಾಳೆ . ಅಂತಹ ಚೆಲುವ ಯಾರಿರಬಹುದು?

ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದೆ . ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ಒಲಿದೆ. ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ ಎಂದು ತನ್ನ ಚೆಲುವ ಗಂಡನ ಪರಿಚಯ ಎಲ್ಲರಿಗೂ ಮಾಡಿಕೊಟ್ಟಿದ್ದಾಳೆ .

ಸಾವ ಕೆಡುವ ಗಂಡನನ್ನು ತನ್ನಂತೆ ಕೊಡವಿ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನನ್ನು ಕೂಡಲು ಅಕ್ಕ ಎಲೆ ಅವ್ವಗಳಿರಾ ಎಂದು ಸರ್ವರನ್ನು ಕೈ ಮಾಡಿ ಕರೆದಿದ್ದಾಳೆ.

ದೇಹ ಎಂದು ಕರೆಯಲ್ಪಡುವ ಕುರುಹು ಹೆಣ್ಣೂ ಅಲ್ಲ ಗಂಡೂ ಅಲ್ಲ . ಹೆಣ್ಣು ಎಂದು ಕರೆಸಿಕೊಳ್ಳುವ ದೇಹವು ದೇಹವೇ. ಗಂಡು ಎಂದು ಕರೆಸಿಕೊಳ್ಳುವ ದೇಹವು ದೇಹವೇ. ಜೀವಜಲಬಿಂದು ಗರ್ಭ ಪ್ರವೇಶ ಮಾಡಿ, ರಕ್ತ ಮೂಳೆ ಮಾಂಸ ಮಜ್ಜಾ ಮೇದಸ್ಸುಗಳನ್ನೊಳಗೊಂಡು ಚರ್ಮದಿಂದ ಬಂಧಿಸಲ್ಪಟ್ಟದೆ . ಮೊಲೆ ಮುಡಿ, ಮೀಸೆ ಕಾಸೆಗಳನ್ನು ನೋಡಿ ಅಜ್ಞಾನದಿಂದ ದೇಹವನ್ನು ಹೆಣ್ಣೆಂದು ಗಂಡೆಂದು ಕರೆಯುತ್ತೇವೆ. ಅರಿವಿನಿಂದ ನೋಡಿದರೆ ಅದು ಹೆಣ್ಣೂ ಅಲ್ಲ; ಗಂಡೂ ಅಲ್ಲ !

ಜಲ ಕಾಣುತ್ತದೆ ಅದಕ್ಕೆ ನಿರ್ದಿಷ್ಟವಾದ ರೂಪು ಇಲ್ಲ, ಬಣ್ಣ ಇಲ್ಲ ರುಚಿ ಇಲ್ಲ, ವಾಸನೆ ಇಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುವ ಸಮತೋಲ ಗುಣವಿದೆ.

ಜಲಕ್ಕೆ ಮೂಲವಾದ ಜಲಜನಕ ಆಮ್ಲಜನಕ ಕಾಣುವುದಿಲ್ಲ. ಇವುಗಳ ವಾಸ ಬಯಲಿನ

ಗರ್ಭದಲ್ಲಿ. ಬಯಲು ಜಲಜನಕ ಆಮ್ಲಜನಕವನ್ನು ಬಂಧಿಸಿ ಒಂದು ಮಾಡಿದೆ , ಅದರಲ್ಲಿ ತಾನು ಲೀನವಾಗಿ ಜೀವಜಲವಾಗಿ ಗರ್ಭ ಸೇರಿ ತನುವಾಗಿ ಹೊರಬಂದಿದೆ.

ಜಲಜನಕಕ್ಕೂ ಆಮ್ಲಜನಕಕ್ಕೂ ಬಯಲಿಗೂ ಸಾವಿಲ್ಲ. ಜಲಜನಕ ಆಮ್ಲಜನಕ ಇಲ್ಲದ ಸ್ಥಳ ಗಮನಕ್ಕಿದೆ . ಆದರೆ ಬಯಲು ಇಲ್ಲದ ಸ್ಥಳವೇ ಇಲ್ಲ. ಭೂಮಿ, ನೀರು, ಬೆಂಕಿ , ಗಾಳಿ, ಸೂರ್ಯ, ಚಂದ್ರ, ನಕ್ಷತ್ರ, ಗ್ರಹಗಳ ವಾಸ ಬಯಲ ಗರ್ಭದಲ್ಲಿಯೇ. ಗ್ರಹಗಳು ಇಲ್ಲವಾಗಬಹುದು, ಬಯಲು ಇಲ್ಲವಾಗಲು ಸಾಧ್ಯವೇ ಇಲ್ಲ. ಬಯಲ ಗರ್ಭದಿಂದ ಹೊರಬಂದು ವಸ್ತುಗಳಾಗಿ ಕಂಡು ಒಮ್ಮೆ ಇಲ್ಲವಾಗಿ ಬಯಲ ಗರ್ಭದಲ್ಲಿ ಲೀನವಾಗಿ ಬಯಲಾಗುತ್ತವೆ.

ಭೂಮಿಯನ್ನು ಭೂಮಿಯ ಮೇಲೆ ಬೆಳೆದ ಗಿಡ ಮರ ಬಳ್ಳಿ; ಪಶು ಪಕ್ಷಿ ಪ್ರಾಣಿ ಗಳನ್ನು, ಸೂರ್ಯಚಂದ್ರ ನಕ್ಷತ್ರ ಗ್ರಹಗಳನ್ನು , ಮನು ಕುಲವನ್ನು ಹಡೆದದ್ದು ಬಯಲಾಗಲಿಲ್ಲವೆ? ಬಯಲೇ ತನುವಿಗೆ ಜನ್ಮ ನೀಡಿ ಆ ತನುವಿನ ಕಣಕಣದಲ್ಲಿ ಬೆರೆತು ಅರಿವಾಗಿ ತನುವಿನ ದಾರಿದೀಪವಾಗಿ ಬೆಳಗಿಂಗೆ ಬೆಳಗಾಗಿ ಬೆಳಗುತ್ತಲಿದೆ !

ಈ ಬೆಳಕೇ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ ಚೆನ್ನಮಲ್ಲಿ ಕಾರ್ಜುನ! ಈ ಚೆಲುವನನ್ನು ಪುರಾತನರು 'ಸೂರ್ಯಕೋಟಿ ಸಮಪ್ರಭ' ಕೋಟಿ ಸೂರ್ಯರಿಗೆ ಸಮನಾದವನು ಎಂದು ಬಣ್ಣಿಸಿದ್ದಾರೆ.

'ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವಾ ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನಿಮ್ಮ ಧರ್ಮ' ಎಂದು ಬಸವಣ್ಣ ಅರಿವಿನ ಬಯಲನ್ನೇ ತಂದೆ ತಾಯಿ ಬಂಧು ಬಳಗವಾಗಿಸಿಕೊಂಡ. ಹಾಗೆಯೇ ಅರಿವೆಂಬ ಬಯಲು : ಜಗದಗಲ ಮುಗಿಲಗಲ ಚಾಚಿಕೊಂಡಿದೆ. ಪಾತಾಳದಿಂದಲೂ ಅತ್ತತ್ತ; ಬ್ರಹ್ಮಾಂಡದಿಂದಲೂ ಅತ್ತತ್ತ ಪಸರಿಸಿದೆ. ಗಮನಕ್ಕೆ ನಿಲುಕದ ಬಯಲು , ಅಗೋಚರವಾದ ಬಯಲು, ಯಾರೂ ಪ್ರಮಾಣಿಸದ ಬಯಲು, ಅಪ್ರತಿಮಲಿಂಗವಾಗಿ, ಅರಿವಾಗಿ ತನುವಿನಲ್ಲಿ ಬಂದು ಚುಳುಕಾಗಿದೆ ಎಂದು ಹಾಡಿದ್ದಾರೆ.

ಅಕ್ಕ ಮತ್ತೊಂದು ವಚನದಲ್ಲಿ: 'ಇಹಕ್ಕೊಬ್ಬ ಗಂಡನೆ ? ಪರಕ್ಕೊಬ್ಬ ಗಂಡನೆ ? ಲೌಕಿಕಕ್ಕೊಬ್ಬ ಗಂಡನೇ ? ಪಾರಮಾರ್ಥಕ್ಕೊಬ್ಬ ಗಂಡನೆ ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕಿನ ಗಂಡರೆಲ್ಲಾ ಮುಗಿಲ ಮರೆಯ ಬೊಂಬೆಯಂತೆ ಎಂದು ಹೇಳಿದ್ದಾಳೆ.

'ಒಂದೂ ಇಲ್ಲದ ಬಿಂದುವ ತಂದೆ ಇಲ್ಲದ ಕಂದನ, ಮಾತೆ ಇಲ್ಲದ ಜಾತನ, ಗಮನವಿಲ್ಲದ ಗಮ್ಯನ, ಮೂವರರಿಯದ ಮುಗ್ಧನ ಠಾವ ತೋರಿಸು ಗುಹೇಶ್ವರಾ' ಎಂದು ಅಲ್ಲಮಪ್ರಭುಗಳು ಬಯಲ ಚೆಲುವನನ್ನು ಕೊಂಡಾಡಿದ್ದಾರೆ .

''ಬಯಲ ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ '' ಎಂದಿದ್ದಾರೆ ದಾಸೀಮಾರ್ಯರು .

''ಎಲ್ಲರ ಗಂಡನ ಪರಿಯಂತಲ್ಲ ನೋಡವ್ವಾ; ನಮ್ಮ ನಲ್ಲ ! ಸುಳಿಯಲಿಲ್ಲ , ಸುಳಿದು ಸಿಂಗಾರವ ಮಾಡಲಿಲ್ಲ ; ಕೂಡಲಸಂಗಮ ದೇವನು ತನ್ನೊಳಗೆ ಬೈಚಿಟ್ಟನಾಗಿ'' ಲೋಕಕ್ಕೆ ಗಂಡಾಗಿದ್ದರೂ ಹೆಣ್ಣಾಗಿ ಕೂಡಲಸಂಗಮ ದೇವನನ್ನು ಅರಿವಿನ ಗಂಡನನ್ನಾಗಿಸಿಕೊಂಡು ತನುವಿನಲ್ಲಿ ಬೈಚಿಟ್ಟುಕೊಂಡಿದ್ದಾರೆ ಬಸವಣ್ಣ.

ಶ್ರೀ ಕೃಷ್ಣನೊಬ್ಬನೇ ಗಂಡ ; ಗೋಪಿಕಾ ಸ್ತ್ರೀಯರು ಹದಿನಾರು ಸಾವಿರ ! ತನುವಿನಲ್ಲಿರುವ

ಅರಿವು ತಿಳಿದು ತಾನೇ ಅರಿವಾದ ಶ್ರೀ ಕೃಷ್ಣ ! ಆ ಅರಿವು ತಿಳಿಯಲು ಹದಿನಾರು ಸಾವಿರ ತನುಗಳು ಶ್ರೀ ಕೃಷ್ಣನಿಗೆ ಹೆಂಡಂದಿರಾದರು ; ಶಿಷ್ಯರಾದರು. ಕಾಲ ಕಳೆಯಿತು. ಜನ ಬೆಡಗಿನ ಈ ಮಾತನ್ನು ತಿಳಿಯಲಿಲ್ಲ. ದ್ವಾರಕಾ ನಗರಿಯ ಶ್ರೀ ಕೃಷ್ಣ ಮಂದಿರಕ್ಕೆ ಹೆಣ್ಣುಮಕ್ಕಳ ಪ್ರವೇಶಕ್ಕೆ ನಿಷೇಧ ಹೇರಿದರು. ಬಿಚ್ಚುಗತ್ತಿಯ ಕಾವಲುಗಾರನನ್ನು ಹಾಕಿದರು. ಒಳನುಗ್ಗಿದ್ದ ಮಹಿಳೆಯನ್ನು ಕಡಿಯಲು ಆದೇಶ ಹೊರಡಿಸಿದರು.

ಮೀರಾ ಶ್ರೀಕೃಷ್ಣನ ಭಕ್ತೆ. ಆತನನ್ನೇ ಸಖನನ್ನಾಗಿ ಮಾಡಿಕೊಂಡು ತಾನು ಸಖಿಯಾದವಳು. ಕೃಷ್ಣಮಂದಿರ ಪ್ರವೇಶಿಸಿದಳು. ಕಾವಲುಗಾರನಿಗೆ ತಡೆಯಲಾಗಲಿಲ್ಲ. ಪೂಜಾರಿ ಮೀರಾಳನ್ನು ನೋಡಿ ಹೌಹಾರಿದ. ನೀನು ಒಳಗೆ ಹೇಗೆ ಬಂದೆ ? ಕಾವಲುಗಾರ ನಿನ್ನನ್ನು ಕೊಲ್ಲಲಿಲ್ಲವೆ ? ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲವೆಂದು ನಿನಗೆ ತಿಳಿದಿಲ್ಲವೆ ?

ಮೀರಾ ಅತ್ಯಂತ ಶಾಂತತೆಯಿಂದ 'ಶ್ರೀ ಕೃಷ್ಣನನ್ನು ಬಿಟ್ಟು ಯಾರೂ ಗಂಡಸರಲ್ಲ ; ಆತನೊಬ್ಬನೇ ಪರಮ ಪುರುಷ ! ನೀನಾವಾಗ ಪುರುಷನಾದೆ ? ಉಳಿದವರೆಲ್ಲ ಸ್ತ್ರೀ ಯರೆಂದು ನಿನಗೆ ತಿಳಿದಿಲ್ಲವೆ ?' ಎನ್ನುತ್ತಾಳೆ ಮೀರಾ! ಪೂಜಾರಿ ಈಕೆ ಸತ್ಯ ತಿಳಿದ ಮಹಾಶರಣೆ ಎಂದು ಅಂದಿನಿಂದ ಮಹಿಳೆಯರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಯಿತು.

ಮೀರಾ ಕೃಷ್ಣನ ಒಲಿಸಿಕೊಂಡು ಸಖನನ್ನಾಗಿ ಮಾಡಿಕೊಂಡರೆ, ಅಕ್ಕಮಹಾದೇವಿ ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದಳು. ಸೀಮೆಯಿಲ್ಲದ ನಿಸ್ಸೀಮ ಚೆಲುವ ಚೆನ್ನಮಲ್ಲಿಕಾರ್ಜುನನನ್ನು ಗಂಡನನ್ನಾಗಿಸಿಕೊಂಡಳು.

ಭವವಿಲ್ಲದ, ಭಯವಿಲ್ಲದ ನಿರ್ಭಯ ಬಯಲೆಂಬ ಚೆಲುವನಿಂದಲೇ ದೇಹ. ಆ ಚೆಲುವ ಚೆನ್ನಮಲ್ಲಿಕಾರ್ಜುನ ಒಂದೂ ಇಲ್ಲದ ಬಿಂದು. ತಂದೆ ಇಲ್ಲದ ಕಂದ. ಮಾತೇ ಇಲ್ಲದ ಜಾತ. ಗಮನವಿಲ್ಲದ ಗಮ್ಯನೆಂಬ ಬಯಲ ಬೆಳಕು ದೇಹದಲ್ಲಿ ಚುಳುಕಾಗಿ ಅರಿವಾಗಿ ಬೆಳಗಿದೆ. ಆ ಬೆಳಗಿನ ನೆರಳಾಗಿ ಮನ ಸೃಷ್ಟಿಯಾಗಿದೆ. ಬೆಳಕಿನಿಂದಲೇ ನೆರಳು. ಬೆಳಕಿಗೂ ನೆರಳಿಗೂ ನಂಟು. ಬೆಳಕು ಪತಿಯಾದರೆ ನೆರಳು ಸತಿ. ಬೆಳಕು ಲಿಂಗವಾದರೆ ಮನ ಅಂಗದೊಂದಿಗೆ ಅದಕ್ಕೆ ಶರಣು ಹೋಗಿ ಶರಣಾಗಬೇಕು. ಬೆಳಕಿಗೂ ಸಾವಿಲ್ಲ. ಆ ಬೆಳಕಿನಿಂದ ಜನ್ಮ ಪಡೆದೆನೆಂದು ತಿಳಿದ ನೆರಳಿಗೂ (ಮನ) ಸಾವಿಲ್ಲ. ಬೆಳಗಿ ಮನವೆಂಬ ನೆರಳಾಯ್ತು. ಬೆಳಕು ತಿಳಿದ ನೆರಳು ಬೆಳಕಿನಲ್ಲಿ ಲೀನವಾಗಿ ಬೆಳಕಾಯಿತು.

ಮತ್ತೆ ನೆರಳಾಗದೇ ರೂಹಿಲ್ಲದ ಚೆಲುವಾಯಿತು. ದೇಹದಲ್ಲಿಯ ಅರಿವು ನುಡಿದು ಬೆಳಗುತ್ತದೆ. ದೇಹದಲ್ಲಿಯ ಮನ ಆ ಬೆಳಗನುಂಡು ಬೆಳಗಿನ ನುಡಿ ಬೆಳಗುತ್ತದೆ. ಬೆಳಕನರಿಯದ ಮನ ಕತ್ತಲು ; ಬೆಳಕೂ ಕತ್ತಲೂ ದೇಹದಲ್ಲಿಯೇ ವಾಸ ! ಬೆಳಕೂ ಇದೆ ಕತ್ತಲೂ ಇದೆ ಇದೇನು ಚೋದ್ಯವೊ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ ಎಂದು ಪ್ರಭು ಹೇಳುತ್ತಾ ಒಡಲೊಳಗಿದ್ದು ಒಡಲಿಂಗಾಧಾರವಾಗಿ, ಒಡಲ ಸೋಂಕದೆ ; ಒಡಲ ಬೆಳಗುವ , ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕನ್ನು ಬೆಳಕಿನಿಂದಲೇ ಹುಟ್ಟಿದ ಮನ ತಿಳಿಯಬೇಕು. ತಿಳಿದು ಆ ಬೆಳಕಿನಲ್ಲಿಯೇ ಲೀನವಾಗಬೇಕು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಬೆಳಕಿನ ಚೆಲುವನಲ್ಲಿ ಒಡಲಿದ್ದಾಗಲೇ ಮನ ಸತಿ ಹೋಗಬೇಕು. ಸಾವಿಲ್ಲದ ರೂಹಿಲ್ಲದ ಚೆಲುವೆಯಾಗಿ ; ಸತಿ ಪತಿಗಳೊಂದಾಗಿ ಹಿತವಾದ ಬೆಳಕಾಗಿ, ಆ ಬೆಳಕೇ ಜಗದಗಲ ಮುಗಿಲಗಲ ಬೆಳಗಿ, ಪಾತಾಳದಿಂದತ್ತತ್ತ, ಬ್ರಹ್ಮಾಂಡದಿಂದತ್ತತ್ತಲೂ ಬೆಳಗಿ ವಿರಾಟ ಸ್ವರೂಪವನ್ನೇ ತಾಳಿ ತಾನೇ ತಾನಾಗಬೇಕು.

□

# ತನುವಿಗೆ ಬಂದ ಕರ್ಮ ಮನವೇ ಹರಿಯಬೇಕು

**ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು.**
**ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು.**
**ತನುವಿಂಗೆ ಬಂದ ಕರ್ಮ ಹರಿವ ಕಾಲಕ್ಕೆ**
**ಚೆನ್ನ ಮಲ್ಲಿಕಾರ್ಜುನದೇವರು ಕಡೆಗಣ್ಣಿನಿಂದ ನೋಡಿದರು.**

**ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು:**

ದೇಹ ಅರಿವಿನ ಸುಖ ಉಣಲು ಬಂದಿದೆ. ಆ ಅರಿವೆ ಗುರು, ಆ ಗುರುವಿನ ಸುಖ ಉಣ್ಣಲು ಬಂದಿದೆ. ಆ ಗುರುದೇವನೇ ಮಹಾದೇವ, ಆ ಮಹಾದೇವನ ಸುಖ ಉಣ್ಣಲು ಬಂದಿದೆ. ಆ ಮಹಾದೇವನೇ ಸದಾಶಿವ, ಆ ಸದಾಶಿವನ ಸುಖ ಉಣ್ಣಲು ಬಂದಿದೆ. ಆ ಸದಾಶಿವನೆ ಪರಬ್ರಹ್ಮ, ಆ ಪರಬ್ರಹ್ಮನ ಸುಖ ಉಣ್ಣಲು ಬಂದಿದೆ. ಆ ಪರಬ್ರಹ್ಮ ಬೇರಿಲ್ಲ, ತಾನೆ ಆ ಬ್ರಹ್ಮ. ಅಹಂಬ್ರಹ್ಮಾಸ್ಮಿ. ಈ ಸುಖ ಉಣ್ಣಲು ಬಂದಿದೆ.

ಸುಖವು ಸುಖವಲ್ಲ,ದುಃಖವು ದುಃಖವಲ್ಲ, ಸುಖ ದುಃಖಗಳಿಗೆ ಮೀರಿದ ಸುಖವೇ ಸುಖದ ಸುಖ ! ಈ ಸುಖ ಸ್ವಸುಖ, ಪರಮಾನಂದ ಸುಖ. ತಾನೇ ಪರಮಹಂಸನಾಗಿ ಉಂಡ ಸುಖ. ಉಣಲು ಬಂದ ಸುಖ ಉಂಡಲ್ಲದೆ ಹರಿಯದು ಎಂದು ಅಕ್ಕಮಹಾದೇವಿ ಉಣ್ಣದ ಸುಖ ಉಂಡು ನುಡಿದಿದ್ದಾಳೆ. ಸಕಲರಿಗೂ ಉಣ ಬಡಿಸಲು ಪ್ರಯತ್ನಿಸಿದ್ದಾಳೆ.

**ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು. ತನುವಿಂಗೆ ಬಂದ ಕರ್ಮ ಹರಿವ ಕಾಲಕ್ಕೆ :**

ತನುವಿನಲ್ಲಿ ಅರಿವಿದೆ, ಅದೇ ಪರಬ್ರಹ್ಮ. ತನುವನ್ನು ಭ್ರಮೆ ಆವರಿಸಿಕೊಂಡಿದೆ, ಅದೇ ಮನ. ಮನ ತನುವಿಗೆ ಸುಖವನ್ನುಂಟು ಮಾಡುತ್ತದೆ ಹಾಗು ದುಃಖವನ್ನೂ ಉಂಟು ಮಾಡುತ್ತದೆ. ಆವರಿಸಿದ ಮನ ತನುವಿಗೆ ಬಂದ ಕರ್ಮವೂ ಹೌದು; ಭ್ರಮೆಯೂ ಹೌದು; ತಿಳಿದರೆ ಅದು ಬ್ರಹ್ಮವೂ ಹೌದು.

ತನುವಿಗೆ ಬಂದ ಕರ್ಮ ಹರಿಯುವ ಕಾಲ ದೂರವಿದ್ದರೆ ತನುವನ್ನು ಮನ ಏನೂ ತಿಳಿಯದಂತೆ ದರಿದ್ರನನ್ನಾಗಿಸುತ್ತದೆ. ಕಳ್ಳ, ಸುಳ್ಳ,ದರೋಡೆಕೋರ, ಭ್ರಷ್ಟಾಚಾರಿ, ಕೊಲೆಗಡುಕ, ಮುಂತಾದ ಹೆಸರಿನ ಪಟ್ಟ ಕಟ್ಟಿ ಮನ ತನುವನ್ನು ನೋಯುವಂತೆ, ಕೊಲೆ ಮಾಡುವಂತೆ ಇಲ್ಲ ಆತ್ಮಹತ್ಯೆ ಮಾಡಿಕೊಳ್ಳುವಂತೆ , ಸದಾ ಬಡತನದಲ್ಲಿ ಮುಂದುವರೆದು ಏನೂ ತಿಳಿಯದ ಅಜ್ಞಾನಿಯಂತೆ ಮಾಡುತ್ತದೆ. ಇದೆಲ್ಲಾ ಮನದ ಆಟ. ತನುವಿಗೆ ಕೆಟ್ಟ ಲೇಬಲ್ ಹಚ್ಚಿ ತನುವಿನಲ್ಲಿಯೇ ಉಳಿದುಕೊಂಡು, ಬ್ರಹ್ಮಸುಖವನ್ನು ಉಣಲು ಬಂದ ತನುವಿಗೆ ಭ್ರಮೆಯ ಸಂಕಟವನ್ನು ಒಡ್ಡಿ, ಮೃತ್ಯುವಿಗೆ ಕೊಂಡೊಯ್ಯುತ್ತದೆ.

ತನುವಿಗೆ ಬಂದ ಈ ದುಃಖವನ್ನು ಯಾವ ಗುರುಗಳಿಂದಲೂ ತಪ್ಪಿಸಲು ಸಾಧ್ಯವಿಲ್ಲ.

ಏಕೆಂದರೆ ತನುವಿಗೆ ಸಂಕಟವನ್ನು ಒಡ್ಡಿದ ಭ್ರಮೆ ಎಂಬ ಮನವೇ ಬ್ರಹ್ಮ ಸುಖವನ್ನು ಉಣ್ಣಲು ನಿರ್ಧರಿಸಬೇಕಾಗಿದೆ. ಈ ನಿಮಿತ್ತ ಆ ಮನ ಸುಖವನ್ನು ಉಣ್ಣಲು ಸಿದ್ಧವಾದರೆ ಮಾತ್ರ ಸಾಧ್ಯವಾಗುವುದು.

ಆಗ ಸಮರ್ಥ ಗುರುದೇವನ ಹತ್ತಿರ ಮನ ತನುವನ್ನು ಸುಖ ಉಣ್ಣಲು ಕರೆದುಕೊಂಡು ಹೋಗುತ್ತದೆ. ಸದ್ಗುರುನಾಥ ಮನದೊಂದಿಗೆ ಮಾತನಾಡುವುದಿಲ್ಲ. ಶಿಷ್ಯನ ತನುವಿನ ಅರಿವೆಂಬ ಗುರುನಾಥನೊಂದಿಗೆ ಮಾತನಾಡುತ್ತಾನೆ.ಆಗ ತಾನೂ ಬ್ರಹ್ಮನೇ, ಶಿಷ್ಯನೂ ಬ್ರಹ್ಮನೇ. ಬ್ರಹ್ಮಸುಖವನ್ನು ಉಣಲು ಬಂದ ಭ್ರಮೆಯೆಂಬ ಮನಕ್ಕೆ ಗುರು ಹೇಳಿದ ಆ ಅರಿವು ಇಷ್ಟವಾಗಿ, ಭ್ರಮೆ ಕಳೆದುಕೊಂಡು ಬ್ರಹ್ಮನಾಗುತ್ತದೆ.

ಬುದ್ಧ ಅಂಗುಲಿಮಾಲನನ್ನು ಭೇಟಿಯಾದ. ಅವನೊಂದಿಗೆ ಮಾತನಾಡಲಿಲ್ಲ. ಅಂಗುಲಿಮಾಲ ಎನ್ನುವುದು ತನುವನ್ನು ಆವರಿಸಿಕೊಂಡ ಭ್ರಮೆ. ಬುದ್ಧ ಭ್ರಮೆಯೊಂದಿಗೆ ಮಾತನಾಡಿದ್ದರೆ, ಬುದ್ಧನ ಬೆರಳು ಅಂಗುಲಿಮಾಲನ ಕೊರಳು ಸೇರುತ್ತಿತ್ತು. ಬುದ್ಧ ಸದ್ಗುರುನಾಥ ! ಬುದ್ಧ ಬುದ್ಧನೊಂದಿಗೆ ಮಾತನಾಡಿದ ! ಅಂಗುಲಿಮಾಲನೆಂಬ ಭ್ರಮೆ ಕಳಚಿ ಬ್ರಹ್ಮನಾದ. ಅಂಗುಲಿಮಾಲನ ತನುವಿಂಗೆ ಬಂದ ಕರ್ಮ ಬುದ್ಧನಿಂದ ಹರಿದು, ಬುದ್ಧನಾದ.

ತನುವಿನ ಮನ ಇಚ್ಛೆ ಪಟ್ಟರೆ ತನುವಿಗೆ ಬಂದ ಭ್ರಮೆಯೆಂಬ ಕರ್ಮ ಹರಿದು ಬ್ರಹ್ಮಸುಖವನ್ನುಣ್ಣುತ್ತದೆ. ಅರಿವೆಂಬ ಚೆನ್ನಮಲ್ಲಿಕಾರ್ಜುನ ದೇವರು ತಾನೆ ಆಗುತ್ತದೆ. ಆದರೆ ಮನಕ್ಕೆ ಅರಿವಾಗಬೇಕಷ್ಟೇ ಅಂದರೆ ಮಾತ್ರ ಅರಿವೆಂಬ ಚೆನ್ನಮಲ್ಲಿಕಾರ್ಜುನ ಕಡೆಗಣ್ಣಿನಿಂದ ನೋಡಿ ಮನದ ಕಷ್ಟವನ್ನು ಹರಿಯುವನು.

□

---

**ಅರಿವಿನ ಪರಿಮಳ**

- □ ದೇಹ ಅರಿವಿನ ಸುಖ ಉಣಲು ಬಂದಿದೆ. ಆ ಅರಿವೆ ಗುರು, ಆ ಗುರುವಿನ ಸುಖ ಉಣ್ಣಲು ಬಂದಿದೆ. ಆ ಗುರುದೇವನೇ ಮಹಾದೇವ, ಆ ಮಹಾದೇವನ ಸುಖ ಉಣ್ಣಲು ಬಂದಿದೆ. ಆ ಮಹಾದೇವನೇ ಸದಾಶಿವ, ಆ ಸದಾಶಿವನ ಸುಖ ಉಣ್ಣಲು ಬಂದಿದೆ. ಆ ಸದಾಶಿವನೆ ಪರಬ್ರಹ್ಮ, ಆ ಪರಬ್ರಹ್ಮನ ಸುಖ ಉಣ್ಣಲು ಬಂದಿದೆ. ಆ ಪರಬ್ರಹ್ಮ ಬೇರಿಲ್ಲ, ತಾನೆ ಆ ಬ್ರಹ್ಮ. ಅಹಂಬ್ರಹ್ಮಾಸ್ಮಿ.
- □ ತನುವಿಗೆ ಬಂದ ಕರ್ಮ ಹರಿಯುವ ಕಾಲ ದೂರವಿದ್ದರೆ ತನುವನ್ನು ಮನ ಏನೂ ತಿಳಿಯದಂತೆ ದರಿದ್ರನನ್ನಾಗಿಸುತ್ತದೆ. ಕಳ್ಳ, ಸುಳ್ಳ,ದರೋಡೆಕೋರ, ಭ್ರಷ್ಟಾಚಾರಿ, ಕೊಲೆಗಡುಕ, ಮುಂತಾದ ಹೆಸರಿನ ಪಟ್ಟ ಕಟ್ಟಿ ಮನ ತನುವನ್ನು ನೋಯುವಂತೆ, ಕೊಲೆ ಮಾಡುವಂತೆ ಇಲ್ಲ ಆತ್ಮಹತ್ಯೆ ಮಾಡಿಕೊಳ್ಳುವಂತೆ, ಸದಾ ಬಡತನದಲ್ಲಿ ಮುಂದುವರೆದು ಏನೂ ತಿಳಿಯದ ಅಜ್ಞಾನಿಯಂತೆ ಮಾಡುತ್ತದೆ. ಇದೆಲ್ಲಾ ಮನದ ಆಟ. ತನುವಿಗೆ ಕೆಟ್ಟ ಲೇಬಲ್ ಹಚ್ಚಿ ತನುವಿನಲ್ಲಿಯೇ ಉಳಿದುಕೊಂಡು, ಬ್ರಹ್ಮಸುಖವನ್ನು ಉಣ್ಣಲು ಬಂದ ತನುವಿಗೆ ಭ್ರಮೆಯ ಸಂಕಟವನ್ನು ಒಡ್ಡಿ, ಮೃತ್ಯುವಿಗೆ ಕೊಂಡೊಯ್ಯುತ್ತದೆ.
- □ ಏಕೆಂದರೆ ತನುವಿಗೆ ಸಂಕಟವನ್ನು ಒಡ್ಡಿದ ಭ್ರಮೆ ಎಂಬ ಮನವೇ ಬ್ರಹ್ಮ ಸುಖವನ್ನು ಉಣ್ಣಲು ನಿರ್ಧರಿಸಬೇಕಾಗಿದೆ.
- □ ತನುವಿನ ಮನ ಇಚ್ಛೆ ಪಟ್ಟರೆ ತನುವಿಗೆ ಬಂದ ಭ್ರಮೆಯೆಂಬ ಕರ್ಮ ಹರಿದು ಬ್ರಹ್ಮಸುಖವನ್ನುಣ್ಣುತ್ತದೆ.

# ಅರಿಷಡ್ವರ್ಗ ಕಳೆದು ಅರಿವಾಗುವ ಮಾರ್ಗ

**ಉದಯದಲೆದ್ದು ನಿಮ್ಮ ನೆನೆವೆನಯ್ಯಾ.**
**ಕಸದೆಗೆದು ಚಳೆಯ ಕೊಟ್ಟು**
**ನಿಮ್ಮ ಬರವ ಹಾರುತಿರ್ದೆನಯ್ಯಾ.**
**ಹಸೆ ಹಂದರವಿಕ್ಕಿ ನಿಮ್ಮಡಿಗಳಿಗೆಡೆ ಮಾಡಿಕೊಂಡಿರ್ದೆನಯ್ಯಾ.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನೀನಾವಾಗ ಬಂದೆಯಾ ಎನ್ನ ದೇವಾ ?**

''ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು ಹೊತ್ತು ಹೋಗುವ ಮುನ್ನ ಪೂಜಿಸು ಲಿಂಗವ, ಹೊತ್ತು ಹೋದ ಬಳಿಕ ನಿನ್ನನ್ನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ ತೊತ್ತು ಕೆಲಸವ ಮಾಡು ಕೂಡಲ ಸಂಗಮದೇವನ''

''ಹೊತ್ತಾರೆ ಎದ್ದು ಶಿವಲಿಂಗ ದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ? ಬಾಳುವೆಣನ ಬೀಳುವೆಣನ ಸಂಸಾರವೇನವನ? ನಡೆವೆಣನ ನುಡಿವೆಣನ ಸಂಸಾರವೇನವನ ? ಕರ್ತು ಕೂಡಲಸಂಗಮದೇವಾ ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ ?''

ಅಕ್ಕ, ಉದಯದಲೆದ್ದು ನಿಮ್ಮ ನೆನೆವೆನಯ್ಯಾ ಎಂದರೆ ಬಸವಣ್ಣನವರು ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು ಪೂಜಿಸು ಲಿಂಗವ ಎಂದಿದ್ದಾರೆ.

ಸಂತ ಶರಣರೆಲ್ಲರ ಸೂತ್ರ ಒಂದೆ. ಭಾಷೆಯು ಒಂದೆ. ಅವರ ಆಶಯಗಳು ಒಂದೆ ಆಗಿವೆ. ತನುವಿನಲ್ಲಿರುವ ಅರಿವೆಂಬ ದೇವರನ್ನು ಭಕ್ತಿಯಿಂದ ಪೂಜಿಸುವದು. ತನುವಿನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕಸ ತೆಗೆದು ಚಳೆ ಹೊಡೆದು ಅರಿವೆಂಬ ದೇವರ ಬರುವಿಗಾಗಿ ಸದಾ ನೆನೆಯುವುದು. ಹಸೆ ಹಂದರವನಿಕ್ಕಿ ಮನವನ್ನೆ ಭಕ್ತನನ್ನಾಗಿ ಮಾಡಿ, ಅರಿವೆಂಬ ದೇವರ ಅಡಿಗಳಿಗೆ ಎಡೆ ಮಾಡಿಕೊಂಡು ಸದಾ ಇದ್ದೆನಯ್ಯಾ. ಚೆನ್ನಮಲ್ಲಿಕಾರ್ಜುನಯ್ಯನೆಂಬ ಅರಿವಿನ ದೇವರು ಯಾವಾಗ ಬಂದು ಎನ್ನನು ಅಪ್ಪಿಕೊಂಡಾನೊ ಎಂದು ಕಾಯುತ್ತಿದ್ದಾಳೆ ಅಕ್ಕ.

ಅರಿವು ತನುವಿನ ಕಣ ಕಣದಲ್ಲಿದ್ದರೂ ಅದನ್ನು ಒಲಿಸಿಕೊಳ್ಳುವುದು ಎಷ್ಟೊಂದು ಜಟಿಲ ಎಂದು ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಮೇಲಿನ ವಚನಗಳನ್ನು ನೋಡಿದರೆ ಭಾಸವಾಗುತ್ತದೆ. ಅರಿವಿಲ್ಲದ ತನುಗಳು ಇವೆಯೋ ಹೇಗೆ ಎಂದು ಪ್ರಶ್ನಿಸಿದರೆ ಜ್ಞಾನಿಗಳ ಪ್ರಕಾರ ಇಲ್ಲ ಎಂದು ಹೇಳಬೇಕಾಗುತ್ತದೆ. ಆದರೆ ಸದಾ ಅರಿವಿನ ಕೃಷಿಯಲ್ಲಿರುವ ಮಹಾಜ್ಞಾನಿಗಳಿಗೆ ಶೇಕಡಾ ಎಂಟರಷ್ಟು ಮಾತ್ರ ಅರಿವು ಬಳಕೆಯಾಗಿದೆ ಎಂದು ಪಶ್ಚಿಮದ ಜ್ಞಾನಿಯೊಬ್ಬ ಹೇಳಿದ್ದಾನೆ. ಅರಿವಿನ ಬಗ್ಗೆ ಏನೂ ಕೃಷಿ ಮಾಡದ ಸಾಮಾನ್ಯರ ಗತಿ ಏನು? ತನುವಿಗೆ ಅರಿವು 0.1 ಮಾತ್ರ ಕೆಲವರಿಗೆ 0.9 ಮಾತ್ರ ಬಳಕೆಯಾಗುತ್ತದೆ. ಅದಕ್ಕಾಗಿಯೇ ಕೋಟಿಗೊಬ್ಬ ಶರಣ ಎಂದಿದ್ದಾರೆ. ಹಾಗಾದರೆ ಉಳಿದವರು ಮನುಷ್ಯರು ಅಲ್ಲವೆ ಹೇಗೆ ಎಂದು ಪ್ರಶ್ನಿಸಿದರೆ ಒಮ್ಮೆ ಮನುಷ್ಯರಾಗಿರುತ್ತಾರೆ ಮತ್ತೊಮ್ಮೆ ರಾಕ್ಷಸರಾಗುತ್ತಾರೆ.

ಉದಾಹರಣೆಗೆ ಮನ ಬೆಳಿಗ್ಗೆ ತನುವಿಗೆ ಸ್ನಾನ ಮಾಡಿಸಿ ದೇವಸ್ಥಾನಕ್ಕೆ ಹೋಗಿ ಪೂಜಿಸಲು ಪ್ರೇರೇಪಿಸುತ್ತದೆ, ಆಫೀಸಿಗೆ ಹೋಗಿ ಲಂಚ ಪಡೆದು ಸುಖಿಸಲು ಪ್ರೇರೇಪಿಸುತ್ತದೆ, ರಾತ್ರಿ ಕ್ಲಬ್ಬಿಗೆ ಹೋಗಿ ತನುವಿಗೆ ಕುಡಿಸಿ ಸುಖಿಸಲು ಪ್ರೇರೇಪಿಸುತ್ತದೆ. ಇಲ್ಲಿ ತನು ಒಂದೆ ಆದರೂ ಬೆಳಿಗ್ಗೆ ಪೂಜಿಸಿ ಸಾತ್ವಿಕನಾಗುತ್ತದೆ. ಆಫೀಸಿನಲ್ಲಿ ರಾಜಸನಾಗುತ್ತದೆ. ರಾತ್ರಿ ಕುಡಿದು ತಾಮಸ ಪ್ರವೃತ್ತಿಯನ್ನು ಬೀರುತ್ತದೆ. ಇದೆಲ್ಲ ಮನ ತನುವಿಗೆ ಮಾಡಿಸುವ ಕೆಲಸ.

ಅರಿವನ್ನು ದೃಷ್ಟಿಯಾರೆ ನೋಡದವನ ಸಂಸಾರವೇನವನ ? ಬಾಳುವೆಣನ ಬೀಳುವೆಣನ ಸಂಸಾರವೇನವನ ? ನಡೆವೆಣನ ನುಡಿವೆಣನ ಸಂಸಾರ ವೇನವನ ? ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ನುಡಿದು, ನುಡಿದಂತೆ ನಡೆಯದವನು ಹೆಣ. ಇದು ತನುವಿನ ತಪ್ಪಲ್ಲ. ತನುವಿನ ಮನ ತನುವಿನ ಸುಖಕ್ಕಾಗಿ ಹಾಕಿಕೊಂಡ ತಪ್ಪು ಮಾರ್ಗ. ತನುವಿನ ಅರಿವು ನುಡಿಯುತ್ತದೆ. ತನು ವಿನ ಮನ, ಅರಿವು ನುಡಿದಂತೆ ನಡೆಯಗೊಡುವುದಿಲ್ಲ. ಆಗ ಅರಿವು ಮನಕ್ಕೆ ತನು ಇರುವವರೆಗೆ ಚುಚ್ಚಿ ಚುಚ್ಚಿ ಕೊಲ್ಲುತ್ತದೆ. ಈ ಮನಕ್ಕೆ ಅರಿವಿನ ದರ್ಶನವಾಗಬೇಕು. ಅರಿವೇ ತಾನಾಗಬೇಕು. ಆಗ ತನು ಅರಿವಿನಿಂದ ನೋಡುತ್ತದೆ. ಅರಿವಿನಿಂದ ನುಡಿಯುತ್ತದೆ. ಅರಿವಿನಿಂದ ಕೇಳುತ್ತದೆ. ಅರಿವಿನಿಂದ ವಾಸಿಸಿ ಸ್ಪರ್ಶಿಸುತ್ತದೆ. ರುಚಿಸುತ್ತದೆ. ಅರಿವೆಂಬ ಚೆನ್ನಮಲ್ಲಿಕಾರ್ಜುನನಲ್ಲಿ ಮನ ಲೀನವಾಗಿ ಆ ಅರಿವೇ ತಾನಾಗುವವರೆಗೆ ಅರಿವಿಗೆ ಹೋಗುವ ಅನೇಕ ಒರಸೆಗಳನ್ನು ಕಲಿಯಬೇಕಾಗುತ್ತದೆ. ಇಲ್ಲದಿದ್ದರೆ ಮನ ಸಂಗ್ರಹದ ಜ್ಞಾನ ಬಳಸಿಕೊಂಡು ಒಮ್ಮೆ ಸುಖಿಸುತ್ತದೆ. ಮತ್ತೊಮ್ಮೆ ಬಳಲುತ್ತದೆ. ತಾನು ಏನು ಎನ್ನುವ ಅರಿವು ತನಗೆ ಆಗುವುದೇ ಇಲ್ಲ.

□

**ಅರಿವಿನ ಪರಿಮಳ**

- ಸಂತ ಶರಣರೆಲ್ಲರ ಸೂತ್ರ ಒಂದೆ. ಭಾಷೆಯು ಒಂದೆ. ಅವರ ಆಶಯಗಳು ಒಂದೆ ಆಗಿವೆ. ತನುವಿನಲ್ಲಿರುವ ಅರಿವೆಂಬ ದೇವರನ್ನು ಭಕ್ತಿಯಿಂದ ಪೂಜಿಸುವದು. ತನುವಿನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕಸ ತೆಗೆದು ಚಳೆ ಹೊಡೆದು ಅರಿವೆಂಬ ದೇವರ ಬರುವಿಗಾಗಿ ಸದಾ ನೆನೆಯುವುದು.
- ಮನ ಬೆಳಿಗ್ಗೆ ತನುವಿಗೆ ಸ್ನಾನ ಮಾಡಿಸಿ ದೇವಸ್ಥಾನಕ್ಕೆ ಹೋಗಿ ಪೂಜಿಸಲು ಪ್ರೇರೇಪಿಸುತ್ತದೆ, ಆಫೀಸಿಗೆ ಹೋಗಿ ಲಂಚ ಪಡೆದು ಸುಖಿಸಲು ಪ್ರೇರೇಪಿಸುತ್ತದೆ, ರಾತ್ರಿ ಕ್ಲಬ್ಬಿಗೆ ಹೋಗಿ ತನುವಿಗೆ ಕುಡಿಸಿ ಸುಖಿಸಲು ಪ್ರೇರೇಪಿಸುತ್ತದೆ. ಇಲ್ಲಿ ತನು ಒಂದೆ ಆದರೂ ಬೆಳಿಗ್ಗೆ ಪೂಜಿಸಿ ಸಾತ್ವಿಕನಾಗುತ್ತದೆ. ಆಫೀಸಿನಲ್ಲಿ ರಾಜಸನಾಗುತ್ತದೆ. ರಾತ್ರಿ ಕುಡಿದು ತಾಮಸ ಪ್ರವೃತ್ತಿಯನ್ನು ಬೀರುತ್ತದೆ. ಇದೆಲ್ಲ ಮನ ತನುವಿಗೆ ಮಾಡಿಸುವ ಕೆಲಸ.

# ಅರಿವಿನ ಅಮೃತ ಸವಿದ ಕರು

**ಉಳ್ಳುದೊಂದು ತನು, ಉಳ್ಳುದೊಂದು ಮನ.**
**ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ ?**
**ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ ?**
**ಅಕಟಕಟಾ, ಕೆಟ್ಟೆ ಕೆಟ್ಟೆ! ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ!**
**ಎರಡಕ್ಕೆ ಬಿಟ್ಟ ಕರುವಿನಂತೆ !**
**ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ**
**ಚೆನ್ನಮಲ್ಲಿಕಾರ್ಜುನಾ ?**

**ಉಳ್ಳುದೊಂದು ತನು, ಉಳ್ಳುದೊಂದು ಮನ. ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ? :**

ತನು ಕಾಣುತ್ತದೆ. ತನುವಿನಲ್ಲಿ ಮನ ಇದೆ ಎಂದು ಗೋಚರಕ್ಕೆ ಬರುತ್ತದೆ. ತನುವನ್ನು ಕೂಡಿಸಿ ಮನದಿಂದ ಧ್ಯಾನ ಮಾಡಲು ಬರುವುದಿಲ್ಲ. ಆದರೂ ಎಲ್ಲೆಡೆ ಧ್ಯಾನ ಕೇಂದ್ರಗಳಿವೆ. ವಿವಿಧ ಭಂಗಿಯಲ್ಲಿ ತನುವಿಗೆ ಧ್ಯಾನ ಕಲಿಸುವ ಯೋಗ ಶಿಕ್ಷಕರು ಇದ್ದಾರೆ. ಮನದಿಂದ ಧ್ಯಾನ ಮಾಡಿದರೆ ತನು ಒಂದು ಕ್ಷಣವೂ ಧ್ಯಾನಕ್ಕೆ ಕೂಡುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ತನುವನ್ನು ಧ್ಯಾನಕ್ಕೆ ಕರೆದುಕೊಂಡು ಹೋದದ್ದೆ ಮನ. ತಾನು ಕರೆದುಕೊಂಡು ಹೋಗಿ ತಾನೇ ಕೂಡಲು ಸಾಧ್ಯವೆ ಹೇಗೆ ಎಂದು ಮನ ಪ್ರಶ್ನಿಸಿಕೊಂಡಿಲ್ಲ. ಅಂದರೆ ತನುವಿನೊಂದಿಗೆ ಮನ ಧ್ಯಾನ ಮಾಡಲು ಬರುವುದಿಲ್ಲವೆಂದು ಅಕ್ಕ ಸಿದ್ದಮಾಡಿ ತೋರಿಸಿದ್ದಾಳೆ.

**ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ ? ಅಕಟಕಟಾ, ಕೆಟ್ಟೆ ಕೆಟ್ಟೆ ! ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ! ಎರಡಕ್ಕೆ ಬಿಟ್ಟ ಕರುವಿನಂತೆ ! :**

ಮನ ತನುವನ್ನು ಸರಿಯಾಗಿ ಸಂಸಾರ ಮಾಡಲು ಬಿಡುವುದಿಲ್ಲ. ತನ್ನನ್ನು ತಾನು ತಿಳಿಯಲು ಬಿಡುವುದಿಲ್ಲ. ಸಂಸಾರದಲ್ಲಿ ಮನ ಗಂಡನಾಗಿ ಹೆಂಡತಿಯನ್ನು ಕಾಡುತ್ತದೆ. ತಂದೆಯಾಗಿ ಮಕ್ಕಳನ್ನು ಕಾಡುತ್ತದೆ. ಮನೆಯ ಮಾಲಿಕನಾಗಿ ನೆರೆ ಹೊರೆಯವರನ್ನು ಕಾಡುತ್ತದೆ. ಅಧಿಕಾರಿಯಾಗಿ ಸಹಾಯಕರನ್ನು ಕಾಡುತ್ತದೆ. ಶ್ರೀಮಂತ ಬಡವನಾಗಿ, ಭಿಕ್ಷುಕ ದಾನಿಯಾಗಿ, ಗುರು ಶಿಷ್ಯನಾಗಿ, ಸ್ವಾಮಿ ಸೇವಕನಾಗಿ, ಹೀಗೆ ನಾನಾ ಪಾತ್ರಗಳನ್ನು ಧರಿಸಿಕೊಂಡು ಮನಕ್ಕೆ ಆಶ್ರಯ ಕೊಟ್ಟ ತನುವನ್ನು ಕ್ಷಣ ಕ್ಷಣಕ್ಕೂ ಸಂಕಟದಲ್ಲಿ ಮುಳುಗಿಸಿ ತನಗರಿಯದಂತೆ ನಿಧಾನವಾಗಿ ಕೊಲ್ಲುತ್ತದೆ. ಹೀಗಾಗಿ ಮನ ಸಂಸಾರಕ್ಕೂ ಹೊಂದಲಿಲ್ಲ.

ಆನಂದದ ಮಾತಿಗೆ ಮರುಳಾಗಿ ಶಿಷ್ಯನಾಗುತ್ತದೆ. ಆ ಮಾತುಗಳನ್ನೆ ಕಲಿತು, ಸಂಗ್ರಹಿಸಿಕೊಂಡು, ಭಗವದ್ಗೀತೆ, ಬೈಬಲ್, ವೇದ ಉಪನಿಷತ್‌ಗಳನ್ನು ಅಭ್ಯಸಿಸಿ ಸಂಗ್ರಹಿಸಿಕೊಂಡು ಗುರುವಾಗುತ್ತದೆ. ಮಠ ಆಶ್ರಮ ಉತ್ಸವಗಳನ್ನು ಮಾಡುತ್ತಾ ಒಮ್ಮೆ ಸುಖಿಸುತ್ತದೆ. ಪೂರ್ವಾಶ್ರಮದ ಸಂಸಾರದ ಸುಖವನ್ನು ನೆನೆಪಿಸಿಕೊಂಡು ಮತ್ತೊಮ್ಮೆ ದುಃಖಿಸುತ್ತದೆ. ಪರಮಾರ್ಥದ ವೇಷ ಧರಿಸಿ

ಗುರುವಾದರೂ ರೂಪ ರುಚಿ ಸಂಪತ್ತಿಗಾಗಿ ಸದಾ ಸಂಕಟಪಡುತ್ತದೆ. ಹೀಗಾಗಿ ಮನ ಪರಮಾರ್ಥಕ್ಕೂ ಹೊಂದಲಿಲ್ಲ.

ಹೀಗೆ ಮನ ಸಂಸಾರವೆಂಬ ತಾಯಿಯನ್ನು, ಪರಮಾರ್ಥವೆಂಬ ತಾಯಿಯನ್ನು ಬಿಟ್ಟು ಅಗಲಿದ ಕರುವಿನಂತೆ ಒದ್ದಾಡುತ್ತದೆ.

**ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ ಚೆನ್ನಮಲ್ಲಿ ಕಾರ್ಜುನಾ ? :**

ಮನ ತನುವಿಗೆ ಸಂಸಾರ ಹಚ್ಚುತ್ತದೆ. ಆ ಕ್ಷೇತ್ರದಲ್ಲಿದ್ದು ಕಾಯಾ ವಾಚಾ ಮನ ಪೂರ್ವಕವಾಗಿ ಕಾರ್ಯನಿರ್ವಹಿಸುವುದಿಲ್ಲ. ಮನ ತನುವಿಗೆ ಪರಮಾರ್ಥದ ಮಾರ್ಗದಲ್ಲಿ ಉಳಿಯಲು ಪ್ರೇರೇಪಿಸುತ್ತದೆ. ಆ ಕ್ಷೇತ್ರದಲ್ಲಿದ್ದು ಕಾಯಾ ವಾಚಾ ಮನ ಪೂರ್ವಕವಾಗಿ ಅಲ್ಲಿಯೂ ಕಾರ್ಯನಿರ್ವಹಿಸುವುದಿಲ್ಲ. ಮನ ಎರಡನ್ನು ಹಿಡಿಯುತ್ತದೆ. ಇವೆರಡನ್ನೂ ಪೂರ್ತಿಗಾಣಿಸುವುದಿಲ್ಲ. ಬಿಲ್ವ, ಬೆಳವಲಕಾಯಿ ನೋಡಲು ಒಂದೆ ಆಗಿ ಕಂಡರೂ ಇವೆರಡೂ ಬೇರೆ ಬೇರೆ. ಇವೆರಡನ್ನೂ ಒಂದೆ ಆಗಿ ಹಿಡಿಯಲು ಬರುವುದಿಲ್ಲ.

ಮನಕ್ಕೆ ತನುವನ್ನು ಹಿಡಿದು ಸಂಸಾರ ಹಾಗೂ ಪರಮಾರ್ಥ ಪೂರ್ತಿ ಗಾಣಿಸಲು ಬರುವುದಿಲ್ಲ. ಏಕೆಂದರೆ ಇರುವುದೊಂದೆ ತನು, ಇರುವುದೊಂದೆ ಮನ. ಅದರ ಅವತಾರಗಳು ಮಾತ್ರ ಅನೇಕ. ತನುವಿನ ಕಣ ಕಣದಲ್ಲಿರುವ ಅರಿವಿನ ದರ್ಶನ ಮನಕ್ಕಾಗದ ವಿನಃ ಒಮ್ಮೆ ಸಂಸಾರಿಯಾಗುತ್ತದೆ, ಮತ್ತೊಮ್ಮೆ ಪರಮಾರ್ಥಿಯಾಗುತ್ತದೆ. ಸಂಸಾರದಲ್ಲಿದ್ದು ಪರಮಾರ್ಥ ಮಾತನಾಡಿ ಹಾದರ ಮಾಡುತ್ತದೆ. ಪರಮಾರ್ಥದ ವೇಷ ಹಾಕಿ ಸಂಸಾರದ ಹಾದರದ ಸುಖವನ್ನು ಸವಿಯುತ್ತದೆ. ಹೀಗಿರುವ ಮರ್ಕಟ ಮನಕ್ಕೆ ಅರಿವೆಂಬ ತಾಯಿಯ ಪರಿಚಯವಾದರೆ ಸಾಕು ಎರಡಳಿದು ಶಿಶುವಾಗಿ ತಾಯಿಯ ಕೆಚ್ಚಲು ಹಿಡಿದು ಅರಿವಿನ ಅಮೃತ ಸವಿಯುತ್ತದೆ.

□

---

**ಅರಿವಿನ ಪರಿಮಳ**

□ ಎಲ್ಲೆಡೆ ಧ್ಯಾನ ಕೇಂದ್ರಗಳಿವೆ. ವಿವಿಧ ಭಂಗಿಯಲ್ಲಿ ತನುವಿಗೆ ಧ್ಯಾನ ಕಲಿಸುವ ಯೋಗ ಶಿಕ್ಷಕರು ಇದ್ದಾರೆ. ಮನದಿಂದ ಧ್ಯಾನ ಮಾಡಿದರೆ ತನು ಒಂದು ಕ್ಷಣವೂ ಧ್ಯಾನಕ್ಕೆ ಕೂಡುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ತನುವನ್ನು ಧ್ಯಾನಕ್ಕೆ ಕರೆದುಕೊಂಡು ಹೋದದ್ದೆ ಮನ.

□ ಇರುವುದೊಂದೆ ತನು, ಇರುವುದೊಂದೆ ಮನ. ಅದರ ಅವತಾರಗಳು ಮಾತ್ರ ಅನೇಕ. ತನುವಿನ ಕಣ ಕಣದಲ್ಲಿರುವ ಅರಿವಿನ ದರ್ಶನ ಮನಕ್ಕಾಗದ ವಿನಃ ಒಮ್ಮೆ ಸಂಸಾರಿಯಾಗುತ್ತದೆ, ಮತ್ತೊಮ್ಮೆ ಪರಮಾರ್ಥಿಯಾಗುತ್ತದೆ. ಸಂಸಾರದಲ್ಲಿದ್ದು ಪರಮಾರ್ಥ ಮಾತನಾಡಿ ಹಾದರ ಮಾಡುತ್ತದೆ. ಪರಮಾರ್ಥದ ವೇಷ ಹಾಕಿ ಸಂಸಾರದ ಹಾದರದ ಸುಖವನ್ನು ಸವಿಯುತ್ತದೆ.

# ಹಟಮಾರಿ ಮನದ ಅರಿವಿನ ಊಟ

> ಊಡಿದಡುಣ್ಣದು, ನೀಡಿದಡೊಲಿಯದು.
> ಕಾಡದು ಬೇಡದು ಒಲಿಯದು ನೋಡಾ .
> ಊಡಿದಡುಂಡು ನೀಡಿದಡೊಲಿದು ಬೇಡಿದ ವರವ ಕೊಡುವ
> ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆ,
> ಕಾಣಾ ಚೆನ್ನಮಲ್ಲಿಕಾರ್ಜುನಾ.

**ಊಡಿದಡುಣ್ಣದು, ನೀಡಿದಡೊಲಿಯದು. ಕಾಡದು ಬೇಡದು ಒಲಿಯದು ನೋಡಾ :**

ತಾಯಿ ಬೆಳ್ಳಿ ಬಟ್ಟಲಲ್ಲಿ ಹಾಲು ಮೊಸರು ಅನ್ನ ಕಲಿಸಿ ತುತ್ತು ಮಾಡಿ ಚಂದ್ರ ಚುಕ್ಕಿ ತೋರಿಸಿ ಪರಿ ಪರಿಯಲ್ಲಿ ರಮಿಸಿ ಮಗುವಿಗೆ ಉಣಿಸಲು ಹೋದರೆ ಹಟಮಾರಿ ಮಗು ಉಣ್ಣುವುದಿಲ್ಲ. ತಿನ್ನದಿದ್ದರೆ ಮಗು ಸದೃಢವಾಗುವುದಾದರೂ ಹೇಗೆ  ಎನ್ನುವ ಚಿಂತೆ ತಾಯಿಗೆ. ಆಗೊಂದು ಈಗೊಂದು ತುತ್ತು ತಿನ್ನುತ್ತ ತಾಯಿಯನ್ನು ಗೋಳು ಹೊಯ್ದು ಕೊಳ್ಳುವ ಸುಖ ಮಗುವಿಗೆ. ತಾಯಿಯ ಕೈ ತುತ್ತಿನ ಅಮೃತ ಉಣ್ಣುವ ಸುಖಕ್ಕಿಂತ ತಾಯಿಯನ್ನು  ಕಾಡಿಸುವ ಸುಖವೇ ಮಗುವಿಗೆ ಅಧಿಕವಾದಂತೆ  ಸರ್ವರಿಗೂ ಗೋಚರಿಸುತ್ತದೆ. ಪ್ರತಿ ಮನೆಯಲ್ಲಿ ತಾಯಿ ಮಗುವಿಗೆ ಊಟ ಮಾಡಿಸುವದಕ್ಕಾಗಿಯೇ ನಾಲ್ಕೈದು ತಾಸು ವ್ಯಯ ಮಾಡುತ್ತಾಳೆ.  ಇದು ತಾಯಿ ಮಗುವಿನ ಸಂಬಂಧ.

ಅರಿವು ಮತ್ತು ಮನದ ಸಂಬಂಧವು ಹೀಗೆಯೇ ಇದೆ. ಈ ಸಂಬಂಧದ ಬೆಸುಗೆಗಾಗಿಯೇ ಅಕ್ಕಮಹಾದೇವಿ ಊಡಿದಡುಣ್ಣದು , ನೀಡಿದಡೊಲಿಯದು. ಕಾಡದು ಬೇಡದು ಒಲಿಯದು ನೋಡಾ ಎಂದಿದ್ದಾರೆ .

ಅರಿವೇ ಗುರು. ಆ ಗುರುದೇವ ತನುವಿನಲ್ಲಿಯೇ ಇದ್ದು ಅರಿವಿನ ಸುಖವನ್ನು ಮನಕ್ಕೆ ಉಣ್ಣಿಸಿ, ಮನವನ್ನು ತನ್ನಂತೆ ಮಾಡಿಕೊಳ್ಳಬೇಕೆಂಬ ತಾಯಿ ಬಯಕೆ ಆತನದ್ದು.  ತನುವನ್ನು ಅರಿವಿನ ತನುವನ್ನಾಗಿ ಮಾಡಿ ಸದೃಢಗೊಳಿಸಬೇಕೆಂಬ ಚಿಂತೆ ಆತನದ್ದು. ಆ ಗುರುವು ತಾಯಿಯಂತೆ ಮನ ಮಾಡುವ ಹಟವನ್ನು ಲೆಕ್ಕಿಸುವುದಿಲ್ಲ. ಕ್ಷಣ ಕ್ಷಣಕ್ಕೂ ಆ ಗುರುರಾಯ ಮನಕ್ಕೆ ಅರಿವಿನ ಊಟವನ್ನೆ ಮಾಡಿಸುತ್ತಾನೆ. ಮನ ತನುವನ್ನು ಬಳಸಿಕೊಂಡು ಕಳುವು ಮಾಡಿದಾಗ ಅರಿವೆಂಬ ಗುರು ಮೈದಡವಿ ಮತ್ತೊಮ್ಮೆ ಮಾಡಬೇಡವೆಂದು ಅರಿವಿನ ಅಮೃತ ಉಣ್ಣಿಸುತ್ತಾನೆ. ಮನ ತನುವನ್ನು ಬಳಸಿಕೊಂಡು ಹಾದರ ಮಾಡಿದಾಗ ಪುನಃ ಮೈದಡವಿ ಮತ್ತೊಮ್ಮೆ ಮಾಡಬೇಡವೆಂದು ಅರಿವಿನ ಊಟ ಮಾಡಿಸುತ್ತಾನೆ. ಮನ ತನುವನ್ನು ಬಳಸಿಕೊಂಡು ಭ್ರಷ್ಟಾಚಾರದಲ್ಲಿ ಭಾಗಿಯಾಗಿ ಲಂಚ ಪಡೆದಾಗ ಮೈದಡವಿ ಬೇಡವೆಂದು ಅರಿವಿನ ಊಟ ಮಾಡಿಸುತ್ತಾನೆ. ಅಪರಾಧ ಮಾಡುವ ಮುನ್ನ ಬೇಡವೆನ್ನುತ್ತಾನೆ ಮಾಡಿದ ಮೇಲೆ ಮತ್ತೊಮ್ಮೆ ಮಾಡಬೇಡವೆಂದು ಮೈದಡವುತ್ತಾನೆ. ಗುರುವಿನ ಲೀಲೆ ಅನಂತ. ತಾಯಿ ಅಮೃತದ ಅಡಿಗೆ ಉಣಿಸಿ ಮಗುವಿನ ಕಾಯವನ್ನು ಸದೃಢಗೊಳಿಸಿದಂತೆ.

ಅದಕ್ಕಾಗಿ ಬಸವಣ್ಣ ''ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನಿಮ್ಮ ಧರ್ಮ'' ಎಂದಿದ್ದಾರೆ.

ತಾಯಿ ಮಾಂಸಪಿಂಡಕ್ಕೆ ಜನ್ಮ ನೀಡಿ ಸದೃಢಗೊಳಿಸಿದರೆ ಅರಿವೆಂಬ ಗುರು ಆ ಮಾಂಸ ಪಿಂಡವನ್ನು ಮಂತ್ರ ಪಿಂಡ ಮಾಡಿ ಪುನರ್ ಜನ್ಮ ನೀಡುತ್ತಾನೆ.

ಆದರೆ ಅರಿವೆಂಬ ಗುರುದೇವ ಪರಿ ಪರಿಯಿಂದ ಕಾಡಿ ಬೇಡಿ ಉಣ್ಣಿಸುವ ಅಮೃತದ ಊಟ ಮನಕ್ಕೆ ರುಚಿಸುವುದಿಲ್ಲ. ಮಗುವಿದ್ದಾಗ ಮನ ತಾಯಿ ಉಣ್ಣಿಸುವ ಊಟಕ್ಕೆ ಸೆಟೆದುಕೊಂಡು ಹಟ ಮಾಡುತ್ತದೆ. ಹಾಗೆಯೇ ದೊಡ್ಡವನಾದಾಗ ಅರಿವೆಂಬ ಗುರುವಿನ ಊಟವನ್ನು ಉಣ್ಣುವುದಿಲ್ಲ. ನೀಡಿದರೆ ಒಲಿಯುವುದಿಲ್ಲ. ಅರಿವಿಗೆ ಒಲಿತು ಅರಿವೇ ತಾನಾಗುವುದಿಲ್ಲ. ಅರಿವಿನ ಊಟಕ್ಕಾಗಿ ಮನ ಅರಿವಿಗೆ ಶರಣು ಹೋಗಬೇಕು. ಆ ಅರಿವಿಗೆ ಬೇಡಬೇಕು. ಆ ಅರಿವಿಗೆ ಒಲಿಯಬೇಕು. ಆದರೆ ಚುಕ್ಕಿ ಚಂದ್ರ ತೋರಿಸಿ ಉಣ್ಣಿಸಿದರೆ ಉಣ್ಣದ ಹಟಮಾರಿ ಕೂಸು ; ಇನ್ನು ಅರಿವಿನ ಊಟಕ್ಕಾಗಿ ಕಾಡುವುದು ಬೇಡುವುದು ಅದಕ್ಕಾಗಿ ಒಲಿಯುವುದಂತೂ ಮನಕ್ಕೆ ದೂರದ ಮಾತು.

**ಊಡಿದಡುಂಡು ನೀಡಿದಡೊಲಿದು ಬೇಡಿದ ವರವ ಕೊಡುವ ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆ, ಕಾಣಾ ಚೆನ್ನಮಲ್ಲಿಕಾರ್ಜುನಾ :**

ಅಂಗದ ಕಣ ಕಣದಲ್ಲಿರುವ ಅರಿವೇ ಲಿಂಗ. ಅರಿವೆಂಬ ಗುರುದೇವನ ಮಗನೆ ಜಂಗಮ. ಇವನು ಅರಿವು ಹೇಳಿದ್ದನ್ನು ಚಾಚೂ ತಪ್ಪದೆ ಪಾಲನೆ ಮಾಡುವ ಹಟವಾದಿ ! ಅರಿವೆಂಬ ಗುರುದೇವನು ಉಣಿಸಿದ ಊಟವನು ಉಂಡು, ಅವನು ನೀಡಿದುದಕ್ಕೆ ಒಲಿದು, ಆ ಗುರುದೇವನೇ ತಾನಾದ ; ಆ ಲಿಂಗದೇವನೇ ತಾನಾದ. ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆ ಎಂದು ಪ್ರತಿ ತನುವಿಗೆ ಮನ ಅರಿವಿಗೆ ಹೋಗುವ ಸೂತ್ರದ ಮಾತನ್ನು ಹೇಳಿದ್ದಾಳೆ ಅಕ್ಕಮಹಾದೇವಿ.

□

---

**ಅರಿವಿನ ಪರಿಮಳ**

- □ ತಾಯಿ ಮಾಂಸಪಿಂಡಕ್ಕೆ ಜನ್ಮ ನೀಡಿ ಸದೃಢಗೊಳಿಸಿದರೆ ಅರಿವೆಂಬ ಗುರು ಆ ಮಾಂಸ ಪಿಂಡವನ್ನು ಮಂತ್ರ ಪಿಂಡ ಮಾಡಿ ಪುನರ್ ಜನ್ಮ ನೀಡುತ್ತಾನೆ.
- □ ಮಗುವಿದ್ದಾಗ ಮನ ತಾಯಿ ಉಣ್ಣಿಸುವ ಊಟಕ್ಕೆ ಸೆಟೆದುಕೊಂಡು ಹಟ ಮಾಡುತ್ತದೆ. ಹಾಗೆಯೇ ದೊಡ್ಡವನಾದಾಗ ಅರಿವೆಂಬ ಗುರುವಿನ ಊಟವನ್ನು ಉಣ್ಣುವುದಿಲ್ಲ. ನೀಡಿದರೆ ಒಲಿಯುವುದಿಲ್ಲ. ಅರಿವಿಗೆ ಒಲಿತು ಅರಿವೇ ತಾನಾಗುವುದಿಲ್ಲ. ಅರಿವಿನ ಊಟಕ್ಕಾಗಿ ಮನ ಅರಿವಿಗೆ ಶರಣು ಹೋಗಬೇಕು. ಆ ಅರಿವಿಗೆ ಬೇಡಬೇಕು. ಆ ಅರಿವಿಗೆ ಒಲಿಯಬೇಕು. ಆದರೆ ಚುಕ್ಕಿ ಚಂದ್ರ ತೋರಿಸಿ ಉಣ್ಣಿಸಿದರೆ ಉಣ್ಣದ ಹಟಮಾರಿ ಕೂಸು ; ಇನ್ನು ಅರಿವಿನ ಊಟಕ್ಕಾಗಿ ಕಾಡುವುದು ಬೇಡುವುದು ಅದಕ್ಕಾಗಿ ಒಲಿಯುವುದಂತೂ ಮನಕ್ಕೆ ದೂರದ ಮಾತು.

# ಅರಿವು ಬಳಕೆಯಾಗದಿದ್ದ ತನು ಪಶುವಿಗೆ ಸಮಾನ

**ಐದು ಪರಿಯ ಬಣ್ಣವ ತಂದು ಕೊಟ್ಟಡೆ**
**ನಾಲ್ಕು ಮೊಲೆಯ ಹಸುವಾಯಿತ್ತು.**
**ಹಸುವಿನ ಬಸಿರಲ್ಲಿ ಕರುವು ಹುಟ್ಟಿತ್ತು.**
**ಕರುವ ಮುಟ್ಟಲೀಯದೆ ಹಾಲು ಕರೆದುಕೊಂಡಡೆ**
**ಕರರುಚಿಯಾಯಿತ್ತು.**
**ಮಧುರ ತಲೆಗೇರಿ ಅರ್ಥವ ನೀಗಾಡಿ**
**ಆ ಕರುವಿನ ಬೆಂಬಳಿವಿಡಿದು ಭವಹರಿಯಿತ್ತು**
**ಚೆನ್ನಮಲ್ಲಿಕಾರ್ಜುನಾ.**

**ಐದು ಪರಿಯ ಬಣ್ಣವ ತಂದು ಕೊಟ್ಟಡೆ ನಾಲ್ಕು ಮೊಲೆಯ ಹಸುವಾಯಿತ್ತು:**

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಇವು ಪಂಚಭೂತಗಳು. ಐದು ಪರಿಯ ಬಣ್ಣದಿಂದ ಕೂಡಿವೆ. ಇವು ಐದು ಕೂಡಿ ತನುವೆಂಬ ನಾಲ್ಕು ಮೊಲೆಯ ಹಸುವಾಗಿದೆ. ಹಸು ಹಾಲು ಹಿಂಡಿದರೇನು, ಅದು ಪಶು ಪ್ರವೃತ್ತಿಯಿಂದ ಕೂಡಿದೆ ಏಕೆಂದರೆ ತನುವಿನಲ್ಲಿ ಐದು ಬಣ್ಣಗಳು ಕೂಡಿ ಕೆಚ್ಚಲಿನ ನಾಲ್ಕು ಮೊಲೆಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಆಕಾಶವೆಂಬ ಒಂದು ಬಣ್ಣ ಬಳಕೆಯಾಗದೆ ತನುವಿನಲ್ಲಿಯೇ ಉಳಿದಿದೆ.

ಭೂಮಿ, ನೀರು, ಬೆಂಕಿ, ಗಾಳಿ,ಈ ನಾಲ್ಕು ಭೂತಗಳು ತನುವಿನಲ್ಲಿ ಮಿಳಿತವಾಗಿದ್ದರೂ ನಾಲ್ಕು ಭೂತಗಳು ಆಗಾಗ ವಿಕೃತ ರೂಪವನ್ನು ತಾಳುತ್ತವೆ. ಭೂಮಿ ಬಿರಿದಾಗ ಜನ ತಲ್ಲಣಗೊಳ್ಳುವರು. ಹಾಗೆಯೇ ತನುವಿಗೆ ಶಬ್ದ ಬಡಿದಾಗ ವಿಕೃತಗೊಳ್ಳುತ್ತದೆ.ಅಲ್ಲದ್ದನ್ನು ನೋಡಿದಾಗ, ಕೇಳಿದಾಗ, ವಾಸಿಸಿದಾಗ,ರುಚಿಸಿದಾಗ,ಸ್ಪರ್ಷಿಸಿದಾಗ,ತನು ಒಂದೇ ಆದರೂ ನಾಲ್ಕು ವಿಧದಿಂದ ಯಾತನೆಗೊಳ್ಳುತ್ತದೆ.

ಭೂಮಿ ಬಿರಿದು, ನೀರು ಭೋರ್ಗರೆದು ಹರಿದು ಯಾತನೆಯನ್ನುಂಟು ಮಾಡುತ್ತದೆ. ಬೆಂಕಿ ಉರಿದು, ಬಿರುಗಾಳಿ ಬೀಸಿ ದುಃಖವನ್ನುಂಟು ಮಾಡುತ್ತದೆ. ಈ ನಾಲ್ಕು ಭೂತಗಳಲ್ಲಿ ಸಮರಸ ಭಾವಗಳಿಲ್ಲ. ನಾಲ್ಕು ಬಣ್ಣಗಳಲ್ಲಿ ಸಾಮ್ಯವಿಲ್ಲ. ಹೆಸರು ಬೇರೆ ಬೇರೆಯಾದರೂ ಭೂತ ಎನ್ನುವ ಹೆಸರಿನಲ್ಲಿ ಕರೆಸಿಕೊಳ್ಳುತ್ತದೆ. ಜೀವ ಜಲಕ್ಕೆ , ಪ್ರಾಣಕ್ಕೆ ಇಂಬು ಕೊಟ್ಟರೂ ಹಸುವೆಂಬ ಪಶು ಪ್ರವೃತ್ತಿಯಿಂದ ಕೂಡಿವೆ.

**ಹಸುವಿನ ಬಸಿರಲ್ಲಿ ಕರುವು ಹುಟ್ಟಿತ್ತು. ಕರುವ ಮುಟ್ಟಲೀಯದೆ ಹಾಲು ಕರೆದುಕೊಂಡಡೆ ಕರರುಚಿಯಾಯಿತ್ತು:**

ಐದು ಬಣ್ಣಗಳು ಕೂಡಿ ನಾಲ್ಕು ಮೊಲೆ ಹಸುವಾಗಿ,ಆ ಹಸುವಿನ ಗರ್ಭದಲ್ಲಿ ಅರಿವೆಂಬ ಕರು ಹುಟ್ಟಿತ್ತು. ಆ ಅರಿವೆಂಬ ಕರುವನ್ನು ಮುಟ್ಟದೆ ಹಾಲು ಕರೆದುಕೊಂಡಡೆ ಕರರುಚಿಯಾಯಿತ್ತು. ಅಂದರೆ ತನು ಅರಿವಿನ ತನುವಾಯಿತ್ತು. ಭೂಮಿ ನೀರು ಗಾಳಿ ಬೆಂಕಿ

ಇವು ನಾಲ್ಕು ಅಭಿರುಚಿಗಳುಳ್ಳ ಭೂತಗಳು. ಆಕಾಶವೆಂಬ ಬಯಲು ಈ ನಾಲ್ಕು ಭೂತಗಳನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡ ಮಹಾತಾಯಿ. ಈ ತಾಯಿಗೆ ನಾಲ್ಕು ಭೂತಗಳ ಚೇಷ್ಟೆಗಳು ಆನಂದವನ್ನೇ ತಂದುಕೊಡುತ್ತವೆ. ಭೂಮಿ ನೀರು ಗಾಳಿ ಬೆಂಕಿ ಇವುಗಳ ಚೇಷ್ಟೆ ಏನಿದ್ದರೂ ಬಯಲ ಗರ್ಭದಲ್ಲಿಯೇ.

ಅಂತೆಯೇ ತನುವು ಪಂಚಭೂತಗಳಿಂದ ಕೂಡಿದೆ. ಇವುಗಳಲ್ಲಿ ಅರಿವು ಪ್ರಧಾನವಾದದ್ದು. ಅರಿವಿನ ಗರ್ಭದಿಂದಲೇ ಕಣ್ಣು ಕಿವಿ ಮೂಗು ನಾಲಗೆ ಚರ್ಮ ಎಂಬ ಭಿನ್ನ ರುಚಿಗಳುಳ್ಳ ಪಂಚೇಂದ್ರಿಯಗಳು ಹುಟ್ಟಿವೆ. ಇವು ಐದು ಸೇರಿ ತನು ಎಂಬ ಒಂದು ಕರಸ್ಥಲ ನಿರ್ಮಾಣವಾಗಿದೆ.

ಕಣ್ಣು ನೋಡುವ ಜ್ಞಾನ ಹೊಂದಿದೆ. ಹಾಗೆಯೇ ಬೇಡುವ ಅಜ್ಞಾನವೂ ಕಣ್ಣಿನಲ್ಲಿ ಬೆರೆತಿದೆ. ಕಿವಿ ಕೇಳುವ ಜ್ಞಾನ ಹೊಂದಿದೆ. ಹಾಗೆಯೇ ಅಜ್ಞಾನ ಗುಣ ಆವರಿಸಿದೆ. ಚರ್ಮ ಸ್ಪರ್ಶಿಸುವ ಜ್ಞಾನವನ್ನು ಹೊಂದಿದೆ. ಹಾಗೆಯೇ ಬೇಡಿ ಸುಖಿಸುವ ಅಜ್ಞಾನ ಆವರಿಸಿದೆ. ನಾಲಿಗೆ ರುಚಿಸುವ ಜ್ಞಾನವನ್ನು ಹೊಂದಿದೆ. ಹಾಗೆಯೇ ಬೇಕಾದದ್ದನ್ನು ಬೇಡುವ ಅಜ್ಞಾನ ಆವರಿಸಿದೆ. ಮೂಗು ವಾಸಿಸುವ ಜ್ಞಾನ ಹೊಂದಿದೆ. ಹಾಗೆಯೇ ವಾಸಿಸಿದ್ದನ್ನು ಬೇಡುವ ಅಜ್ಞಾನ ಆವರಿಸಿದೆ. ಈ ಐದು ಇಂದ್ರಿಯಗಳಲ್ಲಿ ಜ್ಞಾನ ಪ್ರಧಾನವಾಗಿದೆ. ಜ್ಞಾನ ಬಳಕೆಯಾಗದಿದ್ದರೆ ಐದು ಇಂದ್ರಿಯಗಳು ಪಶು ಸಮಾನ.

**ಮಧುರ ತಲೆಗೇರಿ ಅರ್ಥವ ನೀಗಾಡಿ ಆ ಕರುವಿನ ಬೆಂಬಳಿವಿಡಿದು ಭವಹರಿಯಿತ್ತು ಚೆನ್ನಮಲ್ಲಿಕಾರ್ಜುನಾ:**

ಇಂದ್ರಿಯಗಳಲ್ಲಿರುವ ಜ್ಞಾನ ಬಳಕೆಯಾದರೆ ಅದರ ಮಧುರ ಸವಿಯುವುದೇ ಒಂದು ಆನಂದ. ಕರು ನಾಲ್ಕು ಮೊಲೆಗಳಲ್ಲಿಯ ಪಂಚಾಮೃತ ಸವಿದು ಅದರ ಮಾಧುರ್ಯದಿಂದ ಉನ್ಮತ್ತನಾಗಿ ಹೇಗೆ ಜಿಗಿದು ಆನಂದ ಪಡುವುದೋ ತನುವಿಗೆ ಅರಿವು ಬಳಕೆಯಾದಾಗ ಆನಂದದಿಂದ ಪುಳುಕಿತಗೊಳ್ಳುತ್ತದೆ. ನಾಲ್ಕು ಭೂತಗಳ ಅಜ್ಞಾನ ಯಾವ ಜಪ ತಪಗಳಿಲ್ಲದೆ ಬಯಲಲ್ಲಿ ಬೆರೆತು ಬಯಲ ಗರ್ಭ ಸೇರಿ ಬಯಲಾಗುತ್ತದೆ. ಬಯಲು ನಾಲ್ಕು ಭೂತಗಳಿಗೆ ಜನ್ಮವಿತ್ತು ಅವುಗಳ ವಿಕೃತ ಆಟಾಟೋಪಗಳನ್ನು ಕೂಡ ಏನೂ ಅರಿಯದಂತೆ ತನ್ನ ಗರ್ಭದಲ್ಲಿ ಬಂಧಿಸಿಕೊಂಡಿದೆಯೋ ಹಾಗೆಯೇ ಅರಿವು ಕೂಡ ಇಂದ್ರಿಯಗಳ ಅಜ್ಞಾನದ ಮೇಲೆ ತನ್ನ ಜ್ಞಾನದ ಬೆಳಕು ಚೆಲ್ಲಿ ಚೆನ್ನಮಲ್ಲಿಕಾರ್ಜುನನನ್ನಾಗಿಸುತ್ತದೆ.

□

---

**ಅರಿವಿನ ಪರಿಮಳ**

- ಐದು ಬಣ್ಣಗಳು ಕೂಡಿ ನಾಲ್ಕು ಮೊಲೆ ಹಸುವಾಗಿ,ಆ ಹಸುವಿನ ಗರ್ಭದಲ್ಲಿ ಅರಿವೆಂಬ ಕರು ಹುಟ್ಟಿತ್ತು. ಆ ಅರಿವೆಂಬ ಕರುವನ್ನು ಮುಟ್ಟದೆ ಹಾಲು ಕರೆದುಕೊಂಡಡೆ ಕರರುಚಿಯಾಯಿತ್ತು. ಅಂದರೆ ತನು ಅರಿವಿನ ತನುವಾಯಿತ್ತು. ಭೂಮಿ ನೀರು ಗಾಳಿ ಬೆಂಕಿ ಇವು ನಾಲ್ಕು ಅಭಿರುಚಿಗಳುಳ್ಳ ಭೂತಗಳು. ಆಕಾಶವೆಂಬ ಬಯಲು ಈ ನಾಲ್ಕು ಭೂತಗಳನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡ ಮಹಾತಾಯಿ. ಈ ತಾಯಿಗೆ ನಾಲ್ಕು ಭೂತಗಳ ಚೇಷ್ಟೆಗಳು ಆನಂದವನ್ನೇ ತಂದುಕೊಡುತ್ತವೆ. ಭೂಮಿ ನೀರು ಗಾಳಿ ಬೆಂಕಿ ಇವುಗಳ ಚೇಷ್ಟೆ ಏನಿದ್ದರೂ ಬಯಲ ಗರ್ಭದಲ್ಲಿಯೇ.

# ತನು ಕೆಡಿಸಿ, ವನಕೆಡಿಸುವ ಕೋತಿ

**ಒಳಗಣ ಗಂಡನಯ್ಯಾ , ಹೊರಗಣ ಮಿಂಡನಯ್ಯಾ ,**
**ಎರಡನೂ ನಡೆಸಲು ಬಾರದಯ್ಯಾ .**
**ಲೌಕಿಕ ಪರಮಾರ್ಥವೆಂಬೆರಡನೂ ನಡೆಸಲು ಬಾರದಯ್ಯಾ .**
**ಚೆನ್ನಮಲ್ಲಿಕಾರ್ಜುನಯ್ಯಾ,**
**ಬಿಲ್ವಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯಾ .**

ತನ್ನದೆ ತನು, ತನ್ನದೆ ಮನ, ತನ್ನದೆ ಅರಿವು. ಇವು ಒಂದಾಗಬೇಕೆನ್ನುವ ಹಂಬಲದಿಂದ ಆತ್ಮವಿದ್ಯೆ ಜಾರಿಗೆ ಬಂತು. ಮನ ಅರಿವು ತನುವಿನಲ್ಲಿ ಒಂದೊಂದು ಕೆಲಸ ಮಾಡುತ್ತವೆ. ಅರಿವು ಸದಾ ಆನಂದದಿಂದ ಇರಲು ಪ್ರಯತ್ನಿಸಿದರೆ ಮನ ತನುವನ್ನು ತನ್ನ ರುಚಿಗೆ ತಕ್ಕಂತೆ ತನುವನ್ನೇ ದುರ್ಬಳಕೆ ಮಾಡಿಕೊಳ್ಳುತ್ತದೆ. ಇವು ತನುವಿನಲ್ಲಿ ಮಿಳಿತವಾಗಿದ್ದರೂ ಒಂದಕ್ಕೊಂದು ಸಂಬಂಧವಿಲ್ಲದಂತಿವೆ.

ತನು ಮನ ಅರಿವು ಒಂದಾಗಿ ಕಾರ್ಯ ನಿರ್ವಹಿಸುವ ಅರಿವಿಗೆ ಸಂಬಂಧ ಪಟ್ಟ ಗ್ರಂಥಗಳೆಲ್ಲ ಆಧ್ಯಾತ್ಮ ಗ್ರಂಥಗಳೆಂದು ಕರೆಸಿಕೊಂಡವು. ಅವುಗಳನ್ನು ಬರೆದವರನ್ನು ಸರಿಯಾದ ಅರಿವಿನ ಮಾರ್ಗಕ್ಕೆ ಕರೆದುಕೊಂಡು ಹೋಗುವವರನ್ನು ಗುರುಗಳೆಂದು ಕರೆದರು.

ಆತ್ಮ ವಿದ್ಯೆಯನ್ನು ಪಡೆಯಲು ಬಯಸಿದ ಮನವನ್ನು ಭಕ್ತ, ದಾಸ,ಶಿಷ್ಯ, ಹೆಂಡತಿ,ಸಖಿ, ಶರಣನೆಂದು ಮಗನೆಂದು ಕರೆದರು.

ಹನುಮಂತ ಶ್ರೀ ರಾಮನಿಗೆ ದಾಸನಾಗಿ ಆತ್ಮ ವಿದ್ಯೆಯನ್ನು ಪಡೆದ. ಅಂತೆಯೇ ರಾಧಾ ಶ್ರೀ ಕೃಷ್ಣನಿಗೆ ಸಖಿಯಾಗಿ ಆತ್ಮ ವಿದ್ಯೆಯನ್ನು ಪಡೆದಳು. ಗೋಪಿಕಾ ಸ್ತ್ರೀಯರು ಪ್ರಿಯಕರ ಕೃಷ್ಣನಿಗಾಗಿ ಹಪ ಹಪಿಸಿದರು.

ಒಳಗಣ ಗಂಡನನ್ನು ಹೊರಗಣ ಮಿಂಡನನ್ನು ಉಳಿಸಿಕೊಂಡು ಹೆಂಡತಿಗೆ ಸಂಸಾರ ಮಾಡುವುದು ಹೇಗೆ ಅಸಾಧ್ಯವೊ ಹಾಗೆಯೇ ಲೌಕಿಕ ಪರಮಾರ್ಥವೆಂಬ ಎರಡನ್ನು ನಡೆಸಲು ಬರುವುದಿಲ್ಲ ಎಂದು ಅಕ್ಕಮಹಾದೇವಿ ಸ್ಪಷ್ಟವಾಗಿ ಬೆಡಗಿನಿಂದ ನುಡಿದಿದ್ದಾಳೆ.

ಜ್ಞಾನಿಯಾಗುವುದು ಸರಳ ಮಾತಲ್ಲ. ಭಾರತದಲ್ಲಿ ಆತ್ಮ ವಿದ್ಯೆಗೆ ಮರುಳಾಗುವುದು ಸಹಜ. ಹಾಗೆಯೇ ಮೋಸಕ್ಕೆ ಒಳಗಾಗುವುದು ಕೂಡಾ ಸಹಜ. ಮನೆ ಮಾರು ಹೆಂಡತಿ ಮಕ್ಕಳನ್ನು ಬಿಟ್ಟು ಗುರುವಿನ ಹಿಂದೆ ಹೋಗುವುದು ಕೂಡಾ ಸಹಜ. ಗುರುವಿನ ಮೋಸದ ಮಾತುಗಳು ಶಿಷ್ಯನಿಗೆ ಹೊರಗೆ ಹೋಗಲು ಪ್ರೇರಣೆ ನೀಡುತ್ತವೆ. ಹೀಗೆಯೇ ಗುರು ಕೂಡಾ ಮೋಸ ಹೋಗಿ ಆತ್ಮ ವಿದ್ಯೆಯಿಂದ ವಂಚಿತನಾಗಿ ಶಿಷ್ಯರನ್ನು ವ್ಯವಹಾರಕ್ಕೆ ಐಶಾರಾಮಿ ಜೀವನಕ್ಕೆ ಲೈಂಗಿಕ ಕ್ರಿಯೆಗೆ ದುರ್ಬಳಕೆ ಮಾಡಿಕೊಳ್ಳುತ್ತಾನೆ. ಗುರು ಆಡುವ ಶಾಸ್ತ್ರ ಬದ್ದ ಮಾತುಗಳಿಂದ ಶಿಷ್ಯ ಪ್ರಭಾವಿತನಾಗಿ ಮೋಸಕ್ಕೊಳಗಾಗುತ್ತಾನೆ.

ಕೊನೆಯವರೆಗೂ ಕೆಲ ಗುರುಗಳ ಮಾತುಗಳಿಂದ ಶಿಷ್ಯನಿಗೆ ಆತ್ಮ ವಿದ್ಯೆ ಲಭಿಸುವುದೇ ಇಲ್ಲ,

ಆ ವಿದ್ಯೆ ಗುರು ಕೊಡುವಂತದ್ದಲ್ಲ. ತನುವಿನಲ್ಲಿಯೇ ಇರುವಂತದ್ದು. ತಾನೇ ಪಡೆಯುವಂತದ್ದು. ಪಡೆಯುವ ಟೆಕ್ನಿಕ್ ಮಾತ್ರ ಗುರು ಪುಸ್ತಕದಲ್ಲಿ ಬರೆಯಬಲ್ಲ. ಹೇಳಬಲ್ಲ. ಬರೆಯುವ ಹೇಳುವ ಮಾರ್ಗದಲ್ಲಿಸ್ವಲ್ಪ ವ್ಯತ್ಯಾಸವಾದರೂ ಗುರುವಿಗೆ ಅದು ರೋಗವಾಗಿ ಪರಿಣಮಿಸುವುದು. ಬಾಯಿಂದ ಹೇಳುವ ಆತ್ಮ ವಿದ್ಯೆ ತನಗೆ ಮುಳುವಾಗುವುದು. ಆತ್ಮ ವಿದ್ಯೆಯ ಪ್ರಯೋಗದಿಂದ ತಾನೇ ದೂರ ಉಳಿದು ಆ ವಿದ್ಯೆಯನ್ನೇ ವ್ಯವಹಾರಕ್ಕಾಗಿ ದುರ್ಬಳಕೆ ಮಾಡಿಕೊಂಡು ಒಂದು ದಿನ ಸಮಾಜದ ಕೆಂಗಣ್ಣಿಗೆ ಗುರಿಯಾಗಿ ಜನರಿಂದಲೇ ಬಡಿಸಿಕೊಂಡು ಸಾಯುತ್ತಾನೆ.

ಯಾರ ಸಹಾಯವಿಲ್ಲದೆ ಆತ್ಮ ವಿದ್ಯೆ ಪಡೆಯಲು ಈ ವಚನದಲ್ಲಿ ಅಕ್ಕಮಹಾದೇವಿ ಸರಳವಾದ ಸೂತ್ರದೊಂದಿಗೆ ಹೇಳಿದ್ದಾಳೆ.

ಒಳಗಣ ಗಂಡ ಎಂದರೆ ಅರಿವು; ಅವನೆ ಗುರುವು, ಗಂಡ, ಸಖ,ಸಂತ, ಪ್ರಿಯತಮ, ತಾಯಿ, ದೇವರು, ಶಿವ ಎಂಬ ಹೆಸರಿನ ಇವನು ಅರಿವಿನ ರೂಪದಲ್ಲಿ ತನುವಿನ ಕಣ ಕಣದಲ್ಲಿಯೂ ಇದ್ದು ತನುವೇ ಆಗಿದ್ದಾನೆ.

ಆದರೆ ಮನ ಮಿಂಡನ ರೂಪದಲ್ಲಿ ತನುವಿನ ಕಣ ಕಣದಲ್ಲಿ ಆವರಿಸಿದೆ. ಇವನನ್ನು ಸೈತಾನ, ರಾಕ್ಷಸ, ಸೂಳೆ, ದೆವ್ವ, ಭ್ರಮೆ ಎಂದು ನಾನಾ ಹೆಸರಿನಿಂದ ಶರಣರು ಸಂತರು ಕರೆದಿದ್ದಾರೆ. ನೋಡುವ ಕಣ್ಣಿನಲ್ಲಿ ಮನ ಆವರಿಸಿ ಮಿಂಡನಂತೆ ತನುವಿನ ರೂಪವನ್ನು ನೋಡಿ ಹಾದರ ಮಾಡುತ್ತದೆ. ಆಭರಣ ಹಣವನ್ನು ನೋಡಿ ಕಳ್ಳ ಭ್ರಷ್ಟಾಚಾರಿಯಾಗುತ್ತದೆ. ಕಿವಿಯಲ್ಲಿ ಆವರಿಸಿ ಶಬ್ದದೊಂದಿಗೆ, ಚರ್ಮದಲ್ಲಿ ಆವರಿಸಿ ತನುವಿನ ಸ್ಪರ್ಶದೊಂದಿಗೆ, ನಾಲಗೆಯಲ್ಲಿ ಆವರಿಸಿ ರುಚಿಯೊಂದಿಗೆ, ಮೂಗಿನಲ್ಲಿ ಆವರಿಸಿ ವಾಸನೆಯೊಂದಿಗೆ, ತನುವನ್ನು ಹಾದರಿಗನನ್ನಾಗಿಸುತ್ತದೆ. ಇದು ತನುವಿನ ಮನ ಹೊರಗಣ ವಸ್ತುಗಳನ್ನು ನೋಡಿದುದರ ದುಶ್ಫಲ. ಮನದ ಈ ದುಶ್ಫಲದ ಹಣೆ ಪಟ್ಟಿ ತನುವಿಗೆ ಹಚ್ಚಿ ಕಳಂಕ ತರುತ್ತದೆ.

ಮನ ಆತ್ಮ ವಿದ್ಯೆಯ ಶಾಸ್ತ್ರವನ್ನು ಮಿಂಡನಂತೆ ಹೊರಗಿನಿಂದ ಅಭ್ಯಸಿಸಿದರೆ , ಅಭ್ಯಸಿಸಿದಾತ ಚೋರ ಗುರುವಾಗುತ್ತಾನೆ. ಆತ್ಮ ವಿದ್ಯೆಯನ್ನು ಬಾಯಿಯಿಂದ ನುಡಿಯುತ್ತಾನೆ; ತಾನು ಆ ಪ್ರಯೋಗದಲ್ಲಿ ಸಾಫಲ್ಯ ಹೊಂದದೆ ಮೋಸ ಹೋಗುತ್ತಾನೆ. ಇತರರನ್ನು ವ್ಯವಹಾರಕ್ಕಾಗಿ ಮೋಸಮಾಡುತ್ತಾನೆ. ಇದರ ದುಶ್ಫಲ ಕೂಡಾ ತನ್ನ ತನುವಿಗೆ ಕಟ್ಟಿಟ್ಟ ಬುತ್ತಿ ಎನ್ನುವದನ್ನು ತಾನೇ ಮರೆಯುತ್ತಾನೆ. ಇದು ತನ್ನ ತನುವಿನ ಹೊರಗಣ ಮಿಂಡನೆಂಬ ಮನದ ಕೆಲಸ . ಇಂತಹ ಸೂಕ್ಷ್ಮ ಮನವೆಂಬ ಹೊರಗಣ ಮಿಂಡನನ್ನು ಭಾರತದ ಎಷ್ಟೋ ಗುರು ವರ್ಗ ಅರಿಯದೆ ವೇಷದ ಗುರುಗಳಾಗಿ ತಾವು ಮೋಸಹೋಗಿದ್ದಾರೆ. ಆತ್ಮ ವಿದ್ಯೆ ಬಯಸಿ ಬಂದ ಇತರರನ್ನು ಮೋಸ ಮಾಡುತ್ತಾರೆ.

ಮನ ಅರಿವೆಂಬ ಗುರುವಿಗೆ ಶಿಷ್ಯನಾಗಬೇಕು. ಇಲ್ಲಿ ತನುವಿನ ಪಾತ್ರವೇ ಇಲ್ಲ; ಅದು ಜಡ ! ಮನ ಅರಿವೆಂಬ ದೇವರಿಗೆ ಭಕ್ತನಾಗಬೇಕು, ದಾಸನಾಗಬೇಕು, ಮನ ಅರಿವೆಂಬ ತಾಯಿಗೆ ಮಗನಾಗಬೇಕು, ಮನ ಅರಿವೆಂಬ ಗಂಡನಿಗೆ ಹೆಂಡತಿಯಾಗಬೇಕು, ಮನ ಅರಿವೆಂಬ ಸಖನಿಗೆ ಸಖಿಯಾಗಬೇಕು, ಮನ ಅರಿವೆಂಬ ಪ್ರಿಯಕರನಿಗೆ ಪ್ರೇಯಸಿಯಾಗಬೇಕು. ಹೀಗೆ ಶ್ರೀ ಕೃಷ್ಣನಿಗೆ ಹದಿನಾರು ಸಾವಿರ ಪ್ರೇಯಸಿಯರು ಇದ್ದರು ರಾಧೆಯೆಂಬ ಸಖಿ ಇದ್ದಳು. ಕೃಷ್ಣ ಅವರೆಲ್ಲರಿಗೆ ಅವರ ತನುವಿನಲ್ಲಿಯೇ ಭಗವದ್ದರ್ಶನ ಮಾಡಿಸಿದ. ಇದು ಭಾರತ ಮಾತ್ರ ಕಂಡುಕೊಂಡ ಅರಿವಿನ ವಿದ್ಯೆ !

□

# ತನು ಅರಿವಿನ ಬೀಜಗಳ ಕಣಜ

**ಓದಿ ಓದಿ ವೇದ ವಾದಕ್ಕಿಕ್ಕಿತ್ತು.**
**ಕೇಳಿ ಕೇಳಿ ಶಾಸ್ತ್ರಸಂದೇಹಕ್ಕಿಕ್ಕಿತ್ತು.**
**ಅರಿದೆಹೆ ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು.**
**ಪೂರೈಸಿಹೆ ಪೂರೈಸಿಹೆನೆಂದು**
**ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು.**
**ನಾನೆತ್ತ ತಾನೆತ್ತ?**
**ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ.**

''ವೇದ,ಶಾಸ್ತ್ರ, ಆಗಮ ಪುರಾಣಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು, ಕಾಣಿಭೋ. ಇವ ಕುಟ್ಟಲೇಕೆ, ಕುಸಕಲೇಕೆ? ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ'' ಎಂದು ಅಕ್ಕ ಮತ್ತೊಂದು ವಚನದಲ್ಲಿ ವೇದ ಶಾಸ್ತ್ರ ಪುರಾಣ ಆಗಮ ಕುರಿತು ಹೇಳಿದ್ದಾಳೆ.

ತನು ಭತ್ತದ ಗದ್ದೆ. ಅದು ಅರಿವಿನ ಬೀಜದ ಕಣಜವು ಹೌದು. ಒಂದು ಬೀಜದಿಂದ ಸಾವಿರಾರು ಭತ್ತದ ಕಾಳು ಬೆಳೆಯುತ್ತವೆ. ಆ ಕಾಳುಗಳೇ ವೇದ ಶಾಸ್ತ್ರ ಪುರಾಣ ಆಗಮ ಉಪನಿಷತ್ತುಗಳು. ತನುವಿನಿಂದ ಬೆಳೆದ ಫಲಗಳು. ತಾನು ಬೆಳೆದ ಫಲ ತಾನೆ ಮುಟ್ಟಿ ಮುಟ್ಟಿ ನೋಡಬೇಕೆ, ತನುವಿನಿಂದ ಬರೆದದ್ದನ್ನು ತನುವು ಮತ್ತೆ ಮತ್ತೆ ಓದಿ ಚರ್ಚಿಸಿ ವಾದಕ್ಕಿಳಿಯಬೇಕೆ? ಕೇಳಿ, ಕೇಳಿ, ಸಂದೇಹಕ್ಕಿಳಿಯಬೇಕೆ? ಪುಸ್ತಕದಲ್ಲಿರುವ ಅಕ್ಷರಗಳೆಲ್ಲಾ ತನುವಿನ ಅಕ್ಷರೋತ್ತಮನಿಂದ ಹುಟ್ಟಿದ ಬೀಜಾಕ್ಷರಗಳು. ಅಕ್ಷರೋತ್ತಮನಿಗಿಂತ ಅಕ್ಷರಗಳು ಹೇಗೆ ದೊಡ್ಡದಾಗುತ್ತವೆ ಎಂಬುದನ್ನು ಮನ ತಿಳಿಯಬೇಡವೇ?

ವಾದಕ್ಕು, ಸಂದೇಹಕ್ಕು ಇಂಬಿಲ್ಲದಂತೆ ತಿಳಿಯಬೇಕಷ್ಟೆ . ತನುವಿನ ಅರಿವಿನಿಂದ ಸೃಷ್ಟಿಯಾದ ಪುಸ್ತಕಗಳು ತನುವಿನ ಮನಕ್ಕೆ ದೊಡ್ಡವಾದುದರಿಂದ ವಾದಕ್ಕೆ ಸಂದೇಹಕ್ಕೆ ಪುರಾಣ ಶಾಸ್ತ್ರಗಳು ಕಾರಣವಾಗಿವೆ. ಇದು ಒಬ್ಬರಿಗಲ್ಲ ಜಗತ್ತಿನ ಮನುಜರಿಗೆಲ್ಲಾ ಮಹಾರೋಗವಾಗಿ ಪರಿಣಮಿಸಿದೆ.

**ಅರಿದೆಹೆ ಅರಿದೆಹೆನೆಂದು ಆಗವು ಅರೆಯಾಗಿ ಹೋಯಿತ್ತು. ಪೂರೈಸಿಹೆ ಪೂರೈಸಿಹೆನೆಂದು ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು:**

ಆಗಮ ಓದಿ ಓದಿ ತಿಳಿಯುವುದರಲ್ಲಿಯೇ ಆಯುಷ್ಯ ವ್ಯರ್ಥವಾಗುತ್ತದೆ. ಪುರಾಣ ಓದಿ ಓದಿ ಮನ ಗತಕಾಲದ ವೈಭವವನ್ನು ಮೆರೆಯುತ್ತದೆ. ಇವು ತನುವಿನಿಂದ ಬಂದಿದ್ದರು ತನ್ನ ಆಗು ಹೋಗುಗಳನ್ನು ಮರೆತು ಇತರರನ್ನೇ ನೆನೆಯುತ್ತಾ ಹೊಗಳುತ್ತದೆ. ಮನ ತನುವಿನ ಆಯುಷ್ಯ ಕಳೆಯುತ್ತದಲ್ಲದೆ, ತಾನು ಏನು ಎನ್ನುವುದನ್ನು ತಿಳಿಯುವುದೇ ಇಲ್ಲ.

**ನಾನೆತ್ತಾ, ತಾನೆತ್ತ? :**

ನನ್ನಿಂದಲೇ ಬಂದ ಪುರಾಣ, ಶಾಸ್ತ್ರ, ಆಗಮಗಳೆತ್ತ? ಅವುಗಳನ್ನು ಸೃಷ್ಟಿಸಿದ ನಾನೆತ್ತ? ಎಂದು ತಾನು ತಿಳಿಯಬಾರದೆ?

**ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ:**

ವೇದ ಆಗಮ ಪುರಾಣ ಶಾಸ್ತ್ರಗಳು ತನುವಿನ ಅರಿವೆಂಬ ಬ್ರಹ್ಮನಿಂದಲೇ ಬಂದ ಎಂಜಲು. ಆದರೆ ತನುವಿನ ಮನದ ಚರ್ಚೆಗೆ ಗ್ರಾಸವಾಗಿವೆ; ಮತ್ತೆ ಮತ್ತೆ ಓದಿ ತಿಳಿಯುವ ರೋಗ ನಿರ್ಮಾಣವಾಗಿದೆ. ಓದಿದ್ದನ್ನು ಮತ್ತೆ ಮತ್ತೆ ವಾದಿಸುವ ವ್ಯಾಧಿ ನಿರ್ಮಾಣವಾಗಿದೆ. ಕೇಳಿ ಕೇಳಿ ಸಂದೇಹಕ್ಕೆ ಕರೆದುಕೊಂಡು ಹೋಗುವ ಭ್ರಮೆ ನಿರ್ಮಾಣವಾಗಿದೆ. ಇವುಗಳನ್ನು ಅಂಟಿಸಿಕೊಳ್ಳದ ಬಟ್ಟ ಬಯಲ ಅರಿವೆಂಬ ಬ್ರಹ್ಮನೇ ಚೆನ್ನಮಲ್ಲಿಕಾರ್ಜುನ . ಆತನೆ ನಾನಿರುವಾಗ ವೇದ ಓದಿ ವಾದಕ್ಕಿಳಿಯುವ ಅವಶ್ಯಕತೆಯೂ ಇಲ್ಲ. ಕೇಳಿ ಸಂದೇಹಕ್ಕೆಳೆಸುವ ಭ್ರಮೆಯೂ ಇಲ್ಲ. ಇದು ಅಕ್ಕಮಹಾದೇವಿಯ ಮನದ ಭ್ರಮೆ ಕಳೆಯುವ ಸೂತ್ರ.ಬ್ರಹ್ಮ ತಾನೇ ಆಗುವ ಮಹಾ ಸೂತ್ರ.

□

**ಅರಿವಿನ ಪರಿಮಳ**

- □ ತನು ಭತ್ತದ ಗದ್ದೆ. ಅದು ಅರಿವಿನ ಬೀಜದ ಕಣಜವು ಹೌದು. ಒಂದು ಬೀಜದಿಂದ ಸಾವಿರಾರು ಭತ್ತದ ಕಾಳು ಬೆಳೆಯುತ್ತವೆ. ಆ ಕಾಳುಗಳೇ ವೇದ ಶಾಸ್ತ್ರ ಪುರಾಣ ಆಗಮ ಉಪನಿಷತ್ತುಗಳು. ತನುವಿನಿಂದ ಬೆಳೆದ ಫಲಗಳು. ತಾನು ಬೆಳೆದ ಫಲ ತಾನೆ ಮುಟ್ಟಿ ಮುಟ್ಟಿ ನೋಡಬೇಕೆ, ತನುವಿನಿಂದ ಬರೆದದ್ದನ್ನು ತನುವು ಮತ್ತೆ ಮತ್ತೆ ಓದಿ ಚರ್ಚಿಸಿ ವಾದಕ್ಕಿಳಿಯಬೇಕೆ? ಕೇಳಿ, ಕೇಳಿ, ಸಂದೇಹಕ್ಕಿಳಿಯಬೇಕೆ? ಪುಸ್ತಕದಲ್ಲಿರುವ ಅಕ್ಷರಗಳೆಲ್ಲಾ ತನುವಿನ ಅಕ್ಷರೋತ್ತಮನಿಂದ ಹುಟ್ಟಿದ ಬೀಜಾಕ್ಷರಗಳು. ಅಕ್ಷರೋತ್ತಮನಿಗಿಂತ ಅಕ್ಷರಗಳು ಹೇಗೆ ದೊಡ್ಡದಾಗುತ್ತವೆ ಎಂಬುದನ್ನು ಮನ ತಿಳಿಯಬೇಡವೇ?
- □ ತನುವಿನಿಂದಲೇ ಬಂದ ಪುರಾಣ, ಶಾಸ್ತ್ರ, ಆಗಮಗಳೆತ್ತ? ಅವುಗಳನ್ನು ಸೃಷ್ಟಿಸಿದ್ದ ತನುವೆತ್ತ? ಎಂದು ತನು ತಿಳಿಯಬಾರದೆ?
- □ ವೇದ ಆಗಮ ಪುರಾಣ ಶಾಸ್ತ್ರಗಳು ತನುವಿನ ಅರಿವೆಂಬ ಬ್ರಹ್ಮನಿಂದಲೇ ಬಂದ ಎಂಜಲು. ಆದರೆ ತನುವಿನ ಮನದ ಚರ್ಚೆಗೆ ಗ್ರಾಸವಾಗಿವೆ; ಮತ್ತೆ ಮತ್ತೆ ಓದಿ ತಿಳಿಯುವ ರೋಗ ನಿರ್ಮಾಣವಾಗಿದೆ. ಓದಿದ್ದನ್ನು ಮತ್ತೆ ಮತ್ತೆ ವಾದಿಸುವ ವ್ಯಾಧಿ ನಿರ್ಮಾಣವಾಗಿದೆ. ಕೇಳಿ ಕೇಳಿ ಸಂದೇಹಕ್ಕೆ ಕರೆದುಕೊಂಡು ಹೋಗುವ ಭ್ರಮೆ ನಿರ್ಮಾಣವಾಗಿದೆ.

# ಕಣ್ಣ ಕತ್ತಲೆ ಕಳೆವ ಕಣ್ಣ ಬೆಳಕು

ಕಂಗಳಲ್ಲಿ ಕಾಂಬೆನೆಂದು
ಕತ್ತಲೆಯ ಹೊಕ್ಕಡೆಂತಹುದಯ್ಯಾ ?
ಬೆಟ್ಟದ ತುದಿಯ ಮೆಟ್ಟಲೆಂದು
ಹಳ್ಳ ಕೊಳ್ಳಂಗಳಲ್ಲಿ ಇಳಿದಡೆಂತಹುದಯ್ಯಾ ?
ನೀನಿಕ್ಕಿದ ಸಯದಾನವನೊಲ್ಲದೆ
ಬೇರೆ ಬಯಸಿದೊಡೆಂತಹುದಯ್ಯಾ ?
ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು
ಕಿರಿಕುಳಕ್ಕೆಸುದಡೆಂತಹುದಯ್ಯಾ ?

**ಕಂಗಳಲ್ಲಿ ಕಾಂಬೆನೆಂದು ಕತ್ತಲೆಯ ಹೊಕ್ಕಡೆಂತಹುದಯ್ಯಾ ? :**

ಕಣ್ಣಿನಲ್ಲಿ ಬೆಳಕಿದೆ, ವಸ್ತುವಿನ ಸತ್ಯ ಕಾಣುವ ಅರಿವು ಇದೆ. ಕಣ್ಣಿಗೆ ಕತ್ತಲು ಕಾಣುವ ಶಕ್ತಿಯೂ ಇದೆ ಹಾಗೆಯೇ ಬೆಳಕು ಕಾಣುವ ಶಕ್ತಿಯೂ ಇದೆ. ಕತ್ತಲನ್ನು ನೋಡಿ ಇದು ಕತ್ತಲೆಂದು ಕಣ್ಣು ಇಡೀ ತನುವಿಗೆ ಸಂದೇಶ ರವಾನೆ ಮಾಡುತ್ತದೆ. ಹಾಗೆಯೇ ಬೆಳಕನ್ನು ಕಂಡು ಇದು ಬೆಳಕೆಂದು ತನುವಿಗೆ ಸಂದೇಶ ರವಾನೆ ಮಾಡುತ್ತದೆ. ಕಣ್ಣಿನ ಈ ಜ್ಞಾನವನ್ನು ಪಶು, ಪಕ್ಷಿ, ಪ್ರಾಣಿಗಳು ಸಹಜವಾಗಿಯೇ ಸ್ವೀಕರಿಸುತ್ತವೆ. ಆದರೆ ಮನುಷ್ಯ ಮಾತ್ರ ಕತ್ತಲನ್ನು ಕತ್ತಲಿನಂತೆ ನೋಡುವುದಿಲ್ಲ. ಬೆಳಕನ್ನು ಬೆಳಕಿನಂತೆ ನೋಡುವುದಿಲ್ಲ. ಹೊರಗಡೆ ಕತ್ತಲೂ ಇದೆ ಬೆಳಕೂ ಇದೆ. ಆದರೆ ಕಣ್ಣಿನಲ್ಲಿ ಇವೆರಡನ್ನು ನೋಡುವ ಬೆಳಕು ಮಾತ್ರ ಇದೆ.

ಕಣ್ಣಿನ ಬೆಳಕಿಗೆ ವಸ್ತುವಿನ ಮೂಲ ನೋಡುವ ಶಕ್ತಿ ಇದೆ. ಹಾಗೆಯೇ ವಸ್ತುವನ್ನು ಭ್ರಮೆಯಿಂದ ನೋಡುವ ಕತ್ತಲೆಯೂ ಇದೆ. ಕಣ್ಣು ಕಲ್ಲು ನೋಡಿ ಕಲ್ಲು ಎಂದು ತನುವಿಗೆ ಸಂದೇಶ ರವಾನೆ ಮಾಡುತ್ತದೆ. ಇದು ಕಣ್ಣಿನ ಬೆಳಕಿನ ಸಹಜ ಜ್ಞಾನ. ಹಾಗೆಯೇ ಕಲ್ಲಿನಿಂದಾದ ಮೂರ್ತಿಯನ್ನು ನೋಡಿ ದೇವರು ಎಂದು ಸಂದೇಶ ರವಾನೆ ಮಾಡುತ್ತದೆ. ಇದು ಕಣ್ಣಿನ ಭ್ರಮಾ ಜ್ಞಾನ. ಕಣ್ಣಿನಲ್ಲಿ ಕತ್ತಲೆ ಹೊಕ್ಕಿದೆ. ಆ ಕತ್ತಲೆಯಿಂದ ನೋಡಿದರೆ ಕಣ್ಣಿನ ಬೆಳಕು ಕಣ್ಣಿನಲ್ಲಿಯೇ ಉಳಿಯುತ್ತದೆ. ಕಣ್ಣಿನಲ್ಲಿ ಹೊಕ್ಕ ಕತ್ತಲು ಕಲ್ಲಿನ ಮೇಲೆ ಚೆಲ್ಲಿ ಆ ಕಲ್ಲು ಕಣ್ಣಿಗೆ ದೇವರಾಗಿ ಕಾಣುತ್ತದೆ. ಕತ್ತಲ ಹೊಕ್ಕ ಕಣ್ಣು ಕಂಡರೂ ಅದು ಕುರುಡು ಕಣ್ಣು , ಸತ್ಯವನ್ನು ಕಾಣದ ಕಣ್ಣು, ವಸ್ತುವಿನ ಮೂಲವನ್ನು ನೋಡದ ಕಣ್ಣು. ಭ್ರಮೆಯ ಕಣ್ಣು !

ಕಲ್ಲ ಮೇಲೆ ನಿಂತು ಕಲ್ಲು ಎನ್ನುವ ಸತ್ಯದ ಕಣ್ಣು ಕಣ್ಣಿನಲ್ಲಿಯೆ ಇದೆ. ಕಟೆದ ಕಲ್ಲು ನೋಡಿ ದೇವರೆಂದು ಹೇಳುವ ಭ್ರಮೆಯ ಕಣ್ಣು ಕಣ್ಣಿನಲ್ಲಿಯೇ ಇದೆ. ಕಣ್ಣಿನ ಬೆಳಕೆ ನೆರಳಾಗಿ ಕತ್ತಲ ರೂಪದಲ್ಲಿ ಕಣ್ಣಿನಲ್ಲಿ ಹೊಕ್ಕು ಮೂರ್ತಿಯ ಮೂಲ ಕಾಣದಂತೆ ಮಾಡಿದೆ. ಕತ್ತಲ ಮೇಲೆ ಬೆಳಕು ಚೆಲ್ಲಿದ್ದರೆ ಕತ್ತಲು ಬೆಳಕಾಗುತ್ತದೆ. ಇಲ್ಲಿ ಬೆಳಕು ಹೊರಗಿನದು. ಕತ್ತಲು ಕೂಡಾ ಹೊರಗಿನದು; ಹೊರಗಿನ ಕತ್ತಲನ್ನು ಕಳೆಯುವ ಶಕ್ತಿ ಹೊರಗಿನ ಬೆಳಕಿಗಿದೆ, ಬೆಳಕಿದ್ದಲ್ಲಿ ಕತ್ತಲೆಗೆ ಅವಕಾಶವಿಲ್ಲ.

ಬೆಳಕಿದ್ದಲ್ಲಿ ಕತ್ತಲು ಬರಲಾರದು. ಆದರೆ ಕಣ್ಣಿನಲ್ಲಿ ಬೆಳಕು ಇದೆ ಕತ್ತಲೆಯೂ ಇದೆ. ಜಾಣತನದಿಂದ ಕತ್ತಲು ಎನ್ನುವ ಮನ ಕಣ್ಣಿನ ಬೆಳಕಿನ ಸಂಗ ಮಾಡಿದರೆ ಕಣ್ಣಿನ ಆ ಬೆಳಕು ಕತ್ತಲೆಯನ್ನು ನುಂಗುತ್ತದೆ .ಇಲ್ಲಿ ಅಲ್ಲಮಪ್ರಭುಗಳ ವಚನ ಸೂಕ್ತವೆನಿಸುತ್ತದೆ.

''ಬೆಳಗು ಕತ್ತಲೆಯ ನುಂಗಿ, ಒಳಗೆ ತಾನೊಬ್ಬನೆಯಾಗಿ ಕಾಬ ಕತ್ತಲೆಯ ಕಳೆದುಳಿದು ನಿಮಗೆ ಆನು ಗುರಿಯಾದೆ ಗುಹೇಶ್ವರಾ.''

**ಬೆಟ್ಟದ ತುದಿಯ ಮೆಟ್ಟಲೆಂದು ಹಳ್ಳಕೊಳ್ಳಂಗಳಲ್ಲಿ ಇಳಿದಡೆಂತ ಹುದಯ್ಯಾ? ನೀನಿಕ್ಕಿದ ಸಯದಾನವನೊಲ್ಲದೆ ಬೇರೆ ಬಯಸಿದೊಡೆಂತಹುದಯ್ಯಾ? ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು ಕಿರಿಕುಳಕ್ಕೆಸುದಡೆಂತಹುದಯ್ಯಾ?:**

ಕಣ್ಣಿನಲ್ಲಿಯ ಬೆಳಕು, ಬೆಳಕು ಹೌದು, ಅರಿವು ಹೌದು. ಅದು ಚೆನ್ನಮಲ್ಲಿಕಾರ್ಜುನನೆಂಬ ದೇವರೂ ಹೌದು. ಕಣ್ಣಿನ ಆ ಬೆಳಕು ಬಳಕೆ ಮಾಡದಿದ್ದಕ್ಕಾಗಿ ಕಣ್ಣಿನಲ್ಲಿ ಹೊಕ್ಕ ಕತ್ತಲು ಎಂಬ ಮನ ತನಗೆ ತಾನು ತೋಚಿದತ್ತ ತನುವನ್ನು ಕರೆದುಕೊಂಡು ಹೋಗುತ್ತದೆ. ಆ ಅಪವಾದಕ್ಕೆ ಬೆಳಕಿನ ತನುವನ್ನು ಗುರಿಮಾಡುತ್ತದೆ. ಕಲ್ಲು ಕಲ್ಲೆ , ಮೂರ್ತಿಯಲ್ಲಿರುವ ಕಲ್ಲು ಕಲ್ಲೆ. ಕತ್ತಲೆಯ ಕಣ್ಣು ಕಲ್ಲನ್ನು ದೇವರೆಂದು ನಂಬಿಸುತ್ತದೆ. ಹಳ್ಳ ಕೊಳ್ಳಗಳನ್ನು ಸುತ್ತಿಸಿ ಬೆಟ್ಟದ ತುದಿಯನ್ನು ಮೆಟ್ಟುವಂತೆ ಮಾಡಿ ತನುವಿಗೆ ತಾಪತ್ರಯವನ್ನು ಒಡ್ಡುತ್ತದೆ. ಅದಕ್ಕಾಗಿಯೇ ಅಕ್ಕ ಕಣ್ಣ ಬೆಳಕಿನ ಅರಿವೆಂಬ ಚೆನ್ನಮಲ್ಲಿಕಾರ್ಜುನನ ಘನವನು ಅರಿಯಲೆಂದು ತನುವನ್ನು ಕಿರುಕುಳಕ್ಕೆ ಒಡ್ಡಿದರೆಂತಯ್ಯಾ ಎಂದಿದ್ದಾಳೆ.

□

---

**ಅರಿವಿನ ಪರಿಮಳ**

- □ ಕಣ್ಣಿನ ಬೆಳಕಿಗೆ ವಸ್ತುವಿನ ಮೂಲ ನೋಡುವ ಶಕ್ತಿ ಇದೆ. ಹಾಗೆಯೇ ವಸ್ತುವನ್ನು ಭ್ರಮೆಯಿಂದ ನೋಡುವ ಕತ್ತಲೆಯೂ ಇದೆ. ಕಣ್ಣು ಕಲ್ಲು ನೋಡಿ ಕಲ್ಲು ಎಂದು ತನುವಿಗೆ ಸಂದೇಶ ರವಾನೆ ಮಾಡುತ್ತದೆ. ಇದು ಕಣ್ಣಿನ ಬೆಳಕಿನ ಸಹಜ ಜ್ಞಾನ. ಹಾಗೆಯೇ ಕಲ್ಲಿನಿಂದಾದ ಮೂರ್ತಿಯನ್ನು ನೋಡಿ ದೇವರು ಎಂದು ಸಂದೇಶ ರವಾನೆ ಮಾಡುತ್ತದೆ. ಇದು ಕಣ್ಣಿನ ಭ್ರಮಾ ಜ್ಞಾನ.
- □ ಕತ್ತಲ ಮೇಲೆ ಬೆಳಕು ಚೆಲ್ಲಿದರೆ ಕತ್ತಲು ಬೆಳಕಾಗುತ್ತದೆ. ಇಲ್ಲಿ ಬೆಳಕು ಹೊರಗಿನದು. ಕತ್ತಲು ಕೂಡಾ ಹೊರಗಿನದು; ಹೊರಗಿನ ಕತ್ತಲನ್ನು ಕಳೆಯುವ ಶಕ್ತಿ ಹೊರಗಿನ ಬೆಳಕಿಗಿದೆ, ಬೆಳಕಿದ್ದಲ್ಲಿ ಕತ್ತಲೆಗೆ ಅವಕಾಶವಿಲ್ಲ. ಬೆಳಕಿದ್ದಲ್ಲಿ ಕತ್ತಲು ಬರಲಾರದು. ಆದರೆ ಕಣ್ಣಿನಲ್ಲಿ ಬೆಳಕು ಇದೆ ಕತ್ತಲೆಯೂ ಇದೆ. ಜಾಣತನದಿಂದ ಕತ್ತಲು ಎನ್ನುವ ಮನ ಕಣ್ಣಿನ ಬೆಳಕಿನ ಸಂಗ ಮಾಡಿದರೆ ಕಣ್ಣಿನ ಆ ಬೆಳಕು ಕತ್ತಲೆಯನ್ನು ನುಂಗುತ್ತದೆ

# ಅರಿವು ಮುಟ್ಟಿದ ನಿಶ್ಚಿಂತರು

**ಕಟ್ಟಿದ ಕೆರೆಗೆ ಕೋಡಿ ಮಾಣದು**
**ಹುಟ್ಟಿದ ಪ್ರಾಣಿಗೆ ಪ್ರಳಯ ತಪ್ಪದಿನ್ನೆಂತಯ್ಯಾ ?**
**ಅರುಹಿರಿಯರೆಲ್ಲಾ ವೃಥಾ ಕೆಟ್ಟು ಹೋದರಿನ್ನೆಂತಯ್ಯಾ ?**
**ಚೆನ್ನಮಲ್ಲಿಕಾರ್ಜುನ ದೇವರಿಗೋತು**
**ಮುಟ್ಟಿದವರೆಲ್ಲಾ ನಿಶ್ಚಿಂತರು.**

ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವನಿಗೆ ಸಾವು ಕೇಡು ರೂಪು ಎನ್ನುವ ಪೆಡಂಭೂತ ಆವರಿಸಿದೆ. ಇದೊಂದು ವಿಪರ್‍ಯಾಸ.

ಕಟ್ಟಿದ ಕೆರೆ ಇಂದಲ್ಲ ನಾಳೆ ಒಡೆಯುವುದು ಸತ್ಯ. ಹಾಗೆಯೇ ಹುಟ್ಟಿದ ಪ್ರಾಣಿ ಇಂದಲ್ಲ ನಾಳೆ ಸಾಯುವುದು ಕೂಡಾ ಸತ್ಯ. ಸಾವು ಸಮೀಪ ಸುಳಿಯದಿರಲು ಈ ದೇಶದಲ್ಲಿ ಅದೆಷ್ಟೋ ಅರುಹಿರಿಯರು ಜಪತಪಗಳನ್ನು ಮಾಡುತ್ತಾರೆ. ಹಿಮಾಲಯದಲ್ಲಿ ಕುಳಿತು ಅನುಷ್ಠಾನ ಮಾಡುತ್ತಾರೆ. ಪ್ರಾಣಾಯಾಮ ಕುಂಭಕ ರೇಚಕಗಳನ್ನು ಮಾಡಿ ಸಾವನ್ನು ಮುಂದೆ ತಳ್ಳುತ್ತಾರೆ. ಆದರೆ ಸಾವು ಅರುಹಿರಿಯರೆನ್ನುವವರನ್ನು ಬಿಟ್ಟಿಲ್ಲ. ಸಾವು ಸಿದ್ಧಿಸಿಕೊಳ್ಳುವ ಆಚರಣೆಯಲ್ಲಿದ್ದ ಅರುಹಿರಿಯರು ಎನ್ನುವವರು ಈ ಭೂಮಿಯ ಮೇಲೆ ಯಾರೂ ಉಳಿದಿಲ್ಲ. ಸಾವು ಎನ್ನುವ ಸಹಜತೆ ದೇಹಕ್ಕೆ ತಪ್ಪಿದ್ದಲ್ಲ.

ದೇಹದ ಹುಟ್ಟಿಗೂ ದೇಹದ ಅವಸಾನಕ್ಕೂ ಕಾರಣನಾದ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನ ಪರಿಚಯ ಈ ಅರುಹಿರಿಯರಿಗಿಲ್ಲ. ಅವನು ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವ. ಅವನು ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವ. ಅವನು ಸೀಮೆಯಿಲ್ಲದ ನಿಸ್ಸೀಮನು, ಅವನಿಗೊಲಿದು ಸುಖಿಯಾದೆನು,ಅವನನ್ನು ಮುಟ್ಟಿದವರೆಲ್ಲ ನಿಶ್ಚಿಂತರಾದರು ಎಂದಿದ್ದಾಳೆ ಅಕ್ಕ.

ಅವನು ಒಡಲೊಳಗಿದ್ದು ಒಡಲಿಲ್ಲದವನು. ಒಡಲಿಂಗಾಧಾರವಾಗಿ ಒಡಲು ಬೆಳಗುವ ಚೆಲುವ ಚೆನ್ನಮಲ್ಲಿಕಾರ್ಜುನನು. ಅವನಿಗೆ ಒಲಿದವರೆಲ್ಲ ನಿಶ್ಚಿಂತರು ಎಂದು ಅಕ್ಕ ಸರ್ವರಿಗೆ ಸಾವಿಲ್ಲದ ಸರದಾರನೆಂಬ ಅರಿವಿನ ಪರಿಚಯ ಮಾಡಿಸಿದ್ದಾಳೆ.

ಅರಿವು ಮರೆಯಾದದ್ದಕ್ಕೆ ಅರುಹಿರಿಯರೆನ್ನುವವರಿಗೆ ಸಾವಿನ ಭಯ ಕಾಡಿತು. ಸಾವು ಎಂದೆಂದೂ ಬರಬಾರದೆಂದು ಜಪತಪ ಧ್ಯಾನ ಅನುಷ್ಠಾನ ಮಾಡಲು ಅಣಿಯಾದರು. ಆದರೂ ಸಾವು ಬಾರದೇ ತಪ್ಪಲಿಲ್ಲ. ಸಾವು ಬಂದೇ ಬರುತ್ತದೆ ಎಂಬ ಅರಿವು ಸುಳಿಯಲಿಲ್ಲ. ಆಯುಷ್ಯವೆಲ್ಲಾ ಸಾವು ಮುಂದೂಡಲು ಕಳೆದರೇ ಹೊರತು ಸಹಜವಾಗಿ ಇರಲು ಕಲಿಯಲಿಲ್ಲ. ಇದು ಮನದ ವ್ಯವಹಾರವೆಂದು ಅರುಹಿರಿಯರಿಗೆ ಅರಿವಾಗಲಿಲ್ಲ.

□

# ತನು ಎನ್ನುವುದು ಕದಳಿ ಅದರ ಅರಿವು ಬಲು ಸಿಹಿ

**ಕದಳಿ ಎಂಬುದು ತನು, ಕದಳಿ ಎಂಬುದು ಮನ,**
**ಕದಳಿ ಎಂಬುದು ವಿಷಯಂಗಳು.**
**ಕದಳಿ ಎಂಬುದು ಭವಘೋರಾರಣ್ಯ.**
**ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು**
**ಕದಳಿಯ ಬನದಲ್ಲಿ ಭವಹರನ ಕಂಡೆನು,**
**ಭವಗೆದ್ದು ಬಂದ ಮಗಳೆ ಎಂದು**
**ಕರುಣದಿ ತೆಗೆದು ಬಿಗಿಯಪ್ಪಿದಡೆ**
**ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು.**

ತನು ಮನ ವಿಷಯಂಗಳನ್ನು, ತನುವಿನಲ್ಲಿ ಉಂಟಾಗುವ ದುಃಖಗಳನ್ನು ಅಕ್ಕ ಕದಳಿ (ಬಾಳೆ)ಗೆ ಹೋಲಿಸಿದ್ದಾಳೆ.

**ಕದಳಿ ಎಂಬುದು ತನು :**

ಬಾಳೆ ಮತ್ತು ತನುಗಳೆರಡು ಜಲಬಿಂದುವಿನಿಂದ ಸೃಷ್ಟಿಯಾಗಿ ಜಲವೇ ತನು ಮತ್ತು ಕದಳಿಯಲ್ಲಿ ತುಂಬಿ ಗಟ್ಟಿಯಾಗಿ ಇವೆರಡೂ ಗೋಚರಿಸುತ್ತವೆ. ಒಂದನ್ನು ಕದಳಿ ಎನ್ನುತ್ತೇವೆ. ಮತ್ತೊಂದನ್ನು ತನು ಎನ್ನುತ್ತೇವೆ. ಬಾಳೆದಿಂಡು ಸುಲಿದಂತೆಲ್ಲ ಇಂಬಿಲ್ಲದಂತೆ ಎಳೆಎಳೆಯಾಗಿ ಕಳಚಿ ದಂಟು ಎನ್ನುವುದು ಉಳಿಯುವುದೇ ಇಲ್ಲ. ಜಲಬಿಂದುವಿನಿಂದಾದ ಕದಳಿ ಫಲ ಅತಿ ಮಧುರ; ಫಲಗಳಲ್ಲಿಯೇ ರಾಜಫಲ !

ಅಂತೆಯೇ ಜಲಬಿಂದುವಿನಿಂದಾದ ತನು ಅರಿವಿನಲ್ಲಿ ಶ್ರೇಷ್ಠ. ಕೋಟಿ ಸೂರ್ಯ ಸಮಪ್ರಭ. ಅಂದರೆ ಒಂದು ಕೋಟಿ ಸೂರ್ಯರಿಗೆ ಸಮವಾದದ್ದು. ಸೂರ್ಯನ ಬೆಳಕಿಗೂ ಬೆಳಕಾಗಿ ಬೆಳಗುವಂಥದ್ದು.

ಸೂರ್ಯನ ಬೆಳಕು ವಸ್ತುಗಳ ಮೇಲೆ ಚೆಲ್ಲುತ್ತದೆ. ಯಾವ ವಸ್ತುವನ್ನು ಪಡೆಯುವುದಿಲ್ಲ. ಕಣ್ಣಿನ ಬೆಳಕು ಅದನ್ನು ಆನಂದದಿಂದ ನೋಡುತ್ತದೆ. ತಿಳಿಯುತ್ತದೆ. ವಸ್ತುವಿನ ಸತ್ಯ ಅನಾವರಣ ಮಾಡಿ ಅದನ್ನು ಮುಟ್ಟದಂತೆ ತನುವಿಗೆ ಆದೇಶ ನೀಡುತ್ತದೆ. ಈ ಬೆಳಕು ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕು. ಕಣ್ಣಿನಂತೆಯೇ ಕಿವಿಗೆ ಸತ್ಯ ಕೇಳುವ, ಮೂಗಿಗೆ ವಾಸಿಸುವ, ನಾಲಿಗೆಗೆ ರುಚಿಸುವ, ಚರ್ಮಕ್ಕೆ ಸ್ಪರ್ಶಿಸುವ ಸತ್ಯದ ಗುಣಗಳಿವೆ. ಇವೆಲ್ಲ ಕದಳಿಯಂತೆ ತನುವಿನ ಸಿಹಿ ಫಲಗಳೇ ಆಗಿವೆ. ಕದಳಿ ಸಿಹಿ ಫಲಕೊಟ್ಟು ಇಲ್ಲವಾಗುತ್ತದೆ; ಮತ್ತೆ ಹುಟ್ಟುವುದಿಲ್ಲ. ತನು ಕೂಡಾ ಅರಿವೆಂಬ ಸಿಹಿ ಫಲಕೊಟ್ಟು ಆ ಸಿಹಿಯನು ತಾನೂ ಉಂಡು ಕದಳಿಯಂತೆ ಇಲ್ಲವಾಗುತ್ತದೆ. ಮತ್ತೆ ಹುಟ್ಟುವುದಿಲ್ಲ.

**ಕದಳಿ ಎಂಬುದು ಮನ:**

ಕದಳಿ ಫಲವನ್ನು ಸಿಪ್ಪೆ ರಕ್ಷಣೆ ಮಾಡುತ್ತದೆ. ಅದರ ಸಿಹಿಯನ್ನು ಗುರುತಿಸುವುದು ಕೂಡಾ ಕದಳಿಯ ಅರಿವಿನಿಂದಲೇ ! ಬರೀ ತಿರುಳನ್ನು ಯಾರೂ ಕೊಳ್ಳುವುದಿಲ್ಲ. ಹಾಗೆಯೇ ತಿರುಳು ಕಳಚಿದ ಫಲಕ್ಕೂ ಬೆಲೆಯಿಲ್ಲ. ತಿರಿಳಿನೊಂದಿಗಿದ್ದ ಫಲ ಎಲ್ಲಿದ್ದರೇನಂತೆ ಅದು ಮಿರಿಮಿರಿ ಮಿಂಚುತ್ತದೆ. ನೋಡುಗರನ್ನು ಆಕರ್ಷಿ ಸುತ್ತದೆ. ಇದು ತಿರುಳಿನ ಕೆಲಸ ! ಹಾಗೆಯೇ ತನುವಿನ ಮನದ ಕೆಲಸ ಕೂಡಾ ತನುವಿನ ಅರಿವಿನ ಸಿಹಿಯೊಂದಿಗೆ ಆಕರ್ಷಿಸುವುದೇ ಆಗಿದೆ ! ಆದರೆ ಮನಕ್ಕೆ ಅರಿವಿನೊಂದಿಗೆ ಬೆರೆತು, ಅರಿವನ್ನೇ ಬೀರಿ, ಅರಿವಿನ ಸಿಹಿಯನ್ನು ಉಂಡು ಸಕಲರಿಗೆ ಉಣ ಬಡಿಸುವ ಸದ್ಗುಣವೂ ಇದೆ; ಹಾಗೆಯೇ ಅಜ್ಞಾನವನ್ನು ಉಣ್ಣಲು ತನುವನ್ನು ಕರೆದುಕೊಂಡು ಹೋಗುವ ದುರ್ಗುಣವೂ ಮನಕ್ಕೆ ಇದೆ.

ಉದಾ : ಯುವತಿ ಧರಿಸಿದ ಆಭರಣಗಳನ್ನು ಮನ ಅರಿವಿನಿಂದ ನೋಡಿದರೆ ಡಿಸೈನ್,ಬಣ್ಣ ಮತ್ತು ಲೋಹ ಮಾತ್ರ ಕಾಣುತ್ತದೆ. ಅದನ್ನು ನೋಡಿ ತನುವಿನೊಂದಿಗೆ ಆನಂದ ಪಡುತ್ತದೆ. ಬೇಡುವುದಿಲ್ಲ. ಮನ ತನುವಿನ ಅರಿವಿನೊಂದಿಗೆ ಬೆರೆಯದೆ; ಯುವತಿ ಧರಿಸಿದ ಆಭರಣ ನೋಡಿದರೆ, ಮನಕ್ಕೆ ಆಭರಣದ ಮೇಲೆ ಆಸೆ ಹುಟ್ಟುತ್ತದೆ. ಸಾಧ್ಯವಾದರೆ ಖರೀದಿಸುತ್ತದೆ, ಆಗದಿದ್ದರೆ ಕದಿಯಲು ತನುವಿಗೆ ಆದೇಶಿಸುತ್ತದೆ. ಯುವತಿ ಅಡ್ಡಿಪಡಿಸಿದರೆ ಕೊಂದಾದರೂ ಆಭರಣ ಪಡೆಯುತ್ತದೆ. ಇದು ಮನದ ದುರ್ಗುಣ. ಬಾಳೆಹಣ್ಣಿನ ಸಿಹಿಯೊಂದಿಗಿದ್ದರೆ ಸಿಪ್ಪೆಗೆ ಗೌರವ ಹೇಗೋ ಹಾಗೆಯೇ ತನುವಿನ ಅರಿವಿನೊಂದಿಗಿದ್ದರೆ ಮನಕ್ಕೆ ತನುವಿನ ಅರಿವಿನ ಸಿಹಿಫಲ. ಅದಕ್ಕಾಗಿಯೇ ಅಕ್ಕ ಕದಳಿ ಎಂಬುದು ತನು, ಕದಳಿ ಎಂಬುದು ಮನ ಎನ್ನುವ ಒಂದು ಸಾಲಿನ ಸಿಹಿ ಸೂತ್ರ ಕರುಣಿಸಿದ್ದಾಳೆ.

**ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವ ಘೋರಾರಣ್ಯ :**

ಬಾಳೆಯಲ್ಲಿ ಸಿಹಿಯೂ ಇದೆ, ಸಿಪ್ಪೆಯೂ ಇದೆ, ಬಾಳೆಯೂ ಇದೆ. ಹಾಗೆಯೇ ತನುವಿನಲ್ಲಿ ಅರಿವೂ ಇದೆ, ಮನವೂ ಇದೆ, ತನುವೂ ಇದೆ. ಮನ ಅರಿವನ್ನು ಬಳಕೆ ಮಾಡಿಕೊಂಡು ತನುವಿನ ಕಣ್ಣಿನಿಂದ ನೋಡಿದರೆ ನೋಡಿದ್ದೆಲ್ಲ ಸತ್ಯವೂ ಸುಂದರವೂ ಶಿವಮಯವೂ ಆಗುತ್ತದೆ. ಕೇಳಿದರೆ ಕೇಳಿದ ಶಬ್ದವೆಲ್ಲ ಬ್ರಹ್ಮ! ವಾಸಿಸಿ, ಸ್ಪರ್ಶಿಸಿ,ರುಚಿಸಿದ್ದೆಲ್ಲ ಪ್ರಸಾದವೇ ಆಗುತ್ತದೆ.

ಮನದಿಂದ ನೋಡಿದರೆ ವಿಷಯಗಳ ಘೋರಾರಣ್ಯ! ಲೋಹ ಬಂಗಾರವಾಗಿ ಕಂಡು ಆಶಿಸಿ ಕಳ್ಳನಾಗುತ್ತದೆ. ತನ್ನಂತೆ ಇರುವ ತನುವನ್ನು ಹರಿದು ತಿನ್ನುವ ರಕ್ಕಸನಂತೆ ಭೋಗಿಸುತ್ತದೆ. ಶಬ್ದವನ್ನು ಕಠೋರವಾಗಿ ಕೇಳಿ ರಕ್ಕಸನಾಗುತ್ತದೆ. ರುಚಿಯಲ್ಲಿ ವ್ಯತ್ಯಾಸವಾದರೆ ವ್ಯಾಘ್ರನಾಗುತ್ತದೆ. ಸ್ಪರ್ಶದ ಕಾತುರಕ್ಕೆ ಕ್ರೂರಿಯಾಗುತ್ತದೆ.ವಾಸನೆಗೆ ಅಸಹ್ಯಪಟ್ಟುಕೊಂಡು ಬದುಕು ನರಕಮಯವಾಗುತ್ತದೆ. ಮನ ಬಳಕೆ ಮಾಡಿದ ತನುಗಳೆಲ್ಲ ವಿಷಯಗಳಿಂದ ತುಂಬಿ ಭವ ರೋಗದಿಂದ ಬಳಲುತ್ತವೆ.

**ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆದ್ದು ಬಂದ ಮಗಳೆ ಎಂದು ಕರುಣದಿ ತೆಗೆದು ಬಿಗಿಯಪ್ಪಿದಡೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು :**

ತನುವಿನಲ್ಲಿ ಅರಿವೆಂಬ ಸಿಹಿಯೂ ಇದೆ, ಮನವೆಂಬ ಅಜ್ಞಾನವೂ ಇದೆ. ಮನದಿಂದ

ನೋಡಿದರೆ ಆಭರಣ ಮತ್ತು ತನುಗಳು ವಿಷಯ ವಸ್ತುಗಳಾಗಿ ಕಾಣುತ್ತವೆ. ಭೋಗಿಸಲೆಳೆಸಿ ಕಳ್ಳ ವಿಷಯಲಂಪಟ ಹಾದರಿಗನ ಪಟ್ಟ ತನುವಿಗೆ ದಕ್ಕುತ್ತದೆ. ಮನ ಸೇಫಾಗಿ ಉಳಿಯುತ್ತದೆ. ಮನ ಅರಿವಿನಲ್ಲಿ ಬೆರೆತು ಆ ಅರಿವಿನಿಂದ ನೋಡಿದರೆ ಆಭರಣ ಲೋಹವಾಗಿ ಕಾಣುತ್ತದೆ. ದೇಹ ತನ್ನಂತೆ ರಕ್ತ ಮೂಳೆ ಮಾಂಸ ಚರ್ಮದ ಕವಚ ಹೊಂದಿದ್ದು ಅರಿವಿನ ಗಮನಕ್ಕೆ ಬಂದು ಆನಂದ ಪಡುತ್ತದೆ.

ಸೆಕ್ಸ್ ಎನ್ನುವುದು ಸಂತಾನಕ್ಕೆ ಮಾತ್ರ. ಪ್ರಾಣಿ ಪಶು ಪಕ್ಷಿಗಳು ಸಂತಾನ ಬಯಕೆಯಾದಾಗ ಮಾತ್ರ ಒಂದನ್ನು ಒಂದು ಕೂಡಿ ಸಂತಾನ ಭಾಗ್ಯ ಪಡೆಯುತ್ತವೆ. ನಂತರ ಕೂಡುವುದೇ ಇಲ್ಲ. ಬೆತ್ತಲೆ ಇದ್ದರೂ ಅವುಗಳಿಗೆ ಬಯಕೆ ಆಗುವುದೇ ಇಲ್ಲ . ಇದು ಪ್ರಾಣಿಗಳ ಸಹಜ ಜ್ಞಾನ ! ತನುವಿನ ಮನದಲ್ಲಿ ರುಚಿಗಳು ಸಂಗ್ರಹವಾಗಿರುವುದರಿಂದ ರುಚಿಯ ಆಸೆ ಗಾಗಿ ಮನ ತನುವನ್ನು ಮತ್ತೆ ಮತ್ತೆ ತಾನು ಬಯಸಿದ ರುಚಿಗಾಗಿ ದುರ್ಬಳಕೆ ಮಾಡಿಕೊಳ್ಳುತ್ತದೆ. ವಿಷಯ ಸುಖಗಳನ್ನು ಅನುಭವಿಸುತ್ತದೆ. ಭವ ಘೋರಾರಣ್ಯದಲ್ಲಿ ತನುವನ್ನು ಕೆಡುವುತ್ತದೆ. ಅರಿವಿನಿಂದ ನೋಡುವ ಟೆಕ್ನಿಕ್ ಮನಕ್ಕೆ ಗೊತ್ತಾಗುವುದೇ ಇಲ್ಲ.

ತನುವನ್ನು ಮನ ದುರ್ಬಳಕೆ ಮಾಡಿಕೊಳ್ಳುವ, ತನುಗಳಿಂದ ಕೂಡಿದ ಈ ಪ್ರಪಂಚವು ಭವಘೋರಾರಣ್ಯ. ತನುವಿನ ಅರಿವನ್ನು ಮನದಿಂದ ಗೆದ್ದು ಅರಿವೆಂಬ ಭವಹರನ ಕಾಣುವುದು ಮನಕ್ಕೆ ದುರ್ಲಭ. ಅಲ್ಲೊಂದು ಇಲ್ಲೊಂದು ತನುವಿಗೆ ಮಾತ್ರ ಸಾಧ್ಯ. ತಿಳಿದರೆ ಎಲ್ಲ ತನುಗಳಿಗೂ ಸಾಧ್ಯ. ಅಕ್ಕ ಕದಳಿ ಎಂಬ ತನುವನ್ನು ಗೆದ್ದಿದ್ದಾಳೆ. ಆ ಬನದಲ್ಲಿ ಅರಿವೆಂಬ ಭವಹರನ ನ್ನು ಕಂಡು ಆತನನ್ನು ತಂದೆ ಎಂದು ಅಪ್ಪಿಕೊಂಡಿದ್ದಾಳೆ. ಅಕ್ಕಳನ್ನು ಆತ ಮಗಳೆಂದು ಬಿಗಿದಪ್ಪಿದೊಡೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು ಎಂದು ಅರಿವಿನ ಮಗಳಾಗಿ ಆನಂದದಿಂದ ನುಡಿದಿದ್ದಾಳೆ. ಹರಿದಾಡುವ ತನುವಿನ ಮನವನ್ನು ಮಗಳಾಗಿಸಿ, ತನುವಿನ ಅರಿವನ್ನು ಚೆನ್ನಮಲ್ಲಿಕಾರ್ಜುನ ದೇವರೆಂಬ ತಂದೆಯನ್ನಾಗಿಸಿ, ಆತನ ಹೃದಯ ಕಮಲದಲ್ಲಿ ಸೇರಿದ್ದಾಳೆ. ಇದು ಆಧ್ಯಾತ್ಮದ ತಂದೆ ಮಗಳ ಭಾವ.

ಉದಾ: ನಿತ್ಯಾನಂದ ಆರತಿಯ ತನುವಿನೊಂದಿಗೆ ಸಂಗ ಮಾಡಿದ್ದು ಆಧ್ಯಾತ್ಮದ ದುಭ್ರಾವ. ನಿತ್ಯಾನಂದನದೂ ತನುವೇ ಆರತಿಯದೂ ತನುವೇ. ಲೌಕಿಕ ದೃಷ್ಟಿಯಲ್ಲಿ ನಿತ್ಯಾನಂದ ಗಂಡು ಆರತಿ ಹೆಣ್ಣು. ಆಧ್ಯಾತ್ಮದ ದೃಷ್ಟಿಯಲ್ಲಿ ತನುಗಳೆಲ್ಲಾ ಒಂದೇ. ಅದು ಹೆಣ್ಣೂ ಅಲ್ಲ,ಗಂಡೂ ಅಲ್ಲ.

ತನುವಿನ ಅರಿವು ಗಂಡು, ತನುವಿನ ಮನ ಹೆಣ್ಣು, ಮನ ಅರಿವಿನೊಂದಿಗೆ ಬೆರೆತು ಅರಿವಾಗಬೇಕು. ಇಲ್ಲಿ ಅಕ್ಕ ತನ್ನ ತನುವಿನ ಅರಿವನ್ನೇ ತಂದೆಯನ್ನಾಗಿಸಿ ಕೊಂಡಿದ್ದಾಳೆ; ತನ್ನ ತನುವಿನ ಮನವನ್ನೇ ಮಗಳಾಗಿಸಿಕೊಂಡು ಆತನ ಹೃದಯ ಕಮಲದಲ್ಲಿ ಮಲಗಿ ತಂದೆ ಮಗಳ ಭಾವ ಮೆರೆದಿದ್ದಾಳೆ.

ಸಾವುಳ್ಳ ಕೌಶಿಕನನ್ನು ಕೊಡವಿ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಅರಿವಿನ ನಲ್ಲನೆಂಬ ಚೆಲುವನಿಗೆ ಒಲಿದು ಸಖೀಭಾವ ಮೆರೆದಿದ್ದಾಳೆ. ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗಂಡನಿಗೆ ಹೆಂಡತಿಯಾಗಿ ಒಲಿದು ಸತೀಭಾವ ಮೆರೆದಿದ್ದಾಳೆ. ಅರಿವೆಂಬ ಚೆನ್ನಮಲ್ಲಿಕಾರ್ಜುನನಿಗೆ ದಾಸಳಾಗಿ

ದಾಸೀಭಾವ ಮೆರೆದಿದ್ದಾಳೆ. ಅರಿವೆಂಬ ಚೆನ್ನಮಲ್ಲಿಕಾರ್ಜುನನಿಗೆ ಶರಣು ಹೋಗಿ ಶಿವಶರಣೆ ಯಾಗಿದ್ದಾಳೆ ಅಕ್ಕ.

ತನುಗಳೆಲ್ಲಾ ಒಂದೇ. ಒಂದು ತನು ಮತ್ತೊಂದು ತನುವಿಗೆ ಗುರುವಾಗಲು ಬರುವುದಿಲ್ಲ, ಶಿಷ್ಯನಾಗಲು ಬರುವುದಿಲ್ಲ. ತನುವಿನಲ್ಲಿರುವ ಅರಿವೇ ಗುರುವು ; ತನುವಿನಲ್ಲಿರುವ ಮನವೇ ಶಿಷ್ಯ. ಮನ ಅರಿವಿಗೆ ಶಿಷ್ಯನಾಗುವುದೇ ಗುರುಶಿಷ್ಯರ ಸಂಬಂಧ. ತನುವಿನಲ್ಲಿದ್ದ ಅರಿವನ್ನು ತನುವಿನ ಮನಕ್ಕೆ ಪರಿಚಯ ಮಾಡಿಸಿ ಕೊಡುವವನೇ ಬಾಹ್ಯ ಗುರು, ಶಿಕ್ಷಕ ! ಗುರುವಾದವನಿಗೆ ತನ್ನ ತನುವಿನ ಅರಿವು ಪರಿಚಯವಾಗಿರುತ್ತದೆ. ಶಿಷ್ಯನಾದವನಿಗೆ ಶಿಷ್ಯನ ತನುವಿನ ಅರಿವನ್ನು ಶಿಷ್ಯನಿಗೆ ಪರಿಚಯ ಮಾಡಿಸಬೇಕಷ್ಟೇ.

ಶರಣರು, ದಾಸರು ಯಾರಿಗೂ ಗುರುವಾಗಲಿಲ್ಲ. ಯಾರಿಗೂ ಶಿಷ್ಯರಾಗಲಿಲ್ಲ. ತನುವಿನ ಅರಿವನ್ನು ತಾವೇ ಕಂಡುಕೊಂಡು ಆ ಅರಿವಿಗೆ ಶರಣು ಹೋಗಿ ಶರಣರಾದರು. ಆ ಅರಿವಿಗೆ ದಾಸರಾದರು. ದಾಸಭಾವ, ಶರಣಭಾವದ ಸಿಹಿ ತಿರುಳನ್ನು ಪ್ರಪಂಚಕ್ಕೆ ಪರಿಚಯಿಸಿದರು. ಈ ಕೆಲಸಕ್ಕಾಗಿ ಯಾವ ವೇಷವನ್ನೂ ಹಾಕಲಿಲ್ಲ !

□

**ಅರಿವಿನ ಪರಿಮಳ**

□ ಅಂಗದ ಕಣ ಕಣದಲ್ಲಿರುವ ಅರಿವು ಘನ ಲಿಂಗವಾಗಿ ಅಂಗಕ್ಕೆ ಪಾಠ ಮಾಡಿದರೂ; ಅರಿವಿನ ಪರಿಚಯ ಅಂಗಕ್ಕೆ ಇಲ್ಲದ ನಿಮಿತ್ತ ತಾನು ಬಯಸಿದೆಡೆಯಲ್ಲೆಲ್ಲಾ ವಾಲುತ್ತದೆ. ಕಳ್ಳ, ಸುಳ್ಳ, ಭ್ರಷ್ಠ , ವಿಷಯ ಲಂಪಟ, ಶ್ರೀಮಂತ, ಬಡವ, ಭಿಕ್ಷುಕ, ರಾಜಕಾರಣಿ, ಪೀಠಾಧಿಪತಿ, ಸ್ವಾಮಿ, ವೇಶ್ಯೆ ಎಂಬ ಹಣೆಪಟ್ಟಿಯನ್ನು ಅಂಗ ಕಟ್ಟಿಕೊಳ್ಳುತ್ತದೆ. ಸಹಜ ಅರಿವಿನ ಕ್ರಿಯೆಯಿಂದ ದೂರ ಉಳಿಯುತ್ತದೆ.

□ ಅಂಗದ ಮನವು, ಅಂಗದ ಅರಿವನ್ನು ಬೆರಸಿ ಆಭರಣ ನೋಡಿದರೆ ಅದೊಂದು ಹಳದಿ ಬಣ್ಣದಿಂದ ಕೂಡಿದ ಒಂದು ಲೋಹದ ಡಿಸೈನ್. ಡಿಸೈನ್,ಬಣ್ಣ ಮತ್ತು ಲೋಹಕ್ಕೆ ಮರುಳಾಗಿ ಅದನ್ನು ಪಡೆಯಲು ಪ್ರಾಮಾಣಿಕನಾಗಿ ಹಗಲಿರುಳು ದುಡಿಯಬೇಕೇ? ಕಳ್ಳನಾಗಿ ಮತ್ತೊಂದು ಅಂಗವನ್ನು ಕೊಂದು ಅಂಗದ ಮೇಲಿದ್ದ ಆಭರಣ ಪಡೆಯಬೇಕೆ ? ಭ್ರಷ್ಟಾಚಾರಿಯಾಗಿ ಲಂಚ ಪಡೆದು ಆಭರಣ ಕೊಳ್ಳಬೇಕೆ ? ಎನ್ನುವ ಅರಿವಿನ ಪಾಠ ಮನಕ್ಕೆ ಮನದಟ್ಟಾಗುತ್ತದೆ. ಆಗ ಮನ ಅರಿವಿನ ಸುಳಿವನ್ನು ಛಲದಿಂದ ಪಾಲಿಸಿ ಜಂಗಮವೆಂದು ಹೆಸರು ಪಡೆಯುತ್ತದೆ. ಅಂಗದ ಮೂಲಕ ಅರಿವಿನ ಸೇವೆಯ ಮಾಡಿದ ಮನ ಅರಿವಿನ ಅಂಗದೊಳಗೆ ಬೆರೆತು ಲಿಂಗಾಂಗವಾಗುತ್ತದೆ. ಜಂಗಮ ಲಿಂಗವಾಗುತ್ತದೆ.

# ಸತ್ಯದ ಸಹಜ ಗುಣವುಳ್ಳ ಶೃಂಗಾರ ತನು

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು.
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು.
ವಚನಕ್ಕೆ ಶೃಂಗಾರ ಸತ್ಯವ ನುಡಿವುದು.
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ.
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ ?
ಚೆನ್ನಮಲ್ಲಿಕಾರ್ಜುನಾ ?

**ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು :**

ಕಣ್ಣಿನಲ್ಲಿ ನೋಡುವ ಬೆಳಕಿನ ಶಕ್ತಿಯಿದೆ. ಆ ಬೆಳಕು ವಸ್ತುವಿನ ಮೇಲೆ ಚೆಲ್ಲಿ ಆನಂದ ಪಡುವ ಗುಣವೂ ಇದೆ. ನೋಡಿ ಆನಂದಪಟ್ಟು ಬೇಡದೇ ಇರುವ ಶಕ್ತಿಯೂ ಇದೆ. ಕಣ್ಣಿನ ಶಕ್ತಿ ಕಣ್ಣಿಗೆ ಪರಿಚಯವಾಗಬೇಕು ! ಕಣ್ಣು ಬೆಳಕು ಚೆಲ್ಲುವ ಒಂದು ಯಂತ್ರವಲ್ಲ; ಅದು ಶಿವಮಯ; ಜ್ಞಾನಮಯ; ಬ್ರಹ್ಮಮಯ; ಸೂರ್ಯನನ್ನು ಬೆಳಗುವ ಬೆಳಕು ಕಣ್ಣಿನಲ್ಲಿದೆ. ತಿಳಿಯಬೇಕಷ್ಟೆ. ತಿಳಿಯದಿದ್ದರೇನಾಯ್ತು ತಿಳಿ ಹೇಳುವ ಗುರುಹಿರಿಯರನಾದರೂ ನೋಡುವುದು ಕಣ್ಗೆ ಶೃಂಗಾರ ವೆಂದಿದ್ದಾಳೆ ಅಕ್ಕ.

**ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು :**

ನಿಶ್ಯಬ್ದಂ ಬ್ರಹ್ಮಮುಚ್ಚತೆ, ಕಿವಿಯಿಂದ ಕೇಳುವ ಪ್ರತಿ ಶಬ್ದದಲ್ಲಿಯೂ ಜ್ಞಾನ (ಬ್ರಹ್ಮ)ವೇ ತುಂಬಿದೆ. ಶಬ್ದವನ್ನು (ಭ್ರಮೆ) ಅಜ್ಞಾನದಿಂದ ಕೇಳುವ ನಿಮಿತ್ತ ತನುವಿನಲ್ಲಿ ಸಂಕಟ ಉಂಟಾಗುತ್ತದೆ. ಶಬ್ದವನ್ನು ಹೊರಕಿವಿಯಲ್ಲಿ ಸೋಸಿ ನಿಶ್ಯಬ್ದಗೊಳಿಸುವ ಕಲೆ ಒಳಕಿವಿಯಲ್ಲಿದೆ. ಶಬ್ದಕ್ಕೆ ನಾಚಿ ಶ್ರೀರಾಮ ಸೀತಾಮಾತೆಯನ್ನು ಕಾಡಿಗೆ ಕಳುಹಿದ. ಇನ್ನುಳಿದವರ ಪಾಡೇನು ? ಅದಕ್ಕಾಗಿಯೇ ಅನ್ಯ ಶಬ್ದಗಳನ್ನು ಕೇಳದಂತೆ, ಪುರಾತನರ ಸುಗೀತಗಳನ್ನು ಕೇಳುವ ಶೃಂಗಾರ ಕೆಲಸದಲ್ಲಿ ಕಿವಿಯನ್ನು ತೊಡಗಿಸಬೇಕು ಎಂದಿದ್ದಾಳೆ ಅಕ್ಕ.

**ವಚನಕ್ಕೆ ಶೃಂಗಾರ ಸತ್ಯವ ನುಡಿವುದು; ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ :**

ಸತ್ಯ ನುಡಿವುದು ಜಟಿಲ. ಮನ ಹೇಗೆ ಸ್ವತಂತ್ರವಲ್ಲವೋ ಹಾಗೆಯೇ ಬಾಯಿಕೂಡಾ ಸ್ವತಂತ್ರವಲ್ಲ. ಕಣ್ಣು ನೋಡಿದ್ದನ್ನು ಕಿವಿ ಕೇಳಿದ್ದನ್ನು, ಮೂಗು ವಾಸಿಸಿದ್ದನ್ನು, ಚರ್ಮ ಸ್ಪರ್ಶಿಷಿಸಿದ್ದನ್ನು , ನಾಲಿಗೆ ರುಚಿಸಿದ್ದನ್ನು ,ಬಾಯಿ ಸತ್ಯದಿಂದ ನುಡಿಯಬೇಕು. ಆದರೆ ನುಡಿಯವುದಿಲ್ಲ. ನುಡಿಯುವುದೆಲ್ಲ ಬರೀ ಹುಸಿಯೇ! ಐದೂ ಜ್ಞಾನೇಂದ್ರಿಯಗಳು ನುಡಿಯುವ ಬಾಯಿಗೆ ಹತ್ತಿರವಾಗಿದ್ದರೂ ಬಾಯಿ ಮಾತ್ರ ಜ್ಞಾನದಿಂದ ಬಹುದೂರ !

ನೋಡಿದ ಕಣ್ಣಿಗೆ ನುಡಿಯಲು ಬರುವುದಿಲ್ಲ, ನೋಡಲು ಬಾರದ ಬಾಯಿ ನಾನು ನೋಡಿದೆನೆಂದು ಸುಳ್ಳು ಬೊಗಳುತ್ತದೆ. ಕೇಳಿದ ಕಿವಿಗೆ ನುಡಿಯಲು ಬರುವುದಿಲ್ಲ, ಕೇಳಲು ಬಾರದ ಬಾಯಿ ನಾನು ಕೇಳಿದೆನೆಂದು ಸುಳ್ಳು ಬೊಗಳುತ್ತದೆ. ವಾಸಿಸಿದ ಮೂಗಿಗೆ ನುಡಿಯಲು ಬರುವುದಿಲ್ಲ, ವಾಸಿಸಲು ಬಾರದ ಬಾಯಿ ನಾನು ವಾಸಿಸಿದೆನೆಂದು ಸುಳ್ಳು ಬೊಗಳುತ್ತದೆ. ಸ್ಪರ್ಶಿಸುವ ಚರ್ಮಕ್ಕೆ ನುಡಿಯಲು ಬರುವುದಿಲ್ಲ, ಸ್ಪರ್ಶಿಸಲು ಬಾರದ ಬಾಯಿ ನಾನು ಮುಟ್ಟಿದೆನೆಂದು ಸುಳ್ಳು ಬೊಗಳುತ್ತದೆ. ರುಚಿಸುವ ನಾಲಿಗೆ ರುಚಿಸಿ ಸುಮ್ಮನಾಗುತ್ತದೆ. ರುಚಿಸಲು ತಿಳಿಯದ ಬಾಯಿ ಉಪ್ಪು ಹುಳಿ ಕಾರ ಎಂದು ಜಗಳ ತೆಗೆದು ಇಡೀ ತನುವನ್ನೇ ವಿಕೃತ ಗೊಳಿಸುತ್ತದೆ.

ಕೋರ್ಟ್ ಕಚೇರಿ ಸರಕಾರ ಬಾಯಿ ಮಾತನ್ನೇ ನಂಬುತ್ತದೆ. ಮಹಾಜ್ಞಾನದ ಸುಳುಹು ಇವುಗಳಿಗೆ ದಕ್ಕುವುದಿಲ್ಲ. ನುಡಿಯುವ ಬಾಯಿಗೂ ಸುಳಿಯುವುದಿಲ್ಲ.ಅದಕ್ಕಾಗಿಯೇ ಅಕ್ಕ ಸದ್ಭಕ್ತರ ನುಡಿಗಡಣವೇ ಶೃಂಗಾರ ಸಂಭಾಷಣೆಗೆ ಅಂದಿದ್ದಾರೆ. ಬಾಯಿಗೆ ಜ್ಞಾನೇಂದ್ರಿಯಗಳ ಸತ್ಯದ ಸುಳುಹು ಹೊಳೆಯುವವರೆಗೆ ಸತ್ಯಕ್ಕೆ ಭಕ್ತರಾದವರ ಸದ್ಭಕ್ತರ ಸಂಗದಲ್ಲಿ ಸದಾ ಇರಬೇಕೆಂದು ಸೂಚಿಸಿದ್ದಾಳೆ.

**ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು :**

ದೇಹ ಸತ್ಯದ ಪಾತ್ರವನ್ನು ಮಾತ್ರ ಅಭಿನಯಿಸಲು ಜನ್ಮ ತಳೆದಿದೆ. ಆದರೆ ಮನವೆಂಬುದು ಮರ್ಕಟ. ಅದು ಕಣ್ಣಿನಲ್ಲಿ ಸೇರಿ ನೋಡಿದ್ದೆಲ್ಲ ಬೇಡುತ್ತದೆ. ಕಿವಿಯಲ್ಲಿ ಸೇರಿ ಕೇಳಿದ್ದೆಲ್ಲ ಬೇಡುತ್ತದೆ. ಮೂಗಿನಲ್ಲಿ ಆವರಿಸಿ ವಾಸಿಸಿದ್ದೆಲ್ಲ ಬೇಡುತ್ತದೆ. ನಾಲಿಗೆಯ ಮೇಲೆ ನರ್ತಿಸಿ ರುಚಿಸಿದ್ದೆಲ್ಲ ಬೇಡುತ್ತದೆ. ಚರ್ಮದಲ್ಲಿ ಲೇಪನಗೊಂಡು ಸ್ಪರ್ಶಿಸಿದ್ದೆಲ್ಲ ಬೇಡುತ್ತದೆ.

ಕುಡಿಯದಿದ್ದರೂ ಮಂಗ್ಯನಂತೆ ಕುಣಿದು ಚೀರುತ್ತದೆ. ಸತ್ಯದ ಸಹಜ ಪಾತ್ರ ಅಭಿನಯಿಸಬೇಕಾದ ದೇಹ ದಿನಕ್ಕೆ ಮೂರು ಪಾತ್ರಗಳನ್ನು ಅಭಿನಯಿಸುತ್ತದೆ. ಬೆಳಿಗ್ಗೆ ಪೂಜಿಸಿ ಭಕ್ತನ ಪಾತ್ರ ಹಾಕುತ್ತದೆ. ಆಫೀಸಿನಲ್ಲಿ ಅಧಿಕಾರ ಚಲಾಯಿಸಿ ದರ್ಪದ ಅಥವಾ ಭ್ರಷ್ಟನ ಪಾತ್ರ ಹಾಕುತ್ತದೆ. ರಾತ್ರಿ ಕುಡಿದು ಕುಣಿದು ಮಂಗ್ಯನ ಪಾತ್ರ ಹಾಕುತ್ತದೆ. ಸಹಜ ಶೃಂಗಾರದ ಸತ್ಪಾತ್ರ ಬಳಕೆಯಾಗದೇ ದೇಹದಲ್ಲಿಯೇ ಉಳಿದು ದೇಹದೊಂದಿಗೆ ಅಳಿಯುತ್ತದೆ.

**ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ. ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ ಚೆನ್ನ ಮಲ್ಲಿಕಾರ್ಜುನಾ ? :**

ಜೀವಿಸುವ ಜೀವನಕ್ಕೆ ತನುವಿನ ಸಹಜ ಮಹಾಜ್ಞಾನವೇ ಶೃಂಗಾರ. ಮಹಾಜ್ಞಾನವನ್ನು ತಿಳಿ ಹೇಳುವ ಶರಣ ಸಮೂಹದ ಗಣಮೇಳಾಪವೇ ಶೃಂಗಾರ. ಜ್ಞಾನ ಬಳಸದೆ ಬಾಳುವ ತನುವಿನ ಬಾಳುವೆ ನರಕ. ಅದು ಸತ್ಪಾತ್ರಕ್ಕೆ ಸಲ್ಲುವುದಿಲ್ಲ ಎಂದಿದ್ದಾಳೆ ಅಕ್ಕಮಹಾದೇವಿ.

□

# ಅರಿವಿಗೆ ಅರ್ಪಣೆಯಾದ ಕರಣಂಗಳು

**ಕರಣ ಮೀಸಲಾಗಿ ನಿಮಗರ್ಪಿತವಾಯಿತ್ತು.**
**ಆನೊಂದರಿಯೆನಯ್ಯಾ.**
**ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ,**
**ಪ್ರಾಣ ನಿಮಗರ್ಪಿತವಾಯಿತ್ತು.**
**ನೀನಲ್ಲದೆ ಪೆರತೊಂದ ನೆನೆದಡೆ**
**ಆಣೆ, ನಿಮ್ಮಾಣೆ ಚೆನ್ನಮಲ್ಲಿಕಾರ್ಜುನಾ.**

**ಕರಣ ಮೀಸಲಾಗಿ ನಿಮಗರ್ಪಿತವಾಯಿತ್ತು. ಆನೊಂದರಿಯೆನಯ್ಯಾ:**

ಇಂದ್ರಿಯಗಳು ಅರಿವಿಗೆ ಮೀಸಲಾಗಿ ಅರಿವಿಗೆ ಅರ್ಪಣೆಯಾದ ಬಳಿಕ ನಾನು ಏನೊಂದರಿಯೆನಯ್ಯಾ ಎಂದು ಹೇಳಿದ್ದಾಳೆ ಅಕ್ಕ. ಇದೊಂದು ವಿಚಿತ್ರವಾದ ಮಾತು. ಕಣ್ಣಿಗೆ ನೋಡುವ ಜ್ಞಾನವಿದೆ. ಅದು ನೋಡುತ್ತದೆ ಕೂಡ. ನೋಡುವುದೇ ಅದರ ಧರ್ಮ. ಹೀಗಿದ್ದು, ಕಣ್ಣು ಮೀಸಲಾಗಿ ನಿಮಗರ್ಪಿತವಾಯಿತ್ತೆನ್ನುವ ಉದ್ದೇಶವಾದರೂ ಏನಿರಬೇಕು?

ಕಣ್ಣಿಗೆ ನೋಡುವ ಜ್ಞಾನವಿದ್ದರೂ ಅದು ಬಳಕೆಯಾಗದೇ ನೋಡಬಾರದ್ದನ್ನು ನೋಡುತ್ತದೆ. ತನ್ನಂತೆ ಇರುವ ಚರ್ಮ, ಅದರೊಳಗಿರುವ ಮೂಳೆ ಮಾಂಸ ರಕ್ತ ಒಂದೇ ಆದರೂ ಕಣ್ಣು ಚರ್ಮವನ್ನು ಹರಿದು ತಿನ್ನುವಂತೆ ನೋಡುತ್ತದೆ. ತನುವಿಗೆ ಭೋಗಿಸಲು ಆದೇಶ ನೀಡುತ್ತದೆ. ಕಣ್ಣಿಗೆ ಇದು ತಪ್ಪು ಅನ್ನಿಸುವುದೇ ಇಲ್ಲ. ಇದು ನೋಡುವ ಕಣ್ಣಿನಲ್ಲಿರುವ ದೋಷ. ಈ ದೋಷ ಕಣ್ಣಿನೊಂದಿಗೆ ತನು ಸಾಯುವವರೆಗೆ ಹೋಗುವುದೇ ಇಲ್ಲ. ಕಣ್ಣಿನ ದೋಷ ಕಣ್ಣೇ ಕಳೆದುಕೊಳ್ಳಬೇಕು. ಕಣ್ಣಿಗೆ ಕಣ್ಣಿನ ಅರಿವು ಪರಿಚಯವಾಗಬೇಕು. ಕಣ್ಣು ತನ್ನ ದೋಷವನ್ನು ಆ ಅರಿವಿಗೆ ಅರ್ಪಿಸಬೇಕು. ಅಂದರೆ ಕಣ್ಣಿನಲ್ಲಿರುವ ಅರಿವನ್ನು ದೋಷದ ಕಣ್ಣು ನೋಡಬೇಕು. ಆಗ ದೋಷ ಅರಿವಿನಲ್ಲಿ ಲೀನವಾಗಿ ಕಣ್ಣು ಸಹಜ ಕಣ್ಣಾಗುತ್ತದೆ. ಸಹಜವಾಗಿ ನೋಡುತ್ತದೆ. ಆಗ ಸಹಜ ಕಣ್ಣಿಗೆ ತನ್ನಂತೆಯೇ ಇರುವ ತನು ಗೋಚರಕ್ಕೆ ಬರುತ್ತದೆ. ಅದನ್ನು ಹರಿದು ತಿನ್ನುವಂತೆ ನೋಡದೆ ಆನಂದದಿಂದ ನೋಡುತ್ತದೆ.

ಕಿವಿ, ಮೂಗು, ಚರ್ಮ, ನಾಲಿಗೆ ಎಂಬ ಇಂದ್ರಿಯಗಳ ಅಜ್ಞಾನ ಕೂಡ ಇದರಂತೆ ಅವುಗಳಲ್ಲಿರುವ ಅರಿವಿಗೆ ಅರ್ಪಣೆಯಾಗಿ, ಕಿವಿ ಅರಿವಿನಿಂದ ಕೇಳುತ್ತದೆ. ಮೂಗು ಅರಿವಿನಿಂದ ವಾಸಿಸುತ್ತದೆ. ಚರ್ಮ ಅರಿವಿನಿಂದ ಸ್ಪರ್ಷಿಸುತ್ತದೆ. ನಾಲಿಗೆ ಅರಿವಿನಿಂದ ರುಚಿಸುತ್ತದೆ. ಆಗ ಕರಣಗಳಿಗೆ ಯಾವ ಅಜ್ಞಾನವೂ ರುಚಿಸದೆ, ಸಹಜ ಜ್ಞಾನದಲ್ಲಿ ಜ್ಞಾನೇಂದ್ರಿಯಗಳಾಗಿ ಉಳಿಯುತ್ತವೆ.

**ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ, ಪ್ರಾಣ ನಿಮಗರ್ಪಿತವಾಯಿತ್ತು:**

ಜ್ಞಾನೇಂದ್ರಿಯಗಳಿಗೆ ಅವುಗಳ ಸಹಜ ಜ್ಞಾನವೇ ಗತಿಯಾಗಿ , ಅವುಗಳ ಸಹಜ ಜ್ಞಾನವೇ ಮತಿಯಾಗಿ ತನುವಿನ ಪ್ರಾಣ ಸಹಿತ ತನುವಿನ ಅರಿವಿಗೆ ಅರ್ಪಣೆಯಾಯಿತು ಎಂದಿದ್ದಾಳೆ ಅಕ್ಕ.

ತನುವಿನ ಅರಿವು ಅದು ಸಾಕ್ಷಾತ್ ಭಗವತ್ ಸ್ವರೂಪ. ಬ್ರಹ್ಮವೂ ಹೌದು. ಅದು ಗುರುದೇವ ಸದಾಶಿವ ಮಹಾದೇವನೂ ಹೌದು. ಅಂತಹ ಅರಿವಿಗೆ ಅಕ್ಕ ಜ್ಞಾನೇಂದ್ರಿಯಗಳಿಗೆ ಮುಸುಕಿದ ಕಾರ್ಗತ್ತಲನ್ನು ಅರ್ಪಣೆ ಮಾಡಿ, ಮಾಡುವ ಬಗೆಯನ್ನು ಓದುಗರಿಗೆ ಸೂತ್ರದ ಮೂಲಕ ಕರುಣಿಸಿದ್ದಾಳೆ.

**ನೀನಲ್ಲದೆ ಪೆರತೊಂದ ನೆನೆದಡೆ ಆಣೆ, ನಿಮ್ಮಾಣೆ ಚೆನ್ನಮಲ್ಲಿಕಾರ್ಜುನಾ:**

ಕಣ್ಣಿನಲ್ಲಿ ಕಿವಿಯಲ್ಲಿ ನಾಲಿಗೆಯಲ್ಲಿ ಮೂಗಿನಲ್ಲಿ ಚರ್ಮದಲ್ಲಿ ಅರಿವೇ ತುಂಬಿದೆ. ಇಡೀ ತನುವಿನ ಕಣಕಣದಲ್ಲಿ ಅರಿವಲ್ಲದೆ ಮತ್ತೊಂದಿಲ್ಲ. ಇಂತಹ ತನುವಿನ ಅರಿವಿಗೆ ಚೆನ್ನಮಲ್ಲಿಕಾರ್ಜುನನೆಂದು ನಾಮಕರಣ ಮಾಡಿ, ಆತನ ಮೇಲೆ ಆಣೆ ಇಟ್ಟು ನಿಮ್ಮನ್ನಲ್ಲದೆ ಮತ್ತೊಂದು ನೆನೆಯುವುದಿಲ್ಲ ಎಂದಿದ್ದಾಳೆ.

☐

**ಅರಿವಿನ ಪರಿಮಳ**

- ☐ ಕಣ್ಣಿಗೆ ನೋಡುವ ಜ್ಞಾನವಿದೆ. ಅದು ನೋಡುತ್ತದೆ ಕೂಡ. ನೋಡುವುದೇ ಅದರ ಧರ್ಮ.
- ☐ ಕಣ್ಣಿನ ದೋಷ ಕಣ್ಣೇ ಕಳೆದುಕೊಳ್ಳಬೇಕು. ಕಣ್ಣಿಗೆ ಕಣ್ಣಿನ ಅರಿವು ಪರಿಚಯವಾಗಬೇಕು. ಕಣ್ಣು ತನ್ನ ದೋಷವನ್ನು ಆ ಅರಿವಿಗೆ ಅರ್ಪಿಸಬೇಕು. ಅಂದರೆ ಕಣ್ಣಿನಲ್ಲಿರುವ ಅರಿವನ್ನು ದೋಷದ ಕಣ್ಣು ನೋಡಬೇಕು. ಆಗ ದೋಷ ಅರಿವಿನಲ್ಲಿ ಲೀನವಾಗಿ ಕಣ್ಣು ಸಹಜ ಕಣ್ಣಾಗುತ್ತದೆ.
- ☐ ತನುವಿನ ಅರಿವು ಅದು ಸಾಕ್ಷಾತ್ ಭಗವತ್ ಸ್ವರೂಪ. ಬ್ರಹ್ಮವೂ ಹೌದು. ಅದು ಗುರುದೇವ ಸದಾಶಿವ ಮಹಾದೇವನೂ ಹೌದು.

# ಅರಿವು ಮತ್ತು ಅಷ್ಟಾವಕ್ರ

ಕಾಯ ಕರ್‍ರನೆ ಕಂದಿದಡೇನಯ್ಯಾ ?
ಕಾಯ ಮಿರ್‍ರನೆ ಮಿಂಚಿದಡೇನಯ್ಯಾ ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ ?

**ಕಾಯ ಕರ್‍ರನೆ ಕಂದಿದಡೇನಯ್ಯಾ ? ಕಾಯ ಮಿರ್‍ರನೆ ಮಿಂಚಿದಡೇನಯ್ಯಾ :**

ಕಾಯ ಸುಂದರವಾಗಿದ್ದರೆ ಎಲ್ಲರ ಕಣ್ಣುಗಳು ಕಾಯವನ್ನೇ ನೋಡುತ್ತವೆ. ಹರಿದು ತಿನ್ನುತ್ತವೆ. ವಿಕೃತವಾಗಿದ್ದರೆ ನೋಡಿ ಅಪಹಾಸ್ಯಕ್ಕೆ ಗುರಿ ಮಾಡುತ್ತವೆ. ಕಾಯ ಮುಖ್ಯವೋ, ಕಾಯದ ನಿರೂಪ ಮುಖ್ಯವೋ? ಕಾಯದ ಇಂದ್ರಿಯಗಳು ಮುಖ್ಯವೋ? ಇದನ್ನು ಕಾಯವೇ ತಿಳಿಯಬೇಕು.

ಜನಕಮಹಾರಾಜನಿಗೆ ಒಮ್ಮೆ ರಾಜ್ಯದ ಜನವೆಲ್ಲ ಮಹಾಜ್ಞಾನಿಗಳಾಗಬೇಕೆಂಬ ಬಯಕೆಯಾಯಿತು. ರಾಜ್ಯದ ಮೂಲೆ ಮೂಲೆಗಳಲ್ಲಿರುವ ಬ್ರಹ್ಮಜ್ಞಾನಿಗಳನ್ನು ಕರೆಯಿಸಿ ಜ್ಞಾನ ಯಾಗವನ್ನು ಹಮ್ಮಿಕೊಂಡ. ಸಾವಿರಾರು ಬ್ರಹ್ಮಜ್ಞಾನಿಗಳು ಬಂದು ಸಭೆಗೆ ಹಾಜರಾದರು. ತಮ್ಮ ತಮ್ಮ ಜ್ಞಾನದ ವಿಷಯವನ್ನು ಪ್ರತಿಪಾದಿಸಿದರು. ಸಭೆ ವಿಜೃಂಭಣೆಯಿಂದ ನಡೆದಿತ್ತು. ಆ ಸಭೆಗೆ ಅಷ್ಟಾವಕ್ರ ಮಹರ್ಷಿಗಳು ದಯಮಾಡಿಸಿದರು. ಅವರ ಕಣ್ಣುಗಳು ವಕ್ರವಾಗಿದ್ದವು. ಕಿವಿ ಮೂಗು ಬಾಯಿ ತುಟಿಗಳು ಸರಿಯಾದ ಜಾಗದಲ್ಲಿ ಇದ್ದಿರಲಿಲ್ಲ. ಹಾಗೂ ದೇಹ ವಕ್ರವಾಗಿ ನೋಡಲು ಅಸಹ್ಯವಾಗಿತ್ತು.

ಬ್ರಹ್ಮಸಭೆಯಲ್ಲಿ ಗಹನವಾದ ಚರ್ಚೆ ನಡೆದಿತ್ತು. ಜನಕಮಹಾರಾಜ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ. ಆ ಸಂದರ್ಭದಲ್ಲಿ ಅಷ್ಟಾವಕ್ರ ಮಹರ್ಷಿಗಳು ತಮ್ಮ ಭಾರವಾದ ದೇಹ ಹೊತ್ತು ಅತ್ಯಂತ ಪ್ರಯಾಸದಿಂದ ಸಭೆಗೆ ಬಂದರು. ಅವರ ದೇಹ ವಿಕೃತವಾದುದ್ದನ್ನು ಕಂಡು ಸಭೆಯಲ್ಲಿದ್ದ ಬ್ರಹ್ಮಜ್ಞಾನಿಗಳು ಗಹಗಹಿಸಿ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಬ್ರಹ್ಮ ಸಭೆಯಲ್ಲಿ ಈ ವಿಕೃತನಿಗೇನು ಕೆಲಸ ಎನ್ನುವಂತಿತ್ತು ಅವರ ನಗು. ಅಧ್ಯಕ್ಷತೆ ವಹಿಸಿದ್ದ ಜನಕಮಹಾರಾಜ ನಗಲಿಲ್ಲ. ಗಂಭೀರವಾಗಿಯೇ ಅವರನ್ನು ಬರ ಮಾಡಿಕೊಂಡರು. ಜ್ಞಾನಿಗಳ ನಗು ನಿಂತ ಮೇಲೆ ಅಷ್ಟಾವಕ್ರರು ವೇದಿಕೆಗೆ ಹೋಗಿ ಅವರಿಗಿಂತ ಜೋರಾಗಿ ನಕ್ಕರು.

ಜನಕಮಹಾರಾಜ ಅಷ್ಟಾವಕ್ರರನ್ನು ಕುರಿತು ಗುರುಗಳೆ, ಬ್ರಹ್ಮಜ್ಞಾನಿಗಳು ನಕ್ಕದ್ದು ಸರಿ. ಏಕೆಂದರೆ ಅವರು ನಿಮ್ಮ ದೇಹ ನೋಡಿ ನಕ್ಕರು. ನೀವು ನಕ್ಕದ್ದು ನನಗೆ ಅರ್ಥವಾಗಲಿಲ್ಲ. ದಯವಿಟ್ಟು ವಿವರಿಸಿ ಎಂದು ಮಹಾರಾಜ ಬ್ರಹ್ಮ ಸಭೆಯಲ್ಲಿ ಅಷ್ಟಾವಕ್ರರಿಗೆ ಮನವಿ ಮಾಡಿಕೊಂಡ. ಆಗ ಅಷ್ಟಾ ವಕ್ರರು ಮಹಾರಾಜರೆ, ಬ್ರಹ್ಮಜ್ಞಾನಿಗಳು ಎನ್ನಿಸಿಕೊಂಡವರಿಗೆ ಏನು ನೋಡಿ ನಗುವು ಬಂತೋ ನಾನು ಕೂಡ ಅದನ್ನೇ ನೋಡಿ ನಗಬೇಕಾಯಿತು ಎಂದರು.

ಬಾಲ್ಯದಲ್ಲಿ ಇದ್ದ ದೇಹ ಪ್ರೌಢತ್ವದಲ್ಲಿ ಇರುವುದಿಲ್ಲ, ಯೌವ್ವನದಲ್ಲಿ ಇರುವುದಿಲ್ಲ, ಮುಪ್ಪಿನಲ್ಲಿ ಕೂಡ ಇರುವುದಿಲ್ಲ. ಹೀಗಿದ್ದು, ಒಮ್ಮೆ ಇಲ್ಲವಾಗುತ್ತದೆ. ಇಲ್ಲವಾಗುವ ದೇಹವನ್ನು ಚರ್ಮವನ್ನು ನೋಡಿ ನಗುವವರು ಹೇಗೆ ಬ್ರಹ್ಮಜ್ಞಾನಿಗಳು ಎನ್ನಿಸಿಕೊಂಡಾರು? ಇಂಥವರು ಜ್ಞಾನ ಹೇಳಲು ಸಾಧ್ಯವೆ? ಏನಿದ್ದರೂ ಇವರು ಚರ್ಮ ನೋಡಿ ನಗುವ ಚಮ್ಮಾರ ಪಂಡಿತರೇ ಹೊರತು ಜ್ಞಾನಿಗಳಲ್ಲ.ಇಂಥವರ ಅಜ್ಞಾನವನ್ನು ನೋಡಿ ನಾನು ನಗಬೇಕಾಯಿತು. ಇದ್ದು ಇಲ್ಲವಾಗುವ ದೇಹವನ್ನು ನೋಡಿ ನಗುವ ಇವರು ಜ್ಞಾನ ಹೇಳಲು ಸಾಧ್ಯವೇ ಇಲ್ಲ ಎಂದು ಜನಕಮಹಾರಾಜರಿಗೆ ಅಷ್ಟಾವಕ್ರರು ವಿವರಿಸಿದರು.

ಹಾಗೆಯೆ ಅಕ್ಕಮಹಾದೇವಿ ಕಾಯ ಕರ‍್ರನೆ ಕಂದಿದರೇನು? ಕಾಯ ಮಿರ‍್ರನೆ ಮಿಂಚಿದರೇನು? ಅಂತರಂಗ ಶುದ್ಧವಾದ ಬಳಿಕ ಎಂದಿದ್ದಾಳೆ.

**ಚೆನ್ನಮಲ್ಲಿಕಾರ್ಜುನಯ್ಯಾ ನೀನೊಲಿದ ಕಾಯವು ಹೇಗಿದ್ದಡೇನಯ್ಯಾ ?:**

ತನುವಿನ ಅರಿವು ತನುವಿಗೆ ಒಲಿದ ಮೇಲೆ ಕಾಯ ಕರ‍್ರಗಿದ್ದಡೇನು , ಕಾಯ ಮಿರಿ ಮಿರಿ ಮಿಂಚಿದರೇನು? ಕಾಯದ ಅರಿವು ಪ್ರಧಾನವೇ ಹೊರತು ಕಾಯವಲ್ಲ. ಅರಿವು ಒಲಿದ ಕಾಯ, ಕಾಯದ ಅರಿವನ್ನು ನೋಡುತ್ತದೆಯೇ ಹೊರತು ಕಾಯವನ್ನು ನೋಡುವುದಿಲ್ಲ. ಕಾಯ ಕಂಡರೆ ಕಾಯದ ಅರಿವು ಕಾಣುವುದಿಲ್ಲ. ಕಣ್ಣು ಕಂಡರೆ ಕಣ್ಣಿನ ದೃಷ್ಟಿ ಕಾಣುವುದಿಲ್ಲ. ಪದಾರ್ಥ ಕಾಣುತ್ತದೆ ಪದಾರ್ಥದ ರುಚಿ ಕಾಣುವುದಿಲ್ಲ. ಕಬ್ಬು ಕಾಣುತ್ತದೆ ಕಬ್ಬಿನ ಸಿಹಿ ಕಾಣುವುದಿಲ್ಲ. ಸಿಹಿ ಇಲ್ಲದ ಕಬ್ಬು ಸುಂದರವಾಗಿ ಕಂಡರೂ ಅದು ನಿರರ್ಥಕ ಹೇಗೋ ಹಾಗೆಯೇ ಅರಿವು ಬಳಕೆಯಾಗದ ಕಾಯ ಸುಂದರವಾಗಿ ಕಂಡರೂ ನಿರರ್ಥಕವೇ ಆಗಿದೆ. ಅರಿವು ಒಲಿದ ಕಾಯ ವಿಕೃತವಾಗಿದ್ದರೂ ಅಷ್ಟಾವಕ್ರರಂತೆ ಸುಂದರವಾಗಿದೆ.

□

**ಅರಿವಿನ ಪರಿಮಳ**

- □ ಕಾಯ ಸುಂದರವಾಗಿದ್ದರೆ ಎಲ್ಲರ ಕಣ್ಣುಗಳು ಕಾಯವನ್ನೇ ನೋಡುತ್ತವೆ. ವಿಕೃತವಾಗಿದ್ದರೆ ಕಾಯವನ್ನು ಯಾವ ಕಣ್ಣುಗಳು ನೋಡುವುದಿಲ್ಲ. ನೋಡಿ ಕಾಯವನ್ನು ಅಪಹಾಸ್ಯಕ್ಕೆ ಗುರಿ ಮಾಡುತ್ತವೆ. ಕಾಯ ಮುಖ್ಯವೋ, ಕಾಯದ ನಿರೂಪ ಮುಖ್ಯವೋ? ಕಾಯದ ಇಂದ್ರಿಯಗಳು ಮುಖ್ಯವೋ? ಇದನ್ನು ಕಾಯವೇ ತಿಳಿಯಬೇಕು.
- □ ಅರಿವು ಒಲಿದ ಕಾಯ, ಕಾಯದ ಅರಿವನ್ನು ನೋಡುತ್ತದೆಯೇ ಹೊರತು ಕಾಯವನ್ನು ನೋಡುವುದಿಲ್ಲ. ಕಾಯ ಕಂಡರೆ ಕಾಯದ ಅರಿವು ಕಾಣುವುದಿಲ್ಲ. ಕಣ್ಣು ಕಂಡರೆ ಕಣ್ಣಿನ ದೃಷ್ಟಿ ಕಾಣುವುದಿಲ್ಲ. ಪದಾರ್ಥ ಕಾಣುತ್ತದೆ ಪದಾರ್ಥದ ರುಚಿ ಕಾಣುವುದಿಲ್ಲ. ಕಬ್ಬು ಕಾಣುತ್ತದೆ ಕಬ್ಬಿನ ಸಿಹಿ ಕಾಣುವುದಿಲ್ಲ. ಸಿಹಿ ಇಲ್ಲದ ಕಬ್ಬು ಸುಂದರವಾಗಿ ಕಂಡರೂ ಅದು ನಿರರ್ಥಕ ಹೇಗೋ ಹಾಗೆಯೇ ಅರಿವು ಬಳಕೆಯಾಗದ ಕಾಯ ಸುಂದರವಾಗಿ ಕಂಡರೂ ನಿರರ್ಥಕವೇ ಆಗಿದೆ.

# ಬೆಳಕಿನಿಂದಾದ ನೆಳಲು ಬೆಳಕಿನಿಂದಲೇ ಮಾಯ

**ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ**
**ಪ್ರಾಣಕ್ಕೆ ನೆಳಲಾಗಿ ಕಾಡಿತ್ತು ಮಾಯೆ**
**ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ**
**ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ**
**ಅರುಹಿಂಗೆ ಮರಹಾಗಿ ಕಾಡಿತ್ತು ಮಾಯೆ**
**ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ**
**ಚೆನ್ನ ಮಲ್ಲಿಕಾರ್ಜುನಾ, ನೀನೊಡ್ಡಿದ ಮಾಯೆಯನಾರಿಗೂ ಗೆಲಬಾರದು.**

ಸೂರ್ಯನ ಪ್ರತಿಬಿಂಬ ಸೂರ್ಯನಲ್ಲ. ಗಾಜಿನ ಮೇಲೆ, ನೀರಿನ ಮೇಲೆ, ವಸ್ತುಗಳ ಮೇಲೆ ಬೆಳಕು ಬಿದ್ದಾಗ ಅದು ಸೂರ್ಯನ ಬೆಳಕಿನಂತೆ ಪ್ರಜ್ವಲಿಸುತ್ತದೆ. ಸೂರ್ಯನಂತೆ ಕಾಣುತ್ತದೆ. ಆದರೆ ಸೂರ್ಯನಲ್ಲ. ಈ ತಿಳುವಳಿಕೆ ಮನುಷ್ಯನಿಗಿದೆ. ಕಾಯದ ಬೆಳಕಿನಿಂದ ಬೀಳುವ ನೆರಳಿನ ಪರಿಚಯವೂ ಇದೆ. ಆ ನೆರಳೇ ಕರಾಳ ನೆರಳಾಗಿ ಕಾಯಕ್ಕೆ ಘಾಸಿಗೊಳಿಸುವ ಪರಿಚಯ ಮಾತ್ರ ಸರ್ವರಿಗಿಲ್ಲ.

ಜಲದ ಮೇಲೆ ಬಿದ್ದ ಸೂರ್ಯನ ಪ್ರತಿಬಿಂಬ ನೋಡಿ ಕಲ್ಲು ಎಸೆದಾಗ ಜಲ, ಸೂರ್ಯ, ಬೆಳಕಿನ ನೆರಳು ಮೂರು ತೊಂದರೆಗೀಡಾದಂತೆ ಭಾಸವಾಗುತ್ತದೆ. ಅರಿವಿನಿಂದ ನೋಡಿದಾಗ ಸೂರ್ಯನಿಗೆ ಏನೂ ಪೆಟ್ಟಾಗಿಲ್ಲ. ಜಲಕ್ಕೆ ಪೆಟ್ಟುಬಿದ್ದು ಅದು ಪ್ರತಿಬಿಂಬದೊಂದಿಗೆ ಕಲಕಿತು. ಹಾಗೆಯೇ ಕಾಯಕ್ಕೆ ಪೆಟ್ಟುಬಿದ್ದರೆ ಕಾಯದ ನೆರಳಾದ ಮಾಯೆಯೆಂಬ ಮನ ಕಾಯವನ್ನು ಕಲಕಿ ತೊಂದರೆಗೀಡು ಮಾಡುತ್ತದೆ.

ಒಂದು ಶಬ್ದ ಶ್ರೀರಾಮನ ಕಾಯಕ್ಕೆ ಬಡಿದು ಬಸಿರೆ ಸೀತಾಮಾತೆಯನ್ನು ಕಾಡಿಗೆ ಕಳುಹಿಸುವಂತೆ ಮಾಡಿತು. ಸೀತಾದೇವಿಯನ್ನು ಅಗಲಿದ ಶ್ರೀರಾಮನ ಕಾಯ ತೊಳಲಿ ಬಳಲಿ ಸದಾ ದುಃಖದಲ್ಲಿ ಮುಳುಗಿಸುವಂತೆ ಮಾಡಿತು.

ಜಲದಲ್ಲಿದ್ದ ಸೂರ್ಯನಿಗೆ ಕಲ್ಲು ಬಡಿದರೆ ಜಲ ಹಾಗೂ ಜಲದ ಬಿಂಬ ಕಲಕಿತೆ ಹೊರತು ಸೂರ್ಯನಿಗೆ ಏನೂ ಆಗಲಿಲ್ಲ. ಇದು ಕಲ್ಲು ಎಸೆದವನ ಅನುಭವಕ್ಕೆ ಬರಲಿಲ್ಲ, ಜಲದ ಅನುಭವಕ್ಕೂ ಬರಲಿಲ್ಲ. ಜಲದಲ್ಲಿ ಬಿದ್ದ ಬಿಂಬದ ಅನುಭವಕ್ಕೂ ಬರಲಿಲ್ಲ.

ಶ್ರೀರಾಮನ ಕಾಯಕ್ಕೆ ಬಡಿದ ಮಾತು, ಮಡಿವಾಳನ ಅನುಭವಕ್ಕೆ ಬರಲಿಲ್ಲ, ಶ್ರೀರಾಮನ ಕಾಯದ ಅನುಭವಕ್ಕೆ ಬರಲಿಲ್ಲ, ಕಾಯಕ್ಕೆ ಅಂಟಿದ ಮಾಯೆಯೆಂಬ ಮನದ ಅನುಭವಕ್ಕೂ ಬರಲಿಲ್ಲ. ಶ್ರೀರಾಮನ ಕಾಯದ ಅರಿವೆಂಬ ಸೂರ್ಯನಿಗೆ ಏನೂ ಆಗಲಿಲ್ಲ! ಕಾಯಕ್ಕಂಟಿದ ಮಾಯೆಯೆಂಬ ಮನದ ನೆರಳು ತೊಲಗಬೇಕಾದರೆ, ಆ ನೆರಳಿನ ಮೇಲೆ ಅರಿವೆಂಬ ಬೆಳಕು ಬೀಳಲೇಬೇಕು.

ಆ ಬೆಳಕಿನಲ್ಲಿ ಮಾಯೆಯೆಂಬ ಮನದ ನೆರಳು ಲೀನವಾಗಿ ಅರಿವೆಂಬ ಬೆಳಕಾಗಿ ಪರಿವರ್ತನೆ ಯಾಗುವುದು.

ಕಾಯಕ್ಕೆ ಬಡಿದ ಶಬ್ದ ಕಾಯದಲ್ಲಿಯೇ ಅರಿವಾಗಿ ಕಾಯವನ್ನು ಕಲಕುವುದಿಲ್ಲ. 'ನಿಶಬ್ದಂ ಬ್ರಹ್ಮ ಮುಚ್ಚತೆ ' ಶಬ್ದ ನಿಶಬ್ದವಾಗುತ್ತದೆ. ಸುಶಬ್ದ -ಅಪಶಬ್ದವೆಂದು ಎರಡು ಪಟ್ಟಿ ಮಾಡಿದರೆ ಶಬ್ದ ಯಾವ ಪಟ್ಟಿಯಲ್ಲಿಯೂ ಸೇರುವುದಿಲ್ಲ. ಶಬ್ದ ಎನ್ನುವುದು ಅರಿವು ಮಾತ್ರ. ಕಿವಿಗೆ ಬಡಿದ ಶಬ್ದ ಅರಿವಿನಿಂದ ಕಿವಿಯಲ್ಲಿ ಸೋಸಿ ಸ್ವೀಕರಿಸಿದರೆ, ಕಾಯವನ್ನು ಕಲಕುವುದಿಲ್ಲ.

ಜಲದಲ್ಲಿ ಬಿದ್ದ ಕಲ್ಲು ತರಂಗಗಳನ್ನುಂಟು ಮಾಡುತ್ತದೆ. ಶಬ್ದವನ್ನುಂಟು ಮಾಡುತ್ತದೆ. ತರಂಗಗಳೂ ಜಲವೇ, ಜಲವೂ ಜಲವೇ, ಶಬ್ದ ಕೂಡಾ ಜಲದಿಂದಾದದ್ದು. ಅದು ಜಲದಲ್ಲಿಯೇ ನಷ್ಟವಾಗುತ್ತದೆ. ಅದು ಜಡ; ನೋಡಿದರೆ, ಕೇಳಿದರೆ ಅರ್ಥವಾಗುತ್ತದೆ. ಅದರಂತೆಯೇ ಕಾಯಕ್ಕೆ ಬಡಿದ ಶಬ್ದ ತಿಳಿಯ ಹೋದರೆ ಅರ್ಥವಾಗುತ್ತದೆ. ಕೇಳಿ ತಿಳಿದು ಆನಂದವಾಗುತ್ತದೆ. ಅರಿವಿನ ಪರಿಧಿಯಲ್ಲಿ ಬಡಿದ ಶಬ್ದಗಳೆಲ್ಲ ಬ್ರಹ್ಮಮಯವೇ!

ಹೀಗೆಯೇ ಕಾಯದ ಪ್ರಾಣಕ್ಕೆ ಮನವಾಗಿ ಕಾಡುತ್ತದೆ ಮಾಯೆ. ಕಾಯದ ಮನಕ್ಕೆ ನೆನಪಾಗಿ ಕಾಡುತ್ತದೆ ಮಾಯೆ ಕಾಯದ ನೆನಪಿಗೆ ಅರಿವಾಗಿ ಕಾಡುತ್ತದೆ ಮಾಯೆ. ಕಾಯದ ಅರಿವಿಗೆ ಮರೆವಾಗಿ ಕಾಡುತ್ತದೆ ಮಾಯೆ. ಮಾಯೆಯೆಂಬುದು ಮನು ಕುಲಕ್ಕಂಟಿದ ಮನೋ ರೋಗ, ಈ ರೋಗವನ್ನು ಕಾಯದ ಒಡೆಯನಾದ ಅರಿವೆಂಬ ಚೆನ್ನಮಲ್ಲಿಕಾರ್ಜುನನೇ ಕಾಯಕ್ಕೆ ಒಡ್ಡಿದ್ದಾನೆ. ಆತ ಒಡ್ಡಿದ ಮಾಯೆಯನ್ನು, ಆತನನ್ನು ಮನದಿಂದ ಒಲಿಸಿಕೊಂಡೇ ಗೆಲ್ಲಬೇಕಲ್ಲದೆ ಇಲ್ಲದಿದ್ದರೆ ಸಾಧ್ಯವಿಲ್ಲ ಎನ್ನುತ್ತಾಳೆ ಶರಣೆ ಅಕ್ಕಮಹಾದೇವಿ.

□

---

**ಅರಿವಿನ ಪರಿಮಳ**

- □ ಜಲದ ಮೇಲೆ ಬಿದ್ದ ಸೂರ್ಯನ ಪ್ರತಿಬಿಂಬ ನೋಡಿ ಕಲ್ಲು ಎಸೆದಾಗ ಜಲ, ಸೂರ್ಯ, ಬೆಳಕಿನ ನೆರಳು ಮೂರು ತೊಂದರೆಗೀಡಾದಂತೆ ಭಾಸವಾಗುತ್ತದೆ. ಅರಿವಿನಿಂದ ನೋಡಿದಾಗ ಸೂರ್ಯನಿಗೆ ಏನೂ ಪೆಟ್ಟಾಗಿಲ್ಲ. ಜಲಕ್ಕೆ ಪೆಟ್ಟುಬಿದ್ದು ಅದು ಪ್ರತಿಬಿಂಬದೊಂದಿಗೆ ಕಲಕಿತು. ಹಾಗೆಯೇ ಕಾಯಕ್ಕೆ ಪೆಟ್ಟುಬಿದ್ದರೆ ಕಾಯದ ನೆರಳಾದ ಮಾಯೆಯೆಂಬ ಮನ ಕಾಯವನ್ನು ಕಲಕಿ ತೊಂದರೆಗೀಡು ಮಾಡುತ್ತದೆ.
- □ ಜಲದಲ್ಲಿದ್ದ ಸೂರ್ಯನಿಗೆ ಕಲ್ಲು ಬಡಿದರೆ ಜಲ ಹಾಗೂ ಜಲದ ಬಿಂಬ ಕಲಕಿತೆ ಹೊರತು ಸೂರ್ಯನಿಗೆ ಏನೂ ಆಗಲಿಲ್ಲ. ಇದು ಕಲ್ಲು ಎಸೆದವನ ಅನುಭವಕ್ಕೆ ಬರಲಿಲ್ಲ, ಜಲದ ಅನುಭವಕ್ಕೂ ಬರಲಿಲ್ಲ. ಜಲದಲ್ಲಿ ಬಿದ್ಧ ಬಿಂಬದ ಅನುಭವಕ್ಕೂ ಬರಲಿಲ್ಲ.
- □ ಕಾಯಕ್ಕೆ ಬಡಿದ ಶಬ್ದ ಕಾಯದಲ್ಲಿಯೇ ಅರಿವಾಗಿ ಕಾಯವನ್ನು ಕಲಕುವುದಿಲ್ಲ. 'ನಿಶಬ್ದಂ ಬ್ರಹ್ಮ ಮುಚ್ಚತೆ ' ಶಬ್ದ ನಿಶಬ್ದವಾಗುತ್ತದೆ. ಸುಶಬ್ದ -ಅಪಶಬ್ದವೆಂದು ಎರಡು ಪಟ್ಟಿ ಮಾಡಿದರೆ ಶಬ್ದ ಯಾವ ಪಟ್ಟಿಯಲ್ಲಿಯೂ ಸೇರುವುದಿಲ್ಲ. ಶಬ್ದ ಎನ್ನುವುದು ಅರಿವು ಮಾತ್ರ. ಕಿವಿಗೆ ಬಡಿದ ಶಬ್ದ ಅರಿವಿನಿಂದ ಕಿವಿಯಲ್ಲಿ ಸೋಸಿ ಸ್ವೀಕರಿಸಿದರೆ, ಕಾಯವನ್ನು ಕಲಕುವುದಿಲ್ಲ.
- □ ಜಲದಲ್ಲಿ ಬಿದ್ದ ಕಲ್ಲು ತರಂಗಗಳನ್ನುಂಟು ಮಾಡುತ್ತದೆ. ಶಬ್ದವನ್ನುಂಟು ಮಾಡುತ್ತದೆ. ತರಂಗಗಳೂ ಜಲವೇ, ಜಲವೂ ಜಲವೇ, ಶಬ್ದ ಕೂಡಾ ಜಲದಿಂದಾದದ್ದು. ಅದು ಜಲದಲ್ಲಿಯೇ ನಷ್ಟವಾಗುತ್ತದೆ. ಅದು ಜಡ; ನೋಡಿದರೆ, ಕೇಳಿದರೆ ಅರ್ಥವಾಗುತ್ತದೆ. ಅದರಂತೆಯೇ ಕಾಯಕ್ಕೆ ಬಡಿದ ಶಬ್ದ ತಿಳಿಯ ಹೋದರೆ ಅರ್ಥವಾಗುತ್ತದೆ. ಕೇಳಿ ತಿಳಿದು ಆನಂದವಾಗುತ್ತದೆ. ಅರಿವಿನ ಪರಿಧಿಯಲ್ಲಿ ಬಡಿದ ಶಬ್ದಗಳೆಲ್ಲ ಬ್ರಹ್ಮಮಯವೇ!

# ಕಾಯದ ಕಳವಳ ಕಳೆಯುವ ಸೂತ್ರ

**ಕಾಯದ ಕಾರ್ಪಣ್ಯವರತಿತ್ತು, ಕರಣಂಗಳ ಕಳವಳವಳಿದಿತ್ತು.**
**ಮನ ತನ್ನ ತಾರ್ಕಣೆಯ ಕಂಡು ತಳವಳಗಾದದು**
**ಇನ್ನೇವೆನಿನ್ನೇವೆನಯ್ಯಾ**
**ನಿಮ್ಮ ಶರಣ ಬಸವಣ್ಣನ ಶ್ರೀಪಾದವ ಕಂಡಲ್ಲದೆ**
**ಬಯಕೆ ಬಯಲಾಗದು.**
**ಇನ್ನೇವೆ ಇನ್ನೇವೆನಯ್ಯಾ ಚೆನ್ನಮಲ್ಲಿಕಾರ್ಜುನ.**

ಕಾಯ ಮತ್ತು ಕಾಯದ ಇಂದ್ರಿಯಗಳ ತೊಂದರೆ ಅಷ್ಟಿಷ್ಟಲ್ಲ. ಹೇಳತೀರದು. ಶ್ರೀಮಂತ ಬಡವನೆನ್ನದೆ , ಸನ್ಯಾಸಿ ಸ್ವಾಮಿ ಎನ್ನದೆ , ಹೆಣ್ಣು ಗಂಡು ಜಾತಿ ಮತ ಪಂಥವೆನ್ನದೆ ಕಾಯದ ಇಂದ್ರಿಯಗಳಲ್ಲಿ ವಾಸವಾದ ಮನ ಕಾಯವನ್ನು ಕ್ಷಣ ಕ್ಷಣಕ್ಕೂ ಹರಿದು ತಿನ್ನುತ್ತದೆ. ಕಾಯದ ಕಿವಿಗೆ ಶಬ್ದ ಬಡಿದರೆ ಸಾಕು ಇಡೀ ತನುವನ್ನು ಹಿಂಡಿ ಹಿಪ್ಪಿ ಮಾಡುತ್ತದೆ. ಕಿವಿಗೆ ಬಡಿದ ಶಬ್ದ ಮನ ಸಂಗ್ರಹಿಸಿಕೊಂಡು , ಆಗಾಗ ನೆನಪು ಮಾಡಿ , ಕಾಯವನ್ನು ಕಷ್ಟ ಕಾರ್ಪಣ್ಯಗಳಿಗೆ ಒಡ್ಡಿ, ಕಳವಳವನ್ನುಂಟು ಮಾಡುತ್ತದೆ. ಇದನ್ನು ಅಳಿಯಲು ಸಾಧ್ಯವೆ ಹೇಗೆ ಎನ್ನುವ ಯೋಚನೆಯನ್ನು ಮನ ಮಾಡುವುದಿಲ್ಲ. ಬಾಹ್ಯ ಸಂಪತ್ತು ಕಾಯದ ಕಳವಳವನ್ನು ಕಳೆಯುವುದಿಲ್ಲ.

ಕಾಯದ ಕಾರ್ಪಣ್ಯವನ್ನು ಅರಿತು ಕರಣಂಗಳ ಕಳವಳ ಅಳಿಯಿತು. ಮನ ತನ್ನ ತಾರ್ಕಣೆಯ ಕಂಡು ತಳವಳಗಾದುದಕ್ಕೆ ಇನ್ನು ನಾನು ಬದುಕಿದೆ ಎಂದಿದ್ದಾಳೆ ಅಕ್ಕ. ಕಾಯದ ಕಳವಳ ತಿಳಿಯುವುದು ಸಾಮಾನ್ಯವಲ್ಲ, ಇಂದ್ರಿಯಗಳ ಕಳವಳ ತಿಳಿಯುವುದು ಸಾಮಾನ್ಯವಲ್ಲ. ಮನದ ತಾರ್ಕಣೆಯ ಕಂಡುದು ಸಾಮಾನ್ಯವಲ್ಲ. ಇಷ್ಟು ತಿಳಿದರೆ ಸಾಕು ನಿರಾಳವಾಗಿ ಯಾವ ಕಷ್ಟ ಕಾರ್ಪಣ್ಯಗಳಿಲ್ಲದೆ ಸುಖದ ಸುಖಿಯಾಗಿ ಬದುಕಬಹುದು. ಆದರೆ ಕಾಯದ ಕಳವಳವನ್ನು, ಇಂದ್ರಿಯ ಹಾಗೂ ಮನದ ದುಗುಡವನ್ನು ತಾನೆ ಸ್ವತಹ ತಿಳಿಯಲು ಬರುವುದಿಲ್ಲ. ತಿಳಿಯಲು ಹೋದರೆ ತಾನು ಶಾಂತನಾಗುತ್ತಿದ್ದ. ತಾನೊಂದೆ ಅಲ್ಲ ಇಡೀ ಜಗದ ಮನುಜರೆಲ್ಲ ಶಾಂತರಾಗುತ್ತಿದ್ದರು.

ಕಾಯದ ಜ್ಞಾನೇಂದ್ರಿಯಗಳ ಮೇಲೆ ಸವಾರಿ ಮಾಡುವ ಮನವನ್ನು ಕಾಯದ ಮನದಿಂದಲೇ ತಿಳಿಯುವುದು ಬಹಳ ಪ್ರಯಾಸವಾದುದು. ತಿಳಿದರೆ, ತಿಳಿಸಿ ಹೇಳಿದರೆ ಬಹಳ ಸರಳವಾದುದು ! ಆದರೆ ಬಲವಾಗಿ ತಿಳಿಯುವ ಬಯಕೆಯಾಗಬೇಕಷ್ಟೆ. ತಿಳಿ ಹೇಳುವ ಗುರುವಿನಿಂದ ಈ ಬಯಕೆ ಇಂದಲ್ಲ ನಾಳೆ ಬಯಲಾಗುತ್ತದೆ.

**ನಿಮ್ಮ ಶರಣ ಬಸವಣ್ಣನ ಶ್ರೀಪಾದವ ಕಂಡಲ್ಲದೆ ಬಯಕೆ ಬಯಲಾಗದು. ಇನ್ನೇವೆನಿನ್ನೇವೇನಯ್ಯಾ ಚೆನ್ನಮಲ್ಲಿಕಾರ್ಜುನಾ:**

ಅಕ್ಕನ ವಚನದ ಕೊನೆಯ ಎರಡು ಸಾಲುಗಳಲ್ಲಿ ಸಂಪೂರ್ಣ ಬೆಡಗು ತುಂಬಿದೆ. ನಿಮ್ಮ ಶರಣ: ನಿಮ್ಮ ಶರಣ ಎಂದರೆ ಚೆನ್ನಮಲ್ಲಿಕಾರ್ಜುನೆಂಬ ಕಾಯದ ಅರಿವು ,

ಜ್ಞಾನೇಂದ್ರಿಯಗಳ ಅರಿವಿನ ತಂತ್ರಜ್ಞಾನವನ್ನು ತಿಳಿದು ಅದಕ್ಕೆ ಶರಣು ಹೋಗಿ ಶರಣನಾದವನು. ಅಂತಹ ಶರಣ ಬಸವಣ್ಣನ ಶ್ರೀಪಾದವನ್ನು ಕಂಡು ನನ್ನ ಬಯಕೆ ಬಯಲಾಯಿತು. ಇನ್ನು ನಾನು ಬದುಕಿದೆನಯ್ಯಾ ಎಂದು ಹೃದಯ ತುಂಬಿ ಆನಂದದಿಂದ ಹಾಡಿದ್ದಾಳೆ.

ಕಾಯದ ಕಾರ್ಪಣ್ಯವು ಹರಿಯಿತು, ಕರಣಂಗಳ ಕಳವಳವೂ ನಿಂತಿತು. ಮನದ ತಾರ್ಕಣೆಯು ನಿಂತು ಆ ಮನವೇ ಘನಮನವಾಯಿತು. ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಬೆಳಕಿನಲ್ಲಿ ಲೀನವಾಗಿ ಆ ಬೆಳಕೇ ತಾನಾಯಿತು.

□

**ಅರಿವಿನ ಪರಿಮಳ**

□ ಕಾಯದ ಜ್ಞಾನೇಂದ್ರಿಯಗಳ ಮೇಲೆ ಸವಾರಿ ಮಾಡುವ ಮನವನ್ನು ಕಾಯದ ಮನದಿಂದಲೇ ತಿಳಿಯುವುದು ಬಹಳ ಪ್ರಯಾಸವಾದುದು. ತಿಳಿದರೆ, ತಿಳಿಸಿ ಹೇಳಿದರೆ ಬಹಳ ಸರಳವಾದುದು ! ಆದರೆ ಬಲವಾಗಿ ತಿಳಿಯುವ ಬಯಕೆಯಾಗಬೇಕಷ್ಟೆ. ತಿಳಿ ಹೇಳುವ ಗುರುವಿನಿಂದ ಈ ಬಯಕೆ ಇಂದಲ್ಲ ನಾಳೆ ಬಯಲಾಗುತ್ತದೆ.

# ಕಾಯ - ಅಕಾಯ

**ಕಾಯದೊಳಗೆ ಅಕಾಯವಾಯಿತ್ತು.**
**ಜೀವದೊಳಗೆ ನಿರ್ಜೀವವಾಯಿತ್ತು.**
**ಭಾವದೊಳಗೆ ನಿರ್ಭಾವವಾಯಿತ್ತು.**
**ಎನ್ನ ಮನದೊಳಗೆ ಘನ ನೆನಹಾಯಿತ್ತು.**
**ಎನ್ನ ತಲೆಮೊಲೆಗಳ ನೋಡಿ ಸಲಹಿದಿರಾಗಿ**
**ಚೆನ್ನಮಲ್ಲಿಕಾರ್ಜುನಯ್ಯನ ಧರ್ಮದವಳಾನು.**

ನಾಲ್ಕು ಜನ್ಮಗಳಲ್ಲಿಯೂ ಸಾಧ್ಯವಾಗದ ನಿರ್ವಾಣದ ನಾಲ್ಕು ದೃಷ್ಟಾಂತ ಗಳನ್ನು ಅಕ್ಕ ಕೇವಲ ನಾಲ್ಕು ಸಾಲುಗಳಲ್ಲಿ ಹೆಣೆದಿದ್ದಾಳೆ.

ನಿರ್ವಾಣ ಹೊಂದಿದ ಕಾಯ ಅಕಾಯವಾಗುತ್ತದೆ. ನೋಡುವ ಕಾಯಗಳೆಲ್ಲ ಅಕಾಯವಾಗಿ ಕಾಣುತ್ತವೆ. ಇದೇ ನಿರ್ವಾಣ ಹೊಂದಿದ ಲಕ್ಷಣ! ಬುದ್ಧ, ಶರಣ, ದಾಸನಾದ ಲಕ್ಷಣ! ನುಡಿದರಾಗದು, ವಿವರಿಸಲು ಸಾಧ್ಯವಾಗಬೇಕು ! ವಿವರಿಸಿದರಾಗದು, ಅನುಭವಕ್ಕೆ ಬಂದು ಆನಂದ ಹೊಂದಬೇಕು. ಅದು ಮಾತ್ರ ಅಕಾಯ !

ಕಾಯ ಹೊಂದಿದ ತನಗೆ ಅಕಾಯನಾಗುವ ಬಯಕೆಯಾಗಬೇಕು. ಅಕಾಯ ಹೊಂದಿದ ಗುರುವಿನ ದರ್ಶನಕ್ಕಾಗಿ ತವಕ ಉಂಟಾಗಬೇಕು. ಆ ತವಕದ ವಾಸನೆ ಹಿಡಿದು ಗುರು ಬಯಕೆ ಹೊಂದಿದ ಶಿಷ್ಯನ ಕಾಯವಿದ್ದಲ್ಲಿಗೆ ಬರುತ್ತಾನೆ. ಇಲ್ಲ ಗುರುವಿದ್ದಲ್ಲಿಗೆ ಶಿಷ್ಯನ ಕಾಯ ಹೋಗುತ್ತದೆ. ಇವೆರಡೂ ಒಂದೇ ಆಗಿ ಪರಿಣಮಿಸುತ್ತದೆ. ಹೂವಿನ ವಾಸನೆ ದುಂಬಿಯನ್ನು ಸೆಳೆದು ತಂದಂತೆ; ಇಲ್ಲ ದುಂಬಿಯಿದ್ದಲ್ಲಿಗೆ ಹೂವಿನ ವಾಸನೆ ಪಸರಿಸಿದಂತೆ ! ಒಂದು ಮತ್ತೊಂದರ ಸಮಾಗಮವಾಗಿ ಹೂ ತನ್ನನ್ನು ತಾನು ಮರೆತು ಮಕರಂದ ವಾಗುತ್ತದೆ. ದುಂಬಿ ತನ್ನನ್ನು ತಾನು ಮರೆತು ರುಚಿಯಾಗಿ ಬೆರೆಯುತ್ತದೆ.

ಅಕಾಯವಾಗಿ ಹೇಳುವ ಗುರುವಿನ ಈ ಸೂತ್ರ ಕಾಯದ ಅನುಭವಕ್ಕೆ ಬಂದರೆ ಸಾಕು ಕಾಯ ಅಕಾಯವಾಗುತ್ತದೆ. ಜೀವ ನಿರ್ಜೀವವಾಗುತ್ತದೆ. ಭಾವ ನಿರ್ಭಾವವಾಗುತ್ತದೆ. ಮನ ಘನದ ನೆನಹಾಗಿ ಪರಿವರ್ತನೆಯಾಗುತ್ತದೆ.

**ಎನ್ನ ಮನದೊಳಗೆ ಘನ ನೆನಹಾಯಿತ್ತು. ಎನ್ನ ತಲೆ ಮೊಲೆಗಳ ನೋಡಿ ಸಲಹಿದಿರಾಗಿ ಚೆನ್ನಮಲ್ಲಿಕಾರ್ಜುನಯ್ಯನ ಧರ್ಮದವಳಾನು:**

ಕಾಯ ಎನ್ನುವುದು ಹೆಣ್ಣೂ ಅಲ್ಲ ಗಂಡೂ ಅಲ್ಲ . ಜೀವ ಎನ್ನುವುದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಭಾವವೆಂಬುದು ಕೂಡಾ ಹೆಣ್ಣೂ ಅಲ್ಲ ಗಂಡೂ ಅಲ್ಲ. ಮನ ಎಂಬುದು ಹೆಣ್ಣು, ಘನ (ಅರಿವು) ಎಂಬುದು ಗಂಡು !

ಕಾಯದಲ್ಲಿ ಮನ ಮನೆ ಮಾಡಿರುವುದರಿಂದ ಕಾಯ ಅಕಾಯವಾಗಲು ಅರಿಯದು. ಜೀವದಲ್ಲಿ ಮನ ಮನೆ ಮಾಡಿರುವುದರಿಂದ ಜೀವ ನಿರ್ಜೀವವಾಗಲರಿಯದು. ಭಾವದೊಳಗೆ ಮನ ಮನೆ ಮಾಡಿರುವುದರಿಂದ ಭಾವ ನಿರ್ಭಾವವಾಗಲರಿಯದು.

ಮನ ಕಾಯವನ್ನು, ಕಾಯದ ಜೀವವನ್ನು , ಕಾಯದ ಭಾವವನ್ನು ದುರ್ಬಳಕೆ ಮಾಡಲೆಳಿಸುತ್ತದೆ. ಕಾಯದ ಅರಿವೆಂಬ ಗುರು ಕಾಯವನ್ನು ಅಕಾಯ ಮಾಡುತ್ತಾನೆ. ಜೀವವನ್ನು ನಿರ್ಜೀವ ಮಾಡುತ್ತಾನೆ. ಭಾವವನ್ನು ನಿರ್ಭಾವ ಮಾಡಿ ಚಿವುಟಿ ಹಾಕಿ ತನ್ನಂತೆ ಮಾಡಿಕೊಳ್ಳುತ್ತಾನೆ. ಆದರೆ ಕಾಯದ ಮನಕ್ಕೆ ಕಾಯದಲ್ಲಿಯೇ ವಾಸವಾದ ಅರಿವೆಂಬ ಗುರುರಾಯನ ಪರಿಚಯ ವಾಗಬೇಕು. ಶ್ರೀಗುರು ಮಾತ್ರ ಪರಿಚಯವನ್ನು ಮಾಡಿಸಬಲ್ಲ. ಕಾಯದ ಮನವೆಂಬ ಶಿಷ್ಯನಿಗೆ ಕಾಯದ ಅರಿವಿನ ಪರಿಚಯವನ್ನು ಮಾಡಿಸಿ ತಾನು ಅಕಾಯವಾಗಿ ಆ ಆನಂದದಲ್ಲಿ ಉಳಿಯುತ್ತಾನೆ. ಪುನಃ ಕಾಯಕ್ಕೆ ಗುರುವಾಗುವುದಿಲ್ಲ.

ಕಾಯದ ಅರಿವೆಂಬ ಗಂಡನು ಹರಿದಾಡುವ ಮನವೆಂಬ ಹೆಣ್ಣಿನ ತಲೆ ಮೊಲೆಗಳನ್ನು ಸವರಿ ತನ್ನ ತೆಕ್ಕೆಗೆ ಸೆಳೆದುಕೊಂಡು ಕಾಯವನ್ನು ಅಕಾಯ ಮಾಡಿ ಅನುಭವಿಸುತ್ತಾನೆ. ಜೀವವನ್ನು ನಿರ್ಜೀವ ಮಾಡಿ ಸುಖಿಸುತ್ತಾನೆ. ಭಾವವನ್ನು ನಿರ್ಭಾವ ಮಾಡಿ ಬಿಗಿದಪ್ಪಿಕೊಳ್ಳುತ್ತಾನೆ.

ಆತನ ಸೆಳೆತಕ್ಕೆ ಮಾರು ಹೋದ ಮನ ಸುಖದ ಸುಖಿಯಾಗಿ ಆ ಘನ ಸುಖದ ನೆನಹಾಗಿ ಪರಿಣಮಿಸುತ್ತದೆ. ಸದಾ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಧರ್ಮದವಳಾಗಿ ಉಳಿಯುತ್ತದೆ.

ಕಾಯ ಅರಿವಿನ ಕಾಯವಾಗಿ ಅಕಾಯವಾಗುತ್ತದೆ. ಇದು ತನಗೆ ತಾನೇ ಕೊಟ್ಟುಕೊಂಡ ಸರ್ಟಿಫಿಕೆಟ್. ಕಾಯದ ಜೀವ ನಿರ್ಜೀವವಾಗುತ್ತದೆ, ಕಾಯದ ಭಾವ ನಿರ್ಭಾವವಾಗುತ್ತದೆ. ಕಾಯದ ಮನ ಘನಮನವಾಗುತ್ತದೆ. ಈ ಕಾಯ ನೋಡಿದ ನೋಟವೆಲ್ಲ ಸತ್ಯ. ಈ ಕಾಯ ಕೇಳಿದ ಶಬ್ದವೆಲ್ಲ ಶಿವಮಯ. ಈ ಕಾಯ ರುಚಿಸಿದ ರುಚಿಯೆಲ್ಲ ಸುಂದರ !

□

---

**ಅರಿವಿನ ಪರಿಮಳ**

- □ ನಿರ್ವಾಣ ಹೊಂದಿದ ಕಾಯ ಅಕಾಯವಾಗುತ್ತದೆ. ನೋಡುವ ಕಾಯಗಳೆಲ್ಲ ಅಕಾಯವಾಗಿ ಕಾಣುತ್ತವೆ. ಇದೇ ನಿರ್ವಾಣ ಹೊಂದಿದ ಲಕ್ಷಣ! ಬುದ್ಧ, ಶರಣ, ದಾಸನಾದ ಲಕ್ಷಣ! ನುಡಿದರಾಗದು, ವಿವರಿಸಲು ಸಾಧ್ಯವಾಗಬೇಕು ! ವಿವರಿಸಿದರಾಗದು, ಅನುಭಾವಕ್ಕೆ ಬಂದು ಆನಂದ ಹೊಂದಬೇಕು.
  ಅದು ಮಾತ್ರ ಅಕಾಯ !
- □ ಕಾಯ ಹೊಂದಿದ ತನಗೆ ಅಕಾಯನಾಗುವ ಬಯಕೆಯಾಗಬೇಕು. ಅಕಾಯ ಹೊಂದಿದ ಗುರುವಿನ ದರ್ಶನಕ್ಕಾಗಿ ತವಕ ಉಂಟಾಗಬೇಕು. ಆ ತವಕದ ವಾಸನೆ ಹಿಡಿದು ಗುರು ಬಯಕೆ ಹೊಂದಿದ ಶಿಷ್ಯನ ಕಾಯವಿದ್ದಲ್ಲಿಗೆ ಬರುತ್ತಾನೆ. ಇಲ್ಲ ಗುರುವಿದ್ದಲ್ಲಿಗೆ ಶಿಷ್ಯನ ಕಾಯ ಹೋಗುತ್ತದೆ. ಇವೆರಡೂ ಒಂದೇ ಆಗಿ ಪರಿಣಮಿಸುತ್ತದೆ.
- □ ಹೂವಿನ ವಾಸನೆ ದುಂಬಿಯನ್ನು ಸೆಳೆದು ತಂದಂತೆ; ಇಲ್ಲ ದುಂಬಿಯಿದ್ದಲ್ಲಿಗೆ ಹೂವಿನ ವಾಸನೆ ಪಸರಿಸಿದಂತೆ ! ಒಂದು ಮತ್ತೊಂದರ ಸಮಾಗಮವಾಗಿ ಹೂ ತನ್ನನ್ನು ತಾನು ಮರೆತು ಮಕರಂದ ವಾಗುತ್ತದೆ. ದುಂಬಿ ತನ್ನನ್ನು ತಾನು ಮರೆತು ರುಚಿಯಾಗಿ ಬೆರೆಯುತ್ತದೆ.
- □ ಅಕಾಯವಾಗಿ ಹೇಳುವ ಗುರುವಿನ ಈ ಸೂತ್ರ ಕಾಯದ ಅನುಭವಕ್ಕೆ ಬಂದರೆ ಸಾಕು ಕಾಯ ಅಕಾಯವಾಗುತ್ತದೆ. ಜೀವ ನಿರ್ಜೀವವಾಗುತ್ತದೆ. ಭಾವ ನಿರ್ಭಾವವಾಗುತ್ತದೆ. ಮನ ಘನದ ನೆನಹಾಗಿ ಪರಿವರ್ತನೆಯಾಗುತ್ತದೆ.

# ಶರಣ ಸೋಲಿಲ್ಲದ ಸರದಾರ

**ಕುಲಗಿರಿಯ ಶಿಖರದ ಮೇಲೆ ಬಾಳೆ ಬೆಳೆವುದಯ್ಯಾ ಎಂದಡೆ**
**ಬಾಳೆ ಬೆಳೆವುದಯ್ಯಾ ಎನಬೇಕು.**
**ಓರೆಗಲ್ಲನುಗ್ಗುಗುಟ್ಟಿ ಮೆಲಬಹುದಯ್ಯಾ ಎಂದಡೆ**
**ಅದು ಅತ್ಯಂತ ಮೃದು ಮೆಲಬಹುದಯ್ಯಾ ಎನಬೇಕು.**
**ಸಿಕ್ಕದ ಠಾವಿನಲ್ಲಿ ಉಚಿತವ ನುಡಿವುದೆ ಕಾರಣ**
**ಚೆನ್ನಮಲ್ಲಿಕಾರ್ಜುನಯ್ಯ ಮರ್ತ್ಯಕ್ಕೆ ಬಂದುದಕ್ಕಿದೆ ಗೆಲವು.**

ತನ್ನಂತೆ ಇರುವ ಒಬ್ಬ ಮನುಷ್ಯ ರಾಜನಾಗಿ ಅಧಿಕಾರ ಚಲಾಯಿಸುತ್ತಾನೆ. ತನ್ನಂತೆ ಇರುವ ಮತ್ತೊಬ್ಬ ಆ ರಾಜನಿಗೆ ದಾಸನಾಗುತ್ತಾನೆ. ಇದು ಮರ್ತ್ಯ. ರಾಜ ಹೇಳಿದ್ದು ದಾಸ ಪಾಲಿಸಲೇಬೇಕು. ಇದು ರಾಜನ ಅಧಿಕಾರ; ದಾಸನ ಕರ್ತವ್ಯ.

ತನುಗಳಲ್ಲಿರುವ ಕಣ್ಣು ಕಿವಿ ಮೂಗು ಚರ್ಮ ನಾಲಿಗೆ ಒಂದೇ. ಅರಿವು ಕೂಡಾ ಒಂದೇ. ಆದರೆ ಆವರಿಸಿಕೊಂಡ ಮನ ಒಂದು ತನುವನ್ನು ರಾಜನನ್ನಾಗಿ ಮಾಡಿದರೆ ಮತ್ತೊಂದು ತನುವನ್ನು ದಾಸನನ್ನಾಗಿ ಮಾಡಿದೆ. ದಾಸನ ದಾಸ್ಯತನ, ರಾಜನ ದರ್ಪ ಅಧಿಕವಾಗಿ ಅರಿವು ಎರಡೂ ತನುಗಳಲ್ಲಿ ಬಳಕೆಯಾಗದೆ ಹಾಗೇ ಉಳಿದಿದೆ.

ದಾಸ ರಾಜನಾಗಬಹುದು, ರಾಜ ದಾಸನಾಗಬಹುದು. ಮನ ಒಂದು ತನುವಿಗೆ ಹಲವಾರು ವೇಷಗಳನ್ನು ಹಾಕಿ ಸುಖಪಡುತ್ತದೆ. ಮನ ದಾಸನ ವೇಷದಲ್ಲಿ ಸುಖಪಡುತ್ತದೆ; ಹಲವಾರು ದಿನಗಳವರೆಗೆ ಅಲ್ಲಿ ನಿಲ್ಲುವುದಿಲ್ಲ. ರಾಜನ ವರಸೆಗಳನ್ನು ಕಲಿತುಕೊಂಡು ರಾಜನಾಗುತ್ತದೆ.

ಮನ ಧರಿಸುವ ಸಕಲ ವೇಷಗಳನ್ನು ಅರಿವು ಸಾಕ್ಷಿಯಂತೆ ನೋಡುತ್ತದೆ. ಖಂಡಿಸುತ್ತದೆ.

ಶರಣ ಯಾವ ವೇಷವನ್ನು ಧರಿಸುವುದಿಲ್ಲ. ಆತನದು ಅರಿವಿನ ವೇಷ. ಮನ ಅರಿವಿನ ಸುಖ ಉಂಡು ತನುವಿನ ಆ ಅರಿವಿಗೆ ಶರಣು ಹೋಗಿ ಶರಣನಾಗಿದೆ.

ಶಿಖರದ ಮೇಲೆ ಬಾಳೆ ಬೆಳೆಯುವುದು ಎಂದರೆ ಶರಣ ಬೆಳೆವುದಯ್ಯಾ ಎನ್ನುತ್ತಾನೆ. ಕಲ್ಲು ಕುಟ್ಟಿ (ರಂಗೋಲಿ) ಪುಡಿ ಮೆಲಬಹುದಯ್ಯಾ ಎಂದರೆ ಶರಣ ಅದು ಅತ್ಯಂತ ಮೃದು ಮೆಲಬಹುದು ಎನ್ನುತ್ತಾನೆ.

ಜಲಬಿಂದು ಬಾಳೆ ಸಸಿಗೆ ಹರಿದರೆ ಗಿರಿಯೇನು ಮೊರಡಿಯೇನು ಸಿಹಿ ಫಲವನ್ನೇ ಕೊಡುತ್ತದೆ. ಜಲಬಿಂದು ಬಳಕೆಯಾಗದೆ ಗಟ್ಟಿಯಾದರೆ ಕಲ್ಲಾಗುತ್ತದೆ. ಅದೇ ಜಲಬಿಂದು ಚಿಪ್ಪಿನಲ್ಲಿ ಬಿದ್ದು ಮುತ್ತಾಗುತ್ತದೆ. ಮಾಣಿಕ್ಯ ಸ್ಫಟಿಕವಾಗುತ್ತದೆ. ಆ ಜಲಬಿಂದುವೇ ಮಣ್ಣಾಗಿ ಮಣ್ಣಿನ ಗರ್ಭದಲ್ಲಿ ಚಿನ್ನವಾಗಿ ಮೂಡುತ್ತದೆ. ಹಾವಿನ ಗರ್ಭದಲ್ಲಿ ಬಿದ್ದು ವಿಷವಾಗುತ್ತದೆ.

ಆ ಜಲಬಿಂದುವೇ ಗರ್ಭ ಪ್ರವೇಶಿಸಿ ತನುವಾಗಿ ತನುವಿನ ಕಣಕಣದಲ್ಲಿ ಅರಿವಾಗಿ

ಮರ್ತ್ಯಕ್ಕೆ ಬಂದಿದೆ. ಅರಿವನ್ನು ತಿಳಿದ ಮನ, ಅರಿವಿಗೆ ಶರಣು ಹೋಗಿ ಅರಿವಿನ ಸಿಹಿ ಫಲವನ್ನೇ ಉಂಡು ಸ್ವರ್ಗ ಮರ್ತ್ಯಗಳನ್ನು ಗೆದ್ದು ಸುಖದ ಸುಖಿಯಾಗಿದೆ.

ಅರಿವು ಬಳಕೆ ಮಾಡಿದ ಮನದ ತನು ಸದಾಸುಖಿ. ಮರೆವು ಬಳಕೆ ಮಾಡಿದ ಮನದ ತನು ರಾಜ, ಭಿಕ್ಷುಕ, ದಾಸ, ಸೇವಕ, ನೌಕರ, ಭೂ ಒಡೆಯ ಮಂತ್ರಿ ಶಾಸಕ ಶ್ರೀಮಂತ ಬಡವ ಯಾವ ವೇಷದಲ್ಲಿದ್ದರೂ ಗೆಲುವಿಲ್ಲ ಅದಕ್ಕೆ. ಯಾವ ವೇಷದಲ್ಲಿದ್ದರೂ ಸೋಲೆಂಬುದೇ ಇಲ್ಲ ಶರಣನಿಗೆ! ಆತ ಸೋಲಿಲ್ಲದ ಸರದಾರ!

□

---

**ಅರಿವಿನ ಪರಿಮಳ**

- □ ತನ್ನಂತೆ ಇರುವ ಒಬ್ಬ ಮನುಷ್ಯ ರಾಜನಾಗಿ ಅಧಿಕಾರ ಚಲಾಯಿಸುತ್ತಾನೆ. ತನ್ನಂತೆ ಇರುವ ಮತ್ತೊಬ್ಬ ಆ ರಾಜನಿಗೆ ದಾಸನಾಗುತ್ತಾನೆ. ಇದು ಮರ್ತ್ಯ. ರಾಜ ಹೇಳಿದ್ದು ದಾಸ ಪಾಲಿಸಲೇಬೇಕು. ಇದು ರಾಜನ ಅಧಿಕಾರ; ದಾಸನ ಕರ್ತವ್ಯ.
- □ ದಾಸ ರಾಜನಾಗಬಹುದು, ರಾಜ ದಾಸನಾಗಬಹುದು. ಮನ ಒಂದು ತನುವಿಗೆ ಹಲವಾರು ವೇಷಗಳನ್ನು ಹಾಕಿ ಸುಖಪಡುತ್ತದೆ. ಮನ ದಾಸನ ವೇಷದಲ್ಲಿ ಸುಖಪಡುತ್ತದೆ; ಹಲವಾರು ದಿನಗಳವರೆಗೆ ಅಲ್ಲಿ ನಿಲ್ಲುವುದಿಲ್ಲ. ರಾಜನ ವರಸೆಗಳನ್ನು ಕಲಿತುಕೊಂಡು ರಾಜನಾಗುತ್ತದೆ.
- □ ಶರಣ ಯಾವ ವೇಷವನ್ನು ಧರಿಸುವುದಿಲ್ಲ. ಆತನದು ಅರಿವಿನ ವೇಷ. ಮನ ಅರಿವಿನ ಸುಖ ಉಂಡು ತನುವಿನ ಆ ಅರಿವಿಗೆ ಶರಣು ಹೋಗಿ ಶರಣನಾಗುತ್ತ.
- □ ಜಲಬಿಂದು ಬಾಳೆ ಸಸಿಗೆ ಹರಿದರೆ ಗಿರಿಯೇನು ಮೊರಡಿಯೇನು ಸಿಹಿ ಫಲವನ್ನೇ ಕೊಡುತ್ತದೆ. ಜಲಬಿಂದು ಬಳಕೆಯಾಗದೆ ಗಟ್ಟಿಯಾದರೆ ಕಲ್ಲಾಗುತ್ತದೆ. ಅದೇ ಜಲಬಿಂದು ಚಿಪ್ಪಿನಲ್ಲಿ ಬಿದ್ದು ಮುತ್ತಾಗುತ್ತದೆ. ಮಾಣಿಕ್ಯ ಸ್ಫಟಿಕವಾಗುತ್ತದೆ. ಆ ಜಲಬಿಂದುವೇ ಮಣ್ಣಾಗಿ ಮಣ್ಣಿನ ಗರ್ಭದಲ್ಲಿ ಚಿನ್ನವಾಗಿ ಮೂಡುತ್ತದೆ. ಹಾವಿನ ಗರ್ಭದಲ್ಲಿ ಬಿದ್ದು ವಿಷವಾಗುತ್ತದೆ.
- □ ಆ ಜಲಬಿಂದುವೇ ಗರ್ಭ ಪ್ರವೇಶಿಸಿ ತನುವಾಗಿ ತನುವಿನ ಕಣಕಣದಲ್ಲಿ ಅರಿವಾಗಿ ಮರ್ತ್ಯಕ್ಕೆ ಬಂದಿದೆ. ಅರಿವನ್ನು ತಿಳಿದ ಮನ, ಅರಿವಿಗೆ ಶರಣು ಹೋಗಿ ಅರಿವಿನ ಸಿಹಿ ಫಲವನ್ನೇ ಉಂಡು ಸ್ವರ್ಗ ಮರ್ತ್ಯಗಳನ್ನು ಗೆದ್ದು ಸುಖದ ಸುಖಿಯಾಗಿದೆ.
- □ ಅರಿವು ಬಳಕೆ ಮಾಡಿದ ಮನದ ತನು ಸದಾಸುಖಿ. ಮರೆವು ಬಳಕೆ ಮಾಡಿದ ಮನದ ತನು ರಾಜ, ಭಿಕ್ಷುಕ, ದಾಸ, ಸೇವಕ, ನೌಕರ, ಭೂ ಒಡೆಯ ಮಂತ್ರಿ ಶಾಸಕ ಶ್ರೀಮಂತ ಬಡವ ಯಾವ ವೇಷದಲ್ಲಿದ್ದರೂ ಗೆಲುವಿಲ್ಲ ಅದಕ್ಕೆ. ಯಾವ ವೇಷದಲ್ಲಿದ್ದರೂ ಸೋಲೆಂಬುದೇ ಇಲ್ಲ ಶರಣನಿಗೆ! ಆತ ಸೋಲಿಲ್ಲದ ಸರದಾರ!

# ತನು ಮದ ಕಳೆದುಕೊಳ್ಳುವ ಅಕ್ಕನ ಸೂತ್ರ

**ಕುಲಮದವೆಂಬುದಿಲ್ಲ ಅಯೋನಿ ಸಂಭವನಾಗಿ**
**ಛಲಮದವೆಂಬುದಿಲ್ಲ ಪ್ರತಿದೋರನಾಗಿ**
**ಧನಮದವೆಂಬುದಿಲ್ಲ ತ್ರಿಕರಣ ಶುದ್ಧನಾಗಿ**
**ವಿದ್ಯಾಮದವೆಂಬುದಿಲ್ಲ ಅಸಾಧ್ಯವ ಸಾಧಿಸಿದನಾಗಿ**
**ಮತ್ತಾವ ಮದವೆಂಬುದಿಲ್ಲ ನೀನವಗ್ರಹಿಸಿದ ಕಾರಣ**
**ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣನು ಅಕಾಯ ಚರಿತ್ರನಾಗಿ.**

ಕುಲಮದ, ಛಲಮದ, ಧನಮದ, ರೂಪಮದ, ಯೌವ್ವನ ಮದ, ವಿದ್ಯಾ ಮದ, ರಾಜ್ಯಮದ ಮತ್ತು ತಪಸ್ಸಿನ ಮದ ಇವು ಬಹಿರಂಗದ ಅಷ್ಟಮದಗಳು.

ಸಂಸ್ಥಿತಾ, ತೃಣೀಕೃತಾ, ವರ್ತಿನಿ, ಕ್ರೋದಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಇವು ಅಂತರಂಗದ ಅಷ್ಟಮದಗಳು.

**ಸಂಸ್ಥಿತಾ:** ದೇಹ ತಾನೆಂಬ ಭಾವದಮದ. **ತೃಣೀಕೃತ:** ತಿರಸ್ಕಾರ ಭಾವದ ಮದ. **ವರ್ತಿನಿ:** ಪರಧನ, ಪರಸತಿ ಮುಂತಾದ ಮಹಾಪಾತಕಗಳಲ್ಲಿ ಸುಖಿಸುವ ದುರ್ವರ್ತನೆ. **ಕ್ರೋದಿನಿ:** ಕ್ರೋಧಗೊಳ್ಳುವಿಕೆ. **ಮೋಹಿನಿ:** ಮೋಹಗೊಳ್ಳುವಿಕೆ. **ಅತಿಚಾರಿಣಿ:** ಅತಿರೇಕದ ವರ್ತನೆ. **ಗಂಧಚಾರಿಣಿ:** ಮಾನಸಿಕ ದುಷ್ಟ ವಾಸನೆಗಳಿಗೆ ಅಧೀನವಾಗಿ ವ್ಯಭಿಚಾರದಲ್ಲಿ ತೊಡಗುವುದು. **ವಾಸಿನಿ:** ಮಲತ್ರಯಗಳಿಗೆ ವಶವಾಗಿ ವರ್ತಿಸುವುದು.

ತನು ಗರ್ಭದಿಂದ ಹೊರಬಂದರೂ, ಗರ್ಭ ಧರಿಸಿದ ತನು, ಹೊರಬಂದ ತನು ಹಾಗೂ ಇತರ ತನುಗಳು ಒಂದೇ ತೆರನಾಗಿದ್ದರೂ ಜಾತಿ, ಮತ, ಪಂಥ, ಹೆಣ್ಣು, ಗಂಡು ಎಂದು ವಿಂಗಡನೆಗೆ ಒಳಗಾಗಿ ಮನ ತನುವನ್ನು ಮದೋನ್ಮತ್ತನಾಗಿ ಕಾಡುತ್ತದೆ. ಇತರ ತನುಗಳು ಆ ತನುವನ್ನು ನೋಡಿಯೇ ಮದೋನ್ಮತ್ತ ತನುವೆಂದು ಗುರುತಿಸುತ್ತದೆ. ತನುವಿನ ಮದಕ್ಕೆ ಕಾರಣವಾದ ಮನ ಕಾಣುವುದಿಲ್ಲ. ಮನ ತನುವನ್ನು ಮೇಲೆ ಹೇಳಿದ ಎಂಟು ರೀತಿಗಳ ಮದದಿಂದ ಮದೋನ್ಮತ್ತನನ್ನಾಗಿ ಮಾಡುತ್ತದೆ.

ತನು ಗರ್ಭದಿಂದ ಬಂದರೂ ಅರಿವಿನಿಂದ ನೋಡಿದಾಗ ಅಕ್ಕ ಹೇಳುವಂತೆ ಅಯೋನಿ ಸಂಭವನಾಗಿ ಕಾಣುತ್ತದೆ. ಜಲಬಿಂದು ತನುವಿನ ಗರ್ಭದಲ್ಲಿ ಪ್ರವೇಶಿಸಿ ಆ ಜಲವೇ ರಕ್ತ, ಮಾಂಸ, ಮೂಳೆ, ಮಜ್ಜೆ, ಮೇಧಸ್ಸು ಆಗಿ ಪರಿವರ್ತನೆ ಹೊಂದಿ ಆ ಜಲವೇ ಚರ್ಮದ ಕವಚವಾಗಿ ಗರ್ಭದಲ್ಲಿ ತನು ರೂಪವಾಗಿ ನಿರ್ಮಾಣವಾಗುತ್ತದೆ. ತಾಯಿ ಜಲ ಬಿಂದುವನ್ನು ಗರ್ಭದ ಫ್ರಿಜ್‌ನಲ್ಲಿ ಇಟ್ಟುಕೊಂಡು ಅವಧಿ ಪೂರ್ತಿಯಾದ ನಂತರ ತನುವಿನ ರೂಪದಲ್ಲಿ ಹೊರ ತೆಗೆಯುತ್ತಾಳೆ. ಜಲಬಿಂದು ಸ್ವೀಕರಿಸಿ ಶಿಶುವಿಗೆ ತಾಯಿ ಗರ್ಭದಾನ ಮಾಡಿದಳೇ ಹೊರತು ಶಿಶುವನ್ನು ತಾನೇ ತಯಾರಿಸಲಿಲ್ಲ. ಅಂದ ಮೇಲೆ ತನುವಿನಿಂದ ಹೊರಬರುವ ಪ್ರತಿ ಶಿಶುಗಳು ಕೂಡಾ ಅಯೋನಿಜಗಳೇ.

ಒಂದು ತನು ಮತ್ತೊಂದು ತನುವಿನಂತೆ ಇದೆ. ಆ ತನುವಿನ ಮೇಲೆ ಮತ್ತೊಂದು ತನು ಮದೋನ್ಮತ್ತದಿಂದ ವರ್ತಿಸುತ್ತದೆ. ತನುವಿನ ಗರ್ಭ ಒಂದೇ; ಗರ್ಭದಲ್ಲಿ ಹೋಗುವ ಬಿಂದುವೊಂದೇ; ಗರ್ಭದಿಂದ ಹೊರ ಬರುವ ಶಿಶು ಒಂದೇ ಆದರೂ ಕೂಡ ಒಂದು ತನುವನ್ನು ನೋಡಿ ಮತ್ತೊಂದು ತನು ಕುಲಮದದಿಂದ ಬೀಗುತ್ತದೆ. ಆ ಮದಕ್ಕೆ ಮತ್ತೊಂದು ತನು ಬಾಗುತ್ತದೆ. ಈ ವ್ಯತ್ಯಾಸ ಅರಿಯುವ ಅರಿವು ಕೂಡ ತನುವಿನ ಗರ್ಭದಲ್ಲಿ ಇದ್ದು ಹೊರ ಆವರಣದ ಮನ ; ಮದ ಹೆಸರಿನಿಂದ ಎಲ್ಲಾ ತನುಗಳಲ್ಲಿ ಕೆಲಸ ಮಾಡುತ್ತದೆ. ಮದದಿಂದ ಬೀಗುವ ತನುವಾದರೇನು, ಆ ಮದಕ್ಕೆ ಬಾಗುವ ತನುವಾದರೇನು ? ಇವೆರಡೂ ಅಜ್ಞಾನದ ತನುಗಳೇ ! ಅರಿತ ತನು ಮಾತ್ರ ಅಯೋನಿಜನಾಗುತ್ತದೆ. ಅರಿಯದ ತನು ಅಜ್ಞಾನದ ಮದದಿಂದ ಅರಿವು ಅರಿಯದೇ ವ್ಯರ್ಥವಾಗಿ ಬೀಗಿ ಬಾಗಿ ಸಾಯುತ್ತದೆ.

ಹೀಗೆಯೇ ತನುವಿನ ಮನ ಛಲ ಮದದಿಂದ, ಧನ ಮದದಿಂದ, ವಿದ್ಯಾ ಮದದಿಂದ ತನುವಿನ ಆಶ್ರಯ ಪಡೆದು ತನುವನ್ನೇ ಕಾಡುತ್ತದೆ. ಕಾಡುವುದಕ್ಕೆ ಒಂದು ತನು, ಕಾಡಾಟಕ್ಕೆ ಗುರಿಯಾಗುವುದಕ್ಕೆ ಒಂದು ತನು. ಇವೆರಡೂ ತನುಗಳು ತನ್ನ ತಾನು ತಿಳಿಯದೇ ವ್ಯರ್ಥ ಅವಸಾನ ಹೊಂದುತ್ತವೆ.

ತನುವಿನ ಅರಿವನ್ನು ನೋಡುವ ಅದೃಷ್ಟ ತನುವಿನ ಮನಕ್ಕೆ ಬಂದಾಗ ತನ್ನಷ್ಟಕ್ಕೆ ತಾನೇ ಸಾಧ್ಯವಾಗದ ಅಸಾಧ್ಯವನ್ನು ಸಾಧಿಸುತ್ತದೆ. ಮತ್ತೊಂದು ತನುವನ್ನು ನೋಡಿ ಮದ್ದಾನೆಯಂತೆ ಕೊಬ್ಬುವ ಮನ ತನುವಿನ ಅರಿವನ್ನು ನೋಡಿದಾಗ, ಆ ಅರಿವಿನೊಂದಿಗೆ ಮನ ಬೆರೆತು ಘನಮನವಾಗುತ್ತದೆ. ಆಗ ತನುವನ್ನು ನೋಡಿದಾಗ ಆ ತನು ತನ್ನ ತನುವಿನಂತೆ ಕಾಣುತ್ತದೆ. ಇಂತಹ ತನುವಿಗೆ ಕುಲಮದ,ಛಲಮದ, ಧನಮದ, ವಿದ್ಯಾ ಮದವೆಂಬುದು ನಿರ್ನಾಮವಾಗಿ ಸಾಧ್ಯವಾಗದ ಅಸಾಧ್ಯವನ್ನು ಸಾಧಿಸುತ್ತದೆ.

ಅರಿವು ತನುವನ್ನು ಅವಗ್ರಹಿಸಿದ ಕಾರಣ ಮತ್ತಾವ ಮದವಿಲ್ಲದೇ ಅರಿವಿನ ತನುವಾಗಿ ಚೆನ್ನಮಲ್ಲಿಕಾರ್ಜುನಯ್ಯ ಎಂಬ ಅರಿವೇ ತಾನಾಗುತ್ತದೆ. ನೋಡುವ ಕಾಯಗಳೆಲ್ಲ ಅಕಾಯವಾಗಿ ಕಾಣುತ್ತವೆ. ಮನ ಅರಿವಿನಲ್ಲಿ ಪ್ರವೇಶ ಮಾಡಿ ಆ ಅರಿವಿಗೆ ಶರಣು ಹೋಗಿ ಶರಣನಾಗುತ್ತದೆ.

□

**ಅರಿವಿನ ಪರಿಮಳ**

- □ ತಾಯಿ ಜಲ ಬಿಂದುವನ್ನು ಗರ್ಭದ ಫ್ರಿಜ್‌ನಲ್ಲಿ ಇಟ್ಟುಕೊಂಡು ಅವಧಿ ಪೂರ್ತಿಯಾದ ನಂತರ ತನುವಿನ ರೂಪದಲ್ಲಿ ಹೊರ ತೆಗೆಯುತ್ತಾಳೆ. ಜಲಬಿಂದು ಸ್ವೀಕರಿಸಿ ಶಿಶುವಿಗೆ ತಾಯಿ ಗರ್ಭದಾನ ಮಾಡಿದಳೇ ಹೊರತು ಶಿಶುವನ್ನು ತಾನೇ ತಯಾರಿಸಲಿಲ್ಲ. ಅಂದ ಮೇಲೆ ತನುವಿನಿಂದ ಹೊರಬರುವ ಪ್ರತಿ ಶಿಶುಗಳು ಕೂಡಾ ಅಯೋನಿಜಗಳೇ.
- □ ಮದದಿಂದ ಬೀಗುವ ತನುವಾದರೇನು, ಆ ಮದಕ್ಕೆ ಬಾಗುವ ತನುವಾದರೇನು ? ಇವೆರಡೂ ಅಜ್ಞಾನದ ತನುಗಳೇ ! ಅರಿತ ತನು ಮಾತ್ರ ಅಯೋನಿಜನಾಗುತ್ತದೆ. ಅರಿಯದ ತನು ಅಜ್ಞಾನದ ಮದದಿಂದ ಅರಿವು ಅರಿಯದೇ ವ್ಯರ್ಥವಾಗಿ ಬೀಗಿ ಸಾಯುತ್ತದೆ.

# ಬೆಳಕಿನಿಂದಲೆ ಕತ್ತಲೆ ಸೃಷ್ಟಿ  ಬೆಳಕಿನಿಂದಲೆ ಕತ್ತಲೆ ನಷ್ಟ

ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ.
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ.
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ.
ಜ್ಞಾನಿಯೊಡನಾಡಿದ ಅಜ್ಞಾನ ಕೆಟ್ಟ ಕೇಡ ನೋಡಿರಯ್ಯಾ.
ಎಲೆ ಪರಶಿವ ಮೂರ್ತಿ ಹರನೆ, ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿ ಭವಂಗಳು ಕೆಟ್ಟ ಕೇಡ ನೋಡಾ, ಚೆನ್ನಮಲ್ಲಿಕಾರ್ಜುನಾ.

ಗಂಗೆಯೊಡನಾಡಿದ ಘಟ್ಟಬೆಟ್ಟಗಳು, ಅಗ್ನಿಯೊಡನಾಡಿದ ಕಾಷ್ಠಂಗಳು, ಜ್ಯೋತಿಯೊಡನೆ ಆಡಿದ ಕತ್ತಲೆ,  ಜ್ಞಾನಿಯೊಡನೆ ಆಡಿದ ಅಜ್ಞಾನ ಕೆಟ್ಟು ಭಸ್ಮವಾಗುತ್ತದೆ.

ಅಕ್ಕಮಹಾದೇವಿ ತನುವಿನ ಅಜ್ಞಾನ ಕೆಡಿಸಿಕೊಳ್ಳುವುದಕ್ಕಾಗಿ ಜಲ, ಅಗ್ನಿ, ಜ್ಯೋತಿಯ ಉದಾಹರಣೆ ಕೊಟ್ಟಿದ್ದಾಳೆ. ಬೃಹದಾಕಾರದ ಘಟ್ಟ ಬೆಟ್ಟಗಳು ಜಲಕ್ಕೆ ತತ್ತರಿಸಿ ಸಾಗರವೆಂಬ ಅನಂತದೆಡೆಗೆ ಹರಿಯುವುದಕ್ಕೆ ಜಲಕ್ಕೆ ದಾರಿ ಮಾಡಿ ಕೊಡುತ್ತವೆ. ಹಾಗೆಯೆ ಉರಿಯುವ ಅಗ್ನಿ ತನ್ನೊಳಗೆ ಬಿದ್ದ ಪದಾರ್ಥಗಳನ್ನೆಲ್ಲ ತನ್ನಂತೆ ಮಾಡಿಕೊಳ್ಳುತ್ತದೆ. ಬೆಳಗುವ ಜ್ಯೋತಿ ಕೂಡ ಕತ್ತಲೆಯನ್ನು ತನ್ನ ಗರ್ಭದಲ್ಲಿ ಹಾಕಿಕೊಂಡು ಬೆಳಕಿಂಗೆ ಬೆಳಕಾಗಿ ಬೆಳಕು ಮಾಡುತ್ತದೆ. ಅಂತೆಯೆ ಮಹಾಜ್ಞಾನಿಗಳ, ಶಿವಶರಣರ ಸಂಗದಲ್ಲಿದ್ದ ಅಜ್ಞಾನಿಗಳ ಅಜ್ಞಾನ  ಕೆಟ್ಟು ಜ್ಞಾನಿಗಳಾಗಿ ಪರಿವರ್ತನೆ ಹೊಂದುತ್ತಾರೆ.

ತನುವಿನ ಜನ್ಮದೊಂದಿಗೆ ಬಂದ ಭವಾಂತರದ ಅಜ್ಞಾನ ತನುವಿನ ಅರಿವಿನೊಂದಿಗೆ ಕೂಡಿ ನಷ್ಟವಾಗುತ್ತದೆ.

ಉದಾಹರಣೆಗೆ ಒಂದು ವರ್ಷದೊಳಗಿನ ಎಂಟ್ಹತ್ತು ಮಕ್ಕಳನ್ನು ಒಂದೆಡೆ ಸೇರಿಸಿ ಅವುಗಳ ಮುಂದೆ ಆಟಿಕೆ ಸಾಮಾನು, ತಿನ್ನುವ ಪದಾರ್ಥಗಳನ್ನು ಇಟ್ಟರೆ ಒಂದು ಮಗು ಯಾರಿಗೂ ಕೊಡದಂತೆ ಎಲ್ಲವನ್ನು ಗುಡ್ಡೆ ಹಾಕಿಕೊಳ್ಳುತ್ತದೆ. ಮತ್ತೊಂದು ಮಗು ಪದಾರ್ಥ ತೆಗೆದುಕೊಂಡು ಮುಂದಡಿ ಇಡುತ್ತದೆ. ಮತ್ತೊಂದು ಮಗು ಪದಾರ್ಥ ತೆಗೆದುಕೊಂಡು ಇನ್ನೊಂದು ಮಗುವಿನ ಬಾಯಿಯಲ್ಲಿ ಇಡುತ್ತದೆ. ಒಂದು ಮಗು ಮತ್ತೊಂದು ಮಗುವನ್ನು ಅಪ್ಪಿಕೊಂಡರೆ ಒಂದು ಮಗು ಮತ್ತೊಂದು ಮಗುವನ್ನು ತಳ್ಳುತ್ತದೆ.  ಹೀಗೆ ಆ ಮಕ್ಕಳಿಗೆ ಯಾರು ಏನೂ ಕಲಿಸದಿದ್ದರೂ ಕೂಡ ಅವು ಗರ್ಭದಲ್ಲಿಯೇ ಅಥವಾ ಜನ್ಮ ಜನ್ಮಗಳಿಂದ ಸಾತ್ವಿಕ , ತಾಮಸ, ರಾಜಸ ಗುಣಗಳನ್ನು ಕಲಿತುಕೊಂಡೆ ಹೊರಬರುತ್ತವೆ. ತಂದೆ ತಾಯಿ ಬಂಧು ಬಳಗದಿಂದ ಮತ್ತಷ್ಟು ಅವಗುಣಗಳನ್ನು ಕಲಿತು ಮಗುವಿನ ಅಜ್ಞಾನದ ಬಲ ಹೆಚ್ಚಾಗುತ್ತದೆ. ಮಗು ದೊಡ್ಡದಾದ ಮೇಲೆ ತನ್ನ ತನುವಿನ ಲ್ಲಿಯೇ ಇದ್ದ ಅರಿವನ್ನು ಸರಳ ತಂತ್ರಗಾರಿಕೆಯಿಂದ, ಗುರುಗಳ ಸಹಾಯದಿಂದ ಕಲಿತು ಪ್ರಯೋಗಕ್ಕೆ ತನ್ನನ್ನು ತಾನು ಒಳಪಡಿಸಬೇಕಾಗುತ್ತದೆ. ಇದು ಕೆಲ ತನುಗಳಿಗೆ ತಿಳಿಯುತ್ತದೆ; ಹಲವಾರು ತನುಗಳಿಗೆ ತಿಳಿಯುವುದೇ ಇಲ್ಲ.

ಸೂರ್ಯ ಹುಟ್ಟಿದಂದಿನಿಂದ ಕತ್ತಲು ಹೇಗಿದೆಯೋ ಹಾಗೆಯೇ ತನು ಹುಟ್ಟಿದಂದಿನಿಂದ ತನುವಿನ ಅಜ್ಞಾನ ಇದೆ. ಸೂರ್ಯನ ಬೆಳಕಿನಿಂದಲೇ ಕತ್ತಲೆ ಸೃಷ್ಟಿಯಾಗಿದ್ದು,  ಆ ಬೆಳಕಿನಿಂದಲೇ

ಕತ್ತಲೆ ಕಳೆಯುತ್ತದೆ. ಹಾಗೆಯೆ ತನುವಿನ ಅಜ್ಞಾನ ಅರಿವಿನಿಂದ ಸೃಷ್ಟಿಯಾಗಿದ್ದು, ಆ ಅರಿವಿನಿಂದಲೇ ಅಜ್ಞಾನ ಕಳೆಯುತ್ತದೆ ಎಂದು ಅಕ್ಕ ಗಂಗೆ, ಅಗ್ನಿ, ಜ್ಯೋತಿಯ ಉದಾಹರಣೆ ನೀಡಿ ತನುವಿನ ಕತ್ತಲು ಕಳೆಯುವ ಬಗೆಯನ್ನು ಓದುಗರಿಗೆ ವಿವರಿಸಿದ್ದಾಳೆ. ಅರಿವಿಗೆ ಚೆನ್ನಮಲ್ಲಿಕಾರ್ಜುನ ಎಂದು ನಾಮಕರಣ ಮಾಡಿ ತನ್ನ ಮನವನ್ನು ಹೆಣ್ಣು ಮಾಡಿ ಆತನಲ್ಲಿ ಕೂಡಿ ಆ ಮಲ್ಲಿಕಾರ್ಜುನನೇ ತಾನಾಗಿದ್ದಾಳೆ. ಅರಿವಿನ ಚಿನ್ನದ ಘಟ್ಟಿಯಾಗಿ ಅರಿವನ್ನೇ ಬಿತ್ತಿ ಅರಿವನ್ನೇ ಬೆಳೆದಿದ್ದಾಳೆ.

□

**ಅರಿವಿನ ಪರಿಮಳ**

- □ ಉರಿಯುವ ಅಗ್ನಿ ತನ್ನೊಳಗೆ ಬಿದ್ದ ಪದಾರ್ಥಗಳನ್ನೆಲ್ಲ ತನ್ನಂತೆ ಮಾಡಿಕೊಳ್ಳುತ್ತದೆ. ಬೆಳಗುವ ಜ್ಯೋತಿ ಕೂಡ ಕತ್ತಲೆಯನ್ನು ತನ್ನ ಗರ್ಭದಲ್ಲಿ ಹಾಕಿಕೊಂಡು ಬೆಳಕಿಂಗೆ ಬೆಳಕಾಗಿ ಬೆಳಕು ಮಾಡುತ್ತದೆ. ಅಂತೆಯೆ ಮಹಾಜ್ಞಾನಿಗಳ, ಶಿವಶರಣರ ಸಂಗದಲ್ಲಿದ್ದ ಅಜ್ಞಾನಿಗಳ ಅಜ್ಞಾನ ಕೆಟ್ಟು ಜ್ಞಾನಿಗಳಾಗಿ ಪರಿವರ್ತನೆ ಹೊಂದುತ್ತಾರೆ.
- □ ಮಕ್ಕಳಿಗೆ ಯಾರು ಏನೂ ಕಲಿಸದಿದ್ದರೂ ಕೂಡ ಅವು ಗರ್ಭದಲ್ಲಿಯೇ ಅಥವಾ ಜನ್ಮ ಜನ್ಮಗಳಿಂದ ಸಾತ್ವಿಕ , ತಾಮಸ, ರಾಜಸ ಗುಣಗಳನ್ನು ಕಲಿತುಕೊಂಡೆ ಹೊರಬರುತ್ತವೆ.
- □ ಮಗು ದೊಡ್ಡದಾದ ಮೇಲೆ ತನ್ನ ತನುವಿನಲ್ಲಿಯೇ ಇದ್ದ ಅರಿವನ್ನು ಸರಳ ತಂತ್ರಗಾರಿಕೆಯಿಂದ, ಗುರುಗಳ ಸಹಾಯದಿಂದ ಕಲಿತು ಪ್ರಯೋಗಕ್ಕೆ ತನ್ನನ್ನು ತಾನು ಒಳಪಡಿಸಬೇಕಾಗುತ್ತದೆ. ಇದು ಕೆಲ ತನುಗಳಿಗೆ ತಿಳಿಯುತ್ತದೆ; ಹಲವಾರು ತನುಗಳಿಗೆ ತಿಳಿಯುವುದೇ ಇಲ್ಲ.
- □ ಸೂರ್ಯ ಹುಟ್ಟಿದಂದಿನಿಂದ ಕತ್ತಲು ಹೇಗಿದೆಯೋ ಹಾಗೆಯೇ ತನು ಹುಟ್ಟಿದಂದಿನಿಂದ ತನುವಿನ ಅಜ್ಞಾನ ಇದೆ. ಸೂರ್ಯನ ಬೆಳಕಿನಿಂದಲೇ ಕತ್ತಲೆ ಸೃಷ್ಟಿಯಾಗಿದ್ದು, ಆ ಬೆಳಕಿನಿಂದಲೇ ಕತ್ತಲೆ ಕಳೆಯುತ್ತದೆ. ಹಾಗೆಯೆ ತನುವಿನ ಅಜ್ಞಾನ ಅರಿವಿನಿಂದ ಸೃಷ್ಟಿಯಾಗಿದ್ದು, ಆ ಅರಿವಿನಿಂದಲೇ ಅಜ್ಞಾನ ಕಳೆಯುತ್ತದೆ

# ಅಂಗದ ಭಂಗವನು ಅಂಗದ ಅರಿವಿನಿಂದಲೇ ಗೆಲ್ಲುವ ಸೂತ್ರ

**ಗುರುವೆಂಬ ತೆತ್ತಿಗನು**
**ಲಿಂಗವೆಂಬಲಗನು ಮನ ನಿಷ್ಠೆಯೆಂಬ ಕೈಯಲ್ಲಿ ಕೊಡಲು,**
**ಕಾದಿದೆ ಗೆಲಿದೆ ಕಾಮನೆಂಬವನ,**
**ಕ್ರೋಧಾಧಿಗಳು ಕೆಟ್ಟು, ವಿಷಯಂಗಳೋಡಿದವು,**
**ಅಲಗು ಎನ್ನೊಳು ನೆಟ್ಟು ಆನಳಿದ ಕಾರಣ**
**ಚೆನ್ನಮಲ್ಲಿಕಾರ್ಜುನ ಲಿಂಗವ ಕೈಯಲ್ಲಿ ಹಿಡಿದೆ.**

**ಗುರುವೆಂಬ ತೆತ್ತಿಗನು:**

ಅಕ್ಕಮಹಾದೇವಿಯ ಈ ಅರಿವಿನ ಸೂತ್ರ ತಿಳಿದರೆ ವಿದ್ಯಾರ್ಥಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆಯುತ್ತಾನೆ. ರಾಜಕಾರಣಿ ಭ್ರಷ್ಟನಾಗುವುದಿಲ್ಲ. ಅಧಿಕಾರಿ ಲಂಚ ಬಡುಕನಾಗುವುದಿಲ್ಲ. ಕಳ್ಳ ಕಳುವು ಮಾಡುವುದಿಲ್ಲ. ತನುವಿನಲ್ಲಿ ಕಾಮ,ಕ್ರೋಧ, ಲೋಭ, ಮೋಹ ,ಮದ, ಮತ್ಸರಗಳು ಕೆಟ್ಟು ಅರಿವು ಮಾತ್ರ ಉಳಿಯುತ್ತದೆ. ತನು ಅರಿವಿನಿಂದ ಅರಳುತ್ತದೆ. ಅದು ಹೆಣ್ಣಾದರೇನು ಗಂಡಾದರೇನು; ಎರಡು ಭೇದಗಳೂ ಅಳಿಯುತ್ತವೆ.

ವಿಷಯ ಸುಖಕ್ಕಾಗಿ ಮನ ತನುವನ್ನು ಕರೆದುಕೊಂಡು ಹೋಗಿ ಸುಖ ಪಡುತ್ತದೆ. ಇದು ಮನದ ಬಯಕೆ. ಹಾಗೆಯೇ ಅರಿವಿನ ಸುಖಕ್ಕಾಗಿ ಮನ ಗುರುವೆಂಬ ಸಂಬಂಧಿಯ ಹತ್ತಿರ ತನುವನ್ನು ಕರೆದುಕೊಂಡು ಹೋಗುತ್ತದೆ. ಹೀಗೆ ಮನಕ್ಕೆ ಬಯಕೆಯಾದರೆ ಸಾಕು ಮನ ಬೇಡಿದ್ದು ತನುವಿಗೆ ದಕ್ಕುತ್ತದೆ.

ಮನದ ಬಯಕೆಯಿಂದಲೇ ತನು ಹಾದರದ ಸುಖಕ್ಕೆ ಇಳಿದು ಹಾದರದ ಪಟ್ಟ ಕಟ್ಟಿಸಿಕೊಳ್ಳುತ್ತದೆ. ಮನದ ಬಯಕೆಯಿಂದಲೇ ತನು ಕಳ್ಳನಾಗಿ ಕಳುವಿನ ಪಟ್ಟ ಕಟ್ಟಿಕೊಳ್ಳುತ್ತದೆ. ಮನದ ಬಯಕೆಯಿಂದಲೇ ತನು ಕ್ರೋಧಗೊಂಡು ಕೊಲೆ ಗಡುಕನ ಪಟ್ಟ ಕಟ್ಟಿಕೊಳ್ಳುತ್ತದೆ. ಮನದ ಬಯಕೆಯಿಂದಲೇ ತನು ರಾಜಕಾರಣಿಯಾಗುತ್ತದೆ. ಧನ ಸಂಗ್ರಹಕ್ಕಿಳಿಸಿ ಭ್ರಷ್ಟಾಚಾರಿಯಾಗುತ್ತದೆ. ಅಧಿಕಾರಿಯಾಗಿ ಲಂಚಕ್ಕೆ ಕೈಯೊಡ್ಡಿ ಸುಖಪಡಲು ಬಯಸಿ ದುಃಖದಲ್ಲಿ ಮುಳುಗುತ್ತದೆ. ಮನ ಬಯಸಿದ್ದು ತನುವಿನ ಸಮೀಪ ಬಂದು ತನುವನ್ನು ಸುಖ-ದುಃಖಗಳಿಗೆ ಒಡ್ಡುತ್ತದೆ.

ಹಾಗೆಯೇ ಮನಕ್ಕೆ ಅರಿವಿನ ಬಯಕೆಯಾದರೆ ಸಾಕು ಗುರುವೆಂಬ ತೆತ್ತಿಗ ಸಂಬಂಧಿಕನು ಕೂಡಲೇ ತನುವಿನ ಮುಂದೆ ಬಂದು ನಿಲ್ಲುತ್ತಾನೆ. ಸಾಧ್ಯವಾಗದಿದ್ದರೆ ತನುವನ್ನೇ ತಾನಿದ್ದಲ್ಲಿಗೆ ಸೆಳೆದುಕೊಳ್ಳುತ್ತಾನೆ. ಅರಿವು ಹೇಳುವ ಗುರುವಿದ್ದಲ್ಲಿಗೆ ತನು ಹೋದರೂ ಒಂದೇ. ಆ ತನುವಿದ್ದಲ್ಲಿಗೆ ಅರಿವು ಹೇಳುವ ಗುರು ಬಂದರೂ ಒಂದೇ. ಪುಷ್ಪವಿದ್ದಲ್ಲಿಗೆ ದುಂಬಿ ಹೋದಂತೆ ! ಪುಷ್ಪದ ಪರಿಮಳ ದುಂಬಿಯಿದ್ದಲ್ಲಿಗೆ ಹೋಗಿ ಆ ದುಂಬಿಯನ್ನು ಕರೆದು ತಂದಂತೆ !

**ಲಿಂಗವೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು:**

ಅರಿವು ಹೇಳುವ ಗುರು ಬಲು ಜಾಣ. ತನುವನ್ನು ತನುವಿನ ಮನವನ್ನು ಸೂಕ್ಷ್ಮವಾಗಿ ಗಮನಿಸುತ್ತಾನೆ. ಮನಕ್ಕೆ ಬಯಕೆಯಾದ ಅರಿವಿನ ಉತ್ಕಟೇಚ್ಛೆಯನ್ನು ಗುರು ತನ್ನ ಅರಿವಿನಿಂದ ಅಳೆದು ತೂಗಿ ನೋಡುತ್ತಾನೆ. ಮನ ವಿಷಯಕ್ಕೆ ಬಾಯ್ತೆರೆದಂತೆ ಅರಿವಿಗೆ ಬಾಯ್ತೆರೆದು ವಾಲಿದ್ದನ್ನು ಗಮನಿಸುತ್ತಾನೆ. ಕೂಡಲೇ ಆ ಮನಕ್ಕೆ ತಾನು ವಾಸ ಮಾಡಿದ ತನುವಿನ ದರ್ಶನ ಮಾಡಿಸುತ್ತಾನೆ. ಆ ಅರಿವೆಂಬ ಲಿಂಗದ ಖಡ್ಗವನ್ನು ಮನದ ಕೈಯಲ್ಲಿ ಕೊಡುತ್ತಾನೆ.

**ಕಾದಿದೆ ಗೆಲಿದೆ ಕಾಮವೆಂಬವನ:**

ಮನ ಅರಿವೆಂಬ ಅಲಗನು ಕೈಯಲ್ಲಿ ಹಿಡಿಯುತ್ತದೆ. ತನುವಿನಲ್ಲಿ ವಾಸವಾದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಾದಿಗಳ ವಿರುದ್ಧ ಹೋರಾಡುತ್ತದೆ. ಗೆಲುವು ಸಾಧಿಸಿ ಮಹಾವೀರನಾಗುತ್ತದೆ. ಬುದ್ಧ ಬಸವನಾಗುತ್ತದೆ. ಕ್ರಿಸ್ತ ಪೈಗಂಬರನಾಗುತ್ತದೆ.

**ಕ್ರೋದಾಧಿಗಳು ಕೆಟ್ಟು ವಿಷಯಂಗಳೋಡಿದವು:**

ಮನ ವಿಷಯಗಳನ್ನು ಬಯಸಿತ್ತು. ತನುವಿನ ಮನದಲ್ಲಿ ವಿಷಯಗಳು ಉಳಿದಿದ್ದವು. ಅವುಗಳ ರುಚಿ ಕೂಡಾ ಮನದಲ್ಲಿ ಸಂಗ್ರಹವಾಗಿತ್ತು. ಬಯಕೆ ಯಾದಾಗೊಮ್ಮೆ ಮನ ತನುವಿನ ಮೂಲಕ ಸುಖಿಸುತ್ತಿತ್ತು. ಆ ವಿಷಯ ಸುಖವೇ ತನುವಿಗೆ ಮುಳುವಾಗಿತ್ತು. ಇಂತಹ ಮನಕೆ ಅರಿವಿನ ಬಯಕೆ ಯಾಯಿತು. ಗುರು ಮನದ ಬಯಕೆಯನ್ನು ಮನದ ತನುವಿನಲ್ಲಿಯೇ ಈಡೇರಿಸಿದ್ದ. ಅರಿವು ಅರಿಯಲು ಬಂದ ತನುವಿನಲ್ಲಿ ಅರಿವಿದೆ ; ಮನವಿದೆ. ಅರಿವೆಂಬುದೇ ಗುರು. ಗುರುವು, ಗುರುವಿಗೆ ಗುರುವಾಗಲು ಬರುವುದಿಲ್ಲ. ಅರಿವಿನ ಬಯಕೆಯಾದ ಮನಕ್ಕೆ ಅರಿವೆಂಬ ಗುರುವಿನ ದರ್ಶನವನ್ನು ತನುವಿನಲ್ಲಿಯೇ ಮಾಡಿಸುತ್ತಾನೆ. ಆ ಅರಿವೆಂಬ ಅಲಗು ಹಿಡಿದು ಹೋರಾಡಿದಾಗ ಮನದಲ್ಲಿ ಸಂಗ್ರಹವಾದ ಕ್ರೋದಾಧಿಗಳು ಕೆಟ್ಟು ಹೋದವು, ವಿಷಯಂಗಳು ಓಡಿ ಹೋದವು. ಅರಿವಿನ ಸುಖ ಉಂಡ ಮನ ಆ ಅರಿವಿಗೆ ಶರಣು ಹೋಗಿ ಶರಣಾಯಿತು. ಅ ಅರಿವಿಗೆ ದಾಸು ಹೋಗಿ ದಾಸನಾಯಿತು.

**ಅಲಗು ಎನ್ನೊಳು ನೆಟ್ಟು ಆನಳಿದ ಕಾರಣ ಚೆನ್ನಮಲ್ಲಿಕಾರ್ಜುನ ಲಿಂಗವ ಕೈಯಲ್ಲಿ ಹಿಡಿದೆ:**

ಪಾಷಾಣದಿಂದ ಕಲ್ಲಿನಿಂದ ಮಾಡಿದ ಲಿಂಗ ಲಿಂಗವಲ್ಲ, ಲಿಂಗವೆಂಬುದು ಅರಿವಿನ ಶಬ್ದ. ಅಕ್ಕ ಮಹಾದೇವಿ ಹೇಳಿದ ಲಿಂಗ ತನುವಿನ ಕಣ ಕಣದಲ್ಲಿ ಭರಿತವಾದ ಲಿಂಗ. ಅದು ಅರುವಿನ ಲಿಂಗ. ತನುವೇ ಅದರ ಸಂಕೇತ ! ಆ ಅರುವೆಂಬ ಅಲಗು ತನುವಿನಲ್ಲಿ ನೆಟ್ಟ ಕಾರಣ ಆನೆಂಬ ಅಹಂಕಾರವೂ ಅಳಿಯಿತು. ಕ್ರೋದಾಧಿಗಳು ಕೆಟ್ಟು ಹೋದವು. ವಿಷಯಂಗಳು ಓಡಿ ಹೋದವು. ಆ ಅಲಗು ಹಿಡಿದು ಕಾಮನೆಂಬುವನನ್ನು ಗೆಲ್ಲುವುದಕ್ಕೆ ಸಾಧ್ಯವಾಯಿತೆಂದು ಸಾಧಕರಿಗೆ ಮನದಟ್ಟು ಮಾಡಿದ್ದಾಳೆ ಅಕ್ಕ.

---

**ಅರಿವಿನ ಪರಿಮಳ** ☐

☐ ಅರಿವಿನ ಸೂತ್ರ ತಿಳಿದರೆ ವಿದ್ಯಾರ್ಥಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆಯುತ್ತಾನೆ. ರಾಜಕಾರಣಿ ಭ್ರಷ್ಟನಾಗುವುದಿಲ್ಲ. ಅಧಿಕಾರಿ ಲಂಚ ಬಡುಕನಾಗುವುದಿಲ್ಲ. ಕಳ್ಳ ಕಳುವು ಮಾಡುವುದಿಲ್ಲ. ತನುವಿನಲ್ಲಿ ಕಾಮ,ಕ್ರೋಧ, ಲೋಭ, ಮೋಹ ,ಮದ, ಮತ್ಸರಗಳು ಕೆಟ್ಟು ಅರಿವು ಮಾತ್ರ ಉಳಿಯುತ್ತದೆ. ತನು ಅರಿವಿನಿಂದ ಅರಳುತ್ತದೆ. ಅದು ಹೆಣ್ಣಾದರೇನು ಗಂಡಾದರೇನು; ಎರಡು ಭೇದಗಳೂ ಅಳಿಯುತ್ತವೆ.

# ಸತ್ಯ ನೋಡಲರಿಯದ ನರಕದ ಕಣ್ಣು

**ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು.**
**ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು.**
**ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವನು**
**ಇವರ ಮಾತೆಲ್ಲವು ಸಹಜವೆ !**
**ನರಕ ಸಂಸಾರದಲ್ಲಿ ಹೊದಕುಳಿಗೊಳುತ್ತ**
**ಶಿವನಿಲ್ಲ ಮುಕ್ತಿಯಿಲ್ಲ, ಹುಸಿಯೆಂದಡೆ**
**ನರಕದಲ್ಲಿಕ್ಕದೆ ಬಿಡುವನೆ ಚೆನ್ನಮಲ್ಲಿಕಾರ್ಜುಯ್ಯಾ ?**

**ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು:**

ಗೂಗೆ ಕತ್ತಲ ಸಂಗ ಮಾಡಿರುವುದರಿಂದ ಬೆಳಕೆಂದರೆ ಅದಕ್ಕೆ ಭಯ. ಬೆಳಕಿನಲ್ಲಿ ಗೂಗೆಗೆ ಕಣ್ಣು ಕಾಣುವುದಿಲ್ಲ. ಸೂರ್ಯನನ್ನು ನೋಡಲು ಸಾಧ್ಯವಾಗುವುದೇ ಇಲ್ಲ. ಇದು ಲೋಕಕ್ಕೆ ಗೊತ್ತಿರುವ ಮಾತು.ಆದರೂ ಅಕ್ಕ ಗೂಗೆಯ ಕಾಗೆಯ ಉಪಮೆಯನ್ನು ಈ ವಚನದಲ್ಲಿ ಬಳಸಿಕೊಂಡಿದ್ದಾಳೆ.

ಮನುಷ್ಯನಿಗೆ ಕತ್ತಲಿನಲ್ಲಿ ಏನೂ ಕಾಣುವುದಿಲ್ಲ. ಕತ್ತಲು ತನ್ನ ಗರ್ಭದಲ್ಲಿ ಎಲ್ಲವನ್ನು ಅವಿತಿಟ್ಟುಕೊಂಡಿರುತ್ತದೆ. ಸೂರ್ಯನ ಚುಮುಚುಮು ಬೆಳಕು ಕತ್ತಲನ್ನು ನುಂಗಿದಂತೆಲ್ಲ ಬೆಳಕು ಎಲ್ಲೆಡೆ ಚೆಲ್ಲುತ್ತದೆ. ಆಗ ಕತ್ತಲ ಪ್ರವೇಶಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ. ಆ ಕತ್ತಲೇ ಬೆಳಕಾಗುತ್ತದೆ.

ಮನುಷ್ಯನ ಕಣ್ಣಿಗೆ ಕತ್ತಲು ಕಾಣುತ್ತದೆ; ಬೆಳಕೂ ಕಾಣುತ್ತದೆ. ಒಳ್ಳೆಯದು ಕಾಣುತ್ತದೆ ಕೆಟ್ಟದ್ದು ಕಾಣುತ್ತದೆ. ಸೂರ್ಯನ ಬೆಳಕು ಎಲ್ಲ ವಸ್ತುಗಳ ಮೇಲೆ ಚೆಲ್ಲುತ್ತದೆ; ಹೌದು ಅಲ್ಲ ಎಂದು ನಿರ್ಧರಿಸುವ ಶಕ್ತಿ ಅದಕ್ಕಿಲ್ಲ; ಹಾಗೆಯೇ ಆನಂದ ಪಡುವ ಚೈತನ್ಯವೂ ಇಲ್ಲ. ಸೂರ್ಯ ಬೆಳಕು ಚೆಲ್ಲುವ ಒಂದು ಗ್ರಹ ಮಾತ್ರ.

ಕಣ್ಣು ಹಾಗಲ್ಲ. ನೋಡಿ ತನುವಿಗೆ ಸುಖ ದುಃಖ ಉಂಟು ಮಾಡುತ್ತದೆ. ಕ್ರೌರ್ಯ, ಭೀಬತ್ಸ,ರುದ್ರಾವತಾರ ತಾಳುವಂತೆ ಮಾಡುತ್ತದೆ. ನೋಡಿ ವಿಕೃತಗೊಂಡು ತನುವನ್ನು ಭೋಗಿಸಿ ಹರಿದು ತಿನ್ನುವ ನಾಯಿಯಂತೆ ಪರಿವರ್ತಿಸುತ್ತದೆ.

ಕರೆನ್ಸಿ ನೋಡಿ ಲಂಚಕ್ಕೆಳೆಸುತ್ತದೆ. ಕಳ್ಳ, ದರೋಡೆಕೋರನನ್ನಾಗಿ ಮಾಡುತ್ತದೆ. ವಿಟ, ಹಾದರಿಗ, ವಿಷಯ ಲಂಪಟ ವೇಶ್ಯೆ ಎನ್ನುವ ಹಣೆಪಟ್ಟಿಯನ್ನು ತನುವಿಗೆ ಕಟ್ಟುತ್ತದೆ. ಕಣ್ಣು ಸೇಫ್ ಆಗಿ ತನುವಿನಲ್ಲಿ ಉಳಿಯುತ್ತದೆ.

ಏಕೆಂದರೆ ಕಣ್ಣನ್ನು ಯಾರು ನಿಂದಿಸುವುದಿಲ್ಲ. ಕಣ್ಣು ಮಾಡಿದ ಕೆಲಸಕ್ಕೆ ಜನ ತನುವನ್ನು ನಿಂದಿಸಿ ತನುವಿಗೆ ಶಿಕ್ಷೆ ಕೊಡುತ್ತಾರೆ. ಕೋರ್ಟು ಕಚೇರಿ ಸರಕಾರ ಕೂಡಾ ಇದಕ್ಕೆ ಹೊರತಾಗಿಲ್ಲ. ಏಕೆಂದರೆ ಇವರೆಲ್ಲ ಕಣ್ಣುಳ್ಳವರು. ಕಣ್ಣ ಕಾಣಲರಿಯದೆ ತನುವನ್ನು ಬಯ್ಯುವವರು. ತನುವಿಗೆ ಶಿಕ್ಷೆ ಕೊಡುವವರು. ತನುವನ್ನು ಹೊಗಳಿ ಹಾಡಿ ಹಾರೈಸುವವರು.

ಹಗಲು ಕಣ್ಣು ಕಂಡರು ಕೂಡಾ, ಕುರುಡುಗಣ್ಣು, ಗೂಗೆ, ಕಾಗೆಯ ಕಣ್ಣು, ನೋಡುವುದನ್ನು

ನೋಡಲರಿಯದ ವಿಕೃತ ಕಣ್ಣು. ತನುವನ್ನು ನರಕಕ್ಕೆ ಭಾಜನ ಮಾಡುವ ಕಣ್ಣು. ಕಣ್ಣುಕಂಡರೂ ಅದಕ್ಕೆ ಸತ್ಯ ತಿಳಿದಿಲ್ಲ, ಶಿವನ ಪರಿಚಯವಿಲ್ಲ. ಮುಕ್ತಿಯೆಂಬುದು ಮೊದಲೇ ಅರಿಯದು. ನೋಡುವುದೆಲ್ಲ ಬರೀ ಹುಸಿ.

ತನ್ನಂತೆ ಇರುವ ಚರ್ಮ ನೋಡಿ, ಆ ಚರ್ಮದೊಂದಿಗೆ ಹಾದರಕ್ಕೆಳಿಸುವ ಕಣ್ಣು ಗೂಗೆಯಂತಹ ಕುರುಡು ಕಣ್ಣಲ್ಲವೇ ? ಕಾಗದದಲ್ಲಿ ಮುದ್ರಿಸಿ ವಿನಿಮಯಕ್ಕಾಗಿ ಕರೆನ್ಸಿಯೆಂದು ಹೆಸರಿಸಿದುದನ್ನು ನೋಡಿ ಕಳುವು, ದರೋಡೆ, ಭ್ರಷ್ಟಾಚಾರ, ಲಂಚಕ್ಕೆಳೆಸುವ ಕಣ್ಣು ಕಾಗೆ ಗೂಗೆಯ ಕಣ್ಣಲ್ಲವೇ ?

ಭೂಮಿಯ ಗರ್ಭದಲ್ಲಿ ಹೇರಳವಾಗಿ ದೊರೆತ ಲೋಹಕ್ಕೆ ಕಬ್ಬಿಣವೆಂದು, ವಿರಳವಾಗಿ ದೊರೆತ ಬಣ್ಣದ ಲೋಹಕ್ಕೆ ಚಿನ್ನವೆಂದು ಹೆಸರಿಸಿ, ಖರೀದಿಸುವ, ಕಳುವು ಮಾಡಲು ಪ್ರೇರೇಪಿಸುವ, ದೊರೆಯದಿದ್ದರೆ ಕೊಂದಾದರೂ ಹಳದಿ ಲೋಹ ಪಡೆಯುವ ಕಣ್ಣುಕುರುಡು ಕಣ್ಣಲ್ಲವೇ ?

ಕಟೆಯದ ಮುನ್ನ ಕಲ್ಲೆನ್ನುವ, ಕಟೆದ ಮೇಲೆ ದೇವರೆಂದು, ಅದಕ್ಕೆ ಹಳದಿ ಲೋಹದ ಕಿರೀಟ, ಆಭರಣ, ಪಾದುಕೆಗಳನ್ನು ತೊಡಿಸಿ ಪೂಜಿಸುವ ಕಣ್ಣು ಕುರುಡುಗಣ್ಣಲ್ಲವೇ ? ಆ ಕಲ್ಲಿಗೆ ಪಟ್ಟು ಪೀತಾಂಬರಗಳನ್ನುಡಿಸಿ, ಛತ್ರಿ ಚಾಮರ ಬೀಸಿ , ಮದುವೆ ಮಾಡಿ ಶಯನ ಗೃಹಕ್ಕೆ ಕಳಿಸುವ ಕಣ್ಣು ಕುರುಡುಗಣ್ಣಲ್ಲವೇ ? ಈ ಕಣ್ಣಿಗೆ ಗೂಗೆ ಕಾಗೆ ಕಣ್ಣುಗಳೆನ್ನಲೂ ಬರುವುದಿಲ್ಲ. ಕಣ್ಣಿದ್ದೂ ಕುರುಡು ಕಣ್ಣು. ತನುವನ್ನು ಸೆರೆಮನೆಗೆ ಕಳುಹಿಸಿ ನರಕಕ್ಕೆ ಭಾಜನ ಮಾಡುವ ಕಣ್ಣು, ಈ ಕಣ್ಣಿನಿಂದ ನೋಡಿದ ಕೀಚಕ ರಾವಣರು ಮೃತ್ಯು ಕಂಡರು. ವಯೋವೃದ್ಧ ಎನ್.ಡಿ.ತಿವಾರಿ ರಾಜ್ಯಪಾಲ ಹುದ್ದೆ ಕಳೆದುಕೊಂಡ.

ಕುರುಡು ಕಣ್ಣಿಗೆ ಮೋಸ ಹೋದ ಹಾಲಪ್ಪ ಮಂತ್ರಿ ಪದವಿ ಕಳೆದುಕೊಂಡ. ಅಷ್ಟೇಕೆ ಬರೀ ಚಿತ್ರ ನೋಡಿದ ಸಿ.ಸಿ.ಪಾಟೀಲ್,ಲಕ್ಷ್ಮಣ ಸವದಿ, ಕೃಷ್ಣಪಾಲೇಮಾರ ಮಂತ್ರಿ ಪದವಿ ಕಳೆದುಕೊಂಡರು.

ಯಡಿಯೂರಪ್ಪನವರ ಕಣ್ಣಿಗೆ ಕರೆನ್ಸಿಯಲ್ಲಿಯ ಕಾಗದ ಗಮನಕ್ಕೆ ಬರಲೇ ಇಲ್ಲ. ಮುಖ್ಯಮಂತ್ರಿ ಪದವಿ ಕಳೆದುಕೊಂಡು ಕಂಬಿ ಎಣಿಸಬೇಕಾಯಿತು. ಜನಾರ್ಧನರೆಡ್ಡಿ ಕಣ್ಣಿನಲ್ಲಿರುವ ಲೋಹದ ವ್ಯಾಮೋಹ ತನುವನ್ನು ಜೇಲಿನಲ್ಲಿ ಕೊಳೆಯುವಂತೆ ಮಾಡಿತು. ಜನ ನಗುವಂತೆ ಮಾಡಿತು.

ನಗಿಸುವ ಅಳಿಸುವ ಕಣ್ಣುಗ್ಗಳೆರಡೂ ಕುರುಡು ಕಣ್ಣುಗ್ಗಳೇ. ಒಮ್ಮೆ ಜೈಕಾರ ಹಾಕಿ ನಗುವಂತೆ ಮಾಡುತ್ತವೆ. ಮತ್ತೊಮ್ಮೆ ಕಲ್ಲಿಲೆ ಹೊಡೆದು ಅಳಿಸುವಂತೆ ಮಾಡು ತ್ತವೆ.

ಕರೆನ್ಸಿಯಲ್ಲಿ ಕಾಗದವಿದೆ. ಚಿನ್ನದಲ್ಲಿ ಲೋಹವಿದೆ. ತನುವಿನಲ್ಲಿ ರಕ್ತ ಮಾಂಸ ಮೂಳೆ ಮಜ್ಜೆ ಇದ್ದು ಚರ್ಮದ ಹೊದಿಕೆಯಿಂದ ಕೂಡಿದೆ. ಇದನ್ನು ನೋಡುವ ಸತ್ಯ ಕಣ್ಣಿನಲ್ಲಿ ಮರೆಯಾಗಿ ನೋಡಿದ್ದೆಲ್ಲಾ ಮಿರಮಿರನೆ ಮಿಂಚುತ್ತದೆ. ಇದಕ್ಕಾ ಗಿಯೇ ಒಮ್ಮೆ ಸುಖಿಸುತ್ತದೆ ಮತ್ತೊಮ್ಮೆ ದುಃಖಿಸುತ್ತದೆ. ಕಣ್ಣಿಗೆ ಸತ್ಯ ಕಾಣದ್ದಕ್ಕಾಗಿ, ಆ ಸತ್ಯದ ಸುಖ ಕಣ್ಣು ತಿಳಿಯದ್ದಕ್ಕಾಗಿ ದೇಹ ನರಕಯಾತನೆ ಅನುಭವಿಸುತ್ತದೆ.

ಕಣ್ಣಿನಲ್ಲಿ ಅರಿವೂ ಇದೆ, ಅಜ್ಞಾನವೂ ಇದೆ. ಅರಿವು ಬಳಕೆ ಮಾಡಿದರೆ ಸ್ವರ್ಗ ! ಅಜ್ಞಾನ ಬಳಕೆ ಮಾಡಿದರೆ ನರಕ ! ಎನ್ನುವ ಪಾಠವೇ ಈ ವಚನದ ಸಾರ.

□

# ಅರಿವಿನೊಂದಿಗೆ ಮರು ಮದುವೆಯಾದ ಅಕ್ಕ

**ಗುರುವೆ ತೆತ್ತಿಗನಾದ,**
**ಲಿಂಗವೆ ಮದುವಣಿಗನಾದ, ನಾನೆ ಮದುವಳಿಗೆಯಾದೆನು,**
**ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು,**
**ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ.**
**ಇದು ಕಾರಣ, ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ.**
**ಮಿಕ್ಕಿನ ಲೋಕದವರೆಲ್ಲ ಸಂಬಂಧವಿಲ್ಲವಯ್ಯಾ ಪ್ರಭುವೆ**

ತಂದೆ-ತಾಯಿಗಳು ಅಕ್ಕಮಹಾದೇವಿಯನ್ನು ಕೌಶಿಕನಿಗೆ ಕೊಟ್ಟು ಮದುವೆ ಮಾಡಿದರು. ಕೌಶಿಕ ಅಕ್ಕಮಹಾದೇವಿಯ ರೂಪ ಮೆಚ್ಚಿ ಮದುವೆಯಾದವ. ರೂಪಕ್ಕೆ ತೊಂದರೆಯಾದರೆ, ಅದಕ್ಕಿಂತ ಸುಂದರ ರೂಪ ದೊರೆತರೆ ಮತ್ತೊಂದು ಮದುವೆಯಾಗುವವ. ಈತ ಸಾವ ಕೆಡುವ ಗಂಡ. ಚರ್ಮಕ್ಕೆ ಮರುಳಾದ ಗಂಡ.!

ಅರಿವೆಂಬ ಚೆಲುವ ಚೆನ್ನಮಲ್ಲಿಕಾರ್ಜುನ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಗಂಡ. ರೂಪಕ್ಕೆ ಕಾರಣವಾದ ನಿರೂಪ ಗಂಡ. ತನುವಿನ ಜನ್ಮಕ್ಕೆ ಕಾರಣವಾಗಿ ಆ ತನುವಿನ ಕಣಕಣದಲ್ಲಿ ವಾಸ ಮಾಡಿದ ಗಂಡ. ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ. ಸುಖ ದುಃಖಗಳಿಗೆ ಮೀರಿದ ನಿರಂತರ ಸುಖ ಕೊಡುವ ಮಂಗಳ ಮೂರ್ತಿ ಆತ. ಅಂತಹ ಚೆನ್ನಮಲ್ಲಿಕಾರ್ಜುನನೆಂಬ ಲಿಂಗವೆ ಮದುವಣಿಗನಾದ. ನನ್ನದೆಂತಹ ಭಾಗ್ಯ ! ಗುರುವೆ ಈ ಮದುವೆಗೆ ಸಾಕ್ಷಿಯಾಗಿ ಸಂಬಂಧಿಕನಾದ ನನ್ನದೆಂತಹ ಭಾಗ್ಯ ! ಈ ಭುವನವೆಲ್ಲರಿಯಲು ಅಸಂಖ್ಯಾತ ಅರುಹಿರಿಯರೆಲ್ಲ ನನಗೆ ತಂದೆ ತಾಯಿಗಳಾದರು.

ಸಾವಿಲ್ಲದ ರೂಹಿಲ್ಲದ ಕೇಡರಿಯದ ಸಾದೃಶ್ಯವಪ್ಪ ವರನಿಗೆ ಕೊಟ್ಟು ಮದುವೆ ಮಾಡಿದರು. ಇದು ಕಾರಣ ಚೆನ್ನಮಲ್ಲಿಕಾಜುನನೆ ಗಂಡನೆನಗೆ. ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಎಂದು ಅಲ್ಲಮ ಪ್ರಭುಗಳಿಗೆ ತನ್ನ ಅರಿವಿನ ಗಂಡನನ್ನು ಕುರಿತು ಅಕ್ಕ ಸಭೆಯಲ್ಲಿ ಉತ್ತರಿಸಿದ್ದಾಳೆ. ಅಕ್ಕನ ಈ ಉತ್ತರದಿಂದ ಪ್ರಭು ಸಂತೃಪ್ತಗೊಂಡಿದ್ದಾರೆ. ಅರಿವಿನೊಂದಿಗೆ ಮರು ಮದುವೆಯಾದ ಅಕ್ಕನ ಅರಿವನ್ನು ಕಂಡು ಪ್ರಭು ಮಾರು ಹೋಗಿದ್ದಾರೆ. ಅನುಭವ ಮಂಟಪದ ಶರಣ ಬಳಗ ಅಕ್ಕನ ಈ ಅರಿವಿನ ಮಾತು ಕೇಳಿ ಕುಣಿ ಕುಣಿದಾಡಿದೆ.

□

---

**ಅರಿವಿನ ಪರಿಮಳ**

□ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಗಂಡ. ರೂಪಕ್ಕೆ ಕಾರಣವಾದ ನಿರೂಪ ಗಂಡ. ತನುವಿನ ಜನ್ಮಕ್ಕೆ ಕಾರಣವಾಗಿ ಆ ತನುವಿನ ಕಣಕಣದಲ್ಲಿ ವಾಸ ಮಾಡಿದ ಗಂಡ. ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ. ಸುಖ ದುಃಖಗಳಿಗೆ ಮೀರಿದ ನಿರಂತರ ಸುಖ ಕೊಡುವ ಮಂಗಳ ಮೂರ್ತಿ ಆತ.

# ತನುವಿನ ಮನವೆಂಬ ನೆರಳು ಅರಳಿದಾಗ

**ಚಂದ್ರಕಾಂತದ ಶಿಲೆಗೆ ಒಂದು ಗಜ ಹೋರುವಂತೆ-**
**ತನ್ನ ನೆಳಲಿಂಗೆ ತಾನೆ ಹೋರಿ ಸಾವಂತೆ**
**ಆನೆಯ ಗತಿ ಆನೆಯ ಮತಿ.**
**ಆನೆಯಹುದು ಆನೆಯಲ್ಲ, ಅದನೇನೆಂಬೆ?**
**ನೀನೆನ್ನ ಕರಸ್ಥಲದಲ್ಲಿ ಸಿಲ್ಕಿದೆಯಾಗಿ ನೀ ನಾನೆಂಬ ಭ್ರಾಂತೇಕೆ?**
**ನಾನು ನೀನಲ್ಲದೆ ತೆರಹಿಲ್ಲ, ಚೆನ್ನಮಲ್ಲಿಕಾರ್ಜುನಾ**

**ಚಂದ್ರಕಾಂತದ ಶಿಲೆಗೆ ಒಂದು ಗಜ ಹೋರುವಂತೆ-ತನ್ನ ನೆಳಲಿಂಗೆ ತಾನೆ ಹೋರಿ ಸಾವಂತೆ:**

ತನುವಿನ ಅರಿವನ್ನು ತನುವಿನ ಮನ ಬಳಕೆ ಮಾಡಿಕೊಳ್ಳುವ ಸರಳ ಸೂತ್ರವನ್ನು ಅಕ್ಕ ಈ ವಚನದಲ್ಲಿ ಬಿತ್ತರಿಸಿದ್ದಾಳೆ. ಚಂದ್ರಕಾಂತದ ಶಿಲೆ ಮತ್ತು ಆನೆಯನ್ನು ಉದಾಹರಣೆಗೆ ತೆಗೆದುಕೊಂಡು ಅರಿವು ಮನದಟ್ಟು ಮಾಡಿದ್ದಾಳೆ. ಆನೆ ಚಂದ್ರಕಾಂತ ಶಿಲೆಯಲ್ಲಿ ತನ್ನ ಬಿಂಬ ನೋಡಿ ಅದರೊಂದಿಗೆ ಕಾದು ಯುದ್ಧ ಮಾಡಿ ಕೊನೆಗೆ ಸಾವನ್ನಪ್ಪುತ್ತದೆ.

**ಆನೆಯ ಗತಿ ಆನೆಯ ಮತಿ:**

ಆನೆ ತನ್ನ ನೆರಳನ್ನು ಆನೆಯೆಂದೇ ತಿಳಿದು ತನ್ನ ನೆರಳಿನೊಂದಿಗೆ ಕಾದು ಗತಿಯನ್ನು ಹೊಂದುತ್ತದೆ. ಆನೆಯ ಮತಿಗೆ ಹೊಳೆದದ್ದಷ್ಟೆ.

**ಆನೆಯಹುದು ಆನೆಯಲ್ಲ ಅದನೇನೆಂಬೆ?:**

ಅಕ್ಕ ನೀಡಿದ ಆನೆಯ ದೃಷ್ಟಾಂತದಂತೆಯೇ ತನು ಇದೆ. ಆದರೆ ಆನೆಯಲ್ಲ. ಆನೆಗೆ ತಿಳಿಯುವುದೇ ಇಲ್ಲ. ಆನೆಯಂತಿರುವ ತನುವಿಗೆ ಒಮ್ಮೆ ಹೊಳೆಯುತ್ತದೆ ಮತ್ತೊಮ್ಮೆ ಹೊಳೆಯುವುದಿಲ್ಲ. ಆನೆಯ ನೆರಳು ಅಮೃತ ಶಿಲೆಯಲ್ಲಿ ಕಂಡು ಹೇಗೆ ಆನೆಯೆಂದು ತಿಳಿದು ಆ ನೆರಳಿನೊಂದಿಗೆ ಹೋರಾಡಿ ಸಾಯುತ್ತದೆಯೋ ಹಾಗೆಯೇ ತನು ಕೂಡಾ ತನುವಿನ ನೆರಳಾದ ಮನದ ಮಾತು ಕೇಳಿ ಅದರೊಂದಿಗೆ ಹೋರಾಡಿ ವ್ಯರ್ಥ ಸಾಯುತ್ತದೆ. ಆನೆ ಹೌದು ಆನೆಯಲ್ಲ ನನ್ನ ನೆರಳೆಂದು ಆನೆಗೆ ತಿಳಿಯುವುದಿಲ್ಲ. ಹಾಗೆಯೇ ತನುವಿಗೆ ತನ್ನ ಮನ ನೆರಳೆಂದು ಆನೆಗೆ ತಿಳಿಯದೆ ಮನ ಮಾಡಿದ ಬಯಕೆ ಈಡೇರಿಸುವುದರಲ್ಲಿಯೇ ತನುವಿನ ಪ್ರಾಣಪಕ್ಷಿ ಹಾರಿ ಹೋಗಿರುತ್ತದೆ.

ತನುವಿನಲ್ಲಿರುವ ಅರಿವಿನ ನೆರಳೇ ಮನವಾಗಿ ಪುನಃ ತನುವಿನಲ್ಲಿ ಬೆರೆತಿದೆ. ಮನ ಆ ಬಯಕೆ ಮಾಡಿದ ಪದಾರ್ಥಗಳನ್ನು ತನುವಿನ ಮೂಲಕ ರುಚಿಸುತ್ತಾ ತನುವನ್ನು ಮನ ದುರ್ಬಳಕೆ ಮಾಡಿಕೊಳ್ಳುತ್ತದೆ. ''ಕೋತಿ ಮೊಸರನ್ನ ತಿಂದು ಮೇಕೆ ಮೋತಿಗೆ ಒರೆಸಿದಂತೆ '' ಜನ ತನುವನ್ನು ದಂಡಿಸುತ್ತಾರೆ ಹೊರತು ಮನವನ್ನಲ್ಲ. ಮನ ಕಣ್ಣಿಗೆ ಕಾಣುವುದಿಲ್ಲ. ತನುವನ್ನು ಮನ ದುರ್ಬಳಕೆ ಮಾಡಿಕೊಂಡು ವೇಶ್ಯೆ, ಹಾದರಿಗ, ಕಳ್ಳ, ವಿಟ, ಗೂಂಡಾ ಎಂದು ಹಣೆಪಟ್ಟಿ ಕಟ್ಟುತ್ತದೆ. ಇದನ್ನು

ಅನುಭಾವಿಗಳು ಮಾತ್ರ ಬಲ್ಲರು.ಆನೆಗೆ ಅಂಕುಶವಿಟ್ಟು ನಾನು ಎನ್ನುವ ಅಹಂಕಾರ ಕಳೆಯುವರು. ಆಗ ತನು ತನುವಲ್ಲ; ಘನ ತನುವಾಗುವುದು. ಮನ ಮನವಲ್ಲ ಘನಮನವಾಗುವುದು.

ಅರಿವಿನ ದರ್ಶನ ಕಂಡ ಮನ ಘನಮನವಾಗಿ ತನುವನ್ನು ಬೆಳಗಿಂಗೆ ಬೆಳಗಾಗಿ ಬೆಳಗುವುದು. ಅದು ಘನಸುಖ. ಆ ಸುಖವನುಂಡು ಆ ಸುಖವನೇ ಡೇಗುತ್ತದೆ. ನಾನು ಆ ರುಚಿಯನು ಏನೆಂಬೆ? ವರ್ಣಿಸಲಸದಳ.

**ನೀನೆನ್ನ ಕರಸ್ಥಲದಲಿ ಸಿಲ್ಕಿದೆಯಾಗಿ ನೀ ನಾನೆಂಬ ಭ್ರಾಂತೇಕೆ? ನಾನು ನೀನಲ್ಲದೆ ತೆರಹಿಲ್ಲ, ಚೆನ್ನಮಲ್ಲಿಕಾರ್ಜುನಾ.**

ಚಂದ್ರಕಾಂತ ಶಿಲೆಯಲ್ಲಿ ತನ್ನ ನೆರಳು ಕಂಡು ಅದು ತನ್ನ ನೆರಳೆಂದು ಆನೆ ಮತಿಗೆ ಹೊಳೆದರೆ ಸಾಕು,ಆನೆ ನೆರಳಿನೊಂದಿಗೆ ಹೋರಾಡುವುದಿಲ್ಲ ಬದಲಾಗಿ ನೆರಳೇ ಆನೆಯಲ್ಲಿ ಸೇರಿ ತೆರಹಿಲ್ಲದಂತೆ ಆನೆಯೇ ಆಗುತ್ತದೆ. ಆನೆ ಕಾದುವುದಿಲ್ಲ. ಮತಿಗೆ ಹೊಳೆದುದಕ್ಕಾಗಿ ಸುಖಿಸುತ್ತದೆ.

ಅಂತೆಯೇ ಮನ ಕರೆನ್ಸಿ, ಭೂಮಿ, ಹೇಮ, ವಿಷಯಾದಿಗಳಿಗೆ ಮನಸೋತು ಅವುಗಳನ್ನು ತನುವಿನೊಂದಿಗೆ ಭೋಗಿಸುತ್ತದೆ. ಸಂಗ್ರಹಿಸುತ್ತದೆ. ಅವುಗಳನ್ನು ಪಡೆಯಲು ತನುವನ್ನೇ ಮುಂದೆ ಮಾಡುತ್ತದೆ. ಕಳ್ಳ, ಹಾದರಿಗ, ವಿಟ, ವೇಶ್ಯೆ, ಬಡವ, ಶ್ರೀಮಂತ, ಹೆಣ್ಣು, ಗಂಡು ಎಂಬ ಹಣೆಪಟ್ಟಿ ಕಟ್ಟುತ್ತದೆ. ಮನ ಬಯಸಿದ ಪದಾರ್ಥಗಳು ಮತಿಗೆ ಹೊಳೆದರೆ ಸಾಕು ಅವುಗಳಲ್ಲಿ ಹುರುಳಿಲ್ಲ. ಕರೆನ್ಸಿಯ ಮೂಲ ಕಾಗದ; ಚಿನ್ನದ ಮೂಲ ಲೋಹ; ಭೂಮಿಯ ಮೂಲ ಜಲ; ತನುವಿನ ಮೂಲ ಜಲ; ಜಲದ ಮೂಲ ಜಲಜನಕ +ಆಮ್ಲಜನಕ. ಇದರ ಮೂಲ ಬಯಲು . ಬಯಲಿನಿಂದಲೇ, ಅದರ ಬೀಜದಿಂದಲೇ ಸಕಲ ಪದಾರ್ಥಗಳ ಸೃಷ್ಟಿ! ಆಗ ನಾನು ನೀನು ಎಂಬ ಭ್ರಾಂತಿ ಇಲ್ಲ. ನನ್ನಿಂದಲೇ ನನ್ನ ನೆರಳು; ನನಗೂ ನೆರಳಿಗೂ ಅವಿನಾಭಾವ ಸಂಬಂಧ! ಬಯಲಿಗೆ ಬೇಡಿಕೆಯಿಲ್ಲ, ಓಡಾಟ ಮೊದಲೇ ಇಲ್ಲ, ತನು ಬಯಲಿನ ಸೃಷ್ಟಿ! ತನುವಿನ ಸೃಷ್ಟಿ ಅದರ ನೆರಳು! ತಿಳಿದರೆ ನೆರಳು ಹೇಳಿದಂತೆ ತನು ಕೇಳುವುದಿಲ್ಲ, ನೆರಳು ತನುವಿನ ಗರ್ಭ ಸೇರಿ ತನುವಾಗುವುದು.ಆ ತನುವೇ ಬಯಲ ಸೇರಿ ಬಯಲಾಗುವುದು. ತೆರಹಿಲ್ಲದಂತೆ ಚೆನ್ನ ಮಲ್ಲಿಕಾರ್ಜುನನೆಂಬ ಅರಿವೇ ತಾನಾಗುವುದು.ಆ ಬಯಲೇ ತಾನಾಗುವುದು! ತನುವಿನ ಮನವೆಂಬ ನೆರಳು ಅರಳಬೇಕಷ್ಟೆ!

□

**ಅರಿವಿನ ಪರಿಮಳ**

- □ ಮನ ಕರೆನ್ಸಿ,ಭೂಮಿ,ಹೇಮ, ವಿಷಯಾದಿಗಳಿಗೆ ಮನಸೋತು ಅವುಗಳನ್ನು ತನುವಿನೊಂದಿಗೆ ಭೋಗಿಸುತ್ತದೆ. ಸಂಗ್ರಹಿಸುತ್ತದೆ. ಅವುಗಳನ್ನು ಪಡೆಯಲು ತನುವನ್ನೇ ಮುಂದೆ ಮಾಡುತ್ತದೆ. ಕಳ್ಳ, ಹಾದರಿಗ, ವಿಟ, ವೇಶ್ಯೆ, ಬಡವ, ಶ್ರೀಮಂತ, ಹೆಣ್ಣು, ಗಂಡು ಎಂಬ ಹಣೆಪಟ್ಟಿ ಕಟ್ಟುತ್ತದೆ.
- □ ಕರೆನ್ಸಿಯ ಮೂಲ ಕಾಗದ; ಚಿನ್ನದ ಮೂಲ ಲೋಹ; ಭೂಮಿಯ ಮೂಲ ಜಲ; ತನುವಿನ ಮೂಲ ಜಲ; ಜಲದ ಮೂಲ ಜಲಜನಕ +ಆಮ್ಲಜನಕ. ಇದರ ಮೂಲ ಬಯಲು . ಬಯಲಿನಿಂದಲೇ, ಅದರ ಬೀಜದಿಂದಲೇ ಸಕಲ ಪದಾರ್ಥಗಳ ಸೃಷ್ಟಿ! ಆಗ ನಾನು ನೀನು ಎಂಬ ಭ್ರಾಂತಿ ಇಲ್ಲ. ನನ್ನಿಂದಲೇ ನನ್ನ ನೆರಳು; ನನಗೂ ನೆರಳಿಗೂ ಅವಿನಾಭಾವ ಸಂಬಂಧ!
- □ ತಿಳಿದರೆ ನೆರಳು ಹೇಳಿದಂತೆ ತನು ಕೇಳುವುದಿಲ್ಲ, ನೆರಳು ತನುವಿನ ಗರ್ಭ ಸೇರಿ ತನುವಾಗುವುದು. ಆ ತನುವೇ ಬಯಲ ಸೇರಿ ಬಯಲಾಗುವುದು.

# ಜಲದ ಮಂಟಪವೇ ಅನುಭವ ಮಂಟಪ

**ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ,**
**ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ,**
**ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು.**
**ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ,**
**ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ**
**ಮದುವೆಯ ಮಾಡಿದರೆಲೆ ಅವ್ವಾ.**

**ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ:**

ಪ್ರಪಂಚದಲ್ಲಿರುವ ಜ್ಞಾನಿಗಳ ಮಾತೆಲ್ಲ ಒಂದೇ. ಎಷ್ಟೇ ಸರಳವಾಗಿ ಹೇಳಿದರೂ ಜ್ಞಾನ ಬಲು ಜಟಿಲ. ತಿಳಿದರೆ ಬಲು ಸರಳ. ಬೆಲ್ಲದ ಪುತ್ಥಳಿಯ ಚುಂಬಿಸಿದಂತೆ ಬಲು ಸಿಹಿ.

ತನು ಎನ್ನುವುದು ಉದಕದ ಮಂಟಪ. ಇದರಲ್ಲಿ ಬಯಕೆಯ ಕಿಚ್ಚು ಇದೆ. ಉದಕದೊಳಗೆ ಬಯಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು ಎಂದು ಬಸವಣ್ಣನವರು ಹೇಳುತ್ತಾರೆ. ಹಾಗೆಯೇ ತನು ಅನುಭವ ಮಂಟಪವೂ ಹೌದು. ಜಲವೇ ಕುದ್ದು ಪಾಕಗೊಂಡು ಗಟ್ಟಿಯಾಗಿ ಭೂಮಿ ಎನ್ನುವ ಹೆಸರು ಪಡೆದು ಆಲಿಕಲ್ಲ ಹಸೆಯ ಹಾಸಿನಂತೆ ಎಲ್ಲೆಲ್ಲೂ ಪಸರಿಸಿದೆ ಬಾಸಿಗವ ಕಟ್ಟಿದ ಮದುವಣಿಗನ ಬರುವಿಗಾಗಿ.

**ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು:**

ತನುವಿನ ಮನಕ್ಕೆ ಮೈ ತುಂಬಾ ಕಾಲು. ಇದರ ವೇಗ ಗಾಳಿ, ಬೆಳಕಿನ ವೇಗಕ್ಕಿಂತಲೂ ತೀಕ್ಷಣವಾದದ್ದು. ಕ್ಷಣಾರ್ಧದಲ್ಲಿ ಪ್ರಪಂಚ ಸುತ್ತಿ ಬರುವ ಶಕ್ತಿ ಈ ಮನವೆಂಬ ಹೆಂಡತಿಗಿದೆ. ಅದಕ್ಕಾಗಿಯೇ ದಾಸರು ಈ ಮನವ ಕುರಿತು: ಹೆಂಡತಿ ನೀ ಹೆಂಡತಿ ಕೊಂಡ ಕೋತಿಯಂಗ ಕುಣಿಸುತ್ತಿ ಎಂದು ಹಾಡಿದ್ದಾರೆ. ಮನವೆಂಬ ಕಾಲುಳ್ಳ ಹೆಂಡತಿಗೆ ಸುಖದ ಪರಿಚಯವಿಲ್ಲ, ಶಬ್ದಕ್ಕೆ ನಾಚಿ ತನುವನ್ನು ಪ್ರಳಯದ ಕೂಪಕ್ಕೆ ತಳ್ಳುತ್ತಾಳೆ. ರೂಪಕ್ಕೆ ಮಾರು ಹೋಗಿ ಹಾದರ ಮಾಡುತ್ತಾಳೆ. ರುಚಿಗೆ ಮಾರು ಹೋಗಿ ತನುವಿಗೆ ಸುರೆಪಾನ ಮಾಡಿಸುತ್ತಾಳೆ. ಆಭರಣಕ್ಕೆ ಮಾರು ಹೋಗಿ ಕಳವು ಮಾಡಿ ತನುವನ್ನು ಸೆರೆಮನೆಗೆ ತಳ್ಳುತ್ತಾಳೆ. ಇವಳ ಕಾಲು ಮುರಿದು ಹೆಳವನ ಮಾಡಿದಲ್ಲದೆ ಅರಿವೆಂಬ ತಲೆಯಿಲ್ಲದ ಗಂಡ ಒಲಿಯನು.

ಅಕ್ಕ ತನ್ನ ತನುವಿನ ಮನವೆಂಬ ಹೆಂಡತಿಯ ಕಾಲು ಮುರಿದು ಹೆಳವನನ್ನಾಗಿ ಮಾಡಿದ್ದಾಳೆ. ಆ ಮನದ ಯೌವ್ವನ ಮಿರಿಮಿರಿ ಮಿಂಚುತ್ತಿದೆ. ಸೋಗು ಮಾಡಿ ಅಕ್ಕನ ತನುವಿನ ಅರಿವೆಂಬ ತಲೆಯಿಲ್ಲದ ಗಂಡನನ್ನು ಕೈ ಮಾಡಿ ಕರೆಯುತ್ತಿದೆ. ಆ ಗಂಡನೇ ಚೆನ್ನಮಲ್ಲಿಕಾರ್ಜುನನೆಂಬ ಅರಿವು. ಆ ಚೆಲುವ ಗಂಡನೊಂದಿಗೆ ಕಾಲಿಲ್ಲದ ನನ್ನನ್ನು ಹೆಂಡತಿಯಾಗಿ ಕೊಟ್ಟು ಬಾಳುವೆ ಮಾಡಲು ಹಚ್ಚಿದರು ಎಮ್ಮ ಶರಣರು.

ಶರಣರು ಮಾಡಿದ ಈ ಮದುವೆಯ ಗುಟ್ಟು ಸಮಾಜಕ್ಕೆ ತಿಳಿಯದು. ಲೋಕ ವಿರೋಧಿ ಶರಣ, ಶರಣ ವಿರೋಧಿ ಲೋಕ. ಇದು ಅರುವಿನ ಶಿಕ್ಷಣ. ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಇದನ್ನು ತಿಳಿದು ಪಾಲಿಸಿ ಬೋಧಿಸಿದರೆ ಲೋಕವೆಲ್ಲ ಧನ್ಯ .

□

# ನಿಜವನರಿತ ನಿಶ್ಚಿಂತ ಮರ

**ಹೆದರದಿರು ಮನವೆ, ಬೆದರದಿರು ಮನವೆ,**
**ನಿಜವನರಿತು ನಿಶ್ಚಿಂತನಾಗಿರು.**
**ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ,**
**ಎಲವದ ಮರನ ಇಡುವರೊಬ್ಬರ ಕಾಣೆ.**
**ಭಕ್ತಿಯುಳ್ಳವರ ಬೈವರೊಂದು ಕೋಟಿ,**
**ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ.**
**ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ, ಚೆನ್ನಮಲ್ಲಿಕಾರ್ಜುನ.**

''ಹಣ್ಣ ಮೆದ್ದ ಬಳಿಕ ಆ ಮರವನಾರು ತರಿದಡೇನು ? ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು? ಮಣ್ಣ ಬಿಟ್ಟ ಬಳಿಕ ಆ ಕೆಯ್ಯನಾರು ಉತ್ತಡೇನು? ಚೆನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ ನಾಯಿ ತಿಂದಡೇನು, ನೀರು ಕುಡಿದಡೇನು ?''

ಫಲಭರಿತ ಮರ ಪಶು ಪಕ್ಷಿಗಳಿಗೆ, ಜನಕ್ಕೆ ಬಲು ಇಷ್ಟ. ಎಲ್ಲರ ಕಣ್ಣು ಮರದ ಮೇಲೆಯೇ! ಕಲ್ಲೊಡೆದು ತಿಂದರೂ, ಕುಕ್ಕಿ ತಿಂದರೂ, ತರೆತರೆದು ತಿಂದರೂ ಮರಕ್ಕೆ ಬಲು ಸುಖ! ಸಿಪ್ಪೆ ಒಪ್ಪಗೆಟ್ಟ ಮೇಲೆ ಯಾರು ತಿಂದರೂ ಸುಖವಲ್ಲವೇ? ಮರವಾದರೂ ಹಣ್ಣಾದ ಮೇಲೆ ತಾನೇ ತೊಟ್ಟು ಬಿಟ್ಟು ಕಳಚಿ ಕೆಳಗೆ ಬೀಳಿಸುತ್ತದೆ.

ಬೇರಿದ್ದ ಮರದ ತಿಳುವಳಿಕೆ ಬೇರಿಲ್ಲದ ತಿರುಗಾಡುವ (ತನು) ಮರಕ್ಕಿಲ್ಲ. ತನ್ನ ನೀರಿನಿಂದಲೇ ಮಣ್ಣನ್ನು ವದ್ದೆ ಮಾಡಿ ಬೇರು ಬಿಟ್ಟು ತಾನು ಗಟ್ಟಿಯಾಗಿ ಮರವಾಗಿ ನಿಂತಿದೆ. ಫಲಬಿಟ್ಟ ಮೇಲೆ ಜನ ಬೀಜಕ್ಕಂಟಿದ ಸಿಪ್ಪೆ ತಿನ್ನುತ್ತಾರೆಯೇ ಹೊರತು ಬೀಜ ತಿನ್ನುವುದಿಲ್ಲ. ಹಣ್ಣಿನ ಸಿಹಿ ಮೆದ್ದು ಬೀಜ ಜೋಪಾನವಾಗಿಟ್ಟು ಮತ್ತೊಂದು ಮರಕ್ಕೆ ನಾಂದಿ ಹಾಡುತ್ತಾರೆ. ತಿಂದು ಬೀಸಾಡಿದರೇನಂತೆ ; ಅದು ನೊಂದೆನೆಂದು ಮರು ನುಡಿಯುವುದಿಲ್ಲ. ಬಿದ್ದ ಜಾಗದಲ್ಲೇ ಬೆಳೆದು ಹೆಮ್ಮರವಾಗುತ್ತದೆ. ಹೂಬಿಟ್ಟು ಕಾಯಿಯಾಗಿ ಮತ್ತೆ ಹಣ್ಣು ಮಾಡುತ್ತದೆ.

ತನು ಕೂಡಾ ಬೇರಿಲ್ಲದ ಮರ . ಜ್ಞಾನದಫಲ ಹೊತ್ತುಕೊಂಡು ಬೆಳಗಿಂಗೆ ಬೆಳಗಾಗಿ ಬೆಳಗುತ್ತಾ, ಬೆಳಗಿನ ನುಡಿ ನುಡಿಯುತ್ತಾ ನಡೆದಾಡುವ ಮರ! ತನುವಿಗೆ ಮನ ಆವರಿಸಿರುವುದರಿಂದ (ಮರ) ರೋಗಗ್ರಸ್ತವಾಗಿದೆ. ಮನ ಚಿವುಟಿದರೆ (ಮರದ) ತನುವಿನ ತುಂಬಾ ತನಿರಸದ ಫಲವೇ ಫಲ! ಇಲ್ಲದಿದ್ದರೆ ಎಲವದ ಮರ; ಎಲುಬಿನ ಮರ!

ಮನಕ್ಕೆ ಜ್ಞಾನದಫಲದ ಬೆಳಕಿನ ಮೇಲೆ ಆಸಕ್ತಿಯಾದರೆ ಅದು ಭಕ್ತಿಯ ಮರ. ಫಲಭರಿತ ಮರ. ಅದನ್ನು ತರೆತರೆದು ತಿನ್ನುವವರೊಂದುಕೋಟಿ. ಫಲಭರಿತ ಮರಕ್ಕೆ ನೋಯಿಸಿದರೆ ಹೇಗೆ ಸುಖವೋ ಹಾಗೆಯೇ ಜ್ಞಾನವುಳ್ಳ ತನುವನ್ನು ನೋಯಿಸಿದರೆ ಸುಖವೇ ಸುಖ! ಮಹಾಜ್ಞಾನಿ ಚೆನ್ನ ಮಲ್ಲಿಕಾರ್ಜುನನೆಂಬ ದೇವರನ್ನೆ ಸೋಪಾನ ಮಾಡಿಕೊಂಡ ಅಕ್ಕನನ್ನು ಯಾರು ಬೈದರೇನು, ಯಾರು ನಿಂದಿಸಿದರೇನು? ನಿಜವನರಿತ ನಿಶ್ಚಿಂತಳಾಕೆ!

□

# ಚಿನ್ನ ಕೊಟ್ಟು ಅರಿಸಿನ ಕೊಳ್ಳದ ಮೂರ್ಖ ಗ್ರಾಹಕ

**ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಕೊಳ್ಳಿರವ್ವಾ**
**ಎಮ್ಮ ನಲ್ಲನ ಮೈಯ ಹತ್ತುವ ಅರಿಸಿನವ ಕೊಳ್ಳಿರವ್ವಾ**
**ಒಳಗುಂದದರಿಸಿನವ ಮಿಂದು**
**ಚೆನ್ನಮಲ್ಲಿಕಾರ್ಜುನನ ಅಪ್ಪಿರವ್ವಾ.**

**ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಕೊಳ್ಳಿರವ್ವಾ :**

ಕಲ್ಲು ಸಕ್ಕರೆ ಕೊಳ್ಳಿರೆ ಎಂದು ದಾಸರು ಹಾಡಿದರೆ, ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಕೊಳ್ಳಿರವ್ವಾ ಎಂದು ಅಕ್ಕಮಹಾದೇವಿ ಮೈಮರೆತು ಹಾಡುತ್ತಾ ; ಚಿನ್ನ ಪಡೆದು ಅರಿವಿನ ಅರಿಸಿನ ಮಾರಲು ಪ್ರಯತ್ನಿಸಿದ್ದಾಳೆ. ಜೀವನ ಪರ್ಯಂತ ಹೀಗೆ ಕೂಗಿ ಕೂಗಿ ಮಾರಿದರೂ ದಾಸರಿಗಾಗಲಿ ಅಕ್ಕನಿಗಾಗಲಿ ಒಬ್ಬ ಗ್ರಾಹಕ ಕೂಡಾ ದಕ್ಕಲಿಲ್ಲ. ಅವರು ಮಾಡುವ ವ್ಯಾಪಾರ ಅವರಿಗೇ ಸಂತೋಷ ತಂದಿತು. ಮಾರುವವರು ಕೊಳ್ಳುವವರು ತಾವೇ ಆದರು. ಗ್ರಾಹಕನೇನು ಹುಚ್ಚನೆ ಚಿನ್ನ ಕೊಟ್ಟು ಅರಿಸಿನ ಕೊಳ್ಳಲು !

ಚಿನ್ನ ಕೊಟ್ಟು ಅರಿಸಿನ ಪಡೆದು ಅದನು ಎಲ್ಲಿ ಕಡಿದರೂ ಬರೀ ಹಳದಿಯೇ ಹಳದಿ. ಕುಟ್ಟಿ ಪುಡಿ ಮಾಡಿದರೂ ಬರೀ ಹಳದಿಯೇ ಹಳದಿ. ಚಿನ್ನ ಕುಟ್ಟಿ ಪುಡಿ ಪುಡಿ ಮಾಡಿ ಮೈಗೆ ಸವರಿಕೊಳ್ಳಲು ಬರುವುದಿಲ್ಲ. ಅರಿಸಿನ ಹಾಗಲ್ಲ ; ಎಲ್ಲಿ ಸವರಿದರೂ ಕಾಂತಿಯುಕ್ತ. ತನು ಮಿರ ಮಿರನೆ ಮಿಂಚುತ್ತದೆ. ಅರಿಸಿನ ಸವರಿಕೊಂಡ ತನುವಿಗೆ ಅಪ್ಯಾಯಮಾನ. ನೋಡಿದ ಕಂಗಳಿಗೂ ಅಪ್ಯಾಯಮಾನ.

**ಎಮ್ಮ ನಲ್ಲನ ಮೈಯ ಹತ್ತುವ ಅರಿಸಿನವ ಕೊಳ್ಳಿರವ್ವಾ :**

'' ಎನ್ನಂಗದಲ್ಲಿ ನಿನಗೆ ಮಜ್ಜನ, ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ. ಎನ್ನ ತುರುಬಿನಲ್ಲಿ ನಿನಗೆ ಕುಸುಮ ಪೂಜೆ. ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪು ವಿಚಿತ್ರ ವಿನೋದ. ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾ ವಾದ್ಯ ಕೇಳಿರೇ, ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ ಪರಿಮಳ. ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ. ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ. ಎನ್ನ ಸಚ್ಚಿದಾನಂದವೆಂಬ ಸಜ್ಜೆ ಗೃಹದಲ್ಲಿ ನೀನು ಸ್ಪರ್ಷನಂಗೈದು ನೆರೆದಿಪ್ಪೆಯಾಗಿ, ನೀನಾನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ '' ಎಂದು ಉರಿಲಿಂಗ ಪೆದ್ದಿಗಳು ಹಾಡಿದ್ದಾರೆ. ತನ್ನ ಅರಿವಿನ ನಲ್ಲನನ್ನು ತನ್ನ ತನುವಿನಲ್ಲಿಯೇ ಕಂಡುಕೊಂಡು ಆ ತನುವಿಗೆ ಮಜ್ಜನ ಮಾಡಿಸಿ ಗಂಧ ಹಚ್ಚಿದ್ದಾರೆ. ತುರುಬಿಗೆ ಹೂ ಮುಡಿಸಿ ನೇತ್ರಕ್ಕೆ ನಾನಾ ರೂಪು ತೋರಿಸಿ ಆನಂದಪಟ್ಟಿದ್ದಾರೆ. ಕಿವಿಗೆ ಪಂಚ ಮಹಾ ವಾದ್ಯಗಳ ನಿನಾದವರ್ಪಿಸಿ, ನಾಸಿಕಕ್ಕೆ ಸುಗಂಧ ಧೂಪದ ಪರಿಮಳ ಹಾಕಿ, ನಾಲಿಗೆಗೆ ಷಡ್ರಸಾನ್ನ ನೈವೇದ್ಯ ಮಾಡಿದ್ದಾರೆ. ತನುವಿನ ತೊಗಲಿಗೆ ವಸ್ತ್ರಾಭರಣದ ಅಲಂಕಾರ ಮಾಡಿ ಹರಿಷಿಣ ಹಚ್ಚಿ ಪೂಜಿಸಿದ್ದಾರೆ. ಸತ್‌ಚಿತ್ ಆನಂದಮಯವಾದ ತನುವಿನಲ್ಲಿ ಸದಾಸ್ಪರ್ಶನಗೈದು ಸುಖಿಸುವ ಆನಂದ ಮೂರ್ತಿಯೆಂಬ

ಅರಿವಿನೊಂದಿಗೆ ಬೆರೆತು, ನಾನು ನೀನು ಎನ್ನುವುದನ್ನು ಮರೆತು, ತಾನು ತಾನೇ ಆದ ಘನದೊಂದಿಗೆ ಬೆರೆತು ಒಂದಾಗಿದ್ದಾರೆ.

ಚಿನ್ನಕೊಟ್ಟು ಅರಿಸಿನ ಕೊಳ್ಳುವವ ದೊರೆತಿದ್ದರೆ ಈ ಆನಂದದ ಸವಿಯನ್ನು ಅಕ್ಕ ಆ ಗ್ರಾಹಕನಿಗೆ ಉಣಬಡಿಸುತ್ತಿದ್ದಳು. ಚಿನ್ನ ಮರೆತು ಅರಿವಿನ ಅರಿಸಿನದಲಿ ಮಿಂದು ಅದರ ಸವಿಯನು ಉಣ್ಣುವ ಭಾಗ್ಯ ದಕ್ಕುತ್ತಿತ್ತು. ಅಕ್ಕನಂತೆ ಗ್ರಾಹಕ ಕೂಡಾ ತಾನು ತನ್ನನೇ ಮರೆತು ತಾನೇ ಆಗುತ್ತಿದ್ದ, ಚೆನ್ನಮಲ್ಲಿಕಾರ್ಜುನನೆಂಬ ಅರಿವೇ ಆಗುತ್ತಿದ್ದ.

□

# ತನು ಮನ ಪ್ರಾಣ ಅರಿವು ಸ್ವರೂಪದ ಬೆಳಗನುಟ್ಟಬೆಳಕು

ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ ?
ಮನ ನಿಮ್ಮ ರೂಪಾದ ಬಳಿಕ ಆರಿಗೆ ನೆನೆವೆ ?
ಪ್ರಾಣ ನಿಮ್ಮ ರೂಪಾದ ಬಳಿಕ ಆರನಾರಾಧಿಸುವೆ ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ ?
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮಿಂದ ನೀವೇಯಾದಿರಾಗಿ ನಿಮ್ಮನೆ ಅರಿವುತ್ತಿರ್ದೆನು.

**ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ ? :**

ಮಾಡುವುದು ಪೂಜಿಸುವುದು ನೆನೆಯುವುದು ಆರಾಧಿಸುವುದು ತನುವಿನ ಗುಣ; ಸಂಪ್ರದಾಯವೂ ಆಗಿದೆ. ಯಾರಿಗಾಗಿ ಮಾಡುವುದು ? ಯಾರನ್ನು ನೆನೆಯುವುದು ? ಯಾರನ್ನು ಪೂಜಿಸುವುದು ? ಯಾರನ್ನು ಆರಾಧಿಸುವುದು ? ಯಾರನ್ನು ತಿಳಿಯುವುದು ? ಎಂದು ಮನಕ್ಕೆ ಅರಿವಾಗುತ್ತಿಲ್ಲ. ''ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ; ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ! ಮಾಡುವ ನೀಡುವ ನಿಜಗುಣವುಳ್ಳಡೆ; ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ'' ಮಾಡುವ ಮನ ಅರಿವಿನಲ್ಲಿ ನೆಟ್ಟರೆ ಯಾರಿಗೆ ಮಾಡಬೇಕೆಂದು ಕೊಂಡಿದ್ದನೋ ಅವನು ತನ್ನಂತೆ ಇರುವ ಅರಿವು ಸ್ವರೂಪವಾಗಿ ಕಾಣುತ್ತಾನೆ. ಆತನನ್ನು ಭಿಕ್ಷುಕನೆನ್ನಲು ಬರುವುದಿಲ್ಲ; ತನ್ನನ್ನು ದಾನಿ ಎಂದುಕೊಳ್ಳಲು ಬರುವುದಿಲ್ಲ. ತಾನು ಕೊಡುವುದು ತನ್ನ ಉತ್ಪತ್ತಿಯಲ್ಲ. ಆತ ಬೇಡುವುದೂ ದಾನಿಯದಲ್ಲ. ನೀಡುವವ ಬೇಡುವವ ಎರಡು ಮುಖದ ಒಂದು ನಾಣ್ಯ ವಿದ್ದಂತೆ. ಇಬ್ಬರೂ ತಿಳಿದಿಲ್ಲ. ತಿಳಿದರೆ ನೀಡಿದೆನೆನ್ನುತ್ತಿರಲಿಲ್ಲ; ಬೇಡುವವ ಬೇಡುತ್ತಿರಲಿಲ್ಲ. ನೀಡಿದೆನೆನ್ನುವುದೊಂದು ರೋಗ; ಬೇಡುವುದೊಂದು ರೋಗ; ಇವೆರಡು ರೋಗಗಳನು ತಿಳಿದು ಕಳೆದರೆ, ಎರಡೂ ತನುಗಳು ಒಂದೇ. ತನುವಿನ ರೂಪಕ್ಕೆ ಕಾರಣವಾದ ಅರಿವು ಒಂದೇ. ಅದು ಕಣ್ಣು, ಕಿವಿ,ಮೂಗು,ನಾಲಿಗೆ, ಚರ್ಮದಲ್ಲಿ ಬೆಳಕಿನ ಬುಗ್ಗೆಯಾಗಿ ಹರಿಯುತ್ತಿದೆ. ಬೆಳಕು ಯಾರನ್ನೂ ಬೇಡುವುದಿಲ್ಲ. ತನ್ನ ಹತ್ತಿರ ಬಂದ ಕತ್ತಲೆಂಬ ಅಜ್ಞಾನವನ್ನು ಬೆಳಗಿಸಿ ತನ್ನಂತೆ ಮಾಡಿಕೊಳ್ಳುತ್ತದೆ.

**ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ ?:**

ಕತ್ತಲೆಂಬ ಅಜ್ಞಾನವೇ ಮನ. ಆ ಮನವೇ ಬೆಳಕೆಂಬ ಅರಿವಿನಲ್ಲಿ ನೆಟ್ಟ ಬಳಿಕ ಅದು ಯಾರನ್ನಾದರೂ ಏನನ್ನಾದರೂ ಬೇಡಲು ಬರುವುದೇ ? ಕತ್ತಲ ಗರ್ಭದಲ್ಲಿರುವ ವಸ್ತುಗಳನ್ನು ಬೆಳಗಿ ನೋಡಿ, ಆನಂದ ಪಟ್ಟು ತಾನು ಏನನ್ನೂ ಪಡೆಯದೆ, ತನ್ನ ಬೆಳಗಿನಿಂದ ಮಿಂಚುವಂತೆ ಮಾಡುತ್ತದೆ.

**ಪ್ರಾಣ ನಿಮ್ಮ ರೂಪಾದ ಬಳಿಕ ಆರನಾರಾಧಿಸುವೆ ?:**

ತನು, ತನುವನ್ನಾವರಿಸಿಕೊಂಡಿರುವ ಮನ ಹಾಗೂ ತನುವಿನ ಪ್ರಾಣ ಕೂಡಾ ಅರಿವಿನ ಸ್ವರೂಪವೇ ಆದ ಬಳಿಕ ಯಾರನ್ನು ಆರಾಧಿಸುವುದು? ತನ್ನ ತನುವಿಗೆ ತಾನೇ ನೀರೆರೆದು ಪೂಜಿಸುವುದು, ವಿಭೂತಿ ಗಂಧದ ತಿಲಕ ಇಟ್ಟು ಆರಾಧಿಸುವುದು. ಜುಟ್ಟಿಗೆ

ಮಲ್ಲಿಗೆ ಮುಡಿದು ಅದರ ಪರಿಮಳ ಆಸ್ವಾದಿ ಸುವುದು. ತನ್ನ ನಾಲಿಗೆಗೆ ನಾನಾ ವಿಧದ ಭಕ್ಷ್ಯಗಳನ್ನರ್ಪಿಸಿ ರುಚಿಸಿ ಆನಂದ ಪಡುವುದು.

**ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ? ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮಿಂದ ನೀವೇ ಯಾದಿರಾಗಿ ನಿಮ್ಮನೆ ಅರಿವುತ್ತಿರ್ದೆನು :**

ತನು, ತನುವಿನ ಮನ, ತನುವಿನ ಪ್ರಾಣ ಅರಿತು ತಾನು ತಾನೇ ಆದ ಬಳಿಕ ಇನ್ನಾರನು ಅರಿವುದು ? ನೋಡುವ ತನುಗಳೆಲ್ಲವೂ ಅರುಸ್ವರೂಪ! ಗಿಡ ಮರ ಬಳ್ಳಿ ಪಶು ಪಕ್ಷಿ ಜಲಚರ ಉರಗ ಕೀಟಾದಿಗಳು ಕೂಡಾ ಅರು ಸ್ವರೂಪವೇ ಆಗಿವೆ. ಅಣುರೇಣು ತೃಣ ಕಾಷ್ಟದಲ್ಲಿ ಕೂಡಾ ಅರುಸ್ವರೂಪವೇ ಬೆರೆತಿರುವಾಗ ಆರನರಿವುದು ? ಚೆನ್ನಮಲ್ಲಿಕಾರ್ಜುನಯ್ಯಾ ನೀವೇ ನಿಮ್ಮ ಲೀಲೆಗಾಗಿ ಅನಂತ ರೂಪು ತಳೆದು, ಆ ರೂಪಿನಲ್ಲಿ ನಿರೂಪಾಗಿ ಬೆರೆತು, ರೂಪು ನಿರೂಪುಗಳೆರಡನು ಅರಿವುತ್ತ ಆ ಅರಿವಿನ ಬೆಳಗನುಟ್ಟು ಬೆಳಗುತ್ತಿದ್ದೇನೆ ಎಂದಿದ್ದಾಳೆ ಅಕ್ಕ. □

---

**ಅರಿವಿನ ಪರಿಮಳ**

- □ ನೀಡುವವ ಬೇಡುವವ ಎರಡು ಮುಖದ ಒಂದು ನಾಣ್ಯ ವಿದ್ದಂತೆ. ಇಬ್ಬರೂ ತಿಳಿದಿಲ್ಲ. ತಿಳಿದರೆ ನೀಡಿದೆನೆನ್ನುತ್ತಿರಲಿಲ್ಲ; ಬೇಡುವವ ಬೇಡುತ್ತಿರಲಿಲ್ಲ. ನೀಡಿದೆನೆನ್ನುವುದೊಂದು ರೋಗ; ಬೇಡುವುದೊಂದು ರೋಗ; ಇವೆರಡು ರೋಗಗಳನು ತಿಳಿದು ಕಳೆದರೆ, ಎರಡೂ ತನುಗಳು ಒಂದೇ.
- □ ತನು, ತನುವನ್ನಾವರಿಸಿಕೊಂಡಿರುವ ಮನ ಹಾಗೂ ತನುವಿನ ಪ್ರಾಣ ಕೂಡಾ ಅರಿವಿನ ಸ್ವರೂಪವೇ ಆದ ಬಳಿಕ ಯಾರನ್ನು ಆರಾಧಿಸುವುದು? ತನ್ನ ತನುವಿಗೆ ತಾನೇ ನೀರೆರೆದು ಪೂಜಿಸುವುದು, ವಿಭೂತಿ ಗಂಧದ ತಿಲಕ ಇಟ್ಟು ಆರಾಧಿಸುವುದು. ಜುಟ್ಟಿಗೆ ಮಲ್ಲಿಗೆ ಮುಡಿದು ಅದರ ಪರಿಮಳ ಆಸ್ವಾದಿಸುವುದು. ತನ್ನ ನಾಲಿಗೆಗೆ ನಾನಾ ವಿಧದ ಭಕ್ಷ್ಯಗಳನ್ನರ್ಪಿಸಿ ರುಚಿಸಿ ಆನಂದ ಪಡುವುದು.

# ನಡೆದಾಡುವ ಭೋದೀವೃಕ್ಷ

**ಜ್ಞಾನದ ಕಾರಣಾಂಗವೇ ಭಕ್ತಿಯು**
**ಭಕ್ತಿಯ ಮಹಾಕಾರಣಾಂಗವೇ ಜ್ಞಾನವು**
**ಭಕ್ತಿ ಜ್ಞಾನವೆಂಬುದು ಕಾಕಾಕ್ಷಿಯಂತೆ**
**ಭಕ್ತಿ ಜ್ಞಾನವೆಂಬುದು ಎನ್ನ ಮೋಹದ**
**ಚೆನ್ನಮಲ್ಲಿಕಾರ್ಜುನಾ ನಿಮ್ಮಂತೆ.**

ಅಕ್ಕಮಹಾದೇವಿಯ ಈ ವಚನದಲ್ಲಿ ಭಕ್ತಿ ಎನ್ನುವ ಪದವೇ ಪ್ರಧಾನವಾಗಿದೆ. ಹನುಮ ಶ್ರೀರಾಮನ ಮೇಲಿಟ್ಟ ಭಕ್ತಿ, ಪ್ರಲ್ಹಾದ ಮಹಾ ವಿಷ್ಣುವಿನ ಮೇಲಿಟ್ಟ ಭಕ್ತಿ, ಶಿಷ್ಯ ಗುರುವಿನ ಮೇಲಿಟ್ಟ ಭಕ್ತಿ. ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಟ್ಟಾರೆ ಭಾರತ ಭಕ್ತಿ ಪ್ರಧಾನವಾದ ರಾಷ್ಟ್ರ. ಇಲ್ಲಿಯ ಜನ ತಮ್ಮ ತಮ್ಮ ಆರಾಧ್ಯ ದೇವರ ಮೇಲೆ, ಆಗಿ ಹೋದ ಸಂತ ಶ್ರೇಷ್ಠರ ಮೇಲೆ, ಶರಣ, ದಾಸವರೇಣ್ಯರ ಮೇಲೆ, ಮನೆ ಗುರುಗಳ ಮೇಲೆ ಇಟ್ಟ ಭಕ್ತಿ ನೆನಪಿಗೆ ಬರುತ್ತದೆ.

ಪ್ರಲ್ಹಾದನಿಗೆ ತಂದೆ ವಿಷ ಪ್ರಾಶನ ಮಾಡಿಸಿದರೂ ವಿಷ್ಣುವಿನ ನಾಮ ಸ್ಮರಣೆ ಮಾಡುವುದು ಬಿಡಲಿಲ್ಲ. ಸಿರಿಯಾಳ ಚೆಂಗಳೆಯರು ಮಗನನ್ನು ಕತ್ತರಿಸಿ ಗುರುವಿಗೆ ಉಣಬಡಿಸಿ ಭಕ್ತಿ ಮಾಡಿದರು. ಕಣ್ಣಪ್ಪ ತನ್ನ ಆರಾಧ್ಯ ದೈವ ಈಶ್ವರನಿಗೆ ಕಣ್ಣು ಕೊಟ್ಟು ಭಕ್ತಿಯನ್ನು ಮೆರೆದ.

ಹೀಗೆ ಭಕ್ತಿ ಮಾಡುವುದು ನಮಗೆಲ್ಲ ಚಿರಪರಿಚಿತ. ದೈವಕ್ಕೆ,ದೇವರಿಗೆ, ಗುರುವಿಗೆ ತಾನು ತನ್ನಂತೆಯೇ ಇರುವ ಮತ್ತೊಂದು ವ್ಯಕ್ತಿಗೆ ಭಕ್ತಿ ಮಾಡುವುದು ಉಚಿತ. ಆದರೆ ಅಕ್ಕ ತನ್ನ ವಚನದ ಸೂತ್ರದಲ್ಲಿ ಹೇಳಿದ ಭಕ್ತಿಯೇ ಬೇರೆ. ಜನ ತಿಳಿದು ಮಾಡುವ ಭಕ್ತಿಗಿಂತ ಅಕ್ಕ ಹೇಳಿದ ಭಕ್ತಿ ವ್ಯತಿರಿಕ್ತವಾಗಿದೆ.

**ಜ್ಞಾನದ ಕಾರಣಾಂಗವೆ ಭಕ್ತಿಯು. ಭಕ್ತಿಯ ಮಹಾಕಾರಣಾಂಗವೇ ಜ್ಞಾನವು:**

ಜ್ಞಾನಕ್ಕೆ ಕಾರಣವಾದ ಅಂಗದಿಂದಲೇ ಜ್ಞಾನಕ್ಕೆ ಭಕ್ತಿ ಮಾಡಬೇಕು. ಆ ಮಹಾಭಕ್ತಿಯ ಕಾರಣಾಂಗವೇ ಜ್ಞಾನವು.

ಇಡೀ ಪ್ರಪಂಚದಲ್ಲಿ ಜನ್ಮ ತಳೆದ ಪ್ರತಿಯೊಬ್ಬ ಮನುಷ್ಯನ ಅಂತಿಮ ಗುರಿ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಆಗಿದೆ. ಈ ಸಾಕ್ಷಾತ್ಕಾರಕ್ಕಾಗಿಯೇ ಒಬ್ಬ ಮತ್ತೊಬ್ಬನಿಗೆ ಭಕ್ತಿ ಮಾಡುತ್ತಾನೆ. ಮಾಡಿ ಮಾಡಿ ಸೋಲುತ್ತಾನೆ. ಒಮ್ಮೊಮ್ಮೆ ಜ್ಞಾನ ಹೊಳೆದರೆ ಗೆಲ್ಲುತ್ತಾನೆ ! ಸತ್ಯದ ಸಮೀಪ ಪಯಣಿಸಿ ಆ ಸತ್ಯವೇ ತಾನಾಗುತ್ತಾನೆ.

ಸತ್ಯ ಎಲ್ಲರಿಗೆ ಏಕೆ ಹೊಳೆಯುವುದಿಲ್ಲ ? ಭಕ್ತಿಯ ಕೊರತೆ; ತನಗೆ ತಾನೇ ಭಕ್ತಿ ಮಾಡಿಕೊಳ್ಳಲು ಹೊಳೆಯದ ಕೊರತೆಯೇ ಇದಕ್ಕೆ ಕಾರಣವಾಗಿದೆ.

ಅಂಗಕ್ಕೆ ಆಧಾರವಾದದ್ದು (ಲಿಂಗ) ಜ್ಞಾನ ; ಈ ಜ್ಞಾನದ ನೆರಳೇ ಮನ. ಈ ಮನದಿಂದ

ಅಂಗಕ್ಕೆ ಆಧಾರವಾದ ಜ್ಞಾನಕ್ಕೆ ಭಕ್ತಿ ಮಾಡಿದಾಗ ; ಅಂಗ ಭಕ್ತಿಯ ಮಹಾಕಾರಣಾಂಗವಾಗುತ್ತದೆ. ನಡೆದಾಡುವ ಭೋದೀವೃಕ್ಷ ವಾಗುತ್ತದೆ. ಲಿಂಗ ಅಂಗ ಸಮರಸವಾಗಿ ಬೆರೆತು ಲಿಂಗಾಂಗವಾಗುತ್ತದೆ. ಆಗ ಲಿಂಗಕ್ಕೂ ಅಂಗಕ್ಕೂ ಭೇದವಿಲ್ಲ. ಅಂಗಕ್ಕೂ ಲಿಂಗಕ್ಕೂ ಭೇದವಿಲ್ಲ. ಜ್ಞಾನಕ್ಕೂ ಅಂಗಕ್ಕೂ ಭೇದವಿಲ್ಲ. ಅಂಗಕ್ಕೂ ಜ್ಞಾನಕ್ಕೂ ಭೇದವಿಲ್ಲದಂತಾಗುತ್ತದೆ.

**ಭಕ್ತಿ ಜ್ಞಾನವೆಂಬುದು ಕಾಕಾಕ್ಷಿಯಂತೆ,ಭಕ್ತಿ ಜ್ಞಾನ ಎಂಬುದು ಎನ್ನ ಮೋಹದ ಚೆನ್ನಮಲ್ಲಿಕಾರ್ಜುನಾ ನಿಮ್ಮಂತೆ :**

ತನು ಮೂರ್ತಸ್ವರೂಪ. ತನುವಿನ ಭಕ್ತಿ ಅಮೂರ್ತಸ್ವರೂಪ. ತನುವಿನ ಜ್ಞಾನವೂ ಅಮೂರ್ತಸ್ವರೂಪ. ಅಮೂರ್ತಸ್ವರೂಪವಾದ ಭಕ್ತಿ ಜ್ಞಾನಗಳೆರಡು ಕೂಡಿ ; ಕಣ್ಣಿಗೆ ಕಾಣದ ಕಾಕೆಯ ಬೀಜ ನುಂಗಿ ಮಹಾಭೋದಿ ವೃಕ್ಷವೇ ಆಗುತ್ತದೆ. ತನು ನಡೆದಾಡುವ ಮಹಾಜ್ಞಾನದ ಭೋದಿ ಮರವೇ ತಾನಾಗುತ್ತದೆ. ಬುದ್ಧನಾಗುತ್ತದೆ, ಮಹಾವೀರನಾಗುತ್ತದೆ. ಮೋಹದ ಮಲ್ಲಿಕಾರ್ಜುನನೆಂಬ ಅರಿವೇ ತಾನಾಗುತ್ತದೆ.

□

---

**ಅರಿವಿನ ಪರಿಮಳ**

- □ ಮನುಷ್ಯನ ಅಂತಿಮ ಗುರಿ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಆಗಿದೆ. ಈ ಸಾಕ್ಷಾತ್ಕಾರಕ್ಕಾಗಿಯೇ ಒಬ್ಬ ಮತ್ತೊಬ್ಬನಿಗೆ ಭಕ್ತಿ ಮಾಡುತ್ತಾನೆ. ಮಾಡಿ ಮಾಡಿ ಸೋಲುತ್ತಾನೆ. ಒಮ್ಮೊಮ್ಮೆ ಜ್ಞಾನ ಹೊಳೆದರೆ ಗೆಲ್ಲುತ್ತಾನೆ ! ಸತ್ಯದ ಸಮೀಪ ಪಯಣಿಸಿ ಆ ಸತ್ಯವೇ ತಾನಾಗುತ್ತಾನೆ.
- □ ಸತ್ಯ ಎಲ್ಲರಿಗೆ ಏಕೆ ಹೊಳೆಯುವುದಿಲ್ಲ ? ಭಕ್ತಿಯ ಕೊರತೆ; ತನಗೆ ತಾನೇ ಭಕ್ತಿ ಮಾಡಿಕೊಳ್ಳಲು ಹೊಳೆಯದ ಕೊರತೆಯೇ ಇದಕ್ಕೆ ಕಾರಣವಾಗಿದೆ.
- □ ಅಂಗಕ್ಕೆ ಆಧಾರವಾದದ್ದು (ಲಿಂಗ) ಜ್ಞಾನ ; ಈ ಜ್ಞಾನದ ನೆರಳೇ ಮನ. ಈ ಮನದಿಂದ ಅಂಗಕ್ಕೆ ಆಧಾರವಾದ ಜ್ಞಾನಕ್ಕೆ ಭಕ್ತಿ ಮಾಡಿದಾಗ ; ಅಂಗ ಭಕ್ತಿಯ ಮಹಾಕಾರಣಾಂಗವಾಗುತ್ತದೆ. ನಡೆದಾಡುವ ಭೋದೀವೃಕ್ಷ ವಾಗುತ್ತದೆ.
- □ ತನು ಮೂರ್ತಸ್ವರೂಪ. ತನುವಿನ ಭಕ್ತಿ ಅಮೂರ್ತಸ್ವರೂಪ. ತನುವಿನ ಜ್ಞಾನವೂ ಅಮೂರ್ತಸ್ವರೂಪ. ಅಮೂರ್ತಸ್ವರೂಪವಾದ ಭಕ್ತಿ ಜ್ಞಾನಗಳೆರಡು ಕೂಡಿ ; ಕಣ್ಣಿಗೆ ಕಾಣದ ಕಾಕೆಯ ಬೀಜ ನುಂಗಿ ಮಹಾಭೋದಿ ವೃಕ್ಷವೇ ಆಗುತ್ತದೆ. ತನು ನಡೆದಾಡುವ ಮಹಾಜ್ಞಾನದ ಭೋದಿ ಮರವೇ ತಾನಾಗುತ್ತದೆ.

# ಅಚ್ಚುಗನೆಂಬ ಮೆಚ್ಚುಗೆಯ ಗಾರುಡಿಗ

ತನು ಮೀಸಲಾಗಿ, ಮನ ಮೀಸಲಾಗಿ,
ಭಾವವಚ್ಚುಗೊಂಡಿಪ್ಪುದವ್ವಾ,
ಅಚ್ಚುಗನ ಸ್ನೇಹ, ನಿಚ್ಚಟದ ಮೆಚ್ಚುಗೆ
ಬೆಚ್ಚು ಬೇರಾಗದ ಭಾವವಾಗೆ
ಚೆನ್ನಮಲ್ಲಿಕಾರ್ಜುನಯ್ಯಾ ಒಳಗೆ ಗಟ್ಟಿಗೊಂಡಿಪ್ಪನವ್ವಾ.

**ತನು ಮೀಸಲಾಗಿ, ಮನ ಮೀಸಲಾಗಿ, ಭಾವವಚ್ಚುಗೊಂಡಿಪ್ಪುದವ್ವಾ:**

ತನು ಮನಗಳೆರಡು ತನುವಿನ ಅರಿವಿಗೆ ಮೀಸಲಾದಾಗ ತನುವಿನ ಭಾವ ಅರಿವಿನ ಅಚ್ಚಾಗುತ್ತದೆ. ಭಾವದಲ್ಲಿ ಏರುಪೇರಾಗುವುದಿಲ್ಲ. ತನು ಮನ ಅರಿವಿಗೆ ಮೀಸಲಾಗದಿದ್ದರೆ ಭಾವ ಒಮ್ಮೆ ಭಾವವಾಗುತ್ತದೆ ಮತ್ತೊಮ್ಮೆ ದುರ್ಭಾವವಾಗುತ್ತದೆ. ಉದಾಹರಣೆಗೆ ತನು ಒಂದು ತನುವಿನ ಮೇಲೆ ಭಾವಮಾಡಿ  ಗೆಳೆತನ ಮಾಡುತ್ತದೆ. ಗೆಳೆಯನ ಬಗ್ಗೆ ಸುವಾರ್ತೆಗಳನ್ನು  ಹೇಳುತ್ತಾ ಹೊಗಳುತ್ತಾ ಹಗಲು ರಾತ್ರಿಯೆನ್ನದೆ ಆತನ ವರ್ಣನೆ ಮಾಡುತ್ತಾ ಕಾಲ ಕಳೆಯುತ್ತದೆ. ಆತನ ಬಗ್ಗೆ ಸಲ್ಲದ ಮಾತುಗಳನ್ನು ಕೇಳಿದರೆ ಸಿಡಿದು ಬೀಳುತ್ತದೆ. ಅದೇ ಗೆಳೆಯ ತನ್ನ ಬಗ್ಗೆ ಸಲ್ಲದ ಮಾತುಗಳನ್ನಾಡಿದನೆಂದು ಯಾರಾದರೂ ಹೇಳಿದರೆ ಸಾಕು ಆ ಗೆಳೆಯನ ಮೇಲೆ ಇಟ್ಟ ಭಾವ ದುರ್ಭಾವ ವಾಗುತ್ತದೆ. ಹಿಂದೆ ಹೊಗಳುತ್ತಿದ್ದ ತನುವನ್ನು ಬೈಯ್ಯುತ್ತಾ ತಿರುಗುತ್ತದೆ. ಜನ ಹಿಂದೆ ಹೊಗಳುವುದನ್ನು ಕೇಳುತಿದ್ದರು. ಇಂದು ಬಯ್ಯುವುದನ್ನು ಕೇಳುತ್ತಾರೆ. ಹೀಗೇಕೆ  ಎಂದು ಅವರು ಪ್ರಶ್ನಿಸುವುದಿಲ್ಲ. ಹೀಗೇಕಾಯಿತೆಂದು ತಾನು ಪ್ರಶ್ನಿಸಿ ಕೊಳ್ಳುವುದಿಲ್ಲ. ಗೆಳೆಯನ ತನು ಘಾಸಿಗೊಂಡಿಲ್ಲ ; ಗೆಳೆಯ ಹೀಗಳೆದನೆಂದು ಇತರರು ಹೇಳಿದ್ದು ಕೇಳಿದ ತನು ಘಾಸಿಗೊಳ್ಳುತ್ತದೆ. ಭಾವ ದುರ್ಭಾವ ವಾದದ್ದಕ್ಕೆ.

ತನು ಮನ ಅರಿವಿಗೆ ಮೀಸಲಾಗದಿದ್ದರೆ, ತನುವಿನ ಭಾವ ಒಮ್ಮೆ ಅರಳುತ್ತದೆ ಮತ್ತೊಮ್ಮೆ ಕೆರಳುತ್ತದೆ. ಅರಿವಿನಲ್ಲಿ ಲೀನವಾಗಿ ಅರಿವಿನ ಅಚ್ಚಾಗದ ನಿಮಿತ್ಯ ಭಾವ ದುರ್ಭಾವವಾಗುತ್ತದೆ.

**ಅಚ್ಚುಗನ ಸ್ನೇಹ, ನಿಚ್ಚಟದ ಮೆಚ್ಚುಗೆ, ಬೆಚ್ಚು ಬೇರಾಗದ ಭಾವವಾಗೆ ಚೆನ್ನಮಲ್ಲಿಕಾರ್ಜುನಯ್ಯಾ ಒಳಗೆ ಗಟ್ಟಿಗೊಂಡಿಪ್ಪನವ್ವಾ :**

ಆಚ್ಚುಗನ ಸ್ನೇಹ, ನಿಚ್ಚಟದ ಮೆಚ್ಚುಗೆ ಎಂದು ಅಕ್ಕ ಹೇಳಿದರೆ,ರತ್ನ ಮೌಕ್ತಿಕದಚ್ಚು ಕೂಡಲ ಸಂಗಮದೇವಾ ನಿಮ್ಮ ಶರಣರು ಎಂದು ಬಸವಣ್ಣ ಹೇಳಿದ್ದಾರೆ. ಶರಣ, ಸಂತರ ಮಾತುಗಳೆಲ್ಲ ಒಂದೇ. ಜಗದ ತನುಗಳು ಸುಖ ದುಃಖಗಳನ್ನು ಕಳೆದು ಕೊಂಡು ಸದಾ ಸುಖದ ಸುಖಿಯಾಗಿ ಬದುಕಬೇಕೆಂಬುದೇ ಅವರ ಇಚ್ಛೆ. ಈ ಸದಿಚ್ಛೆಯಿಂದಲೇ ಅಕ್ಕ ತನ್ನ ವಚನದ ಐದು ಸಾಲುಗಳ ತುಂಬಾ ಅರಿವಿನ ಸರಳ ತಂತ್ರಗಾರಿಕೆಯನ್ನೇ ಹೆಣೆದಿದ್ದಾಳೆ.

ತನುಗಳೆಲ್ಲ ಅರಿವಿನ ತನುಗಳೇ ! ತನುವಿನಲ್ಲಿರುವ ಅರಿವನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆಂಬ ತಂತ್ರಗಾರಿಕೆ ಹೊಳೆಯುತ್ತಿಲ್ಲ. ಕ್ರಿಷ್ಣ ಕ್ರಿಸ್ತ ಬುದ್ಧ ಮಹಾವೀರ  ಬಸವಾದಿ

ಶರಣರು ದಾಸವರೇಣ್ಯರು ತತ್ವಪದಕಾರರು ಇದರಲ್ಲಿ ನಿಪುಣರು. ತನುವಿನಲ್ಲಿರುವ ಅರಿವನ್ನು ಹೇಗೆ ಬಳಕೆ ಮಾಡಿಕೊಳ್ಳ ಬೇಕೆಂಬುದನ್ನೇ ಹೇಳಿದರು. ಆದರೆ ಜನ ಅವರನ್ನು ಪೂಜಿಸಿದರು. ತನುವಿನಲ್ಲಿರುವ ಅರಿವನ್ನು ಪೂಜಿಸಿಕೊಳ್ಳಲಿಲ್ಲ. ಆ ಆರಿವೇ ತಾನಾಗಿ ಅರು ತನುಗಳಾಗಲಿಲ್ಲ. ಶ್ರೀ ಕ್ರಿಷ್ಣನ ಅನುಯಾಯಿಗಳು ಕ್ರಿಸ್ತನನ್ನು ನಿಂದಿಸಿದರು. ಕ್ರಿಸ್ತನ ಅನುಯಾಯಿಗಳು ಜಗದ ಸಂತರನ್ನು ನಿಂದಿಸಿದರು. ತನ್ನ ಧರ್ಮ ಹೊಗಳಿಕೊಂಡು ಇತರ ಸಂತರನ್ನು ನಿಂದಿಸಿ ನಿಂದಿಸಿ ಪಂಡಿತರು, ಶಾಸ್ತ್ರಿಗಳಾದರು, ತತ್ವಜ್ಞಾನಿಗಳಾದರು. ತತ್ವ, ಶಾಸ್ತ್ರ, ಪಾಂಡಿತ್ಯದ ಉಗಮ ಸ್ಥಾನವನ್ನು ಕಂಡುಕೊಳ್ಳಲಿಲ್ಲ. ಇದರ ಉಗಮ ಸ್ಥಾನ ತನುವೆಂಬುದೇ ತನುವಿಗೆ ಮನಕ್ಕೆ ಪರಿಚಯವಾಗಲಿಲ್ಲ. ಅರಿವೆಂಬುದೇ ತನುವಿನ ಧರ್ಮ ಎಂದು ಹೊಳೆಯಲಿಲ್ಲ.

ತನುವೆಂಬುದು ಅಚ್ಚುಗನ ಮನೆ. ಹೇಗೆ ಜಲ ಗಟ್ಟಿಗೊಂಡು ರತ್ನ (ಮೌಕ್ತಿಕ) ಮುತ್ತು ಆಗಿದೆಯೋ ಹಾಗೆಯೇ ಜಲ ಗಟ್ಟಿಗೊಂಡು ಅರಿವಿನ ಮುತ್ತು ರತ್ನವೆಂಬ ತನುವಾಗಿದೆ. ಆ ಜಲಬಿಂದುವಿನಲ್ಲಿ ಅಚ್ಚುಗ ಕಪಟವಿಲ್ಲದ ಸ್ನೇಹದಿಂದ ಬೆರೆತು ಮೆಚ್ಚುಗೆಯಿಂದ ತನು ರೂಪದಲ್ಲಿ ಅಚ್ಚು ಮಾಡಿಕೊಂಡಿದ್ದಾನೆ. ಮನದೊಂದಿಗೆ ಸುತ್ತಾಡುವ ತನುವಿನ ಭಾವ ಮತ್ತು ಭಾವದ ದುರ್ಭಾವಗಳೆರಡನ್ನು ಕಳೆದು ನಿರ್ಭಾವ ಮಾಡಿದ್ದಾನೆ. ಚೆನ್ನಮಲ್ಲಿಕಾರ್ಜುನನೆಂಬ ನಾಮದೊಂದಿಗೆ ತನುವಿನಲ್ಲಿ ಗಟ್ಟಿಗೊಂಡಿದ್ದಾನೆ.

ಅಕ್ಕ ಮಹಾದೇವಿಯ ಈ ಐದು ಸಾಲುಗಳ ವಚನದ ಅರಿವಿನ ತಂತ್ರಗಾರಿಕೆ ತಿಳಿದು ತನುವಿಗೆ ಹೊಳೆದರೆ ಸಾಕು ಆ ತನುಗಳೆಲ್ಲ ಅರಿವಿನ ತನುಗಳು. ಸುಖ ದುಃಖದಿಂದ ಹೊರತಾಗಿ ಸದಾ ಸುಖಿಸುವ ತನುಗಳು. ಆದರೆ ಅಚ್ಚುಗ ಮಹಾ ಗಾರುಡಿಗ ತನುವಿನಲ್ಲಿ ತಾನೇ ಬೆರೆತು ತನ್ನನ್ನು ತಿಳಿಯದಂತೆ ಮಾಡಿದ್ದಾನೆ. ಆದರೆ ಅಕ್ಕನ ಈ ತಂತ್ರಗಾಗರಿಕೆಯ ಅಪ್ಪುಗೆಯಲ್ಲಿ ಮೈಮರೆತು ಮಲಗಿದ್ದಾನೆ. ಗಾರುಡಿಗ ಅಕ್ಕನನ್ನು ಹಿಡಿಯಲಿಲ್ಲ; ಆ ಗಾರುಡಿಗನನ್ನು ಅಕ್ಕ ಹಿಡಿದು ತನ್ನಂತೆ ಮಾಡಿಕೊಂಡಿದ್ದಾಳೆ. ಆ ಗಾರುಡಿಗನೇ ತಾನಾಗಿದ್ದಾಳೆ.

□

---

**ಅರಿವಿನ ಪರಿಮಳ**

- □ ತನು ಮನಗಳೆರಡು ತನುವಿನ ಅರಿವಿಗೆ ಮೀಸಲಾದಾಗ ತನುವಿನ ಭಾವ ಅರಿವಿನ ಅಚ್ಚಾಗುತ್ತದೆ. ಭಾವದಲ್ಲಿ ಏರುಪೇರಾಗುವುದಿಲ್ಲ. ತನು ಮನ ಅರಿವಿಗೆ ಮೀಸಲಾಗದಿದ್ದರೆ ಭಾವ ಒಮ್ಮೆ ಭಾವವಾಗುತ್ತದೆ ಮತ್ತೊಮ್ಮೆ ದುರ್ಭಾವವಾಗುತ್ತದೆ.
- □ ಶರಣ, ಸಂತರ ಮಾತುಗಳೆಲ್ಲ ಒಂದೇ. ಜಗದ ತನುಗಳು ಸುಖ ದುಃಖಗಳನ್ನು ಕಳೆದು ಕೊಂಡು ಸದಾ ಸುಖದ ಸುಖಿಯಾಗಿ ಬದುಕಬೇಕೆಂಬುದೇ ಅವರ ಇಚ್ಛೆ.
- □ ತನುಗಳೆಲ್ಲ ಅರಿವಿನ ತನುಗಳೇ ! ತನುವಿನಲ್ಲಿರುವ ಅರಿವನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆಂಬ ತಂತ್ರಗಾರಿಕೆ ಹೊಳೆಯುತ್ತಿಲ್ಲ. ಕ್ರಿಷ್ಣ ಕ್ರಿಸ್ತ ಬುದ್ಧ ಮಹಾವೀರ ಬಸವಾದಿ ಶರಣರು ದಾಸವರೇಣ್ಯರು ತತ್ವಪದಕಾರರು ಇದರಲ್ಲಿ ನಿಪುಣರು. ತನುವಿನಲ್ಲಿರುವ ಅರಿವನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆಂಬುದನ್ನೇ ಹೇಳಿದರು. ಆದರೆ ಜನ ಅವರನ್ನು ಪೂಜಿಸಿದರು. ತನುವಿನಲ್ಲಿರುವ ಅರಿವನ್ನು ಪೂಜಿಸಿಕೊಳ್ಳಲಿಲ್ಲ.
- □ ತನುವೆಂಬುದು ಅಚ್ಚುಗನ ಮನೆ. ಹೇಗೆ ಜಲ ಗಟ್ಟಿಗೊಂಡು ರತ್ನ (ಮೌಕ್ತಿಕ) ಮುತ್ತು ಆಗಿದೆಯೋ ಹಾಗೆಯೇ ಜಲ ಗಟ್ಟಿಗೊಂಡು ಅರಿವಿನ ಮುತ್ತು ರತ್ನವೆಂಬ ತನುವಾಗಿದೆ. ಆ ಜಲಬಿಂದುವಿನಲ್ಲಿ ಅಚ್ಚುಗ ಕಪಟವಿಲ್ಲದ ಸ್ನೇಹದಿಂದ ಬೆರೆತು ಮೆಚ್ಚುಗೆಯಿಂದ ತನು ರೂಪದಲ್ಲಿ ಅಚ್ಚು ಮಾಡಿಕೊಂಡಿದ್ದಾನೆ. ಮನದೊಂದಿಗೆ ಸುತ್ತಾಡುವ ತನುವಿನ ಭಾವ ಮತ್ತು ಭಾವದ ದುರ್ಭಾವಗಳೆರಡನ್ನು ಕಳೆದು ನಿರ್ಭಾವ ಮಾಡಿದ್ದಾನೆ.

# ಭಾವಿಸಿದಡೆ ದಕ್ಕದ ಬಯಲ ಸುಖ

**ತನುವನೆಲ್ಲವ ಜರಿದು ಮನವ ನಿಮ್ಮೊಳಗಿರಿಸಿ**
**ಘನ ಸುಖದಲೋಲಾಡುವ ಪರಿಯ ತೋರಯ್ಯಾ ಎನಗೆ**
**ಭಾವವಿಲ್ಲದ ಬಯಲಸುಖವು ಭಾವಿಸಿದಡೆಂತಹುದು**
**ಬಹುಮುಖರುಗಳಿಗೆ ?**
**ಕೇಳಯ್ಯಾ ಶ್ರೀಶೈಲ ಚೆನ್ನಮಲ್ಲಿಕಾರ್ಜುನದೇವಾ**
**ನಾನಳಿದು ನೀನುಳಿದ ಪರಿಯ ತೋರಯ್ಯಾ ಪ್ರಭುವೆ.**

ಅರಿವು ಪ್ರಧಾನವಾದರೆ ತನು ಬಲು ಶ್ರೇಷ್ಠ. ಆ ತನುವಿಗೆ ಕಾಣುವುದೆಲ್ಲ ಸ್ವಸ್ವರೂಪ ಸುಖವೇ. ಕೇಳುವುದೆಲ್ಲ ಬ್ರಹ್ಮವೇ. ವಾಸಿಸಿ ರುಚಿಸಿ ಸ್ಪರ್ಶಿಸುವುದೆಲ್ಲ ಆನಂದವೇ. ಅರಿವು ಮರೆಯಾಗಿ ಮನವೇ ಪ್ರಧಾನವಾದುದರಿಂದ ತನು ಮನದ ಆಡಳಿತಕ್ಕೆ ಒಳಪಟ್ಟಿದೆ. ಈ ತನುವಿಗೆ ಕಾಣುವುದೆಲ್ಲ ನರಕ. ಕೇಳುವುದೆಲ್ಲ ಕರ್ಕಶ. ವಾಸಿಸಿ ಸ್ಪರ್ಶಿಸುವುದೆಲ್ಲ ಅಸಹ್ಯ. ರುಚಿಸಿ ಪ್ರಸಾದವಾಗಬೇಕಾದ ಪದಾರ್ಥವೆಲ್ಲ ರುಚಿಸುವಾಗಲೇ ನಾಲಿಗೆಗೆ ನರಕವಾಗುತ್ತದೆ. ಅರಿವು ಬಳಕೆಯಾಗದ ನಿಮಿತ್ತ ತನು ತನ್ನಂತೆಯೇ ಇರುವ ತನುಗಳನ್ನು ನಿಂದಿಸುತ್ತದೆ ; ನಿಂದನೆಗೆ ಗುರಿಯಾಗಿ ಸಂಕಟ ಪಡುತ್ತದೆ.

**ತನುವನೆಲ್ಲವ ಜರಿದು ಮನವ ನಿಮ್ಮೊಳಗಿರಿಸಿ, ಘನಸುಖದಲೋಲಾಡುವ ಪರಿಯ ತೋರಯ್ಯಾ ಎನಗೆ :**

ಮನದ ಆಡಳಿತಕ್ಕೆ ತೆಗೆದುಕೊಂಡ ತನುವನ್ನು ಜರಿದು, ಆ ತನುವಿನ ಅರಿವಿನಲ್ಲಿ ಮನವನಿರಿಸಿದರೆ ಮನ ಘನಮನವಾಗಿ ಘನತನುವಾಗುವುದು. ಆ ತನುವಿನಿಂದ ನೋಡಿದುದೆಲ್ಲ ಕಣ್ಣಿಗೆ ಪ್ರಸಾದ. ಕೇಳಿದುದೆಲ್ಲ ಕಿವಿಗೆ ಪ್ರಸಾದ. ವಾಸಿಸಿದುದೆಲ್ಲ ಮೂಗಿಗೆ ಪ್ರಸಾದ. ರುಚಿಸಿದುದೆಲ್ಲ ನಾಲಿಗೆಗೆ ಪ್ರಸಾದ. ಸ್ಪರ್ಶಿಸಿದುದೆಲ್ಲ ಚರ್ಮಕ್ಕೆ ಪ್ರಸಾದವಾಗಿ ತನು ಸದಾ ಘನಸುಖದಲ್ಲಿ ವಿರಮಿಸುತ್ತದೆ.

**ಭಾವವಿಲ್ಲದ ಬಯಲ ಸುಖವು ಭಾವಿಸಿದಡೆಂತಹುದು ಬಹು ಮುಖರುಗಳಿಗೆ :**

ಪ್ರಕೃತಿ ಪಂಚಭೂತಗಳಿಂದ ಕೂಡಿದೆ. ತನು ಕೂಡಾ ಪಂಚಭೂತಗಳಿಂದ ಕೂಡಿದೆ. ಪ್ರಕೃತಿಗೆ ಮನವೆಂಬುದಿಲ್ಲ. ಅದು ಬಲು ಸಹಜ. ಅದಕ್ಕಾಗಿಯೇ ಸದಾ ಸುಂದರವಾಗಿ ಕಾಣುತ್ತದೆ. ತನುವಿನಲ್ಲಿ ಅರಿವಿದೆ. ಆ ಅರಿವಿನ ಬೆಳಕಿನಿಂದ ಮನವೆಂಬ ನೆರಳು ಸೃಷ್ಟಿಯಾಗಿ ತನುವನ್ನು ಆವರಿಸಿದೆ. ಮನ ಆವರಿಸಿದ ತನು ಹೆಣ್ಣು ಗಂಡು ಶ್ರೀಮಂತ ಬಡವ ಅಧಿಕಾರಿ ರಾಜಕಾರಣಿ ಮಠಾಧಿಪತಿ ಪೀಠಾಧಿಪತಿ ಜಗದ್ಗುರು ಜಾತಿ ಮತ ಪಂಥ ವೇಶ್ಯೆ ವಿಟ ಕಳ್ಳ ಪ್ರಾಮಾಣಿಕ ಭಿಕ್ಷುಕನೆಂಬ ಬಹು ಮುಖಗಳಿಂದ ಪರಿಚಯಿಸಿಕೊಂಡಿದೆ. ಅದಕ್ಕಾಗಿಯೇ ತನು ಅಸಹಜ. ಹೀಗೆ ಕರೆಯಲ್ಪಡುವ ತನುಗಳೆಲ್ಲ ಒಂದೇ. ಆದರೂ ಆಯಾ ಹೆಸರಿನಿಂದ ಕರೆಯಲ್ಪಡುವ ತನುವಿನ ಭಾವ ಒಮ್ಮೆ ಅರಳುತ್ತದೆ ಮತ್ತೊಮ್ಮೆ ಕೆರಳಿ ದುರ್ಭಾವವಾಗುತ್ತದೆ. ಹೀಗೆ ಕ್ಷಣ ಕ್ಷಣಕ್ಕೊಮ್ಮೆ ಬಹುಮುಖ ತಾಳುವ ಭಾವದಿಂದ ಬಯಸಿದಡೆ ಬಯಲ ಸುಖ ದಕ್ಕೀತೆ ?

ಭಾವವಿಲ್ಲದ ನಿರ್ಭಾವಿ ಬಯಲ ಸುಖವು ಕೇವಲ ಭಾವಿಸಿದಡೆ ಮಾತ್ರ ದಕ್ಕುವುದಿಲ್ಲ. ಒಮ್ಮೆ ಭಾವವಾಗುವ ಮತ್ತೊಮ್ಮೆ ದುರ್ಭಾವವಾಗುವ ಭಾವ ನಿರ್ಭಾವವಾಗಬೇಕು. ಬಯಲಿನಂತೆ ಸಹಜವಾಗಬೇಕು ಅಂದಾಗ ಮಾತ್ರ ತನು ಭಾವವಿಲ್ಲದ ಬಯಲ ಘನ ಸುಖದಲ್ಲಿ ಸದಾ ಓಲಾಡುತ್ತದೆ.

**ಕೇಳಯ್ಯಾ ಶ್ರೀಶೈಲ ಚೆನ್ನಮಲ್ಲಿಕಾರ್ಜುನ ದೇವಾ ನಾನಳಿದು ನೀನುಳಿದ ಪರಿಯ ತೋರಯ್ಯಾ ಪ್ರಭುವೇ :**

ತನುವೇ ಶ್ರೀಶೈಲ, ಅದು ಅರಿವೆಂಬ ಚೆನ್ನಮಲ್ಲಿಕಾರ್ಜುನನ ವಾಸಸ್ಥಾನ. ಈತ ಮನವನ್ನು ಹಿಡಿದು ನಿಲ್ಲಿಸುವುದಿಲ್ಲ. ಮನಕ್ಕೆ ಸಂಬಂಧಿಸಿದ ಭಾವವನ್ನು ಅರಳಿಸುವುದಿಲ್ಲ. ಮನವೆಂಬುದೇ ನಾನು. ಈ ನಾನು ಎಂಬ ಅಹಂಕಾರ ಅಳಿಯ ಬೇಕಾದರೆ ಅವನಿ(ಚೆನ್ನಮಲ್ಲಿಕಾರ್ಜುನ)ದ್ದಲ್ಲಿಗೆ ನಾನು ಹೋಗಬೇಕು. ಅವನಲ್ಲಿ ನಾನಳಿದು ಅವನೇ ನಾನಾಗಬೇಕು. ಆ ಅರಿವೇ ನಾನಾಗಬೇಕು. ಆ ಅರಿವಿನ ಸುಖದಲಿ ಮಿಂದು ಓಲಾಡಬೇಕು ಎಂದಿದ್ದಾಳೆ ಅಕ್ಕಮಹಾದೇವಿ.

□

---

**ಅರಿವಿನ ಪರಿಮಳ**

- □ ಅರಿವು ಪ್ರಧಾನವಾದರೆ ತನು ಬಲು ಶ್ರೇಷ್ಠ. ಆ ತನುವಿಗೆ ಕಾಣುವುದೆಲ್ಲ ಸ್ವಸ್ವರೂಪ ಸುಖವೇ. ಕೇಳುವುದೆಲ್ಲ ಬ್ರಹ್ಮವೇ. ವಾಸಿಸಿ ರುಚಿಸಿ ಸ್ಪರ್ಶಿಸುವುದೆಲ್ಲ ಆನಂದವೇ. ಅರಿವು ಮರೆಯಾಗಿ ಮನವೇ ಪ್ರಧಾನವಾದುದರಿಂದ ತನು ಮನದ ಆಡಳಿತಕ್ಕೆ ಒಳಪಟ್ಟಿದೆ.
- □ ಪ್ರಕೃತಿಗೆ ಮನವೆಂಬುದಿಲ್ಲ. ಅದು ಬಲು ಸಹಜ. ಅದಕ್ಕಾಗಿಯೇ ಸದಾ ಸುಂದರವಾಗಿ ಕಾಣುತ್ತದೆ.

# ತಿಳಿದರೆ ವಿಶ್ವ ತನು

**ತನುವಿಡಿದ ಇಂದ್ರಿಯ ಸುಖ**
**ಸಿರಿಯಂತೆ ತೋರಿ ಅಡಗುತ್ತಲಿದೆ.**
**ಗಗನ ದೊಡ್ಡಣೆಯಂತೆ ತನು;**
**ನೋಡ ನೋಡಲನುಮಾನವಿಲ್ಲದೆ ಹರಿದು ಹೋಗುತ್ತದೆ .**
**ಇವಾದಿಯ ಮಾಣಿಸಿ, ನಿಮ್ಮ ಘನ ನೆನಹಿನೊಳಿರಿಸಾ**
**ಚೆನ್ನಮಲ್ಲಿಕಾರ್ಜುನಯ್ಯಾ**

**ತನುವಿಡಿದ ಇಂದ್ರಿಯ ಸುಖ ಸಿರಿಯಂತೆ ತೋರಿ ಅಡಗುತ್ತಲಿದೆ :**

ತನುವಿನ ರಚನೆಯೇ ವಿಚಿತ್ರ. ತನುವಿನಲ್ಲಿ ಜ್ಞಾನ ಭರಿತವಾಗಿದೆ. ತನುವಿನ ಐದು ಬ್ರಾಂಚ್‌ಗಳ ಮೂಲಕ ಪಸರಿಸಿದೆ. ಒಂದೊಂದು ಶಾಖೆಯೂ ಅದ್ಭುತ. ವಿಶ್ವ ವಿದ್ಯಾಲಯವಿದ್ದಂತೆ. ಅಷ್ಟೇಕೆ ಅದರ ವಿಸ್ತಾರ ಜಗದಗಲ ಮುಗಿಲಗಲ !

**ಕಣ್ಣು :** ಇದು ಒಂದು ತನುವಿನ ಇಂದ್ರಿಯ. ತನುವಿನಿಂದಲೇ ಜನ್ಮ ತಳೆದು ತನುವಿಡಿದು ನಿಂತಿದೆ. ತನು ತನ್ನ ಸಕಲ ಜ್ಞಾನವನ್ನು ಕಣ್ಣಿನಲ್ಲಿ ತುಂಬಿದೆ. ಆ ಜ್ಞಾನದಿಂದ ಕಣ್ಣು ನೋಡಿದರೆ ತನುವಿಗೆ ಆನಂದ. ತನು ಸಂಕಟಗೊಳ್ಳುವುದಿಲ್ಲ. ಕಣ್ಣು ನೋಡಿದತ್ತ ತನು ಚಲಿಸುವುದಿಲ್ಲ. ಕಣ್ಣು ನೋಡಿದ ವಸ್ತುವನ್ನು ತನು ಪಡೆಯುವುದಿಲ್ಲ. ತನುವಿನ ಜ್ಞಾನದಿಂದ ಕಣ್ಣು ನೋಡುತ್ತದೆ; ನೋಡಿದ್ದನ್ನೇ ತನುವಿಗೆ ರವಾನೆ ಮಾಡುತ್ತದೆ. ತನ್ನ ಜ್ಞಾನ ಕಣ್ಣಿನ ಮೂಲಕ ತಾನೇ ಅನುಭವಿಸಿ ವಿಚಲಿತನಾಗದೆ ಆನಂದ ಪಡುತ್ತದೆ.

ಆದರೆ ಕಣ್ಣಿನಲ್ಲಿ ಮನ ಬೆರೆತು ಅಜ್ಞಾನವಾಗಿ ಮಾರ್ಪಟ್ಟಿದೆ. ವಸ್ತುವನ್ನು ಅಜ್ಞಾನದಿಂದ ನೋಡುತ್ತದೆ. ಅದು ಸಿರಿ ಸಂಪತ್ತಾಗಿ ಕಾಣುತ್ತದೆ. ವಸ್ತುವಿನ ಸಿರಿಯನ್ನು ತನುವಿನ ಮೇಲೆ ಚೆಲ್ಲುತ್ತದೆ. ಕಣ್ಣು ನೋಡಿದ ವಸ್ತುವನ್ನು ತನುವಿನ ಮೂಲಕ ಪಡೆದು ಭೋಗಿಸುತ್ತದೆ. ಕಣ್ಣು ಅಜ್ಞಾನದ ಪಟ್ಟವನ್ನು ತನುವಿಗೆ ಕಟ್ಟುತ್ತದೆ.

ತನುವಿನ ಕಣ್ಣು ಎನ್ನುವ ಇಂದ್ರಿಯ ತನ್ನ ಅಜ್ಞಾನದ ಸುಖವನ್ನು ತನುವಿನೊಂದಿಗೆ ತನುವನ್ನು ಹಿಡಿದು ಭೋಗಿಸಿತು. ಭೋಗಿಸುವಾಗ ವಸ್ತು ಸಿರಿಯಂತೆ ತೋರಿತು. ವಸ್ತುವಿನ ಮೂಲ ತಿಳಿದಾಗ ಅಡಗಿತು.

**ಗಗನದೊಡ್ಡಣೆಯಂತೆ ತನು; ನೋಡ ನೋಡಲನುಮಾನವಿಲ್ಲದೆ ಹರಿದು ಹೋಗುತ್ತದೆ:**

ಅಕ್ಕ ಮಹಾದೇವಿ ಸುಂದರವಾದ ಉಪಮೆ ಕೊಟ್ಟು ತನುವಿನ ಜ್ಞಾನವನ್ನು ತನುವಿಗೆ ಪರಿಚಯಿಸಿದ್ದಾಳೆ. ಗಗನ ಚಲಿಸುವುದಿಲ್ಲ. ಮೋಡ ಚಲಿಸುತ್ತದೆ. ಚಲಿಸುವ ಮೋಡ ಗಗನವನ್ನು ತಾನು ಚಲಿಸಿದತ್ತ ಕರೆದೊಯ್ಯುವುದಿಲ್ಲ. ಚಲಿಸುವುದು ಮೋಡದ ನಿಯಮ. ತಾನು ಚಲಿಸಿದಲ್ಲೆಲ್ಲಾ ಗಗನವೇ ಇದೆ. ಗಗನ ಬಿಟ್ಟು ಚಲಿಸುವ ಮೋಡವಿಲ್ಲ. ಗಗನಕ್ಕೂ ಮೋಡಕ್ಕೂ ಅವಿನಾಭಾವ ಸಂಬಂಧ, ಗಗನ ಜಗದ ಗಲ ಮುಗಿಲಗಲ. ಮೋಡ ಹರಿದರೇನಂತೆ ಗಗನದ

ಕಕ್ಷೆಯಲ್ಲಿಯೇ ಮೋಡ.

ಗಗನ ತನ್ನ ಮೋಡಿಯಿಂದಲೇ ಮೋಡವನ್ನು ಜಲ ಮಾಡುತ್ತಾ ಆ ಜಲ ಬಿಂದುವೇ ಗಗನ ಸಾದೃಶ್ಯವಾದ ತನುವಿಗೆ ಜನ್ಮ ನೀಡುತ್ತದೆ. ಆ ತನುವಿನಲ್ಲಿ ಮೋಡದಂತೆ ಚಲಿಸುವ ಮನ ಸೃಷ್ಠಿಯಾಗಿದೆ. ನೋಡ ನೋಡುತ್ತಿದ್ದಂತೆಯೇ ಅನುಮಾನ ವಿಲ್ಲದಂತೆ ಹರಿದು ಹೋಗುತ್ತದೆ.

**ಇವಾದಿಯ ಮಾಣಿಸಿ, ನಿಮ್ಮ ಘನ ನೆನಹಿನೊಳಿರಿಸಾ ಚೆನ್ನಮಲ್ಲಿಕಾರ್ಜುನಯ್ಯಾ :**

ಗಗನವೆಂಬ ಘನದಲ್ಲಿ ಹುಟ್ಟಿದ ಮೋಡ ಗಗನದಲ್ಲಿಯೇ ಚಲಿಸುತ್ತದೆ. ಜಲವಾಗಿ ನೆಲಕ್ಕೆ ಬಿದ್ದು ನೆಲ ಹಾಗೂ ಜಲಚರಗಳಿಗೆ ಇಂಬಾಗಿದೆ. ಮತ್ತೆ ಮೋಡವಾಗಿ ಗಗನದಲ್ಲಿ ಓಲಾಡುತ್ತದೆ.

ಗಗನ ಸಾದೃಶ್ಯವಾದ ತನು! ಗಗನದಿಂದಲೇ ಮೋಡ ಹುಟ್ಟಿದೆ. ತನುವಿನಿಂದಲೇ ಮನ ಹುಟ್ಟಿದೆ. ಮೋಡ ಗಗನವನ್ನು ಬಾಧಿಸುವುದಿಲ್ಲ. ಆದರೆ ಮನ ತನುವನ್ನು ಬಾಧಿಸುತ್ತದೆ. ಮನ ತಿಳಿದರೆ ತನುವಿನ ಕಕ್ಷೆಯಲ್ಲಿಯೇ ಮನವಿರುತ್ತದೆ. ಅದರ ಜನನವೂ ತನುವಿನಲ್ಲಿಯೇ. ಮೋಡದಿಂದಲೇ ನೆಲ ಜಲ ಸಕಲವೂ ಹೇಗೆ ಸೃಷ್ಟಿಯಾಗಿದೆಯೋ ಹಾಗೆಯೇ ಮನದಿಂದಲೇ ಸಕಲ ವಸ್ತುಗಳು ಪದಾರ್ಥಗಳು ಸೃಷ್ಟಿಯಾಗಿವೆ. ಮೋಡ ಸೃಷ್ಟಿಸಿದ ಪದಾರ್ಥಗಳನ್ನು ಮೋಡ ಮುಟ್ಟುವುದಿಲ್ಲ. ತನುವಿನ ಜ್ಞಾನ ಇಂದ್ರಿಯಗಳಿಗೆ ಬಳಕೆಯಾದರೆ ತನು ವಸ್ತುಗಳನ್ನು ಮುಟ್ಟುವುದಿಲ್ಲ. ಕಣ್ಣು ನೋಡಿ ಆನಂದ ಪಡುತ್ತದೆ. ಕಿವಿ ಕೇಳಿ ಆನಂದ ಪಡುತ್ತದೆ. ಮೂಗು ವಾಸಿಸಿ,ನಾಲಿಗೆ ರುಚಿಸಿ, ಚರ್ಮ ಸ್ಪರ್ಶಿಸಿ ಆನಂದ ಪಡುತ್ತದೆ. ತನು ಚೆನ್ನಮಲ್ಲಿಕಾರ್ಜುನಯ್ಯನೆಂಬ ಗಗನ ಸಾದೃಶ್ಯವಾದ ಘನದೊಡೆಯನ ಅರಿವಿನ ಸೊತ್ತು. ಇಂದ್ರಿಯಗಳ ಹುಟ್ಟು ಕೂಡಾ ತನುವಿನಿಂದಲೇ. ಹೀಗಾಗಿ ಇಂದ್ರಿಯಗಳು ನೋಡುತ್ತವೆ, ಕೇಳುತ್ತವೆ, ಮುಟ್ಟುತ್ತವೆ, ವಾಸಿಸುತ್ತವೆ. ಬೇಡುವುದಿಲ್ಲ! ಬೇಕು ಎನ್ನುವ ಭಾವ ತನುವಿಗೆ ಬರುವುದೇ ಇಲ್ಲ.

ಅಕ್ಕ ಮಹಾದೇವಿಯ ಈ ಶಿಕ್ಷಣ ಜಾರಿಗೆ ಬಂದರೆ ಜಗದ ತನುಗಳಿಗೆಲ್ಲ ಸುಖವೇ ಸುಖ. ಹೆಣ್ಣಿಲ್ಲ ಗಂಡಿಲ್ಲ,ಜಾತಿ,ಮತ ಪಂಥಗಳು ಮೊದಲೇ ಇಲ್ಲ. ತನುಗಳು ಬರೀ ತನುಗಳಾಗಿ ಉಳಿಯುವುದಿಲ್ಲ ವಿಶ್ವ ತನುಗಳಾಗಿ ಗೋಚರಿಸುತ್ತವೆ.

□

**ಅರಿವಿನ ಪರಿಮಳ**

- ಗಗನ ಚಲಿಸುವುದಿಲ್ಲ. ಮೋಡ ಚಲಿಸುತ್ತದೆ. ಚಲಿಸುವ ಮೋಡ ಗಗನವನ್ನು ತಾನು ಚಲಿಸಿದತ್ತ ಕರೆದೊಯ್ಯುವುದಿಲ್ಲ. ಚಲಿಸುವುದು ಮೋಡದ ನಿಯಮ. ತಾನು ಚಲಿಸಿದಲ್ಲೆಲ್ಲಾ ಗಗನವೇ ಇದೆ. ಗಗನ ಬಿಟ್ಟು ಚಲಿಸುವ ಮೋಡವಿಲ್ಲ. ಗಗನಕ್ಕೂ ಮೋಡಕ್ಕೂ ಅವಿನಾಭಾವ ಸಂಬಂಧ, ಗಗನ ಜಗದಗಲ ಮುಗಿಲಗಲ. ಮೋಡ ಹರಿದರೇನಂತೆ ಗಗನದ ಕಕ್ಷೆಯಲ್ಲಿಯೇ ಮೋಡ.
- ಗಗನ ತನ್ನ ಮೋಡಿಯಿಂದಲೇ ಮೋಡವನ್ನು ಜಲ ಮಾಡುತ್ತಾ ಆ ಜಲ ಬಿಂದುವೇ ಗಗನ ಸಾದೃಶ್ಯವಾದ ತನುವಿಗೆ ಜನ್ಮ ನೀಡುತ್ತದೆ. ಆ ತನುವಿನಲ್ಲಿ ಮೋಡದಂತೆ ಚಲಿಸುವ ಮನ ಸೃಷ್ಠಿಯಾಗಿದೆ. ನೋಡ ನೋಡುತ್ತಿದ್ದಂತೆಯೇ ಅನುಮಾನವಿಲ್ಲದಂತೆ ಹರಿದುಹೋಗುತ್ತದೆ.

# ಭಕ್ತಿಯ ಮಾರಿಕೊಂಡುಂಬುವ ಗುರು

ತನ್ನ ಶಿಷ್ಯ ತನ್ನ ಮಗನೆಂಬುದು ತಪ್ಪದಲಾ.
ಏಕೆ? ಆತನ ಧನಕ್ಕೆ ತಂದೆಯಾದನಲ್ಲದೆ
ಆತನ ಮನಕ್ಕೆ ತಂದೆಯಾದನೆ?
ಏಕೆ? ಆತನ ಮನವನರಿಯನಾಗಿ , ಆತನ ಧನಕ್ಕೆ ತಂದೆಯಾದನು.
ತನ್ನಲ್ಲಿರ್ದ ಭಕ್ತಿಯ ಮಾರಿಕೊಂಡುಂಬವರು
ನಿಮ್ಮ ನಿಜಭಕ್ತರಲ್ಲವಯ್ಯಾ ಚೆನ್ನಮಲ್ಲಿಕಾರ್ಜುನಾ.

**ತನ್ನ ಶಿಷ್ಯ ತನ್ನ ಮಗನೆಂಬುದು ತಪ್ಪದಲಾ. ಏಕೆ? ಆತನ ಧನಕ್ಕೆ ತಂದೆಯಾದನಲ್ಲದೆ ಆತನ ಮನಕ್ಕೆ ತಂದೆಯಾದನೆ? :**

ಶಿಷ್ಯನಿಗೆ ಮಗನೆಂದು ಗುರುವಿಗೆ ತಂದೆ ಎಂದು ಕರೆಯುವ ಸಂಪ್ರದಾಯ ಭಾರತದಲ್ಲಿ ರೂಢಿಯಲ್ಲಿದೆ. ಗುರುವಾದಾತ ಶಿಷ್ಯನ ಅಜ್ಞಾನ ಕಳೆದು ಗುರುವನ್ನಾಗಿಸುತ್ತಾನೆ. ತನ್ನಂತೆ ಮಾಡಿಕೊಳ್ಳುತ್ತಾನೆ. ಬೆಂಕಿಯಲ್ಲಿ ಬಿದ್ದ ಪದಾರ್ಥಗಳೆಲ್ಲ ಬೆಂಕಿಯಾದಂತೆ. ಇದು ಗುರುವಿನ ಕರ್ತವ್ಯ.

ಗುರುವಿನಂತೆ ವೇಷ ಹಾಕಿದವ ಶಿಷ್ಯನೊಂದಿಗೆ ಮಗನೆಂದು ವ್ಯವಹಾರ ಮಾಡುತ್ತಾನೆ. ಈ ಗುರು ಗುರುವಲ್ಲ. ವೇಷದ ಗುರುವು. ವ್ಯವಹಾರದ ಗುರುವು. ಈತ ಶಿಷ್ಯನ ಅಜ್ಞಾನ ಕಳೆಯುವದಿಲ್ಲ. ಬದಲಾಗಿ ಶಿಷ್ಯ ಕೊಡುವ ಹಣಕ್ಕೆ ಕೈ ಚಾಚುತ್ತಾನೆ.

ಜ್ಞಾನ ಕೇಳಲು ತವಕದಿಂದ ಬಂದ ಶಿಷ್ಯನನ್ನು ಗುರುವಾದಾತ ಮೈದಡವಿ ಶಿಷ್ಯನಲ್ಲಿ ಆವರಿಸಿದಂತಹ ಅಜ್ಞಾನ ಕಳೆದು, ಆತನಲ್ಲಿರುವ ಜ್ಞಾನ ತೋರಿಸಿ ತನ್ನಂತೆ ಮಾಡಿಕೊಳ್ಳುವುದು ಗುರುವಿನ ಕರ್ತವ್ಯ. ಆದರೆ ವ್ಯವಹಾರದ ಗುರುವು ಶಿಷ್ಯನ ಹಣಕ್ಕೆ ತಂದೆಯಾದನಲ್ಲದೆ ಶಿಷ್ಯನ ಮನಕ್ಕೆ ತಂದೆಯಾಗಲಿಲ್ಲ, ಶಿಷ್ಯನಿಗೆ ಗುರುವಾಗಲಿಲ್ಲ.

**ಏಕೆ? ಆತನ ಮನವನರಿಯನಾಗಿ , ಆತನ ಧನಕ್ಕೆ ತಂದೆಯಾದನು:**

ವೇಷದ ಗುರುವಿಗೆ ಶಿಷ್ಯನ ಮನ ಕಾಣುವುದಿಲ್ಲ. ಆತನ ಅರಿವೂ ಕಾಣುವುದಿಲ್ಲ. ತನುವಿನ ಅಜ್ಞಾನಕ್ಕೆ ಮನವೇ ಕಾರಣ. ಆ ಮನವನ್ನು ತನುವಿನ ಅರಿವಿನತ್ತ ಕೊಂಡೊಯ್ಯುವ ಕಲೆ ಗುರುವಿಗೆ ತಿಳಿದಿರುವುದಿಲ್ಲ. ಆ ಗುರುವಿಗೆ ಗುರು ಬೋಧಿಸಿರುವುದಿಲ್ಲ. ಬೋಧಿಸಿದರೂ ಈತನಿಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಮೋಜಿಗಾಗಿ ತನುವಿನ ಸುಖಕ್ಕಾಗಿ, ವ್ಯವಹಾರಕ್ಕಾಗಿ ಗುರು ವೇಷ ಧರಿಸಿ ಶಿಷ್ಯರಿಗೆ ಬೋಧಿಸಲು ಅಣಿಯಾಗಿರುತ್ತಾನೆ. ಈತ ಶಿಷ್ಯರಿಂದ ಹಣ ಪಡೆದು ಶಾಲಾ ಕಾಲೇಜುಗಳನ್ನು ಪ್ರಸಾದನಿಲಯಗಳನ್ನು ನಿರ್ಮಿಸಬಲ್ಲನೇ ಹೊರತು ಶಿಷ್ಯನನ್ನು ಜ್ಞಾನಿಯನ್ನಾಗಿಸಲು ಸಾಧ್ಯವಾಗುವುದಿಲ್ಲ. ಬೇಡಲು ಬಂದ ಶಿಷ್ಯನನ್ನೇ ಬೇಡಿ ಗುರು ಭಿಕ್ಷುಕನಾಗುತ್ತಾನೆ. ಆದಕ್ಕಾಗಿಯೇ ಶರಣರು ಬೇಡುವವನಿಗೂ ಬೇಡಿಸಿಕೊಂಬುವವನಿಗೂ ಮುಕ್ತಿ

ಇಲ್ಲ ಎಂದರು.

ಗುರುವಾದವನು ತನ್ನ ಗುರುತನವೆಂಬ ಅಹಂಕಾರವನ್ನು ಕಳೆದುಕೊಳ್ಳಲು ಗುರುವನ್ನು ಹುಡುಕಬೇಕು. ಇದು ಗುರುವಾದವನಿಗೆ ಸಾಧ್ಯವಾಗುವುದೇ ಇಲ್ಲ. ಹೀಗಾಗಿ ವ್ಯವಹಾರದ ಗುರುವಾಗಿಯೇ ಉಳಿಯುತ್ತಾನೆ ಹೊರತು ಜ್ಞಾನ ಹೇಳುವ ಗುರುವಾಗುವುದಿಲ್ಲ. ಗುರುವಿನ ಜ್ಞಾನದ ಸುಖ ಗುರುವಾದವನ ಅರಿವಿಗೆ ಬಾರದೆ ತನಗೆ ತಾನು ವಂಚಿಸಿಕೊಂಡು ಶಿಷ್ಯನನ್ನು ವಂಚಿಸುತ್ತಾನೆ. ಇಡೀ ಆಯುಷ್ಯವನ್ನು ವಂಚಿಸಿಕೊಳ್ಳುವುದರಲ್ಲಿಯೇ ವಂಚಿಸುವುದರಲ್ಲಿಯೇ ಕಳೆಯುತ್ತಾನೆ.

**ತನ್ನಲ್ಲಿರ್ದ ಭಕ್ತಿಯ ಮಾರಿಕೊಂಡುಂಬವರು ನಿಮ್ಮ ನಿಜಭಕ್ತರಲ್ಲವಯ್ಯಾ ಚೆನ್ನಮಲ್ಲಿಕಾರ್ಜುನಾ :**

ವ್ಯವಹಾರಿಕ ಗುರು ಹಿಂದೆ ತನ್ನ ಗುರುವಿಗೆ ತಾನು ಭಕ್ತಿ ಮಾಡಿದ್ದನ್ನೇ ಶಿಷ್ಯನಿಗೆ ಪಾಠ ಹೇಳಿ ಸಮಾಧಾನ ಪಡಿಸುತ್ತಾನೆ. ಇದೇ ಮುಕ್ತಿ ಎಂದು ಬಣ್ಣಿಸಿ ಶಿಷ್ಯನನ್ನು ವಂಚಿಸುತ್ತಾನೆ. ಆ ವಂಚನೆಗೆ ತಾನೂ ಒಳಗಾಗುತ್ತಾನೆ. ಆ ಭಕ್ತಿಯನ್ನೇ ಅರಿವು ಕೇಳಲು ಬಂದ ಶಿಷ್ಯನಿಗೆ ಮಾರುತ್ತಾನೆ. ಇಂತಹ ಗುರುವು ಗುರುವಲ್ಲ, ಇಂತಹ ಶಿಷ್ಯನೂ ಶಿಷ್ಯನಲ್ಲ, ಶರಣರು ಇವರನ್ನು ಕಾಳಗುರುಕಿ ಗುರುವಿಗೆ ಕಾಳಗುರಿಕಿ ಶಿಷ್ಯ ಎಂದು ಹೆಸರಿಸಿದರು. ಜನಪದರು ಇವರನ್ನು 'ಕೋತಿ ತಾನು ಕೆಡುವುದಲ್ಲದೆ ವನವನ್ನೂ ಕೆಡಸಿತು' ಎಂದರು. ಇಂಥವರು ಚೆನ್ನಮಲ್ಲಿಕಾರ್ಜುನನೆಂಬ ಅರಿವಿನಿಂದ ಬಹುದೂರ. ನಿಜಭಕ್ತರಲ್ಲವಯ್ಯಾ ಎಂದಿದ್ದಾಳೆ ಅಕ್ಕ.

□

---

**ಅರಿವಿನ ಪರಿಮಳ**

□ ಜ್ಞಾನ ಕೇಳಲು ತವಕದಿಂದ ಬಂದ ಶಿಷ್ಯನನ್ನು ಗುರುವಾದಾತ ಮೈದಡವಿ ಶಿಷ್ಯನಲ್ಲಿ ಆವರಿಸಿದಂತಹ ಅಜ್ಞಾನ ಕಳೆದು, ಆತನಲ್ಲಿರುವ ಜ್ಞಾನ ತೋರಿಸಿ ತನ್ನಂತೆ ಮಾಡಿಕೊಳ್ಳುವುದು ಗುರುವಿನ ಕರ್ತವ್ಯ. ಆದರೆ ವ್ಯವಹಾರದ ಗುರುವು ಶಿಷ್ಯನ ಹಣಕ್ಕೆ ತಂದೆಯಾದನಲ್ಲದೆ ಶಿಷ್ಯನ ಮನಕ್ಕೆ ತಂದೆಯಾಗಲಿಲ್ಲ, ಶಿಷ್ಯನಿಗೆ ಗುರುವಾಗಲಿಲ್ಲ.

□ ವೇಷದ ಗುರುವಿಗೆ ಶಿಷ್ಯನ ಮನ ಕಾಣುವುದಿಲ್ಲ. ಆತನ ಅರಿವೂ ಕಾಣುವುದಿಲ್ಲ. ತನುವಿನ ಅಜ್ಞಾನಕ್ಕೆ ಮನವೇ ಕಾರಣ. ಆ ಮನವನ್ನು ತನುವಿನ ಅರಿವಿನತ್ತ ಕೊಂಡೊಯ್ಯುವ ಕಲೆ ಗುರುವಿಗೆ ತಿಳಿದಿರುವುದಿಲ್ಲ. ಆ ಗುರುವಿಗೆ ಗುರು ಬೋಧಿಸಿರುವುದಿಲ್ಲ. ಬೋಧಿಸಿದರೂ ಈತನಿಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಮೋಜಿಗಾಗಿ ತನುವಿನ ಸುಖಕ್ಕಾಗಿ, ವ್ಯವಹಾರಕ್ಕಾಗಿ ಗುರು ವೇಷ ಧರಿಸಿ ಶಿಷ್ಯರಿಗೆ ಬೋಧಿಸಲು ಅಣಿಯಾಗಿರುತ್ತಾನೆ. ಈತ ಶಿಷ್ಯರಿಂದ ಹಣ ಪಡೆದು ಶಾಲಾ ಕಾಲೇಜುಗಳನ್ನು ಪ್ರಸಾದನಿಲಯಗಳನ್ನು ನಿರ್ಮಿಸಬಲ್ಲನೇ ಹೊರತು ಶಿಷ್ಯನನ್ನು ಜ್ಞಾನಿಯನ್ನಾಗಿಸಲು ಸಾಧ್ಯವಾಗುವುದಿಲ್ಲ. ಬೇಡಲು ಬಂದ ಶಿಷ್ಯನನ್ನೇ ಬೇಡಿ ಗುರು ಭಿಕ್ಷುಕನಾಗುತ್ತಾನೆ.

# ತನುವಿನಲ್ಲಿಯೇ ದರ್ಶನವಿತ್ತ ಭಗವಂತ

**ದೂರದಲ್ಲಿರ್ದನೆಂದು ಆನು ಬಾಯಾರಿ ಬಳಲುತಿರ್ದೆನಯ್ಯಾ.**
**ಸಾರಿ ಬೆರಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡಡೆ**
**ಎನ್ನ ಆರತವೆಲ್ಲವೂ ಲಿಂಗಾ ನಿಮ್ಮಲ್ಲಿ ನಟ್ಟಿತು ನೋಡಯ್ಯಾ.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನಿಮ್ಮನ್ನು ಕರಸ್ಥಲದಲ್ಲಿ ನೋಡಿ**
**ಕಂಗಳೆ ಪ್ರಾಣವಾಗಿರ್ದೆನಯ್ಯಾ.**

**ದೂರದಲ್ಲಿರ್ದನೆಂದು ಆನು ಬಾಯಾರಿ ಬಳಲುತಿರ್ದೆನಯ್ಯಾ:**

ಭಗವಂತನ ದರ್ಶನಕ್ಕಾಗಿ ಇಡೀ ಜಗತ್ತಿನ ಜನ ತೊಳಲಿ ಬಾಯಾರಿ ಬಳಲುತ್ತಿದೆ. ಕ್ರಿಸ್ತನ ದರ್ಶನಕ್ಕಾಗಿ ವ್ಯಾಟಿಕಾನ್‌ಗೆ ಹೋಗುತ್ತಾರೆ. ಬುದ್ಧನ ದರ್ಶನಕ್ಕಾಗಿ ಬುದ್ಧ ಗಯಾಕ್ಕೆ ಹೋಗುತ್ತಾರೆ. ವೆಂಕಟೇಶನ ದರ್ಶನಕ್ಕಾಗಿ ತಿರುಪತಿಗೆ ಹೋಗುತ್ತಾರೆ. ಅಯ್ಯಪ್ಪ ಸ್ವಾಮಿ ದರ್ಶನಕ್ಕಾಗಿ ಶಬರಿ ಮಲೆಗೆ ಹೋಗುತ್ತಾರೆ. ಹೀಗೆ ಮನೆ ದೇವರ, ಮನೆ ಗುರುಗಳ ದರ್ಶನಕ್ಕೆಂದು ಪಯಣಿಸುತ್ತಾರೆ. ಕೆಲವರು ಶ್ರೀಶೈಲ ತಿರುಪತಿ ಶಬರಿಮಲೆಗೆ ಪಾದಯಾತ್ರೆಯನ್ನೂ ಮಾಡುತ್ತಾರೆ. ಹೀಗೆ ತೊಳಲಿ ಬಳಲಿ ಬಾಯಾರಿ ಪಯಣಿಸುವುದರಲ್ಲಿಯೇ ಆಯುಷ್ಯ ಪೂರ್ತಿಗಾಣಿಸುತ್ತಾರೆ. ಆದರೂ ತಾನು ಹುಡುಕುವ ಭಗವಂತನ ದರ್ಶನ ಆಗುವುದೇ ಇಲ್ಲ.

**ಸಾರಿ ಬೆರಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡಡೆ ಎನ್ನ ಆರತವೆಲ್ಲವೂ ಲಿಂಗಾ ನಿಮ್ಮಲ್ಲಿ ನಟ್ಟಿತು ನೋಡಯ್ಯಾ:**

ಹೊರಗೆ ಹುಡುಕುವ ಭಗವಂತನನ್ನು ಅರಿತು ಪ್ರೀತಿಯಿಂದ ಕರಸ್ಥಲವೆಂಬ ತನುವಿನಲ್ಲಿ ಹುಡುಕಲು ಹೋದಾಗ ಆ ಕರಸ್ಥಲದಲ್ಲಿಯೇ ಅರಿವಿನ ಮೂಲಕ ಮೂರ್ತಿಗೊಂಡು ಆ ಅರಿವಿನಲ್ಲಿ ಎನ್ನ ತನುವಿನ ಮನ ನೆಟ್ಟು ಆ ಅರಿವೇ ನಾನಾದೆ ನೋಡಯ್ಯಾ.

**ಚೆನ್ನಮಲ್ಲಿಕಾರ್ಜುನಯ್ಯಾ,ನಿಮ್ಮನ್ನು ಕರಸ್ಥಲದಲ್ಲಿ ನೋಡಿ ಕಂಗಳೆ ಪ್ರಾಣವಾಗಿರ್ದೆನಯ್ಯಾ:**

ತನುವಿನಲ್ಲಿ ಅರಿವೆಂಬ ಚೆನ್ನಮಲ್ಲಿಕಾರ್ಜುನನನ್ನು ನೋಡಿ ಕಂಗಳೆ ಪ್ರಾಣವಾಗಿರ್ದೆನಯ್ಯಾ. ಎಂದು ಅಕ್ಕಮಹಾದೇವಿ ಹಾಡಿದ್ದಾಳೆ. ಭಗವಂತನಿಗಾಗಿ ಕಾಡು ಮೇಡು, ಗುಡ್ಡ ಗಹ್ವರದಲ್ಲಿ ಹುಡುಕದೆ ತನುವಿನಲ್ಲಿ ಹುಡುಕುವಂತೆ ಸಂದೇಶ ರವಾನಿಸಿದ್ದಾಳೆ. ತನುವಿನಲ್ಲಿಯೇ ಭಗವಂತನನ್ನು ದರ್ಶಿಸಿದ ಕಣ್ಣು ಪಾವನವಾಗಿ ತನ್ನ ಅಜ್ಞಾನ ಕಳೆದುಕೊಳ್ಳುತ್ತದೆ. ನೋಡುವ ವಸ್ತುಗಳಲ್ಲೆಲ್ಲ ಭಗವಂತನನ್ನೇ ಕಾಣುತ್ತದೆ. ಅರಿವೆಂಬ ಚೆನ್ನಮಲ್ಲಿ ಕಾರ್ಜುನನನ್ನೇ ಕಾಣುತ್ತದೆ.

□

# ಬಸವಣ್ಣನೆಂಬ ಅರಿವಿನ ದೇವರು

**ದೇವಲೋಕದವರಿಗೂ ಬಸವಣ್ಣನೆ ದೇವರು.**
**ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು.**
**ನಾಗಲೋಕದವರಿಗೂ ಬಸವಣ್ಣನೆ ದೇವರು.**
**ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು.**

ದೇವಲೋಕ, ಮರ್ತ್ಯಲೋಕ, ನಾಗಲೋಕ, ಮೇರುಗಿರಿ, ಮಂದರಗಿರಿ ಎಂಬ ಪದಗಳನ್ನು ಅಕ್ಕ ತಮ್ಮ ವಚನದಲ್ಲಿ ಬಳಸಿದ್ದಾಳೆ. ಬಸವಣ್ಣನವರು ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ ಸತ್ಯವ ನುಡಿವುದೇ ದೇವಲೋಕ , ಮಿಥ್ಯವ ನುಡಿವುದೇ ಮರ್ತ್ಯಲೋಕವೆಂದಿದ್ದಾರೆ.

ತನುವಿನಲ್ಲಿ ದೇವಲೋಕವೂ ಇದೆ, ಮರ್ತ್ಯಲೋಕವೂ ಇದೆ. ನಾಗಲೋಕವೂ ಇದೆ, ಮೇರುಗಿರಿ ಮಂದರಗಿರಿ ಎಂಬ ಲೋಕಗಳೂ ಇವೆ.

ಮನ ತನುವಿನ ಅರಿವನ್ನು ಬಳಕೆ ಮಾಡಿಕೊಂಡರೆ ಅದು ದೇವಲೋಕದ ತನು. ಮೇರುಗಿರಿ ಮಂದರಗಿರಿಯ ತನು. ಉತ್ತುಂಗದ ತನು. ಗುರು ತನು. ಅರಿವಿನ ತನುವಾಗಿ ಬೆಳಗುತ್ತದೆ.

ಮನ ತನುವಿನ ಮನವನ್ನು ಬಳಕೆ ಮಾಡಿಕೊಂಡರೆ ಅದು ಮರ್ತ್ಯಲೋಕದ ತನುವಾಗಿ ಮನವುಳ್ಳ ಮಾನವನಾಗಿ ಬೆಳಗುತ್ತದೆ. ತನುವಿನ ಮನ ತನುವನ್ನು ದುರ್ಬಳಕೆ ಮಾಡಿಕೊಂಡರೆ ಅದು ನಾಗಲೋಕದ ತನು. ಸದಾ ವಿಷವನ್ನೇ ಕಕ್ಕುತ್ತದೆ. ಶಬ್ದಕ್ಕೆ ಸ್ಪರ್ಷಕ್ಕೆ ರುಚಿಗೆ ವಾಸನೆಗೆ ಅಜ್ಞಾನದ ನೋಟಕ್ಕೆ ಬಲಿಯಾಗುತ್ತದೆ. ಈ ತನುವಿಗೆ, ತನುವಿನ ಮನಕ್ಕೆ ಅರಿವಿನ ಅಮೃತದ ಹಾಲೆರೆದು ಪೋಷಣೆ ಮಾಡುವ ಸಮರ್ಥ ಬಸವಣ್ಣನೇ ಬೇಕಾಗುತ್ತದೆ.

ಈ ಸ್ವಭಾವಗಳುಳ್ಳ ಸಕಲ ತನುಗಳಿಗೆ ಅರಿವೆಂಬ ಬಸವಣ್ಣನೇ ದೇವರು. ಸಕಲ ತನುಗಳಿಗೆ ಭವರೋಗದ ವೈದ್ಯನಾತ.

ಚೆನ್ನಮಲ್ಲಿಕಾರ್ಜುನಯ್ಯಾ ನಿಮಗೂ, ಎನಗೂ ಶರಣರಿಗೂ ಬಸವಣ್ಣನೇ ದೇವರೆಂದು ಅಕ್ಕಮಹಾದೇವಿ ಘೋಷಿಸಿದ್ದಾಳೆ.

□

**ಅರಿವಿನ ಪರಿಮಳ**

□ ತನುವಿನಲ್ಲಿ ದೇವಲೋಕವೂ ಇದೆ, ಮರ್ತ್ಯಲೋಕವೂ ಇದೆ. ನಾಗಲೋಕವೂ ಇದೆ, ಮೇರುಗಿರಿ ಮಂದರಗಿರಿ ಎಂಬ ಲೋಕಗಳೂ ಇವೆ.

# ಹಗಲಿರುಳೆನ್ನದೆ ಬೆಳಗುವ ಅರಿವಿನ ಬೆಳಗು

**ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,**
**ವಾಯುವಿನ ಚಲನೆ, ತರು ಗುಲ್ಮ ಲತಾದಿಗಳಲ್ಲಿಯ ತಳಿರು ಪುಷ್ಪ**
**ಷಡುವರ್ಣಂಗಳೆಲ್ಲ ಹಗಲಿನ ಪೂಜೆ.**
**ಚಂದ್ರ ಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತಾದಿಗಳು**
**ದೀಪ್ತಿಮಯವೆನಿಸಿಪ್ಪವೆಲ್ಲ ಇರುಳಿನ ಪೂಜೆ.**
**ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯಾ**
**ಚೆನ್ನಮಲ್ಲಿಕಾರ್ಜುನಾ.**

ಆಕಾಶದ ವಿಸ್ತೀರ್ಣ , ವಾಯುವಿನ ಚಲನೆ, ತರುಗುಲ್ಮ ಲತಾದಿಗಳಲ್ಲಿಯ ತಳಿರು ಪುಷ್ಪ ಷಡುವರ್ಣಂಗಳೆಲ್ಲ ಸೂರ್ಯನ ಬೆಳಕಿನಿಂದ ಬೆಳಗುವ ಹಗಲಿನ ಪೂಜೆಯಾಗಿದೆ. ರವಿಯ ಬೆಳಕು ದೋಷರಹಿತವಾಗಿ ಎಲ್ಲವನ್ನೂ ಬೆಳಗುತ್ತದೆ. ತಾರತಮ್ಯ ಎಸಗುವುದಿಲ್ಲ. ಅಂತೆಯೇ ಚಂದ್ರ ಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತಾದಿಗಳು ದೀಪ್ತಿಮಯವೆನಿಸಿಪ್ಪವೆಲ್ಲ ಇರುಳಿನ ಪೂಜೆಯಾಗಿದೆ. ಹಗಲು ಸೂರ್ಯ ಬೆಳಗಿದರೆ, ಸೂರ್ಯನ ಬೆಳಕಿನಿಂದ ಉಂಟಾದ ಕತ್ತಲನ್ನು ಸೂರ್ಯನ ಬಿಂಬ ಬೆಳಗುತ್ತದೆ. ಚಂದ್ರ ನಕ್ಷತ್ರ ಅಗ್ನಿ ವಿದ್ಯುತ್‌ಗಳ ಮೂಲಕ ಎಂದು ಅಕ್ಕ ವಿವರಿಸಿದ್ದಾಳೆ.

ಬೆಳಕು ಕತ್ತಲನ್ನು ಉಂಟು ಮಾಡಿ ಬೆಳಕು ಕತ್ತಲುಗಳಾಗಿವೆ. ಬೆಳಕು ಉಂಟು ಮಾಡಿದ ಕತ್ತಲನ್ನು ಪುನಃ ಬೆಳಕಿನ ಬಿಂಬವೇ ಬೆಳಗಬೇಕಾಗಿದೆ. ಹಗಲು ಮತ್ತು ಇರುಳಿನ ಪೂಜೆಯನ್ನು ಇಡೀ ಜಗತ್ತೇ ಮಾಡುತ್ತದೆ. ಆದರೆ ಇವೆರಡನ್ನು ಮರೆತು ಅರಿವೆಂಬ ಚೆನ್ನಮಲ್ಲಿಕಾರ್ಜುನಯ್ಯನ ಪೂಜೆಯಲ್ಲಿ ನಾನು ನಿರತಳಾಗಿದ್ದೇನೆ ಎಂದಿದ್ದಾಳೆ ಅಕ್ಕ.

'ಕೋಟಿ ಸೂರ್ಯಂ ಸಮಪ್ರಭಾ ' ಸೂರ್ಯಗ್ರಹ ಎಲ್ಲ ವಸ್ತುಗಳನ್ನು ತಾರತಮ್ಯವಿಲ್ಲದಂತೆ ಬೆಳಗುತ್ತದೆ. ಆದರೆ ಯಾವ ವಸ್ತುಗಳನ್ನು ಮುಟ್ಟುವುದಿಲ್ಲ. ನೋಡಿ ಆನಂದವನ್ನೂ ಪಡುವುದಿಲ್ಲ. ಅದು ಜಡ. ಕಣ್ಣಿನ ಬೆಳಕು ಸಹ ಎಲ್ಲವನ್ನೂ ನೋಡುತ್ತದೆ. ಬೆಳಗುತ್ತದೆ. ಆನಂದಪಡುತ್ತದೆ. ಏನನ್ನೂ ಮುಟ್ಟುವುದಿಲ್ಲ. ಈ ಬೆಳಕನ್ನು ಕುರಿತು ಅಲ್ಲಮಪ್ರಭುಗಳು 'ಒಡಲೊಳಗಿದ್ದು, ಒಡಲಿಂಗಾಧಾರವಾಗಿ ಒಡಲು ಸೋಂಕದೆ , ಒಡಲ ಬೆಳಗುವ ಪರಿಯ ನೋಡಾ, ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ ಎಂದಿದ್ದಾರೆ. ಒಡಲು ಬೆಳಗುವ ಬೆಳಕು ಸೂರ್ಯಗ್ರಹಕ್ಕೂ ಮಿಗಿಲಾದದ್ದು. ಹಗಲಿರುಳೆನ್ನದೆ ಒಡಲಿನ ಅಜ್ಞಾನ ಬೆಳಗುವ ಅರಿವಿನ ಬೆಳಕು.

ತನುವಿನ ಅರಿವಿಗೆ ನಿಲುಕದ್ದು ಯಾವುದೂ ಇಲ್ಲ. ಅದು ಅಪ್ರಮಾಣ, ಅಪ್ರತಿಮ, ಅಗೋಚರವಾದದ್ದು ತನುವಿನಲ್ಲಿ ಬಂದು ಚುಳುಕಾಗಿದೆ. ಹೀಗಾಗಿ ಅಕ್ಕ ಹನ್ನೆರಡನೇ ಶತಮಾನದಲ್ಲಿಯೇ ಚಂದ್ರಪ್ರಕಾಶ ನಕ್ಷತ್ರ ಅಗ್ನಿಯ ಜೊತೆಗೆ ವಿದ್ಯುತ್ ಎನ್ನುವ ಪದದ ದೀಪ್ತಿಮಯವನ್ನು ಬಳಸಿದ್ದಾಳೆ.

□

# ಮುಕ್ಕಣ್ಣನನ್ನು ಮೂದಲಿಸಿ ಗೆದ್ದ ಮೂವರು ಮಹಾಂತರ ಕತೆ

ನಂದಿ ದೇವಂಗೆ, ಖಳ ಸಿರಿಯಾಳಂಗೆ,
ಲಿಂಗ ದಾಸಿಮಯ್ಯಂಗೆ, ಜಾಗರ ಬಸವಣ್ಣಂಗೆ,
ಆದರಿಕೆಯ ಬಿಟ್ಟು ಜೂಜನಾಡರೆ ನಮ್ಮವರಂದು?
ಒಬ್ಬಂಗೆ ಮಗನ ರಪಣ, ಒಬ್ಬಂಗೆ ಸೀರೆಯ ರಪಣ,
ಒಬ್ಬಂಗೆ ತನು ಮನ ಧನದ ರಪಣ.
ಮೂವರೂ ಮೂದಲಿಸಿ ಮುಕ್ಕಣ್ಣನ ಗೆಲಿದರು
ಎನ್ನ ದೇವ ಚೆನ್ನಮಲ್ಲಿಕಾರ್ಜುನಾ.

ಈ ವಚನದಲ್ಲಿ ಅಕ್ಕ ಮುಕ್ಕಣ್ಣನನ್ನು ಮೂದಲಿಸಿ ಗೆದ್ದ ಮೂವರು ಮಹಾಂತರ ಕತೆ ಹೇಳಿದ್ದಾಳೆ. ಒಬ್ಬ ಭಕ್ತ ಸಿರಿಯಾಳ, ಮತ್ತೊಬ್ಬ ಜೇಡರ ದಾಸಿಮಯ್ಯ ಮಗದೊಬ್ಬ ಬಸವಣ್ಣ. ಈ ಮೂವರೂ ಮುಕ್ಕಣ್ಣನೊಂದಿಗೆ ಜೂಜನಾಡಿ ಗೆದ್ದವರು.

ಮನುಷ್ಯ ಮನುಷ್ಯನೊಂದಿಗೆ ಜೂಜನಾಡುವುದು ಗೊತ್ತು. ಮನುಷ್ಯ ಸಮಾಜದೊಂದಿಗೆ ಜೂಜನಾಡುವುದೂ ಗೊತ್ತು. ಮುಕ್ಕಣ್ಣನೊಂದಿಗೆ ಜೂಜನಾಡಿ ಗೆಲ್ಲುವುದನ್ನು ಮನುಷ್ಯ ತಿಳಿದಿಲ್ಲ. ಭಕ್ತ ಸಿರಿಯಾಳ, ಜೇಡರ ದಾಸಿಮಯ್ಯ, ಮತ್ತು ಬಸವಣ್ಣನವರು ತಮ್ಮ ತನುವಿನ ಅರಿವೆಂಬ ಮುಕ್ಕಣ್ಣನೊಂದಿಗೆ ಜೂಜನಾಡಿ ಗೆದ್ದು ಜ್ಞಾನಿಗಳಾದ ಬಗ್ಗೆ ಅಕ್ಕ ಇಲ್ಲಿ ವಿವರಿಸಿದ್ದಾಳೆ.

ಸಿರಿಯಾಳನ ಭಕ್ತಿಗೆ ಮೆಚ್ಚಿ ಅಲ್ಲಿಯ ಜನ ಮತ್ತು ರಾಜ ಕೊಂಡಾಡುತ್ತಿದ್ದರು. ಆತ ಅತ್ತ ಗಮನ ಹರಿಸಲಿಲ್ಲ. ಮಗನೆಂಬ ವ್ಯಾಮೋಹ ಸಿರಿಯಾಳನ ತನುವಿನಲ್ಲಿ ಕಾಡುತ್ತಿತ್ತು. ಮಕ್ಕಳಿಲ್ಲದಿದ್ದರೂ ದುಃಖ; ಮಕ್ಕಳಿದ್ದರೂ ದುಃಖ; ಇದ್ದ ಮಕ್ಕಳು ಇಲ್ಲವಾದರೂ ದುಃಖ! ವ್ಯಾಮೋಹ ಮತ್ತು ದುಃಖ ಇವೆರಡನ್ನು ಸಿರಿಯಾಳ ದಂಪತಿಗಳು ತಮ್ಮ ಅರಿವೆಂಬ ಮುಕ್ಕಣ್ಣನೊಂದಿಗೆ ಪಣಕ್ಕೊಡ್ಡಿ ಗೆಲ್ಲುವ ಬಗ್ಗೆ ಯೋಚಿಸಿದರು. ತನುವಿನ ವ್ಯಾಮೋಹವನ್ನು ತನುವಿನ ಅರಿವಿನಿಂದಲೇ ಕಳೆದುಕೊಳ್ಳಲು ನಿರ್ಧರಿಸಿದರು.

ಧೃತರಾಷ್ಟ್ರ ಮಗನ ವ್ಯಾಮೋಹಕ್ಕಾಗಿ ಹದಿನೆಂಟು ಲಕ್ಷ ಅಕ್ಷೋಹಿಣಿ ಸೈನ್ಯವನ್ನೇ ಬಲಿ ಕೊಟ್ಟ. ರಕ್ತದ ಕಾಲುವೆಯೇ ಹರಿಯಿತು. ದ್ರೌಪದಿಯ ವಸ್ತ್ರಾಪಹರಣವಾಯಿತು. ಪಾಂಡವರನ್ನು ಅರಗಿನ ಮನೆಯಲ್ಲಿ ಸುಟ್ಟರು. ಆದರೂ ಕುರುಡ ಒಂದಿಷ್ಟೂ ದುಃಖಿಸಲಿಲ್ಲ. ಇಂತಹ ಮಗ ಸಾಯಬಾರದೇ ಎಂದು ಒಮ್ಮೆಯಾದರೂ ಹಪಹಪಿಸಲಿಲ್ಲ, ಕರುಬಲಿಲ್ಲ. ಬದಲಾಗಿ ಭೀಮನಿಂದ ದುರ್ಯೋಧನ ಹತನಾದಾಗ ದುಃಖ ಉಮ್ಮಳಿಸಿ ಬಂತು; ಭೀಮನನ್ನು ಅಕ್ಕರತೆಯಿಂದ ಕರೆದು ಅಪ್ಪಿಕೊಂಡಾದರೂ ಕೊಲೆ ಮಾಡಬೇಕೆಂದು ಹೊಂಚು ಹಾಕಿದ.

ಧೃತರಾಷ್ಟ್ರ ಕುರುಡ. ಮಗನೆಂಬ ವ್ಯಾಮೋಹವೂ ಕುರುಡು! ತನುವಿಗೆ ಅಂಟಿದ ಮಗನೆಂಬ ಕುರುಡು ವ್ಯಾಮೋಹವನ್ನು ಹೇಗೆ ಕಳೆದು ಕೊಳ್ಳಬೇಕೆಂದು ಚಿಂತಿಸಿದ್ದರೆ ಶ್ರೀ ಕೃಷ್ಣ

ತಿಳಿಸುತ್ತಿದ್ದ. ವ್ಯಾಮೋಹ ಸತ್ತು ಮಗ ಉಳಿಯುತ್ತಿದ್ದ. ಆದರೆ ಧೃತರಾಷ್ಟ್ರನ ವ್ಯಾಮೋಹ ಉಳಿಯಿತು. ಮಗ ಸತ್ತ; ಸೈನ್ಯವೂ ಸತ್ತಿತು.

ಈ ಬಗ್ಗೆ ಭಕ್ತ ಸಿರಿಯಾಳ ಚಿಂತಿಸಿದ. ತನ್ನ ಅರಿವೆಂಬ ಜಂಗಮನಿಗೆ ಮಗನೆಂಬ ವ್ಯಾಮೋಹವನ್ನು ಕಡಿದು ಅಡುಗೆ ಮಾಡಿ ಉಣ ಬಡಿಸಿದ. ಇದು ಸಾಮಾನ್ಯ ಕೆಲಸವೇ? ತನ್ನ ಅಜ್ಞಾನವನ್ನು ತನ್ನ ಅರಿವಿನ ಪಣಕ್ಕೊಡ್ಡಿ ತನಗೆ ತಾನೇ ಆಡಿಕೊಳ್ಳಬೇಕಾದ ಜೂಜಲ್ಲವೆ ಇದು ? ಮಗನೆಂಬ ವ್ಯಾಮೋಹ ಸೋತು ಸಿರಿಯಾಳನಿಗೆ ಸೆರೆಯಾಳಾಯಿತು.

ಸಿರಿಯಾಳ ಮಗನನ್ನು ಕಳೆದುಕೊಳ್ಳಲಿಲ್ಲ, ಕೊಂದು ಅಡಿಗೆ ಮಾಡಿ ಜಂಗಮನಿಗೆ ಉಣಬಡಿಸಲಿಲ್ಲ. ಬದಲಾಗಿ ಮಗನ ಮೇಲಿರುವ ಮೋಹ ಕಡಿದು ಅರಿವೆಂಬ ಜಂಗಮನಿಗೆ ಅಡಿಗೆ ಮಾಡಿ ಉಣ ಬಡಿಸಿದ. ಸಿರಿಯಾಳ ಅರಿವಿನ ಸಿರಿಯ ಖಣಿಯಾದ. ಅರಿವೇ ತಾನಾದ. ಅರಿವಿಗೆ ಭಕ್ತಿ ಮಾಡಿ ಭಕ್ತ ಸಿರಿಯಾಳನಾದ.

ಜೇಡರ ದಾಸಿಮಾರ್ಯರು ಅಕ್ಷಯ ಪಾತ್ರೆಯನ್ನಿಟ್ಟುಕೊಂಡು ಬಂದವರಿಗೆಲ್ಲಾ ದವಸ ಧಾನ್ಯಗಳನ್ನು ಕೊಡುತ್ತಾ ತವನಿಧಿಯ ದಾಸಿಮಾರ್ಯನೆಂದೇ ಹೆಸರು ಪಡೆದರು. ಜನ ಬೇಡಿದ್ದನ್ನೆಲ್ಲಾ ತಾವೇ ಕೊಟ್ಟರೂ ನೇಯುವ ಕಾಯಕದ ವ್ಯಾಮೋಹವನ್ನು ಬಿಡಲಿಲ್ಲ. ಬೇಡುವವನು ಇಲ್ಲದವನೇ? ಬೇಡಿಸಿಕೊಂಬುವವನು ಇದ್ದವನೇ? ಎನ್ನುವ ಯೋಚನೆ ಅವರನ್ನು ಕಾಡಹತ್ತಿತು. ತವನಿಧಿಯ ದಾಸಿಮಾರ್ಯ ಎಂದು ಕರೆಯುವ ಹೆಸರು ಅವರನ್ನು ಅಟ್ಟಕ್ಕೆ ಒಯ್ಯಲಿಲ್ಲ. ಹಿಗ್ಗಲಿಲ್ಲ. ಬದಲಾಗಿ ಕೊಡುವ ಪಡೆದುಕೊಳ್ಳುವ ಅಜ್ಞಾನವನ್ನು ಅರಿವಿನ ಪಣಕ್ಕೆ ಒಡ್ಡಿದ. ಬೇಡುವವನು, ಬೇಡಿಸಿಕೊಂಬುವವನು ತನ್ನ ಸ್ವರೂಪವೇ ಎನ್ನುವ ನಿರ್ಧಾರಕ್ಕೆ ಬಂದ. ತನ್ನಂತೆಯೇ ಇತರರನ್ನು ಕಂಡ. ತನುವೆಂಬುದು ಬೇಡಿದ್ದನ್ನೀಯುವ ತವ ನಿಧಿಯ ಸಂಪತ್ತೆಂದು ಸಾರಿ ಹೇಳಿದ.

ಬಸವಣ್ಣನವರು ತನು ಮನ ಧನವನ್ನು ಅರಿವಿನ ಪಣಕ್ಕೊಡ್ಡಿದ್ದರು. ತನುವಿನ ಐದು ಇಂದ್ರಿಯಗಳಲ್ಲಿ ವಾಸಿಸಿದ ಮನ ತನುವನ್ನು ಜ್ಞಾನದ ಸ್ವಾಧೀನದಲ್ಲಿಡಲು ಬಿಟ್ಟಿಲ್ಲ. ಇಚ್ಛೆ ಬಂದತ್ತ ತನುವನ್ನು ಕರೆದುಕೊಂಡು ಹೋಗುತ್ತದೆ. ಸಂಕಟಕ್ಕೆ ಗುರಿ ಮಾಡುತ್ತದೆ. ತನು ಅರಿವಿನದಾದರೂ ಮನ ಹೇಳಿದಂತೆ ಕೇಳಿ ಅಪವಾದಕ್ಕೆ ಗುರಿಯಾಗುತ್ತದೆ. ಪಂಡಿತನಾದರೂ ಗುರುವಾದರೂ ಪೀಠಾಧಿಪತಿಯಾದರೂ ತನುವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ತನು ಮನ ಧನವನ್ನು ಅರಿವಿನ ಪಣಕ್ಕೊಡ್ಡಿ ಗೆದ್ದಾಗ ಇದು ಸಾಧ್ಯವಾಗುತ್ತದೆ. ಬಸವಣ್ಣನಂತೆ ಸರ್ವತನುಗಳಿಗೂ ಸಾಧ್ಯವಾಗುತ್ತದೆ.

ಹೀಗೆ ಸಿರಿಯಾಳ, ದಾಸಿಮಯ್ಯ, ಬಸವಣ್ಣ ಮೂವರೂ ಮೂದಲಿಸಿ ಮುಕ್ಕಣ್ಣನೆಂಬ ಅರಿವನ್ನು ಗೆದ್ದು ಮಹಾಜ್ಞಾನಿಗಳಾದರು. ಅಕ್ಕ ಒಂದು ಹೆಜ್ಜೆ ಮುಂದೆ ಹೋಗಿ ಅದ್ಯಾವುದನ್ನೂ ಮಾಡದೇ ಅರಿವೆಂಬ ಚೆನ್ನಮಲ್ಲಿಕಾರ್ಜುನ ದೇವನಿಗೆ ಸೆರೆಯಾಳಾದಳು. ಅರಿವೇ ತಾನಾದಳು. ಎಂಬ ಈ ಸೂತ್ರವನ್ನು ಅಕ್ಕ ಓದುಗರಿಗೆ ಹೃದಯಂಗಮವಾಗಿ ನೀಡಿದ್ದಾಳೆ.

□

# ಮನ ನಷ್ಟ ಮಾಡುವ ಸಂಬಂಧಿಯೇ ಪರಮ ಬಂಧು

**ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ**
**ಆಗುಮಾಡ ಬಂದವರಲ್ಲ.**
**ಮನದ ಮೇಲೆ ಬಂದು ನಿಂದು ಜರೆದು ನುಡಿದು**
**ಪಥವ ತೋರಬಲ್ಲಡಾತನೇ ಸಂಬಂಧಿ.**
**ಹಾಗಲ್ಲದೆ ಅವರಿಚ್ಚೆಯ ನುಡಿದು ತನ್ನುದರವ ಹೊರೆವ**
**ಬಚ್ಚಣಿಗಳ ಮಚ್ಚುವನೆ ಚೆನ್ನಮಲ್ಲಿಕಾರ್ಜುನ?**

ಅಕ್ಕಮಹಾದೇವಿ ಈ ವಚನದಲ್ಲಿ ಮೂವರು ಸಂಬಂಧಿಗಳನ್ನು ಪರಿಚಯಿಸಿದ್ದಾಳೆ.

ಒಬ್ಬ ತನುವಿನ ಸಂಪಾದನೆಯ ಹಣಕ್ಕಾಗಿ ಸಂಬಂಧ ಬೆಳೆಸುವ ಸಂಬಂಧಿ. ಮತ್ತೊಬ್ಬ ತನುವಿನ ಮನವನ್ನು ಕಳೆದು ಅರಿವಿನ ದಾರಿ ತೋರಿ ಘನ್ನಮನವನ್ನಾಗಿಸುವ ಸಂಬಂಧಿ. ಮಗದೊಬ್ಬ ತನ್ನಿಚ್ಚೆಯಂತೆ ನುಡಿದು ಉದರ ಪೋಷಣೆಗಾಗಿ ವೇಷ ಹಾಕಿ ಗುರು ಸಂಬಂಧ ಬೆಳೆಸುವ ಸಂಬಂಧಿ.

ಮೊದಲನೆ ವ್ಯಕ್ತಿಯ ಜೊತೆಗೆ ಸಂಬಂಧ ಬೆಳೆಸಿದರೆ ಗಳಿಸಿಟ್ಟ ಹಣ ಮಾತ್ರ ನಷ್ಟವಾಗುತ್ತದೆ.

ಮೂರನೆ ವ್ಯಕ್ತಿಯ ಜೊತೆಗೆ ಸಂಬಂಧ ಬೆಳಸಿದರೆ ತನು ಮನ ಧನ ನಷ್ಟವಾಗಿ ಮೋಸಕ್ಕೊಳಗಾಗುತ್ತಾನೆ. ಇವರಿಬ್ಬರ ಜೊತೆಗೆ ಸಂಬಂಧ ಬೆಳೆಸಲು ಹೋಗಬೇಕಾಗಿಲ್ಲ ; ಅವರೇ ಬಂದು ಸಂಬಂಧ ಬೆಳಸಿ ಬಂಧುಗಳಂತೆ ನಟಿಸಿ ಮೋಸ ಮಾಡುತ್ತಾರೆ. ಜಗದ ಬಹುತೇಕ ಜನ ಇವರಿಬ್ಬರ ಜೊತೆಗೆ ಸಂಬಂಧ ಬೆಳಸಿಯೇ ಮೋಸಕ್ಕೊಳಗಾಗುತ್ತಾರೆ. ಆದರೆ ಎರಡನೇ ವ್ಯಕ್ತಿಯ ಜೊತೆ ಸಂಬಂಧ ಬೆಳೆಸುವುದು ಸಾಧ್ಯವಾಗುವುದೇ ಇಲ್ಲ. ಈತನಿಗೆ ಹಣ ಬೇಕಿಲ್ಲ; ವೇಷಾಧಾರಿಯೂ ಅಲ್ಲ. ಜಗದ ಸಕಲ ಸಂಪತ್ತನ್ನು ಹೊಂದಿದ ಬ್ರಹ್ಮಜ್ಞಾನಿಯೀತ. ಸುಲಭವಾಗಿ ಸಂಬಂಧಿಯಾಗಲಾರ.

ಮನಕ್ಕೆ ಈತನೊಂದಿಗೆ ಸಂಬಂಧ ಬೆಳೆಸುವ ಬಯಕೆಯಾಗಬೇಕು. ಮಣ್ಣಿಗಾಗಿ ಹೊನ್ನಿಗಾಗಿ ವಿಷಯ ಸುಖಕ್ಕಾಗಿ ಹಗಲಿರುಳು ತಪಿಸಿ ಪಡೆಯುವಂತೆ ಈತನಿಗಾಗಿ ಮನಕ್ಕೆ ಹಂಬಲಿಸಬೇಕು. ಸಂಬಂಧ ಬೆಳೆಸಲು ಹುಡುಕಬೇಕು. ಬಯಕೆಯ ಹಸಿವು ಅತಿಯಾದಾಗ ಕೂಡಲೇ ಸಿಕ್ಕುತ್ತಾನೆ. ಇಲ್ಲ ಇದ್ದಲ್ಲಿಗೆ ಬಂದು ಸಂಬಂಧ ಬೆಳೆಸುತ್ತಾನೆ. ತನುವಿನ ಮನವನ್ನು ತನುವಿನ ಅರಿವಿನಲ್ಲಿ ವದ್ದೆ ಮಾಡುತ್ತಾನೆ. ಆ ಮನವನ್ನು ಘನಮನವನ್ನಾಗಿಸುತ್ತಾನೆ. ತನುವನ್ನು ಅರಿವಿನಿಂದ ಶ್ರೀಮಂತಗೊಳಿಸಿ ಘನ ತನುವನ್ನಾಗಿಸುತ್ತಾನೆ. ಜಗದಗಲ ಮುಗಿಲಗಲಕ್ಕೆ ವಿಸ್ತರಿಸಿ ಜಗದ ಶ್ರೀಮಂತ ತನುವನ್ನಾಗಿಸುತ್ತಾನೆ. ಪರಮ ಬಂಧುವಾಗುತ್ತಾನೆ.

ದರುಶನವಿತ್ತ ಈ ಪರಮ ಬಂಧುವನ್ನು ಕುರಿತು ಬಸವಣ್ಣ ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು , ನಿಮ್ಮ ಧರ್ಮ . ಎಂದು ಹೃದಯ ತುಂಬಿ ಹಾಡಿದ್ದಾನೆ.

ಈ ಪರಮ ಬಂಧುವಿನೊಂದಿಗೆ ಮಾತ್ರ ಸಂಬಂಧ ಬೆಳೆಸುವಂತೆ ಓದುಗರಿಗೆ ಅಕ್ಕ ಸಂದೇಶ ರವಾನಿಸಿದ್ದಾಳೆ.

□

**ಅರಿವಿನ ಪರಿಮಳ**

□ ಒಬ್ಬ ತನುವಿನ ಸಂಪಾದನೆಯ ಹಣಕ್ಕಾಗಿ ಸಂಬಂಧ ಬೆಳೆಸುವ ಸಂಬಂಧಿ. ಮತ್ತೊಬ್ಬ ತನುವಿನ ಮನವನ್ನು ಕಳೆದು ಅರಿವಿನ ದಾರಿ ತೋರಿ ಘನ್ನಮನವನ್ನಾಗಿಸುವ ಸಂಬಂಧಿ. ಮಗದೊಬ್ಬ ತನ್ನಿಚ್ಚೆಯಂತೆ ನುಡಿದು ಉದರ ಪೋಷಣೆಗಾಗಿ ವೇಷ ಹಾಕಿ ಗುರು ಸಂಬಂಧ ಬೆಳೆಸುವ ಸಂಬಂಧಿ.ಮೊದಲನೆ ವ್ಯಕ್ತಿಯ ಜೊತೆಗೆ ಸಂಬಂಧ ಬೆಳೆಸಿದರೆ ಗಳಿಸಿಟ್ಟ ಹಣ ಮಾತ್ರ ನಷ್ಟವಾಗುತ್ತದೆ.

□ ಒಬ್ಬ ಮೂರನೆ ವ್ಯಕ್ತಿಯ ಜೊತೆಗೆ ಸಂಬಂಧ ಬೆಳೆಸಿದರೆ ತನು ಮನ ಧನ ನಷ್ಟವಾಗಿ ಮೋಸಕ್ಕೊಳಗಾಗುತ್ತಾನೆ. ಇವರಿಬ್ಬರ ಜೊತೆಗೆ ಸಂಬಂಧ ಬೆಳೆಸಲು ಹೋಗಬೇಕಾಗಿಲ್ಲ ; ಅವರೇ ಬಂದು ಸಂಬಂಧ ಬೆಳಸಿ ಬಂಧುಗಳಂತೆ ನಟಿಸಿ ಮೋಸ ಮಾಡುತ್ತಾರೆ. ಜಗದ ಬಹುತೇಕ ಜನ ಇವರಿಬ್ಬರ ಜೊತೆಗೆ ಸಂಬಂಧ ಬೆಳಸಿಯೇ ಮೋಸಕ್ಕೊಳಗಾಗುತ್ತಾರೆ. ಆದರೆ ಎರಡನೇ ವ್ಯಕ್ತಿಯ ಜೊತೆ ಸಂಬಂಧ ಬೆಳೆಸುವುದು ಸಾಧ್ಯವಾಗುವುದೇ ಇಲ್ಲ. ಈತನಿಗೆ ಹಣ ಬೇಕಿಲ್ಲ; ವೇಷಾಧಾರಿಯೂ ಅಲ್ಲ. ಜಗದ ಸಕಲ ಸಂಪತ್ತನ್ನು ಹೊಂದಿದ ಬ್ರಹ್ಮಜ್ಞಾನಿಯೀತ. ಸುಲಭವಾಗಿ ಸಂಬಂಧಿಯಾಗಲಾರ.

# ತಿಳಿದರೆ ವಿರಾಟ ಸ್ವರೂಪಿ ತಿಳಿಯದಿದ್ದರೆ ದೇವಕಣ

**ನಡೆಯದ ನುಡಿಗಡಣ, ಮಾಡದ ಕಲಿತನ,**
**ಚಿತ್ರದ ಸತಿಯ ಶೃಂಗಾರವದೇತಕೆ ಪ್ರಯೋಜನ?**
**ಎಲೆಯಿಲ್ಲದ ಮರನು, ಜಲವಿಲ್ಲದ ನದಿಯು,**
**ಗುಣಯಿಲ್ಲದ ಅವಗುಣಿಯ ಸಂಗವದೇತಕ್ಕೆ ಪ್ರಯೋಜನ?**
**ನಯವಿಲ್ಲದ ಧರ್ಮ, ಉಭಯವಿಲ್ಲದ ಭಕ್ತಿಯು,**
**ನಯವಿಲ್ಲದ ಶಬ್ದವದೇತಕೆ ಪ್ರಯೋಜನ ?**
**ಎನ್ನದೇವ ಚೆನ್ನಮಲ್ಲಿಕಾರ್ಜುನಾ.**

ನಡೆ ಶುಚಿ, ನುಡಿ ಶುಚಿ, ತನು ಶುಚಿ, ಮನಶುಚಿ, ಭಾವ ಶುಚಿ. ಇಂತೀ ಪಂಚ ತೀರ್ಥಂಗಳನೊಳಕೊಂಡು ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ ಎನ್ನನುಳಿಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ! ಎಂದು ಅಕ್ಕ ಮತ್ತೊಂದು ವಚನದಲ್ಲಿ ಹೇಳುತ್ತಾಳೆ.

ತನುವಿನಲ್ಲಿ ನುಡಿಯುವ ಶಕ್ತಿ ಇದೆ, ನುಡಿದದ್ದನ್ನು ಪಾಲಿಸದಂತೆ ಮಾಡುವ ನಡೆಯದ ನುಡಿಗಡಣವೂ ಆವರಿಸಿದೆ. ತನುವಿನಲ್ಲಿರುವ ಮನಕ್ಕೆ ಶಿಕ್ಷಣವಿಲ್ಲದಿದ್ದರೆ ಎರಡರಲ್ಲಿ ತನಗೆ ಬೇಕಾದುದ್ದನ್ನು ಮಾತ್ರ ಆಯ್ದುಕೊಳ್ಳುತ್ತದೆ. ಇಲ್ಲ ಎರಡನ್ನೂ ಆಯ್ದುಕೊಂಡು ತನುವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಉದಾಹರಣೆಗೆ :

ದುರ್ಯೋಧನ ಪಾಂಡವರಿಗೆ ಆಮಂತ್ರಣ ನೀಡಿ ಆದರಾತಿಥ್ಯಗಳೊಂದಿಗೆ ಬರಮಾಡಿಕೊಂಡ. ಆನಂದದಿಂದ ಆತಿಥ್ಯ ಸ್ವೀಕರಿಸಿದ ಪಾಂಡವರನ್ನು ಜೂಜಿಗೆ ಕರೆದ. ರಾಜ್ಯವನ್ನು ತಮ್ಮನ್ನು ಕೊನೆಗೆ ಹೆಂಡತಿಯನ್ನೂ ಪಣಕ್ಕೊಡ್ಡಿ ಸೋತರು. ದಾಸಿಯೆಂದು ಮೂದಲಿಸಿ ದ್ರೌಪದಿಯ ವಸ್ತ್ರಾಪಹರಣ ಮಾಡಿದ. ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತ ವಾಸದ ಶಿಕ್ಷೆಯನ್ನಿತ್ತ. ಕಾಣಿಸಿಕೊಳ್ಳದೆ ವನವಾಸ ಮುಗಿಸಿದರೆ ರಾಜ್ಯ ಮರಳಿ ಕೊಡುವುದಾಗಿ ಮಾತು ಕೊಟ್ಟ. ಆದರೆ ರಾಜ್ಯ ಮರಳಿ ಕೊಡಲಿಲ್ಲ. ಮಾತು ಕೊಟ್ಟವನು ತಾನೇ; ಮಾತಿನಂತೆ ನಡೆಯದವನೂ ತಾನೆ. ಭೂಮಿಯೂ ತನ್ನದಲ್ಲ ಅದರೊಳಡಗಿದ ಹೇಮವೂ ತನ್ನದಲ್ಲ. ಆದರೆ ಕೊಟ್ಟ ಮಾತಿನಂತೆ ನಡೆಯಬಾರದೆನ್ನುವ ಹಟ ದುರ್ಯೋಧನನಿಗೆ. ಮಾತು ಕೊಟ್ಟಂತೆ ನಡೆದುಕೊಳ್ಳಬೇಕೆನ್ನುವ ಹಟ ಪಾಂಡವರಿಗೆ.

ಕೌರವ ಪಾಂಡವ ತನುಗಳ ಮನ ಒಂದೇ. ಒಂದು ಕೊಡೆನೆನ್ನುವ ಮನ ಮತ್ತೊಂದು ಬಿಡೆನೆನ್ನುವ ಮನ. ಈ ಎರಡು ಮನಗಳ ಗುಣಗಳೊಂದೇ. ಈ ಮನಗಳು ತನುವಿನಲ್ಲಿರುವ ಸತ್ಯವನ್ನು ಬಳಸಿಕೊಳ್ಳಲೇ ಇಲ್ಲ. ಈ ಮನದ ಹಟಮಾರಿತನದಿಂದಲೇ 18 ಅಕ್ಷೋಹಿಣಿ ಸೈನ್ಯ ಬಲಿಯಾಯಿತು. ಕೊನೆಗೆ ತಾವೂ ಬಲಿಯಾದರು. ಭೂಮಿ ಅದರೊಳಗಿದ್ದ ಹೇಮ ನಷ್ಟವಾಗದೆ ಹಾಗೇ ಉಳಿಯಿತು. ತನುವಿನ ಮನಕ್ಕಾಗಿ ತನುಗಳು, ತನುವಿನ ದೇವಕಣಗಳು ವ್ಯರ್ಥ ಬಲಿಯಾದವು.

ಮನಕ್ಕೆ ತನುವಿನ ವಿರಾಟಸ್ವರೂಪ ತಿಳಿಯದಿದ್ದರೆ ಅದು ದೇವಕಣವಾಗಿ ತನುವಿನಲ್ಲಿ ಹಾಗೇ ಉಳಿಯುತ್ತದೆ. ಮನ ಒಮ್ಮೆ ಗುಣಿಯಾಗುತ್ತದೆ. ಮತ್ತೊಮ್ಮೆ ಅವಗುಣಿಯಾಗುತ್ತದೆ. ಒಮ್ಮೆ ಕಲಿಯಾಗುತ್ತದೆ ಮತ್ತೊಮ್ಮೆ ಹೇಡಿಯಾಗುತ್ತದೆ. ಒಮ್ಮೆ ಧರ್ಮಿಯಾಗುತ್ತದೆ ಮತ್ತೊಮ್ಮೆ ಅಧರ್ಮಿ ಯಾಗುತ್ತದೆ. ಇದು ಚಿತ್ರದ ಸತಿಯ ಶೃಂಗಾರದಂತೆ. ದುರ್ಯೋಧನನ ತನುವಿನಲ್ಲಿ ಕ್ರೌರ್ಯವನ್ನುಂಟು ಮಾಡಿದರೆ ಧರ್ಮರಾಯನಲ್ಲಿ ಸಮಾಧಾನವನ್ನು ಸತ್ಯದ ಹೆಸರನ್ನು ಪಡೆಯಿತು. ಅಶ್ವತ್ಥಾಮೊ ಹತಹ ಎಂದು ಹೇಳಿ ಅಸತ್ಯದ ಕಪ್ಪು ಚುಕ್ಕೆಯನ್ನೂ ಅಂಟಿಸಿತು. ಇವೆರಡು ಒಂದು ತನುವಿನ ಎರಡು ಮುಖಗಳು ಎನ್ನುವುದನ್ನು ತನುವಿಗೆ ಮರೆವು ಮಾಡಿ, ಮನ ತನುವಿನಲ್ಲಿಯೇ ವಾಸ ಮಾಡಿತು. ವಿರಾಟ ಸ್ವರೂಪದ ಸತ್ಯ ತನುವಿನಲ್ಲಿ ಚುಳುಕಾಗಿ ದೇವಕಣದಂತಾಯಿತು.

ಮನ ಎಲೆಯಿಲ್ಲದ ಮರದಂತೆ, ಜಲವಿಲ್ಲದ ನದಿಯಂತೆ, ದಯವಿಲ್ಲದ ಧರ್ಮದಂತೆ ನಯವಿಲ್ಲದ ಶಬ್ದದಂತೆ ಚಿತ್ರದ ಸತಿಯ ಶೃಂಗಾರದಂತೆ ಇದರ ಪ್ರಯೋಜನ.

ಚೆನ್ನಮಲ್ಲಿಕಾರ್ಜುನನೆಂಬ ತನುವಿನ ಅರಿವೇ ಪ್ರಜ್ವಲವಾದ ಬೆಳಕು. ಅದು ವಿರಾಟ ಸ್ವರೂಪ. ಅದರಲ್ಲಿ ಸಕಲ ಮನಗಳು ನಷ್ಟವಾಗುತ್ತವೆ. ಪ್ರಯೋಜನ ಕಳೆದುಕೊಳ್ಳುತ್ತವೆ. ಕೌರವರು ಪಾಂಡವರು ಇಲ್ಲವಾಗುತ್ತಾರೆ. ಅಷ್ಟೇಕೆ ಶ್ರೀ ಕೃಷ್ಣನೂ ತನ್ನ ಕುಬ್ಜ ರೂಪ ಕಳೆದುಕೊಂಡು ವಿರಾಟ ಸ್ವರೂಪ ತಾಳುತ್ತಾನೆ. ಶ್ರೀ ಕ್ರಿಷ್ಣ ಹಾಗೂ ಅಕ್ಕಮಹಾದೇವಿಗೆ ವಿರಾಟಸ್ವರೂಪದ ಅರಿವಾದಂತೆ ಆದರೆ ಸಕಲ ತನುಗಳೂ ವಿರಾಟಸ್ವರೂಪಿಗಳೇ.

□

**ಅರಿವಿನ ಪರಿಮಳ**

□ ಕೌರವ ಪಾಂಡವ ತನುಗಳ ಮನ ಒಂದೇ. ಒಂದು ಕೊಡೆನೆನ್ನುವ ಮನ ಮತ್ತೊಂದು ಬಿಡೆನೆನ್ನುವ ಮನ. ಈ ಎರಡು ಮನಗಳ ಗುಣಗಳೊಂದೇ. ಈ ಮನಗಳು ತನುವಿನಲ್ಲಿರುವ ಸತ್ಯವನ್ನು ಬಳಸಿಕೊಳ್ಳಲೇ ಇಲ್ಲ. ಈ ಮನದ ಹಟಮಾರಿತನದಿಂದಲೇ 18 ಅಕ್ಷೋಹಿಣಿ ಸೈನ್ಯ ಬಲಿಯಾಯಿತು. ಕೊನೆಗೆ ತಾವೂ ಬಲಿಯಾದರು. ಭೂಮಿ ಅದರೊಳಗಿದ್ದ ಹೇಮ ನಷ್ಟವಾಗದೆ ಹಾಗೇ ಉಳಿಯಿತು. ತನುವಿನ ಮನಕ್ಕಾಗಿ ತನುಗಳು, ತನುವಿನ ದೇವಕಣಗಳು ವ್ಯರ್ಥ ಬಲಿಯಾದವು.

□ ಮನಕ್ಕೆ ತನುವಿನ ವಿರಾಟಸ್ವರೂಪ ತಿಳಿಯದಿದ್ದರೆ ಅದು ದೇವಕಣವಾಗಿ ತನುವಿನಲ್ಲಿ ಹಾಗೇ ಉಳಿಯುತ್ತದೆ. ಮನ ಒಮ್ಮೆ ಗುಣಿಯಾಗುತ್ತದೆ. ಮತ್ತೊಮ್ಮೆ ಅವಗುಣಿಯಾಗುತ್ತದೆ. ಒಮ್ಮೆ ಕಲಿಯಾಗುತ್ತದೆ ಮತ್ತೊಮ್ಮೆ ಹೇಡಿಯಾಗುತ್ತದೆ. ಒಮ್ಮೆ ಧರ್ಮಿಯಾಗುತ್ತದೆ ಮತ್ತೊಮ್ಮೆ ಅಧರ್ಮಿ ಯಾಗುತ್ತದೆ. ಇದು ಚಿತ್ರದ ಸತಿಯ ಶೃಂಗಾರದಂತೆ.

□ ತನುವಿನ ಅರಿವೇ ಪ್ರಜ್ವಲವಾದ ಬೆಳಕು. ಅದು ವಿರಾಟ ಸ್ವರೂಪ. ಅದರಲ್ಲಿ ಸಕಲ ಮನಗಳು ನಷ್ಟವಾಗುತ್ತವೆ. ಪ್ರಯೋಜನ ಕಳೆದುಕೊಳ್ಳುತ್ತವೆ.

# ನಾಣಮರೆಯ ನೂಲು ಮರೆತ ಘನಾಂಗ

**ನಾಣ ಮರೆಯ ನೂಲು ಸಡಿಲಲು**
**ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿಗಳು.**
**ಪ್ರಾಣದೊಡೆಯ ಜಗದೊಳಗೆ ಮುಳುಗಲು ತೆರಹಿಲ್ಲದಿರಲು**
**ದೇವರ ಮುಂದೆ ನಾಚಲೆಡೆಯುಂಟೆ?**
**ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರಲು**
**ಮುಚ್ಚಿ ಮರೆಸು ವದಾಗುವುದು ಹೇಳಯ್ಯಾ ?**

**ನಾಣ ಮರೆಯ ನೂಲು ಸಡಿಲಲು ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿಗಳು:**

ಅಂಗಕ್ಕೆ ಗಂಡು ಹೆಣ್ಣು ಎನ್ನುವ ಜಾತಿಗಳಿಲ್ಲ. ಅಂಗದ ಮೇಲಿನ ಹೊದಿಕೆ ಒಂದೇ. ಅದರೊಳಗಡಗಿದ ವಸ್ತುಗಳು ಕೂಡಾ ಒಂದೇ. ಅಂಗದ ಮೇಲೆ ಚರ್ಮದ ಹೊದಿಕೆಯಿದೆ, ಅದರೊಳಗಡೆ ರಕ್ತ ಮೂಳೆ ಮಾಂಸ ಮೇದಸ್ಸು ಮಜ್ಜೆ ಇದೆ. ಅಂಗದ ಸೃಷ್ಟಿಗೆ ಕಾರಣವಾದದ್ದೇ ದೇವಾಂಗ. ಇದನ್ನು ಗುಪ್ತಾಂಗ, ಜನನೇಂದ್ರಿಯ ಎನ್ನಲು ಆದೀತೆ? ಸಾಧ್ಯವಾಗದು. ಐದು ಇಂದ್ರಿಯಗಳನ್ನು ಹೆಸರಿಸುತ್ತೇವೆ. ಸೃಷ್ಟಿಗೆ ಕಾರಣವಾದ ದೇವಾಂಗ ಇದರಲ್ಲಿ ಬರುವುದಿಲ್ಲ.

ದೇವಾಂಗ (ನಾಣ)ಕ್ಕೆ ನೂಲಿನ ಅವಶ್ಯಕತೆ ಇದೇಯೇ? ಉಟ್ಟ ನೂಲು ಸಡಲಿದರೆ ನಾಚಿಕೆ ಪಡಬೇಕೆ? ಹೆಣ್ಣು ಗಂಡೆಂಬ ಜಾತಿಗಳು ನಾಚುತ್ತವೆ. ಈ ನಾಚಿಕೆಯ ಹಿಂದೆ ಬಯಕೆ ಮರೆಯಾಗಿದೆ. ಬಯಕೆಯಿಂದಲೇ ಹೆಣ್ಣು ಗಂಡೆಂಬ ಜಾತಿಗಳು ಸೃಷ್ಟಿಯಾಗಿವೆ. ಅಂಗದ ರೂಪು ಹಲವಾದರೇನು? ದೇವಾಂಗದ ರೂಪು ಒಂದೇ!

ಅಂಗದ ರೂಪು ನೋಡಿದ ಕಣ್ಣು ನೂಲು ಸಡಿಲಿಸಿ ಬೆರೆಯಲು ಕಾತುರ ಪಟ್ಟಾಗ ದೇವಾಂಗ ನೋಡಿದ ಕಣ್ಣು ತಾನು ಹೆಣ್ಣೆಂದು ತಾನು ಗಂಡೆಂದು ತಿಳಿದು ನಾಚಿ ನೀರಾಯಿತು. ಅದು ತನ್ನಂತೆ ಇರುವ ಸೃಷ್ಟಿಗೆ ಕಾರಣವಾಗುವ ಜಂಗಮವೆಂದು ತಿಳಿಯಲಿಲ್ಲ. ದಾಸಿಮಾರ್ಯರು ದೇವಾಂಗಕ್ಕೆ ವಸ್ತ್ರವ ನೇಯ್ದರು. ಅಕ್ಕಮಹಾದೇವಿ ಮಹಾವೀರ ಅಂಗಕ್ಕೆ ಸುತ್ತಿಕೊಂಡ ವಸ್ತ್ರ ಕಿತ್ತೆಸೆದು ದೇವಾಂಗದ ವಸ್ತ್ರವನ್ನುಟ್ಟರು. ಜನ ನೋಡಲು ಇವರು ದಿಗಂಬರಿಗಳು. ಆದರೆ ಅವರು ಅಂಬರಿಗಳು ! ಆಕಾಶಕ್ಕೆ ಅಂಬರವನ್ನುಡಿಸಲು ಸಾಧ್ಯವೇ? ಸಾಧ್ಯವಾಗದು ಎಂದೇ ಹೇಳಬೇಕಾಗುತ್ತದೆ.

**ಪ್ರಾಣದೊಡೆಯ ಜಗದೊಳಗೆ ಮುಳುಗಲು ತೆರಹಿಲ್ಲದಿರಲು ದೇವರ ಮುಂದೆ ನಾಚಲೆಡೆಯುಂಟೆ?:**

ಅಂಗಕ್ಕೆ ಉಟ್ಟ ನೂಲು ಸಡಿಲಿದಾಗ ಸಡಿಲಿತೆಂದು ನಾಚುವುದು, ಸಡಿಲಿದ್ದನ್ನು ನೋಡಿ ನಾಚುವುದು ಸಹಜ. ಸೆಳೆದಾಗ ನಾಚಿ ಮುದ್ದೆಯಾಗುವುದು ಸಹಜ.

ಅಂಗದ ಕಣ ಕಣದಲ್ಲೂ ಸಂದಿಲ್ಲದಂತೆ ಚೆನ್ನಮಲ್ಲಿಕಾರ್ಜುನನೆಂಬ ಬೆಳಗಿನ ದೇವರು

ಮುಳುಗಿರಲು ನಾಚಿಕೆ ಪಡಲು ಎಡೆಯುಂಟೆ? ನೋಡುವ ನೋಟದಲ್ಲಿ ಆತನಿದ್ದು ನಾನುಡುವುದನ್ನೂ ನೋಡಿ ಬೇಡುತ್ತಾನೆ. ಉಡುವಾಗ ನೋಡುತ್ತಾನೆ; ಉಟ್ಟಾಗ ಆನಂದ ಪಡುತ್ತಾನೆ. ಆತನ ಮುಂದೆ ನಾನು ನಾಚಲುಂಟೆ ? ಎಂದು ಪ್ರಶ್ನಿಸುತ್ತಾಳೆ ಅಕ್ಕ.

**ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರಲು ಮುಚ್ಚಿ ಮರೆಸುವದಾವುದು ಹೇಳಯ್ಯಾ:**

ಚೆನ್ನಮಲ್ಲಿಕಾರ್ಜುನನೆಂಬ ಬಯಲ ದೇವರು ಜಗವೆಲ್ಲ ನೋಡಬಲ್ಲ. ಆತನ ಕಕ್ಷೆಯೊಳಗೇ ಸಕಲ ಜಗತ್ತು ! ಆತನೇ ಚುಳುಕಾಗಿ ತನುವಿನಲ್ಲಿ ಬಂದು ಸೇರಿರಲು ಆತನನ್ನು ಮುಚ್ಚಿ ಮರೆಸುವದಾದರೂ ಯಾವುದು?

ನಾಣ ಮರೆಯ ನೂಲು ಸೆಳೆಯಲು ಬಂದ ಕೌಶಿಕನನ್ನು ಕುರಿತು ಅಕ್ಕ

''ಕೈ ಸಿರಿಯ ದಂಡವ ಕೊಳಬಹುದಲ್ಲದೆ ಮೈ ಸಿರಿಯ ಕೊಳಲುಂಟೆ? ಉಟ್ಟಂತಹ ಉಡಿಗೆ ತೊಡಿಗೆಯನ್ನೆಲ್ಲ ಸೆಳೆದುಕೊಳಬಹುದಲ್ಲದೆ ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ? ಚೆನ್ನಮಲ್ಲಿಕಾರ್ಜುನ ದೇವರ ಬೆಳಗನ್ನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೇ?'' ಎಂದಿದ್ದಾಳೆ.

ಕಣ್ಣಲ್ಲಿರುವ ದೋಷ ಕಳೆದರೆ ಅದು ಬರೀ ಕಣ್ಣಲ್ಲ ಮುಕ್ಕಣ್ಣನ ಕಣ್ಣು. ಆ ಕಣ್ಣಿಗೆ ನೂಲಿದ್ದ ಅಂಗವಾದರೇನು ನೂಲು ಸಡಿಲಿದ ಅಂಗವಾದರೇನು ಅದು ದೇವಾಂಗವೇ ಆಗಿ ಕಾಣುತ್ತದೆ. ತನ್ನಂತೆಯೇ ಇರುವ ಘನಾಂಗವಾಗಿ ಕಾಣುತ್ತದೆ. ಮುಚ್ಚಿ ಮರೆಯುವ ತಾಪತ್ರಯವಿಲ್ಲದ ಬೆಳಗನೇ ಉಟ್ಟು ಬೆಳಗುವ ಘನಾಂಗವಾಗಿ ಕಾಣುತ್ತದೆ.

□

**ಅರಿವಿನ ಪರಿಮಳ**

- □ ದೇವಾಂಗ (ನಾಣ)ಕ್ಕೆ ನೂಲಿನ ಅವಶ್ಯಕತೆ ಇದೇಯೇ? ಉಟ್ಟ ನೂಲು ಸಡಲಿದರೆ ನಾಚಿಕೆ ಪಡಬೇಕೆ? ಹೆಣ್ಣು ಗಂಡೆಂಬ ಜಾತಿಗಳು ನಾಚುತ್ತವೆ. ಈ ನಾಚಿಕೆಯ ಹಿಂದೆ ಬಯಕೆ ಮರೆಯಾಗಿದೆ. ಬಯಕೆಯಿಂದಲೇ ಹೆಣ್ಣುಗಂಡೆಂಬ ಜಾತಿಗಳು ಸೃಷ್ಟಿಯಾಗಿವೆ. ಅಂಗದರೂಪು ಹಲವಾದರೇನು? ದೇವಾಂಗದರೂಪು ಒಂದೇ!
- □ ಅಂಗದ ರೂಪು ನೋಡಿದ ಕಣ್ಣು ನೂಲು ಸಡಿಲಿಸಿ ಬೆರೆಯಲು ಕಾತುರ ಪಟ್ಟಾಗ ದೇವಾಂಗ ನೋಡಿದ ಕಣ್ಣು ತಾನು ಹೆಣ್ಣೆಂದು ತಾನು ಗಂಡೆಂದು ತಿಳಿದು ನಾಚಿ ನೀರಾಯಿತು. ಅದು ತನ್ನಂತೆ ಇರುವ ಸೃಷ್ಟಿಗೆ ಕಾರಣ ವಾಗುವ ಜಂಗಮವೆಂದು ತಿಳಿಯಲಿಲ್ಲ.
- □ ಅಂಗದ ಕಣ ಕಣದಲ್ಲೂ ಸಂದಿಲ್ಲದಂತೆ ಚೆನ್ನಮಲ್ಲಿಕಾರ್ಜುನನೆಂಬ ಬೆಳಗಿನ ದೇವರು ಮುಳುಗಿರಲು ನಾಚಿಕೆ ಪಡಲು ಎಡೆಯುಂಟೆ? ನೋಡುವ ನೋಟದಲ್ಲಿ ಆತನಿದ್ದು ನಾನುಡುವುದನ್ನೂ ನೋಡಿ ಬೇಡುತ್ತಾನೆ. ಉಡುವಾಗ ನೋಡುತ್ತಾನೆ; ಉಟ್ಟಾಗ ಆನಂದ ಪಡುತ್ತಾನೆ. ಆತನ ಮುಂದೆ ನಾನು ನಾಚಲುಂಟೆ ?
- □ ಕಣ್ಣಲ್ಲಿರುವ ದೋಷ ಕಳೆದರೆ ಅದು ಬರೀ ಕಣ್ಣಲ್ಲ ಮುಕ್ಕಣ್ಣನ ಕಣ್ಣು. ಆ ಕಣ್ಣಿಗೆ ನೂಲಿದ್ದ ಅಂಗವಾದರೇನು ನೂಲು ಸಡಿಲಿದ ಅಂಗವಾದರೇನು ಅದು ದೇವಾಂಗವೇ ಆಗಿ ಕಾಣುತ್ತದೆ. ತನ್ನಂತೆಯೇ ಇರುವ ಘನಾಂಗವಾಗಿ ಕಾಣುತ್ತದೆ. ಮುಚ್ಚಿ ಮರೆಯುವ ತಾಪತ್ರಯವಿಲ್ಲದ ಬೆಳಗನೇ ಉಟ್ಟು ಬೆಳಗುವ ಘನಾಂಗವಾಗಿ ಕಾಣುತ್ತದೆ.

# ನಾನು ನಿನಗೊಲಿಯುವುದೇ ಸುಖ

**ನಾನು ನಿನಗೊಲಿದೆ, ನೀನು ಎನಗೊಲಿದೆ.**
**ನೀ ನೆನ್ನನಗಲದಿಪ್ಪೆ, ನಾನಿನ್ನನಗಲದಿಪ್ಪೆನಯ್ಯಾ.**
**ನಿನಗೆ ಎನಗೆ ಬೇರೊಂದು ಠಾವುಂಟೆ?**
**ನೀನು ಕರುಣೆಯೆಂಬುದ ಬಲ್ಲೆನು;**
**ನೀನಿರಿಸಿದ ಗತಿಯೊಳಗಿಪ್ಪವಳಾನು.**
**ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನಾ.**

''ನೀನಿಲ್ಲದನ್ಯ ದೈವವುಂಟೆಂಬವರ ಬಾಯ ಕೆನ್ನೆ ವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ, ಎನ್ನ ಕೋಪವಡಗದಯ್ಯಾ! ಎನ್ನ ಬಿನ್ನಪವನವಧರಿಸು, ಕೂಡಲಸಂಗಮದೇವಾ''

ನಾನು ನಿನಗೊಲಿದೆ, ನೀನು ಎನಗೊಲಿದೆ ಎಂದು ಅಕ್ಕ ಹಾಡಿದರೆ, ನೀನಲ್ಲ ದನ್ಯ ದೈವವುಂಟೆಂಬವರ ಬಾಯಿ ಕೆನ್ನೆ ಸೀಳಿದಲ್ಲದೆ ಎನ್ನ ಕೋಪ ಸಿಟ್ಟು ಅಡಗದಯ್ಯಾ ಎಂದು ಬಸವಣ್ಣ ಹಾಡಿದ್ದಾರೆ. ಇಬ್ಬರದೂ ಒಂದೇ ಆರ್ತನಾದ.

ನಾನು ಭಕ್ತ; ನನ್ನ ತನುವಿನ ಕಣಕಣದಲ್ಲಿರುವ ನೀನು ದೈವ. ನನಗೂ ನಿನಗೂ ಅವಿನಾಭಾವ ಸಂಬಂಧ! ನಾನಿಲ್ಲದೆ ನೀನಿಲ್ಲ; ನೀನಿಲ್ಲದೆ ನಾನಿಲ್ಲ! ನಾನು ಹೆಂಡತಿ ನೀನು ಗಂಡ; ನಾನು ನೀನು ವಾಸಿಸಿದ ಮನೆಗೆ ಸಾವುಂಟು ಕೇಡುಂಟು. ನನಗೂ ನಿನಗೂ ಸಾವಿಲ್ಲ ಕೇಡಿಲ್ಲ ರೂಪು ಮೊದಲೇ ಇಲ್ಲ. ನಿನಗೂ ಎನಗೂ ಬೇರೊಂದು ಠಾವುಂಟೆ? ನೀನು ಕರುಣೆ ಎಂಬುದ ಬಲ್ಲೆ,

ಎನ್ನೊಳಗಿನ ನಿನ್ನ ತಿಳಿಯದ ಮುನ್ನ ಆಭರಣ ನೋಡಿ ಅಪ್ಪಿಕೊಂಡೆ. ಅದು ಬರೀ ಲೋಹ, ಬಣ್ಣ, ಮಾಟದ ವಸ್ತುವೆಂದು ನೀನು ಮೈದಡವಿದ್ದು ಕೇಳಿ ಬೆರಗಾದೆ!

ಕರೆನ್ಸಿ ನೋಡಿ ಕಳುವಿಗಿಳಿದೆ, ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡಿದೆ. ಕರುಣಾಳು ನೀನು; ಅದರಲ್ಲಿ ಬರೀ ಕಾಗದ ತೋರಿ ನನ್ನನ್ನು ಬಿಗಿದಪ್ಪಿದೆ. ನೀನಿರಿಸಿದ ಗತಿಯೊಳಗಿಪ್ಪವಳು ನಾನು. ನಿನಗೂ ಎನಗೂ ಅವಿನಾಭಾವ ಸಂಬಂಧ! ಎನ್ನೊಳಗಿನ ನಲ್ಲ ನೀನು; ನಿನ್ನ ತಿಳಿಯದ ಮುನ್ನ ರೂಪು ನೋಡಿ ಮದುವೆಯಾದೆ. ಆದರೆ ಕರುಣಾಳು ನೀನು ರೂಪದಲ್ಲಿಯ ಚರ್ಮ ರಕ್ತ ಮಾಂಸ ಮೂಳೆ ತೋರಿದೆ. ಅದು ಸಾವು ಕೇಡುಳ್ಳುದೆಂದು ಬಿತ್ತರಿಸಿದೆ. ಅದರಲ್ಲಿಯೇ ಸಾವಿಲ್ಲದ ಕೇಡಿಲ್ಲದ ರೂಪಿಲ್ಲದ ನಿರೂಪ ತೋರಿ ನನ್ನನ್ನು ಬಿಗಿದಪ್ಪಿಕೊಂಡೆ! ಆಹಾ ನನಗೂ ನಿನಗೂ ಅವಿನಾಭಾವ ಸಂಬಂಧ !!

ವೆಂಕಟೇಶ, ಗಣಪತಿ ಮಲ್ಲಿಕಾರ್ಜುನ, ವಿಶ್ವನಾಥ,ಅಯ್ಯಪ್ಪ, ಅಮರನಾಥಗಳಿಗೆ ಅಲೆದಲೆದು ಪೂಜಿಸಿ ಬೇಸತ್ತೆ. ಇವರೆಲ್ಲರ ತಂದು ಜಗಲಿಮೇಲಿಟ್ಟು ಆರಾಧಿಸಿದೆ. ಆದರೆ ಕರುಣಾಳು ನೀನು ; ಮೂರ್ತಿಗಳಲ್ಲಿಯ ಕಲ್ಲು ತೋರಿ ಮತ್ತೆ ಪೂಜಿಸದಂತೆ ಬರಸೆಳೆದು ಅಪ್ಪಿಕೊಂಡೆ. ನಿನಗೂ ಎನಗೂ ಅವಿನಾಭಾವ ಸಂಬಂಧ ! ನೀನಿಕ್ಕಿದ ಬೀಯದಲ್ಲಿ

ವಂಚನೆಯುಳ್ಳಡೆ ಸಂಗಾ, ನಿಮ್ಮ ತೊತ್ತುತನಕ್ಕೆ ದೂರವಯ್ಯಾ. ಕದ್ದು ತಂದಡೆ ಕೈ ಒಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ ಎಂದು ತನ್ನೊಳಗಿನ ಅವನಲ್ಲಿ ಮೊರೆ ಇಟ್ಟ ಬಸವಣ್ಣನ ಮಾತು, ಅಕ್ಕನ ಮಾತು ಒಂದಲ್ಲವೆ ?

ಇದು ಶರಣರ ಅಮೃತದ ಬುತ್ತಿ ಇದನುಂಡ ನಾವು ಅವರಿಗೊಲಿಯುವುದೇ ಲೇಸು ! ಅವರಿಗೊಲಿದು ಅವರಂತಾಗುವುದೇ ಅತಿ ಲೇಸು !

□

**ಅರಿವಿನ ಪರಿಮಳ**

□ ನಾನು ಭಕ್ತ; ನನ್ನ ತನುವಿನ ಕಣಕಣದಲ್ಲಿರುವ ನೀನು ದೈವ. ನನಗೂ ನಿನಗೂ ಅವಿನಾಭಾವ ಸಂಬಂಧ! ನಾನಿಲ್ಲದೆ ನೀನಿಲ್ಲ; ನೀನಿಲ್ಲದೆ ನಾನಿಲ್ಲ! ನಾನು ಹೆಂಡತಿ ನೀನು ಗಂಡ; ನಾನು ನೀನು ವಾಸಿಸಿದ ಮನೆಗೆ ಸಾವುಂಟು ಕೇಡುಂಟು. ನನಗೂ ನಿನಗೂ ಸಾವಿಲ್ಲ ಕೇಡಿಲ್ಲ ರೂಪು ಮೊದಲೇ ಇಲ್ಲ. ನಿನಗೂ ಎನಗೂ ಬೇರೊಂದು ಠಾವುಂಟೆ? ನೀನು ಕರುಣಿ ಎಂಬುದ ಬಲ್ಲೆ.

□ ಕರೆನ್ಸಿ ನೋಡಿ ಕಳುವಿಗಿಳಿದೆ, ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡಿದೆ. ಕರುಣಾಳು ನೀನು; ಅದರಲ್ಲಿ ಬರೀ ಕಾಗದ ತೋರಿ ನನ್ನನ್ನು ಬಿಗಿದಪ್ಪಿದೆ. ನೀನಿರಿಸಿದ ಗತಿಯೊಳಗಿಪ್ಪವಳು ನಾನು. ನಿನಗೂ ಎನಗೂ ಅವಿನಾಭಾವ ಸಂಬಂಧ! ಎನ್ನೊಳಗಿನ ನಲ್ಲ ನೀನು; ನಿನ್ನ ತಿಳಿಯದ ಮುನ್ನ ರೂಪು ನೋಡಿ ಮದುವೆಯಾದೆ. ಆದರೆ ಕರುಣಾಳು ನೀನು ರೂಪದಲ್ಲಿಯ ಚರ್ಮ ರಕ್ತ ಮಾಂಸ ಮೂಳೆ ತೋರಿದೆ. ಅದು ಸಾವು ಕೇಡುಳ್ಳುದೆಂದು ಬಿತ್ತರಿಸಿದೆ. ಅದರಲ್ಲಿಯೇ ಸಾವಿಲ್ಲದ ಕೇಡಿಲ್ಲದ ರೂಪಿಲ್ಲದ ನಿರೂಪ ತೋರಿ ನನ್ನನ್ನು ಬಿಗಿದಪ್ಪಿಕೊಂಡೆ! ಆಹಾ ನನಗೂ ನಿನಗೂ ಅವಿನಾಭಾವ ಸಂಬಂಧ !!

# ತನುವಿನ ಮರಹು ವಿಂಗಡಿಸಿದರೆ ಅರ್ಧನಾರೀಶ್ವರ ತಾನೆ

**ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು.**
**ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು.**
**ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು.**
**ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು.**
**ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿದಲ್ಲಿ**
**ನಾ ನಿಮ್ಮ ಮರೆದು ಭವದುಃಖಕ್ಕೀಡಾದೆ**
**ನೀ ಕರುಣದಿಂದೆತ್ತಿ ಎನ್ನ ಮರಹ ವಿಂಗಡಿಸಿ**
**ನಿಮ್ಮ ಪಾದವನರುಹಿಸಯ್ಯ, ಚೆನ್ನಮಲ್ಲಿಕಾರ್ಜುನಾ.**

**ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು :**

ತನುವಿನ ಮನೆಯಲ್ಲಿ ನಾನು ಎನ್ನುವ ಮನ, ಅವನು ಎನ್ನುವ ಅರಿವು ಖಾಯಂ ನಿವಾಸಿಗಳು. ನಾನು ಎನ್ನುವ ಮನ, ಅರಿವು ಎನ್ನುವ ಗಂಡನೊಂದಿಗೆ ಹೆಂಡತಿಯಾಗಿ ಬಾಳಿದರೆ ಅದು ಸದಾ ಸುಖೀ ಸಂಸಾರ. ಗಂಡ ಕಣ್ಣಿನ ಮೂಲಕ ಬೆಳಗಿದರೆ, ಹೆಂಡತಿ ಆ ಬೆಳಗಿನ ಸೌಂದರ್ಯ ಸವಿಯುತ್ತಾಳೆ. ಗಂಡ ನಾಲಿಗೆ ಮೂಲಕ ರುಚಿಸಿದರೆ, ಹೆಂಡತಿ ರುಚಿ ಆಸ್ವಾದಿಸುತ್ತಾಳೆ. ಗಂಡ ಕಿವಿಯ ಮೂಲಕ ಕೇಳಿದರೆ ಶಬ್ದದ ಆನಂದ ಹೆಂಡತಿ ಸವಿಯುತ್ತಾಳೆ. ಮೂಗಿಗೆ ಪರಿಮಳ ತಾಗಿದರೆ ಅದನ್ನು ಆನಂದದಿಂದ ಆಸ್ವಾದಿಸುತ್ತಾಳೆ. ಗಂಡ ಸ್ಪರ್ಶವನ್ನು ಅರುಹಿದರೆ, ಅದರ ಸುಖದಿಂದ ಆತನನ್ನು ಬಿಗಿದಪ್ಪಿ ಹೆಂಡತಿ ತನ್ನನ್ನೇ ಮರೆಯುತ್ತಾಳೆ. ಸ್ವರ್ಗ ಸುಖದಲ್ಲಿ ತೇಲಾಡುತ್ತಾಳೆ. ಕೂಡದ ಅಗಲದ ಕೂಟದ ಸವಿಯನು ಸದಾ ಸವಿಯುತ್ತಾಳೆ.

ತನುವೆಂಬ ಮನೆ ಗಂಡನದು, ಅದಕ್ಕೆ ಸಂಬಂಧಿಸಿದ ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಕೂಡಾ ಆತನ ಸೊತ್ತು. ತನು ಎಂಬ ಮನೆಗೆ ಮನವೆಂಬ ಹೆಂಡತಿ ನಡೆಯಲು ಬಂದಿದ್ದಾಳೆ. ನಡೆದರೆ ಗರತಿ ಎನ್ನಿಸಿಕೊಳ್ಳುತ್ತಾಳೆ ನಡೆಯದಿದ್ದರೆ ಹಾದರಗಿತ್ತಿ ಸೂಳೆ ಎನ್ನಿಸಿಕೊಳ್ಳುತ್ತಾಳೆ.

ಪಂಚೇಂದ್ರಿಯಗಳ ಮೂಲಕ ಗಂಡನೊಂದಿಗೆ ಮನ ರುಚಿ ಅನುಭವಿಸುತ್ತದೆ. ಆ ರುಚಿಗಾಗಿ ತನುವನ್ನು ಹೋಟೆಲ್, ಪಬ್, ಬಾರ್‌ಗೆ ಕರೆದೊಯ್ಯಬಹುದೇ? ಅರಿವೆಂಬ ಗಂಡ ಬೇಡವೆಂದರೂ ಮನ ಆ ತನುವನ್ನು ವೇಶ್ಯೆ ವಿಟನೊಂದಿಗೆ ಸುಖಿಸಬಹುದೇ?

ವೇಶ್ಯೆ , ಹಾದರಗಿತ್ತಿ, ನಾಯಿ ಎಂಬ ನಿಂದೆಗೆ ಪಾತ್ರಳಾಗಬಹುದೇ ? ತನುವಿನೊಂದಿಗೆ ಮನ ಮಾಡುವ ಹಾದರ ಜನಕ್ಕೆ ಗೊತ್ತಾಗದಿರಬಹುದು ಆದರೆ ಗಂಡನಿಗೆ ಗೊತ್ತಾಗುವುದಿಲ್ಲವೇ?ನೋಡಿದ ಜನ ಹೆಂಡತಿಗೆ ಸಾವಿತ್ರಿ ಎಂದರೆ ಹಾದರ ನೋಡಿದ ಗಂಡ ಹೆಂಡತಿಗೆ ನಾಯಿ ಎನ್ನುವುದಿಲ್ಲವೇ ?

ತಾನು ಲಂಚಕೋರ ಹಾದರಿಗ ಭ್ರಷ್ಟ ವಿಷಯಲಂಪಟ ಎನ್ನುವುದು ಜನಕ್ಕೆ

ಗೊತ್ತಾಗದಿದ್ದರೇನು ? ಗಂಡನೆಂಬ ಅರಿವಿಗೆ ಗೊತ್ತಿಲ್ಲವೇ ? ತಾನು ತನ್ನ ಗಂಡನಿಗೆ ಗರತಿಯಾಗಬೇಕೋ ಅಥವಾ ಜನಕ್ಕೆ ಗರತಿಯೆಂದು ತೋರಬೇಕೋ ? ಎನ್ನುವುದನ್ನು ಮನ ಯೋಚಿಸಬೇಡವೇ ?

ಮನ ಅರಿವಿನ ರುಚಿ ಸಂಗ್ರಹಿಸುತ್ತದೆ. ರುಚಿಯ ಸುಖವನ್ನು ಮತ್ತೆ ಮತ್ತೆ ತನುವಿನೊಂದಿಗೆ ಭೋಗಿಸಲು ಸಂಸಾರ ಹೂಡುತ್ತದೆ. ಹಾದರ ಮಾಡುತ್ತದೆ. ಲಂಚ ಪಡೆಯುತ್ತದೆ. ಹಣ, ಆಭರಣ, ಭೂಮಿ ವಿಷಯ ಸುಖಕ್ಕಾಗಿ ಹಾತೊರೆಯುತ್ತದೆ. ದೊರೆತರೆ ಸುಖಿಸುತ್ತದೆ. ದೊರೆಯದಿದ್ದರೆ ದುಃಖಿಸುತ್ತದೆ. ಕೊಲೆ ಸುಲಿಗೆ ಕಳುವು ಭ್ರಷ್ಟಾಚಾರದಲ್ಲಿ ಪಾಲ್ಗೊಂಡು ತನುವಿಗೆ ಸಂಕಟವನ್ನೊಡ್ಡುತ್ತದೆ. ಸೆರೆಮನೆಗೆ ತಳ್ಳುತ್ತದೆ. ಹಾದರಗಿತ್ತಿ ಮನವೆಂಬ ಹೆಂಡತಿಗೆ ದುಃಖವೇ ಹೊರತು ; ತನುವಿನ ಅರಿವೆಂಬ ಗಂಡನಿಗೆ ದುಃಖವೇ ಇಲ್ಲ. ತನು ಅರಮನೆಯಲ್ಲಿದ್ದರೇನು ? ಸೆರೆಮನೆಯಲ್ಲಿದ್ದರೇನು ? ಕೋಪಾಗ್ನಿಯ ತಾಮಸ ಧೂಮ್ರ ಮುಸುಕಿ ಬೆಂದರೇನು ತಾನು (ಗಂಡ ) ಮಾತ್ರ ಸದಾ ಸುಖಿ !

ಗಂಡ ಹೆಂಡತಿಯನ್ನು ಕರೆದು ಕಟ್ಟುವವನಲ್ಲ, ತುರಿಸಿ ಮೇವು ಹಾಕುವವನಲ್ಲ. ಗಂಡನೊಂದಿಗಿದ್ದರೆ ಆಕೆ ಹೆಂಡತಿ, ಹೊರಗೆ ಹೋದರೆ ನಾಯಿ, ಹಾದರಗಿತ್ತಿ.

ಕುತ್ತಿಗೆಗೆ ಕಟ್ಟಿದ ಬೆಲ್ಟ್ ಮಾತ್ರ ಗಂಡನ ಕೈಯಲ್ಲಿರುತ್ತದೆ. ನೆನಪಾದರೆ ತನ್ನೊಂದಿಗೆ ಬಂದು ಸಂಸಾರ ಹೂಡಲಿ ಎಂದು !

ಆ ನಾಯಿಗೆ ಸಂಸಾರ ಹುಟ್ಟಿದೆ, ಅಜ್ಞಾನವೂ ಹುಟ್ಟಿದೆ. ಆಶೆಯೂ ಹುಟ್ಟಿದೆ. ಕೋಪ ಹುಟ್ಟಿ ಆ ತಾಪದಲ್ಲಿ ತಾನೇ ಬೇಯುತ್ತದೆ. ಗಂಡನನ್ನು ಮರೆತು ಭವದುಃಖಕ್ಕೀಡಾಗಿದೆ. ತನ್ನ ಮರಹು ವಿಂಗಡಿಸಿಕೊಂಡು ಹಿಂದೆ ನೋಡಿದರೆ ಸಾಕು ಬೆಲ್ಟ್ ಕಳಚಿ ಕರುಣೆಯಿಂದೆತ್ತಿ ಅಪ್ಪಿಕೊಳ್ಳುತ್ತಾನೆ. ಬಿಚ್ಚಿ ಬೇರಾಗದಂತೆ ಆಲಿಂಗಿಸಿಕೊಂಡು ಅರಿವಿನ ಸುಖವನೆರೆದು ಪಾವನಗೈಯುತ್ತಾನೆ. ಮನವೆಂಬ ಹೆಂಡತಿ ಮಾಡಿದ ಬೆಟ್ಟದನಿತಪರಾಧವನು ಒಂದು ಬೊಟ್ಟಿಲೆ ಕೊಡವಿ ತನ್ನವಳನ್ನಾಗಿಸಿಕೊಳ್ಳುತ್ತಾನೆ. ಹೆಂಡತಿಗೆ ಕೂಡಲೇ ಅರ್ಧಾಂಗಿಯ ಪಟ್ಟ ಕಟ್ಟುತ್ತಾನೆ. ಅರ್ಧನಾರೀಶ್ವರನಾಗುತ್ತಾನೆ.

□

**ಅರಿವನ ಪರಿಮಳ**

- □ ತನುವಿನ ಮನೆಯಲ್ಲಿ ನಾನು ಎನ್ನುವ ಮನ, ಅವನು ಎನ್ನುವ ಅರಿವು ಖಾಯಂ ನಿವಾಸಿಗಳು. ನಾನು ಎನ್ನುವ ಮನ, ಅರಿವು ಎನ್ನುವ ಗಂಡನೊಂದಿಗೆ ಹೆಂಡತಿಯಾಗಿ ಬಾಳಿದರೆ ಅದು ಸದಾ ಸುಖೀ ಸಂಸಾರ. ಗಂಡ ಕಣ್ಣಿನ ಮೂಲಕ ಬೆಳಗಿದರೆ, ಹೆಂಡತಿ ಆ ಬೆಳಗಿನ ಸೌಂದರ್ಯ ಸವಿಯುತ್ತಾಳೆ.
- □ ತನುವೆಂಬ ಮನೆ ಗಂಡನದು, ಅದಕ್ಕೆ ಸಂಬಂಧಿಸಿದ ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಕೂಡಾ ಆತನ ಸೊತ್ತು. ತನು ಎಂಬ ಮನೆಗೆ ಮನವೆಂಬ ಹೆಂಡತಿ ನಡೆಯಲು ಬಂದಿದ್ದಾಳೆ. ನಡೆದರೆ ಗರತಿ ಎನ್ನಿಸಿಕೊಳ್ಳುತ್ತಾಳೆ ನಡೆಯದಿದ್ದರೆ ಹಾದರಗಿತ್ತಿ ಎನ್ನಿಸಿಕೊಳ್ಳುತ್ತಾಳೆ.
- □ ಗಂಡ ಹೆಂಡತಿಯನ್ನು ಕರೆದು ಕಟ್ಟುವವನಲ್ಲ, ತುರಿಸಿ ಮೇವು ಹಾಕುವವನಲ್ಲ. ಗಂಡನೊಂದಿಗಿದ್ದರೆ ಆಕೆ ಹೆಂಡತಿ, ಹೊರಗೆ ಹೋದರೆ ನಾಯಿ, ಹಾದರಗಿತ್ತಿ.ಕುತ್ತಿಗೆಗೆ ಕಟ್ಟಿದ ಬೆಲ್ಟ್ ಮಾತ್ರ ಗಂಡನ ಕೈಯಲ್ಲಿರುತ್ತದೆ. ನೆನಪಾದರೆ ತನ್ನೊಂದಿಗೆ ಬಂದು ಸಂಸಾರ ಹೂಡಲಿ ಎಂದು !

# ಭ್ರಮರ ಮತ್ತು ಬ್ರಹ್ಮಕಮಲ

**ನಾಳೆ ಬರುವುದು ನಮಗಿಂದೇ ಬರಲಿ,**
**ಇಂದು ಬರುವುದು ನಮಗೀಗಲೇ ಬರಲಿ ;**
**ಆಗೀಗ ಎನ್ನದಿರೊ, ಚೆನ್ನಮಲ್ಲಿಕಾರ್ಜುನಾ.**

ತನು ನೂರಾರು ವರುಷಗಳವರೆಗೆ ಬದುಕಬಹುದು. ಅಕ್ಕನ ಮೂರು ಸಾಲಿನ ಈ ವಚನದಲ್ಲಿಯ ಮೂರು ಶಬ್ದಗಳು ತಿಳಿಯದಿದ್ದರೆ ಆ ಬದುಕೇ ವ್ಯರ್ಥ.

ಅಕ್ಕ ಈ ವಚನದಲ್ಲಿ ನಾಳೆ, ಇಂದು ಮತ್ತು ಈಗ ಎನ್ನುವ ಮೂರು ಶಬ್ದಗಳಿಗೆ ಒತ್ತುಕೊಟ್ಟಿದ್ದಾಳೆ. ''ಇಂದಿಗೆಂತು ನಾಳಿಗೆಂತು ಎಂದು ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ ! ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ ! ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ ! ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ ; ಕೂಡಲ ಸಂಗಮದೇವಾ ! '' ಎಂದು ಬಸವಣ್ಣ ಹೇಳಿದ್ದಾರೆ.

''ಭೂತ ಭವಿಷದ್ವರ್ತಮಾನಗಳರಿವಿಕೆಯದು ಭೂತಪ್ರಾಣಿಗಳಿಗೆ ರಂಜನೆಯಲ್ಲದೆ ಭೂತೇಶನ ಮನೋರಂಜನೆಯಾಗದು ನೋಡಾ ಮನವೆ, ನಿತ್ಯಲಿಂಗಾರ್ಚನೆ, ನಿತ್ಯಾನುಷ್ಠಾನ, ನಿತ್ಯಮಂತ್ರವಿಚಾರ, ನಿತ್ಯಪಾದೋದಕ ಪ್ರಸಾದ ಸ್ವೀಕಾರವದು ಕಪಿಲಸಿದ್ಧ ಮಲ್ಲಿಕಾರ್ಜುನನ ಮನಃಕಂಜಲ್ಕ ವಿಕಸನ ನೋಡಾ, ಮನೋಭ್ರಮರವೆ ''ಎಂದು ಸಿದ್ಧರಾಮ ಶಿವಯೋಗಿಗಳು ಹೇಳಿದ್ದಾರೆ.

''ಇಂದು ಸಾವ ಹೆಂಡತಿಗೆ, ನಾಳೆ ಸಾವ ಗಂಡನವ್ವಾ ! ಗಳಿಗೆ ಗಳಿಗೆಗೆ ಮಗು ಹುಟ್ಟಿ ಕೈ ಬಾಯ್ಗೆ ಬಂದಿತ್ತವ್ವಾ! ಅರಿವು ಕುರುಹನು ಮರವೆ ನುಂಗಿತ್ತು ಗುಹೇಶ್ವರನುಳಿದನವ್ವಾ ! '' ಎಂದು ಅಲ್ಲಮಪ್ರಭು ಹೇಳುತ್ತಾರೆ.

ಗತಿಸಿದ ದಿನಗಳನ್ನು ಮೆಲುಕು ಹಾಕಿ ಸುಖಿಸುವುದು, ದುಃಖಿಸುವುದು. ಭವಿಷತ್‌ಕಾಲದಲ್ಲಿ ಸುಖದಿಂದಿರಲು ಚಿಂತಿಸಿ ದುಃಖಿಸುವುದು. ಇವೆರಡು ಇಂದು ಸಾವ ಹೆಂಡತಿಗೆ, ನಾಳೆ ಸಾವ ಗಂಡನಂತೆ ; ಬರೀ ಚಿಂತೆ ! ಗಳಿಗೆ ಗಳಿಗೆಗೆ ಪ್ರಸವದ ವೇದನೆ.

ಪಾಂಡವರನ್ನು ದುರ್ಯೋಧನ ತನ್ನ ಸುಖಕ್ಕಾಗಿ ಕಾಡಿಗೆ ಕಳುಹಿದ. ಹದಿಮೂರು ವರ್ಷಗಳ ಪರ್ಯಂತ ತಾನು ಅರಮನೆಯಲ್ಲಿದ್ದರೂ ಸುಖ ಪಡಲಿಲ್ಲ. ಕ್ಷಣ ಕ್ಷಣಕ್ಕೂ ಅವರದೇ ಚಿಂತೆ ! ಅವನು ತಿನ್ನುವ ಮೃಷ್ಟಾನ್ನ ವಿಷಾನ್ನವಾಯಿತು. ಗಳಿಗೆ ಗಳಿಗೆಗೂ ಪ್ರಸವದ ನೋವು ಅನುಭವಿಸಿದ. ಸದಾ ಅವನಿಗೆ ನಾಳೆಯದೇ ಚಿಂತೆಯಾಯಿತು. ತನ್ನ ತನುವನ್ನು, ತನುವಿನಲ್ಲಿ ಇರುವ ಅರಿವನ್ನು ತನ್ನ ಮರಹು ನುಂಗಿತ್ತು. ಸುಖದ ಸುಖಕ್ಕಾಗಿ ಬಂದ ಕಾಯ ಕ್ಷಣ ಕ್ಷಣಕ್ಕೂ ನರಕಯಾತನೆ ಅನುಭವಿಸಿ ಕೊನೆಗೆ ಅವಸಾನ ಕಂಡಿತು.

ಭೂತ ಭವಿಷತ್ ವರ್ತಮಾನಗಳನ್ನು ತಿಳಿಯುವುದು, ಅವುಗಳ ಮೇಲೆ ಕತೆ ಕಟ್ಟಿ

ಸಾಹಿತ್ಯ ಹೆಣೆಯುವುದು, ಭೂತಪ್ರಾಣಿಗಳಿಗೆ ರಂಜನೆಯ ವಿಷಯವಾಗುತ್ತದೆ. ಆದರೆ ತನುವಿನಲ್ಲಿರುವ ಭೂತೇಶನಿಗೆ ರಂಜನೆಯಾಗದು. ನಾಳೆ ಬರುವುದನ್ನು, ಇಂದು ಬರುವುದನ್ನು ಈಗಲೇ ಬರುವುದನ್ನು ಅರಿವಿನಿಂದ ನೋಡಿ, ಕೇಳಿ, ರುಚಿಸಿ, ಸ್ಪರ್ಶಿಸಿ, ವಾಸಿಸಿ ನಪುಂಸಕಗೊಳಿಸಿ ಪ್ರಸಾದ ರೂಪದಲ್ಲಿ ಸ್ವೀಕರಿಸುವ ಶಕ್ತಿ ಕೂಡಾ ತನುವಿನಲ್ಲಿಯೇ ಇದೆ. ಬೆಳಕಿಗೆ ಕತ್ತಲು ಆಹಾರ ವಾಗುವಂತೆ, ಅರಿವಿಗೆ ಅಜ್ಞಾನ ಆಹಾರವಾಗುವಂತೆಯೇ ತನುವಿನ ಬ್ರಹ್ಮನಿಗೆ ತನುವಿನಿಂದುಂಟಾಗುವ ಭ್ರಮೆಯೇ ಆಹಾರವಾಗುತ್ತದೆ.

ಆಗ ತನುವಿನ ಭ್ರಮೆಯೇ ಮನೋಭ್ರಮರವಾಗಿ ತನುವಿನ ಬ್ರಹ್ಮನ ಪರಿಮಳ ಸವಿಯುತ್ತದೆ. ಬ್ರಹ್ಮಕಮಲದ ಪಕಳೆಗಳಲ್ಲಿ ಸಿಲುಕಿ ಬ್ರಹ್ಮನಲ್ಲಿಯೇ ಲೀನವಾಗಿ ಬ್ರಹ್ಮನೇ ತಾನಾಗುತ್ತದೆ. ನಾಳೆ ಇಂದು ಆಗೀಗ ಎನ್ನದೆ ಮಲ್ಲಿಕಾರ್ಜುನನೇ ತಾನಾಗುತ್ತದೆ. ಇಂದಿಂಗೆ ನಾಳಿಂಗೆ ಎನ್ನದೆ ಒಡಲ ಒಡೆಯನಾದ ಸದಾಶಿವನನ್ನು ಕೂಡಿ ಸಂಗಮವಾಗುತ್ತದೆ. ಹೃದಯಂಗಮವಾಗುತ್ತದೆ.

□

---

**ಅರಿವಿನ ಪರಿಮಳ**

- □ ಭೂತ ಭವಿಷತ್ ವರ್ತಮಾನಗಳನ್ನು ತಿಳಿಯುವುದು, ಅವುಗಳ ಮೇಲೆ ಕತೆ ಕಟ್ಟಿ ಸಾಹಿತ್ಯ ಹೆಣೆಯುವುದು, ಭೂತಪ್ರಾಣಿಗಳಿಗೆ ರಂಜನೆಯ ವಿಷಯವಾಗುತ್ತದೆ. ಆದರೆ ತನುವಿನಲ್ಲಿರುವ ಭೂತೇಶನಿಗೆ ರಂಜನೆಯಾಗದು.
- □ ಆಗ ತನುವಿನ ಭ್ರಮೆಯೇ ಮನೋಭ್ರಮರವಾಗಿ ತನುವಿನ ಬ್ರಹ್ಮನ ಪರಿಮಳ ಸವಿಯುತ್ತದೆ. ಬ್ರಹ್ಮಕಮಲದ ಪಕಳೆಗಳಲ್ಲಿ ಸಿಲುಕಿ ಬ್ರಹ್ಮನಲ್ಲಿಯೇ ಲೀನವಾಗಿ ಬ್ರಹ್ಮನೇ ತಾನಾಗುತ್ತದೆ.

# ಕಾಮನ ಸುಟ್ಟು ಸ್ವಯಂ ಜ್ಯೋತಿಯಾಗುವ ಸೂತ್ರ

ನಿತ್ಯ ತೃಪ್ತಂಗೆ ನೈವೇದ್ಯದ ಹಂಗೇತಕ್ಕೆ ?
ಸುರಾಳ ನಿರಾಳಂಗೆ ಮಜ್ಜನದ ಹಂಗೇತಕ್ಕೆ ?
ಸ್ವಯಂಜ್ಯೋತಿರ್ಮಯಂಗೆ ದೀಪಾರಾಧನೆಯ ಹಂಗೇತಕ್ಕೆ ?
ಸುವಾಸನೆ ಸೂಕ್ಷ್ಮಗಂಧ ಕರ್ಪೂರಗೌರಂಗೆ ಪುಷ್ಪದ ಹಂಗೇತಕ್ಕೆ ?
ಮಾಟದಲಿ ಮನ ನಂಬುಗೆಯಿಲ್ಲದ, ಅಹಂಕಾರಕ್ಕೀಡಾದ,
ಭಕ್ತಿಯೆಂಬ ಪಸಾರವನಿಕ್ಕಿ ಹೊಲೆ ಹದಿನೆಂಟುಜನ್ಮವ ಹೊರೆವುದರಿಂದ
ಅಂಗೈಯಲೊರಸಿ ಮುಕ್ತಿಯ ಮೂಲ ಶಿಖಿರಂಧ್ರದ ಕಾಮನ ಸುಟ್ಟು
ಶುದ್ಧಸ್ಫಟಿಕ ಸ್ವಯಂಜ್ಯೋತಿಯನು
ಸುನಾಳದಿಂದ ಹಂ ಕ್ಷಂ ಎಂಬೆರಡಕ್ಷರವ
ಸ್ವಯಾನುಭಾವ ಭಕ್ತಿ ನಿರ್ವಾಣವಾದವರ ನೆನಗೊಮ್ಮೆ ತೋರಿದೆ
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ.

ಮನ ತನುವಿನ ಹುಟ್ಟಿನೊಂದಿಗೆ ಬಂದು ಸಾಯುವವರೆಗೂ ತನುವನ್ನು ಸಂಕಟಕ್ಕೀಡು ಮಾಡುತ್ತದೆ. ಅಹಾಂಕಾರಕ್ಕೀಡಾದ ಮನಕ್ಕೆ ತಾನು ಮಾಡುವ ಕೆಲಸದಲ್ಲಿ ತನಗೇ ನಂಬಿಗೆಯಿಲ್ಲ. ತನ್ನ ಮೂಗಿನ ನೇರಕ್ಕೆ ತನುವನ್ನು ಕೆಲಸಕ್ಕೆ ಹಚ್ಚುತ್ತದೆ.

ತನು ಮತ್ತು ತನುವಿನ ಅರಿವು ನಿತ್ಯ ತೃಪ್ತ. ಅರಿವು ನಾಲಿಗೆಯ ಮೂಲಕ ಸಕಲ ರುಚಿಗಳನು ಹೀರಿ ತನುವನ್ನು ಸದಾ ತೃಪ್ತಿಪಡಿಸುತ್ತದೆ. ಆದರೆ ತನು ಮಾಡಿದ ಅಡಿಗೆಯನ್ನು ಮನ ದೇವರಿಗೆ ತನುವಿನಿಂದಲೇ ಎಡೆಮಾಡಿಸುತ್ತದೆ. ಅದು ಕಲ್ಲು ಕಟ್ಟಿಗೆ ಲೋಹವೆಂದು ತಿಳಿಯಗೊಡದೆ ಅಡಿಗೆಯ ಸುವಾಸನೆಯನ್ನು ಮೂರ್ತಿಯೆಡೆಗೆ ಕಳಿಸುತ್ತದೆ. ಅದು ವಾಸಿಸುವುದಿಲ್ಲ ರುಚಿಸುವುದಿಲ್ಲ ಉಣ್ಣುವುದಿಲ್ಲ. ಆದರೂ ಮನಕ್ಕೆ ಅಹಂಕಾರ! ತನುವನ್ನು ಕಲ್ಲಿನ ಮುಂದೆ ಹಣೆಮಣಿಸಿ ಬಗ್ಗಿಸದೆ ಬಿಡುವುದಿಲ್ಲ!

ಮನ ಕಲ್ಲನ್ನೇ ದೇವರೆಂದು ತನುವನ್ನು ನಂಬಿಸುತ್ತದೆ. ಅದಕ್ಕೆ ನೈವೇದ್ಯ ಮಾಡಿ ನಂತರ ತನುವಿಗೆ ಉಣ್ಣಲು ಆದೇಶ ನೀಡುತ್ತದೆ. ಆಗ ತನುವಿನಲ್ಲಿರುವ ಅರಿವೆಂಬ ಗುರು ನೈವೇದ್ಯವನ್ನು ನಾಲಿಗೆ ಮೂಲಕ ರುಚಿಸಿ. ತನುವನ್ನು ಸಧೃಢವಾಗಿಡುತ್ತಾನೆ. ಆತ ನಿತ್ಯ ತೃಪ್ತ. ಗುರುದೇವನೂ ಆತನೇ; ಮಹಾದೇವನೂ ಆತನೆ; ಸದಾಶಿವನೂ ಆತನೇ; ಸಾಕ್ಷಾತ್ ಪರಬ್ರಹ್ಮನೂ ಆತನೇ; ಆತನಿಗೆ ನೈವೇದ್ಯದ ಹಂಗೇತಕೆ ? ಮನಕ್ಕೆ ಆತನ ಪರಿಚಯವಾದರೆ ಪೂಜಿಸುವ ಮೂರ್ತಿಗಳೆಲ್ಲ ಕಲ್ಲು !

ಕಲ್ಲಿಗೆ ಪೂಜಿಸಬಹುದೆ ? ಮಜ್ಜನಕ್ಕೆರೆದು ಅಭಿಷೇಕ ಮಾಡಬಹುದೆ ? ಜ್ಯೋತಿ ಬೆಳಗಿ ದೀಪಾರಾಧನೆಯ ಮಾಡಬಹುದೆ ? ಗಂಧ ಧರಿಸಿ ಕರ್ಪೂರ ಬೆಳಗಿ ಪುಷ್ಪದೊಂದಿಗೆ ಅಲಂಕರಿಸಬಹುದೆ ? ಅದು ಕಲ್ಲು ! ಮನ ಮಾಡುವ ಯಾವ ಪೂಜೆ ಮಾಟವನ್ನು ಸ್ವೀಕರಿಸುವುದಿಲ್ಲ. ಆದರೂ ಮನ ಮಾಡುವ ಮಾಟದಲ್ಲಿ ಮನಕ್ಕೇ ನಂಬುಗೆಯಿಲ್ಲ. ಅಹಂಕಾರವದಕ್ಕೆ.!

ಅಷ್ಟೇಕೆ ತನುವಿನ ಕೈಯಲ್ಲಿ ಮನವು ಭಕ್ತಿಯೆಂಬ ಕಪಟದ ಉಡುಗೊರೆಯನ್ನು ಕೊಟ್ಟು, ಹೊಲೆ ಹದಿನೆಂಟು ಕುಲಗಳನ್ನು ನಿರ್ಮಾಣ ಮಾಡಿದೆ. ಅದರ ಕಷ್ಟಕೋಟಲೆಗಳಲ್ಲಿ ತನುವನ್ನು ಕ್ಷಣ ಕ್ಷಣಕ್ಕೂ ಮುಳಿಗೇಳುವಂತೆ ಮಾಡಿ, ತನು ತನುಗಳಲ್ಲಿಯೇ ಭೇದವನು ಸೃಷ್ಟಿಸಿ ಮನ ಜಾತಿ ಜಗಳವನು ಜಗತ್ತಿನಲ್ಲಿಯೇ ಬಿತ್ತಿದೆ. ಇದು ಮನದ ಕುತಂತ್ರವೆಂದು ತನುವಿನ ಅರಿವು ತಿಳಿಯಬಾರದೆ? ಇನ್ನಾದರು ಜಗದ ತನುಗಳಿಗೆ ಸಂಕಟ ಕೊಡುವುದು ಸಾಕು ಎಂದು ಮನ ತನುವಿನ ಅರಿವಿನಲ್ಲಿ ಮಿಂದು ಆ ಅರಿವೇ ತಾನಾಗಬಾರದೆ ?

ಎರೆದರೆ ನೆನೆಯದು ಮರೆತರೆ ಬಾಡದು ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ ಎನ್ನುವ ಶರಣರ ಮಾತು ಮನಕ್ಕೆ ಅರ್ಥವಾಗಬಾರದೆ ? ಎರೆದರೆ ನೆನೆಯುವ ಮರೆತರೆ ಬಾಡುವ ತನುವೇ ಶ್ರೇಷ್ಠವೆಂದು ಮನಕ್ಕೆ ಇನ್ನಾದರೂ ಅರಿವಾಗ ಬಾರದೆ ?

**ಅಂಗೈಯಲೊರಸಿ ಮುಕ್ತಿಯ ಮೂಲ ಶಿಖಿರಂಧ್ರದ ಕಾಮನ ಸುಟ್ಟು ಶುದ್ಧ ಸ್ಫಟಿಕ ಸ್ವಯಂಜ್ಯೋತಿಯನು ಸುನಾಳದಿಂದ ಹಂ ಕ್ಷಂ ಎಂಬೆರಡಕ್ಷರದ ಸ್ವಯಾನುಭಾವ ಭಕ್ತಿ ನಿರ್ವಾಣವಾದವರ ನೆನಗೊಮ್ಮೆ ತೋರಿದೆ ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ :**

ತನುವನ್ನು ಕಾಡುವ ಈ ಮನವನ್ನು ದಾಸರು '' ಹೆಂಡತಿ- ನೀ ಹೆಂಡತಿ ಕೊಂಡ ಕೋತಿಯಂಗ ಕುಣಿಸುತಿ'' ಎಂದು ನಿಂದಿಸಿದರೆ ಬಸವಣ್ಣನವರು '' ಸುಖವನರಿಯದ ಹೆಣ್ಣು ಸೂಳೆಯಾದಳು '' ಎಂದು ಮನವನ್ನು ಹೀಯಾಳಿಸಿದ್ದಾರೆ. ತನುವಿನ ಅರಿವು ಗಂಡನಾದರೆ ತನುವಿನ ಮನ ಹೆಂಡತಿ. ಮನ ಅರಿವೆಂಬ ಗಂಡನ ಸಂಗ ಮಾಡಿದರೆ ಹೆಂಡತಿ-ಯಾಗುವುದು. ಸುಖಕ್ಕಾಗಿ ಹಾದರ ಮಾಡಿದರೆ ಸೂಳೆಯಾಗುವುದು. ದಾಸರು, ಶರಣರು ಮಹಾಜ್ಞಾನಿಗಳು ಮನವನ್ನು ಅಂಗೈಯಲಿ ಹೊಸಕಿಹಾಕಿ ಅರಿವಿನಿಂದ ಬಾಳಿದರು.

ಅಕ್ಕ ಮನವನ್ನು ಹೊಸಕಿ ಹಾಕುವ ಸೂತ್ರವನ್ನು ಈ ವಚನದ ಮೂಲಕ ಮನುಕುಲಕ್ಕೆ ನೀಡಿದ್ದಾಳೆ. ಅದು ಮುಕ್ತಿಗೆ ಮೆಟ್ಟಿಲೂ ಹೌದು!

ತನುವಿನ ನೆತ್ತಿಯ ಮೂಲ ಅರಿವು. ಅಲ್ಲಿ ಕಾಮವೆಂಬ ಮನವೂ ಸೃಷ್ಟಿಯಾಗಿದೆ, ಆ ಮನವೆಂಬ ಕಾಮ ಅರಿವಿನಿಂದ ಸುಟ್ಟು, ಶುದ್ಧ ಸ್ಫಟಿಕವಾಗಿ, ಸ್ವಯಂಜ್ಯೋತಿಯಾಗಿ, ಅರಿವೇ ತಾನಾಗಿ, ತುನುವಿನ ಮೂಲಕ ಬೆಳಗುವುದು. ಅಹಂಕಾರವನ್ನು ಅಳಿದುಕೊಂಡು ಬ್ರಹ್ಮವೇ ತಾನಾಗುವುದು, ಕ್ರೂರತ್ವ ಕಳೆದುಕೊಂಡು ಸದಾ ಸಹಜ ಕ್ಷಮಾಗುಣಿಯಾಗಿ ಸ್ವಯಂ ಅನುಭಾವದಿಂದ ಪ್ರಜ್ವಲಿಸುವುದು.

ಮನ ಸ್ವಯಂ ಅನುಭಾವದಿಂದ ಅರಿವಿನಲ್ಲಿ ಸುಟ್ಟು, ಆ ಅರಿವಿಗೆ ಭಕ್ತಿ ಮಾಡಿ, ನಿರ್ವಾಣ ಹೊಂದುವುದು. ಅಂತಹ ಮಹಾನುಭಾವ ಶರಣರನು ಕಲ್ಯಾಣದಲಿ ಎನಗೊಮ್ಮೆ ತೋರಿದೆ ಚನ್ನೆಮಲ್ಲಿಕಾರ್ಜುನಾ ಎಂದು ತನುವಿನ ಅರಿವಿಗೆ ಭಕ್ತಿ ಮಾಡುತ್ತಾ, ಆ ಅರಿವಿಗೆ ಚೆನ್ನಮಲ್ಲಿಕಾರ್ಜುನಾ ಎಂದು ನಾಮಕರಣ ಮಾಡಿ, ತನುವಿನ ಮನವನ್ನು ಅಂಗೈಯಿಂದ ಹೊಸಕಿ ಹಾಕಿದ್ದಾಳೆ ಅಕ್ಕ.

□

# ಹಂಸ-ಕ್ಷೀರ ನ್ಯಾಯ

**ನೀರ ಕ್ಷೀರದಂತೆ ನೀನಿಪ್ಪೆಯಾಗಿ,**
**ಆವುದು ಮುಂದು, ಆವುದು ಹಿಂದು ಎಂದರಿಯೆ.**
**ಆವುದು ಕರ್ತೃ, ಆವುದು ಭೃತ್ಯನೆಂದರಿಯೆ.**
**ಆವುದು ಘನ, ಆವುದು ಕಿರಿದೆಂದರಿಯೆ.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನೀನೊಲಿದು ಕೊಂಡಾಡಿದಡೆ ಇರುಹೆ ರುದ್ರನಾಗದೆ ಹೇಳಯ್ಯಾ ?**

**ನೀರು ಕ್ಷೀರದಂತೆ ನೀನಿಪ್ಪೆಯಾಗಿ, ಆವುದು ಮುಂದು, ಆವುದು ಹಿಂದು ಎಂದರಿಯೆ:**

ನೀರು ಬೇರೆ, ಹಾಲು ಬೇರೆ, ಇವೆರಡು ಒಂದೇ ಆಗಲು ಹೇಗೆ ಸಾಧ್ಯ ? ಬೇವಿನ ಹಣ್ಣು ಬೇರೆ ಬೆಲ್ಲ ಬೇರೆ ಇವೆರಡು ಒಂದೇ ಆಗಲು ಹೇಗೆ ಸಾಧ್ಯ ? ಪಂಡಿತ ಬೇರೆ ಪಾಮರ ಬೇರೆ ಇವರಿಬ್ಬರು ಒಂದೇ ಎನ್ನಲು ಹೇಗೆ ಸಾಧ್ಯ ?

ನೀರು ಮುಂದೊ, ಹಾಲು ಮುಂದೊ. ಆವುದು ಮುಂದು ಆವುದು ಹಿಂದೆ ಎಂದರಿಯೆ. ನೀರಿನಿಂದಲೇ ಹಾಲು ಆಗಿದೆಯೋ, ಹಾಲಿನಲ್ಲಿ ನೀರು ಬೆರೆತಿದೆಯೊ ? ನೀರು ಆದದ್ದು ಹೇಗೆ, ನೀರಿನಿಂದಲೇ ಹಾಲು ಆದದ್ದು ಹೇಗೆ. ಜಲ ಮತ್ತು ಕ್ಷೀರದ ಉಗಮಕ್ಕೆ ಕಾರಣರಾದವರಾರು ? ಇದನು ರಕ್ಷಿಸುವವರಾರು.

ಜಲ ಘನವೊ, ಕ್ಷೀರ ಘನವೊ, ಜಲ ಕಿರಿದೊ ಕ್ಷೀರ ಕಿರಿದೊ ಎಂದರಿಯೆ. ಜಲದಲ್ಲಿಯೂ ಕ್ಷೀರದಲ್ಲಿಯೂ ನೀನಿಪ್ಪೆಯಾಗಿ.

ಜಲ ಘನವೊ, ಜಲಕ್ಕೆ ಕಾರಣವಾದ ಜಲಜನಕ ಘನವೊ, ಆಮ್ಲಜನಕ ಘನವೊ, ಇವೆರಡಕ್ಕೂ ಕಾರಣವಾದ ಬಯಲು ಘನವೊ ? ಇವೆರಡರಲ್ಲಿಯೂ ನೀನಿದ್ದು ಜಲವಾದೆಯಾಗಿ.

ಕ್ಷೀರ ಘನವೊ ಕ್ಷೀರಕ್ಕೆ ಕಾರಣವಾದ ಪಶು ಘನವೊ. ಕ್ಷೀರ ಪಶುವಿಗೆ ಕಾರಣವಾದ ಹುಲ್ಲು ಘನವೊ. ಕ್ಷೀರ ಪಶು ಹುಲ್ಲಿಗೆ ಕಾರಣವಾದ ಜಲ ಘನವೊ. ಇವೆಲ್ಲದರಲಿ ನೀನಿಪ್ಪೆಯಾಗಿ. ಆವುದು ಮುಂದು, ಆವುದು ಹಿಂದು ಎಂದರಿಯೆ. ಆವುದು ಕರ್ತೃ ಆವುದು ಭೃತ್ಯನೆಂದರಿಯೆ. ಆವುದು ಘನ ಆವುದು ಕಿರಿದೆಂದರಿಯೆ. ಎಲ್ಲದರಲ್ಲಿಯೂ ನೀನಿಪ್ಪೆಯಾಗಿ.

ನೀರ ಕ್ಷೀರ ಭೇದದಂತೆ, ಪಂಡಿತ ಪಾಮರರಲ್ಲಿ ನೀನಿಪ್ಪೆಯಾಗಿ, ಆವುದು ಮುಂದು ಆವುದು ಹಿಂದು ಎಂದರಿಯದಂತೆ. ಆವುದು ಘನ, ಆವುದು ಕಿರಿಯದೆಂದರಿಯದಂತೆ.

ತನ್ನ ತಿಳಿಯದೆ ತನುವಿನಿಂದ ಬಂದ ಪುಸ್ತಕ ತಿಳಿದು ಪಂಡಿತನಾದ. ತನುವನ್ನು ಪುಸ್ತಕವನ್ನು ತಿಳಿಯದೆ ಪಂಡಿತನಿಗೆ ಕಿಂಕರನಾಗಿ ಪಾಮರನಾದ. ನೀರ ಕ್ಷೀರ ಭೇದಿಸುವ ಹಂಸವನು, ಪಂಡಿತ ಪಾಮರರಿಬ್ಬರೂ ತಿಳಿಯಲಿಲ್ಲ.

''ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ ಬಕನು ಶುಚಿಯಾಗಬಲ್ಲುದೆ?

ನಿಧಿ ನಿಧಾನದೊಳಗಿದ್ದರೇನು ಪಾಷಾಣ ಹೊನ್ನಾಗಬಲ್ಲುದೆ ? ಕಲ್ಪತರುಗಳ ಸಂಗದಲ್ಲಿದ್ದರೇನು ಕೊರಡು ಫಲವಾಗಬಲ್ಲುದೆ ? ಕಾಶೀಕ್ಷೇತ್ರದಲ್ಲಿ ಶುನಕನಿದ್ದರೇನು ಅದರ ಕ್ಷೀರ ಪಂಚಾಮೃತವಾಗ ಬಲ್ಲುದೆ ? ಖಂಡುಗ ಹಾಲೊಳಗೆ ಇದ್ದಿಲ ಹಾಕಿದರೇನು ಬಿಳಿದಾಗ ಬಲ್ಲುದೆ ? ಇದು ಕಾರಣ ಕೂಡಲ ಚೆನ್ನಸಂಗನ ಶರಣರ ಸನ್ನಿಧಿಯಲ್ಲಿದ್ದರೇನು ಅಸಜ್ಜನ ಸದ್ಭಕ್ತನಾಗಬಲ್ಲನೆ ?'' ಎಂದಿದ್ದಾರೆ ಚೆನ್ನಬಸವಣ್ಣ.

ನೀರು ಬೇರೆ, ಕ್ಷೀರ ಬೇರೆ. ಕ್ಷೀರದಲಿ ನೀರು ಬೆರೆತರೆ ಕ್ಷೀರವೇ ಆಗುವುದು. ಮನ ಬೇರೆ, ಅರಿವು ಬೇರೆ, ತನು ಬೇರೆ. ಅರಿವಿನಲಿ ಮನ ಬೆರೆತರೆ ಮನ ಘನ ಮನ! ಆ ತನು ಘನ ತನು!

ನೋಡಲು ಜಗದ ತನುಗಳೆಲ್ಲ ಒಂದೇ, ಅದರ ಭಾವ ಒಂದೇ, ಹಸಿವು ಆಹಾರ ನಿದ್ರೆ ನೀರಡಿಕೆ ಒಂದೇ. ವಿಷಯ ಒಂದೇ, ಅರಿವು ಒಂದೇ. ಭಾಷೆ ಬೇರೆಯಾದರು ಭಾವವೊಂದೇ. ಗಡಿ ಬೇರೆ ಬೇರೆಯಾದರು ನೆಲ ಒಂದೇ. ಆದರು ಹೆಣ್ಣು ಗಂಡೆಂಬ ಭೇದ, ಬಡವ ಬಲ್ಲಿದ ನೆಂಬ ಭೇದ, ಪಂಡಿತ ಪಾಮರನೆಂಬ ಭೇದ, ಜಗದ ಎಲ್ಲೆಡೆಯೂ ಇದೆ. ಜಗದ ವಿಶ್ವವಿದ್ಯಾಲಯಗಳೆಲ್ಲ ಸತ್ಯಕ್ಕಾಗಿ ಶ್ರಮಿಸಿದರೂ ನೀರು ಕ್ಷೀರದ ಭೇದವನು ಭೇದಿಸಲರಿಯಲಿಲ್ಲ. ತನು ಬರೆದ ಪುಸ್ತಕಗಳೇ ತನುಗಳಿಗೆ ಪ್ರಧಾನವಾದವೇ ಹೊರತು, ತನುವಿನ ಅರಿವು ಪ್ರಧಾನವಾಗಲಿಲ್ಲ.

ಚನ್ನಮಲ್ಲಿಕಾರ್ಜನನೆಂಬ ಅರಿವು ಒಲಿದರೆ ತನುವಿನಲ್ಲಿರುವ ಆ ಅರಿವೆ ರುದ್ರನಾಗದೆ ? ಶ್ರೀಕ್ರಿಷ್ಣನೆಂಬ ಅರಿವಿನಲ್ಲಿ ಅರ್ಜುನನೆಂಬ ಮನ ಬೆರತು ಘನ ತನುವಾದಂತೆ. ವಿರಾಟ ಸ್ವರೂಪವೇ ತಾನಾದಂತೆ !

ಜಗದಗಲ ಮುಗಿಲಗಲ ಇರುವ ಬಯಲು ಜಲಬಿಂದುವಿನಲಿ ಚುಳುಕಾಗಿದೆ. ಆ ಬಿಂದುವಿನಿಂದಲೇ ಜಗದ ತನುಗಳು ಸೃಷ್ಟಿಯಾಗಿವೆ. ಆ ತನುಗಳಲ್ಲಿ ಬಯಲೇ ಅರಿವೆಂಬ ಬೆಳಕಾಗಿ ಬೆಳಗಿದೆ. ಆ ಬೆಳಕಿನ ನೆರಳೇ ಮನವಾಗಿ ನೀರು ಕ್ಷೀರದಂತೆ ಇದೆ. ನೀರು ಕ್ಷೀರದಲ್ಲಿ ಬೆರೆತರೆ ಕ್ಷೀರವೇ ಆಗುತ್ತದೆ. ಬೆರೆಯದಿದ್ದರೆ ನೀರು ಬೇರೆ ಕ್ಷೀರ ಬೇರೆ. ಭೂಮಿಯೊಳಗಿದ್ದ ಹೇಮದಂತೆ ; ಪಾಷಾಣ ಹೊನ್ನಾಗಲರಿಯದು. ಕಲ್ಪತರುಗಳ ಸಂಗದಲ್ಲಿದ್ದ ಕೊರಡು ಫಲವಾಗಲರಿಯದು. ಕಾಶೀಕ್ಷೇತ್ರದಲ್ಲಿದ್ದ ನಾಯಿಯ ಹಾಲು ಪಂಚಾಮೃತವಾಗದು. ಹಾಲಿನೊಳಗಿದ್ದ ಇದ್ದಿಲು ಬಿಳಿದಾಗಲರಿಯದು. ಜ್ಞಾನಿಗಳ ಸಂಗದಲ್ಲಿದ್ದ ತನುವಿಗೆ ತಿಳಿಯುವ ಬಯಕೆಯಾಗದಿದ್ದರೆ ಜ್ಞಾನಿಯಾಗಲರಿಯದು.

ಜಗತ್ತಿನ ವಿಶ್ವವಿದ್ಯಾಲಯಗಳು ನಾಚುವಂತೆ- ಅಕ್ಕ ಮನುಕುಲಕ್ಕೆ ಜ್ಞಾನದ ಸರಳ ಸೂತ್ರವನ್ನು ನೀಡಿದ್ದಾಳೆ, ತನುವಿನ ಜ್ಞಾನ ತನುವು ಪಡೆಯಲು ತನುವಿಗೆ ಹಸಿವೆಯಾಗಬೇಕು, ಜ್ಞಾನ ತನುವಿನಲ್ಲಿ ಹೂತಿಟ್ಟ ನಿಧಿ. ಅದನ್ನು ಮನದಿಂದ ತನುವಿನಲ್ಲಿಯೇ ಹುಡುಕಬೇಕು, ಹಂಸ ಕ್ಷೀರ ನ್ಯಾಯದಂತೆ ಭೇದಿಸಿ ಸವಿಯಬೇಕು.

□

# ತನ್ನೆಡೆಗೆ ನಡೆದು ಬಂದು ತನುವಿನಲಡಗಿದ ಮುಕ್ತಿ

**ನಿತ್ಯವೆಂಬ ನಿಜಪದವೆನ್ನ ಹತ್ತೆಸಾರ್ದು ಕಂಡ ಬಳಿಕ**
**ಚಿತ್ತ ಕರಗಿ ಮನ ಕೊರಗಿ ಹೃದಯವರಳಿತ್ತು ನೋಡಯ್ಯಾ**
**ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ**
**ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ**
**ಮರೆದೊರಗಿದೆ ನೋಡಯ್ಯಾ**

ನಿತ್ಯವೆಂಬ ನಿಜಪದವು ತನುವಿನೊಳಗೆ ಒತ್ತಿ ಬಿಗಿದು ಅತ್ತಿತ್ತ ಸರಿಯದಂತೆ ಅದರ ಸೆರೆಯೊಳಡಗಿದುದನು ಕಂಡು ಹೃದಯವು ಅರಳಿತ್ತು ನೋಡಯ್ಯಾ.

ನಿತ್ಯವೆಂಬ ನಿಜಪದ ಸೆಳೆತಕ್ಕೆ ತನುವಿನ ಚಿತ್ತ ಕರಗಿ ಮನ ಕೊರಗಿ ಹೃದಯ ವಿಕಸನವಾಗಿತ್ತು ನೋಡಯ್ಯಾ.

ಹಣ, ಆಭರಣ, ಭೂಮಿ ದೊರೆತರೆ ಸಂತೋಷವಾಗುತ್ತದೆ. ಪದವಿ ದೊರೆತರೆ ಸಂತೋಷವಾಗುತ್ತದೆ. ಅಧಿಕಾರ ಸಿಂಹಾಸನ ದೊರೆತರೆ ಮತ್ತಷ್ಟು ಆನಂದವಾಗುತ್ತದೆ. ಆದರೆ ಇವೆಲ್ಲವುಗಳನ್ನು ಸುಳ್ಳು ಮಾಡುವ ನಿತ್ಯವೆಂಬ ಬ್ರಹ್ಮನ ನಿಜಪದವೇ ತಾನಿದ್ದಲ್ಲಿಗೆ ನಡೆದು ಬಂದರೆ ಎಷ್ಟು ಸಂತೋಷವಾಗ ಬೇಡ ! ಆ ಆನಂದದಲ್ಲಿ ಅಕ್ಕ ಕರಗಿ ಆ ಆನಂದವೇ ತಾನಾಗಿ ನುಡಿದಿದ್ದಾಳೆ.

ಹಗಲಿರುಳು ತಪಿಸುವ ಮುಕ್ತಿಯೇ ತನ್ನೆಡೆಗೆ ನಡೆದು ಬಂದಾಗ ; ಅದನು ಒತ್ತಿ ಬಿಗಿದು ತನ್ನ ಸೆರೆಯೊಳಗೆ ಹಿಡಿದು ಕೂಡದಗಲದ ಕೂಟದಲಿ ವಿರಮಿಸಿದ್ದಾಳೆ.

ಅತ್ತಿತ್ತಲೆಂದರಿಯದೇ ತನುವಿನಲ್ಲಿಯೇ ತೋರಿದ ಆತನ ಪಾದದಲ್ಲಿ ಮರೆದೊರಗಿ ಜಯ ಜಯಾ, ಹರ ಹರಾ, ಶಂಕರ ಶಂಕರಾ ಎಂದು ಆನಂದದ ಭಾಷ್ಪದಿಂದ ಪಾದ ತೊಳೆದು ಪೂಜಿಸಿದ್ದಾಳೆ.

ತನುವಿನಲ್ಲಿಯೇ ದರುಶನ ಭಾಗ್ಯವನ್ನು ಕರುಣಿಸಿದ ಗುರುವೇ ನಮೋ, ಪರಮ ಗುರುವೇ ನಮೋ,ಬ್ರಹ್ಮ ಪದವಿಯನು ಕರುಣಿಸಿ ಚೆನ್ನಮಲ್ಲಿ ಕಾರ್ಜುನನು ತೋರಿದ ಗುರುವೇ ನಮೋ ನಮೋ ಎಂದು ಮೈದುಂಬಿ ಹಾಡಿದ್ದಾಳೆ. ಸರ್ವರಿಗೂ ಕೇಳುವಂತೆ ಹಾಡಿದ್ದಾಳೆ !

□

**ಅರಿವಿನ ಪರಿಮಳ**

□ ಹಣ, ಆಭರಣ, ಭೂಮಿ ದೊರೆತರೆ ಸಂತೋಷವಾಗುತ್ತದೆ. ಪದವಿ ದೊರೆತರೆ ಸಂತೋಷವಾಗುತ್ತದೆ. ಅಧಿಕಾರ ಸಿಂಹಾಸನ ದೊರೆತರೆ ಮತ್ತಷ್ಟು ಆನಂದವಾಗುತ್ತದೆ. ಆದರೆ ಇವೆಲ್ಲವುಗಳನ್ನು ಸುಳ್ಳು ಮಾಡುವ ನಿತ್ಯವೆಂಬ ಬ್ರಹ್ಮನ ನಿಜಪದವೇ ತಾನಿದ್ದಲ್ಲಿಗೆ ನಡೆದು ಬಂದರೆ ಎಷ್ಟು ಸಂತೋಷವಾಗ ಬೇಡ !

# ತನುವಿನ ಮನಕ್ಕೆ ಅರಿವಿನ ಉಪದೇಶ

**ನಿಮ್ಮ ನಿಲುವಿಂಗೆ ನೀವು ನಾಚಬೇಡವೆ?**
**ಅನ್ಯರ ಕೈಯ್ಯಲ್ಲಿ ಅಲ್ಲ ಎನಿಸಿಕೊಂಬ ನಡೆ ನುಡಿ ಏಕೆ?**
**ಅಲ್ಲ ಎನಿಸಿಕೊಂಬುದರಿಂದ**
**ಆ ಕ್ಷಣವೇ ಸಾವುದು ಲೇಸು**
**ಕಾಣಾ ಚೆನ್ನಮಲ್ಲಿಕಾರ್ಜುನಾ.**

ತನುವನ್ನು ಸದಾ ದುರ್ಬಳಕೆ ಮಾಡಿಕೊಳ್ಳುವ ಮನದೊಂದಿಗೆ ತನುವಿನ ಅರಿವಿನ ಮೂಲಕ ಸಂಭಾಷಣೆ ನಡೆಸುವ ಸೂತ್ರವನ್ನು ಅಕ್ಕ ಈ ವಚನದಲ್ಲಿ ವಿವರಿಸಿದ್ದಾಳೆ.

ಈ ವಚನ ತೋರಿಕೆಗೆ ಬೋಧೆಯಾಗಿ ಕಂಡರೂ ಪರರಿಗೆ ಬೋಧೆ ಮಾಡುವಂತಹದ್ದಲ್ಲ. ಪರರಿಗೆ ಬೋಧೆ ಮಾಡಲೂ ಬರುವುದಿಲ್ಲ. ಪ್ರತಿ ತನುವಿನಲ್ಲಿಯೂ ಅರಿವಿದೆ. ಆ ಅರಿವಿನಿಂದ ನೋಡುವ ಕಣ್ಣುಗಳಿವೆ. ಅರಿವಿನಿಂದ ಕೇಳುವ ಕಿವಿಗಳಿವೆ. ಅರಿವಿನಿಂದ ರುಚಿಸುವ ನಾಲಿಗೆ ಇದೆ. ಅರಿವಿನಿಂದ ಸ್ಪರ್ಷಿಸುವ ಚರ್ಮವಿದೆ. ಅರಿವಿನಿಂದ ವಾಸಿಸುವ ಮೂಗು ಇದೆ. ಈ ಐದೂ ಜ್ಞಾನೇಂದ್ರಿಯಗಳಿಗೆ ಯಾವ ಗುರುವಾದರೂ ಬೋಧಿಸಲು ಸಾಧ್ಯವೇ? ಈ ಜ್ಞಾನೇಂದ್ರಿಯಗಳಿಗೆ ಅಧಿಷ್ಠಾನ ಮೂರ್ತಿಯೇ ಅರಿವೆಂಬ ಗುರು.

ಈತ ಅಕ್ಷರೋತ್ತಮ. ಈತ ನೋಡುವ ತನ್ನ ಕಣ್ಣಿನಲ್ಲಿ ಮನ ಬೆರೆತಿದೆ. ಅದು ಆಭರಣ ಕರೆನ್ಸಿ ನೋಡುತ್ತದೆ. ಅದಕ್ಕೆ ಮೋಹಗೊಂಡ ಮನ ತನುವಿಗೆ ದುಡಿದು ಇಲ್ಲ ಕಳುವು ಭ್ರಷ್ಟಾಚಾರ ಲಂಚದಿಂದ ಅವುಗಳನ್ನು ಪಡೆಯಲು ಆದೇಶ ನೀಡುತ್ತದೆ. ಅರಿವಿನ ಮೇಲೆ ಮನ ತನ್ನ ಅಜ್ಞಾನದ ಸೆರಗನು ಹಾಕಿ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ಜನ, ಸರಕಾರ, ಕೋರ್ಟ್ ಪೊಲೀಸರು ತನುವನ್ನು ಬಂಧಿಸುತ್ತಾರೆ.

ಈ ಮುನ್ನ ಅರಿವು ಪಾಠ ಮಾಡಿತ್ತು, ಮನ ಕೇಳಲಿಲ್ಲ. ಮನದ ಅಪರಾಧಕ್ಕೆ ತನು ಬಂಧಿಯಾದಾಗಲೂ ಅರಿವು ಪಾಠ ಮಾಡಿ: ಎಲೆ ಮನವೆ ನಿಮ್ಮ ನಿಲುವಿಂಗೆ ನೀವು ನಾಚಬೇಡವೇ? ಅನ್ಯರ ಕೈಯ್ಯಲ್ಲಿ ಅಲ್ಲ ಎನಿಸಿಕೊಂಬ ನಡೆ ನುಡಿ ನಿನಗೇಕೆ ಮನವೇ? ಅಲ್ಲ ಎನ್ನಿಸಿಕೊಂಬವುದಕ್ಕಿಂತ ಆ ಕ್ಷಣವೇ ನೀನು ನನ್ನೊಳಗೆ ಸೇರಿ ಸತ್ತು ಸತ್ಯ ಅನ್ನಿಸಿಕೊಳ್ಳುವುದು ಲೇಸಲ್ಲವೆ? ಎಲೆ ಮನವೇ ಚೆನ್ನಮಲ್ಲಿಕಾರ್ಜುನನೊಳಗೆ ಲೀನವಾಗಿ ಆ ಅರಿವೇ ನೀನಾಗಬಾರದೇ ಎಂದು ಅಕ್ಕ ತನುವಿನ ಅರಿವಿನ ಮೂಲಕವೇ ಆ ತನುವಿನ ಮನಕ್ಕೆ ಉಪದೇಶ ನೀಡುವ ಸಂಭಾಷಣೆಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾಳೆ.

□

# ಮೋಹಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡ ತನು

**ಪಂಚೇಂದ್ರಿಯಂಗಳೊಳಗೆ**
**ಒಂದಕ್ಕೆ ಪ್ರಿಯನಾದಡೆ ಸಾಲದೇ?**
**ಸಪ್ತ ವ್ಯಸನಂಗಳೊಳಗೆ**
**ಒಂದಕ್ಕೆ ಪ್ರಿಯನಾದಡೆ ಸಾಲದೇ?**
**ರತ್ನದ ಸಂಕಲೆಯಾದಡೇನು**
**ಬಂಧನ ಬಿಡುವುದೆ ಚೆನ್ನಮಲ್ಲಿಕಾರ್ಜುನಾ?**

**ಪಂಚೇಂದ್ರಿಯಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ?:**

ಒಂದೇ ಜ್ಞಾನದ ಇಂದ್ರಿಯ ಇದ್ದು, ಆ ಇಂದ್ರಿಯಕ್ಕೆ ಪ್ರಿಯವಾದ ಆನೆ, ಮೀನ, ಜಿಂಕೆ , ಪತಂಗ, ದುಂಬಿ ಪ್ರಾಣವನ್ನೇ ಕಳೆದುಕೊಳ್ಳುತ್ತವೆ. ಸ್ಪರ್ಷಕ್ಕೆ ಪ್ರಿಯವಾದ ಆನೆ ಖೆಡ್ಡದೊಳಗೆ ಬಿದ್ದು ಜೀವನ ಪರ್ಯಂತ ದಾಸನಾಗಿ ಪ್ರಾಣ ಕಳೆದು ಕೊಳ್ಳುತ್ತದೆ. ರುಚಿಗೆ ಪ್ರಿಯವಾದ ಮೀನು ಗಾಳಕ್ಕೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತದೆ. ಶಬ್ದಕ್ಕೆ ಪ್ರಿಯವಾದ ಜಿಂಕೆ ಬೇಟೆಗಾರನ ಬಲೆಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತದೆ. (ರೂಪಕ್ಕೆ) ಬೆಂಕಿಗೆ ಮರುಳಾದ ಪತಂಗ ಅನುಭವಿಸಲು ಹೋಗಿ ಪ್ರಾಣ ಕಳೆದುಕೊಳ್ಳುತ್ತದೆ. ವಾಸನೆಗೆ ಮರುಳಾದ ದುಂಬಿ ಮಕರಂಧ ಹೀರಲು ಹೋಗಿ ಕಮಲದ ಪಕಳೆಗಳಲ್ಲಿ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತದೆ. ಇವೆಲ್ಲ ಒಂದೇ ಜ್ಞಾನೇಂದ್ರಿಯಗಳುಳ್ಳ ಪ್ರಾಣಿ ಮತ್ತು ಕೀಟಗಳು.

ಮನುಷ್ಯ ಐದು ಜ್ಞಾನ ಇಂದ್ರಿಯಗಳುಳ್ಳವ ! ರಾವಣ ಬಲಿಷ್ಠನಾದರೂ ಸೀತಾ ಮಾತೆಯ ರೂಪಕ್ಕೆ ಮರುಳಾಗಿ ರಾಜ್ಯವನ್ನು ಸೈನ್ಯವನ್ನು ಹೆಂಡತಿ ಮಕ್ಕಳನ್ನು ತನ್ನ ಸಂತತಿಯನ್ನು ಕಳೆದುಕೊಂಡ. ಕೊನೆಗೆ ತನ್ನ ಪ್ರಾಣವನ್ನೂ ಕಳೆದುಕೊಂಡ.

''ಕರಿಯು ಸ್ಪರ್ಷೇಂದ್ರಿಯದಿಂದ ಬಂಧನವಡೆದಳಿಯಿತ್ತು. ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು. ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು.ಕುರುಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು. ಮತ್ಸ್ಯವು ರಸನೇಂದ್ರಿಯದಿಂದ ಬಂಧನವಡೆ ದಳಿಯಿತ್ತು. ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿಯು ಪ್ರಳಯ ವಾಯಿತ್ತು. ಪಂಚೇಂದ್ರಿಯಗಳ ಒಂದು ಘಟದಲ್ಲಿ ತಾಳಿಹ ಮನುಷ್ಯ ಪ್ರಾಣಿಗಳಿಗೆ ಮರವೆ ಎಡೆಗೊಂಡು ದೇಹ ಮೋಹ ಭ್ರಾಂತು ಮುಸುಕಿನ ಮಾಯೆಯ ಬಾಯತುತ್ತಹುದು ಚೋದ್ಯವೇನು ಹೇಳಾ ಗುಹೇಶ್ವರಾ?''

ಒಂದು ದೇಹದಲ್ಲಿ ಒಂದೇ ಇಂದ್ರಿಯವಿದ್ದ ಪ್ರಾಣಿ ಅದಕ್ಕೆ ಮನ ಸೋತು ಪ್ರಾಣ ಕಳೆದುಕೊಂಡಿತು. ಇನ್ನು ಐದು ಇಂದ್ರಿಯಗಳಿದ್ದ ಒಂದು ತನುವಿನ ಕೆಲಸ ಹೇಗಾಗಬೇಡ. ದೇಹಕ್ಕೆ ಮೋಹದ ಭ್ರಾಂತಿ ಮುಸುಕಿ ಮಾಯೆಯ ಬಾಯಿಗೆ ತುತ್ತಾಗುವುದರಲ್ಲಿ ಆಶ್ಚರ್ಯವೇನಿದೆ ಹೇಳು ಎಂದು ಅಲ್ಲಮಪ್ರಭುಗಳು ಪ್ರಶ್ನಿಸಿದ್ದಾರೆ. ನೋಡಿದರೂ ಸುಡುತ್ತದೆ, ಕೇಳಿದರೂ ಸುಡುತ್ತದೆ. ವಾಸಿಸಿದರೂ ಸುಡುತ್ತದೆ, ರುಚಿಸಿದರೂ ಸುಡುತ್ತದೆ. ಸ್ಪರ್ಶಿಸಿದರೂ ಸುಡುತ್ತದೆ.

## ಸಪ್ತ ವ್ಯಸನಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ?

ತನು ವ್ಯಸನ, ಮನವ್ಯಸನ,ಧನವ್ಯಸನ,ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹ ವ್ಯಸನ, ಹಾಗೂ ಸೇವಕ ವ್ಯಸನಗಳೆಂದು ಏಳು ವ್ಯಸನಗಳು. ಇವು ತನುವನ್ನು ಸುಖಿಸುತ್ತವೆ; ಕಾಡುತ್ತವೆ. ದೇಹಕ್ಕೆ ರೋಗ ರುಜಿನಗಳು ಬಂದಾಗ ತನು ವ್ಯಸನದಲ್ಲಿ ತೊಡಗುತ್ತದೆ. ಹುಸಿ, ಕಳವು, ಹಾದರದಲ್ಲಿ ತೊಡಗಿ ಮನ ವ್ಯಸನ ಪಡುತ್ತದೆ. ಗಳಿಕೆ, ಕಳಿಯುವಿಕೆಯಲ್ಲಿ ಮನ ಧನ ವ್ಯಸನದಲ್ಲಿ ತೊಡಗುತ್ತದೆ. ವಾಹನ, ವಸ್ತ್ರ, ಆಭರಣ, ಅಧಿಕಾರ, ಮನಕ್ಕೆ ಇಚ್ಛೆಯಾದಾಗ ಅದು ರಾಜ್ಯ ವ್ಯಸನವಾಗುತ್ತದೆ. ಗೃಹ, ಕ್ಷೇತ್ರ , ಸೀಮೆಯ ಬಯಕೆಯಾದಾಗ ಅದು ವಿಶ್ವ ವ್ಯಸನವೆಂದೆನಿಸಿ ಕೊಳ್ಳುತ್ತದೆ. ಪುತ್ರ, ಮಿತ್ರ,ಬಂಧುಗಳ ಬಯಕೆಯಾದಾಗ ಉತ್ಸಾಹ ವ್ಯಸನಿಯಾಗುತ್ತದೆ. ಹೋದೆ ಬಂದೆ ಕೊಟ್ಟೆ ಕೊಂಡೆ ಎನ್ನುವ ಹಪಹಪಿ ಆರಂಭವಾದಾಗ ಅದು ಸೇವಕ ವ್ಯಸನವೆಂದೆನಿಸುತ್ತದೆ.

ಪಂಚೇಂದ್ರಿಯಗಳಲ್ಲಿ ಒಂದಕ್ಕೆ ಪ್ರಿಯನಾದರೆ ಸಾಕು ಆ ತನುವಿನ ಅವಸಾನ ಕಟ್ಟಿಟ್ಟ ಬುತ್ತಿಯಂತೆ. ಹಾಗೆಯೇ ಸಪ್ತ ವ್ಯಸನಗಳಲ್ಲಿ ತನು ಒಂದಕ್ಕೆ ಪ್ರಿಯನಾದರೆ ಸಾಕು ಆ ತನುವಿನ ಅವಸಾನ ಕೂಡಾ ಕಟ್ಟಿಟ್ಟ ಬುತ್ತಿಯಂತೆ !

ತನು ಪಂಚೇಂದ್ರಿಯಂಗಳಲ್ಲಿ ಒಂದಕ್ಕೆ ಪ್ರಿಯವಾದರೆ ಸಾಕು ಆ ಸುಖದಲ್ಲಿಯೇ ಓಲಾಡುತ್ತದೆ. ಹಾಗೆಯೇ ತನುವಿಗೆ ತನುವಿನ ವಯ್ಯಾರವೇ ಹಿತವೆನಿಸುತ್ತದೆ. ಇದಕ್ಕೆ ಮನ,ಧನ,ರಾಜ್ಯ,ವಿಶ್ವ,ಉತ್ಸಾಹ,ಸೇವಕ ವ್ಯಸನಗಳು ತೃಪ್ತಿಯನ್ನು ಹಾಗೂ ದುಃಖವನ್ನೂ ಕೊಡುತ್ತವೆ. ಆದರೆ ಈ ಏಳು ವ್ಯಸನಗಳಲ್ಲಿ ಒಂದಾದರೂ ಸಾಕು ಅದು ರತ್ನದ ಸಂಕಲೆ ಇದ್ದಂತೆ ! ಬೇಡಿ ರತ್ನದ್ದಾದರೇನು ಬೇಡಿ ಬೇಡಿಯೇ ಎಂದು ಅಕ್ಕ ನುಡಿದಿದ್ದಾಳೆ.

ಮಾಜಿಸಚಿವ ಜನಾರ್ಧನ ರೆಡ್ಡಿಯಂತೆ ಇಡೀ ರಾಜ್ಯಕ್ಕೆ ಒಬ್ಬ ಶ್ರೀಮಂತನಿದ್ದ. ಆತ ತಪ್ಪು ಮಾಡಿದ. ಒಮ್ಮೆ ಪೊಲೀಸರು ಬಂದು ಆತನಿಗೆ ಕೋಳ ತೊಡಿಸಿದರು. ಕೋಳ (ಬೇಡಿ) ಕಬ್ಬಿಣದವಾಗಿದ್ದವು. ನಾನು ಶ್ರೀಮಂತ; ನನಗೆ ಕಬ್ಬಿಣದ ಕೋಳಗಳೇ! ಜನ ಏನಂದಾರು? ಈ ಕೋಳ ತೆಗೆದು ರತ್ನದ ಕೋಳಗಳನ್ನು ಹಾಕಿ ನಂತರ ಅದನ್ನು ನೀವೇ ತೆಗೆದುಕೊಳ್ಳಿ ಎಂದನಂತೆ. ಪೊಲೀಸರು ಹೂಂಗುಟ್ಟಿ ರತ್ನದ ಕೋಳ ತೊಡಿಸಿ ಬೀದಿಯ ತುಂಬ ಮೆರವಣಿಗೆ ಮಾಡಿದರು. ಶ್ರೀಮಂತ ಹಸನ್ಮುಖದೊಂದಿಗೆ ಕೈ ಎತ್ತಿ ಎತ್ತಿ ರತ್ನದ ಕೋಳ ತೋರಿಸುತ್ತಿದ್ದ. ಜನ ಕೈಗೆ ಹಾಕಿದ ಬೇಡಿ ನೋಡಿದರೇ ಹೊರತು ರತ್ನ ನೋಡಲಿಲ್ಲ. ಜನಾರ್ಧನ ರೆಡ್ಡಿ ಜೈಲಿಗೆ ಹೋದರೇನು ಶ್ರೀಮಂತಿಕೆಯ ಗತ್ತು ಬಿಡಲಿಲ್ಲ. ಹಣ ಕೊಟ್ಟು ಹೊರಗೆ ಬರಬೇಕೆಂಬ ಶ್ರೀಮಂತಿಕೆಯ ವ್ಯಸನ ಹೋಗಲಿಲ್ಲ.

ಪಂಚೇಂದ್ರಿಯಗಳಲ್ಲಿ ಒಂದು ತಿಳಿದರೆ ಸಾಕು ನಾಲ್ಕು ಇಂದ್ರಿಯಗಳು ತನುವಿನಲ್ಲಿರುವ ಅರಿವಿನ ಸೆರೆಯಾಳಾಗುತ್ತವೆ. ಸಪ್ತ ವ್ಯಸನಗಳಲ್ಲಿ ಒಂದು ತಿಳಿದರೆ ಸಾಕು, ಆರು ವ್ಯಸನಗಳು ತನುವಿನ ಅರಿವೆಂಬ ಚೆನ್ನಮಲ್ಲಿಕಾರ್ಜುನನ ಸೆರೆಯಾಳಾಗುತ್ತವೆ. ಅರಿವೇ ತಾನಾಗುತ್ತವೆ.

□

# ಅರಿವಿಗೆ ಅಂಜಿದ ಮದ

**ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತಲ್ಲಾ!**
**ಹರಿಬ್ರಹ್ಮರ ಬಲುಹ ಮುರಿದು ಕೊಂದು ಕೂಗಿತಲ್ಲಾ!**
**ಮಹಾ ಋಷಿಯರ ತಪವಕೆಡಿಸಿ ಕೊಂದು ಕೂಗಿತಲ್ಲಾ!**
**ಚೆನ್ನಮಲ್ಲಿಕಾರ್ಜುನಂಗೆ ಶರಣೆಂದು ನಂಬಿ**
**ಮರೆಹೊಕ್ಕಡೆ ಅಂಜಿ ನಿಂದುದಲ್ಲಾ!**

**ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತಲ್ಲಾ !**

ಕಣ್ಣು , ಕಿವಿ, ಮೂಗು, ನಾಲಿಗೆ ಹಾಗೂ ಚರ್ಮ ಇವು ಐದು ಜ್ಞಾನೇಂದ್ರಿಯಗಳು. ಬಾಯಿ, ಕೈಗಳು, ಪಾದಗಳು, ಗುಹ್ಯೇಂದ್ರಿ, ಗುದ ಇವು ಐದು ಕರ್ಮೇಂದ್ರಿಯಗಳು. ಈ ಹತ್ತು ಇಂದ್ರಿಯಗಳಿಗೆ ದಶಮುಖ ಎಂದು ಹೆಸರು.

ರಸ, ರಕ್ತ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜಾ, ಶುಕ್ರ ಇವು ದೇಹದಲ್ಲಿಯ ಸಪ್ತಧಾತುಗಳು.

ಪೃಥ್ವಿ, ಜಲ, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ, ಆತ್ಮ ಇವು ಅಷ್ಟಮದಗಳು. ಇವುಗಳಲ್ಲಿ ಅಂತರಂಗದ ಅಷ್ಟಮದಗಳು, ಬಹಿರಂಗದ ಅಷ್ಟಮದಗಳೆಂದು ಎರಡು ವಿಧ.

ಕುಲ, ಛಲ, ಧನ, ರೂಪು, ಯೌವ್ವನ, ವಿದ್ಯೆ, ರಾಜ್ಯ, ತಪ, ಇವು ಬಹಿರಂಗದ ಅಷ್ಟಮದಗಳು.

ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಇವು ಅಂತರಂಗದ ಅಷ್ಟಮದಗಳು. ಇವು ತನುವಿನ ಮನದ ನೆನಪಿನಲ್ಲಿ ಸಂಗ್ರಹವಾಗಿರುತ್ತವೆ.

**ಸಂಸ್ಥಿತ** : ದೇಹ ನಾನು ಎನ್ನುವ ಅಹಂಕಾರ ಮನದಲ್ಲಿ ಸಂಗ್ರಹವಾಗಿ ಕ್ಷಣ ಕ್ಷಣಕ್ಕೂ ತನುವನ್ನು ಕೊಂದು ಕೂಗುವುದು.

**ತೃಣೀಕೃತ** : ಈ ಮೂಲ ಅಹಂಕಾರವು ಮಹಾನ್ ಪುರುಷರನ್ನು ಕೂಡಾ ಹುಲ್ಲುಕಡ್ಡಿಗೆ ಸಮಾನ ಮಾಡಿ ತಿರಸ್ಕರಿಸಿ ನುಡಿದು ಮದೋನ್ಮತ್ತನಾಗುವುದು. ಈ ಮದ ತನುವಿನಲ್ಲಿ ಹುಟ್ಟಿ ತನುವಿಗಾಗಿಯೇ ಅಹಂಕಾರಪಟ್ಟು ಆ ತನುವನ್ನೇ ಕೊಲ್ಲುವುದು.

**ವರ್ತಿನಿ** : ಪರಧನ, ಪರಸತಿ, ಪರನಿಂದೆ, ಪರಹಿಂಸೆಯಲ್ಲಿ ಮನ ಭಾಗಿಯಾಗಿ ತನುವನ್ನು ಕೊಲ್ಲುವುದು.

**ಕ್ರೋಧಿನಿ** : ಸತ್ಪುರುಷರು ಸದ್ಬುದ್ಧಿಯ ಮಾತನಾಡುತ್ತಾ ಹಿತವಚನ ಹೇಳಿದರೆ, ನೀನೇನು ಮಹಾಪಂಡಿತನೇ ಎಂದು ಅವರನ್ನೇ ನಿಂದಿಸಿ ತನುವನ್ನು ಮೂರಾಬಟ್ಟೆ ಮಾಡುವುದು.

**ಮೋಹಿನಿ :** ಸದಾ ಹೆಂಡತಿ ಮಕ್ಕಳ ಮೇಲೆ ಮೋಹಗೊಂಡು ಅವರಿಗಾಗಿ ಅಲ್ಲದ ಕೆಲಸಗಳನ್ನು ಮಾಡಿ ಮನ ತನುವನ್ನು ಕೊಲ್ಲುವುದು.

**ಅತಿಚಾರಿಣಿ :** ಮನ ತನುವಿನಲ್ಲಿ ವಿಷಯ ಉದ್ರೇಕ ಅತಿಯಾಗಿ ಹುಟ್ಟಿಸಿ ತೂಕ ತಪ್ಪುವಂತೆ ಮಾಡಿ ತನುವನ್ನು ಕೊಲ್ಲುವುದು.

**ಗಂಧಚಾರಿಣಿ :** ಸದಾ ಆಣವಾದಿ ಮಲಗಳ ದುರ್ವಾಸನೆ ಸ್ವೀಕಾರದೊಂದಿಗೆ ಮನ ಕೂಡಿ ತನುವನ್ನು ದುರ್ಬಳಕೆ ಮಾಡಿಕೊಂಡು ಹಂತ-ಹಂತವಾಗಿ ಕೊಲ್ಲುವುದು.

**ವಾಸಿನಿ :** ಸತ್ಪುರುಷರ ಸಂಗದಿಂದ, ಶಿವಾನುಭವದಿಂದ ಹಾಗೂ ಸದಾ ಸತ್ಸಂಗದಲ್ಲಿ ತನು ನಿರತವಾಗಿದ್ದರೂ ಮನ ತನುವನ್ನು ಹೆಣ್ಣು, ಹೊನ್ನು ಮಣ್ಣಿನ ಸಂಗದ ನೆನಹು ಬಿಡದಂತೆ ಕಾಡಿ ಕಾಡಿ ಕೊಲ್ಲುತ್ತ ಕೂಗುವುದು.

ನೋಡುವ ಕಣ್ಣಿನಲ್ಲಿ ಮನ ಬೆರೆತು ತನುವನ್ನು ಕೊಲ್ಲುವುದು.
ಕೇಳುವ ಕಿವಿಯಲ್ಲಿ ಮನ ಬೆರೆತು ತನುವನ್ನು ಕೊಲ್ಲುವುದು.
ರುಚಿಸುವ ನಾಲಿಗೆಯಲ್ಲಿ ಮನ ಬೆರೆತು ತನುವನ್ನು ಕೊಲ್ಲುವುದು.
ಸ್ಪರ್ಶಿಸುವ ಚರ್ಮದಲ್ಲಿ ಮನ ಬೆರೆತು ತನುವನ್ನು ಕೊಲ್ಲುವುದು.
ವಾಸಿಸುವ ಮೂಗಿನಲ್ಲಿ ಮನ ಬೆರೆತು ತನುವನ್ನು ಪಂಚೇಂದ್ರಿಯಗಳ ಮೂಲಕ ಕೊಲ್ಲುವುದು.

ತನುವಿನಲ್ಲಿಯ ರಸ, ರಕ್ತ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜಾ ಮುಂತಾದ ಸಪ್ತಧಾತುಗಳನ್ನು ಶಬ್ದ, ಸ್ಪರ್ಶ, ರೂಪ, ರುಚಿ ವಾಸನೆಗಳು ಕುದಿಯುವಂತೆ ಮಾಡಿ ತನುವನ್ನು ಕೊಂದು ಕೂಗುತ್ತವೆ.

ಹರಿಹರ ಬ್ರಹ್ಮರ ತನುವಾದರೇನು ? ಮಹಾಋಷಿಗಳ ತನುವಾದರೇನು? ಸಾಮಾನ್ಯ ತನುವಾದರೇನು ? ತನು; ತನುವಲ್ಲವೆ ? ತನುವಿನಲ್ಲಿರುವ ಪಂಚೇಂದ್ರಿಯಗಳೊಂದೇ. ಕರ್ಮೇಂದ್ರಿಯಗಳೂ ಒಂದೇ ! ಸಪ್ತಧಾತುಗಳು ಒಂದೇ ಅಷ್ಟಮದಗಳೂ ಕೂಡಾ ಒಂದೇ ! ಹೆಣ್ಣಾದರೇನು ಗಂಡಾದರೇನು ತನುವಿನ ಜ್ಞಾನವನ್ನು ಮನದ ಮೂಲಕ ತಿಳಿದು ಆ ಜ್ಞಾನಕ್ಕೆ ಮನ ಶರಣೆನ್ನದಿದ್ದರೆ ಆ ಜ್ಞಾನಕ್ಕೆ ಮೊರೆ ಹೋಗದಿದ್ದರೆ ತನುವಿನ ಮನ ; ಆ ಮನದ ಅಜ್ಞಾನ ತನುವನ್ನು ಕೊಲ್ಲದೆ ಬಿಡುವುದಿಲ್ಲ.

ಚೆನ್ನಮಲ್ಲಿಕಾರ್ಜುನನೆಂಬ ಜ್ಞಾನಕ್ಕೆ ಶರಣೆಂದು ನಂಬಿ ಮರೆ ಹೊಕ್ಕಡೆ ಅಂಜಿ ನಿಂದುದಲ್ಲಾ ಎಂದು ಅಕ್ಕ ತನುವನ್ನು ಕೊಲ್ಲುವ ಮನವನ್ನು ಅಂಜಿಸಿ ಅರಿವಿಗೆ ಶರಣಾಗುವ ಸೂತ್ರವನ್ನು ಕರುಣಿಸಿದ್ದಾಳೆ.

□

# ತನು ಸ್ತ್ರೀ ಅಲ್ಲ, ಪುರುಷನೂ ಅಲ್ಲ

**ಪುರುಷನ ಮುಂದೆ ಮಾಯೆ**
**ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.**
**ಸ್ತ್ರೀಯ ಮುಂದೆ ಮಾಯೆ**
**ಪುರುಷನೆಂಬ ಅಭಿಮಾನವಾಗಿ ಕಾಡುವುದು.**
**ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ**
**ಮರುಳಾಗಿ ತೋರುವುದು.**
**ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ**
**ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ.**

**ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು :**

ಕಾಲಾನುಕಾಲದಿಂದಲೂ ಪುರುಷ ಸ್ತ್ರೀ ಎನ್ನುವ ಪದಗಳು ಬಂದಿವೆ. ತನುವನ್ನು ತೋರಿ ಈಕೆ ಸ್ತ್ರೀ ಈತ ಪುರುಷ ಎಂದು ಹೇಳುವುದೂ ಉಂಟು. ಆದರೆ ತನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ ಎಂದು ತನುವಿಗೆ ತಿಳಿದಿಲ್ಲ. ತನುವಿನ ಮನಕ್ಕೆ ಮೊದಲೇ ತಿಳಿದಿಲ್ಲ.

ಮನ ತಾನು ಸ್ತ್ರೀ ,ಪುರುಷ ಎಂದು ತನುವನ್ನು ನೋಡಿ ನಾಚುತ್ತದೆ. ಅಭಿಮಾನಪಡುತ್ತದೆ. ಮೋಹಗೊಂಡು ತನುವಿನಲ್ಲಿ ವಿಕೃತ ಭಾವನೆಗಳು ಉಂಟಾಗುತ್ತವೆ. ಕೂಡಿ ಸುಖಪಟ್ಟು ಬೇರ್ಪಡುತ್ತದೆ ; ಸಮಾಜಬಾಹಿರವಾಗಿದ್ದರೆ ನೋಡಿ ಮನದಲ್ಲಿ ಹಾದರದ ಬಯಕೆಯಾಗುತ್ತದೆ. ತನುವಿನಲ್ಲಿ ವಿಕೃತ ಭಾವನೆಗಳು ಉಂಟಾಗುತ್ತವೆ. ಆದರೆ ಸುಂದರ ಮಾತುಗಳಿಗೇನು ಕೊರತೆಯಿಲ್ಲ. ಕಣ್ಣಿನಲ್ಲಿ ಹರಿದು ತಿನ್ನುವ ಭಾವ ಮರೆಯಾಗುವುದಿಲ್ಲ.

ಕಣ್ಣಿಗೆ ಕಾಣುವುದು ಮಾತ್ರ ತನು, ತನುವಿನ ಚರ್ಮ, ವಸ್ತ್ರ, ಆಭರಣ, ಜಾತಿ, ವೃತ್ತಿ, ತನು ಪಡೆದ ವಿದ್ಯೆ. ಸಮಾಜದಲ್ಲಿ ಸ್ತ್ರೀ ಪುರುಷ ತನುಗಳಿಗಿದ್ದ ಘನತೆ ಗೌರವ.

ಸ್ತ್ರೀ ತನುವಿಗಿದ್ದ ಘನತೆ ಗೌರವ ಆದರಾತಿಥ್ಯವೇ ಬೇರೆ ; ಪುರುಷ ತನುವಿಗಿದ್ದ ಘನತೆ ಗೌರವ ಪೌರುಷ ಆದರಾತಿಥ್ಯವೇ ಬೇರೆ.

ಸ್ತ್ರೀ ಪುರುಷ ತನುಗಳಿಗೆ ಬರೀ ತನು ಎಂಬುದೇ ಮರೆತು ಹೋಗಿದೆ. ತನುವಿನ ಶಕ್ತಿ, ತನುವಿನಲ್ಲಿರುವ ಅರಿವು, ತನುವಿನಲ್ಲಿರುವ ಮಹಾಜ್ಞಾನ ತನುವಿನಲ್ಲಿಯೇ ಗರ್ಭೀಕರಿಸಿಕೊಂಡಿದೆ. ಬರೀ ಸ್ತ್ರೀ ಪುರುಷನೆಂಬ ಅಭಿಮಾನ, ಮಾನ, ಮರ್ಯಾದೆ, ಗೌರವ, ಸ್ತ್ರೀ ತನುವಿನ ಇತಿಹಾಸ ಮಾತ್ರ ಮನದಲ್ಲಿ ಸಂಗ್ರಹವಾಗಿ ಸ್ತ್ರೀಗೆ ತಾನು ಸ್ತ್ರೀ ಎಂದು ಕಾಡುತ್ತದೆ. ಪುರುಷನಿಗೆ ತಾನು ಪುರುಷನೆಂದು ತನುವಿನ ಇತಿಹಾಸ ಕಾಡುತ್ತದೆ.

ತನುಗಳು ಹುಟ್ಟಿದಂದಿನಿಂದ ಇದೇ ಕೆಲಸ ಮಾಡಿಕೊಂಡು ಬಂದಿವೆ. ತನುವಿನಲ್ಲಿರುವ ಮನ, ತನುವಿನಲ್ಲಿರುವ ಶಕ್ತಿಯನ್ನು ತಿಳಿಯಲು ಆಸ್ಪದ ಮಾಡಿಕೊಟ್ಟಿಲ್ಲ.

ಸ್ತ್ರೀ ಪುರುಷನೆಂದು ತನುವಿಗೆ ಹೆಸರಿಸಿದರೇನು? ನೋಡುವ ಕಣ್ಣುಗಳಲ್ಲಿರುವ ಶಕ್ತಿ ಒಂದೇ! ಅದು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಸ್ಪರ್ಶಿಸುವ ಚರ್ಮ ಒಂದೇ. ಅದು ಕೂಡಾ ಹೆಣ್ಣೂ ಅಲ್ಲ ಗಂಡೂ ಅಲ್ಲ. ಚರ್ಮದೊಳಗಿರುವ ಮಾಂಸ, ರಕ್ತ, ಎಲುಬುಗಳು ಕೂಡಾ ಒಂದೇ ಇವುಗಳಿಗೆ

ಹೆಣ್ಣು ಗಂಡೆಂದು ಹೆಸರುಗಳಿಲ್ಲ. ಕಿವಿ ಕೇಳುವ ಶಬ್ದ ಒಂದೇ, ರುಚಿಸುವ ನಾಲಿಗೆ ಒಂದೇ, ವಾಸಿಸುವ ಮೂಗು ಒಂದೇ. ಈ ಕ್ರಿಯೆಗಳಿಂದಾಗುವ ವ್ಯತ್ಯಾಸ ಎರಡೂ ತನುಗಳಿಗೆ ಒಂದೇ ಆಗಿದೆ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೊಂದೆ. ಪಂಚೇಂದ್ರಿಯಗಳೊಂದೆ. ಪಂಚಕರ್ಮೇಂದ್ರಿಯಗಳೊಂದೆ. ಸಪ್ತವ್ಯಸನ ಗಳೊಂದೆ. ಅಷ್ಟಮದಗಳೂ ಒಂದೇ. ತನುವಿಗೆ ಇವುಗಳಿಂದಾಗುವ ಸುಖ ಒಂದೇ ದುಃಖ ಕೂಡಾ ಒಂದೇ ಆಗಿದೆ.

ನೋಡುವ ಕಣ್ಣಿನಲ್ಲಿ ಅರಿವು ಮರೆವಾದುದರಿಂದ ಆ ಕಣ್ಣಿಗೆ ತನು ಹೆಣ್ಣಾಗಿ ಕಾಣುತ್ತದೆ. ಗಂಡಾಗಿ ಕಾಣುತ್ತದೆ. ಸತ್ಯವನ್ನೇ ನೋಡುವ ಕಣ್ಣಿಗೆ ಅದು ಹೆಣ್ಣೂ ಅಲ್ಲ; ಗಂಡೂ ಅಲ್ಲ, ತನ್ನಂತೆ ಚರ್ಮದ ಹೊದಕೆ ಉಳ್ಳ ರಕ್ತ ಮಾಂಸ ಅಸ್ಥಿ ಉಳ್ಳ ಅರಿವಿನ ತನು.

''ನೋಡೂದನ್ನ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ. ನೋಡೂದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನು ಗುಹೇಶ್ವರಾ ನಿಮ್ಮ ಶರಣ ಮಾತ್ರ ಬಲ್ಲ. ''

ಜಗತ್ತೇ ಹೆಣ್ಣೆಂದು ಗಂಡೆಂದು ನೋಡುವುದು. ಈ ಭ್ರಮೆಯಲ್ಲಿ ಜಗದ ತನುಗಳು ನಿರತವಾಗಿವೆ. ಆ ತನುಗಳಲ್ಲಿಯೇ ಅರಿವು ಮರೆಯಾಗಿದೆ. ಅಜ್ಞಾನ ಮಾತ್ರ ಬಳಕೆಯಾಗುತ್ತಲಿದೆ.

**ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರುವುದು :**

''ಅರಿವನು ಅಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು. ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು'' ಎಂದು ಮುಕ್ತಾಯಕ್ಕ ಅರಿವು ಬಳಕೆ ಮಾಡಿಕೊಳ್ಳದ ಲೋಕದ ತನುಗಳಿಗೆ ಎಚ್ಚರಿಕೆಯ ಸೂತ್ರವನ್ನು ಕೊಟ್ಟಿದ್ದಾಳೆ.

ಶರಣ ಮಹಾಜ್ಞಾನಿ! ಸಂಪೂರ್ಣ ಜ್ಞಾನವನ್ನು ಬಳಕೆ ಮಾಡಿಕೊಂಡ ತನುವದು. ಶರಣನ ತನುವಿನ ಚಾರಿತ್ರ್ಯ ಲೋಕಕ್ಕೆ ಮರುಳಾಗಿ ತೋರುವುದು. ಶರಣನ ತನುವಿಗೆ ಲೋಕದ ಭ್ರಮಾ ತನುಗಳೆಲ್ಲ ಮರುಳಾಗಿ ತೋರುವವು. ಶರಣತನುವಿಗೆ ಹೆಣ್ಣು ಗಂಡುಗಳು ಕಾಣುವುದೇ ಇಲ್ಲ. ತನುವಿನ ಅರಿವು ಗಂಡು, ತನುವಿನ ಮನ ಹೆಣ್ಣು. 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ' ಎಂದು ಸಿದ್ಧರಾಮ ಶಿವಯೋಗಿ ಎಚ್ಚರಿಸಿದ್ದಾರೆ.

ತನುವಿನ ಅರಿವು ಗಂಡು, ತನುವಿನ ಮನ ಹೆಣ್ಣು. ಮನಕ್ಕೆ ಬೇಗ ಅರಿವಾಗಲೆಂದು ಜ್ಞಾನಿಗಳು ಹೀಗೆ ಹೆಣ್ಣು ಗಂಡು ಎಂದು ಹೆಸರಿಸಿದ್ದಾರೆ. ಆದರೂ ಮನ ತನುವಿನ ಅರಿವೆಂಬ ಗಂಡನೊಂದಿಗೆ ಬೆರೆತು ಅರ್ಧನಾರೀಶ್ವರನಾಗುವುದಿಲ್ಲ. ತನುವಿನ ಅರಿವನ್ನು ಎಳ್ಳಷ್ಟೂ ಬಳಕೆ ಮಾಡಿಕೊಳ್ಳುವುದಿಲ್ಲ. ಬದಲಾಗಿ ತಾನು (ಮನ) ವಾಸಿಸುವ ತನುವನ್ನೇ ಹೆಣ್ಣೆಂದು ಗಂಡೆಂದು ಗುರುತಿಸಿಕೊಂಡು ಅಭಿಮಾನಪಟ್ಟುಕೊಳ್ಳುತ್ತದೆ.

**ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆಯಿಲ್ಲ,ಮರಹಿಲ್ಲ,ಅಭಿಮಾನವಿಲ್ಲ:**

ತನುವಿನಲ್ಲಿರುವ ಮನ ಎಚ್ಚರಗೊಂಡು ತನುವಿನಲ್ಲಿರುವ ಅರಿವನ್ನು ಒಲಿಸಿಕೊಂಡು ಆ ಅರಿವಿಗೆ ಶರಣು ಹೋಗುವುದೇ ಶರಣ ತನು : ಜ್ಞಾನಿ ತನು. ಈ ತನುವಿಗೆ ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ , ಹೆಣ್ಣು , ಗಂಡು ಎನ್ನುವ ಅಜ್ಞಾನ ಮೊದಲೇ ಇಲ್ಲ ಎಂದು ಅಕ್ಕ ಹೇಳಿದ್ದಾಳೆ.

□

# ಅರಿವಿನ ಸೆರೆಯಲ್ಲಿ ಸಿಕ್ಕ ಸಿದ್ಧಾರ್ಥ ಬುದ್ಧನಾದ

**ನಿನ್ನರಿಕೆಯ ನರಕವೇ ಮೋಕ್ಷ ಕಂಡಯ್ಯಾ,**
**ನಿನ್ನನರಿಯದ ಮುಕ್ತಿಯೆ ನರಕ ಕಂಡಯ್ಯಾ.**
**ನೀನೊಲ್ಲದ ಸುಖವೆ ದು:ಖ ಕಂಡಯ್ಯಾ,**
**ನೀನೊಲಿದ ದು:ಖವೆ ಪರಮಸುಖ ಕಂಡಯ್ಯಾ.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧವೆಂದಿಪ್ಪೆನು.**

**ನಿನ್ನರಿಕೆಯ ನರಕವೇ ಮೋಕ್ಷ ಕಂಡಯ್ಯಾ:**

ಅರಿವು ತಿಳಿವುದಕ್ಕಾಗಿ ತನು ಯಾತನೆ ಅನುಭವಿಸಿದರು ಕೂಡಾ ಅದು ಮೋಕ್ಷಕ್ಕೆ ಸೋಪಾನ ಕಟ್ಟಿದಂತೆ.

ತನ್ನ ಅರಿವು ತಾನು ತಿಳಿಯದೆ ಮುಕ್ತಿಗಾಗಿ ಮಾಡುವ ಆಚಾರಗಳೆಲ್ಲ ನರಕಕ್ಕೆ ಸೋಪಾನ ಕಟ್ಟಿದಂತೆ.

ಸಿದ್ಧಾರ್ಥ ತನ್ನ ಅರಿವು ತಾನು ತಿಳಿಯುವುದಕ್ಕಾಗಿ ಎಂಟು ವರ್ಷಗಳ ಪರ್ಯಂತ ಕಾಡು ಮೇಡು ಸುತ್ತಿದ. ಸುಖದ ಸುಪ್ಪತ್ತಿಗೆಯಲ್ಲಿದ್ದ ತನು ಆಹಾರವಿಲ್ಲದೆ ನಿದ್ರೆ ನೀರಡಿಕೆ ಎನ್ನದೆ ಬಳಲಿ ಬೆಂಡಾಯಿತು. ಈ ಮೋಕ್ಷ ಸಾಕು. ಇನ್ನು ಅರಮನೆಗೆ ಕರೆದುಕೊಂಡು ಹೋಗು ಎಂದು ಎಷ್ಟೋ ಬಾರಿ ಹೇಳಿದರೂ ತನುವಿನ ಮನದ ಮಾತಿಗೆ ಸಿದ್ಧಾರ್ಥ ಕಿವಿಗೊಡಲಿಲ್ಲ.

ಸಿದ್ಧಾರ್ಥನ ತನುವಿನಲ್ಲಿಯೇ ಬುದ್ಧನಿದ್ದುದನ್ನು ಸಿದ್ಧಾರ್ಥ ಕಂಡುಕೊಂಡ. ಸಿದ್ಧಾರ್ಥನಿಗೆ ಆನಂದವಾಯಿತು. ಬುದ್ಧನಲ್ಲಿ ಸಿದ್ಧಾರ್ಥ ಬೆರೆತು ಸಿದ್ಧಾರ್ಥ ಇಲ್ಲವಾದ. ಸಿದ್ಧಾರ್ಥನೇ ಬುದ್ಧನಾದ !

**ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯಾ:**

ರಾಜನಾದವನು ಮುಕ್ತಿಗಾಗಿ ಯಜ್ಞ ಯಾಗಾದಿಗಳನ್ನು ಮಾಡಿಸುತ್ತಾನೆ. ಪ್ರಾಣಿ ಪಶುಗಳನ್ನು ಬಲಿ ಕೊಡುತ್ತಾನೆ. ದಾನ ಧರ್ಮಾದಿಗಳನ್ನು ಮಾಡುತ್ತಾ ದೇವಸ್ಥಾನಗಳನ್ನು ನಿರ್ಮಿಸುತ್ತಾನೆ. ಕಲ್ಲು ಕೆತ್ತಿ, ಮೂರ್ತಿ ಮಾಡಿಸಿ ಅದಕ್ಕೆ ದೇವರೆಂದು ಅಭಿಷೇಕ ಮಾಡುತ್ತಾನೆ. ಮುಕ್ತಿ ಪಡೆದೆನೆಂದು ಭ್ರಮಾ ಧೀನನಾಗುತ್ತಾನೆ.

ಸಿದ್ಧಾರ್ಥ ರಾಜನಾಗಿ ಮುಂದುವರಿದಿದ್ದರೆ ಕ್ಷತ್ರಿಯನಿಗೆ ರಾಜ್ಯ ವಿಸ್ತಾರ ಇಲ್ಲ ವೀರಗತಿಯೇ ಮುಕ್ತಿ. ಕಿರೀಟದ ಆಸೆಗಾಗಿ ಅನೇಕ ರಾಜರನ್ನು ಕೊಲ್ಲುತ್ತಿದ್ದ, ಸೈನಿಕರು ಸಾಯುತ್ತಿದ್ದರು. ರಕ್ತದ ಕಾಲುವೆಯೇ ಹರಿಯುತ್ತಿತ್ತು. ಎಲ್ಲೆಲ್ಲೂ ವಿಧವೆಯರೇ ಕಾಣುತ್ತಿದ್ದರು. ಮರಣ ಹೊಂದಿದ ರಾಜನ ಹೆಂಡರು ಮಕ್ಕಳು ಅಲ್ಲಿಯ ಸೈನಿಕರು ಸಿದ್ಧಾರ್ಥನಿಗೆ ವೈರಿಗಳಲ್ಲ!

ಮುಕ್ತಿಗಾಗಿ ಯುದ್ಧ, ಅಭಿವೃದ್ಧಿಗಾಗಿ ಯುದ್ಧ, ಕಿರೀಟ ಭೂಮಿ ಹೆಣ್ಣು ಹೊನ್ನಿಗಾಗಿ ಯುದ್ಧ! ಈ ಎಲ್ಲಾ ವಸ್ತುಗಳು ಸಿದ್ಧಾರ್ಥನಲ್ಲಿವೆ. ಕಿರೀಟವಿದೆ, ಸಿಂಹಾಸನವಿದೆ, ಸುಂದರವಾದ ಹೆಂಡತಿ ಮಕ್ಕಳಿದ್ದಾರೆ. ಪ್ರಧಾನಿ ಸೈನಿಕರಿದ್ದಾರೆ. ಹೇಳಿದಂತೆ ಕೇಳುವ ಪ್ರಜೆಗಳಿದ್ದಾರೆ. ಹೀಗಿದ್ದೂ ಯುದ್ಧ ಬಯಸಿ

ಮುಕ್ತಿ ಪಡೆಯುವ ಭ್ರಮಾಧೀನ ತನು ನರಕವಲ್ಲದೆ ಮತ್ತೇನು?

**ನೀನೊಲ್ಲದ ಸುಖವೆ ದು:ಖ ಕಂಡಯ್ಯಾ:**

ಸಿದ್ಧಾರ್ಥನ ತನುವಿನಲ್ಲಿರುವ ಅರಿವೆಂಬ ಬುದ್ಧನಿಗೆ ಈ ಸುಖ ಒಪ್ಪಿಗೆಯಾಗಲಿಲ್ಲ, ಅದು ಸಿದ್ಧಾರ್ಥನ ತನುವಾದರೇನು ಸೈನಿಕನ ತನುವಾದರೇನು? ತನು ತನುವಲ್ಲವೇ? ಯಾವುದೇ ತನುವಿನ ಅರಿವೆಂಬ ಬುದ್ಧನಿಗೆ ನರಕ ಸಾದೃಶ್ಯವಾದ ಹೀನ ಕೆಲಸ ಒಪ್ಪಿಗೆಯಾಗುವುದಿಲ್ಲ. ಅವನಿಗೆ ಒಪ್ಪಿಗೆಯಾಗದ್ದು ನನಗೆ ಹೇಗೆ ಸುಖವಾದೀತು ಎಂದು ಸಿದ್ಧಾರ್ಥ ತಿಳಿದ. ಶಾಶ್ವತ ಸುಖದ ಹಾದಿ ತುಳಿದ.

**ನೀನೊಲಿದ ದು:ಖವೆ ಪರಮಸುಖ ಕಂಡಯ್ಯಾ:**

ಸಿದ್ಧಾರ್ಥನ ತನುವಿನೊಳಗಿನ ಬುದ್ಧನನ್ನು ತಿಳಿಯಲು ಸಿದ್ಧಾರ್ಥ ಎಂಟು ವರ್ಷಗಳಾದ್ಯಂತ ಕಾಡುಮೇಡು ಅಲೆದ. ಗಡ್ಡೆ ಗೆಣಸು ತಪ್ಪಲು ತಿಂದ. ದೇಹ ಕೃಶವಾಯಿತು. ನರಕಯಾತನೆ ಅನುಭವಿಸಿತು. ಆದರೂ ಸಿದ್ಧಾರ್ಥ ಪರಮ ಸುಖದ ಬಯಕೆಗಾಗಿ ಹಗಲಿರುಳೂ ಕಾತರಿಸುತ್ತಿದ್ದ. ಅರಿವಿನ ಸುಖವೇ ಹಾಗೆ, ಅದು ಸವೆಯದ ಸುಖ!

**ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧ ವೆಂದಿಪ್ಪೆನು:**

ಅಕ್ಕಮಹಾದೇವಿ ಕೌಶಿಕ ರಾಜನ ಹೆಂಡತಿ, ಸಿದ್ಧಾರ್ಥ ಕೂಡಾ ರಾಜ, ಇವರಿಬ್ಬರೂ ಸುಖದ ಸುಪ್ಪತ್ತಿಗೆಯಲ್ಲಿ ಮೆರೆದವರು. ರಾಜ ಪೋಷಾಕುಗಳನ್ನು ಕಿತ್ತೆಸೆದು ಅರಿವಿನ ಬಂಧನಕ್ಕೆ ಬಂಧಿಯಾದರು. ಮೋಹದ ಬಂಧನ ಕಳಚಿಕೊಂಡು ಸಿದ್ಧಾರ್ಥ ಬುದ್ಧನಿಗೆ ಬಂಧಿಯಾದ. ಆ ಬುದ್ಧನೇ ತಾನಾದ. ಸುಖದ ಸುಖಿಯಾದ ! ಚೆನ್ನಮಲ್ಲಿಕಾರ್ಜುನನೆಂಬ ಅರಿವಿಗೆ ಬಂಧಿಯಾದ ಅಕ್ಕ ಆ ಅರಿವೇ ತಾನಾದಳು. ಹೆಸರು ಬೇರೆ ಬೇರೆಯಾದರೇನು ತನು ಒಂದೇ! ತನುವಿನಲ್ಲಿರುವ ಮನ ಒಂದೇ! ಅರಿವು ಕೂಡ ಒಂದೇ! ಮನಕ್ಕೆ ತಾನು ಅರಿವಾಗುವ ಬಯಕೆಯಾಗಬೇಕಷ್ಟೆ!

□

**ಅರಿವಿನ ಪರಿಮಳ**

- ಸಿದ್ಧಾರ್ಥ ತನ್ನ ಅರಿವು ತಾನು ತಿಳಿಯುವುದಕ್ಕಾಗಿ ಎಂಟು ವರ್ಷಗಳ ಪರ್ಯಂತ ಕಾಡು ಮೇಡು ಸುತ್ತಿದ. ಸುಖದ ಸುಪ್ಪತ್ತಿಗೆಯಲ್ಲಿದ್ದ ತನು ಆಹಾರವಿಲ್ಲದೆ ನಿದ್ರೆ ನೀರಡಿಕೆ ಎನ್ನದೆ ಬಳಲಿ ಬೆಂಡಾಯಿತು. ಈ ಮೋಕ್ಷ ಸಾಕು. ಇನ್ನು ಅರಮನೆಗೆ ಕರೆದುಕೊಂಡು ಹೋಗು ಎಂದು ಎಷ್ಟೋ ಬಾರಿ ಹೇಳಿದರೂ ತನುವಿನ ಮನದ ಮಾತಿಗೆ ಸಿದ್ಧಾರ್ಥ ಕಿವಿಗೊಡಲಿಲ್ಲ.
- ಸಿದ್ಧಾರ್ಥನ ತನುವಿನಲ್ಲಿಯೇ ಬುದ್ಧನಿದ್ದುದನ್ನು ಸಿದ್ಧಾರ್ಥ ಕಂಡುಕೊಂಡ. ಸಿದ್ಧಾರ್ಥನಿಗೆ ಆನಂದವಾಯಿತು. ಬುದ್ಧನಲ್ಲಿ ಸಿದ್ಧಾರ್ಥ ಬೆರೆತು ಸಿದ್ಧಾರ್ಥ ಇಲ್ಲವಾದ. ಸಿದ್ಧಾರ್ಥನೇ ಬುದ್ಧನಾದ !

# ಅರಿವಿನಿಂದಾದ ಮಾಯೆ ಅರಿವಿನಿಂದಲೇ ನಷ್ಟ

**ನೋಡಿಹೆನೆಂದಡೆ ದೃಷ್ಟಿ ಮರೆಯಾಯಿತ್ತು.**
**ಕೂಡಿಹೆನೆಂದಡೆ ಭಾವ ಮರೆಯಾಯಿತ್ತು.**
**ಏನೆಂಬೆನೆಂತೆಂಬೆನಯ್ಯಾ?**
**ಅರಿದಿಹೆನೆಂದಡೆ ಮರಹು ಮರೆಯಾಯಿತ್ತು.**
**ನಿನ್ನ ಮಾಯೆಯ ನತಿಗಳೆವಡೆ ಎನ್ನಳವೆ?**
**ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ.**

ಕಾಯದಲ್ಲಿ ದೃಷ್ಟಿಯಿದೆ, ಮರಹು ಇದೆ, ಭಾವವೂ ಇದೆ ಹಾಗೆಯೇ ಮಾಯೆಯೂ ಇದೆ. ಇವೆಲ್ಲಕ್ಕೂ ಮಿಗಿಲಾಗಿ ಅರಿವು ಇದೆ. ಅದಕ್ಕಾಗಿಯೇ ಅರಿವಿನ ಕಾಯ, ಅರಿವಿನ ಪ್ರಾಣಿ ಎಂದು ಕಾಯವನ್ನು ಕರೆಯುವರು.

ಕಾಯದ ಕಣ್ಣಿನ ದೃಷ್ಟಿಯಲ್ಲಿ ಮಾಯೆ ಮುಸುಕಿ ನೋಡುವ ವಸ್ತುಗಳ ಸತ್ಯವನ್ನು ನೋಡದಂತೆ ಮರೆ ಮಾಡಿದೆ. ಕಣ್ಣಿಗೆ ನೋಡುವುದೊಂದೆ ಕೆಲಸ. ಕಣ್ಣಿನಲ್ಲಿ ಮುಸುಕಿದ ಮಾಯೆಗೆ ನೋಡಿದುದನ್ನು ಬೇಡುವ ಕೆಲಸ. ಕಣ್ಣಿನೊಂದಿಗೆ ಆಭರಣವನ್ನು ನೋಡಿದ ಮಾಯೆ ಬೇಡುವಂತೆ ಮಾಡುತ್ತದೆ. ಅದನ್ನು ಕಳುವು ಮಾಡಿ ಇಲ್ಲ ಖರೀದಿಸಿ ಧರಿಸುವಂತೆ ಸಂಗ್ರಹಿಸುವಂತೆ ಆದೇಶಿಸುತ್ತದೆ.

ಅರಿವಿನ ಕಣ್ಣಿನಿಂದ ನೋಡಲು ಹೋದರೆ ಆಭರಣದಲ್ಲಿ ಮಾಟ(ಡಿಜೈನ್)ವಿದೆ, ಬಣ್ಣವಿದೆ, ಇವೆರಡನ್ನು ಕಳೆದರೆ ಅದು ಬರೀ ಲೋಹ. ಇದನ್ನು ಖರೀದಿಸುವಂತಿಲ್ಲ, ಕದಿಯುವಂತಿಲ್ಲ, ಕಣ್ಣು ಅರಿವಿನೊಂದಿಗೆ ಕೂಡಿ ನೋಡಬೇಕೆಂದು ತವಕಿಸಿದರೆ ಆಭರಣದ ಮೇಲಿದ್ದ ಭಾವ ಅರಿವನ್ನು ಮರೆಮಾಡಿದೆ. ಅರಿದಿಹೆನೆಂದರೆ ಮರಹು ಮರೆಮಾಡಿದೆ.

ಕಣ್ಣಿನ ಗರ್ಭದಲ್ಲಿ ಅರಿವು ಬಳಕೆಯಾಗದೆ ಹಾಗೆ ಉಳಿದಿದೆ. ಆಭರಣ ಪಡೆದು ಧರಿಸಿ ಆನಂದ ಪಡಬೇಕೆಂಬ ಮಾಯೆ ಮುಸುಕಿ, ದೇಹದಲ್ಲಿ ಕ್ಷಣ ಕ್ಷಣವು ಅಜ್ಞಾನದ ಕೆಲಸ ಮಾಡುತ್ತಲಿದೆ.

ಅರುಹಿಂದಲಾದ ಮರಹಿನ ಶಬ್ದ ಅರಿಯಲಾಗದು. ಅರಿದಡೆ ಅದಕ್ಕದೇ ಭಂಗ. ಅರುವರಿತು ಮರಹು ನಷ್ಟವಾಗಿ ಜ್ಞಾನ ಬೆಂದಲ್ಲಿ ನಿರ್ಣಯವಿಲ್ಲವಯ್ಯಾ. ಜ್ಞಾನದೊಳಗಣ ಬುದ್ಧಿ ಭಸ್ಮವಾಗಿ ಧರಿಸಿದಲ್ಲಿ ಕೂಡಲ ಚೆನ್ನಸಂಗಯ್ಯ ಸರ್ವನಿವಾಸಿಯಾದ ಎಂದು ಚೆನ್ನಬಸವಣ್ಣನವರು ಅರಿವು ಬಳಕೆ ಮಾಡುವ ಸೂತ್ರ ಹೇಳಿದ್ದಾರೆ.

ಚಿನ್ನ ಎನ್ನುವ ಶಬ್ದ ಅರಿವಿನಿಂದ ಟಂಕಿಸಲಾಗಿದೆ, ಭೂಮಿ ಅಗೆದಾಗ ಹೇರಳವಾಗಿ ದೊರೆತ ಲೋಹ ಕಬ್ಬಿಣ ಎಂದು ಹೆಸರು ಪಡೆಯಿತು. ವಿರಳವಾಗಿ ದೊರೆತ ಲೋಹ ಚಿನ್ನವೆಂದು ಹೆಸರು ಪಡೆಯಿತು. ಒಂದು ಕಪ್ಪು ಮತ್ತೊಂದು ಹಳದಿಬಣ್ಣದ್ದು. ಇವೆರಡೂ ಲೋಹಗಳೆಂದು ಅರಿವಿನಿಂದ ಹೆಸರಿಸಲಾಗಿದೆ. ಆದರೆ ಮರೆತು ಚಿನ್ನದ ಆಭರಣವೆಂದು ಹೆಸರು ಪಡೆದು

ವ್ಯಾಮೋಹ ಹುಟ್ಟಿತು. ಅರಿತರೆ ಅದಕ್ಕದೇ ಭಂಗವಾಗುತ್ತದೆ. ಅರಿವು ಅರಿತರೆ ಚಿನ್ನದ ಆಭರಣ ಎನ್ನುವ ಮರಹು ನಷ್ಟವಾಗುತ್ತದೆ. ಚಿನ್ನದ ಆಭರಣ ಎನ್ನುವ ಪದ ಜ್ಞಾನದಲ್ಲಿ ಬೆಂದು ನಿರ್ಣಯವಿಲ್ಲದಂತೆ ಲೋಹವಾಗುತ್ತದೆ. ಆ ಜ್ಞಾನದೊಳಗಣ ಬುದ್ದಿಯನ್ನೇ ಭಸ್ಮವಾಗಿ ಧರಿಸಿ ನೋಡಿದಲ್ಲಿ ಎಲ್ಲೆಲ್ಲೂ ಅರಿವೇ ತುಂಬಿದೆ.

**ನಿನ್ನ ಮಾಯೆಯನತಿಗಳೆವಡೆ ಎನ್ನಳವೆ? ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ:**

ಅರಿವಿನಿಂದ ಸೃಷ್ಟಿಯಾದ ಶಬ್ದವನ್ನು ಮರೆವೆಂಬ ಮಾಯೆಯಿಂದ ತಿಳಿಯಲಾಗದು. ಅರಿವಿನಿಂದಾದ ಮರೆವಿನ ಶಬ್ದವನ್ನು ಅರಿವಿನಿಂದಲೇ ಭಸ್ಮ ಮಾಡಬೇಕು. ಅರಿವೆಂಬ ಚೆನ್ನಮಲ್ಲಿಕಾರ್ಜುನನನ್ನು ಬೆರೆತು ನೋಡಿದಾಗ ಮಾಯೆಯಿಲ್ಲ, ಮರೆಹು ಇಲ್ಲ, ಭಾವಿಸುವ ಭಾವ ನಿರ್ಭಾವವಾಗಿ ಎಲ್ಲೆಲ್ಲೂ ಚೆನ್ನಮಲ್ಲಿಕಾರ್ಜುನನೆಂಬ ಅರಿವೇ ಗೋಚರಿಸುತ್ತದೆ.

□

**ಅರಿವಿನ ಪರಿಮಳ**

- □ ಕಣ್ಣಿಗೆ ನೋಡುವುದೊಂದೆ ಕೆಲಸ. ಕಣ್ಣಿನಲ್ಲಿ ಮುಸುಕಿದ ಮಾಯೆಗೆ ನೋಡಿದುದನ್ನು ಬೇಡುವ ಕೆಲಸ.
- □ ಅರಿವಿನಿಂದ ಸೃಷ್ಟಿಯಾದ ಶಬ್ದವನ್ನು ಮರೆವೆಂಬ ಮಾಯೆಯಿಂದ ತಿಳಿಯಲಾಗದು. ಅರಿವಿನಿಂದಾದ ಮರೆವಿನ ಶಬ್ದವನ್ನು ಅರಿವಿನಿಂದಲೇ ಭಸ್ಮ ಮಾಡಬೇಕು.

# ಪಕ್ವವಾಗದ ಕಣ್ಣು ಕಣ್ಣಲ್ಲ ಅದು ಕಾಮದ ಕಣ್ಣು

**ಫಲ ಒಳಗೆ ಪಕ್ವವಾಗಿಯಲ್ಲದೆ,**
**ಹೊರಗಳ ಸಿಪ್ಪೆ ಒಪ್ಪಗೆಡದು.**
**ಕಾಮನ ಮುದ್ರೆ ಕಂಡು ನಿಮಗೆ ನೋವಾದಿಹಿತೆಂದು**
**ಆ ಭಾವದಿಂದ ಮುಚ್ಚಿದೆ.**
**ಇದಕ್ಕೆ ನೋವೇಕೆ ಕಾಡದಿರಣ್ಣಾ,**
**ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳ.**

**ಫಲ ಒಳಗೆ ಪಕ್ವವಾಗಿಯಲ್ಲದೆ, ಹೊರಗಳ ಸಿಪ್ಪೆ ಒಪ್ಪಗೆಡದು :**

ಬೆತ್ತಲು ದೇಹವನ್ನು ಬಟ್ಟೆ ಮುಚ್ಚಬೇಕೊ ಅಥವಾ ಕಣ್ಣು ಬೆತ್ತಲಾಗಬೇಕೋ ? ಬೆತ್ತಲಾಗದ ಕಣ್ಣು ದೇಹದ ಮೇಲೆ ಬಟ್ಟೆಯಿದ್ದರೂ ಬೆತ್ತಲನ್ನೇ ನೋಡುತ್ತದೆ. ಕಾಮದ ಕಣ್ಣಿಗೆ ಬಟ್ಟೆ ಅಡ್ಡಿ ಬರುವುದಿಲ್ಲ. ಕಣ್ಣು ಪಕ್ವವಾಗದ ವಿನಃ ಕಣ್ಣು ಕಣ್ಣಾಗುವುದಿಲ್ಲ ; ಅದು ಕಾಮದ ಕಣ್ಣು. ಕಣ್ಣಿಗೆ ಒಳ ಕಣ್ಣಿನ ಪರಿಚಯವಾಗದ ವಿನಹ ಅದು ಪಕ್ವವಾಗದು. ಅದರ ಸಿಪ್ಪೆ ಕೂಡಾ ಒಪ್ಪಗೆಡದು.

ತನು ಮೈ ತುಂಬ ಬಟ್ಟೆ ಹೊಂದಿರಬೇಕು; ಅಂದರೆ ಮಾತ್ರ ಕಣ್ಣಿನಲ್ಲಿ ಕಾಮದ ಭಾವನೆಗಳು ಬರುವುದಿಲ್ಲ ಎನ್ನುವ ಮಾತುಗಳು ಎಷ್ಟು ಸರಿ. ಕಣ್ಣಿಗೆ ಕಾಣುವ ತನು ಬಟ್ಟೆಯಿದ್ದರೇನು ಬೆತ್ತಲೆ ಇದ್ದರೇನು ? ಕಾಮದಿಂದ ಬೆತ್ತಲಾಗಬೇಕೆಂದು ಕಣ್ಣು ಏಕೆ ತಿಳಿಯುತ್ತಿಲ್ಲ. ಕಣ್ಣು ಕಣ್ಣನ್ನೆ ಪ್ರಶ್ನಿಸಿಕೊಳ್ಳಬೇಡವೆ ?

ಪಕ್ವವಾಗದ ಕಣ್ಣು ಅರೆಬೆತ್ತಲೆ ಅಥವಾ ಬೆತ್ತಲೆ ದೇಹವನ್ನು ನಾಯಿಯಂತೆ ಹರಿದು ತಿಂದರೆ; ಅದು ತನುವಿನ ತಪ್ಪೊ ಅಥವಾ ಕಾಮದ ಕಣ್ಣಿನ ನಾಯಿಯ ತಪ್ಪೊ ? ಕಣ್ಣಿಗೆ ಕಾಣುವ ತನು ಹೇಗಿದ್ದರೇನು ? ಅದು ತನುವೇ. ತನು ಮುಖ್ಯವೇ ಹೊರತು ತನುವಿಗೆ ಹೊದ್ದ ಬಟ್ಟೆಗಳಲ್ಲ. ಕಣ್ಣಿನ ಒಳಗಿನ ಅರಿವಿನ ಕಣ್ಣು ಕಣ್ಣಿಗೆ ಕಾಣದ ವಿನಹ ಕಣ್ಣಿನ ಹೊರಗಣ ಸಿಪ್ಪೆ ಒಪ್ಪಗೆಡದು. ಒಳಗಿನ ಫಲಭರಿತ ಪಕ್ವತೆ ಹೊರಕಣ್ಣಿಗೆ ಅರಿವಾಗದಿದ್ದರೆ ಅದು ತನುವನ್ನು ನೋಡದು. ಬರೀ ಬೆತ್ತಲೆ ತನುಗಳನ್ನೇ ನೋಡುತ್ತದೆ ! ನೋಡಲು ಸೌಮ್ಯವಿರಬಹುದು. ಆದರೆ ಕಾಮದ ಮುದ್ರೆಯು ಕಣ್ಣಿಗೆ ಮೆತ್ತಿಕೊಂಡಿರುತ್ತದೆ. ಮನದಲ್ಲಿ ಹಾದರ ನಡೆದಿರುತ್ತದೆ. ಪಕ್ವವಾಗದ ಕಣ್ಣನ್ನು ಕಣ್ಣು ಎನ್ನಲು ಸಾಧ್ಯವೇ ? ಕಣ್ಣಲ್ಲ. ಅದು ಕಾಮನ ಮುದ್ರೆ ನೋಡುವ ನಾಯಿಕಣ್ಣು.

ಅಕ್ಕಮಹಾದೇವಿ ಪಕ್ವವಾಗಿ ಒಳಗೂ ಹೊರಗೂ ಒಂದಾಗಿದ್ದ ಶಿವಶರಣೆ. ಮೈತುಂಬಾ ಜ್ಞಾನದ ಕಣ್ಣುಗಳೇ ಒಡಮೂಡಿದ ಮಹಾತಾಯಿ ಆಕೆ ; ಆಕೆಗೆ ಬಟ್ಟೆ ಬೇಕೆ ? ಆ ತಾಯಿ ಬಟ್ಟೆ ತೊಡುವುದೆಂದರೆ ಬೆಟ್ಟಕ್ಕೆ ಬಟ್ಟೆ ತೊಡಿಸಿದಂತೆ ಅಲ್ಲವೆ ?

ಕಿನ್ನರಿ ಬೊಮ್ಮಯ್ಯ ಶರಣರು ಕಲ್ಯಾಣದ ಗಡಿ ಕಾವಲಿಗಿದ್ದವರು. ಪ್ರತಿಯೊಬ್ಬರನ್ನು

ಪರೀಕ್ಷಿಸಿ ಪರಿಶೀಲಿಸಿ ಕಲ್ಯಾಣದೊಳಗೆ ಬಿಡುವುದು ಅವರ ಕಾಯಕ. ಆದರೆ ಮಹಾದೇವಿ ಅಕ್ಕಳನ್ನು ಸಾಮಾನ್ಯರಿಗೆ ಪರೀಕ್ಷಿಸಿದಂತೆ ಪರೀಕ್ಷಿಸಬಹುದೇ? ಬಟ್ಟೆ ಕಳಚಿ ಜ್ಞಾನದ ಬೆಳಗನುಟ್ಟ ಅಕ್ಕಳನ್ನು ಕಾಡಬಹುದೆ ? ಬೆತ್ತಲಿದ್ದು ಕೇಶ ಮುಚ್ಚಿಕೊಂಡ ಕಾರಣವೇನೆಂದು ಕಿನ್ನರಿ ಬೊಮ್ಮಣ್ಣ ಅಕ್ಕನನ್ನು ಕೇಳಬಹುದೆ ? ಒಬ್ಬ ಶರಣ, ಮಹಾ ಶರಣೆಯನ್ನು ಕೇಳುವ ಪ್ರಶ್ನೆಯೇ ಇದು ?

ಕಿನ್ನರಿ ಬೊಮ್ಮಯ್ಯನ ಹೊರ ಕಣ್ಣು ಪಕ್ವವಾಗಲೆಂದು ಅಕ್ಕ ಉತ್ತರ ನೀಡಿದಳು. ನಿಮಗೆ ನೋವಾಗದಿರಲೆಂದು ಕೇಶ ಮುಚ್ಚಿದೆ. ಕಾಮನ ಮುದ್ರೆ ನಾಯಿ ಕಣ್ಣಿಗೆ ಗೋಚರವಾಗದಿರಲೆಂದು ಕೇಶ ಮುಚ್ಚಿದೆ. ಇದಕ್ಕೆ ನಿಮಗೇಕೆ ನೋವು. ಕಾಡದಿರಿ ಬೊಮ್ಮಣ್ಣ. ಇದು ಬೆಳಗನುಟ್ಟ ಮಲ್ಲಿಕಾರ್ಜುನನೆಂಬ ದೇವನ ಅಂಗ. ದೇವಾಂಗ ! ಆ ಅರಿವೆಂಬ ದೇವನನ್ನೇ ಹೊದ್ದು ಅವನಿಗೆ ಒಳಗಾದ ತನುವಿದು. ಮಹಾಜ್ಞಾನಕ್ಕೆ ಒಲಿದ ತನುವಿದು ! ಈ ತನುವನ್ನು ಕಾಡಬೇಡಿ ಎಂದು ಕಾಮದಿಂದ ಕಾಡುವ ಕಿನ್ನರಿ ಬೊಮ್ಮಯ್ಯನ ಕಣ್ಣಿನ ಕಾಮವನ್ನು ಕಳೆದಿದ್ದಾಳೆ ಅಕ್ಕ.

□

**ಅರಿವಿನ ಪರಿಮಳ**

□ ಬೆತ್ತಲು ದೇಹವನ್ನು ಬಟ್ಟೆ ಮುಚ್ಚಬೇಕೊ ಅಥವಾ ಕಣ್ಣು ಬೆತ್ತಲಾಗಬೇಕೋ ? ಬೆತ್ತಲಾಗದ ಕಣ್ಣು ದೇಹದ ಮೇಲೆ ಬಟ್ಟೆಯಿದ್ದರೂ ಬೆತ್ತಲನ್ನೇ ನೋಡುತ್ತದೆ. ಕಾಮದ ಕಣ್ಣಿಗೆ ಬಟ್ಟೆ ಅಡ್ಡಿ ಬರುವುದಿಲ್ಲ. ಕಣ್ಣು ಪಕ್ವವಾಗದ ವಿನಃ ಕಣ್ಣು ಕಣ್ಣಾಗುವುದಿಲ್ಲ ; ಅದು ಕಾಮದ ಕಣ್ಣು. ಕಣ್ಣಿಗೆ ಒಳ ಕಣ್ಣಿನ ಪರಿಚಯವಾಗದ ವಿನಹ ಅದು ಪಕ್ವವಾಗದು. ಅದರ ಸಿಪ್ಪೆ ಕೂಡಾ ಒಪ್ಪಗೆಡದು.

□ ತನು ಮೈ ತುಂಬ ಬಟ್ಟೆ ಹೊಂದಿರಬೇಕು; ಅಂದರೆ ಮಾತ್ರ ಕಣ್ಣಿನಲ್ಲಿ ಕಾಮದ ಭಾವನೆಗಳು ಬರುವುದಿಲ್ಲ ಎನ್ನುವ ಮಾತುಗಳು ಎಷ್ಟು ಸರಿ. ಕಣ್ಣಿಗೆ ಕಾಣುವ ತನು ಬಟ್ಟೆಯಿದ್ದರೇನು ಬೆತ್ತಲೆ ಇದ್ದರೇನು ? ಕಾಮದಿಂದ ಬೆತ್ತಲಾಗಬೇಕೆಂದು ಕಣ್ಣು ಏಕೆ ತಿಳಿಯುತ್ತಿಲ್ಲ. ಕಣ್ಣು ಕಣ್ಣನ್ನೆ ಪ್ರಶ್ನಿಸಿಕೊಳ್ಳಬೇಡವೆ ?

□ ಅಕ್ಕಮಹಾದೇವಿ ಪಕ್ವವಾಗಿ ಒಳಗೂ ಹೊರಗೂ ಒಂದಾಗಿದ್ದ ಶಿವಶರಣೆ. ಮೈತುಂಬಾ ಜ್ಞಾನದ ಕಣ್ಣುಗಳೇ ಒಡಮೂಡಿದ ಮಹಾತಾಯಿ ಆಕೆ ; ಆಕೆಗೆ ಬಟ್ಟೆ ಬೇಕೆ ? ಆ ತಾಯಿ ಬಟ್ಟೆ ತೊಡುವುದೆಂದರೆ ಬೆಟ್ಟಕ್ಕೆ ಬಟ್ಟೆ ತೊಡಿಸಿದಂತೆ ಅಲ್ಲವೆ ?

# ಒಡಲಲ್ಲಿ ಮುರಿದ ಅರಿವಿನ ಅಲಗು

**ಬಂಜೆ ಬೇನೆಯನರಿವಳೆ?**
**ಬಲದಾಯಿ ಮದ್ದ ಬಲ್ಲಳೆ?**
**ನೊಂದವರ ನೋವ ನೋಯದವರೆತ್ತ ಬಲ್ಲರೋ?**
**ಚೆನ್ನಮಲ್ಲಿಕಾರ್ಜುನಯ್ಯನಿರಿದಲಗು**
**ಒಡಲಲ್ಲಿ ಮುರಿದು ಹೊರಳುವೆನ್ನಳಲನು**
**ನೀವೆತ್ತ ಬಲ್ಲಿರೆ, ಎಲೆ ತಾಯಿಗಳಿರಾ?**

**ಬಂಜೆ ಬೇನೆಯನರಿವಳೆ? ಬಲದಾಯಿ ಮದ್ದ ಬಲ್ಲಳೆ? :**

ದೇಹದ ಶಿಕ್ಷಣ ಗೊತ್ತಿಲ್ಲದಿದ್ದರೆ, ದೇಹಕ್ಕೆ ನರಕ ಯಾತನೆ ತಪ್ಪಿದ್ದಲ್ಲ, ಸಾಕಷ್ಟು ಸಂಪತ್ತಿದ್ದರೂ ತನುವಿನ ನೋವು ನಿವಾರಣೆಯಾಗುವುದಿಲ್ಲ.

ತನುವಿನ ಶಿಕ್ಷಣದಲ್ಲಿ ಅಕ್ಕ ತಜ್ಞೆ. ತನು ಉಳ್ಳವರೆಲ್ಲ ಈ ಸೂತ್ರ ಪಾಲಿಸಿ ಸುಖವಾಗಿರಲೆಂದು ಎರಡು ಸುಂದರವಾದ ಉಪಮೆಗಳನ್ನು ಈ ವಚನದಲ್ಲಿ ಬಳಸಿದ್ದಾಳೆ.

ಬಂಜೆ ಮತ್ತು ಬಲದಾಯಿ ಎನ್ನುವ ಈ ಎರಡೂ ಶಬ್ದಗಳು ತನುವನ್ನು ಆವರಿಸಿಕೊಂಡಿವೆ. ಇವುಗಳನ್ನು ಅಕ್ಕ ಮನಕ್ಕೆ ಬಳಸಿದ್ದಾಳೆ. ತನುವಿಗೆ ಜ್ಞಾನ ತಿಳಿಯದಿದ್ದರೆ, ತನುವಿನ ಜ್ಞಾನವನ್ನು ಮನ ಬಳಕೆ ಮಾಡಿಕೊಳ್ಳದಿದ್ದರೆ ಅದು ಮಕ್ಕಳಿದ್ದೂ ಬಂಜೆ.

ತನುವೆಂಬ ಮನೆಯಲ್ಲಿ ಅರಿವೆಂಬ ಗಂಡನಿದ್ದಾನೆ. ಮನವೆಂಬ ಸತಿಯಿದ್ದಾಳೆ. ಆ ಸತಿಗೆ ಭಾವ, ಕರುಣೆ ಎಂಬ ಮಕ್ಕಳಿದ್ದಾರೆ. ಮನವೆಂಬ ಸತಿ ಅರಿವೆಂಬ ಗಂಡನೊಂದಿಗೆ ಸಂಗ ಮಾಡದಿದ್ದರೆ ಆ ಮನೆಗೆ ಮತ್ತೊಬ್ಬ ಬಲದಾಯಿ ಪ್ರವೇಶ ಮಾಡುತ್ತಾಳೆ.

ಇವರಿಬ್ಬರೂ ಸವತಿಯರಾದರು. ತಿಳಿದರೆ ಇವರಿಬ್ಬರೂ ಒಂದೇ. ಅಂದರೆ ತನುವಿಗೆ ಮನ ಒಂದೇ. ತಿಳಿಯದಿದ್ದರೆ ಬಂಜೆ ಬಲದಾಯಿ ಇಬ್ಬರಾಗುತ್ತಾರೆ. ಮಕ್ಕಳನ್ನು ಹಡೆಯದ ಬಂಜೆ ಬೇನೆಯನು ಅರಿಯಲು ಸಾಧ್ಯವೆ? ಮಕ್ಕಳೇ ಇಲ್ಲದ ಮಲತಾಯಿ ಮಕ್ಕಳ ಬಾಲರೋಗಕ್ಕೆ ಮದ್ದನರಿಯಲು ಸಾಧ್ಯವೆ? ಹೀಗೆ ಮಕ್ಕಳಿದ್ದು ಆರೈಕೆ ಮಾಡದಿದ್ದರೆ ಬಂಜೆಯಲ್ಲವೇ? ಮಕ್ಕಳಿದ್ದೂ, ಮಕ್ಕಳನ್ನು ಗಂಡನನ್ನು ಆರೈಕೆ ಮಾಡದ ಹೆಂಡತಿ ಬಲದಾಯಿಯಲ್ಲವೇ? ಇವರಿಬ್ಬರ ಜಗಳದಲ್ಲಿ ತನುವೆಂಬ ಮನೆಗೆ ಘಾಸಿಯಾಗುತ್ತದೆ. ತನು ಕಣ್ಣೀರ ಕೋಡಿಯನೇ ಹರಿಸುತ್ತದೆ. ತನುವಿನ ನೋವು ಹೆಂಡತಿಯೆಂಬ ಮನವರಿಯದು. ಭಾವ ಮತ್ತು ಕರುಣೆಯೆಂಬ ಮಕ್ಕಳು ಅರಿಯರು. ಮನದಿಂದಲೇ ಜನ್ಮ ತಾಳಿದ ಬಲದಾಯಿ ಮಕ್ಕಳಿಗೆ ಮದ್ದನರಿಯಲು ಮೊದಲೇ ತಿಳಿಯಳು.

ಅರಿವೆಂಬ ಗಂಡನ ಸಂಗ ಮನವೆಂಬ ಹೆಂಡತಿಗೆ ಇಲ್ಲದ್ದಕ್ಕಾಗಿ ಆ ಹೆಂಡತಿಗೆ ಮಕ್ಕಳಿದ್ದೂ ಬಂಜೆಯಾಗಿದ್ದಾಳೆ. ಮನೆಯ ಮಕ್ಕಳಿಗೆ ಮನೆಯ ಚಿಂತೆಯೇ ಇಲ್ಲ. ಮಗ ಎಂಬ ಭಾವ ಒಮ್ಮೆ ಅರಳುತ್ತದೆ, ಮತ್ತೊಮ್ಮೆ ಕೆರಳುತ್ತದೆ. ಕರುಣೆ ಒಮ್ಮೆ ಅಂತಃಕರಣವಾಗುತ್ತದೆ ಮತ್ತೊಮ್ಮೆ ರುದ್ರನಾಗಿ

ತನುವನ್ನೇ ಸುಟ್ಟು ಕುದಿಯುವಂತೆ ಮಾಡುತ್ತದೆ.

ಗಂಡನಿದ್ದಾನೆ, ಹೆಂಡತಿ ಇದ್ದಾಳೆ, ಮಕ್ಕಳಿದ್ದಾರೆ ಮನೆಯಲ್ಲಿ ಮಲ ತಾಯಿಯೂ ಇದ್ದಾಳೆ, ಆದರೂ ಮನೆಯೆಂಬ ತನು ಸುಖವಾಗಿಲ್ಲ. ಬಳಕೆ ಮಾಡಲು ಬೇಕಾದಷ್ಟು ಬಾಹ್ಯ ಸಂಪತ್ತಿದೆ. ಆದರೂ ಕುದಿಯುವ ತನುವೆಂಬ ಮನೆ ತಣ್ಣಗಾಗುತ್ತಿಲ್ಲ.

ತನುವೆಂಬ ಮನೆ ಬೇಕಾದಷ್ಟು ಪದವಿಗಳಿಂದ, ಅಧಿಕಾರದಿಂದ, ಪಾಂಡಿತ್ಯದಿಂದ, ಅಲಂಕೃತಗೊಂಡರೇನು? ಆ ತನು ರಾಜನಾದರೇನು, ರಾಣಿಯಾದರೇನು, ಮಂತ್ರಿ, ರಾಜ್ಯಪಾಲ, ಶಾಸಕನಾದರೇನು ,ನೋಯುವುದು ನಿಲ್ಲುವುದಿಲ್ಲ. ತನುವಿಗಾದ ನೋವು ಹೆಂಡತಿ ಮಕ್ಕಳು ಅರಿಯುತ್ತಿಲ್ಲ.

ತನುವಿನಲ್ಲಿ ಇರುವ ಅರಿವಿಗೆ ಸದಾ ಸುಖ ! ತನುವಿಗೆ ಸದಾ ನೋವು ! ತನುವಿನ ಮನಕ್ಕೆ ಸದಾ ಸುಖಿಸುವ ಚಿಂತೆ ! ಹೀಗೆ ಅರಿವಿನ ಸುಖ, ತನುವಿನ ನೋವು, ಮನದ ಚಿಂತೆಯನ್ನು, ಮನುಕುಲ ಹುಟ್ಟಿದಂದಿನಿಂದ ಒಂದನ್ನು ಮತ್ತೊಂದು ಅರಿಯದೆ ತನು ಸಂಕಟಪಡುತ್ತಲೆ ಸಾಯುತ್ತದೆ. ಶೂಲದ ಮೇಲಿನ ಭೋಗದಂತೆ ಮನ, ತನ್ನ ಮನ ಬಂದೆಡೆ ಸುಖಕ್ಕಾಗಿ ತನುವನ್ನು ಕೊಂಡೊಯ್ದು, ತನುವಿಗೆ ಸಂಕಟವನ್ನೊಡ್ಡುತ್ತದೆ. ಮನ ತನುವನ್ನು ತಿಳಿಯದು, ತನು ಮನವನ್ನು ತಿಳಿಯದು, ಇವೆರಡು ತನುವಿನ ಅರಿವನ್ನು ತಿಳಿಯವು. ಏಕೆಂದರೆ ತನು ಎನ್ನುವುದು ಟಿ.ವಿ. ಪೆಟ್ಟಿಗೆಯಂತೆ. ಎಲ್ಲವೂ ಅದರಿಂದ ಗೋಚರವಾದರೂ ಯಾವುದೂ ತಾನಲ್ಲ!

'ಶೂಲದ ಮೇಲಣ ವಿಭೋಗವೇನಾದಡೇನೊ? ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ! ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ?' ಎಂದು ಬಸವಣ್ಣನವರು ತನುವಿನ ಮನವನ್ನು ಹಾವಿಗೆ ಹೋಲಿಸಿದ್ದಾರೆ. ಹಾವು ಇದೆ, ಹಾವಾಡಿಗನೂ ಇದ್ದಾನೆ, ಬುಟ್ಟಿಯೂ ಇದೆ. ಮನವೆಂಬ ಹಾವು ಹರಿದಲ್ಲೆಲ್ಲ ಅರಿವೆಂಬ ಹಾವಾಡಿಗ ತನುವೆಂಬ ಬುಟ್ಟಿಯೊಂದಿಗೆ ಹೋಗುತ್ತಾನೆ. ಹಾವಿಗೂ ಬುಟ್ಟಿಗೂ ನಂಟು. ಹಾವು ಕಕ್ಕಿದ ಅಜ್ಞಾನದ ಕೆಲಸಕ್ಕೆ ಬುಟ್ಟಿಗೆ ಪೆಟ್ಟು ! ತನ್ನ ಅರಿವು ತನಗೆ ವೈರಿಯಾದ ಬಳಿಕ ಬಿನ್ನಾಣವುಂಟೆ? ಇನ್ನಾರಿಗೆ ದೂರುವುದು? ಹರಿದಾಡುವ ಮನವೆಂಬ ಹಾವು ಹಾವಾಡಿಗನನ್ನು ತಿಳಿಯಬೇಡವೇ? ಹಾವಾಡಿಗ ತನ್ನ ಪುಂಗಿಯಿಂದ ಅರಿವಿನ ನಾದ ಮಾಡಿ ಹರಿಯುವ ಹಾವನ್ನು ಹಿಡಿದು ತನ್ನ ತನುವಿನ ಬುಟ್ಟಿಯಲ್ಲಿ ಹಾಕಬಾರದೇ?

**ಚೆನ್ನಮಲ್ಲಿಕಾರ್ಜುನಯ್ಯನಿರಿದಲಗು ಒಡಲಲ್ಲಿ ಮುರಿದು ಹೊರಳುವೆನ್ನಳಲನು ನೀವೆತ್ತಬಲ್ಲಿರೆ ಎಲೆ ತಾಯಿಗಳಿರಾ?:**

ಎನ್ನ ತನುವಿನಲ್ಲಿ ಚೆನ್ನಮಲ್ಲಿಕಾರ್ಜುನಯ್ಯನು ಅರಿವಿನ ಅಲಗನ್ನೆ ಮುರಿದಿದ್ದಾನೆ. ಹೊರಳಿದಾಗೊಮ್ಮೆ ಅದು ತಾಕುತ್ತದೆ. ಅರಿವಿನ ಮದ್ದು ಮನಕ್ಕೆ ತಾಗಿ, ಆ ನೋವು ತಾಳದೆ, ತನುವಿಗೆ ನೋವುಂಟು ಮಾಡುವ ಮನದ ವೇಷಧಾರಿ ಬಂಜೆ ಮತ್ತು ಬಲದಾಯಿಗಳಿಬ್ಬರೂ ಇಲ್ಲವಾಗುತ್ತಾರೆ. ಚೆನ್ನಮಲ್ಲಿಕಾರ್ಜುನನಿಗೆ ಸೆರೆಯಾಗಿ ಹೆಳವರಾಗುತ್ತಾರೆ. ಅರಿವೇ ತಾವಾಗುತ್ತಾರೆ.

□

# ಮರ್ತ್ಯಕ್ಕೆ ಅಡಿ ಇಡದೆ, ಕೈಲಾಸ ಕಡೆಗಣಿಸಿದ ಅಕ್ಕ

**ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ**
**ಐವರು ಮಕ್ಕಳು ಜನಿಸಿದರು,**
**ಒಬ್ಬ ಭಾವರೂಪ, ಒಬ್ಬ ಪ್ರಾಣರೂಪ;**
**ಒಬ್ಬ ಐಮುಖವಾಗಿ ಕಾಯರೂಪಾದ;**
**ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರಣವಾದರು.**
**ಐಮುಖನರಮನೆ ಸುಖವಿಲ್ಲೆಂದು**
**ಕೈಲಾಸವ ಹೊಗೆನು, ಮರ್ತ್ಯಕ್ಕೆ ಅಡಿ ಇಡೆನು;**
**ಚೆನ್ನಮಲ್ಲಿಕಾರ್ಜುನ ದೇವಾ, ನೀನೇ ಸಾಕ್ಷಿಯಾಗಿ.**

**ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ ಐವರು ಮಕ್ಕಳು ಜನಿಸಿದರು :**

ಬಯಲಿಂದ ಹುಟ್ಟಿದ ಜ್ಞಾನವೆಂಬ ತಾಯಿಗೆ ಆಕಾಶ ಭೂಮಿ ಗಾಳಿ ನೀರು ಬೆಂಕಿ ಎಂಬ ಐದು ಮಕ್ಕಳು ಹುಟ್ಟಿದರು.

ಒಬ್ಬ ಭಾವರೂಪ, ಒಬ್ಬ ಪ್ರಾಣರೂಪ; ಒಬ್ಬ ಐಮುಖವಾಗಿ ಕಾಯರೂಪವಾದ.

ಭೂಮಿ ನೀರು ಅಗ್ನಿ ಗಾಳಿ ಆಕಾಶದಿಂದಲೇ ಕಾಯರೂಪ ಜನಿಸಿತು. ಆ ಕಾಯ ರೂಪಕ್ಕೆ ಒಬ್ಬ ಪ್ರಾಣವಾಗಿ ಚಲಿಸಿದ. ಚಲಿಸುವ ಆ ರೂಪಕ್ಕೆ ಒಬ್ಬ ಭಾವವಾಗಿ ಸಿಲುಕಿದ.

**ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರಣವಾದರು :**

ರೂಪುಳ್ಳ ಕಾಯದಲ್ಲಿ ಅಹಂಕಾರ ಮಮಕಾರಗಳು ಸಿಲುಕಿ ಉತ್ಪತ್ತಿ ಸ್ಥಿತಿಗೆ ಕಾರಣವಾದವು.

**Iಮುಖನರಮನೆ ಸುಖವಿಲ್ಲೆಂದು ಕೈಲಾಸವ ಹೊಗೆನು ಮರ್ತ್ಯಕ್ಕೆ ಅಡಿ ಇಡೆನು; ಚೆನ್ನಮಲ್ಲಿಕಾರ್ಜುನದೇವಾ ನೀನೇ ಸಾಕ್ಷಿಯಾಗಿ :**

ತನುವೆಂಬುದು ಐದು ಮುಖದ ಅರಮನೆ. ಈ ಅರಮನೆಗೆ ಕಣ್ಣು ಕಿವಿ ಮೂಗು ನಾಲಿಗೆ ಚರ್ಮಗಳೆಂಬ ಐದು ಬಾಗಿಲುಗಳಿವೆ. ಯಾವ ಬಾಗಿಲಿನಿಂದ ಪ್ರವೇಶಿಸಿದರೂ ಅರಮನೆ ಸಿಂಹಾಸನ ದಕ್ಕುತ್ತದೆ. ಈ ಮನೆ ಕೈಲಾಸಕ್ಕೂ ಅಧಿಕ. ಮರ್ತ್ಯಕ್ಕೂ ಮಿಗಿಲಾದದ್ದು.

ಸ್ವರ್ಗಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ಸ್ವರ್ಗಲೋಕ! ಮಿಥ್ಯವ ನುಡಿವುದೇ ಮರ್ತ್ಯಲೋಕ! ಎಂದು ಬಸವಣ್ಣನವರು ತನುವೆಂಬ ಈ ಮನೆಗೆ ಸ್ವರ್ಗಲೋಕದ ನಾಮಕರಣ ಮಾಡಿ ಅದ್ಭುತವಾದ ಹೆಸರನ್ನೇ ಕೊಟ್ಟಿದ್ದಾರೆ.

ತನುವೆಂಬ ಈ ಮನೆಗೆ ನೋಡುವ ಕಣ್ಣು ಇದೆ. ಇದು ನುಡಿಯುವುದಿಲ್ಲ! ಅದಕ್ಕೆ ಸುಳ್ಳು ಗೊತ್ತಿಲ್ಲ, ನುಡಿಯುವ ಬಾಯಿ ನೋಡುವುದಿಲ್ಲ; ಅದಕ್ಕೆ ಕಣ್ಣಿಲ್ಲ, ಆದರೂ ನೋಡಿದೆನೆಂದು

ನುಡಿಯುವ ನುಡಿ ಸತ್ಯ ಹೇಗಾದೀತು! ಕಣ್ಣೇ ಇಲ್ಲದ ಬಾಯಿ ನೋಡುವುದಾದರೂ ಹೇಗೆ? ಅದು ನೋಡಿದೆನೆಂದು ನುಡಿಯುವುದಾದರೂ ಹೇಗೆ? ಹೀಗಾಗಿ ನೋಡಿದ ಕಣ್ಣು ಆನಂದ ಪಟ್ಟು ಅನುಭವಿಸಿ ಕಣ್ಣಿನಿಂದ ನುಡಿದರೆ ನುಡಿಯುವುದೆಲ್ಲ ಸ್ವರ್ಗವೇ! ಇದು ಸ್ವರ್ಗದ ಮಹಾದ್ವಾರವೂ ಹೌದು.

ಪಚ್ಚೆಯ ನೆಲಗಟ್ಟನು ಹಾಕಿ ಕನಕದ ತೋರಣ ಕಟ್ಟಿ, ವಜ್ರದ ಕಂಬವ ಹೂಳಿ, ಹವಳದ ಚಪ್ಪರವ ಹಾಕಿ, ಮುತ್ತು ಮಾಣಿಕ್ಯ ಮೇಲು ಕಟ್ಟ ಕಟ್ಟಿ ಈ ಮನೆಯನ್ನು ತಯಾರಿಸಲಾಗಿದೆ. ಎಂದು ಅಕ್ಕ ಮತ್ತೊಂದು ವಚನದಲ್ಲಿ ಹೇಳಿದ್ದಾಳೆ. ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ ಈ ಮನೆಯೊಡೆಯನಾದ ಅರಿವೆಂಬ ಚೆನ್ನಮಲ್ಲಿಕಾರ್ಜುನನಿಗೆ ಕೊಟ್ಟು ಮದುವೆಯ ಮಾಡಿದರು ಎಮ್ಮ ಶರಣರು ಎಂದು ತನುವಿನ ಸ್ವರ್ಗಸುಖವನು ಅಕ್ಕ ಕಣ್ಣಿನಿಂದ ನೋಡಿ ಕಣ್ಣಿನಿಂದಲೇ ಬಣ್ಣಿಸಿದ್ದಾಳೆ.

ಅಕ್ಕ ಹೇಳಿದ ಈ ಮಾತುಗಳನ್ನು ನುಡಿಯೆನ್ನಲು ಬರುವುದಿಲ್ಲ, ಇವು ಬಾಯಿಯಿಂದ ನುಡಿಯುವ ಮಾತಲ್ಲ, ಮಾತಲ್ಲದ ಮಾತುಗಳಿವು. ತನುವನ್ನೆ ಅರಮನೆ ಮಾಡಿಕೊಂಡು ಆ ಮನೆಯೊಡೆಯ ಮಹಾಜ್ಞಾನಿ ಮಲ್ಲಯ್ಯನನ್ನೇ ಪ್ರೀತಿಸಿ ಮದುವೆಯಾದಳು. ಮರ್ತ್ಯಕ್ಕೆ ಎಂದೂ ಅಡಿ ಇಡದೆ, ಕೈಲಾಸವನ್ನೇ ಕಡೆಗಣಿಸಿದಳು. ತನುವೆಂಬ ಮನೆಯಲ್ಲಿ ಅರಿವೆಂಬ ನಲ್ಲನೊಂದಿಗೆ ಸ್ವರ್ಗ ಸುಖ ಕಂಡಳು. ಜಗದ ತನುಗಳೆಲ್ಲ ಈ ಅರಿವಿನ ಸುಖ ಉಣ್ಣಲೆಂದು ಸವೆಯದ ಅಮೃತದ ಬುತ್ತಿ ಬಿಟ್ಟಳು.

□

---

**ಅರಿವಿನ ಪರಿಮಳ**

□ ತನುವೆಂಬುದು ಐದು ಮುಖದ ಅರಮನೆ. ಈ ಅರಮನೆಗೆ ಕಣ್ಣು ಕಿವಿ ಮೂಗು ನಾಲಿಗೆ ಚರ್ಮಗಳೆಂಬ ಐದು ಬಾಗಿಲುಗಳಿವೆ. ಯಾವ ಬಾಗಿಲಿನಿಂದ ಪ್ರವೇಶಿಸಿದರೂ ಅರಮನೆ ಸಿಂಹಾಸನ ದಕ್ಕುತ್ತದೆ. ಈ ಮನೆ ಕೈಲಾಸಕ್ಕೂ ಅಧಿಕ. ಮರ್ತ್ಯಕ್ಕೂ ಮಿಗಿಲಾದದ್ದು.

□ ತನುವೆಂಬ ಈ ಮನೆಗೆ ನೋಡುವ ಕಣ್ಣು ಇದೆ. ಇದು ನುಡಿಯುವುದಿಲ್ಲ! ಅದಕ್ಕೆ ಸುಳ್ಳು ಗೊತ್ತಿಲ್ಲ, ನುಡಿಯುವ ಬಾಯಿ ನೋಡುವುದಿಲ್ಲ; ಅದಕ್ಕೆ ಕಣ್ಣಿಲ್ಲ, ಆದರೂ ನೋಡಿದೆನೆಂದು ನುಡಿಯುವ ನುಡಿ ಸತ್ಯ ಹೇಗಾದೀತು! ಕಣ್ಣೇ ಇಲ್ಲದ ಬಾಯಿ ನೋಡುವುದಾದರೂ ಹೇಗೆ? ಅದು ನೋಡಿದೆನೆಂದು ನುಡಿಯುವುದಾದರೂ ಹೇಗೆ? ಹೀಗಾಗಿ ನೋಡಿದ ಕಣ್ಣು ಆನಂದ ಪಟ್ಟು ಅನುಭವಿಸಿ ಕಣ್ಣಿನಿಂದ ನುಡಿದರೆ ನುಡಿಯುವುದೆಲ್ಲ ಸ್ವರ್ಗವೇ! ಇದು ಸ್ವರ್ಗದ ಮಹಾದ್ವಾರವೂ ಹೌದು.

# ಅರಿವಿನ ಹಗೇವು ಇಟ್ಟುಕೊಂಡ ಬಡ ದೇಹ

**ಬಲ್ಲಿದ ಹಗೆಯುವ ತಗೆವನ್ನಬರ,**
**ಬಡವರ ಹರಣ ಹಾರಿಹೋದ ತೆರನಂತಾಯಿತ್ತು.**
**ನೀ ಕಾಡಿ ಕಾಡಿ ನೋಡುವನ್ನಬರ,**
**ಎನಗಿದು ವಿಧಿಯೇ ಹೇಳಾ ತಂದೇ?**
**ಮೂರುವಾರುವನ್ನಬರ**
**ಎಮ್ಮೆ ಗಾಳಿಗೆ ಹಾರಿಹೋದ ತೆರನಂತಾಯಿತ್ತು.**
**ಎನಗೆ ನೀನಾವಪರಿಯಲ್ಲಿ ಕರುಣಿಸುವೆಯಯ್ಯಾ**
**ಚೆನ್ನಮಲ್ಲಿಕಾರ್ಜುನಾ?**

ಅಕ್ಕ ಸುಂದರವಾದ ಉಪಮೆ ನೀಡಿ ತನುಗಳು ತಮ್ಮ ಅಜ್ಞಾನ ತಾವೇ ಕಳೆದುಕೊಳ್ಳುವ ಸುಳುಹು ದಯಪಾಲಿಸಿದ್ದಾಳೆ. ಊರಿಗೆ ಬರ ಬಿದ್ದರೂ ಊರ ಶ್ರೀಮಂತನಿಗೆ ಬರ ಬೀಳುವುದಿಲ್ಲ. ಆತನ ಹಗೇವಿನ ತುಂಬಾ ಊರಿಗಾಗುವಷ್ಟು ಜೋಳವಿರುತ್ತದೆ. ಊರಜನ ಬಂದು, ಶ್ರೀಮಂತನಿಗೆ ಸಲಾಮು ಮಾಡಿ ಸೆರಗೊಡ್ಡಿ ಹಸಿವಿನಿಂದ ಜೋಳ ಬೇಡಿದರೂ, ಹಗೇವು ತೆಗೆದಿಲ್ಲ ನಾಳೆ ಬನ್ನಿ ಎಂದು ಗದರಿ ಕಳಿಸುತ್ತಾನೆ. ಊರ ಜನರಿಗೆ ಕಿತ್ತು ತಿನ್ನುವ ಹಸಿವು. ಶ್ರೀಮಂತನಿಗೆ ತನ್ನ ಗತ್ತು ಪ್ರದರ್ಶನದ ಸುಖ! ಹೀಗೆ ಕೆಲದಿನಗಳು ಕಳೆದ ಬಳಿಕ ಶ್ರೀಮಂತ ಹಗೇವು ತೆಗೆದು ಒಂದೊಂದು ಮರ ಜೋಳ ಹಾಕಿ ಕಳಿಸುತ್ತಾನೆ. ಒಂದು ಮರ ಜೋಳಕ್ಕೆ ಎರಡು ಮರ ಲಾಗು ಪಡೆದು ಮತ್ತೆ ತನ್ನ ಕ್ರೂರ ಸ್ವರೂಪ ಮೆರೆಯುತ್ತಾನೆ. ಜೋಳ ಕೊಡುವಾಗಲು ಹಿಂಸೆ ಕೊಟ್ಟು ಊರಿನ ಜನಕ್ಕೆ ತಂದೆ ಎನ್ನಿಸಿಕೊಳ್ಳುತ್ತಾನೆ. ಪಡೆಯುವಾಗಲೂ ಹಿಂಸೆ ಕೊಡುತ್ತಾನೆ. ಇದು ಊರ ಶ್ರೀಮಂತನ ನೈಜ ಕತೆ !

ದೇಹವೆಂಬುದು ಒಂದು ಊರು. ಆ ಊರಿಗೆ ಸುಜ್ಞಾನಿ ಎಂಬ ಶ್ರೀಮಂತನೆ ಅಧಿಪತಿ. ಆತನಿಗೆ ಸೂಕ್ಷ್ಮ, ಸ್ಥೂಲ ಎನ್ನುವ ತಮ್ಮಂದಿರೂ ಇದ್ದಾರೆ. ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ, ಎಂಬ ಮಕ್ಕಳಿದ್ದಾರೆ. ಇವರು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಬಳಿಸಿಕೊಂಡು ಹೊರಗಡೆಯೆ ಅಲಿಯುತ್ತಾರೆ. ಇವರಿಗೆ ತಮ್ಮ ತಂದೆ ಶ್ರೀಮಂತ ಮಹಾಜ್ಞಾನಿ ಎನ್ನುವ ಪರಿಚಯವಿಲ್ಲ. ಹಸಿವಿನಿಂದ ತಲ್ಲಣಿಸಿ ಮನೆ ಬಿಟ್ಟು ಹೊರಗೆ ಅಲಿಯುವುದೇ ಇವರ ಕೆಲಸ. ಕಾಮದ ಹಸಿವಿಗಾಗಿ, ರುಚಿಯ ಆಸೆಗಾಗಿ ಹೊರಗೆ ಅಲಿಯುತ್ತಾರೆ. ಪರ ತನುಗಳನ್ನು ಸ್ಪರ್ಶಿಸಿ ಆನಂದಪಡುತ್ತಾರೆ. ನೋಡುತ್ತಾರೆ. ನೋಡಿದ್ದೆಲ್ಲ ಬೇಡುತ್ತಾರೆ. ಕೇಳುತ್ತಾರೆ. ಕೇಳಿದ್ದೆಲ್ಲ ಬೇಡುತ್ತಾರೆ. ದಕ್ಕದಿದ್ದರೆ ಕಳುವು ಮಾಡುತ್ತಾರೆ. ಕೊಲೆ ಮಾಡುತ್ತಾರೆ. ಶ್ರೀಮಂತ ತಂದೆಯ ಮನೆಗೆ ಕಳಂಕತರುತ್ತಾರೆ. ಊರ ಜನ ಕೆಟ್ಟ ಮಾಡಿದರೆ ಊರ ಶ್ರೀಮಂತನನ್ನು ಬಯ್ಯುತ್ತಾರೆ. ಊರ ಜನ ಹಸಿದರೆ ಊರ ಶ್ರೀಮಂತನನ್ನು ಬಯ್ಯುತ್ತಾರೆ. ಹಗೇವಿನಲ್ಲಿ ಜೋಳವಿದ್ದೂ ಕೊಡದ ಜಿಪುಣನೆಂದು ನಿಂದಿಸುತ್ತಾರೆ.

**ನೀ ಕಾಡಿ ಕಾಡಿ ನೋಡುವನ್ನಬರ ಎನಗಿದು ವಿಧಿಯೇ ಹೇಳಾ ತಂದೆ?:**

ಕಣ್ಣು, ಕಿವಿ, ನಾಲಿಗೆ, ಮೂಗು ಚರ್ಮದ ಹಸಿವಿನ ರೋಗಕ್ಕೆ ಹಚ್ಚುವ ಮದ್ದು ಸುಜ್ಞಾನಿಯೆಂಬ ತಂದೆಯಲ್ಲಿದ್ದರೂ ಮಕ್ಕಳನ್ನು ಕಾಡಿ ಕಾಡಿ ನೋಡಬೇಕೆ? ಮನೆ ಹಾಳು ಮಾಡುವ ಮಕ್ಕಳ ಸೊಂಟಮುರಿದು ಮದ್ದ ಹಚ್ಚಿ ಮನೆಯಲ್ಲಿಯೇ ಇಟ್ಟುಕೊಳ್ಳಬಾರದೆ?

**ಮೂರುವಾರುವನ್ನಬರ, ಎಮ್ಮೆ ಗಾಳಿಗೆ ಹಾರಿಹೋದ ತೆರನಂತಾಯಿತ್ತು :**

ಮಕ್ಕಳು ಮಕ್ಕಳೇ! ಅವರು ತಂದೆಯ ಜ್ಞಾನದ ನೆರಳು ಬಿದ್ದರೆ ಜ್ಞಾನಿಗಳೇ! ನೋಡುವುದನ್ನೇ ನೋಡಿ ತಂದೆಯಂತೆ ಆನಂದಪಡುತ್ತಾರೆ. ಕೇಳಿ, ರುಚಿಸಿ, ವಾಸಿಸಿ, ಮುಟ್ಟಿ ತಂದೆಗೆ ಹೆಸರು ತಂದು ತಾವು ಒಂದು ದಿನ ತಂದೆಯಾಗುತ್ತಾರೆ. ಅದು ಬಿಟ್ಟು ಮಕ್ಕಳಿಗೆ ಮೂರು ತಿಳಿ, ಆರು ಅರಿ ಎಂದು ಅವರಿಗೇ ಅರಿವು ತಿಳಿಯುವ ಉಸಾಬರಿ ಕೊಟ್ಟರೆ ಜ್ಞಾನದ ಮನೆ ಯನ್ನೆ ಹಾಳು ಮಾಡಿ ತಾವೂ ಹಾಳಾಗುತ್ತಾರೆ. ತಿಳಿದರೆ ತಿಳಿಯಬಹುದು ಇಲ್ಲ ಹಾಳಾಗಬಹುದು. ಅದಕ್ಕೆ ತಂದೆಯಾದವನು ಆಸ್ಪದ ಕೊಡಬೇಕೆ ಹೇಗೆ? ಶಾಸ್ತ್ರ ತಿಳಿದು ಜ್ಞಾನಕ್ಕೆ ಹೋಗಬೇಕೆಂದರೆ ಎಮ್ಮೆ ಗಾಳಿಗೆ ಹೋದ ತೆರನಂತಾಯಿತ್ತು. ಎಂದಿದ್ದಾಳೆ ಅಕ್ಕ.

**ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯಾ ಚೆನ್ನಮಲ್ಲಿಕಾರ್ಜುನಾ?:**

ಸುಜ್ಞಾನಿಯಿದ್ದು ಅರಿವಿನ ಸಂಪತ್ತನ್ನು ನೀನೇ ಬಗೆದು ಉಣಬಡಿಸ ಬಾರದೇ? ನಿನ್ನ ಮಕ್ಕಳವರು. ಅರಿವಿನ ಸಂಪತ್ತಿನ ಹಗೇವು ತೆಗೆಯುವವರೆಗೂ ಮಕ್ಕಳು ಕಾಯಬೇಕೆ? ಅವರು ನಿನ್ನಲ್ಲಿಗೆ ಬರಲು ಒಲ್ಲರು, ನೀನು ಅವರಿಗೆ ಉಣಬಡಿಸಲು ಒಲ್ಲೆ ! ಏನಿದು ನಿನ್ನ ಕರುಣೆ ! ಹೊರಗಿನ ರುಚಿಗೆ ಮಾರು ಹೋದ ಮಕ್ಕಳನ್ನು ಬಿಗಿದಪ್ಪಿ ನಿನ್ನ ಅರಿವಿನ ಅಮೃತ ಉಣಬಡಿಸು ತಂದೆ, ಕರುಣಾಮಯನೆ ಎಂದು ಅಕ್ಕ ಅರಿವಿನ ತಂದೆಯನ್ನು ಪರಿಪರಿಯಾಗಿ ಬೇಡಿದ್ದಾಳೆ.

□

# ರೂಪುಳ್ಳ ತನುವಿನ ಅರಿವೇ ಬಯಲಲಿಂಗ !

ಬಯಲು ಲಿಂಗವೆಂಬೆನೆ ? ಬಗಿದು ನಡೆದಲ್ಲಿ ಹೋಯಿತ್ತು.
ಬೆಟ್ಟ ಲಿಂಗವೆಂಬೆನೆ ? ಮೆಟ್ಟ ನಿಂದಲ್ಲಿ ಹೋಯಿತ್ತು.
ತರುಮರಾದಿಗಳು ಲಿಂಗವೆಂಬೆನೆ ? ತರಿದಲ್ಲಿ ಹೋಯಿತ್ತು.
ಲಿಂಗ ಜಂಗಮದ ಪಾದವೇ ಗತಿಯೆಂದು ನಂಬಿದ
ಚೆನ್ನಮಲ್ಲಿಕಾರ್ಜುನಾ ,
ಸಂಗನ ಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ .

**ಬಯಲು ಲಿಂಗವೆಂಬೆನೆ ? ಬಗಿದು ನಡೆದಲ್ಲಿ ಹೋಯಿತ್ತು :**

ಬಯಲು ಲಿಂಗವೇ ? ಬೆಟ್ಟದ ಕಲ್ಲು ಲಿಂಗವೆ ? ಗಿಡಮರ ಬಳ್ಳಿ ಪುಷ್ಪ ಲಿಂಗವೆ ? ಬಯಲೇ ಲಿಂಗವೆನ್ನುವರು ಕೆಲವರು. ಬೆಟ್ಟದ ಕಲ್ಲಿನಿಂದ ಕಟೆದ ಲಿಂಗವೇ ಲಿಂಗವೆಂದು ಹೇಳುವರು ಕೆಲವರು. ಜೀವವಿದ್ದ ತರುಮರಾದಿಗಳೇ ಲಿಂಗವೆಂದು ಹೇಳುವರು ಕೆಲವರು. ಹೇಳಿಕೆ ಮಾತಿನಿಂದ ಲಿಂಗ ಪೂಜೆ ನಡೆದಿದೆ. ಹೇಳಿದರೇನಾಯಿತು ಹೇಳಿದ ಮಾತುಗಳನ್ನು ಅನುಭವಕ್ಕೆ ತೆಗೆದುಕೊಂಡು ಹೋಗುವ ಶಕ್ತಿ ತನುವಿನಲ್ಲಿ ಇಲ್ಲವೆ ? ಹೇಳಿದ್ದೆಲ್ಲ ಪೂಜಿಸಿ ಪೂಜಿಸಿ ಕಾಲ ಕಳೆಯುವುದೇ?

ಬಯಲು ಲಿಂಗವೆಂದು ತಿಳಿದು ಪೂಜಿಸಲು ಹೋದರೆ ಬಗಿದು ನಡೆವಲ್ಲಿ ಬಯಲು ನಿರ್ಬ ಯಲಾಗಿ ಹೋಯಿತ್ತು. ಬೆಟ್ಟದ ಕಲ್ಲು ಕಟೆದು ಲಿಂಗವೆಂದು ಪೂಜಿಸಲು ಹೋದರೆ ಮೆಟ್ಟಿನಿಂತಲ್ಲಿ ಕಲ್ಲಾಯಿತು. ತರುಮರಾದಿಗಳನ್ನು ಲಿಂಗವೆಂದು ಪೂಜಿಸಲು ಹೋದರೆ ತರೆದು ತಂದಲ್ಲಿ ಬಾಡಿ ಹೋಯಿತು. ಈ ಮೂರರಲ್ಲಿ ಯಾವುದು ಲಿಂಗ ? ಬಯಲು, ಕಲ್ಲು, ತರುಮರಾದಿಗಳು ತಮ್ಮನ್ನು ತಿಳಿಯವು, ಪೂಜಿಸಲು ಹೋದವರಿಗೂ ತಿಳಿಹೇಳವು. ಇವುಗಳನ್ನು ಲಿಂಗವೆಂದು ಹೇಳಲು ಸಾಧ್ಯವೆ ?

ಲಿಂಗವೆಂದು ಪೂಜಿಸಲು ಹೋದ ತನುವಿಗೆ ತಿಳಿಹೇಳಬೇಕು. ಲಿಂಗವನ್ನು ಪೂಜಿಸಬಹುದು. ಹಗಲಿರುಳು ಧ್ಯಾನಿಸಬಹುದು.

ಹಗಲಿರುಳು ತನಗೆ ತಿಳಿಹೇಳಿ ಕೈಹಿಡಿದು ಮುನ್ನಡೆಸುವ ಲಿಂಗ ಜಂಗಮವನ್ನೇ ನಂಬಿದ ಬಸವಣ್ಣ! ಆ ಲಿಂಗ ಜಂಗಮದ ಪಾದವೇ ಗತಿಯೆಂದು ನಂಬಿದ ಸಂಗನ ಬಸವಣ್ಣನ ಮಾತು ಕೇಳದೆ ಕೆಟ್ಟೆನೆಂದು ಅಕ್ಕ ಹೇಳಿದ್ದಾಳೆ.

ಬಯಲು ಲಿಂಗವಿದೆ. ಬಯಲು ಜಂಗಮನಿದ್ದಾನೆ. ಅವನನ್ನು ಬಗಿದು ಹುಡುಕುವ ಜಾಣ್ಮೆ ಬೇಕು. ಬಸವಣ್ಣ ಈ ಕೆಲಸದಲ್ಲಿ ಟೆಕ್ನೀಷಿಯನ್ ! ಆತ ತನ್ನ ತಾಂತ್ರಿಕ ಜಾಣ್ಮೆಯಿಂದ ಒಂದು ಲಕ್ಷ ತೊಂಬತ್ತಾರು ಸಾವಿರ ತನುಗಳಿಗೆ ಕಲ್ಯಾಣದಲ್ಲಿ ಪಾಠ ಮಾಡಿದ. ಏಳು ನೂರಾ ಎಪ್ಪತ್ತು ಜನ ಬಸವಣ್ಣನಂತೆ ತಂತ್ರಜ್ಞ ರಾದರು. ಶರಣರಾದರು. ಬುದ್ಧರಾದರು !

''ಬಯಲ ರೂಪ ಮಾಡಬಲ್ಲಾತನೆ ಶರಣ, ಆ ರೂಪವನ್ನು ಪುನಃ ಬಯಲ

ಮಾಡಬಲ್ಲಾತನೆ ಲಿಂಗಾನುಭವಿ. ಬಯಲು ರೂಪ ಮಾಡಲರಿಯದಿದ್ದೊಡೆ ಅವರನೆಂತು ಶರಣನೆಂಬೆ ? ಆ ರೂಪ ಬಯಲ ಮಾಡಲು ಅರಿಯದಿದ್ದಡೆ ಅವರನೆಂತು ಲಿಂಗಾನುಭವಿಯೆಂಬೆ? ಉಭಯ ಒಂದಾಗಿರ್ದಲ್ಲಿ ನಿಮ್ಮಲ್ಲಿ ತೆರಹುಂಟೆ ಕೂಡಲ ಸಂಗಮದೇವಾ''

ಎಂದು ಬಸವಣ್ಣನವರು ಸರಳ ತಂತ್ರಜ್ಞಾನದೊಂದಿಗೆ ಪಾಠ ಮಾಡಿದರು. ಏಳುನೂರಾ ಎಪ್ಪತ್ತು ಜನ ಮಾತ್ರ ಕೇಳಿ ತಿಳಿದು ತೇರ್ಗಡೆ ಹೊಂದಿ ಶರಣರಾದರು. ಲಿಂಗಾನುಭವಿಗಳಾದರು!

''ಬಯಲು ಬಯಲನೇ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಬಯಲು ಜೀವನ, ಬಯಲು ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ'' ಎಂದು ಅಲ್ಲಮ ಪ್ರಭುಗಳು ಬಯಲನ್ನೇ ಬೀಜ ಮಾಡಿ ಆ ಬಯಲನ್ನೇ ಬಿತ್ತಿ, ಬಯಲನ್ನೇ ಬೆಳೆದು ಆ ಬಯಲನ್ನೇ ಬಯಲು ಮಾಡಿದ್ದಾರೆ. ಅಂದರೆ ಬಯಲು ಲಿಂಗವಾಗಲಿಲ್ಲವೆ ?

ಜಲಜನಕ ಕಾಣುವುದಿಲ್ಲ ,ಅದು ಬಯಲಲ್ಲಿ ಲೀನವಾಗಿದೆ. ಆಮ್ಲಜನಕವೂ ಕಾಣುವುದಿಲ್ಲ, ಇದು ಕೂಡ ಬಯಲಲ್ಲಿ ಲೀನವಾಗಿದೆ. ಜಲಜನಕದ ಎರಡು ಪ್ರಮಾಣಗಳನ್ನು ಆಮ್ಲಜನಕದ ಒಂದು ಪ್ರಮಾಣವನ್ನು ಬಯಲು ಬೆರಕೆ ಮಾಡಿ ಅದರಲ್ಲಿ ತಾನೂ ಬೆರೆತು ಕಾಣುವ ಜಲ ಬಿಂದುವನ್ನು ಸೃಷ್ಟಿಮಾಡಿತು. ಜಲ ಸೃಷ್ಟಿ ಮಾಡಿದ ಬಯಲು ಲಿಂಗವಾಗಲಿಲ್ಲವೆ? ಆ ಜಲ ಕುದ್ದು ಪಾಕವಾಗಿ ಗಟ್ಟಿಗೊಂಡು ಭೂಮಿಯಾಯಿತು. ಈ ಭೂಮಿ ಕೂಡಾ ಲಿಂಗವಾಗಲಿಲ್ಲವೆ? ಈ ಭೂಮಿಯಲ್ಲಿಯೇ ಹುಟ್ಟಿದ ಬೆಟ್ಟಗುಡ್ಡಗಳು, ಕಲ್ಲು ಬಂಡೆಗಳು, ಖನಿಜ ಸಂಪತ್ತು ಕೂಡಾ ಲಿಂಗವಾಗಲಿಲ್ಲವೇ ? ಈ ಭೂಮಿಯ ಮೇಲೆ ಹುಟ್ಟಿದ ತರು ಮರಾದಿಗಳು ಲಿಂಗವಾಗಲಿಲ್ಲವೆ ?

ಜಲಬಿಂದುವೇ ಗರ್ಭ ಸೇರಿ ಪಾಕಗೊಂಡು ಪಿಂಡವಾಗಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಪ್ಯಾಕ್‌ನೊಂದಿಗೆ ಹೊರಬಂದ ತನು ಲಿಂಗವಾಗಲಿಲ್ಲವೆ ?

ತನು ರೂಪವಾದರೂ, ನಿರೂಪದಿಂದಲೇ ಜನ್ಮ ಪಡೆದ ತನು ಬಯಲ ಲಿಂಗ ವಲ್ಲವೇ? ಬೆಟ್ಟ ರೂಪಾದರೇನು ಬಯಲ ಬೀಜದಿಂದ ಸೃಷ್ಟಿಯಾದ ಲಿಂಗವಲ್ಲವೇ ? ತರುಮರಾದಿಗಳು ರೂಪವಾದರೇನು ಬಯಲ ಬೀಜದಿಂದಲೇ ನಳನಳಿಸುತ್ತಿಲ್ಲವೇ ? ಅದು ನೀಡುವ ಫಲ ಪುಷ್ಪಾದಿಗಳು ಕೂಡಾ ಬಯಲ ಲಿಂಗವಲ್ಲವೇ ?

ನೋಡುವ ಕಣ್ಣು ರೂಪ ; ಅದರ ದೃಷ್ಟಿ ನಿರೂಪ ; ಕೇಳುವ ಕಿವಿ ರೂಪ. ಅದರ ಶಬ್ದ ನಿರೂಪ ; ವಾಸಿಸುವ ಮೂಗು ರೂಪ ; ಅದರ ಪರಿಮಳ ನಿರೂಪ. ಸ್ಪರ್ಶಿಸುವ ಚರ್ಮ ರೂಪ; ಅದರ ಸ್ಪರ್ಶ ನಿರೂಪ. ರುಚಿಸುವ ನಾಲಿಗೆ ರೂಪ ; ಅದರ ರುಚಿ ನಿರೂಪ, ತನು ರೂಪ ; ಅದರ ಪ್ರಾಣ ನಿರೂಪ !

ತನು ಹೆಣ್ಣಾದರೇನು ಗಂಡಾದರೇನು ತಿಳಿಯುವ ಜ್ಞಾನ ರೂಪಿ ಶಕ್ತಿಯೇ ಬಯಲು.

ಅದು ಹೆಣ್ಣೂ ಅಲ್ಲ ಗಂಡೂ ಅಲ್ಲ ಸಾಕ್ಷಾತ್ ಲಿಂಗ ! ಈ ಲಿಂಗವೆಂಬ ಮಹಾಜ್ಞಾನವನ್ನೇ ಛಲದಂಕ ಮಲ್ಲನಾಗಿ ತನುವಿನ ಮೂಲಕ ಆಚರಣೆಗೆ ತರುವವನೇ ಜಂಗಮನಾಗುತ್ತಾನೆ. ತನುವಿನಲ್ಲಿರುವ ಈ ಅರಿವೆಂಬ ಬಯಲ ಲಿಂಗ ಜಂಗಮನಿಗೆ ತನುವಿನ ಮನದ ಮೂಲಕ ಶರಣಾಗತನಾದವನೇ ಅಚ್ಚ ಶರಣನಾಗುತ್ತಾನೆ. ದಾಸನಾದವನೇ ಅಪ್ಪಟ ದಾಸನಾಗುತ್ತಾನೆ. ಬುದ್ಧನಾಗುತ್ತಾನೆ; ಮಹಾ ವೀರನಾಗುತ್ತಾನೆ. ಮಹಾಜ್ಞಾನಿಯಾಗಿ ಸಕಲವನ್ನು ತಿಳಿಯುತ್ತಾನೆ. ಆಗ ತನು ಕೇಳುವ ಶಬ್ದವೆಲ್ಲ ಬಯಲು. ನೋಡುವ ದೃಶ್ಯವೆಲ್ಲ ಬಯಲು. ಸ್ಪರ್ಶಿಸುವ ಚರ್ಮವೆಲ್ಲ ಬಯಲು. ರುಚಿಸುವ ರುಚಿಯೆಲ್ಲ ಬಯಲು. ವಾಸಿಸುವ ವಾಸನೆಯೆಲ್ಲ ಬಯಲು. ಅಣು ರೇಣು ತೃಣ ಕಾಷ್ಟ ಕೂಡಾ ಬಯಲೇ.

ಈ ಮಾತು ಬಸವಣ್ಣನಿಂದ ಮೊದಲೇ ಕೇಳಿದ್ದರೆ ಅರಿವು ತಿಳಿಯುವ ಮುನ್ನ ಕೆಟ್ಟ ತನುವಿನ ಆಯುಷ್ಯವಾದರೂ ಉಳಿಯುತ್ತಿತ್ತು ಎಂದು ಅಕ್ಕ ಮನನೊಂದು ಮಾತನಾಡಿದ್ದಾಳೆ.

□

---

**ಅರಿವಿನ ಪರಿಮಳ**

□ ಬಯಲು ಲಿಂಗವೆಂದು ತಿಳಿದು ಪೂಜಿಸಲು ಹೋದರೆ ಬಗಿದು ನಡೆವಲ್ಲಿ ಬಯಲು ನಿರ್ಬಯಲಾಗಿ ಹೋಯಿತ್ತು. ಬೆಟ್ಟದ ಕಲ್ಲು ಕಟೆದು ಲಿಂಗವೆಂದು ಪೂಜಿಸಲು ಹೋದರೆ ಮೆಟ್ಟನಿಂತಲ್ಲಿ ಕಲ್ಲಾಯಿತು. ತರುಮರಾದಿಗಳನ್ನು ಲಿಂಗವೆಂದು ಪೂಜಿಸಲು ಹೋದರೆ ತರೆದು ತಂದಲ್ಲಿ ಬಾಡಿ ಹೋಯಿತು. ಈ ಮೂರರಲ್ಲಿ ಯಾವುದು ಲಿಂಗ ? ಬಯಲು, ಕಲ್ಲು, ತರುಮರಾದಿಗಳು ತಮ್ಮನ್ನು ತಿಳಿಯವು, ಪೂಜಿಸಲು ಹೋದವರಿಗೂ ತಿಳಿಹೇಳವು. ಇವುಗಳನ್ನು ಲಿಂಗವೆಂದು ಹೇಳಲು ಸಾಧ್ಯವೆ ?

□ ಜಲಜನಕ ಕಾಣುವುದಿಲ್ಲ ,ಅದು ಬಯಲಲ್ಲಿ ಲೀನವಾಗಿದೆ. ಆಮ್ಲಜನಕವೂ ಕಾಣುವುದಿಲ್ಲ, ಇದು ಕೂಡ ಬಯಲಲ್ಲಿ ಲೀನವಾಗಿದೆ. ಜಲಜನಕದ ಎರಡು ಪ್ರಮಾಣಗಳನ್ನು ಆಮ್ಲಜನಕದ ಒಂದು ಪ್ರಮಾಣವನ್ನು ಬಯಲು ಬೆರಕೆ ಮಾಡಿ ಅದರಲ್ಲಿ ತಾನೂ ಬೆರೆತು ಕಾಣುವ ಜಲ ಬಿಂದುವನ್ನು ಸೃಷ್ಟಿಮಾಡಿತು. ಜಲ ಸೃಷ್ಟಿ ಮಾಡಿದ ಬಯಲು ಲಿಂಗವಾಗಲಿಲ್ಲವೆ ? ಆ ಜಲ ಕುದ್ದು ಪಾಕವಾಗಿ ಗಟ್ಟಿಗೊಂಡು ಭೂಮಿಯಾಯಿತು. ಈ ಭೂಮಿ ಕೂಡಾ ಲಿಂಗವಾಗಲಿಲ್ಲವೆ? ಈ ಭೂಮಿಯಲ್ಲಿಯೇ ಹುಟ್ಟಿದ ಬೆಟ್ಟಗುಡ್ಡಗಳು, ಕಲ್ಲು ಬಂಡೆಗಳು, ಖನಿಜ ಸಂಪತ್ತು ಕೂಡಾ ಲಿಂಗವಾಗಲಿಲ್ಲವೇ? ಈ ಭೂಮಿಯ ಮೇಲೆ ಹುಟ್ಟಿದ ತರುಮರಾದಿಗಳು ಲಿಂಗವಾಗಲಿಲ್ಲವೆ?

□ ಜಲಬಿಂದುವೇ ಗರ್ಭ ಸೇರಿ ಪಾಕಗೊಂಡು ಪಿಂಡವಾಗಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಪ್ಯಾಕ್‌ನೊಂದಿಗೆ ಹೊರಬಂದ ತನು ಲಿಂಗವಾಗಲಿಲ್ಲವೆ ?

□ ತನು ರೂಪವಾದರೂ, ನಿರೂಪದಿಂದಲೇ ಜನ್ಮ ಪಡೆದ ತನು ಬಯಲಲಿಂಗವಲ್ಲವೇ ? ಬೆಟ್ಟ ರೂಪಾದರೇನು ಬಯಲ ಬೀಜದಿಂದ ಸೃಷ್ಟಿಯಾದ ಲಿಂಗವಲ್ಲವೇ ? ತರುಮರಾದಿಗಳು ರೂಪವಾದರೇನು ಬಯಲ ಬೀಜದಿಂದಲೇ ನಳನಳಿಸುತ್ತಿಲ್ಲವೇ ? ಅದು ನೀಡುವ ಫಲ ಪುಷ್ಪಾದಿಗಳು ಕೂಡಾ ಬಯಲ ಲಿಂಗವಲ್ಲವೇ ?

# ಶಬ್ದ, ಮೃಗಗಳಿಗೆ ಅಂಜದ ಅರಿವಿನ ತನು

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆ ತೆರೆಗಳಿಗಂಜಿದಡೆಂತಯ್ಯಾ ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಬೆಟ್ಟ-ಮೃಗ, ಸಮುದ್ರ-ನೊರೆ ತೆರೆ, ಸಂತೆ-ಶಬ್ದ, ಒಂದಕ್ಕೊಂದು ಸಂಬಂಧಿಸಿದ ಮೂರು ಶಬ್ದಗಳನ್ನು ಅಕ್ಕ ಈ ವಚನದಲ್ಲಿ ಬಳಸಿದ್ದಾಳೆ. ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬರುವುದು ಸಹಜ. ಮನದಲ್ಲಿ ಕೋಪ ತಾಳದೆ ಹೇಗೆ ಸಮಾಧಾನಿಯಾಗಿರಬೇಕೆಂಬುದೇ ಈ ವಚನದ ತಿರುಳು.

''ಬೆಟ್ಟಕ್ಕೆ ಸಾರವಿಲ್ಲೆಂಬರು ತರುಗಳು ಹುಟ್ಟುವಪರಿಯಿನ್ನೆಂತಯ್ಯಾ'' ಬೆಟ್ಟ ಕಲ್ಲು ಗರಸಿನಿಂದ ತುಂಬಿದ್ದರೂ ಅದರ ತುಂಬಾ ನಾನಾರೀತಿಯ ಹಸಿರು ಸಸ್ಯಗಳೇ ತುಂಬಿರುತ್ತವೆ. ಅಂತೆಯೇ ದೇಹ ಜಡವೆಂದರೂ ಅರಿವಿನ ಸಾರದಿಂದ ತುಂಬಿದೆ. ಇದರ ಹೊರಾವರಣದಲ್ಲಿ ತರುವಿನಂತಹ ರೋಮಗಳು ಬೆಳೆದು ನೋಡಲು ಸುಂದರವಾಗಿ ಕಾಣಿಸುತ್ತದೆ. ಆದರೆ ಇದರಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಗಳೆಂಬ ಮೃಗಗಳು ಅಡಗಿ ಕುಳಿತಿವೆ. ಸದಾ ಬೇಟೆಯಾಡಿ ಘಾಸಿಗೊಳಿಸುವುದೇ ಮೃಗಗಳ ಕೆಲಸ. ಮೃಗಗಳಿಗೆ ಆಹಾರ ಬೇಕು, ಆದರೆ ತಿನ್ನಲು ಅವುಗಳಿಗೆ ಬಾಯಿಯೆ ಇಲ್ಲ. ತನುವಿನ ಬಾಯಿ ಯಿಂದ ತಿನ್ನುತ್ತವೆ.

ಬೆಟ್ಟವು ಮೃಗಗಳಿಗೆ ಅಂಜುವುದಿಲ್ಲ. ಮೃಗಕ್ಕೆ ಬಯಕೆಯಾದೆಡೆಯೆಲ್ಲೆಲ್ಲ ಬೆಟ್ಟ ಚಲಿಸುವುದಿಲ್ಲ. ಮೃಗ ಗರ್ಜಿಸಿದರೆ ಬೆಟ್ಟ ಅದುರುವುದಿಲ್ಲ. ಅವು ಉಂಡು, ನಲಿದಾಡಿ, ಚಿನ್ನಾಟವಾಡಿ ಬೆಟ್ಟದಲ್ಲಿಯೇ ಸಾಯುತ್ತವೆ. ಬೆಟ್ಟ ಸಾಯುವುದಿಲ್ಲ!

ತನುವಿನಲ್ಲಿದ್ದ ಮೃಗಗಳು ಹಾಗಲ್ಲ: ತನುವಿನೊಂದಿಗೆ ಉಣ್ಣುತ್ತವೆ, ನೋಡುತ್ತವೆ, ಕೇಳುತ್ತವೆ, ತನುವನ್ನು ಘಾಸಿ ಮಾಡುತ್ತವೆ. ತನುವಿನೊಡೆಯನಾದ ಅರಿವನ್ನು ಆಕ್ರಮಿಸಿಕೊಂಡು ಕಾಮಕೇಳಿಯಾಡುತ್ತವೆ. ಮೃಗಗಳಿಗೆ ಅಂಜಿದೊಡೆ ತನುವಿಗೆ ಕೇಡು. ತನುವಿನ ಒಡೆಯನಿಗೆ ಮೃಗಗಳೆಡೆ ಒಲವಿಲ್ಲ. ಮೃಗಗಳು ತನುವನ್ನೇ ಕೂಡಿ ಸುಖಿಸಿದೆವೆಂದು ಭ್ರಮೆಗೊಳಗಾ ಗುತ್ತವೆ. ತನುವಿನೊಂದಿಗೆ ತನು ಕೂಡುವುದು ಸಜಾತಿ ಕೂಟವೆಂದು ಮೃಗಗಳಿಗೆ ಪರಿಚಯವಿಲ್ಲ. ಕೂಡುವುದು ಅಗಲುವುದು, ಕೂಡದಿದ್ದರೆ ಚಿಂತೆ, ಕೂಡಿದರೂ ಚಿಂತೆ, ಕೂಡುವ ಅಂಜಿಕೆ, ಕೂಡಿದ ಭಯ ತನುವನ್ನು ಸದಾ ಕೊಲ್ಲುತ್ತದೆ. ಬಯಸಿದ್ದನ್ನೆ ಬಯಸುವ ಮೃಗಗಳಿಗೆ ಸುಖವಿಲ್ಲ.

ತನುವಿಗೆ ಭಯವೂ ತಪ್ಪಿಲ್ಲ.

ಮೃಗಗಳು ವಿಜಾತಿ ಕೂಟ ಬಯಸಿ ಅರಿವಿನ ನಲ್ಲನೊಂದಿಗೆ ಕಾಮಿಸಿದರೆ ಆತ ಮೃಗಗಳನ್ನೆಲ್ಲ ಬಿಗಿದಪ್ಪಿ ಶಾಶ್ವತ ಸುಖ ನೀಡುತ್ತಾನೆ. ಚಲನೆಯಿಲ್ಲದಂತೆ ಹೆಳವನನ್ನಾಗಿಸುತ್ತಾನೆ. ಮೃಗಗಳನ್ನೆ ಸತಿಯಾಗಿಸಿಕೊಂಡು ತಾನು ಪತಿಯಾಗುತ್ತಾನೆ. ನೋಡಿದ್ದೆಲ್ಲಾ ಅನಾವರಣಗೊಳ್ಳುತ್ತದೆ. ನೋಡಿದ ತನುಗಳೆಲ್ಲಾ ತನ್ನಂತೆ ಇರುವ ತನುಗಳಾಗಿ ಕಾಣುತ್ತವೆ. ತನು ತನುವಿಗೆ ಅಂಜುವುದಿಲ್ಲ ಬದಲಾಗಿ ತನ್ನಂತೆ ಇರುವ ತನುವೆಂದು ಭಕ್ತಿಯಿಂದ ಬಾಗುತ್ತದೆ.

**ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿ ಗಂಜಿದೆಡೆಂತಯ್ಯಾ ?:**

ಜಲಬಿಂದು ಗರ್ಭ ಪ್ರವೇಶಿಸಿ ಗಟ್ಟಿಗೊಂಡ ತನು, ಓಡಾಡುವ ಜಲದ ಮನೆಯಾಗಿದೆ. ಸಮುದ್ರದ ಓಟ ಸಮುದ್ರದಲ್ಲಿಯೇ ಇರುತ್ತದೆ. ನೊರೆ ತೆರೆಗಳ ರೂಪದಲ್ಲಿ ರಭಸದಿಂದ ಚಲಿಸುತ್ತದೆ, ಶಬ್ದ ಮಾಡುತ್ತದೆ, ಆರ್ಭಟಿಸುತ್ತದೆ. ನೊರೆ ತೆರೆಗಳು ಜಲದಿಂದಲೇ, ಶಬ್ದ ಕೂಡ ಜಲದಿಂದಲೇ, ಓಟವೂ ಜಲದಲ್ಲಿಯೇ! ಜಲಕ್ಕೆ ನೊರೆಯೆಂದು, ತೆರೆಯೆಂದು, ಶಬ್ದವೆಂದು, ಸುನಾಮಿಯೆಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತೇವೆ.

ತನುವೆಂಬ ಜಲದ ಮನೆಯಲ್ಲಿ ಶಬ್ದ, ಸ್ಪರ್ಶ, ರುಚಿ, ವಾಸನೆ ಗಂಧಗಳಿಗಾಗಿ ಅಲೆಗಳು ಏಳುತ್ತವೆ. ಸುನಾಮಿಯಾದಾಗ ಸಮುದ್ರ ಬೆದರಿ ನರಕಯಾತನೆ ಅನುಭವಿಸುತ್ತದೆ. ಕಡಿಮೆಯಾದಾಗ ಶಾಂತ ಮಹಾ ಸಾಗರವಾಗುತ್ತದೆ. ಹಾಗೆಯೆ ಶಬ್ದ ಬಡಿದಾಗ ಅಂಜಿ ತನು ಕುದಿಯುತ್ತದೆ. ಸಂಕಟ ಪಡುತ್ತದೆ. ನರಕಯಾತನೆ ಅನುಭವಿಸುತ್ತದೆ. ನರನಾಡಿಗಳು ಹರಿದು ಕಣ್ಣು, ಕಿವಿ, ಮೂಗು, ಬಾಯಿ ಮೂಲಕ ಜಲರೂಪದ ರಕ್ತ ಹೊರ ಚಿಮ್ಮುತ್ತದೆ.

ನೊರೆ ತೆರೆ ಸುನಾಮಿಗಳಿಂದ ಸಮುದ್ರ ಬೆಚ್ಚಿ ಬಿದ್ದಂತೆ, ಜಲದಿಂದ ಹುಟ್ಟಿದ ತನು, ತನುವಿನಿಂದಲೇ ಹುಟ್ಟಿದ ಶಬ್ದಗಳಿಗೆ ಅಂಜಿ ಬೆಚ್ಚಿ ಬೀಳ ಬೇಕೆ? ಸಮುದ್ರ ಜಲಕ್ಕೆ ಜೀವವಿಲ್ಲ, ತನುವಿನ ಜಲಕ್ಕೆ ಜೀವವಿದೆ, ಅರಿವಿದೆ, ಚಲನೆಯಿದೆ, ತನುವಿನಿಂದಾದ ಶಬ್ದ ಅರಿವಿನಿಂದ ಸ್ವೀಕರಿಸಿದರೆ ತನು ಕುದಿಯುವುದಿಲ್ಲ, ಅಂಜುವುದಿಲ್ಲ ಸಂಕಟ ಪಡುವುದಿಲ್ಲ.

**ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ ?:**

ಲೋಕವೆಂಬುದು ಶಬ್ದದ ಸಂತೆ. ತನು ತಿಳಿದರೆ ಸು-ಶಬ್ದವು ಕು-ಶಬ್ದವು ಶಬ್ದದಲ್ಲಿಯೇ ಸೃಷ್ಟಿಯಾಗಿದೆ. ದ್ರೌಪದಿಯ ಅಪಹಾಸ್ಯದ ನಗುವಿನ ಧ್ವನಿ ತಿಳಿಯದೆ ದುರ್ಯೋಧನ ಹದಿನೆಂಟು ಅಕ್ಷೋಹಿಣಿ ಸೈನ್ಯದ ಸಾವಿಗೆ ಕಾರಣನಾದ. ನೂರು ಜನ ತಮ್ಮಂದಿರು ಸತ್ತರು, ತಾನು ಸತ್ತ . ಶಬ್ದ ನಪುಂಸಕ ಮಾಡಲು ತಿಳಿಯದ ನಿಮಿತ್ತ.

ತನು ಶಬ್ದದ ಸಂತೆ. ಬಾಲ್ಯದಿಂದ ಕೇಳಿದ ಶಬ್ದಗಳೆಲ್ಲ ತನುವಿನಲ್ಲಿ ಸಂಗ್ರಹವಾಗಿವೆ. ನೆನಪಾದಾಗೊಮ್ಮೆ ಚುಚ್ಚಿ ಚುಚ್ಚಿ ಕೊಲ್ಲುತ್ತವೆ. ಅವುಗಳನ್ನು ನಪುಂಸಕಗೊಳಿಸಿ ಅಳಿಸಿ ಹಾಕುವ ಅರಿವು ತನುವಿನಲ್ಲಿಯೇ ಇದೆ. ಸಂಗ್ರಹವಾದ ಶಬ್ದ ಡಿಲೀಟ್ ಆದರೆ ತನುವಿಗೆ ಅಂಜಿಕೆಯಿಲ್ಲ. ಅದು ಅರಿವಿನ ಮನೆಯಾಗುತ್ತದೆ. ತನುವಿಗೆ ಬಡಿದ ಶಬ್ದಗಳನ್ನೆಲ್ಲ ನಪುಂಸಕಗೊಳಿಸಿ ಅರಿವಿನಿಂದ ಸ್ವೀಕರಿಸುತ್ತದೆ. ಸ್ತುತಿ ನಿಂದೆಗಳಿಗೆ ಕೋಪ ತಾಳದೆ ಸದಾ ಸಮಾಧಾನಿಯಾಗಿರುತ್ತದೆ. ಶರಣ ತನುವಾಗಿ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುತ್ತದೆ. ಸುಖ ದುಃಖಗಳಿಗೆ ಹೊರತಾದ ಶಾಶ್ವತ ಸುಖಿಯಾಗುತ್ತದೆ. ಇದು ಅಕ್ಕಮಹಾದೇವಿಯ ಅರಿವಿನ ಶಿಕ್ಷಣ. ಶರಣ ಶಿಕ್ಷಣ ! □

# ಜಗವೆಲ್ಲ ಹೆಣ್ಣು

**ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ.**
**ಗಂಡು ಗಂಡಾದಡೆ ಹೆಣ್ಣಿನ ಸೂತಕ.**
**ಮನದ ಸೂತಕ ಹಿಂಗಿದಡೆ**
**ತನುವಿನ ಸೂತಕಕ್ಕೆ ತೆರಹುಂಟೆ?**
**ಅಯ್ಯಾ , ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.**
**ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ**
**ಜಗವೆಲ್ಲ ಹೆಣ್ಣು ನೋಡಾ ಅಯ್ಯಾ .**

ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್‌ಸೂತಕ, ಉಚ್ಚಿಷ್ಟ ಸೂತಕಗಳುಂಟು. ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ನೆನಹುಸೂತಕ, ಭಾವಸೂತಕಗಳೂ ಉಂಟು. ಆದರೆ ಅಕ್ಕ ಹೇಳಿದ ಸೂತಕಗಳೇ ಬೇರೆ!

**ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ. ಗಂಡು ಗಂಡಾದಡೆ ಹೆಣ್ಣಿನ ಸೂತಕ:**

ಹೆಣ್ಣು ಎಂದು ಕರೆಯಿಸಿಕೊಳ್ಳುವ ತನುವಿನ ಕಣ್ಣಿನಲ್ಲಿ ಗಂಡು ಎನ್ನುವ ಸೂತಕ ಮುಸುಕಿದೆ. ಕಿವಿಯಲ್ಲಿ ಚರ್ಮದಲ್ಲಿ ಗಂಡು ಎನ್ನುವ ಸೂತಕ ಆವರಿಸಿದೆ. ಈ ಸೂತಕದ ಪೊರೆ ತನು ಇರುವವರೆಗೆ ಕಾಡುತ್ತದೆ. ಪೊರೆ ಬಂದ ಹಾವಿಗೆ ಕಣ್ಣು ಕಾಣುವುದಿಲ್ಲ, ಪೊರೆ ಕಳಚಿದ ನಂತರ ನಿಚ್ಚಳವಾ ಗುತ್ತದೆ. ಆದರೆ ತನುವಿನ ಕಣ್ಣಿನಲ್ಲಿ ಆವರಿಸಿದ ಹೆಣ್ಣು-ಗಂಡು ಎನ್ನುವ ಸೂತಕದ ಪೊರೆ ತನು ಇರುವವರೆಗೂ ತನುವನ್ನು ಕಾಡಿ ರೋಗಗ್ರಸ್ಥವಾಗಿ ಕೊನೆಗೆ ಹೆಣ್ಣಾಗಿ, ಗಂಡಾಗಿ ಸಾಯುತ್ತದೆ. ಲೋಕ ಕೂಡಾ ಸತ್ತದ್ದು ತನು ಎಂದು ಹೇಳುವುದಿಲ್ಲ. ಅದು ಗಂಡು, ಹೆಣ್ಣೆಂದೇ ಹೇಳುತ್ತದೆ.

ತನು ಇದ್ದಾಗ ಹೆಣ್ಣು ಗಂಡೆಂಬ ಸೂತಕ ಬಿಡಲಿಲ್ಲ. ತನು ಹೆಣವಾದಾಗಲೂ ಗಂಡು ಹೆಣ್ಣೆಂಬ ಸೂತಕ ಹೋಗಲಿಲ್ಲ. ಏನಿದು ಮಾಯೆ !

'ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ. ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ. ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ. ಇದಾವ ಪರಿಯಲ್ಲಿ ಕಾಡಿತ್ತು ಮಾಯೆ ; ಈ ಮಾಯೆಯ ಕಳೆವಡೆ ಎನ್ನಳವಲ್ಲ ನೀವೆ ಬಲ್ಲಿರಿ ಕೂಡಲಸಂಗಮದೇವಾ'

ಮನವೆಂಬ ಮಾಯೆ ಜನಿತಕ್ಕೆ ತಂದೆ ತಾಯಿಯಾಗುತ್ತದೆ. ಮೋಹಕ್ಕೆ ಗಂಡು ಹೆಣ್ಣೆಂಬ ಮಗುವಾಗುತ್ತದೆ. ಕೂಟಕ್ಕೆ ಸ್ತ್ರೀ ಪುರುಷನ ವೇಷ ಧರಿಸಿ ಸೂತಕವಾಗಿ ಕಾಡುತ್ತದೆ. ಈ ಮಾಯೆಯೆಂಬ ಮನವನ್ನು ಕಳೆಯುವುದು ಎನ್ನಳವಲ್ಲ. ತನುವಿನ ಅರಿವೆಂಬ ಕೂಡಲಸಂಗಯ್ಯನ ನಾಟಿಮದ್ದನಿಕ್ಕಿದಡೆ ಇದು ಉಳಿಯುವುದಿಲ್ಲವೆಂದು ಬಸವರಸರು ಸಿದ್ಧೌಷಧದ ಅಂಗಡಿಯನ್ನು ಕಲ್ಯಾಣದಲ್ಲಿ ಪ್ರಾರಂಭಿಸಿದರು. ಮದ್ದನರಸುತ್ತ ಕಲ್ಯಾಣಕ್ಕೆ ಬಂದ ರೋಗಿಗೆ ಆತನ ತನುವಿನಲ್ಲಿಯೇ ಮದ್ದನು ತೋರಿ ಅರಿವಿನ ವೈದ್ಯನನ್ನು ಪರಿಚಯಿಸಿ ಮನೆಗೆ ಕಳುಹಿಸಿದರು.

**ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ ? ಅಯ್ಯಾ , ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ:**

ತನು ಮನ ಅರಿವು: ತನು ಮನದ ರೋಗದಿಂದ ಹೆಣ್ಣಾಗಿ ಗಂಡಾಗಿ ಕಾಣುತ್ತದೆ. ಜೀವನ ಪರ್ಯಂತ ಈ ರೋಗ ಏಡ್ಸ್‌ನಂತೆ ಕಾಡುತ್ತದೆ. ಹುಟ್ಟಿನ ಜೊತೆ ಬಂದು ಸಾವಿನಾದ್ಯಂತ ಕಾಡಿ ಹೆಣ್ಣಾಗಿ ಗಂಡಾಗಿ ಸಾಯುತ್ತದೆ. ಕೊನೆ ಮೊದಲಿಲ್ಲದ ಮನದ ಸೂತಕಕ್ಕೆ ಜಗವೆಲ್ಲ ಮರುಳಾಗಿದೆ. ಹೆಣ್ಣಿಗೊಂದು ಕಾನೂನು, ಗಂಡಿಗೊಂದು ಕಾನೂನು. ತನು ತನುವಿನೊಂದಿಗೆ ಬಾಳುವ ಸುಖೀ ಸೂತ್ರ ತನುವಿನಲ್ಲಿಯೇ ಗರ್ಭೀಕರಿಸಿಕೊಂಡಿದೆ. ಆದರೆ ಮನದ ದುರಾಡಳಿತ ತನುವನ್ನು ಆವರಿಸಿಕೊಂಡು ವಿಶ್ವದಾದ್ಯಂತ ವ್ಯಾಪಿಸಿದೆ.

ಶಸ್ತ್ರ ಚಿಕಿತ್ಸೆಗೆ ಗುರಿಪಡಿಸಿ ಮನದ ಸೂತಕ ಹಿಂಗಿಸುವ ವೈದ್ಯನನ್ನು ಹುಡುಕುವ ತವಕ ಯಾವ ತನುಗಳಿಗೂ ಇಲ್ಲ. ಎಲ್ಲೆಲ್ಲೂ ವೇಷಧಾರಿ ನಕಲಿ ವೈದ್ಯರೆ ! ಬೈಬಲ್, ಭಗವದ್ಗೀತೆಯ ಮದ್ದು ಮನಕ್ಕೆ ನಾಟುವುದಿಲ್ಲ. ಮನದ ಸೂತಕವೂ ತನುವಿನಲ್ಲಿಯೇ ಇದೆ; ಅರಿವಿನ ಮದ್ದು ಕೂಡಾ ತನುವಿನಲ್ಲಿಯೇ ಇದೆ. ಭವರೋಗದ ವೈದ್ಯ ಜಾಣ ! ಆತ ಮಾತ್ರ ಮನದ ಸೂತಕಕ್ಕೆ ಮದ್ದ ನರೆಯಬಲ್ಲ. ತನುವಿಗೆ ಮೈದಡವಿ ಓಂ ಕಾರದ ಬೀಜ ಬಿತ್ತಬಲ್ಲ. ಅರಿವೆಂಬ ಗುರುವಿನ ಜೊತೆಗೆ ಮಾತನಾಡಿ ಆತನಿಗೇ ವೈದ್ಯದ ಪಟ್ಟ ಕಟ್ಟಬಲ್ಲ. ತನುವಿನ ಮನಕ್ಕೆ ಮದ್ದನರಿಯಲು ಹೇಳಿ ದೂರ ಸರಿಯಬಲ್ಲ !

ಗುರುಕರುಣೆಯಿಂದ ತನುವಿನ ಅರಿವೇ ತನುವಿಗೆ ವೈದ್ಯನಾದ. ತನುವಿನ ಸೂತಕದ ಮನ ವೈದ್ಯನಿಗೆ ಪೇಷಂಟಾಯಿತು. ಮನ ಕಣ್ಣಿನಲ್ಲಿ ಬೆರೆತು ಹೆಣ್ಣು ಗಂಡೆಂದು ನೋಡಿ ತನುವಿಗೆ ಸೂತಕವನ್ನುಂಟು ಮಾಡುತ್ತಿತ್ತು. ಸಂಕಟವನ್ನೊಡ್ಡಿ ಹಾದರಕ್ಕೆ ತಳ್ಳುತ್ತಿತ್ತು. ತನುವಿನ ವೈದ್ಯ, ಮನವನ್ನು ಹಿಡಿದು ಅರಿವಿನ ಮದ್ದನರಿದ. ಕಣ್ಣಿಗಂಟಿದ ಮನದ ಸೂತಕದ ಪೊರೆ ಕಳಚಿಬಿತ್ತು. ಕಣ್ಣು ನಿಚ್ಚಳವಾಗಿ ಕಂಡಿತು. ತನ್ನಂತೆ ಇರುವ ತನು ! ಚರ್ಮವು ಒಂದೆ ಅದರೊಳಗಿದ್ದ ಮೂಳೆ ಮಾಂಸ ರಕ್ತವೂ ಒಂದೇ. ರೋಮವೂ ಒಂದೇ. ಅದಕ್ಕೆ ಹೆಣ್ಣೆಂದು ಗಂಡೆದು ಕರೆಯುವ ಕೊನೆ ಮೊದಲಿಲ್ಲದ ಮನದ ಸೂತಕ ಕೂಡಲೇ ಕಳಚಿ ಬಿತ್ತು !

ಕಿವಿಯಲ್ಲಿ ಬೆರೆತು ಶಬ್ದ ಕೇಳಿ ಸಂಕಟವನ್ನುಂಟು ಮಾಡುವ ಮನಕ್ಕೆ ವೈದ್ಯ ಅರಿವಿನ ಮದ್ದನರೆದ. ಕೇಳಿದ ಶಬ್ದವೆಲ್ಲ ಜ್ಞಾನವಾಯಿತು. ಸೂತಕ ಕಳೆದುಕೊಂಡ ಮನ ವೈದ್ಯನಿಗೆ ಶರಣಾಯಿತು.

**ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ:**

ತನುವಿನ ಅರಿವೇ ಚನ್ನಮಲ್ಲಿಕಾರ್ಜುನನೆಂಬ ವೈದ್ಯನಾದ. ತನುವಿನ ಮನವೇ ಆ ವೈದ್ಯನಿಗೆ ಪೇಷಂಟಾಯಿತು. ವೈದ್ಯ ಹೇಳಿದ ಮದ್ದನರಿದುಕೊಂಡು ನೋಡಿತು; ನೋಡಿದ ತನುಗಳೆಲ್ಲ ಹೆಣ್ಣೂ ಅಲ್ಲ ಗಂಡೂ ಅಲ್ಲ! ಬರೀ ತನುಗಳು; ತನ್ನಂತೇ ಇರುವ ತನುಗಳು! ಆ ತನುಗಳಿಗೆ ಜಾತಿ ಮತ ಪಂಥಗಳಿಲ್ಲ; ಗಡಿ ,ಭಾಷೆ, ವೇಷಗಳಿಲ್ಲ! ಧರ್ಮ ಮೊದಲೇ ಇಲ್ಲ. ಬರೀ ತನುಗಳು! ತನುವಿನ ಧರ್ಮವೆಲ್ಲ ಒಂದೇ; ಅದು ಅರಿವಿನ ಧರ್ಮ ! ಜಗದ ತನುಗಳ ಮನವೆಲ್ಲ ಹೆಣ್ಣಾಯಿತು. ತನುವಿನ ಅರಿವೇ ಭವರೋಗದ ವೈದ್ಯನಾದ. ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗಂಡಾದ.

□

# ಕೊಟ್ಟಣದ ಮನೆ-ಕಸಬುಗೇರಿ-ಪರದಾರದ್ರೋಹ ಮೂರು ಕತೆಗಳು

ಬಸವನ ಭಕ್ತಿ ಕೊಟ್ಟಣದ ಮನೆ.
ಸಿರಿಯಾಳನ ಭಕ್ತಿ ಕಸಬುಗೇರಿ.
ಸಿಂಧು ಬಲ್ಲಾಳನ ಭಕ್ತಿ ಪರದಾರದ್ರೋಹ.
ಉಳಿದಾದ ಅಟಪುಟ ಉದಾಸೀನ ದಾಸೋಹ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು.
ಮಣ್ಣಿನ ಮನೆಯ ಕಟ್ಟಿಮಾಯಾ ಮೋಹಿನಿಯೆಂಬ
ಮಹೇಂದ್ರ ಜಾಲದೊಳಗಾಗಿ ಮಾಡುವ ಮಾಟ.
ಭಕ್ತನಲ್ಲಿ ಉಂಡು ಉದ್ದಂಡ ವೃತ್ತಿಯಲ್ಲಿ ನಡೆವವರು ಶಿವನಲ್ಲ.
ಇವರು ದೇವಲೋಕ ಮರ್ತ್ಯ ಲೋಕಕ್ಕೆ ಹೊರಗು.
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ,
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ.

ಅರಿವೇ ಗುರು, ಅರಿವೇ ದೇವರು, ಅರಿವೇ ಜಂಗಮ, ಅರಿವೇ ಚೆನ್ನಮಲ್ಲಿಕಾರ್ಜುನ! ಶರಣರು ತನುವಿನಲ್ಲಿರುವ ಅರಿವಿಗೆ, ತನುವಿನಲ್ಲಿರುವ ಮನದಿಂದ ಭಕ್ತಿ ಮಾಡಿದರು. ಮನ ಆ ಅರಿವೇ ಆಯಿತು. ಅರಿವಿನ ತನುವಾಯಿತು. ಅರಿವಿದ್ದು ಮನ ಆ ಅರಿವನ್ನು ತಿಳಿಯದೆ ತನುವಿಗೆ ಅರಿವಿನ ಪೋಷಾಕು ಧರಿಸಿದರೆ ಅದು ಅರಿವಿನ ಕಾಯವಾಗುವುದಿಲ್ಲ. ಆ ಕಾಯಕ್ಕೆ ಅಕ್ಕ ಅಟಪುಟ ಉದಾಸೀನ ದಾಸೋಹ ಮಾಡುವ ದೈನ್ಯವೆಂಬ ಭೂತ ಎಂದಿದ್ದಾಳೆ.

ಇದು ಮಣ್ಣಿನ ಮನೆ ಕಟ್ಟಿ ಮಾಯಾಮೋಹಿನಿಯೆಂಬ ಮಹೇಂದ್ರಜಾಲ ಮಾಡುವ ಮಾಟ. ಭಕ್ತನ ಮನೆಯಲ್ಲಿ ಉಂಡು, ಉದ್ದಂಡ ವೃತ್ತಿಯಲ್ಲಿ ನಡೆವ ಕಾಯ ಅರಿವಿನ ಕಾಯವಲ್ಲ, ಆ ಕಾಯ ಶಿವ ಕಾಯವಲ್ಲ, ಅದು ವೇಷದ ಕಾಯ. ತನ್ನ ತನುವಿನ ಅರಿವು ತಾನೇ ತಿಳಿಯದ ಮನ ದೇವಲೋಕಕ್ಕೂ ಮರ್ತ್ಯಲೋಕಕ್ಕೂ ಹೊರಗು ಎಂದಿದ್ದಾಳೆ ಅಕ್ಕ.

**ಬಸವನ ಭಕ್ತಿ ಕೊಟ್ಟಣದ ಮನೆ :**

ಬಸವನ ಭಕ್ತಿಯನ್ನು ಅಕ್ಕ ಭತ್ತದ ಮನೆಗೆ ಹೋಲಿಸಿದ್ದಾಳೆ. ಅನ್ನ ಉಣ್ಣಬೇಕಾದಾಗಲೆಲ್ಲ ಭತ್ತ ಕುಟ್ಟಲೇ ಬೇಕು. ಹೊಟ್ಟು ತೆಗೆದು ಅಕ್ಕಿ ಮಾಡಿ ಅನ್ನ ಉಣ್ಣಬೇಕು. ತನುವಿಗೆ ಬಡಿದ ಶಬ್ದ ನೋಡಿದ ರೂಪು, ವಾಸಿಸಿದ ವಾಸನೆ, ರುಚಿಸಿದ ಪದಾರ್ಥ, ಸ್ಪರ್ಶಿಸಿದ ವಸ್ತು ಭತ್ತವಿದ್ದಂತೆ. ಭತ್ತ ಉಣ್ಣಲು ಬರುವುದಿಲ್ಲ, ಅದನ್ನು ತನ್ನ ಅರಿವಿನ ಕೊಟ್ಟಣದಲ್ಲಿ ಕುಟ್ಟಿ ಅಕ್ಕಿಮಾಡಿ ಅನ್ನ ಉಣ್ಣಬೇಕು. ಅಂದರೆ ಕಿವಿಯಿಂದ ಕೇಳಿದ ಶಬ್ದ ಸೋಸಿ ತನುವಿಗೆ ಬಿಡಬೇಕು. ವಾಸಿಸಿದ ಪರಿಮಳ, ಸ್ಪರ್ಶಿಸಿದ ವಸ್ತು, ನೋಡಿದ ಸೌಂದರ್ಯ, ರುಚಿಸಿದ ಪದಾರ್ಥವೆಲ್ಲ ಅರಿವಿನ ಕೊಟ್ಟಣದಲ್ಲಿ ಕುಟ್ಟಿ ಸೋಸಿ ತನುವಿಗೆ ಬಿಟ್ಟರೆ ತನು ಕುದಿಯುವುದಿಲ್ಲ, ಹೀಗೆ ಬಸವಣ್ಣನ ಭಕ್ತಿ ಸದಾ ಕೊಟ್ಟಣದ ಮನೆಯಾಗಿತ್ತು.

''ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲ್ಲಿ

ಸನ್ಮಾನವ ಮಾಡೆನೆ? ನೆಲನುಗ್ಘಡಿಸಿ ಉಘೇ, ಚಾಂಗು, ಭಲಾ ಎಂದು! ಕುಲಧಿಕ ಹಾರುವಂಗೆ ಸಿದ್ಧಿಗೆಯ್ಯೆಸಲೆ! ನಿಮ್ಮ ಶರಣರ ಮಹಿಮೆ ಘನಕ್ಕೆ ಘನ! ಎಲೆ ಕೂಡಲ ಸಂಗಮದೇವಾ'' ನಿಮ್ಮ ನಂಬದವನೆ ಹೊಲೆಯ!

ಬಸವಣ್ಣನವರು ಮನದಿಂದ ಅರಿವಿಗೆ ಭಕ್ತಿ ಮಾಡಿದರು. ಚಮ್ಮಾರಿಕೆ ಕಾಯಕದಲ್ಲಿ ನಿರತವಾದ ಅರಿವಿನ ತನುವಿನ ಮನೆಯ ನಾಯಿಯನ್ನು ಸನ್ಮಾನಿಸುವೆ. ಅವರ ಮನೆಯ ನೆಲವ ಸಾರಿಸಿ ರಂಗೋಲೆ ಹಾಕುವೆ. ನಾನು ಹಾರುವವನಾದರೇನು? ಅರಿವನ್ನು ನಂಬದವನೇ ಹೊಲೆಯ ಎಂದು ಅರಿವಿನ ಮೇಲೆ ಆಣೆ ಇಟ್ಟು ಅರಿವಿಗೆ ಭಕ್ತಿ ಮಾಡಿದ್ದಾರೆ ಬಸವಣ್ಣ.

**ಸಿರಿಯಾಳನ ಭಕ್ತಿ ಕಸಬುಗೇರಿ :** ಅಕ್ಕ ಸಿರಿಯಾಳನ ಭಕ್ತಿಯನ್ನು ಕಟಗರ ಓಣಿಗೆ ಹೋಲಿಸಿದ್ದಾಳೆ. ಸಿರಿಯಾಳ ಹಡೆದ ಮಗನನ್ನೇ ಕೊಂದು ಹಸಿದು ಬಂದ ಅರಿವಿನ ಜಂಗಮನಿಗೆ ಅಡಿಗೆ ಮಾಡಿ ಉಣಬಡಿಸಿದ ಕತೆ ಸರ್ವರಿಗೂ ಗೊತ್ತಿದೆ. ಅಕ್ಕ ಈತನ ಭಕ್ತಿಗೆ ಮೆಚ್ಚಿ ಭಕ್ತಿಯೆಂದರೆ ಹೀಗಿರಬೇಕೆಂದು ಹೇಳಿದ್ದಾಳೆ! ಇದು ಶರಣರ ಭಕ್ತಿ ಹೇಗಾದೀತು ಎನ್ನುವ ಪ್ರಶ್ನೆ ಓದುಗರಿಗೆ ಕಾಡುತ್ತದೆ.

ಮಗನ ವ್ಯಾಮೋಹ ತಂದೆ ತಾಯಿಗಳನ್ನು ವಿಪರೀತವಾಗಿ ಕಾಡುತ್ತದೆ. ಮಗನಿಗಾಗಿ ಏನೆಲ್ಲ ಮಡಲು ಸಿದ್ಧ. ಆದರೆ ಭಕ್ತಿಗಾಗಿ ಮಗನನ್ನು ಕಳೆದು ಕೊಂಡವರು ಸಿರಿಯಾಳ ದಂಪತಿಗಳು ಮಾತ್ರ.

ಧೃತರಾಷ್ಟ್ರ ಕೌರವ ವಂಶದ ಮಹಾರಾಜ. ಆತನಿಗೆ ನೂರಾಒಂದು ಮಕ್ಕಳು. ದುರ್ಯೋಧನ ಜೇಷ್ಠ ಪುತ್ರ. ಮಕ್ಕಳ ವ್ಯಾಮೋಹ ಧೃತರಾಷ್ಟ್ರನನ್ನು ಬಲವಾಗಿ ಕಾಡುತ್ತಿತ್ತು. ಪಾಂಡವರು ಕೂಡಾ ಮಕ್ಕಳೇ. ಆದರೆ ದಾಯಾದಿಗಳು. ದುರ್ಯೋಧನ ಪಾಂಡವರಿಗೆ ಅಮಂತ್ರಣ ಕೊಟ್ಟು ಔತಣಕೂಟವಿಟ್ಟ. ವಿನೋದಕ್ಕೆಂದು ಪಗಡೆಯಾಡಿದರು. ಆಟದಲ್ಲಿ ಪಾಂಡವರು ರಾಜ್ಯವನ್ನು, ತಮ್ಮನ್ನು, ಹೆಂಡತಿಯನ್ನು ಸೋತರು ದುರ್ಯೋಧನ ದ್ರೌಪದಿಯನ್ನು ಎಳೆದು ತಂದು ತಮ್ಮನಿಂದಲೇ ಸಭೆಯಲ್ಲಿ ವಸ್ತ್ರ ಸೆಳೆದು ಬೆತ್ತಲೆಗೊಳಿಸಿದ. ಧೃತರಾಷ್ಟ್ರ ಕಿವಿಯಿದ್ದೂ ಕೇಳಲಿಲ್ಲ, ಬದಲಾಗಿ ಕಣ್ಣಿದ್ದರೆ ದ್ರೌಪದಿಯ ತನು, ಮಗನ ಪೌರುಷ ನೋಡಬಹುದಿತ್ತೆಂದು ವ್ಯಥೆ ಪಟ್ಟ. ಗುರುಹಿರಿಯರು, ಪ್ರಜೆಗಳು ಛೀ ಥೂ ಎಂದರು. ಕುರುಡ ಕೇಳಿಸಿಕೊಳ್ಳಲಿಲ್ಲ, ಪಾಂಡವರನ್ನು ವನವಾಸಕ್ಕಟ್ಟಿದರು. ಕುರುಡು ತಂದೆ ಕ್ಯಾರೆ ಎನ್ನಲಿಲ್ಲ, ಅರಗಿನ ಮನೆಯಲ್ಲಿ ಸುಡಲು ಹೋದ. ತಂದೆಗೆ ಮಾತುಬರಲೇ ಇಲ್ಲ, ವನವಾಸ ಮುಗಿದ ಮೇಲೆ ಐದು ಗ್ರಾಮ ಕೇಳಿದರು. ಸೂಜಿಯ ಮೊನೆಯ ಮೇಲಿನ ಮಣ್ಣೂ ಕೊಡುವುದಿಲ್ಲವೆಂದ. ಯುದ್ಧ ಆರಂಭವಾಯಿತು. ಮಗನ ವ್ಯಾಮೋಹದಿಂದ 18 ಅಕ್ಷೋಹಿಣಿ ಸೈನ್ಯ(19,68,300 ಸೈನಿಕರು, 11,80,980 ಕುದುರೆಗಳು, 3,93,660 ಆನೆಗಳು, 3,93,660 ರಥಗಳು) ಸತ್ತಿತು. ನೂರು ಜನ ಮಕ್ಕಳು ಕೊನೆಗೆ ದುರ್ಯೋಧನನು ಸತ್ತ. ಕುರುಡನಿಗೆ ಮಕ್ಕಳ ಮೇಲಿದ್ದ ವ್ಯಾಮೋಹ ತೊಲಗಲಿಲ್ಲ, ಮಗನನ್ನು ಕೊಂದ ಭೀಮನನ್ನಾದರೂ ಹಿಚುಕಿ ಕೊಲ್ಲಬೇಕೆಂದು ಅಕ್ಕರೆಯಿಂದ ಹತ್ತಿರ ಕರೆದ. ಸಾಧ್ಯವಾಗಲಿಲ್ಲ, ಮಕ್ಕಳ ಮೇಲಿದ್ದ ವ್ಯಾಮೋಹಕ್ಕಾಗಿ ಗೋಗರೆದ. ಎಲ್ಲವೂ ಮುಗಿದು ಹೋಗಿತ್ತು. ಭಕ್ತ ಸಿರಿಯಾಳ ದಂಪತಿಗಳು; ತನುವಿನ ಕಟುಗರ ಓಣಿಯೆಂಬ ಮಕ್ಕಳ ವ್ಯಾಮೋಹವನ್ನೆ ತನುವಿನ ಅರಿವಿಗೆ ಬಲಿಕೊಟ್ಟು ಮಗನನ್ನು ಉಳಿಸಿಕೊಂಡು ಭಕ್ತಿಯನ್ನು ಮೆರೆದಿದ್ದರು. ಇಂತಹ ಪುರಾತನ ಶರಣರ ಪರಿಚಯ ಅಕ್ಕ ವಚನದ ಮೂಲಕ ಮಾಡಿಸಿದ್ದಾಳೆ.

**ಸಿಂಧು ಬಲ್ಲಾಳನ ಭಕ್ತಿ ಪರದಾರ ದ್ರೋಹ :** ಕಾವೇರಿಪುರದ ಸಿಂಧು ಬಲ್ಲಾಳನೆಂಬ ರಾಜನು ಶಿವಭಕ್ತನಾಗಿದ್ದ. ಒಬ್ಬ ವಿಟ ಬಂದು ಈತನ ಸತಿಯನ್ನು ಬೇಡಿದ. ಹಿಂದು ಮುಂದು ಯೋಚಿಸಲಿಲ್ಲ; ವಿಟನ ವಿಷಯದ ಹಸಿವನ್ನು ತೀರಿಸಲು ತನ್ನ ಹೆಂಡತಿಯನ್ನೇ ಕಳುಹಿಸಿದ. ಹೆಂಡತಿ ಮೂರ್ಚಿತಳಾದಳು. ವಿಟನೆಂಬ ಶಿವ ಶಿಶುವಾಗಿದ್ದ ಎನ್ನುವ ಕತೆಯಿದೆ. ಸಿಂಧು ಬಲ್ಲಾಳ ತಾನು ಹೆಂಡತಿಯ ಕತ್ತಿಗೆ ಕಟ್ಟಿದ ಕರಿದಾರವನ್ನು ಲೆಕ್ಕಿಸಲಿಲ್ಲ. ಆ ದಾರ ಆತನಿಗೆ ಅಡ್ಡಿಪಡಿಸಲಿಲ್ಲ.

**ಪರದಾರ ದ್ರೋಹ :** ಅಕ್ಕ ಹೇಳಿದ ಅರಿವಿನ ಸೂಕ್ಷ್ಮಾತಿ ಸೂಕ್ಷ್ಮ ವಿಚಾರವಿದು. ಬರೆದರೆ ತಿಳಿಯುವದಲ್ಲ. ಓದಿದರೂ ತಿಳಿಯುವದಲ್ಲ. ಅರಿವಿನ ಅನುಭಾವಕ್ಕೆ ಇಳಿದು ಅರಿದರಿದು ತಿಳಿಯಬೇಕು. ಅನುಭಾವಿಗಳ ಸಂಗ ಮಾಡಿಯೇ ತಿಳಿಯಬೇಕು.

ಅಕ್ಕ ಈ ವಚನದಲ್ಲಿ ಹೇಳಿದ ಬಸವನ ಕೊಟ್ಟಣದ ಮನೆ, ಸಿರಿಯಾಳನ ಕಸುಬುಗೇರಿ, ಸಿಂಧುಬಲ್ಲಾಳನ ಪರದಾರದ್ರೋಹ ಈ ಮೂರನ್ನು ಅರಿವಿಗೆ ತೆಗೆದುಕೊಂಡು ಹೋಗಿ ಭಸ್ಮ ಮಾಡಿದ ಬಸವಣ್ಣನ ವಚನವನ್ನು ನೋಡಿ :

''ಒಡವೆ ಭಂಡಾರ ಕಡವರ ದ್ರವ್ಯವ ಬಡ್ಡಿ ಬ್ಯವಹಾರಕ್ಕೆ ಕೊಟ್ಟು ಮನೆಯ ಗೋಂಟಿನಲ್ಲಿ ಹೊಯ್ದುಕೊಂಡಿದ್ದೆ ನಾದಡೆ, ಅದು ಎನ್ನರ್ಥವಲ್ಲ, ಅನರ್ಥವೆಂಬೆ. ಸಂಗಮದೇವಾ ನೀನು ಜಂಗಮರೂಪಾಗಿ ಬಂದು ಆ ಧನವನು ನೀನು ಬಲ್ಲಂತೆ ಎನ್ನ ಮುಂದೆ ಸೂರೆಗೊಳುತಿರ್ದಡೆ, ನಾನು ಬೇಕು ಬೇಡೆಂದು ಮನದಲ್ಲಿ ಮರುಗಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ,

ಕಾಮನೇಮವೆಂಬ ಸಿಂಧುಬಲ್ಲಾಳನ ವಧುವ ಸರ್ವಭುವನದೊಡೆಯ ಸಂಗಮದೇವರು ಬೇಡುವಂತಲ್ಲ. ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆಯ ಚೆಲುವೆ,

ಆಕೆಯನು ಸಂಗಮದೇವಾ, ನೀನು ಜಂಗಮರೂಪಾಗಿ ಬಂದು ಎನ್ನ ಮುಂದೆ ಸಂಗವ ಮಾಡುತ್ತಿರಲು ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದೊಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ,

ಪ್ರತ್ಯಕ್ಷವಾಗಿ ಸಿರಿಯಾಳ ಶೆಟ್ಟಿ ಚಂಗಳವ್ವೆಯ ಮನೆಗೆ ಬಂದು ಅವರ ಮಗನ ಬೇಡುವಂತಲ್ಲ. ಸಂಗಮದೇವಾ, ನಿಮ್ಮ ಹೆಸರ ಚಿಕ್ಕ ಸಂಗಯ್ಯನಿದ್ದಾನೆ. ನೀನು ಜಂಗಮ ರೂಪಾಗಿಬಂದು, ಆತನ ಹಿಡಿದು ಎನ್ನ ಮುಂದೆ ಹೆಡಗುಡಿಯಕಟ್ಟಿ, ಚಿನಿಖಂಡವ ಮಾಡಿ ಬಾಣಸವ ಮಾಡುವಲ್ಲಿ, ಎನ್ನ ಉದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ನಾನು ಮರುಗಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ,

ಇಂತೀ ತ್ರಿವಿಧವು ಹೊರಗಣವು. ಎನ್ನ ನೋವಿನೊಳಗಲ್ಲ, ಎನ್ನ ಬೇನೆಯೊಳಗಲ್ಲ, ಇನ್ನು ನಾನಿದ್ದೇನೆ? ಕದ್ದಕಳ್ಳನ ಕಟ್ಟುವಂತೆ ಕಟ್ಟಿ , ನೀನು ಜಂಗಮ ರೂಪಾಗಿ ಬಂದು, ಎನ್ನಂಗದ ಮೇಲೆ ಶಸ್ತ್ರವನಿಕ್ಕಿ ನೋಡು, ಬಸಿದ ಶೂಲ ಪ್ರಾಪ್ತಿಯ ಮಾಡಿ ನೋಡು, ನವಖಂಡವ ಮಾಡಿ ಕಡಿಕಡಿದು ನೋಡು, ಅ ಶೂಲವೈದೈದು ಮುಖವಾಗಿ ಹಾಯುವಾಗ ಹರಿತಿನಿಸಿ ನೋಡು. ಈ ರೀತಿಯಲ್ಲಿ ಎನ್ನ ಭಂಗ ಬಡಿಸಿ ನೋಡಿದಡೆಯೂ ಲಿಂಗಾರ್ಚನೆಯ ಮಾಡುವುದ ಬಿಡೆ, ಜಂಗಮ

ದಾಸೋಹವ ಮಾಡುವದ ಬಿಡೆ, ಪಾದ ತೀರ್ಥ ಪ್ರಸಾದವ ಕೊಂಬುವದ ಬಿಡೆ. ಇಂತೀ ತ್ರಿವಿಧಕ್ಕೆ ರೋಶವ ಮಾಡಿಬಿಟ್ಟೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಇಷ್ಟರೊಳಗೆ ತಪ್ಪುಳ್ಳಡೆ ಮೂದಲಿಸಿ ಮೂಗ ಕೊಯ್ಯಿ, ಕೂಡಲಸಂಗಮದೇವಾ.''

ಎಂದು ಬಸವಣ್ಣನವರು ತನುವಿನ ಅರಿವಿಗೆ ಭಕ್ತಿ ಮಾಡಿದರು. ಅರಿವಿನಿಂದ ಸಕಲವನ್ನು ಅರಿದರಿದು ನೋಡಿದರು. ಬಸವಣ್ಣನವರ ಹೆಂಡತಿ ನೀಲಮ್ಮನವರು ಈ ವಚನಕ್ಕೆ ಮಾರುತ್ತರ ನೀಡಲಿಲ್ಲ, ಬದಲಾಗಿ ''ಪುರುಷನೆನ್ನಬಹುದೆ ಬಸವನ ಆನು? ಸ್ತ್ರೀ ಎನ್ನಬಹುದೆ ಬಸವನು ಎನಗೆ? ಬಸವನು ಎನಗೆ ಶಿಶುವಾದ ಆನು ಬಸವಂಗೆ ಶಿಶುವಾದೆ. '' ಎಂದು ಸತಿಪತಿಗಳಿಬ್ಬರು ಅರಿವಿಗೆ ಭಕ್ತಿಮಾಡಿ, ಆ ಅರಿವನ್ನೆ ಪತಿಯನ್ನಾಗಿಸಿಕೊಂಡರು. ಆ ಅರಿವಿಗೆ ಸತಿಯಾಗಿ ಶರಣ ಸತಿ ಲಿಂಗ ಪತಿಯೆಂಬ ಸೂತ್ರದಲ್ಲಿ ಮೆರೆದರು.

ಪರದಾರಕ್ಕೆ ಒತ್ತಿ ಬಿದ್ದ ಜಮದಗ್ನಿ ಮಹರ್ಷಿ ಹೆಂಡತಿಯ ಕತ್ತನ್ನು ಮಗನಿಂದಲೇ ಕತ್ತರಿಸಿದ. ದೇವತೆಗಳಿಗೆ ಗುರುವೆನಿಸಿಕೊಂಡ ಬೃಹಸ್ಪತಿ ಹೆಂಡತಿಗೆ ಶಾಪಕೊಟ್ಟ . ಋಷಿಮುನಿಯಾದರು ಹೆಂಡತಿ ಅರುಂಧತಿಯನ್ನು ಕಲ್ಲಾಗಿಸಿದ. ಕತ್ತಿಗೆ ಕಟ್ಟಿದ ಕರಿದಾರದ ವ್ಯಾಮೋಹ ಋಷಿಗಳನ್ನು, ತಪಸ್ವಿಗಳನ್ನು, ಮುನಿಪುಂಗವರನ್ನು ದೇವಾನುದೇವತೆಗಳನ್ನು ಹರಿದುತಿಂದು ರಕ್ಕಸರನ್ನಾಗಿ ಮಾಡಿ ಇತಿಹಾಸ ಬರೆಯಿತು. ಇವರಿಗೆ ಮನವೆಂಬ ಹೆಂಡತಿಯ ಅಜ್ಞಾನ ಕೊಲ್ಲಲು ಸಾಧ್ಯವಾಗಲಿಲ್ಲ, ಬದಲಾಗಿ ಹೆಂಡತಿಯನ್ನೆ ಕೊಂದರು. ಶರಣರು ಮಾತ್ರ ತನುವಿನ ಅಜ್ಞಾನವನ್ನು ಅರಿವಿನ ಗಾಣಕ್ಕೆ ಹಾಕಿ ಕೊಂದರು. ಮಗನ ವ್ಯಾಮೋಹವೆಂಬ ಕಸುಬುಗೇರಿ, ಕತ್ತಿಗೆ ಕಟ್ಟಿದ ಕರಿದಾರದ ಮೋಹದಿಂದ ಹೆಂಡತಿಯನ್ನೇ ಕೊಲ್ಲುವ ಪರದಾರದ್ರೋಹವನ್ನು ಶರಣರು ಜ್ಞಾನದ ಕೊಟ್ಟಣದಲ್ಲಿ ಹಾಕಿ ಕುಟ್ಟಿದರು.

□

# ತನುವಿನ ಕತ್ತಲೆಗೆ ರವಿಯಾಗಿ ಬೆಳಗಿದ ಚೆನ್ನಬಸವಣ್ಣ

**ಮರ್ತ್ಯಲೋಕದ ಭಕ್ತರ ಮನವ**
**ಬೆಳಗಲೆಂದು ಇಳಿತಂದನಯ್ಯಾ ಶಿವನು,**
**ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ,**
**ಚಿತ್ತದ ಪ್ರಕೃತಿಯ ಹಿಂಗಿಸಿ,**
**ಮುಕ್ತಿಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.**
**ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ.**
**ಭಾವವೆಲ್ಲ ಮಹಾಘನದ ಬೆಳಗು.**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನಿಮ್ಮ ಶರಣ ಸಮ್ಯಕ್‌ಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ**
**ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೇ.**

ಅಕ್ಕ ಕಲ್ಯಾಣಕ್ಕೆ ಹೋದಾಗ ಸಕಲ ಶರಣರಿಂದ ಅರಿವಿನ ದರ್ಶನ ವಾಗುತ್ತದೆ. ಮಹಾಜ್ಞಾನಿ ಚೆನ್ನಬಸವಣ್ಣನ ದರ್ಶನದಿಂದ ಎನ್ನ ಹುಟ್ಟು ಸಾವುಗಳು ನಷ್ಟವಾದವು ಎಂದು ಅಲ್ಲಮಪ್ರಭುಗಳಿಗೆ ತನಗುಂಟಾದ ಆನಂದ ವ್ಯಕ್ತಪಡಿಸಿದ್ದಾಳೆ.

ಹಗಲು ಸೂರ್ಯನ ಪಾಳೆ, ರಾತ್ರಿ ಕತ್ತಲೆ ಪಾಳೆ, ಲೋಕಕ್ಕೆ ಇವೆರಡು ಶಿಫ್ಟ್‌ಗಳು. ಒಂದು ಶಿಫ್ಟ್‌ನಲ್ಲಿ ಸೂರ್ಯ ಬೆಳಗುತ್ತಾನೆ ಮತ್ತೊಂದು ಶಿಫ್ಟ್‌ನಲ್ಲಿ ಕತ್ತಲೆಯ ಡ್ಯೂಟಿ ಶುರುವಾಗುತ್ತದೆ.

ಸೂರ್ಯ ಹುಟ್ಟಿ ಎಲ್ಲಾ ವಸ್ತುಗಳನ್ನು ಬೆಳಗುತ್ತಾನೆ. ಸೂರ್ಯ ಬೆಳಗಿದ ಎಲ್ಲ ವಸ್ತುಗಳನ್ನು ಕತ್ತಲೆ ತನ್ನ ಗರ್ಭದಲ್ಲಿಟ್ಟುಕೊಂಡು ಇಲ್ಲವಾಗಿಸುತ್ತದೆ. ಇದು ಕತ್ತಲೆ ಬೆಳಗಿನ ಆಟ.

ಹಗಲಾದರೇನು ಇರುಳಾದರೇನು ತನುವನ್ನಾವರಿಸಿಕೊಂಡ ಮನ ಕತ್ತಲೆ. ಈ ಕತ್ತಲೆ ಬೆಳಗುವ ಸೂರ್ಯನನ್ನೂ ಇಲ್ಲವಾಗಿಸುತ್ತದೆ. ಕೋಟಿ ಸೂರ್ಯರಿಗೆ ಸಮಾನವಾದ ತನುವಿನ ಅರಿವೆಂಬ ಸೂರ್ಯನನ್ನು ಕೂಡಾ ಕತ್ತಲೆ ಮಾಡುತ್ತದೆ.

ಮರ್ತ್ಯಲೋಕದ ತನುಗಳ ಮನದ ಕತ್ತಲೆಯ ಬೆಳಗಲೆಂದು ಸಾಕ್ಷಾತ್ ಶಿವನೇ ಚೆನ್ನಬಸವಣ್ಣನನ್ನು ಈ ಭೂಮಿಗೆ ಕಳುಹಿಸಿದ್ದಾನೆ. ಈತನ ಆಗಮನ ಕತ್ತಲೆಯ ಪಾಳೆಯವನ್ನು ಬೆಳಗಲು ರವಿ ಹೊಕ್ಕಂತಾಯಿತ್ತು ಎಂದು ಅಕ್ಕ ಚೆನ್ನಬಸವಣ್ಣನ ಮಹಾಜ್ಞಾನವನ್ನು ಕೊಂಡಾಡಿದ್ದಾಳೆ.

ರವಿ ಹಗಲು ಬೆಳಗಿದರು ಕೂಡಾ ಕಣ್ಣಿನ ಬೆಳಕು ಕಣ್ಣಿಗೆ ಪರಿಚಯವಿಲ್ಲದಿದ್ದರೆ ಹಗಲಾದರೂ ಕತ್ತಲೆಯ ಕೆಲಸ, ಕತ್ತಲಾದರೂ ಕತ್ತಲೆಯ ಕೆಲಸ ಕಣ್ಣಿಗೆ ತಪ್ಪಿದ್ದಲ್ಲ, ಕಣ್ಣಿನ ಬೆಳಕಿಗೆ ಕತ್ತಲಾದರೇನು, ಬೆಳಕಾದರೇನು, ಸದಾ ಬೆಳಕೇ. ಬೆಳಗಿಂಗೆ ಬೆಳಗುವ ಆ ಬೆಳಕು ಪರಿಚಯವಿಲ್ಲದ್ದಕ್ಕಾಗಿ ಬೆಳಕು ಕತ್ತಲೆಗಳು ಕಣ್ಣಿನಲ್ಲಿಯೇ ಉಳಿದಿವೆ. ಕಣ್ಣಿನ ಕತ್ತಲೆಯ ಪಾಳೆಯವನ್ನು

ರವಿಯಂತೆ ಬೆಳಗಲು ಚೆನ್ನಬಸವಣ್ಣ ಮರ್ತ್ಯಲೋಕಕ್ಕೆ ಬಂದನೆಂದು ಆತನನ್ನು ಸಾಕ್ಷಾತ್ ಶಿವನೇ ಕಳುಹಿಸಿದನೆಂದು ಅಕ್ಕ ಕಣ್ಣಿಗೆ ಪಾಠ ಮಾಡಿದ್ದಾಳೆ.

ಲೋಕದ ತನುವಿನ ಕಣ್ಣುಗಳಿಗೆ ಪಾಠ ಮಾಡುವ ಶಿಕ್ಷಕರು ವಿರಳ. ತಾವು ಯಾರಿಗೆ ಪಾಠ ಮಾಡುತ್ತಿದ್ದೇವೆಂದು ತಿಳಿಯದ ಶಿಕ್ಷಕರೇ ಅಧಿಕ.

ತನುವೇ ಒಂದು ಅದ್ಭುತವಾದ ಪಾಠಶಾಲೆ. ಅದಕ್ಕೆ ಐದು ಜ್ಞಾನದ ಮಹಾದ್ವಾರಗಳಿವೆ. ಅರಿವೆಂಬ ಗುರುವೇ ಅದಕ್ಕೆ ಮುಖ್ಯೋಪಾಧ್ಯಾಯ. ಕೋಣೆಗೊಬ್ಬರಂತೆ ಬಾಗಿಲಿಗೊಬ್ಬರಂತೆ ಐದು ಜನ ಸಹ ಶಿಕ್ಷಕರಿದ್ದಾರೆ. ಮನವೆಂಬ ಒಬ್ಬನೇ ಒಬ್ಬ ವಿದ್ಯಾರ್ಥಿ! ಅರಿವೆಂಬ ಗುರುವಿಗೆ ಚಳ್ಳೆ ಹಣ್ಣು ತಿನ್ನಿಸಿ ಹೊರಗಲೆಯುತ್ತ ಉಂಡಾಡಿಯಾಗಿದ್ದಾನೆ. ಐದೂ ಬಾಗಿಲು ಅವನಿಗೆ ಮುಕ್ತ, ಚಿತ್ತ ನೆಟ್ಟ ಕಡೆಗೆಲ್ಲಾ ನೋಡುತ್ತಾನೆ. ನೋಡಿದ್ದು, ಕೇಳಿದ್ದು, ರುಚಿಸಿದ್ದು, ವಾಸಿಸಿದ್ದು, ಮುಟ್ಟಿದ್ದೆಲ್ಲವನ್ನು ಬೇಡುತ್ತಾನೆ. ಪಾಠಶಾಲೆಯನ್ನೇ ಹಾದರದ ಮನೆಯನ್ನಾಗಿ ಮಾಡಿಕೊಂಡಿದ್ದಾನೆ, ಕಸಾಯಿಖಾನೆಯಾಗಿಸಿದ್ದಾನೆ. ಸೆರೆಯಂಗಡಿ ವೇಶ್ಯಾಗೃಹವನ್ನಾಗಿ ಪರಿವರ್ತಿಸಿದ್ದಾನೆ. ಅಲ್ಲಿ ಲಂಚ ಭ್ರಷ್ಟಾಚಾರಕ್ಕೇನೂ ಕಮ್ಮಿ ಇಲ್ಲ.

ಹೇಳುವ ಶಿಕ್ಷಕರ ಪಾಠ ನಿಂತಿಲ್ಲ. ವಿದ್ಯಾರ್ಥಿಗೆ ಪಾಠ ರುಚಿಸುತ್ತಿಲ್ಲ. ಐದು ಶಿಕ್ಷಕರು ಮುಖ್ಯೋಪಾಧ್ಯಾಯರಿದ್ದ ತನುವೆಂಬ ಪಾಠಶಾಲೆಗೆ ಮನವೆಂಬ ಒಬ್ಬನೇ ಒಬ್ಬ ವಿದ್ಯಾರ್ಥಿ. ಈ ವಿದ್ಯಾರ್ಥಿಗೆ ಹೊರಗಿನ ಶಿಕ್ಷಕ ಪಾಠ ಮಾಡಿದರೆ ಕೇಳಿಯಾನೇ? ಒಳಗಿನ ಶಿಕ್ಷಕರಿಗೆ ಹೊರಗಿನ ಶಿಕ್ಷಕ ಗುರುವಾಗಿ ಬೋಧಿಸಬಲ್ಲನೇ? ವಿದ್ಯಾರ್ಥಿಗೆ ಬೋಧೆ ನಿಲ್ಲುವುದಿಲ್ಲ, ಗುರುವಿಗೆ ಬೋಧೆ ಬೇಕಿಲ್ಲ, ಹೊರಗಿನ ಶಿಕ್ಷಕರು ಬೋಧಿಸುವುದಾದರೂ ಯಾರಿಗೆ ಎನ್ನುವುದು ಶಿಕ್ಷಕರಿಗೆ ತಿಳಿದಿಲ್ಲ. ಅದಕ್ಕಾಗಿಯೇ ತನುವಿನ ಕತ್ತಲು ಕಳೆಯಲು ಶಿಕ್ಷಕರಿಗೆ ಸಾಧ್ಯವಾಗಿಲ್ಲ. ಈ ಕಲೆ ಚೆನ್ನಬಸವಣ್ಣನಿಗೆ ಮಾತ್ರ ತಿಳಿದಿತ್ತು. ಅದಕ್ಕಾಗಿಯೇ ಆತ ತನುವಿನ ಕತ್ತಲು ಬೆಳಗುವ ರವಿಯಾಗಿ ಭುವಿಗೆ ಬಂದ !

ವಸ್ತುವಿನ ಮೇಲೆ ನೆಡುವ ಚಿತ್ತದ ಪ್ರಕೃತಿ ಹಿಂಗಿಸಿದ. ಮನವನು ಮಾತನಾಡಿಸಿ ಮೈದಡವಿದ. ಕಿವಿಹಿಂಡಿ ಗುರುವಿನ ಪಾದಕ್ಕೆ ಕೆಡಹಿದ. ಮನದ ಕತ್ತಲೆ ಕಳೆದು ಬೆಳಕು ಝುಗಮಗಿಸಿತು. ತನುವೆಲ್ಲ ಬೆಳಕು, ಮನವೆಲ್ಲ ಬೆಳಕು , ಭಾವವೆಲ್ಲ ಮಹಾಘನದ ಬೆಳಗು ಬೆಳಗೇ ಆಯಿತೆಂದು ಅಕ್ಕ ಚೆನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ತನುವಿನ ಹುಟ್ಟು ಸಾವು ಕಳೆದುಕೊಂಡ ಬಗೆಯನ್ನು ಅಲ್ಲಮಪ್ರಭುವಿಗೆ ವಿವರಿಸಿದ್ದಾಳೆ.

□

---

**ಅರಿವಿನ ಪರಿಮಳ**

□ ರವಿ ಹಗಲು ಬೆಳಗಿದರು ಕೂಡಾ ಕಣ್ಣಿನ ಬೆಳಕು ಕಣ್ಣಿಗೆ ಪರಿಚಯವಿಲ್ಲದಿದ್ದರೆ ಹಗಲಾದರೂ ಕತ್ತಲೆಯ ಕೆಲಸ, ಕತ್ತಲಾದರೂ ಕತ್ತಲೆಯ ಕೆಲಸ ಕಣ್ಣಿಗೆ ತಪ್ಪಿದ್ದಲ್ಲ. ಕಣ್ಣಿನ ಬೆಳಕಿಗೆ ಕತ್ತಲಾದರೇನು, ಬೆಳಕಾದರೇನು, ಸದಾ ಬೆಳಕೇ. ಬೆಳಗಿಂಗೆ ಬೆಳಗುವ ಆ ಬೆಳಕು ಪರಿಚಯವಿಲ್ಲದ್ದಕ್ಕಾಗಿ ಬೆಳಕು ಕತ್ತಲೆಗಳು ಕಣ್ಣಿನಲ್ಲಿಯೇ ಉಳಿದಿವೆ.

# ತನುವೆಂಬುದು ಅರಿವಿನ ಸಂಗಮ

**ಭವಿಸಂಗವಳಿದು ಭಕ್ತನಾದ ಬಳಿಕ,**
**ಭಕ್ತಂಗೆ ಭವಿಸಂಗವತಿ ಘೋರ ನರಕ.**
**ಶರಣಸತಿ ಲಿಂಗಪತಿಯಾದ ಬಳಿಕ,**
**ಶರಣಂಗೆ ಸತಿ ಸಂಗವು ಅಘೋರ ನರಕ.**
**ಚೆನ್ನಮಲ್ಲಿಕಾರ್ಜುನಾ,**
**ಪ್ರಾಣಗುಣವಳಿಯದವರ ಸಂಗವೇ ಭಂಗ.**

**ಭವಿಸಂಗವಳಿದು ಭಕ್ತನಾದ ಬಳಿಕ, ಭಕ್ತಂಗೆ ಭವಿಸಂಗವತಿ ಘೋರ ನರಕ:**

ಮನುಷ್ಯನನ್ನು ಸಂಗಜೀವಿ ಎಂದು ಕರೆಯುತ್ತಾರೆ. ಅರಿವು, ತನು, ಮನ ಇದು ತನುವಿನ ಅವಿನಾಭಾವ ಸಂಗ. ನೋಡಲು ಒಂದೇ ತನು, ಆದರೆ ಇಲ್ಲಿ ಮೂರು ಸಂಗಮವಾಗಿವೆ. ನದಿಗಳು ಬೇರೆ ಬೇರೆ ಹೆಸರಿನಿಂದ ಹರಿದರೂ ಸಂಗಮವಾದ ಸ್ಥಳದಲ್ಲಿ ತಮ್ಮ ಹೆಸರು ಕಳೆದುಕೊಳ್ಳುತ್ತವೆ. ಹಾಗೆಯೇ ಅರಿವು ಮತ್ತು ಮನ ತನುವಿನಲ್ಲಿ ಸಂಗಮವಾಗಿ ಅರಿವಿನ ತನುವಾಗಿದೆ.

ಮನ ಅರಿವಿನಲ್ಲಿ ಸಂಗಮವಾಗುವುದೇ ಭಕ್ತ ತನು. ಬಸವಣ್ಣ ಈ ತನುವಿಗೆ ಕೂಡಲಸಂಗಮದೇವ ಎಂದು ಕರೆದ. ಅರಿವು ಮನ ಸಂಗಮವಾದ ತನು ಕೂಡದಗಲದ ತನು ! ಅರಿವಿನ ತನು, ಸಂತನ ತನು ! ತನು ಮನ ಅರಿವು ಒಂದನ್ನೊಂದು ಬಿಟ್ಟಿಲ್ಲ, ಆದರೆ ಒಂದು ಮತ್ತೊಂದರ ಜೊತೆ ಸಂಗ ಮಾಡುವುದು ಕಲಿತಿಲ್ಲ.

ಮನ ಅರಿವಿನ ಸಂಗ ಬಿಟ್ಟು ಅನ್ಯ ತನುಗಳ ಸಂಗ ಮಾಡುವುದೇ ಭವಿಸಂಗ. ಭವಿ ಎಂದರೆ ಅಜ್ಞಾನಿ, ಅರಿವಿನ ಸಂಸ್ಕಾರವಿಲ್ಲದ ಮನ. ಈ ಮನ ಅನ್ಯ ತನುಗಳ ಸಂಗವನ್ನು ವಿಷಯಾಸಕ್ತಿಗಾಗಿ ಮಾಡುತ್ತದೆ. ಸಂಪತ್ತಿಗಾಗಿ, ಅಧಿಕಾರಕ್ಕಾಗಿ, ಗೌರವಕ್ಕಾಗಿ ಮಾಡುತ್ತದೆ. ವಿದ್ಯಾಸಂಪತ್ತಿಗಾಗಿಯೂ ಮಾಡುತ್ತದೆ. ದಕ್ಕದಿದ್ದರೆ ತನು ತನುಗಳ ಮಧ್ಯೆ ವಿರಸ ಉಂಟಾಗಿ ಕೊಲೆ ಅತ್ಯಚಾರ ಹೊಡೆದಾಟಗಳಲ್ಲಿ ಭಾಗಿಯಾಗಿ ಭವಿ ಎನ್ನಿಸಿಕೊಳ್ಳುತ್ತದೆ. ರಕ್ಕಸ ಕ್ರೂರಿ ಎಂದು ಮನ ತನುವಿಗೆ ಪಟ್ಟ ಕಟ್ಟುತ್ತದೆ. ಮನ ಮಾತ್ರ ಭವಿಯಾಗಿ ತನುವಿನಲ್ಲಿ ಸದಾ ಕಾಡುತ್ತದೆ. ಭವಿ ಸಂಗವಳಿದು ಅರಿವಿನ ಸಂಗ ಮಾಡಿದ ಮನ ಘನ ಮನ! ಅರಿವಿಗೆ ಮಣಿದು, ಅರಿವಿಗೆ ಭಕ್ತನಾದ ಮನ, ಭಕ್ತ ತನು. ಈ ತನು ಫಲಭರಿತ ಬಾಳೆಯ ಗೊನೆಯಂತೆ ಸದಾ ಬಾಗಿರುತ್ತದೆ. ಈ ಭಕ್ತನಿಗೆ ಭವಿಸಂಗವು ಅತಿ ಘೋರ ನರಕವಾಗಿ ಗೋಚರಿಸುತ್ತದೆ.

ಮನಕ್ಕೆ ಅರಿವಿನ ದರ್ಶನವಾಗದಿದ್ದರೆ, ಆ ಮನ ಕಣ್ಣಿನಲ್ಲಿ ಬೆರೆತು ಕುರುಡನನ್ನಾಗಿಸುತ್ತದೆ. ಕಿವಿಯಲ್ಲಿ ಬೆರೆತು ಕಿವುಡನನ್ನಾಗಿಸುತ್ತದೆ. ಮೂಗು, ಚರ್ಮ, ನಾಲಿಗೆಯಲ್ಲಿ ಬೆರೆತು ಅಜ್ಞಾನಿಯನ್ನಾಗಿಸುತ್ತದೆ. ಕರೆನ್ಸಿ ಆಭರಣ ನೋಡಿ ಬಾಯಿ ತೆರೆಯುತ್ತದೆ. ತನ್ನಂತೆ ಇರುವ ತನು ನೋಡಿ ನಾಯಿಯಂತೆ ಜೊಲ್ಲು ಸುರಿಸುತ್ತದೆ. ಶಬ್ದ ಕೇಳಿ ಕೆಂಡಾ ಮಂಡಲವಾಗುತ್ತದೆ. ರುಚಿಸಿದ್ದೆಲ್ಲಾ, ವಾಸಿಸಿದ್ದೆಲ್ಲಾ, ಮುಟ್ಟಿದ್ದೆಲ್ಲಾ ಮನ ಬಯಸಿ ತನುವನ್ನು ಕಟೆ ಕಟೆಯಲ್ಲಿ ನಿಲ್ಲಿಸುತ್ತದೆ. ಮನವನ್ನು ಭವಿಯೆಂದು ಯಾರು ದೂಷಿಸುವುದಿಲ್ಲ; ತನು ಅಪರಾಧಿಯೆಂದು ದಂಡಿಸುತ್ತಾರೆ. ಏಕೆಂದರೆ ಹಾಗೆ

ಮಾಡುವ ತನುಗಳೆಲ್ಲ ಭವಿ ತನುಗಳೇ! ಕೌರವ ಸೈನ್ಯವಿದ್ದಂತೆ. ಭವಿ-ಭಕ್ತ ಎನ್ನುವ ಶಿಕ್ಷಣವಿಲ್ಲದ ತನುಗಳು ಘೋರ ನರಕದ ಭವಿತನುಗಳೇ ! ಈ ಶಿಕ್ಷಣ ದೊರೆತ ತನುಗಳೆಲ್ಲ ಬುದ್ಧ ಬಸವ ಶರಣ ದಾಸ ಸಂತ ತನುಗಳು ಅರಿವಿನ ತನುಗಳು !

**ಶರಣಸತಿ ಲಿಂಗಪತಿಯಾದಬಳಿಕ ಶರಣಂಗೆ ಸತಿ ಸಂಗವು ಅಘೋರ ನರಕ :**

ಭವಿ-ಭಕ್ತನಾಗುವುದು, ಶರಣಸತಿ-ಲಿಂಗಪತಿಯಾಗುವುದನ್ನು ಅಕ್ಕ ಹೇಳಿದ್ದಾಳೆ . ಈ ಎರಡು ಶಬ್ದಗಳಿಂದಲೇ ಲೋಕದ ಎಲ್ಲಾ ತನುಗಳನ್ನು ಬುದ್ಧ ತನು ಮಾಡಲು ಹೊರಟ್ಟಿದ್ದಾಳೆ. ಹೌದು, ಇದು ಸತ್ಯವಾದ ಮಾತು. ತಿಳಿದರೆ ಅರಿವಿನ ತನುವಾಗಲು ಈ ಎರಡು ಮಾತುಗಳು ಸಾಕು. ಸಕಲ ಶಾಸ್ತ್ರಗಳನ್ನು ಓದಿ ಪಂಡಿತನೆಂಬ ರೋಗಿಯಾಗಬೇಕಿಲ್ಲ, ಶಾಲಾ ಕಾಲೇಜು ವಿಶ್ವವಿದ್ಯಾಲಯಗಳ ಅವಶ್ಯಕತೆಯೇ ಇಲ್ಲ, ಏನೂ ಕಲಿಯದ ಜ್ಞಾನಿಗಳಿಂದ ಬಂದ ಮಾತುಗಳೇ ಪುಸ್ತಕಗಳಾಗಿವೆ. ವೇದ ಉಪನಿಷತ್ ಭಗವದ್ಗೀತೆಗಳಾಗಿವೆ . ಅವುಗಳನ್ನೇ ಕಲಿತು, ಕಲಿಸಿ ಪಂಡಿತರೆನ್ನಿಸಿಕೊಳ್ಳುವ ನಾವು ಮೂರ್ಖರಲ್ಲವೆ? ಶಾಲಾ ಕಾಲೇಜು ವಿಶ್ವವಿದ್ಯಾಲಯ , ಅದಕ್ಕೊಬ್ಬ ಮಂತ್ರಿ , ಶಿಕ್ಷಕ ಉಪನ್ಯಾಸಕ , ಉಪಕುಲಪತಿ ಕುಲಪತಿ ಇದೊಂದು ಹುಚ್ಚಲ್ಲವೆ? ಏನು ಕಲಿಸುತ್ತಿದ್ದೇವೆ ಯಾಕೆ ಕಲಿಯುತ್ತಿದ್ದೇವೆ ಎನ್ನುವುದು ತಿಳಿಯದಿದ್ದರೆ ಹೇಗೆ? ಎಷ್ಟು ಕಲಿತರೂ ತನುವಿನಲ್ಲಿಯ ಸಂಕಟ ನಿಲ್ಲದಿದ್ದರೆ ಅದನ್ನು ಶಿಕ್ಷಣವೆನ್ನಲು ಸಾಧ್ಯವೆ? ಎಂದು ಹೊಳೆಯದಿರುವುದೇ ಭವಿತನ. ಸದಾ ಸಂಕಟ ಪಟ್ಟು ಮತ್ತೊಂದು ತನುವಿಗೆ ಸಂಕಟ ಕೊಡುವುದೇ ಭವಿತನ. ಸತಿಯಿದ್ದೂ ಪರಸತಿಯನ್ನು ನೋಡಿ ಕಣ್ಣಿನಲ್ಲಿ ಹಾದರ ಮಾಡುವುದೇ ಭವಿತನ.

ಲಿಂಗ ಧರಿಸಿದವನು ಶರಣನಲ್ಲ, ಸತ್‌ಶೀಲನೂ ಅಲ್ಲ, ಅರಿವೇ ಪತಿ, ಆ ಪತಿಯೇ ಲಿಂಗ ! ಮನವೇ ಸತಿ, ಆ ಸತಿಯೇ ಶರಣ ! ಅರಿವಿನಲ್ಲಿ ಮನ ಬೇರಾಗದಂತೆ ಬೆರೆಯುವುದೇ ಶರಣಸತಿ-ಲಿಂಗಪತಿ. ಇಂತಹ ಶರಣಂಗೆ ಸತಿ ಸಂಗವು ಅಘೋರ ನರಕವಾಗಿ ಪರಣಮಿಸುವುದು. ಅರಿವಿನಿಂದ ತನುವನ್ನು ನೋಡುವ ಶರಣನ ಕಣ್ಣಿಗೆ ಎಲ್ಲ ತನುಗಳು ಸಜಾತಿಯ ತನುಗಳಾಗಿ ಗೋಚರಿಸುತ್ತವೆ. ನೋಡುವ ಚರ್ಮ ಒಂದೇ. ಅದರಲ್ಲಿ ಅಡಗಿದ ರಕ್ತ ಮಾಂಸ ಮೂಳೆ ಮಜ್ಜಾ ಮೇದಸ್ಸುಗಳೊಂದೇ ಇವುಗಳೊಂದಿಗೆ ಕೂಡುವ ಬಯಕೆ ನಿರರ್ಥಕವೆಂದು ತನುವಿಗೆ ಕೂಡಲೇ ತಿಳಿಯುತ್ತದೆ.

ಮನಕ್ಕೆ ತಿಳಿಯದಿದ್ದಾಗ ತನುವು ತನುವಿನೊಂದಿಗೆ ಕೂಡಿ ಸುಖಿಸುತ್ತಿತ್ತು. ಕಣ್ಣಿನಲ್ಲಿ, ತನುವಿನಲ್ಲಿ ಸದಾ ಹಾದರದ ಸುಖ ಮನೆ ಮಾಡಿತ್ತು. ಕೂಡುವುದು ಅಗಲುವುದು ಮತ್ತೆ ಕೂಡುವ ಬಯಕೆಯಾಗುವುದು ಮನಕ್ಕೆ ರೋಗವಾಗಿ ಪರಿಣಮಿಸಿತ್ತು. ಈ ಮನಕ್ಕೆ ಅರಿವಿನ ದರ್ಶನವಾದ ಮೇಲೆ ಶರಣ ತನುವಾಯಿತು. ಅರಿವೇ ಲಿಂಗವೆಂಬ ಪತಿಯಾಯಿತು. ಮನವೇ ಶರಣನೆಂಬ ಸತಿಯಾಯಿತು ಅಂಗವನ್ನೇ ಮನೆಯಾಗಿಸಿಕೊಂಡು ಸಂಗ ಮಾಡಲು ಲಿಂಗ ಅಂಗ ಸಮರಸವಾಗಿ ಬೆರೆತವು. ಕೂಡದಗಲದ ಕೂಟದ ಸುಖ ಮನಕೆ ದೊರೆತು ಮತ್ತೆ ಸತಿ ಸಂಗ ಮಾಡಲೇ ಇಲ್ಲ, ಅದು ಮನಕ್ಕೆ ಅಘೋರ ನರಕವಾಗಿ ಗೋಚರಿಸಿತು. ತನು ಮನ ಘನವೆಂಬ ಅರಿವು ಕೂಡಿ ಅರಿವಿನ ಸಂಗಮದಲ್ಲಿ ತನುಮನಗಳೆರಡೂ ಮಿಂದು ಪ್ರಾಣಗುಣ ಕಳೆದುಕೊಂಡು ನಿರ್ಗುಣಿಯಾಯಿತು.

□

# ಜ್ಞಾನಕ್ಕೆ ಭಕ್ತಿ ಮಾಡುವ ಸೂತ್ರ

**ಭಾನುವಿನಂತಿಪ್ಪುದು ಜ್ಞಾನ,**
**ಭಾನುಕಿರಣದಂತಿಪ್ಪುದು ಭಕ್ತಿ.**
**ಭಾನುವನುಳಿದು ಕಿರಣಂಗಳಿಲ್ಲ,**
**ಕಿರಣಂಗಳನುಳಿದು ಭಾನುವಿಲ್ಲ.**
**ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು**
**ಚೆನ್ನಮಲ್ಲಿಕಾರ್ಜುನಾ?**

ಸಕಲರೂ ಜ್ಞಾನಿಗಳಾಗಲೆಂಬ ತವಕ ಅಕ್ಕಮಹಾದೇವಿಗೆ. ತನುವಿನ ಜ್ಞಾನ ಕಂಡು, ಅದನ್ನು ಉಂಡು ಎಲ್ಲರೂ ಸವಿಯಲೆಂದು ಆರು ಸಾಲಿನ ಬೆಡಗಿನ ಬುತ್ತಿ ಕಟ್ಟಿದ್ದಾಳೆ ಅಕ್ಕ.

ತನುವಿನ ಜ್ಞಾನ ಸೂರ್ಯನಂತಿದೆ ಎಂದರೆ ಸಾಮಾನ್ಯವೆ? ತನುವಿನ ಭಕ್ತಿ ಸೂರ್ಯನ ಕಿರಣದಂತಿದೆ ಎಂದರೆ ಸಾಮಾನ್ಯವೆ ? ಸೂರ್ಯ ಮತ್ತು ಕಿರಣ ಒಂದೇ ಆಗಿದೆ. ಸೂರ್ಯನನ್ನು ಬಿಟ್ಟು ಕಿರಣಗಳಿಲ್ಲ ಕಿರಣಗಳನ್ನು ಬಿಟ್ಟು ಸೂರ್ಯನಿಲ್ಲ.

ಅಷ್ಟು ದೊಡ್ಡ ಶಕ್ತಿ ತನುವಿನಲ್ಲಿದೆಯೆಂದು ತನುವಿಗೆ ಏಕೆ ತಿಳಿಯುತ್ತಿಲ್ಲ! ತಿಳಿದುಕೊಳ್ಳುವ ಆಸಕ್ತಿಯಾದರೂ ತನುವಿಗೆ ಏಕೆ ಸಾಧ್ಯವಾಗುತ್ತಿಲ್ಲ.

ಆಕಾಶದಲ್ಲಿ ಒಬ್ಬನೇ ಸೂರ್ಯ. ಅವನು ಅರ್ಧ ಬೆಳಗುತ್ತಾನೆ ಅರ್ಧ ಬೆಳಗುವುದಿಲ್ಲ. ಭಾರತ ದೇಶದಲ್ಲಿ ನೂರಾ ಹತ್ತು ಕೋಟಿ ಸೂರ್ಯರು ! ಇವರು ಸೂರ್ಯನನ್ನು ಬೆಳಗುವ ಸೂರ್ಯರು ! ಸೂರ್ಯ ಬೆಳಗುತ್ತಾನೆ; ತಾನು ಬೆಳಗುತ್ತೇನೆಂದು ಹೇಳುವುದಿಲ್ಲ. ಹಾಗೆಯೇ ದೇಹದಲ್ಲಿದ್ದ ಜ್ಞಾನಸೂರ್ಯ ಬೆಳಗುವುದು ದೇಹಕ್ಕೆ ಮನಕ್ಕೆ ಪರಿಚಯವಿಲ್ಲ. ಸೂರ್ಯ ಜಡ, ಅದಕ್ಕಾಗಿಯೇ ಸೂರ್ಯ ತಾನು ಬೆಳಗುವುದನ್ನು ತಿಳಿಯಲರಿಯ. ದೇಹ ಚೇತನ; ಅದಕ್ಕೆ ಮನ ಮುಸುಕಿದೆ. ದೇಹ ದಸೂರ್ಯನೆಂಬ ಅರಿವು ಬೆಳಗುವ ವಸ್ತುಗಳನ್ನು ಬಗಿದು ತಿನ್ನುವ ಆಸೆ ಮನಕ್ಕೆ ! ಅರಿವಿನ ಸೂರ್ಯ ಬೆಳಗಿದ ವಸ್ತುಗಳು ಒಂದೇ ಎರಡೇ, ಆತ ಅನಂತ ಕೋಟಿ ವಸ್ತುಗಳ ಮೇಲೆ ಬೆಳಕು ಚೆಲ್ಲಿದ ! ಆ ವಸ್ತುಗಳನ್ನೆಲ್ಲ ರುಚಿಸಿ ಸಂಗ್ರಹಿಸುವ ಆಸೆ ಮನಕ್ಕೆ. ಬೆಳಗುವ ಜ್ಞಾನಸೂರ್ಯ ಬೆಳಗುವುದು ಬಿಟ್ಟಿಲ್ಲ. ಬೆಳಗಿದ್ದನ್ನೆಲ್ಲ ಬಾಚಿ-ಸಂಗ್ರಹಿಸುವುದು ಮನ ಬಿಟ್ಟಿಲ್ಲ. ಮನಕ್ಕೆ ಜ್ಞಾನಸೂರ್ಯ ಕಂಡಿಲ್ಲ, ಆತ ಬೆಳಗಿದ ವಸ್ತುಗಳು ಮಾತ್ರ ಕಾಣುತ್ತವೆ ; ಮನ ಜ್ಞಾನಕ್ಕೆ ಭಕ್ತಿ ಮಾಡದ ನಿಮಿತ್ತ !

ಅರಿವಿನ ಸೂರ್ಯ ಬೆಳಗಿದ ವಸ್ತುಗಳನ್ನು ನೋಡಿ ಹಗಲಿರುಳು ಸಂಗ್ರಹಿಸುವ ಮನ, ಆತನ ಮೇಲೆ ಭಕ್ತಿ ಮಾಡಬೇಕು. ಒಮ್ಮೆ ಆ ಅರಿವಿನ ದರ್ಶನ ಮನಕ್ಕೆ ಆಗಬೇಕು. ಇಷ್ಟಾದರೆ ಸಾಕು. ಆ ಮನವೇ ಜ್ಞಾನ ಸೂರ್ಯನಾಗುತ್ತಾನೆ. ಅದರ ಭಕ್ತಿ ಜ್ಞಾನದ ಕಿರಣಗಳಾಗುತ್ತವೆ. ಮನ ಜ್ಞಾನದ ಬೆಳಕಿನಲ್ಲಿ ಸಿಲುಕಿ ಆ ಬೆಳಕೇ ಆಗುತ್ತದೆ.

ಸೂರ್ಯ ಬೆಳಗುತ್ತಾನೆ; ಆತ ಬೆಳಗಿದ ಯಾವ ವಸ್ತುಗಳನ್ನು ಕಿರಣಗಳು ತನಗೆ ಬೇಕೆಂದು ಬಾಚಿಕೊಳ್ಳುವುದಿಲ್ಲ, ಬೆಳಗುವುದೊಂದೆ ಸೂರ್ಯನ ಕೆಲಸ !

ಹಾಗೆಯೇ ತನುವಿನ ಜ್ಞಾನಸೂರ್ಯ ಬೆಳುಗುತ್ತಾನೆ; ಆ ಜ್ಞಾನಕ್ಕೆ ಭಕ್ತಿ ಮಾಡಿದ ಮನ

ಜ್ಞಾನದ ಕಿರಣಗಳಾಗಿ ಎಲ್ಲ ವಸ್ತುಗಳನ್ನು ಬೆಳಗುತ್ತದೆ. ನೋಡಿ ಆನಂದ ಪಡುತ್ತದೆ; ಏನನ್ನೂ ಮುಟ್ಟುವುದಿಲ್ಲ!

ತನ್ನ ಕಿರಣಗಳಿಂದ ಸೃಷ್ಟಿಯಾದ ವಸ್ತುಗಳನ್ನು ಸೂರ್ಯ ಮುಟ್ಟುವುದಿಲ್ಲ. ಆನಂದವನ್ನೂ ಪಡುವುದಿಲ್ಲ. ಏಕೆಂದರೆ ಸೂರ್ಯ ಜಡ.

ಜ್ಞಾನಸೂರ್ಯನಿಂದ ಸೃಷ್ಟಿಯಾದ ವಸ್ತುಗಳನ್ನು ತನು ಮುಟ್ಟುವು ದಿಲ್ಲ ; ಏಕೆಂದರೆ ಮುಟ್ಟುವ ಮನ ಜ್ಞಾನದ ಕಿರಣಗಳಾಗಿ ವಸ್ತುಗಳನ್ನು ಬೆಳಗಿದ್ದರಿಂದ ! ಜ್ಞಾನಕ್ಕೆ ಭಕ್ತಿ ಮಾಡಿದ ಮನ ಮಹದಾನಂದದಿಂದ ಕುಣಿಕುಣಿದಾಡುತ್ತದೆ; ನಲಿನಲಿದಾಡುತ್ತದೆ. ಸರ್ವವನ್ನೂ ಬೆಳಗುವ ಬೆಳಕು ನಾನೇ ಎಂದು ಆನಂದದಿಂದ ತಲ್ಲೀನವಾಗುತ್ತದೆ ! ಜ್ಞಾನಸೂರ್ಯನೊಂದಿಗೆ ಕೂಡಿದ ಕೂಟ ಪರಮಸುಖವಾಗುತ್ತದೆ!

**ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು ಚೆನ್ನಮಲ್ಲಿಕಾರ್ಜುನಾ:**

ಮನ ವಸ್ತುಗಳ ಮೇಲಿನ ಆಸೆ ಬಿಡಬೇಕು. ವಸ್ತುಗಳನ್ನು ಬೆಳಗುವ ಜ್ಞಾನದ ಮೇಲೆ ಭಕ್ತಿ ಮಾಡಬೇಕು. ತನುವಿನಲ್ಲಿಯೇ ಜ್ಞಾನವಿದೆ, ತನುವಿನಲ್ಲಿಯೇ ಮನವಿದೆ, ಮನಕ್ಕೆ ಜ್ಞಾನ ಪಡೆಯ ಬೇಕೆಂಬ ಬಯಕೆಯ ಭಕ್ತಿ ಇಲ್ಲದಿದ್ದರೆ, ಮನಕ್ಕೆ ಜ್ಞಾನ ದಕ್ಕುವುದಾದರೂ ಹೇಗೆ? ಅದು ಪುಸ್ತಕಗಳನ್ನು ಓದಿ ಓದಿ, ಪ್ರವಚನಗಳನ್ನು ಕೇಳಿ ಕೇಳಿ ದಣಿಯುತ್ತದೆಯೇ ಹೊರತು ಜ್ಞಾನಿಯಾಗುವುದಿಲ್ಲ. ಓದಿ ಕೆಟ್ಟ ಕೂಚುಭಟ್ಟ ಎನ್ನುವ ಗಾದೆಯಂತೆ ! ತನುವಿನಿಂದಲೇ ಬಂದ ಜ್ಞಾನವನ್ನು ತನುವೇ ಓದಿ ಓದಿ ಕೆಟ್ಟಂತೆ ! ತನುವಿನಲ್ಲಿರುವ ಜ್ಞಾನಕ್ಕೆ ತನುವಿನಲ್ಲಿರುವ ಮನವೇ ಭಕ್ತಿ ಮಾಡಿ ಕೂಡಬೇಕು. ಈ ಕೂಟದ ಸುಖ ಕೂಡದಗಲದ ಸುಖ ! ಈ ಪರಮಸುಖವನ್ನು ಬಸವಣ್ಣನವರು ಈ ಕೆಳಗಿನಂತೆ ಬಣ್ಣಿಸಿದ್ದಾರೆ.

''ನಿಮ್ಮ ನೋಟವನಂತಸುಖ, ನಿಮ್ಮಕೂಟ ಪರಮಸುಖ, ಅವಟುಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನಯ್ಯಾ. ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಳೆಗಳು''

ಮನ ಜ್ಞಾನಕ್ಕೆ ಭಕ್ತಿ ಮಾಡಿ ಆ ಜ್ಞಾನದ ಕಿರಣಗಳಿಂದ ನೋಡುವ ನೋಟವೆಲ್ಲ ಅನಂತ ಸುಖ. ಪರಮಸುಖ ! ಬೆಳಕಿನ ಆ ನೋಟವನ್ನು ಮೂರುವರೆ ಕೋಟಿ ರೋಮಂಗಳು ಕಂಗಳಾಗಿ ನೋಡುತಿದ್ದವಯ್ಯಾ. ಮನ ಘನದೊಂದಿಗೆ ಬೆರೆತು ಘನ ಸಂಗಮವಾದುದನ್ನು ನೋಡಿ ನೋಡಿ ನಿಮ್ಮ ಕೂಡಿದ ಆ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಳೆಗಳು ಎಂದಿದ್ದಾರೆ ಬಸವಣ್ಣ.

□

**ಅರಿವಿನ ಪರಿಮಳ**

□ ಆಕಾಶದಲ್ಲಿ ಒಬ್ಬನೇ ಸೂರ್ಯ. ಅವನು ಅರ್ಧ ಭೂಮಿ ಬೆಳಗುತ್ತಾನೆ ಅರ್ಧ ಬೆಳಗುವುದಿಲ್ಲ. ಭಾರತ ದೇಶದಲ್ಲಿ ನೂರಾ ಹತ್ತು ಕೋಟಿ ಸೂರ್ಯರು ! ಇವರು ಸೂರ್ಯನನ್ನು ಬೆಳಗುವ ಸೂರ್ಯರು ! ಸೂರ್ಯ ಬೆಳಗುತ್ತಾನೆ; ತಾನು ಬೆಳಗುತ್ತೇನೆಂದು ಹೇಳುವುದಿಲ್ಲ. ಹಾಗೆಯೇ ದೇಹದಲ್ಲಿದ್ದ ಜ್ಞಾನಸೂರ್ಯ ಬೆಳಗುವುದು ದೇಹಕ್ಕೆ ಪರಿಚಯವಿಲ್ಲ. ಸೂರ್ಯ ಜಡ, ಅದಕ್ಕಾಗಿಯೇ ಸೂರ್ಯ ತಾನು ಬೆಳಗುವುದನ್ನು ತಿಳಿಯಲರಿಯ. ದೇಹ ಚೇತನ; ಅದಕ್ಕೆ ಮನ ಮುಸುಕಿದೆ.

# ಭೃತ್ಯ-ಕರ್ತೃ ಹಾಗೂ ಲಿಂಗಭಕ್ತನ ವರ್ಮ

ಭೃತ್ಯನಾದ ಬಳಿಕ ಕರ್ತೃವಿಂಗೆ ಉತ್ತಮ ವಸ್ತುವನೀಯಬೇಕು,
ಇದೇ ಕರ್ತೃಭೃತ್ಯರ ಭೇದ.
ಲಿಂಗಭಕ್ತನಾದಡೆ ಜಂಗಮಪಾದತೀರ್ಥ ಪ್ರಸಾದವ,
ಲಿಂಗಕ್ಕೆ ಮಜ್ಜನ ಭೋಜನ ನೈವೇದ್ಯವ ಮಾಡಿ,
ಪ್ರಸಾದವ ಕೊಳ್ಳಬೇಕು.
ಇದೇ ವರ್ಮ, ಇದೇ ಧರ್ಮಕಾಣಾ ಚೆನ್ನಮಲ್ಲಿಕಾರ್ಜುನಾ.

**ಭೃತ್ಯನಾದ ಬಳಿಕ ಕರ್ತೃವಿಂಗೆ ಉತ್ತಮ ವಸ್ತುವನೀಯಬೇಕು ಇದೇ ಕರ್ತೃಭೃತ್ಯರ ಭೇದ :**

ಭೃತ್ಯ ಮತ್ತು ಕರ್ತೃ: ಸೇವಕ ಮಾಲಕನಿಗೆ ಉತ್ತಮ ವಸ್ತುಗಳನ್ನೇ ಕೊಡಬೇಕು ಎನ್ನುವುದರ ಮೂಲಕ ಅಕ್ಕ ವಚನ ಪ್ರಾರಂಭಿಸಿದ್ದಾಳೆ. ಎರಡನೇ ಸಾಲಿನಲ್ಲಿ ಲಿಂಗ ಭಕ್ತನಾದಡೆ ಜಂಗಮ ಪಾದತೀರ್ಥ ಪ್ರಸಾದವ ಲಿಂಗಕ್ಕೆ ಮಜ್ಜನ ಭೋಜನ ನೈವೇದ್ಯವ ಮಾಡಿ, ಪ್ರಸಾದವ ಕೊಳ್ಳಬೇಕು ಎನ್ನುತ್ತಾಳೆ.

ಮೊದಲನೇ ಸಾಲಿನಲ್ಲಿ ಕರ್ತೃವೇ ಮಾಲೀಕನಾದರೆ, ಎರಡನೇ ಸಾಲಿನಲ್ಲಿ ಆ ಮಾಲೀಕನೆ ಲಿಂಗಯ್ಯನಾಗಿದ್ದಾನೆ, ಸೇವಕ ಭಕ್ತನಾಗಿ ಪರಿವರ್ತನೆ ಯಾಗಿದ್ದಾನೆ.

ಕರ್ತೃವಿಗೆ ಭೃತ್ಯನಾಗಿ ಸದಾ ಆತನಿಗೆ ಉತ್ತಮ ವಸ್ತುಗಳನ್ನೇ ಕೊಡಬೇಕು. ಉತ್ತಮ ಸ್ಥಳಕ್ಕೆ ಕರೆದುಕೊಂಡು ಹೋಗಬೇಕು. ಕರ್ತೃವೆಂದರೆ ಆತ ಅಂತಿಂಥ ಕರ್ತೃವಲ್ಲ ! ಬಿಂದುವಿನಲ್ಲಿ ತಾನಿದ್ದು ಗರ್ಭ ಹೊಕ್ಕು, ಪಿಂಡವಾಗಿ, ರಕ್ತ ಮಾಂಸ ಮೂಳೆಯಾಗಿ, ಮಜ್ಜಾ ಮೇದಸ್ಸು ಆಗಿ ಇವೆಲ್ಲವುಗಳನ್ನು ಚರ್ಮದಿಂದ ಬಂಧಿಸಿ, ಆ ಚರ್ಮದಲ್ಲಿಯೂ ತಾನಿದ್ದು, ತನುವಿನ ಕರ್ತೃವಾಗಿ ಗರ್ಭದಿಂದ ಹೊರಬಂದಿದ್ದಾನೆ. ಅಂದಮೇಲೆ ತನುವೆಂಬುದು ಕರ್ತೃವಿನ ತನುವಾಗಲಿಲ್ಲವೆ? ಆ ತನುವಿನ ಮನೆಯಲ್ಲಿ ತಾನಿದ್ದು, ಮನ ವೆಂಬ ಭೃತ್ಯನನ್ನು ಆಳಾಗಿ ಇಟ್ಟುಕೊಂಡಿದ್ದಾನೆ.

ಕರ್ತೃ ತನುವೆಂಬ ಮನೆಯಲ್ಲಿ ಸದಾಕಾಲ ವಾಸವಾಗಿದ್ದಾನೆ. ಈ ಮನೆ ಕಾಯಲು ಜಾಗ್ರ, ಸ್ವಪ್ನ, ಸುಷುಪ್ತಿ ಎಂದು ಮೂರು ಶಿಫ್ಟ್‌ಗಳನ್ನಾಗಿ ವಿಂಗಡಿಸಿ ಮನವೆಂಬ (ಭೃತ್ಯ) ಸೇವಕನನ್ನು ಕಾವಲುಗಾರನನ್ನಾಗಿ ನೇಮಿಸಿದ್ದಾನೆ.

ಜಾಗ್ರ (ಹಗಲು)ದಲ್ಲಿ ಮಾಲೀಕನಿಗೆ ಸೇವಕನಾದವನು ಶೌಚ ಮುಖ ಮಜ್ಜನಾದಿಗಳನ್ನು ಮಾಡಿಸಿ, ಸುಗಂಧ ದ್ರವ್ಯಾದಿಗಳನ್ನು ಹಚ್ಚಿ, ನಾನಾ ತರಹದ ಹೂಗಳಿಂದ ತನುವನ್ನು ಪೂಜಿಸಿ, ಅಲಂಕರಿಸಿ, ಧೂಪ ದೀಪಗಳನ್ನು ಬೆಳಗಿ, ಉತ್ತಮ ಪದಾರ್ಥಗಳನ್ನು ಭೋಜನಕ್ಕೆ ಎಡೆಮಾಡಬೇಕು. ಸೇವಕ ಮಾಲಿಕನಿಗೆ ಉಣ್ಣಿಸುತ್ತ ತಾನುಣ್ಣಬೇಕು.

ಕಣ್ಣಿನಲ್ಲಿ ಅರಿವೆಂಬ ಮಾಲೀಕನಿದ್ದು ನೋಡುತ್ತಾನೆ, ಕಿವಿಯಲ್ಲಿ ತಾನಿದ್ದು ಕೇಳುತ್ತಾನೆ, ನಾಲಿಗೆಯಲ್ಲಿ ತಾನಿದ್ದು ರುಚಿಸುತ್ತಾನೆ, ಮೂಗಿನಲ್ಲಿ ತಾನಿದ್ದು ವಾಸಿಸುತ್ತಾನೆ, ಚರ್ಮದಲ್ಲಿ

ತಾನಿದ್ದು ಸ್ಪರ್ಶಿಸುತ್ತಾನೆ ಹೀಗೆ ತನುವಿನ ತುಂಬಾ ಕಣ್ಣಾಗಿ ನೋಡುವ ಆತನಿಗೆ ಉತ್ತಮವಾದದ್ದನ್ನೇ ಸೇವಕನಾದವನು ತೋರಿಸಬೇಕು. ಉತ್ತಮವಾದದ್ದನ್ನೇ ಕೇಳಿಸಿ, ರುಚಿಸಿ, ಸ್ಪರ್ಶಿಸಿ ಮಾಲೀ ಕನನ್ನು ಸದಾ ಆನಂದದಲ್ಲಿಡಬೇಕು. ಇದು ಸೇವಕನ ಕೆಲಸ. ಇದೇ ಕರ್ತೃ ಭೃತ್ಯರ ಭೇದ.

ಸ್ವಪ್ನದಲ್ಲಿ ಕೂಡಾ ಮನವೆಂಬ ಸೇವಕ ತನುವಿನ ಮಾಲೀಕನಿಗೆ ಜಾಗ್ರದಲ್ಲಿ ಮಾಡಿದ ಉತ್ತಮ ಕೆಲಸಗಳನ್ನೇ ನೆನೆಯಬೇಕು. ಸುಷುಪ್ತಿಯಲ್ಲಿ ಕೂಡಾ ಏನೇನೂ ಅರಿಯದಂತೆ ಮಾಲೀಕನನ್ನೇ ಆರಾಧಿಸುತ್ತಾ ಗಾಢವಾದ ನಿದ್ರೆ ಮಾಡಬೇಕು.

**ಲಿಂಗಭಕ್ತನಾದಡೆ ಜಂಗಮಪಾದತೀರ್ಥಪ್ರಸಾದವ ಲಿಂಗಕ್ಕೆ ಮಜ್ಜನ ಭೋಜನ ನೈವೇದ್ಯವ ಮಾಡಿ, ಪ್ರಸಾದವ ಕೊಳ್ಳಬೇಕು. ಇದೇ ವರ್ಮ, ಇದೇ ಧರ್ಮ ಕಾಣಾ ಚೆನ್ನಮಲ್ಲಿಕಾರ್ಜುನಾ :**

ಅಲ್ಲಿಯ ಕರ್ತೃವೇ ಇಲ್ಲಿ ಲಿಂಗಯ್ಯನಾಗಿದ್ದಾನೆ. ಅಲ್ಲಿಯ ಭೃತ್ಯನೇ ಇಲ್ಲಿ ಭಕ್ತನಾಗಿದ್ದಾನೆ. ಇಬ್ಬರ ವಾಸ ತನುವಿನಲ್ಲಿಯೇ. ತನುವು ಯಾವ ಗರ್ಭದಿಂದ ಬಂದರೇನು? ಲಿಂಗಯ್ಯನವಾಸ ಭಕ್ತನ ವಾಸ ತನುವಿ ನಲ್ಲಿಯೇ. ನೋಡಿದ ಪದಾರ್ಥ ಅರಿವೆಂಬ ಲಿಂಗಯ್ಯನಿಗರ್ಪಿಸಿ ಭಕ್ತ ಸೇವಿಸಬೇಕು. ಕೇಳಿದ ಶಬ್ದ ಲಿಂಗಯ್ಯನಿಗೆ ಅರ್ಪಿಸಿ ಸೇವಿಸಬೇಕು. ವಾಸಿಸಿದ ಪರಿಮಳ, ರುಚಿಸಿದ ಪ್ರಸಾದ, ಸ್ಪರ್ಶಿಸಿದ ವಸ್ತುಗಳೆಲ್ಲ ಲಿಂಗಯ್ಯ ನಿಗೆ ಅರ್ಪಿಸಿ ಭಕ್ತ ಸೇವಿಸಬೇಕು.

ಭಕ್ತನಾದವನು ನೇರವಾಗಿ ಕರೆನ್ಸಿ ನೋಡಿದರೆ ತಳಮಳಗೊಳ್ಳುತ್ತಾನೆ. ಲಿಂಗಯ್ಯನಿಗರ್ಪಿಸಿದರೆ ಆತ ಮುದ್ರಿಸಿದ ಕಾಗದವೆಂದು ಉದಾಸೀನ ಮಾಡುತ್ತಾನೆ. ಭಕ್ತ ಚಿನ್ನ ನೋಡಿದರೆ ಲಿಂಗಯ್ಯ ಲೋಹವೆಂದು ಉದಾಸೀನಗೊಳ್ಳುತ್ತಾನೆ. ಭಕ್ತ ಚರ್ಮ ನೋಡಿದರೆ ಲಿಂಗಯ್ಯ ತನ್ನಂತೆ ಇರುವ ತನುವೆಂದು ಮೈದಡುವುತ್ತಾನೆ. ಅಧಿಕಾರಿ, ಶ್ರೀಮಂತ, ಭ್ರಷ್ಟ, ಕಳ್ಳ, ಹಾದರಿಗ ತನುಗಳನ್ನು ಕೂಡ ತನ್ನಂತೆ ಗೌರವಿಸಿ, ತನುವಿನ ಕಷ್ಟ ಕಾರ್ಪಣ್ಯಗಳನ್ನು ಲಿಂಗಯ್ಯ ಕಳೆಯುತ್ತಾನೆ. ತನುವಿಗೆ ಬಡಿದ ಶಬ್ದಗಳನ್ನು ಕರಗಿಸಿ ಜ್ಞಾನ ಮಾಡಿ ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತಾನೆ. ಶಬ್ದ ಬಹ್ಮನಾಗುತ್ತಾನೆ. ನೋಡಿದ ಅಸಹ್ಯ ದೃಶ್ಯಗಳನ್ನೆಲ್ಲ ನಷ್ಟ ಮಾಡಿ ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತಾನೆ. ಸ್ಪರ್ಶಿಸಿದ ವಸ್ತುಗಳನ್ನು ಅನಾವರಣ ಮಾಡಿ ಕುಂದಿಲ್ಲದಂತೆ ಮುಟ್ಟುತ್ತಾನೆ.

ಅರಿವೆಂಬ ಲಿಂಗಯ್ಯನಲ್ಲಿ ಮನವೆಂಬ ಭಕ್ತ ಕೂಡಿ, ಲಿಂಗಭಕ್ತನಾಗಿ ನೋಡುವ ನೋಟವೆಲ್ಲ ಲಿಂಗ. ಕೇಳುವ ಶಬ್ದವೆಲ್ಲ ಲಿಂಗ, ರುಚಿಸುವ ಪದಾರ್ಥವೆಲ್ಲ ಪ್ರಸಾದ, ವಾಸಿಸುವ ಗಂಧವೆಲ್ಲ ಪರಿಮಳ, ಮುಟ್ಟುವ ವಸ್ತುವೆಲ್ಲ ಜಂಗಮ ! ಇದೇ ಲಿಂಗ ಭಕ್ತನ ವರ್ಮ, ಇದೇ ಲಿಂಗಭಕ್ತನ ಧರ್ಮ, ಇದೇ ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ದೇವರ ವಾಸಸ್ಥಾನ ! ಎಂದು ಅಕ್ಕ ಬಿತ್ತರಿಸಿದ್ದಾಳೆ.

□

# ನುಡಿದು ಬೆಳಗುವ ಮುತ್ತು

ಮುತ್ತು ನೀರಲಾಯಿತ್ತು, ವಾರಿಕಲ್ಲು ನೀರಲಾಯಿತ್ತು,
ಉಪ್ಪು ನೀರಲಾಯಿತ್ತು.
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು,
ಮುತ್ತು ಕರಗಿದುದನಾರೂ ಕಂಡವರಿಲ್ಲ.
ಈ ಸಂಸಾರಿ ಮಾನವರು ಲಿಂಗವ ಮುಟ್ಟಿ ಭವಭಾರಿಗಳಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ.

ನೀರಲ್ಲಿ ಹುಟ್ಟಿದ ಉಪ್ಪು, ನೀರಲ್ಲಿ ಹುಟ್ಟಿದ ವಾರಿಕಲ್ಲು, ನೀರಲ್ಲಿ ಹುಟ್ಟಿದ ಮುತ್ತು, ನೀರಲ್ಲಿಯೇ ಹುಟ್ಟಿದ ತನು. ಉಪ್ಪು, ವಾರಿಕಲ್ಲು ಕರಗಿದರೂ, ಮುತ್ತು ಮುತ್ತಿನಂತೆ ಹೊಳೆಯುವ ತನು ಕರಗುವುದಿಲ್ಲ.

ಮುತ್ತು ಹೊಳೆಯುವ ಮೂಲಕ ನುಡಿದರೆ, ತನು ನುಡಿಯುವ ಮೂಲಕ ಹೊಳೆಯಬೇಕು.

ಕೈಯದು ಕುರುಹು, ಬಾಯದು ಬೊಬ್ಬೆ ಉಲಿಯದಿರೊ ಭಾವಾ ಉಲಿಯದಿರೊ ಭಾವ! ವಾರಿಕಲ್ಲ ಕೊಡನ ತುಂಬಾ ಮುತ್ತು ಮಾಣಿಕ್ಯವ ತುಂಬಿ, ಎತ್ತುವವರಿಲ್ಲದೆ ಸಖಿಯನರಸುತ್ತಿಪ್ಪೆ. ಮನದ ತನುವಿನಲ್ಲಿ ಆ ತನುವಿನ ಮನದಲ್ಲಿ, ಮನ ಮೇರೆದಪ್ಪಿ, ತನಗೆ ತಾನೆತ್ತಿಕೊಂಡಡೆ, ಉಕ್ಕಿ ಹರಿದಿತ್ತಾ ಅಜಗಣ್ಣನ ಭಾವ.

ಮುಕ್ತಾಯಕ್ಕ ವಾರಿಕಲ್ಲ ಕೊಡವೆಂಬ ತನುವಿನ ಕುರಿತು ಹಾಡಿದ್ದಾಳೆ. ತನುವೆಂಬುದು ವಾರಿಕಲ್ಲಕೊಡ. ಇದರಲ್ಲಿ ಮುತ್ತು ಮಾಣಿಕ್ಯಗಳು ತುಂಬಿವೆ. ತನಗೆ ತಾನೆ ಬಗಿದುಕೊಂಡು ಬಳಸಿಕೊಳ್ಳಬೇಕು. ಆದರೆ ಮನ ಜ್ಞಾನವನ್ನು ತನುವಿನಲ್ಲಿ ಹುಡುಕದೆ ಪುಸ್ತಕದಲ್ಲಿ, ಅನ್ಯ ತನುವೆಂಬ ಸಖಿಯ ಮೂಲಕ ಹುಡುಕ ಹೊರಟಿದೆ. ಹುಡುಕುವ ಮನದ ಮೇರೆ ತಪ್ಪಿದರೆ ಸಾಕು ತನುವಿನಲ್ಲಿಯ ಜ್ಞಾನದ ಬುಗ್ಗೆ ಹರಿಯುತ್ತದೆ. ಎಂದು ಮಸರಕಲ್ಲಿನ ಮುಕ್ತಾಯಕ್ಕ ಸುಂದರವಾದ ಜ್ಞಾನದ ಸೂತ್ರವನ್ನು ಹೆಣೆದಿದ್ದಾಳೆ.

ಜಲದಿಂದ ಮುತ್ತು ನಿರ್ಮಾಣವಾಗಿದೆ, ಮಾನವ ಕೂಡಾ ಜಲಬಿಂದುವಿನಿಂದಲೇ ಮುತ್ತಿನಂತೆ ಗಟ್ಟಿಗೊಂಡಿದ್ದಾನೆ. ಆದರೆ ತಾನೇ ಮುತ್ತೆಂದು ತಿಳಿಯಲು ಸಾಧ್ಯವಾಗಿಲ್ಲ. ತನುವನ್ನು ಬೆಳಗುವ ಅರಿವೆಂಬ ಲಿಂಗಯ್ಯನನ್ನು ಮನವೆಂಬ ತಾನು ಮುಟ್ಟದೆ, ಕಲ್ಲೆಂಬ ಲಿಂಗವನ್ನು ಮುಟ್ಟಿ ಭವಭಾರಿಯಾಗಿದ್ದಾನೆ.

ತನುವನ್ನು ಬೆಳಗುವ ಚೆನ್ನಮಲ್ಲಿಕಾರ್ಜುನನೆಂಬ ಅರಿವನ್ನು ಮನ ಮುಟ್ಟಿ ಕರಿಗೊಳ್ಳುವ ಬಗ್ಗೆ ಅಕ್ಕ ಸರಳವಾಗಿ ಸಕಲರಿಗೂ ತಿಳಿಯುವಂತೆ ಹೇಳಿದ್ದಾಳೆ.

□

# ಲಿಂಗ ಜಂಗಮಕ್ಕೆ ರೂಪ ಸಲ್ಲಿಸುವ ಸೂತ್ರ

ಲಿಂಗಕ್ಕೆ ರೂಪ ಸಲಿಸುವೆ,
ಜಂಗಮಕ್ಕೆ ರೂಪ ಸಲಿಸುವೆ.
ಕಾಯಕ್ಕೆ ಶುದ್ಧ ಪ್ರಸಾದವ ಕೊಂಬೆ,
ಪ್ರಾಣಕ್ಕೆ ಸಿದ್ಧ ಪ್ರಸಾದವ ಕೊಂಬೆ.
ನಿಮ್ಮ ಪ್ರಸಾದದಿಂದ ಧನ್ಯಳಾದೆನು
ಕಾಣ ಚೆನ್ನಮಲ್ಲಿಕಾರ್ಜುನಯ್ಯಾ.

**ಲಿಂಗಕ್ಕೆ ರೂಪ ಸಲಿಸುವೆ, ಜಂಗಮಕ್ಕೆ ರೂಪ ಸಲಿಸುವೆ :**

ಕಣ್ಣು ನೋಡಿದ ರೂಪವನ್ನು ಲಿಂಗಕ್ಕೆ ಸಲ್ಲಿಸುವುದು ಸರಳ ಮಾತಲ್ಲ; ಆ ರೂಪವನ್ನು ಜಂಗಮಕ್ಕೆ ಸಲ್ಲಿಸುವುದು ಇನ್ನೂ ಜಟಿಲ. ಇಂತಹ ಜಟಿಲ ಮಾತುಗಳನ್ನು ಅಕ್ಕ ಸರಳವಾಗಿ ಹೇಳಿದ್ದಾಳೆ.

ರಾವಣ ಫಲಪದಂಗಳ ನೀಡುವ ಶಿವನನ್ನು ಒಲಿಸಿಕೊಂಡಿದ್ದ. ಬಲ ಶಾಲಿಯಾಗಿದ್ದ. ಆಯುಷ್ಯವನ್ನು ವೃದ್ಧಿಸಿಕೊಂಡಿದ್ದ. ತಂಗಿ ಶೂರ್ಪನಖಿಗೆ ಲಕ್ಷ್ಮಣ ಮಾಡಿದ ಅಪಮಾನ ಸಹಿಸಿಕೊಳ್ಳದ ರಾವಣ ಲಕ್ಷ್ಮಣನನ್ನು ಕೊಲ್ಲಲು ಬಂದ. ಸೀತೆಯ ರೂಪ ನೋಡಿ ವಿಷಯಾಸಕ್ತನಾದ. ಆ ರೂಪ ಕಣ್ಣಿನಲ್ಲಿ ದೇಹದಲ್ಲಿ, ವಿಷಯದ ಸಂಕಟ ಉಂಟುಮಾಡಿತು. ಬಂದ ಉದ್ದೇಶ ಮರೆತುಹೋಯಿತು. ಕಣ್ಣಿನಲ್ಲಿ ಸೀತೆಯ ಚೆಲುವು ನರ್ತನ ಮಾಡಿತು. ಅಪ್ಪಿಕೊಂಡು ಸುಖಪಡಲು ಸೀತಾಮಾತೆಯನ್ನೆ ಕಬಳಿಸಿತು. ಶ್ರೀರಾಮ ರಾವಣನ ಅಪಾರ ಸೈನ್ಯವನ್ನು, ಕುಟುಂಬವನ್ನು ಹಾಗೂ ರಾವಣನನ್ನು ಕೊಂದ.

ಶ್ರೀರಾಮ ಮಹಾರಾಜ. ಆತನಿಗೆ ಕೈಕೇಯಿಯ ಶಬ್ದ ಪ್ರಸಾದವಾಗಲಿಲ್ಲ, ಕಾಡಿಗೆ ತೆರಳಿದ. ರೂಪ ಪ್ರಸಾದವಾಗಲಿಲ್ಲ, ಸೀತಾಮಾತೆಗಾಗಿ ಕಾಡೆಲ್ಲಾ ಅಲೆದ. ರಾವಣನೂ ಮಹಾರಾಜ. ರೂಪ ಕಣ್ಣಿಗೆ, ಕಾಯಕ್ಕೆ, ಪ್ರಾಣಕ್ಕೆ, ಪ್ರಸಾದವಾಗಲಿಲ್ಲ, ಸೀತಾಮಾತೆಗಾಗಿ ಪ್ರಾಣ ಕಳೆದುಕೊಂಡ. ಸೀತಾಮಾತೆಯೂ ಮಹಾರಾಣಿ. ಶ್ರೀರಾಮನಿಗಾಗಿ ಹಗಲಿರಳು ರೋಧಿಸಿದಳು.

ಅಕ್ಕಮಹಾದೇವಿಯೂ ಮಹಾರಾಣಿ, ಗಂಡ ಕೌಶಿಕನೂ ಮಹಾರಾಜ. ರೂಪಕ್ಕಾಗಿ ಹಗಲಿರಳು ಹಾತೊರೆಯುವ ಕೌಶಿಕನನ್ನು ಅಕ್ಕ ಕೊಡವಿದಳು. ಆ ರೂಪದ ನಿರೂಪವನ್ನೇ ಸವಿದು ರೂಪದ ಅಹಂಕಾರ ತುಳಿದಳು. ಚೆನ್ನಮಲ್ಲಿಕಾರ್ಜುನನೆಂದು ನಿರೂಪಕ್ಕೆ ನಾಮಕರಣ ಮಾಡಿ ಆತನನ್ನೆ ಗಂಡ ನನ್ನಾಗಿಸಿಕೊಂಡಳು. ಆ ಅರಿವೆಂಬ ಗಂಡನೊಂದಿಗೆ ಕಣ್ಣಲ್ಲಿ, ಕಾಯದಲ್ಲಿ, ಪ್ರಾಣದಲ್ಲಿ ಕೂಡಿ ಆ ಪ್ರಸಾದದಿಂದ ಸುಖಿಸಿ ಧನ್ಯಳಾದೆ. ಎಂದಿದ್ದಾಳೆ ಅಕ್ಕ.

ಮನೆಯಲ್ಲಿ ಹಬ್ಬದಡಿಗೆ ಮಾಡಿ, ಲಿಂಗಯ್ಯನಿಗೆ ಧೂಪ ದೀಪಾರತಿಯ ಬೆಳಗಿ, ನೈವೇದ್ಯ ಸಲ್ಲಿಸಿ ಉಣ್ಣುವಂತಲ್ಲ ! ನೋಡಿದ ರೂಪ ಕಣ್ಣು ಬಳಸಿ ಹಾದರ ಮಾಡಬಾರದು. ಅರಿವೆಂಬ ಲಿಂಗ ಜಂಗಮಕ್ಕೆ ಆ ರೂಪ ಸಲ್ಲಿಸ ಬೇಕು; ಕಾಯದಲ್ಲಿ ಹಾದರದ ತಳಮಳ ಉಂಟಾಗಬಾರದು.

ರೂಪದಿಂದ ಕಣ್ಣಿನಲ್ಲಿ ಉಂಟಾದ ವಿಷಯವನ್ನು ಲಿಂಗವೆಂಬ ಅರಿವಿನಲ್ಲಿ ಸೋಸಿ, ಅದನ್ನು ಅರಿವಿನ ಫಲದಂಕಮಲ್ಲನೆಂಬ ಜಂಗಮಕ್ಕೆ ಸಲ್ಲಿಸಬೇಕು. ಆಗ ರೂಪ ನೋಡುವ ಕಣ್ಣಿಗೆ, ರೂಪಕ್ಕೆ ಕಾರಣವಾದ ನಿರೂಪ ಮಾತ್ರ ಕಾಣುತ್ತದೆ. ಆ ನಿರೂಪವೆಂಬ ಶುದ್ಧ ಪ್ರಸಾದವನ್ನು ಕಾಯಕ್ಕೆ ಸಲ್ಲಿಸಿ, ಆ ಸಿದ್ದ ಪ್ರಸಾದವನ್ನೆ ಪ್ರಾಣಕ್ಕೆ ಸಲ್ಲಿಸಿದಾಗ, ಕಣ್ಣು, ಕಾಯ, ಪ್ರಾಣ ನಿರೋಗಿಯಾಗಿ ಧನ್ಯವಾಗುವುದು.

□

---

**ಅರಿವಿನ ಪರಿಮಳ**

□ ಶ್ರೀರಾಮ ಮಹಾರಾಜ. ಆತನಿಗೆ ಕೈಕೇಯಿಯ ಶಬ್ದ ಪ್ರಸಾದವಾಗಲಿಲ್ಲ, ಕಾಡಿಗೆ ತೆರಳಿದ. ರೂಪ ಪ್ರಸಾದವಾಗಲಿಲ್ಲ, ಸೀತಾಮಾತೆಗಾಗಿ ಕಾಡೆಲ್ಲಾ ಅಲೆದ. ರಾವಣನೂ ಮಹಾರಾಜ. ರೂಪ ಕಣ್ಣಿಗೆ, ಕಾಯಕ್ಕೆ, ಪ್ರಾಣಕ್ಕೆ, ಪ್ರಸಾದವಾಗಲಿಲ್ಲ, ಸೀತಾಮಾತೆಗಾಗಿ ಪ್ರಾಣ ಕಳೆದುಕೊಂಡ. ಸೀತಾಮಾತೆಯೂ ಮಹಾರಾಣಿ. ಶ್ರೀರಾಮನಿಗಾಗಿ ಹಗಲಿರಳು ರೋಧಿಸಿದಳು.

□ ಅಕ್ಕಮಹಾದೇವಿಯೂ ಮಹಾರಾಣಿ, ಗಂಡ ಕೌಶಿಕನೂ ಮಹಾರಾಜ. ರೂಪಕ್ಕಾಗಿ ಹಗಲಿರಳು ಹಾತೊರೆಯುವ ಕೌಶಿಕನನ್ನು ಅಕ್ಕ ಕೊಡವಿದಳು. ಆ ರೂಪದ ನಿರೂಪವನ್ನೇ ಸವಿದು ರೂಪದ ಅಹಂಕಾರ ತುಳಿದಳು. ಚೆನ್ನಮಲ್ಲಿಕಾರ್ಜುನನೆಂದು ನಿರೂಪಕ್ಕೆ ನಾಮಕರಣ ಮಾಡಿ ಆತನನ್ನೆ ಗಂಡ ನನ್ನಾಗಿಸಿಕೊಂಡಳು. ಆ ಅರಿವೆಂಬ ಗಂಡನೊಂದಿಗೆ ಕಣ್ಣಲ್ಲಿ, ಕಾಯದಲ್ಲಿ, ಪ್ರಾಣದಲ್ಲಿ ಕೂಡಿ ಆ ಪ್ರಸಾದದಿಂದ ಸುಖಿಸಿ ಧನ್ಯಳಾದಳು.

# ತನುವಿನ ಅರಿವೇ ಗುರು ಆ ಗುರುವಿನ ಗುರುವೇ ಜಂಗಮ

**ಲಿಂಗಕ್ಕೆ ಶರಣೆಂದು ಪೂಜಿಸಿ ಅರ್ಪಿಸಬಹುದಲ್ಲದೆ,**
**ಜಂಗಮವ ಪೂಜಿಸಿ ಸರ್ವಸುಖವನರ್ಪಿಸಿ**
**ಶರಣೆನ್ನಬಾರದು ಎಲೆ ತಂದೆ.**
**ಆಡಬಹುದು ಪಾಡಬಹುದಲ್ಲದೆ,**
**ನುಡಿದಂತೆ ನಡೆಯಲು ಬಾರದು ಎಲೆ ತಂದೆ,**
**ಚೆನ್ನಮಲ್ಲಿಕಾರ್ಜುನದೇವಾ.**
**ನಿಮ್ಮ ಶರಣರು ನುಡಿದಂತೆ ನಡೆಯಲು ಬಲ್ಲರು ಎಲೆ ತಂದೆ.**

ಲಿಂಗ ಜಂಗಮ ಭಕ್ತ ಭವಿ ಎನ್ನುವ ಪದಗಳು ವ್ಯಕ್ತಿಯಲ್ಲ, ವ್ಯಕ್ತಿ ಸೂಚಕ ಪದಗಳೂ ಅಲ್ಲ, ತನುವಿನಲ್ಲಿರುವ ವ್ಯವಸ್ಥೆ. ಆ ವ್ಯವಸ್ಥೆಗಳನ್ನು ಮನ ಸರಳ ತಂತ್ರದೊಂದಿಗೆ ಬಳಸಿಕೊಳ್ಳಲು ಅಕ್ಕ ಸುಲಭವಾದ ಉಪಾಯ ಕಂಡುಹಿಡಿದಿದ್ದಾಳೆ.

ಭವಿಯಾಗಿದ್ದ ಮನ ಮೆಲ್ಲ ಮೆಲ್ಲನೆ ಭಕ್ತನಾಗಿ, ಆ ಭಕ್ತನೇ ಅರಿವೆಂಬ ಲಿಂಗವನ್ನು ಆರಾಧಿಸಿ ಜಂಗಮನಾಗುವುದು.

**ಲಿಂಗಕ್ಕೆ ಶರಣೆಂದು ಪೂಜಿಸಿ ಅರ್ಪಿಸಬಹುದಲ್ಲದೆ, ಜಂಗಮವ ಪೂಜಿಸಿ ಸರ್ವಸುಖವನರ್ಪಿಸಿ ಶರಣೆನ್ನಬಾರದು ಎಲೆ ತಂದೆ:**

ತನುವಿನ ಕಣ ಕಣದಲ್ಲಿರುವ ಅರಿವೆಂಬ ಲಿಂಗಕ್ಕೆ ಶರಣು ಹೋಗಿ, ಆರಾಧಿಸಿ ನೋಡಿದ ದೃಷ್ಯವನ್ನು, ಕೇಳಿದ ಶಬ್ದವನ್ನು, ರುಚಿಸುವ ಪದಾರ್ಥವನ್ನು ವಾಸಿಸಿದ ಪರಿಮಳವನ್ನು ಅರ್ಪಿಸಬಹುದು.

ಜಂಗಮವನ್ನು ಪೂಜಿಸಿ ಸರ್ವಸುಖವನ್ನು ಅರ್ಪಿಸಿ ಶರಣೆನ್ನುವುದು ಬಲು ಜಟಿಲವಾದ ಕೆಲಸ. ಇದು ಶರಣರಿಗೆ ಮಾತ್ರ ಸಾಧ್ಯವಾದ ಕೆಲಸ ಎಂದು ಅಕ್ಕ ಹೇಳಿದ್ದಾಳೆ.

‘ ಜಂಗಮ ನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೊ? ಶಿವಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು. ಗುರುವಿನ ಗುರು ಜಂಗಮ–ಇಂತೆಂದುದು ಕೂಡಲಸಂಗನ ವಚನ ’

ಜಂಗಮವನ್ನು ಪೂಜಿಸಿ ಸರ್ವಸುಖವನ್ನರ್ಪಿಸುವುದು ಜಟಿಲವೆಂದು ಅಕ್ಕ ಹೇಳಿದರೆ ಬಸವಣ್ಣ ಜಂಗಮನಿಂದೆಯ ಮಾಡುವುದನ್ನು ಖಂಡಿಸಿದ್ದಾರೆ. ಒಂದೆಡೆ ಪೂಜಿಸಿ ಮತ್ತೊಂದೆಡೆ ನಿಂದಿಸುವ ಪಾತಕವನ್ನು ಕೇಳಲಾಗದು. ಜಂಗಮ ಗುರುವಿನ ಗುರು; ಅರಿವಿನ ಸೂಕ್ಷ್ಮ ಅಹಂಕಾರವನ್ನು ಕಳೆಯುವ ಒಡಲೊಡೆಯ ! ಒಡಲಿಗೂ ಒಡಲ ಮನಕ್ಕೂ ಒಡಲಿನ ಅರಿವಿಗೂ ಬಿಚ್ಚುಗತ್ತಿಯ ಕಾವಲುಗಾರ. ಜಂಗಮನ ಪರಿಚಯ ಶಬ್ದಗಳಿಂದ ಮಾಡಿಸುವುದು ಜಟಿಲ. ಅದಕ್ಕಾಗಿಯೇ ಶರಣರು ಜಂಗಮನ ಸುಖ ಅನುಭವಿಸಿ ಆ ಸುಖವನ್ನು ತಮ್ಮ ವಚನಗಳಲ್ಲಿ ಬೆಡಗಿನ ಶಬ್ದಗಳಿಂದ ಬಣ್ಣಿಸಿದ್ದಾರೆ. ಜಂಗಮನನ್ನು ಗುರುವಿನ ಗುರು ಎಂದು ಕರೆದಿದ್ದಾರೆ.

ಸಾಮಾಜಿಕ ಸ್ಥಾನ ಮಾನಗಳನ್ನು ಪಡೆದು ಪೀಠ ಅಲಂಕರಿಸಿದ ಗುರುಗಳು ತಮ್ಮ ಅಹಂಕಾರ ಕಳೆದುಕೊಳ್ಳಲು ಮತ್ತೊಬ್ಬ ಗುರುವಿಗೆ ಶಿಷ್ಯರಾಗಿ ತಮ್ಮ ತನುವಿನ ಸಂಕಟ ಕಳೆದುಕೊಳ್ಳಲು ಬಯಸುವುದಿಲ್ಲ, ತನುವಿನ ಗುರುವಿಗೆ ಭಕ್ತನಾಗಿ, ತನುವಿನ ಜಂಗಮನ ಮಾತು ಕೇಳಲು ಸಾಧ್ಯವಾಗುವುದಿಲ್ಲ, ಇದು ಸೂಕ್ಷ್ಮ ಹಾಗು ಜಟಿಲ ವಿಷಯ. ಇದನ್ನು ಒಂದು ನೈಜ ಕತೆಯ ಮೂಲಕ ವಿವರಿಸಲು ಪ್ರಯತ್ನಿಸಲಾಗಿದೆ.

ಸಂತ ಕಬೀರರ ವಾರ್ತೆಯನ್ನು ಆಸ್ಥಾನದ ಸಂಪ್ರದಾಯ ಗುರುಗಳಿಗೆ ಸಹಿಸಲು ಸಾಧ್ಯವಾಗಲಿಲ್ಲ, ಪ್ರತಿದಿನ ಆಸ್ಥಾನದಲ್ಲಿ ಕಬೀರರ ಮಾತುಗಳೆ ಉದಾಹರಿಸಲ್ಪಡುತ್ತಿದ್ದವು. ಒಮ್ಮೆ ಸಂತರ ಕುಟೀರದ ಮುಂದೆ ಸುಂದರವಾದ ಹೆಂಗಸು ರಂಪಮಾಡಹತ್ತಿದಳು . ನಾನು ಇವರ ಹೆಂಡತಿ; ಇವರಿಗಾಗಿ ಎಲ್ಲೆಡೆ ಹುಡಕಿದೆ ಸಿಕ್ಕಲಿಲ್ಲ, ನನ್ನನ್ನು ಒಂಟಿಯಾಗಿ ಬಿಟ್ಟು ರಾತ್ರೋರಾತ್ರಿ ಇಲ್ಲಿ ಬಂದು ಸೇರಿದ್ದಾರೆ. ನನಗೆ ನ್ಯಾಯ ಒದಗಿಸಿ ಎಂದು ಊರ ಪ್ರಮುಖರನ್ನು ಸೇರಿಸಿ ಒತ್ತಾಯಿಸಿದಳು. ಕಬೀರರು ಏನೂ ಮಾತನಾಡದೆ ಹಸನ್ಮುಖಿಯಾಗಿದ್ದರು. ಹ್ಯಾಗೆ ನಗುತ್ತಾನೆ ನೋಡಿ ಮಳ್ಳ ಎಂದು ಅವಾಚ್ಯಶಬ್ದಗಳಿಂದ ನುಡಿದಳು. ಆಕೆಯ ರೋಧನ ಅಧಿಕವಾಯಿತು. ಆಸ್ಥಾನ ಪಂಡಿತರು ಗುರುಗಳು ಕಬೀರರನ್ನು ಆಕೆಯನ್ನು ರಾಜನ ಮುಂದೆ ಹಾಜರು ಪಡಿಸಿದರು. ಮಹಾರಾಜ ನಾನು ಕಬೀರರ ಹೆಂಡತಿ ದಯವಿಟ್ಟು ನನಗೆ ನ್ಯಾಯ ಒದಗಿಸಿ ಎಂದು ಕೇಳಿದಳು. ಈ ಕುರಿತು ಕಬೀರರನ್ನು ಕೇಳಲು; ಹೌದು ಆಕೆ ಹೇಳುವುದಾದರೆ ಸತ್ಯ. ನಡೆಯಿರಿ ಮನೆಗೆ ಹೋಗೋಣ. ಸಂಸಾರ ಹೂಡೋಣ ಇಷ್ಟು ಚಿಕ್ಕ ವಿಷಯಕ್ಕೆ ಇಲ್ಲಿಯವರೆಗೆ ಕರೆದುತರುವುದೆ ಎಂದು ಸಂತ ಕಬೀರರು ನುಡಿದರು.

ಕಬೀರರು ಸುಲಭವಾಗಿ ಒಪ್ಪಿಕೊಂಡದ್ದಕ್ಕೆ ಆಕೆ ಗಾಬರಿಯಾದಳು. ಆಸ್ಥಾನದ ಪಂಡಿತ ಗುರುಗಳು ಸೇರಿ ಕಬೀರರ ಮರ್ಯಾದೆ ಕಳೆಯಬೇಕೆಂದು ನಿರ್ಧರಿಸಿ ವೇಶ್ಯೆವೃತ್ತಿಯಲ್ಲಿದ್ದವಳನ್ನು ಕಬೀರರ ಕುಟೀರಕ್ಕೆ ಕಳುಹಿಸಿದ್ದರು. ಕಬೀರರ ಹೆಂಡತಿಯಾಗಿ ಕುಟೀರಕ್ಕೆ ಹೋದರೆ ತನ್ನ ಗತಿಯೇನು? ಭಿಕ್ಷೆಯ ಊಟ ತನಗೆ ಒಗ್ಗುವುದಿಲ್ಲವೆಂದು, ಆಸ್ಥಾನದಲ್ಲಿ ಪಂಡಿತರು ಹೂಡಿದ ಸತ್ಯವಿಚಾರವನ್ನು ತೆರೆದಿಟ್ಟಳು.

ಕಬೀರರಿಗೆ ಅಲ್ಲವೆಂದು ಸಾಧಿಸಿ ಅಪಮಾನಿಸುವುದು ಬೇಕಿರಲಿಲ್ಲ, ತನುವಿನ ಮನವನ್ನು ಅರಿವಿಗೆ ಅರ್ಪಿಸಿದರು. ತನುವಿನ ಜಂಗಮ ಹೇಳಿದಂತೆ ಕೇಳಿ ಜಂಗಮವಾದರು. ಆಸ್ಥಾನದ ಪಂಡಿತರಿಗೆ, ಗುರುಗಳಿಗೆ, ಅರಿವಿನ ಪಾಠವಾಯಿತು. ವೇಶ್ಯೆಗೆ ಅಪರಾಧಿ ಭಾವ ಕಾಡಿತು. ನೆರೆದ ಸಭಿಕರಿಗೆ ಸಂತ ಕಬೀರರ ಮೇಲೆ ಒಲವುಂಟಾಯಿತು. ಪಂಡಿತರಾದವರು ಹೀಗೂ ವರ್ತಿಸುತ್ತಾರೆಯೆ ಎನ್ನುವ ಆಶ್ಚರ್ಯವ್ಯಕ್ತವಾಯಿತು.

**ಆಡಬಹುದು ಪಾಡಬಹುದಲ್ಲದೆ, ನುಡಿದಂತೆ ನಡೆಯಲು ಬಾರದು ಎಲೆ ತಂದೆ ಚೆನ್ನಮಲ್ಲಿಕಾರ್ಜುನದೇವಾ, ನಿಮ್ಮ ಶರಣರು ನುಡಿದಂತೆ ನಡೆಯಲು ಬಲ್ಲರು ಎಲೆ ತಂದೆ :**

ಸಂತ ಕಬೀರರು ಟೆಕ್ನಿಸಿಯನ್. ಭವಿ, ಭಕ್ತ, ಲಿಂಗ, ಜಂಗಮದ ಕುರಿತು ಅಭ್ಯಾಸ ಮಾಡಿದವರು. ಆ ಜಂಗಮನೇ ತಾನಾದವರು. ನುಡಿದರು. ನುಡಿದಂತೆ ನಡೆದರು. ಈ ಟೆಕ್ನಿಕ್ ತಿಳಿದರೆ ಸರ್ವತನುಗಳು ಶರಣಸಂತರಂತೆ ಸಹಜವಾಗಿರಲು ಸಾಧ್ಯ.

□

# ಧರ್ಮವೆಂದರೆ ತನುವಿನ ಅರಿವು

**ಲಿಂಗಪೂಜಕಂಗೆ ಫಲಪದಂಗಳಲ್ಲದೆ ಲಿಂಗವಿಲ್ಲ!**
**ಧರ್ಮತ್ಯಾಗಿಗೆ ನರಕವಲ್ಲದೆ ಲಿಂಗವಿಲ್ಲ!**
**ವೈರಾಗ್ಯಸಂಪನ್ನಂಗೆ ಮುಕ್ತಿಯಲ್ಲದೆ ಲಿಂಗವಿಲ್ಲ!**
**ಜ್ಞಾನಿಗೆ ಪರಿಭ್ರಮಣವಲ್ಲದೆ ಲಿಂಗವಿಲ್ಲ!**
**ಇಂತಪ್ಪ ಭ್ರಾಂತನತಿಗಳೆದು ತಾನುತಾನಾದ ಇರವೆಂತೆಂದಡೆ:**
**ದ್ವೈತವಳಿದು ಅದ್ವೈತದಿಂದ ತನ್ನ ತಾನರಿದಡೆ**
**ಚೆನ್ನಮಲ್ಲಿಕಾರ್ಜುನಲಿಂಗವು ತಾನೆ.**

**ಲಿಂಗಪೂಜಕಂಗೆ ಫಲಪದಂಗಳಲ್ಲದೆ ಲಿಂಗವಿಲ್ಲ:**

ಹಗಲಿರುಳೆನ್ನದೆ ಲಿಂಗಕ್ಕೆ ನೀರೆರೆದು, ಪತ್ರಿ-ಫಲ-ಪುಷ್ಪಗಳನ್ನಿಟ್ಟು ಆರಾಧಿಸುವ ಲಿಂಗಪೂಜಕನಿಗೆ ತಾನು ಬೇಡಿದ ಫಲ ಪದವಿಗಳು ತಪ್ಪದೆ ದೊರೆಯುತ್ತವೆ. ನಿಷ್ಠನಾಗಿ ಪೂಜಿಸುತ್ತಾನೆ; ತಾನು ಪೂಜಿಸುವುದು ಫಲ ಪದವಿಗಳ ಆಸೆಗಾಗಿ, ತಾನು ಮಾಡುವ ಕಾಯಕ ಕೂಡಾ ತಾನು ಬೇಡಿದ ಫಲ ಪದವಿಗಳಿಗಾಗಿ, ನಿಷ್ಠನಾಗಿ ಲಿಂಗ ಪೂಜಿಸಿದ; ನಿಷ್ಠನಾಗಿ ಕಾಯಕ ಮಾಡಿದ. ಕಾಯಕದ ಫಲದಿಂದ ಬಂದ ಫಲಪದವಿಗಳನ್ನು ಲಿಂಗಯ್ಯನೇ ಕೊಟ್ಟನೆಂದು ಆಡಿದ ಹಾಡಿದ ಹೊಗಳಿದ. ಲಿಂಗಪೂಜಿಸಿದ ಪೂಜಕನಿಗೆ ಫಲಪದವಿಗಳು ದೊರೆತವು. ಆದರೆ ಲಿಂಗ ದೊರೆಯಲಿಲ್ಲ!

**ಧರ್ಮತ್ಯಾಗಿಗೆ ನರಕವಲ್ಲದೆ ಲಿಂಗವಿಲ್ಲ:**

ಧರ್ಮವೆನ್ನುವುದು ಜಾತಿ ಮತ ಪಂಗಡಕ್ಕೆ ಸಂಬಂಧಿಸಿದ್ದಲ್ಲ, ಅದು ತನುವಿನ ಸತ್ಯ; ತನುವಿನ ಅರಿವೇ ಧರ್ಮ. ಅದು ತನುವಿನ ಕಣಕಣದಲ್ಲಿದ್ದು ತನುವನ್ನು ಮುನ್ನಡೆಸುತ್ತದೆ. ಧರ್ಮವೆಂದರೆ ತನುವಿನ ಬೆಳಕು. ಧರ್ಮದ ಬೆಳಕಿನ ನೆರಳೇ (ಕತ್ತಲು) ಮನ. ಅದಕ್ಕೆ ಏನೂ ಕಾಣುವುದಿಲ್ಲ; ಕತ್ತಲು, ಬೆಳಕಿನ ತನುವನ್ನು ಮುನ್ನಡೆಸಲು ಬರುವುದಿಲ್ಲ. ಬೆಳಕಿನಿಂದ ಹುಟ್ಟಿದ ಕತ್ತಲು ಬೆಳಕನ್ನು ತ್ಯಾಗ ಮಾಡುವುದೆಂದರೆ ನರಕವಲ್ಲದೆ ಮತ್ತೇನು ದೊರೆಯಲು ಸಾಧ್ಯ! ಧರ್ಮ ತ್ಯಾಗ ಮಾಡಿದ ಮನಕ್ಕೆ ನರಕವಲ್ಲದೆ ಲಿಂಗವಿಲ್ಲ !

**ವೈರಾಗ್ಯ ಸಂಪನ್ನಂಗೆ ಮುಕ್ತಿಯಲ್ಲದೆ ಲಿಂಗವಿಲ್ಲ:**

ತನುವನ್ನು ಬಂಧಿಸಿದ ಮನವನ್ನು ತಿಳಿಯಲು ಸಾಧ್ಯವಾಗದೆ, ಮನಬೇಡಿದ ಪದಾರ್ಥಗಳ ಮೇಲೆ ವೈರಾಗ್ಯಮಾಡಿ, ಮುಕ್ತಿಗಾಗಿ ತನುವನ್ನು ದಂಡಿಸುವುದು. ಕಾಶೀ, ಶ್ರೀಶೈಲ, ಹಿಮಾಲಯ ಯಾತ್ರೆಗಳನ್ನು ಕಾಲ್ನಡಿಗೆಯಿಂದಲೇ ಮಾಡಿ ಅನ್ನ ಆಹಾರಾದಿಗಳನ್ನು ತೊರೆದು ಒಂಟಿಕಾಲಿನ ಮೇಲೆ ಜಪ ತಪಗಳನ್ನು ಮಾಡವುದು. ತಿಂಗಳುಗಟ್ಟಲೆ ಅನುಷ್ಠಾನ ಮಾಡಿ ದೇಹ ಕೃಷ ಮಾಡಿಕೊಳ್ಳುವುದು. ಅನ್ಯ ವಿಚಾರಗಳು ಬಂದಂತೆಲ್ಲ ಅವುಗಳ ಮೇಲೆ ವೈರಾಗ್ಯ ಮಾಡಿದರೆ ತನುವಿಗೆ ಮುಕ್ತಿ ದೊರೆಯುತ್ತದೆ ಹೊರತು ಲಿಂಗವಿಲ್ಲ !

**ಜ್ಞಾನಿಗೆ ಪರಿಭ್ರಮಣವಲ್ಲದೆ ಲಿಂಗವಿಲ್ಲ !:**

ಮತಿಜ್ಞಾನ, ಶೃತಿಜ್ಞಾನ, ಖಂಡಜ್ಞಾನ, ಕೇವಲಜ್ಞಾನ, ಜ್ಯೋತಿರ್‌ಜ್ಞಾನ, ಮಹಾಜ್ಯೋತಿರ್ ಜ್ಞಾನವೆಂದು ಆರು ವಿಧ. ಮತಿಜ್ಞಾನದಿಂದ ಶ್ರುತಿಜ್ಞಾನ, ಶ್ರುತಿಜ್ಞಾನದಿಂದ ಖಂಡಜ್ಞಾನ, ಖಂಡಜ್ಞಾನದಿಂದ ಕೇವಲಜ್ಞಾನ, ಕೇವಲಜ್ಞಾನದಿಂದ ಜ್ಯೋತಿರ್‌ಜ್ಞಾನ, ಜ್ಯೋತಿರ್‌ಜ್ಞಾನದಿಂದ ನಿರಾಲಂಬ ಪ್ರಾಪ್ತಿ.

ಮತಿಜ್ಞಾನವೇ ಭಕ್ತ, ಪ್ರತಿಜ್ಞಾನವೇ ಮಹೇಶ್ವರ, ಖಂಡಜ್ಞಾನವೇ ಪ್ರಸಾದಿ, ಕೇವಲಜ್ಞಾನವೇ ಪ್ರಾಣಲಿಂಗಿ, ಜ್ಯೋತಿರ್‌ಜ್ಞಾನವೇ ಶರಣ, ಮಹಾಜ್ಯೋತಿರ್‌ಜ್ಞಾನವೇ ಐಕ್ಯ ಎಂದು ಚೆನ್ನಬಸವಣ್ಣ ಹೇಳಿದ್ದಾರೆ.

ಪೃಥ್ವಿಜ್ಞಾನ, ಅಪ್ಪುಜ್ಞಾನ, ತೇಜಜ್ಞಾನ, ವಾಯುಜ್ಞಾನ, ಆಕಾಶಜ್ಞಾನ, ತಮಜ್ಞಾನ, ಪರಿಪೂರ್ಣಜ್ಞಾನ, ದಿವ್ಯಜ್ಞಾನವೆಂದು ಎಂಟು ವಿಧದ ಜ್ಞಾನವನ್ನು ಅರಿವಿನ ಮಾರಿತಂದೆ ಹೆಸರಿಸಿ ವಿವರಿಸಿದ್ದಾರೆ:

ಪೃಥ್ವಿಜ್ಞಾನ ಪಿಪೀಲಿಕಾ ಸಂಬಂಧವಾಗಿರುವುದು. ಅಪ್ಪುಜ್ಞಾನ ಮರ್ಕಟ ಸಂಬಂಧವಾಗಿರುವುದು. ತೇಜಜ್ಞಾನ ಅಗ್ನಿ ಸಂಬಂಧವಾಗಿರುವುದು. ವಾಯುಜ್ಞಾನ ಗಂಧ ಸಂಬಂಧವಾಗಿರುವುದು. ಆಕಾಶಜ್ಞಾನ ವಿಹಂಗ ಸಂಬಂಧವಾಗಿರುವುದು. ತನುಜ್ಞಾನ ಮಾರ್ಜಾಲ ಸಂಬಂಧವಾಗಿರುವುದು. ಪರಿಪೂರ್ಣಜ್ಞಾನ ಕೂರ್ಮ ಸಂಬಂಧವಾಗಿರುವುದು. ದಿವ್ಯಜ್ಞಾನ ಸರ್ವಮಯ ನಾನಾ ಭೇದಗಳ ಭೇದಿಸುತ್ತಿರುವುದು ಎಂದಿದ್ದಾರೆ.

ತನು ಬಿಟ್ಟು ಜ್ಞಾನವನ್ನು ಹೊರಗೆ ಹುಡುಕುವ ಮನಕ್ಕೆ ಪ್ರರಿಭ್ರಮಣವಲ್ಲದೆ ಲಿಂಗವಿಲ್ಲ ಎಂದು ಅಕ್ಕ ಸ್ಪಷ್ಟವಾಗಿ ಹೇಳಿದ್ದಾಳೆ.

**ಇಂತಪ್ಪ ಭ್ರಾಂತಿಗಳನತಿಗಳೆದು ತಾನುತಾನಾದ ಇರವೆಂತೆಂದಡೆ; ದ್ವೈತವಳಿದು ಅದ್ವೈತದಿಂದ ತನ್ನತಾನರಿದಡೆ ಚೆನ್ನಮಲ್ಲಿಕಾರ್ಜುನಲಿಂಗವು ತಾನೆ:**

ತನುವಿನಲ್ಲಿರುವ ಅರಿವು ಬೇರೆ, ಅದನ್ನು ತಿಳಿಯುವ ನಾನು ಬೇರೆ ಎನ್ನುವ ದ್ವೈತವನ್ನು ಅಳಿದು. ತನುವಿನಲ್ಲಿರುವ ಅರಿವು ಬೇರಲ್ಲ, ಅರಿವನ್ನು ತಿಳಿಯುವ ಮನ ಬೇರಲ್ಲ, ಎನ್ನುವ ಅದ್ವೈತದಿಂದ ತನ್ನ ತಾನು ಅರಿದಡೆ ಚೆನ್ನಮಲ್ಲಿಕಾರ್ಜುನ ಲಿಂಗವು ತಾನೆ ಎಂದು ಜ್ಞಾನ ಹುಡುಕುವ ಸಾಧಕರಿಗೆ ಅಕ್ಕ ಸರಳವಾಗಿ ಹೇಳಿದ್ದಾಳೆ.

□

# ಸಾರಾಯದ ಮಾರ್ಗವನು ಯಾರು ತೋರಿದಡೇನು?

ಲಿಂಗವನು ಪುರಾತನರನು
ಅನ್ಯರ ಮನೆಯೊಳಯಿಂಕೆ ಹೋಗಿ ಹೊಗುಳುವರು,
ತಮ್ಮದೊಂದುದರ ಕಾರಣ.
ಲಿಂಗವು ಪುರಾತನರು ಅಲ್ಲಿಗೆ ಬರಬಲ್ಲರೆ?
ಅನ್ಯವನೆ ಮರೆದು ನಿಮ್ಮ ನೆನೆವರ ಎನಗೊಮ್ಮೆ ತೋರಾ
ಚೆನ್ನಮಲ್ಲಿಕಾರ್ಜುನಾ.

ತನುವಿನಲ್ಲಿರುವ ಅರಿವಿನ ಶಕ್ತಿಯನ್ನು ಶ್ರೀಕ್ರಿಷ್ಣ ಗೀತೆಯ ಮೂಲಕ ಹೇಳಿದರು. ಕ್ರಿಸ್ತ ಬೈಬಲ್ ಮೂಲಕ ಹೇಳಿದರು. ಪುರಾತನರು ಶರಣರು ವಚನಗಳ ಮೂಲಕ ಅರಿವಿನಶಕ್ತಿಯನ್ನು ಹೇಗೆ ಪಡೆಯಬೇಕೆಂದು ಹೇಳಿದರು. ಅದನ್ನೇ ಹೊಟ್ಟೆ ಹೊರೆಯುವುದಕ್ಕಾಗಿ ಗುರುವೇಷಧರಿಸಿ ಮನೆ ಮನೆಗೆ ಹೋಗಿ ಹೇಳಬಹುದೆ? ಪ್ರವಚನ ಪುರಾಣಗಳ ಮೂಲಕ ಉದರ ಪೋಷಣೆಗಾಗಿ ಉಪನ್ಯಾಸ ನೀಡಬಹುದೆ?

ವೇಷಹಾಕಿ ಬುದ್ಧ ಬಸವ ದಾಸವರೇಣ್ಯರ ಚರಿತ್ರೆ ಹೇಳಿದರೆ ಅವರು ಅಲ್ಲಿಗೆ ಬರಬಲ್ಲರೆ? ಅವರು ಹೇಳಿದ ಅರಿವಾದರೂ ಅಲ್ಲಿಗೆ ಬಂದು ಎಲ್ಲರ ತನುವಿನಲ್ಲಿ ಸೇರಿ ಮರೆವು ದೂರವಾಗುತ್ತದೆಯೆ? ಹೇಳುವವರ, ಕೇಳುವವರ ಅಜ್ಞಾನ ದೂರವಾಗುತ್ತದೆಯೆ?

ಪುರಾತನರ ಚರಿತ್ರೆ ಹೇಳಿದರೆ, ಹೇಳುವವರಿಗೂ ಕೇಳುಗರಿಗೂ ಬಂದದ್ದಾದರು ಏನೆಂದು ತಿಳಿಯಬಾರದೆ? ತಮ್ಮದೊಂದು ಉದರ ಹೊರೆಯಲು ಹೇಳುಗರು ಪುರಾತನರನ್ನು ಬಳಕೆ ಮಾಡಿಕೊಳ್ಳಬೇಕೆ? ಪುರಾತನರು, ಶರಣರು, ದಾಸರು ಅನ್ಯವನ್ನು ಮರೆತು ತಮ್ಮ ತನುವಿನ ಅರಿವನ್ನು ನೆನೆದರು. ಆ ಅರಿವಿಗೆ ಶರಣು ಹೋಗಿ ಶರಣರಾದರು. ಆ ಅರಿವಿಗೆ ದಾಸು ಹೋಗಿ ದಾಸರಾದರು. ಕೈವಲ್ಯ ಪದವಿಯನ್ನು ಪಡೆದರು. ಅರಿವಿಗೆ ಹೋಗುವ ಮಾರ್ಗಕ್ಕೆ ಕೈಮರ ನೆಟ್ಟರು.

ಸಾರಾಯದ ಮಾರ್ಗವನ್ನು ಯಾರು ತೋರಿದರೇನು? ತೋರಿದವರನು ಹಗಲಿರುಳು ನೆನೆಯಬೇಕೊ? ಸಾರಾಯದ ಅರಿವಿನಲಿ ಮೈಮರೆಯಬೇಕೊ? ಆ ಸುಖವನುಂಡು ಆ ಸುಖವನ್ನೇ ತೇಗಬೇಕೊ?

ಪುರಾತನರನು, ಬುದ್ಧ ಬಸವಾದಿ ಪ್ರಮಥರನು ಮರೆದು ಅವರು ತೋರಿದ ಸಾರಾಯದ ಮಾರ್ಗದಲಿ ನಡೆದು ಗಮ್ಯ ಸೇರಬೇಕು.

ಅನ್ಯವನೆ ಮರೆದು ತನುವಿನ ಅರಿವೇ ಗುರುವೆಂದು ಆ ಗುರುವೇ ಮಹಾದೇವನೆಂದು, ಸದಾಶಿವನೆಂದು, ಸಾಕ್ಷಾತ್ ಪರಬ್ರಹ್ಮನೆಂದು ನೆನೆಯುವವರನ್ನು ಎನಗೊಮ್ಮೆ ತೋರಾ ಎಂದು ಅಕ್ಕ ಅರಿವೆಂಬ ಚೆನ್ನಮಲ್ಲಿಕಾರ್ಜುನನನ್ನು ಸ್ತುತಿಸಿದ್ದಾಳೆ.

□

# ಬೆಳಕುಂಡ ಕಪಿ ಬೆಳಗಿಂಗೆ ಬೆಳಗಾಗಿ ಬೆಳಗಿತು

**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ**
**ಕರಣಂಗಳ ಚೇಷ್ಟೆಗೆ ಮನವೇ ಬೀಜ.**
**ಎನಗುಳ್ಳುದೊಂದು ಮನ.**
**ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ**
**ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?**

ಬೆಳಕಿನ ಬೀಜ ಭೂಮಿಯ ಮೇಲೆ ಬೀಳುವುದೊಂದೇ ತಡ ಲೋಕದ ದೈನಂದಿನ ಕ್ರಿಯೆ ಪ್ರಾರಂಭವಾಗುತ್ತದೆ. ಬೆಳಕಿಗೆ ಸುಖವೂ ಇಲ್ಲ ದುಃಖವೂ ಇಲ್ಲ, ಬೆಳಗುವುದೊಂದೆ ರವಿಯ ಕೆಲಸ. ರವಿ ಬೆಳಗಿದ ಬೆಳಕಿನಲ್ಲಿ ಕತ್ತಲೆ ಕಳೆದು ಬೆಳಕಾಗುತ್ತದೆ. ಕತ್ತಲೆಯೇ ಬೆಳಕಿನ ಗರ್ಭದಲ್ಲಿ ಸೇರಿ ಬೆಳಕಾಗಿ ಬೆಳಗುತ್ತದೆ.

ಮಹಾಭಾರತದ ಯುದ್ಧ ಬೆಳಕಿನಲ್ಲಿಯೇ ನಡೆಯಿತು. ಕತ್ತಲಾದರೆ ಯುದ್ಧಕ್ಕೂ ವಿರಾಮ! ತನುಗಳಿಗೂ ವಿರಾಮ. ಯುದ್ಧದ ಚುಕ್ಕಾಣಿ ಹಿಡಿದ ಭೀಷ್ಮ, ದ್ರೋಣ, ಕರ್ಣ, ದುರ್ಯೋಧನ, ಧೃತರಾಷ್ಟ್ರರಿಗೂ ವಿರಾಮ. ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ, ಅಭಿಮನ್ಯು, ಘಟೋದ್ಗಜರಿಗೂ ವಿರಾಮ. ಪಾಂಡವ-ಕೌರವ ಸೈನ್ಯಕ್ಕೂ ವಿರಾಮ. ರವಿ ಅಸ್ತಂಗತವಾದರೆ ಲೋಕಕ್ಕೆಲ್ಲ ವಿರಾಮ. ಸಂಪೂರ್ಣ ವಿರಾಮ.

ಮಲಗಿದಾಗ ತಾನು ದ್ರೋಣನೂ ಅಲ್ಲ, ಭಿಷ್ಮನೂ ಅಲ್ಲ, ಕರ್ಣ, ದುರ್ಯೋಧನ, ಧತರಾಷ್ಟ್ರ, ವಿಧುರನೂ ಅಲ್ಲ ! ಧರ್ಮರಾಯ, ಭೀಮ, ಅರ್ಜುನ ನಕುಲ ಸಹದೇವರೂ ಅಲ್ಲ! ಅಭಿಮನ್ಯು ಘಟೋದ್ಗಜರಂತೂ ಅಲ್ಲವೇ ಅಲ್ಲ ! ಇನ್ನು ಪಾಂಡವ ಕೌರವ ಸೈನಿಕರೆಂದು ವಿಂಗಡಿಸುವಂತೆಯೂ ಇಲ್ಲ, ಮಲಗಿದಾಗ ತಾನು ತಾನೇ ಅಲ್ಲ, ತನ್ನ ಪರಿಚಯ ತನಗೇ ಇಲ್ಲ, ಇಡೀ ರಾತ್ರಿ ತಾನಾರು, ತನ್ನ ಹೆಸರೇನು, ತಾನು ಗಂಡೋ ಹೆಣ್ಣೋ? ಪಾಂಡವನೊ, ಕೌರವನೊ. ಜಿಲ್ಲಾಧಿಕಾರಿಯೊ ಚಪ್ರಾಸಿಯೊ ಶ್ರೀಮಂತನೊ ಬಡವನೊ ಶಾಸಕನೊ ಮಂತ್ರಿಯೋ ಯಾವ ಪರಿಚಯವೂ ಇಲ್ಲದೆ ಲೋಕಕ್ಕೆ ಲೋಕವೇ ಮಲಗಿರುತ್ತದೆ. ತಾನು ಯಾರು ಅನ್ನುವುದನ್ನೇ ಮರೆತಿರುತ್ತದೆ.

ರವಿಯ ಬೀಜ ಭೂಮಿಗೆ ಬಿದ್ದು ಎಲ್ಲೆಡೆಯೂ ಬೆಳಕು ಚಲ್ಲಿತು. ಗುಡ್ಡ, ಕಾಡು, ನದಿ, ವನ, ಸಮುದ್ರ, ಪರ್ವತಗಳನ್ನೆಲ್ಲ ಬೆಳಗಿತು. ಭೀಷ್ಮ ನಾನು ಕುರುವಂಶದ ಸೇನಾಪತಿಯೆಂದ, ದ್ರೋಣ, ಕರ್ಣ, ದುರ್ಯೋಧನ, ಧೃತರಾಷ್ಟ್ರರ ಪರಿಚಯವಾಗಿ ಕೌರವ ಸೈನ್ಯ ಯುದ್ಧಕ್ಕೆ ಅಣಿಯಾಯಿತು. ಪಾಂಡವರ ಪಾಳ್ಯೆಯದಲ್ಲಿ ಧರ್ಮರಾಯ, ಭೀಮ, ಅರ್ಜುನ ನಕುಲ ಸಹದೇವ ಅಭಿಮನ್ಯು ಘಟೋದ್ಗಜರೊಂದಿಗೆ ಪಾಂಡವ ಸೈನ್ಯ ಯುದ್ಧಕ್ಕೆ ಅಣಿಯಾಯಿತು. ಶ್ರೀಕೃಷ್ಣ ಸಾರಥ್ಯವಹಿಸಿದ !

ಅಜ್ಞಾನಿ ಅರ್ಜುನ ಯುದ್ಧಕ್ಕೆ ಸನ್ನದ್ಧನಾದರೆ ಶ್ರೀಕೃಷ್ಣ ಏನು ಮಾಡಿಯಾನು? ತನುವನ್ನೇ

ರಥಮಾಡಿಕೊಂಡು ಅರ್ಜುನನಿಗೆ ಸಾರಥ್ಯವಹಿಸಿದ. ಶ್ರೀಕೃಷ್ಣನ ಮಾತುಗಳು ಕೌರವ ತನುಗಳು ಕೇಳಲಿಲ್ಲ, ಪಾಂಡವ ತನುಗಳೂ ಕೇಳಲಿಲ್ಲ, ಕೌರವರಾದರೇನು ಪಾಂಡವರಾದರೇನು ತನುಗಳೆಲ್ಲ ಒಂದೇ! ತನುವಿನ ಅರಿವೂ ಒಂದೇ. ತನುವಿನ ಮನವೂ ಒಂದೇ. ರವಿಯ ಬೆಳಕಿನ ಬೀಜ ಜಗವೆಲ್ಲ ಬೆಳಗಿತು; ಆ ಬೆಳಕು ತನುಗಳನ್ನು ಬೆಳಗಲಿಲ್ಲ !

ತನುವಿನ ಅರಿವಿನ ಬೀಜ ತನುವನ್ನು ಬೆಳಗಿತು ! ಹಗಲಿರುಳೆನ್ನದೇ ಬೆಳಗಿತು ! ತನುವಿನ ಮನ ಆ ಬೆಳಕು ಸವಿಯಲಿಲ್ಲ, ಅರ್ಜುನನಾಗಿ ಯುದ್ಧ ಮಾಡಿತು; ಶ್ರೀಕೃಷ್ಣನಾಗಿ ಅರಿವು ರಥವೆಂಬ ತನುವಿನ ಸಾರಥ್ಯವಹಿಸಿತು. ಅರ್ಜುನ ಶ್ರೀಕ್ರಷ್ಣನನ್ನು ತಿಳಿಯಲಿಲ್ಲ, ಶ್ರೀಕೃಷ್ಣ ಯುದ್ಧ ನಿಲ್ಲಿಸಿ ಅರ್ಜುನನನ್ನು ಅಪ್ಪಿಕೊಳ್ಳಲಿಲ್ಲ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ. ಒಂದೇ ತನು, ಒಂದೇ ಮನ, ಒಂದೇ ಅರಿವು ! ಪಾಂಡವ ಕೌರವ ತನುಗಳೆಂದು ! ರಾಜ್ಯ ಪರ ರಾಜ್ಯದ ತನುಗಳೆಂದು ! ದೇಶ ವಿದೇಶದ ತನುಗಳೆಂದು, ಕ್ರೈಸ್ತ ಹಿಂದು ಮುಸಲ್ಮಾನ ಜೈನ ಬೌದ್ಧ ಫಾರ್ಸಿ ತನುಗಳೆಂದು ಹೆಣ್ಣು ಗಂಡು ತನುಗಳೆಂದು ಹೀಗೆ ಲೋಕದ ಚೇಷ್ಟೆಯ ಬಾಲ ಬೆಳೆಯುತ್ತಾ ಹೋಯಿತು. ಈ ಚೇಷ್ಟೆ ತನುವಿನ ಮನದ ಬೀಜದ ಸಂತಾನವಾಯಿತು. ಹೈರಾವಣ ಮೈರಾವಣರಿದ್ದಂತೆ ! ರಕ್ತ ಬೀಜಾಸುರರಿದ್ದಂತೆ ! ಮನದ ಬೀಜ ಒಂದೇ ಆದರೂ ಅದರ ಚೇಷ್ಟೆ ಅನಂತ !

ಮನದ ಬೀಜ ತನುವಿನ ಅರಿವೆಂಬ ರವಿಯಲ್ಲಿ ಬಿದ್ದರೆ ಸಾಕು; ಅದನ್ನು ತನ್ನ ಬೆಳಕಿನಲ್ಲಿ ಹುರಿದು ಮತ್ತೆ ಬೆಳೆಯದಂತೆ ಮಾಡುತ್ತಾನೆ. ಕಪಿಯ ಚೇಷ್ಟೆಗೆ ಕಡಿವಾಣ ಹಾಕಿ ಅರಿವಿನ ಗೂಟಕ್ಕೆ ಬಿಗಿಯುತ್ತಾನೆ. ಬೆಳಕುಂಡ ಕಪಿ ಬೆಳಕಿನ ಉಂಡೆಯೇ ತಾನಾಗಿ ಬೆಳಗಿಂಗೆ ಬೆಳಕಾಗಿ ಬೆಳಗುತ್ತದೆ. ವಿರಾಟ ಸ್ವರೂಪವೇ ತಾನಾಗಿ ಜಗದಗಲ ಮುಗಿಲಗಲಕ್ಕೂ ಬೆಳಗುತ್ತದೆ.

□

**ಅರಿವಿನ ಪರಿಮಳ**

□ ಮನದ ಬೀಜ ತನುವಿನ ಅರಿವೆಂಬ ರವಿಯಲ್ಲಿ ಬಿದ್ದರೆ ಸಾಕು; ಅದನ್ನು ತನ್ನ ಬೆಳಕಿನಲ್ಲಿ ಹುರಿದು ಮತ್ತೆ ಬೆಳೆಯದಂತೆ ಮಾಡುತ್ತಾನೆ. ಕಪಿಯ ಚೇಷ್ಟೆಗೆ ಕಡಿವಾಣ ಹಾಕಿ ಅರಿವಿನ ಗೂಟಕ್ಕೆ ಬಿಗಿಯುತ್ತಾನೆ. ಬೆಳಕುಂಡ ಕಪಿ ಬೆಳಕಿನ ಉಂಡೆಯೇ ತಾನಾಗಿ ಬೆಳಗಿಂಗೆ ಬೆಳಕಾಗಿ ಬೆಳಗುತ್ತದೆ. ವಿರಾಟ ಸ್ವರೂಪವೇ ತಾನಾಗಿ ಜಗದಗಲ ಮುಗಿಲಗಲಕ್ಕೂ ಬೆಳಗುತ್ತದೆ.

# ಲೋಕದ ಭಜನೆಗೆ ಸಿಲುಕಿದ ಅರಿವಿನ ತನು

**ರತ್ನದ ಸಂಕೋಲೆಯಾದಡೆ ತೊಡರಲ್ಲವೆ?**
**ಮುತ್ತಿನ ಬಲೆಯಾದಡೆ ಬಂಧನವಲ್ಲವೆ?**
**ಚಿನ್ನದ ಕತ್ತಿಯಲ್ಲಿ ತಲೆ ಹೊಯ್ದಡೆ ಸಾಯದಿರ್ಪರೆ?**
**ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ**
**ಜನನ ಮರಣ ಬಿಡುವುದೆ ಚೆನ್ನಮಲ್ಲಿಕಾರ್ಜುನಾ?**

ತನುವಿಗೆ ಲೋಕದ ಭಜನೆಯೆಂದರೆ ಬಲು ಇಷ್ಟ. ಮಲಗುವಾಗಲೂ ತನ್ನ ಹೊಗಳಿದ್ದನ್ನು ನೆನಪಿಸಿಕೊಂಡು ಮಲಗುತ್ತದೆ. ಎಚ್ಚರವಾದಾಗ ಹೊಗಳು ವವರನ್ನು ಹುಡುಕಿಕೊಂಡು ಹೋಗುತ್ತದೆ. ಹೊಗಳಿಸಿಕೊಳ್ಳುವುದಾಕ್ಕಾಗಿಯೇ ಹಗಲಿರಳು ದುಡಿಯುತ್ತದೆ. ತನಗೆ ಮಾಡಿಕೊಂಡದ್ದು, ಕುಟುಂಬಕ್ಕೆ ಮಾಡಿದ್ದು ದಾನ ಧರ್ಮ ಮಾಡಿದ್ದು, ಸಹಾಯ ಮಾಡಿದ್ದು, ದೇವಸ್ಥಾನ ಕಟ್ಟಿದ್ದು, ತೇರು ಮಾಡಿಸಿದ್ದು, ಊಟ ಹಾಕಿಸಿದ್ದು ಒಂದೇ ಎರಡೇ ತನ್ನ ಸಾಹಸದ ಗಾಥೆಯೆಂದು ಹೊಗಳಿಕೊಳ್ಳುತ್ತಾ ಹೊಗಳಿಸಿಕೊಳ್ಳುವುದೇ ತನುವಿನ ಕೆಲಸ.

ಹೊಗಳಿದರೆ ಸಾಕು ಆದಾಯವಾಗುತ್ತದೆಂದು ಹೊಗಳುವವರು ಹೊಗಳಿ ಲಾಭ ಪಡೆಯುತ್ತಾರೆ. ಹೊಗಳಿಸಿಕೊಳ್ಳುವುದೊಂದು ನಶೆ. ಜನ ನನಗೆ ಏಕೆ ಹೊಗಳುತ್ತಾರೆ, ನಾನು ಮಾಡಿರುವುದಾದರು ಏನು? ತಪ್ಪೊ ಸರಿಯೋ ಎನ್ನುವುದು ನಶೆಯಲ್ಲಿದ್ದ ಮನದ ತನುವಿಗೆ ತಿಳಿಯುವುದಿಲ್ಲ.

ಶಬ್ದ ಸುಖಕ್ಕೆ ಮೆಚ್ಚಿದ ತನು ಮಾತಿಗೆ ಮಾತು ಕೊಟ್ಟು ಕೆಡುತ್ತದೆ. ಆ ಮಾತಿಗೆ ಕಟುಬಿದ್ದು ಈಡೇರಿಸುತ್ತದೆ. ಪ್ರತಿಯಾಗಿ ಶಬ್ದದಿಂದ ಹೊಗಳಿಸಿ ಕೊಂಡು ಸಂತೋಷಪಡುತ್ತದೆ. ತಾನು ಮಾಡಿದ ದಾನ ತನುವಿನ ಮನದಲ್ಲಿ ಸಂಗ್ರಹವಾಗಿ ಮತ್ತೆ ಮತ್ತೆ ನೆನಪಿಸಿಕೊಂಡು ಸಂತೋಷಪಡುತ್ತಾ ಕಾಲ ಕಳೆಯುತ್ತದೆ.

ತನುವೆಂಬುದು ಅಮೃತದ ಕೊಡ ಅದನ್ನು ಹೊಡೆದುಹಾಕಿ ಶಬ್ದ ಸುಖಕ್ಕೆ ಮಾರು ಹೋಗುವ ತನುವಿಗೆ ಏನೆನ್ನಬೇಕು? ತಾನೆ ಮಾತಿನ ರತ್ನದ ಸಂಕೋಲೆಯನ್ನು ಬಿಗಿದುಕೊಳ್ಳುತ್ತದೆ. ತಾನೆ ಮುತ್ತಿನ ಬಲೆಯಲ್ಲಿ ಬಂಧಿಸಿಕೊಳ್ಳುತ್ತದೆ. ಹೊಗಳಿಕೆ ಎನ್ನುವುದು ತಾನೆ ಬಂಧಿಸಿಕೊಂಡ ಮುತ್ತಿನಬಲೆ, ತನಗರಿಯದಂತೆ ಲೋಕದ ಭಜನೆಯಲ್ಲಿಯೇ ತನು ಮರಣ ಹೊಂದುತ್ತದೆ. ಚಿನ್ನದ ಕತ್ತಿಯಾದರೇನು ತನುವನ್ನು ಕೊಯ್ಯದೆ ಬಿಟ್ಟೀತೆ? ಮುತ್ತಿನ ಬಲೆಯಾದರೇನು ಬಂಧಿಸುವುದು ಬಿಟ್ಟೀತೆ?

ತನ್ನಂತೆಯೇ ಇರುವ ತನುವಿಗೆ ಕೊಟ್ಟು, ತಾನು ದಾನಿ ಎಂದು ಹೊಗಳಿಸಿಕೊಳ್ಳಬಹುದೆ? ಬೇಡಿದ ತನುವಿಗೆ ಭಿಕ್ಷುಕ ಎನ್ನಬಹುದೆ? ಬೇಡುವ ತನುವಿನದೊಂದು ವೃತ್ತಿ, ತನ್ನದೊಂದು ವೃತ್ತಿಯಾಗಲಿಲ್ಲವೆ? ಕೊಡುವುದಕ್ಕೆ ತನ್ನಲ್ಲಿ ಏನಿದೆ? ತನ್ನ ಪ್ರೊಡೆಕ್ಟ್ ಆದರೂ ಏನು? ಅನ್ನ, ಚಿನ್ನಕ್ಕೆ ಭೂಮಿ ಜನ್ಮ ನೀಡಿತು. ಕರೆನ್ಸಿಯ ಕಾಗದಕ್ಕೂ ಭೂಮಿಯೇ ಜನ್ಮ ನೀಡಿದೆ.

ಇಂದು ತನ್ನಲ್ಲಿರುವ ವಸ್ತು ನಾಳೆ ಮತ್ತೊಬ್ಬರಲ್ಲಿ ಇರುತ್ತದೆ. ತನ್ನಲ್ಲಿರುವ ವಸ್ತು ತನ್ನದಲ್ಲ. ಆ ವಸ್ತು ಮತ್ತೊಬ್ಬರದೂ ಅಲ್ಲ. ಇಂದು ತನ್ನಲ್ಲಿದೆ, ನಾಳೆ ಮತ್ತೊಬ್ಬರಲ್ಲಿರುತ್ತದೆ. ಕೊಟ್ಟು ಹೊಗಳಿಸಿಕೊಳ್ಳುವ ಕೆಲಸ ತಾನೇ ನಿರ್ಮಿಸಿ ಕೊಂಡ ಮುತ್ತಿನ ಬಲೆ, ರತ್ನದ ಸಂಕೋಲೆ ! ಲೋಕದ ಹೊಗಳಿಕೆಯ ಭಜನೆಯಲ್ಲಿ ಸಿಲುಕಿದ ತನು ಪಾರಾಗುವುದು ಬಲು ಜಟಿಲ. ಹೊಗಳಿಕೆಯ ಚಿನ್ನದ ಕತ್ತಿಗೆ ತಲೆಕೊಟ್ಟು ತನು ಕ್ರಮೇಣ ಸಾವು ಕಂಡುಕೊಳ್ಳುತ್ತದೆ. ತನುವೆನ್ನುವುದು ಅರಿವಿನ ಅಮೃತದ ಕೊಡ ಅನ್ನುವುದನ್ನೇ ಮರೆಯುತ್ತದೆ. ಅದು ಹೊಡೆದು ಹೋದ ಮೇಲೆ ಅಮೃತ ಹುಡುಕುವುದಾದರೂ ಹೇಗೆ ಎಂದು ತನುವು ಇದ್ದಾಗಲೇ ಯೋಚಿಸಬೇಕಾಗಿದೆ.

□

**ಅರಿವಿನ ಪರಿಮಳ**

- □ ಹೊಗಳಿದರೆ ಸಾಕು ಆದಾಯವಾಗುತ್ತದೆಂದು ಹೊಗಳುವವರು ಹೊಗಳಿ ಲಾಭ ಪಡೆಯುತ್ತಾರೆ. ಹೊಗಳಿಸಿಕೊಳ್ಳುವುದೊಂದು ನಶೆ. ಜನ ನನಗೆ ಏಕೆ ಹೊಗಳುತ್ತಾರೆ, ನಾನು ಮಾಡಿರುವುದಾದರು ಏನು? ತಪ್ಪೊ ಸರಿಯೋ ಎನ್ನುವುದು ನಶೆಯಲ್ಲಿದ್ದ ಮನದ ತನುವಿಗೆ ತಿಳಿಯುವುದಿಲ್ಲ.
- □ ಶಬ್ದ ಸುಖಕ್ಕೆ ಮೆಚ್ಚಿದ ತನು ಮಾತಿಗೆ ಮಾತು ಕೊಟ್ಟು ಕೆಡುತ್ತದೆ. ಆ ಮಾತಿಗೆ ಕಟುಬಿದ್ದು ಈಡೇರಿಸುತ್ತದೆ. ಪ್ರತಿಯಾಗಿ ಶಬ್ದದಿಂದ ಹೊಗಳಿಸಿ ಕೊಂಡು ಸಂತೋಷಪಡುತ್ತದೆ. ತಾನು ಮಾಡಿದ ದಾನ ತನುವಿನ ಮನದಲ್ಲಿ ಸಂಗ್ರಹವಾಗಿ ಮತ್ತೆ ಮತ್ತೆ ನೆನಪಿಸಿಕೊಂಡು ಸಂತೋಷಪಡುತ್ತಾ ಕಾಲ ಕಳೆಯುತ್ತದೆ.
- □ ತನ್ನಂತೆಯೇ ಇರುವ ತನುವಿಗೆ ಕೊಟ್ಟು, ತಾನು ದಾನಿ ಎಂದು ಹೊಗಳಿಸಿಕೊಳ್ಳಬಹುದೆ? ಬೇಡಿದ ತನುವಿಗೆ ಭಿಕ್ಷುಕ ಎನ್ನಬಹುದೆ? ಬೇಡುವ ತನುವಿನದೊಂದು ವೃತ್ತಿ, ತನ್ನದೊಂದು ವೃತ್ತಿಯಾಗಲಿಲ್ಲವೆ? ಕೊಡುವುದಕ್ಕೆ ತನ್ನಲ್ಲಿ ಏನಿದೆ? ತನ್ನ ಪ್ರೊಡೆಕ್ಟ್ ಆದರೂ ಏನು? ಅನ್ನ, ಚಿನ್ನಕ್ಕೆ ಭೂಮಿ ಜನ್ಮ ನೀಡಿತು. ಕರೆನ್ಸಿಯ ಕಾಗದಕ್ಕೂ ಭೂಮಿಯೇ ಜನ್ಮ ನೀಡಿದೆ.

# ಹತ್ತರೊಳಗೆ ಹನ್ನೊಂದಾಗಿ ಪವಡಿಸಿದ ಅರಿವಿನ ಮಲ್ಲಯ್ಯ

**ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ,**
**ಆಕಾರವಿಡಿದು ಸಾಕಾರಸಹಿತ ನಡೆವೆ.**
**ಹೊರಗೆ ಬಳಸಿ ಒಳಗೆ ಮರೆದಿಪ್ಪೆ,**
**ಬೆಂದ ನುಲಿಯಂತೆ ಹುರಿಗುಂದದಿಪ್ಪೆ,**
**ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ,**
**ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪ,**

**ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ:**

ಮನಕ್ಕೆ ಲೋಕದ ಮಾತುಗಳೆಂದರೆ ಬಲು ಹಿತ. ಲೋಕದ ಮಾತುಗಳು ತನುವಿನ ಅರಿವಿನಿಂದಲೇ ಸಿದ್ಧವಾಗಿವೆ. ಆ ಅರಿವಿನಿಂದಲೇ ವೇದ ಉಪನಿಷತ್ ಭಗವದ್ಗೀತೆ ಬೈಬಲ್‌ಗಳು ಹುಟ್ಟಿ ಮುದ್ರಣಗೊಂಡಿವೆ. ದೇವಸ್ಥಾನಗಳು, ಪುಣ್ಯ ಕ್ಷೇತ್ರಗಳು, ಮಠ ಮಂದಿರ, ಚರ್ಚ್‌ಗಳು ನಿರ್ಮಾಣ ವಾಗಿವೆ. ಇವುಗಳ ಮಾತೆಂದರೆ ಮನಕ್ಕೆ ಬಲುಹಿತ. ತನುವಿನ ಅರಿವಿನಿಂದ ನಿರ್ಮಾಣವಾದದ್ದೆಂದು ತನು ಉದಾಸೀನ ಮಾಡುವುದಿಲ್ಲ. ಅದರ ವೈಭವವನ್ನು ಹೊಗಳುವುದರಲ್ಲಿಯೇ ತನುವಿನ ಆಯುಷ್ಯ ಕಳೆಯುತ್ತದೆ. ಮನ ಲೋಕವನ್ನು ಹಿಡಿದು ಲೋಕದ ಸಂಗದಂತಿದೆ.

**ಆಕಾರವಿಡಿದು ಸಾಕಾರಸಹಿತ ನಡೆವೆ :**

ತನುವು ಕಲ್ಲು ಕಟೆದು ದೇವಸ್ಥಾನ ನಿರ್ಮಿಸಿತು. ಅದು ಒಂದು ಆಕಾರ ! ತನ್ನಂತೆ ಇರುವ ತನು ಕೂಡಾ ಒಂದು ಆಕಾರವೇ. ಅದು ತನ್ನಂತೆ ತನುವಿನ ಗರ್ಭದಲ್ಲಿಯೇ ಜನಿಸಿದೆ. ತನು ಆಕಾರ; ಅರಿವು ಬೆರೆತು ಅದು ಸಾಕಾರವಾಗಿದೆ. ಆದರೆ ಮನ ಅರಿವಿಲ್ಲದೆ ಬಯಕೆಯ ಲೋಕದ ಸಂಗಕ್ಕಾಗಿ, ಸಾಕಾರದೊಂದಿಗೆ ನಡೆದು ಆಕಾರದ ಸುಖಕ್ಕಾಗಿ ಹವಣಿಸುತ್ತಲಿದೆ.

ತಾನು ಹೋದರೆ ಹೋಗಲಿ; ಮನ ಅರಿವಿನ ತನುವನ್ನು ಕರೆದುಕೊಂಡು ಲೋಕದ ಸಂಗ ಮಾಡಬೇಕೆ? ಒಮ್ಮೆ ಅರಿವಿನ ಸಂಗ ಮಾಡಲು ಹವಣಿಸಬಾರದೆ? ಲೋಕದ ಸಂಗ ವಿಪರೀತ ! ನೋಡಿದಡೆಯೆಲ್ಲ ಜೂಜಿನ ಕಟ್ಟೆ , ಸೆರೆ ಅಂಗಡಿ, ವೇಶ್ಯಗೃಹ, ಲಂಚ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಹಲ್ಲೆ, ಅತ್ಯಾಚಾರ, ರಾಜಕೀಯಕ್ಕಾಗಿ ಕಾಲ್ತುಳಿತ, ಆಟ, ಮೋಜು-ಮಜಾ ! ಇದು ಲೋಕದ ರುಚಿ ! ಲೋಕದ ಸಂಗದ ರುಚಿ.

ಈ ರುಚಿ ತನುವಿನ ಅರಿವಿನ ಮಲ್ಲಯ್ಯನಿಗೆ ಹಿಡಿಸದು. ತನು ಆತನ ಮನೆ; ಮನ ಆ ಮನೆಯ ಬಾಡಿಗೆದಾರ. ಮನದ ಬಯಕೆಗಾಗಿ ಮಾಲೀಕನನ್ನು ಆತನ ಮನೆಯನ್ನೂ ಲೋಕದ ಸಂಗ ಮಾಡಲು ಕರೆದೊಯ್ಯಬೇಕೆ? ಇದು ನ್ಯಾಯವೇ?

**ಬೆಂದ ನುಲಿಯಂತೆ ಹುರಿಗುಂದದಿಪ್ಪೆ :**

ಎಲೆ ಮನವೇ ಲೋಕದ ಸಂಗಕ್ಕಾಗಿ ಹಾತೊರೆಯುವ ನೀನು ತನುವಿನ ಮಾಲಿಕನೊಂದಿಗೆ ಸಂಗ ಮಾಡಬಾರದೆ? ಆ ಅರಿವಿನ ಕುಂಡದಲ್ಲಿ ಮಿಂದು ನೀನು ಹೊರಗೆ ಬಾ. ಅದು ಯಜ್ಞಕುಂಡ . ನಿನ್ನನ್ನು ಸುಟ್ಟು ಬೆಂದ ನುಲಿಯನ್ನಾಗಿ ಮಾಡುವುದು. ಬೆಂದ ನುಲಿ ಕಾಣುತ್ತದೆ. ಹಿಡಿಯಲು ಹೋದರೆ ಬರೀ ಭಸ್ಮ ! ಮನವೆಂಬ ಮರ್ಕಟದ ನಿನ್ನ ಉಪಟಳ ಸುಟ್ಟು ಬೂದಿಯಾಗುತ್ತದೆ ; ಲೋಕದ ಗೆಳೆತನ ನಿನಗೆ ತಪ್ಪುತ್ತದೆ.

**ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯಾ, ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪ**

ಎಲೆ ಮನವೆ, ತನುವಿನ ಎರಡು ಕಣ್ಣುಗಳಲ್ಲಿಯೂ ನಿನ್ನ ಉಪಟಳ ! ಎರಡು ಕಿವಿಗಳಲ್ಲಿಯೂ ನಿನ್ನದೇ ಕಾರುಬಾರು ! ಮೂಗಿನ ಎರಡು ಹೊಳ್ಳೆಗಳಲ್ಲಿಯೂ ನಿನ್ನದೇ ನಾತ ! ಬಾಯಿಯಲ್ಲಿಯೂ ನಿನ್ನದೇ ಪುರಾಣ ! ಗುದದಲ್ಲಿಯೂ ನಿನ್ನದೇ ಹೊಲಸು ! ದೇವಾಂಗದಲ್ಲಿಯೂ ನಿನ್ನದೇ ಒಡೆತನ ! ನೆತ್ತಿಯ ಬ್ರಹ್ಮರಂಧ್ರದಲ್ಲಿಯೂ ನಿನ್ನದೇ ವೇಷ ! ಹತ್ತು ರಂಧ್ರಗಳಲ್ಲಿಯೂ ನೀನಿದ್ದರೇನಂತೆ; ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತೆ ಎನ್ನದೇವ ಅರಿವಿನ ಮಲ್ಲಯ್ಯ ಪವಡಿಸಿದ್ದಾನೆ. ಆತನನ್ನು ಹಿಡಿದು ಸುಖಿಯಾಗು! ಬೆಂದ ನುಲಿಯಂತಾಗಿ ಭಸ್ಮವಾಗು! ಲೋಕದಸಂಗ ತೊರೆದು ನಿಸ್ಸಂಗಿಯಾಗು! ಸಾಕಾರದೊಡೆಯ ನಿರಾಕಾರದ ಮಹಿಮನಲ್ಲಿ ಕೂಡು. ಹೊರಗೆ ಮರೆತು, ಒಳಗೆ ಬಳಸಿ ತಾವರೆಯ ಸುಗಂಧವನು ಹೀರುತ್ತ ಆ ಪಕಳೆಗಳಲ್ಲಿ ಬಂಧಿಯಾಗು! ಎಲೆ ಮನವೆ ನಿಶ್ಚಿಂತನಾಗು! ಎಂದು ಅಕ್ಕ ಮನಕ್ಕೆ ಅರಿವಿನ ಮಲ್ಲಯ್ಯನೊಂದಿಗೆ ಬೆರೆಯುವ ಸೂತ್ರ ತಿಳಿ ಹೇಳಿದ್ದಾಳೆ.

□

---

**ಅರಿವಿನ ಪರಿಮಳ**

□ ಮನಕ್ಕೆ ಲೋಕದ ಮಾತುಗಳೆಂದರೆ ಬಲು ಹಿತ. ಲೋಕದ ಮಾತುಗಳು ತನುವಿನ ಅರಿವಿನಿಂದಲೇ ಸಿದ್ಧವಾಗಿವೆ. ಆ ಅರಿವಿನಿಂದಲೇ ವೇದ ಉಪನಿಷತ್ ಭಗವದ್ಗೀತೆ ಬೈಬಲ್‌ಗಳು ಹುಟ್ಟಿ ಮುದ್ರಣಗೊಂಡಿವೆ. ದೇವಸ್ಥಾನಗಳು, ಪುಣ್ಯ ಕ್ಷೇತ್ರಗಳು, ಮಠ ಮಂದಿರ, ಚರ್ಚ್‌ಗಳು ನಿರ್ಮಾಣ ವಾಗಿವೆ. ಇವುಗಳ ಮಾತೆಂದರೆ ಮನಕ್ಕೆ ಬಲುಹಿತ. ತನುವಿನ ಅರಿವಿನಿಂದ ನಿರ್ಮಾಣವಾದದ್ದೆಂದು ತನು ಉದಾಸೀನ ಮಾಡುವುದಿಲ್ಲ, ಅದರ ವೈಭವವನ್ನು ಹೊಗಳುವುದರಲ್ಲಿಯೇ ತನುವಿನ ಆಯುಷ್ಯ ಕಳೆಯುತ್ತದೆ. ಮನ ಲೋಕವನ್ನು ಹಿಡಿದು ಲೋಕದ ಸಂಗದಂತಿದೆ.

# ಮರಣವಿಲ್ಲದ ಮರುಜವಣಿಯ ಸಿಹಿ ಫಲ

**ವನವೆಲ್ಲಾ ಕಲ್ಪತರು, ಗಿಡವೆಲ್ಲಾ ಮರುಜವಣಿ,**
**ಶಿಲೆಗಳೆಲ್ಲಾ ಪರುಷ, ನೆಲನೆಲ್ಲಾ ಅವಿಮುಕ್ತಿ ಕ್ಷೇತ್ರ.**
**ಜಲವೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ,**
**ಎಡಹುವ ಹರಳೆಲ್ಲಾ ಚಿಂತಾಮಣಿ.**
**ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿ,**
**ನೋಡುತ್ತ ಬಂದು ಕದಳಿಯಬನವ ಕಂಡೆ ನಾನು.**

ಏನೂ ಎನ್ನದ ನಿರ್ಬಯಲಿನಿಂದ ಸಹಜತೆ ಹುಟ್ಟಿತ್ತು. ಆ ಸಹಜದಿಂದಲೇ ಸೃಷ್ಟಿ, ಆ ಸೃಷ್ಟಿಯಿಂದಲೇ ಸಂಸಾರ ಹುಟ್ಟಿತು. ಆ ಸಂಸಾರ ದಿಂದಲೇ ಅಜ್ಞಾನ ಹುಟ್ಟಿತು. ಆ ಅಜ್ಞಾನದಿಂದಲೇ ಮರಹು ಹುಟ್ಟಿತು. ಆ ಮರೆಹು ತನುವಿನ ಜ್ಞಾನರತ್ನವನೇ ಮರೆಯಿತು. ತನು ತಾಮಸಕ್ಕೆ ಒಳಗಾಗಿ ನಾನು ನೀನು ಎನ್ನುವ ಅಹಂಕಾರ ತಲೆದೋರಿತು. ಆ ಅಹಂಕಾರದಿಂದಲೇ ತನು ಸೀಮೆಗೆಟ್ಟು ದುಷ್ಕರ್ಮಕ್ಕೆ ಈಡಾಯಿತು. ಅರಿವು ನೀನೆಂಬ ಜ್ಞಾನವನು ಮರೆಯಿತು. ಪುನಃ ತನುವಿಗೆ ತನುವಿನ ಜ್ಞಾನ ಕೃಪೆಯಾದದ್ದಕ್ಕಾಗಿ ಆ ಜ್ಞಾನವೇ ತಾನಾಗಿ ಸರ್ವಜ್ಞನಾಯಿತು.

ಜ್ಞಾನದ ತನುವಿಗೆ ನೋಡಿದ ವನವೆಲ್ಲಾ ಕಲ್ಪತರುವಾಗಿ ಕಂಡಿತು. ಗಿಡವೆಲ್ಲ ಮರಣವಿಲ್ಲದ ಮರುಜವಣಿಯಂತೆ ಗೋಚರಿಸಿತು. ಮೆಟ್ಟಿದ ಶಿಲೆಗಳೆಲ್ಲಾ ಪರುಷವಾದವು. ನಿಂತ ನೆಲವೆಲ್ಲಾ ಅವಿಮುಕ್ತಿ ಕ್ಷೇತ್ರವಾಯಿತು. ಜಲವೆಲ್ಲಾ ನಿರ್ಜರಾಮೃತವಾಯಿತು. ಮೃಗವೆಲ್ಲಾ ಪುರುಷಾಮೃಗವಾಗಿ ಕಂಡವು. ಹೆಡಹುವ ಹರಳೆಲ್ಲಾ ಚಿಂತಾಮಣಿಗಳಾದವು. ತನುವೆಂಬುದೇ ಶ್ರೀಶೈಲ ಗಿರಿಯಾಯಿತು. ಮನ ಶ್ರೀಗಿರಿಯ ಮಲ್ಲಿಕಾರ್ಜುನನನ್ನು ಮೆಚ್ಚಿ; ಆ ಗಿರಿಯ ಸುತ್ತಿ ಸುತ್ತಿ ನೋಡುತ್ತ ಬಂದು; ಕದಳಿಯ ಬನ ಕಂಡು ಆ ಫಲವನೇ ಮೆದ್ದು; ಮರು ಹುಟ್ಟು ಪಡೆಯದೆ ಮರುಜವಣಿಯಾಯಿತು. ಮರಣವಿಲ್ಲದ ಸಿಹಿ ಫಲವಾಯಿತು.

□

**ಅರಿವಿನ ಪರಿಮಳ**

- ತನು ತಾಮಸಕ್ಕೆ ಒಳಗಾಗಿ ನಾನು ನೀನು ಎನ್ನುವ ಅಹಂಕಾರ ತಲೆದೋರಿತು. ಆ ಅಹಂಕಾರದಿಂದಲೇ ತನು ಸೀಮೆಗೆಟ್ಟು ದುಷ್ಕರ್ಮಕ್ಕೆ ಈಡಾಯಿತು. ಅರಿವು ನೀನೆಂಬ ಜ್ಞಾನವನು ಮರೆಯಿತು. ಪುನಃ ತನುವಿಗೆ ತನುವಿನ ಜ್ಞಾನ ಕೃಪೆಯಾದದ್ದಕ್ಕಾಗಿ ಆ ಜ್ಞಾನವೇ ತಾನಾಗಿ ಸರ್ವಜ್ಞನಾಯಿತು.

# ನುಡಿದು ಬೆಳಗುವ ನವರತ್ನದ ತನು

ವಾನರಂಗಳಿಗೆ ಭೈತ್ರ ತಪ್ಪಿ ಬಂದಡೆ
ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗಳು ಸಾರಿದವು.
ಸಾರಿದಡೆ ಆ ವಾನರಂಗಳು ಬಲ್ಲವೆ ಮುತ್ತಿನ ರಕ್ಷೆಯ?
ನವರತ್ನದ ಪೆಟ್ಟಿಗೆಯ ತೆರದು ನೋಡಿ,
ಕೆಯ್ಕೊಂಡು, ವಾನರಂಗಳು ಮೆದ್ದು ನೋಡಿ,
ಹಣ್ಣಲ್ಲವೆಂದು ಬಿಟ್ಟು ಕಳದವು.
ಲೋಕದೊಳಗೆ ಶರಣ ಸುಳಿದಡೆ,
ಆ ಶರಣನ ನಡೆನುಡಿ ಚಾರಿತ್ರವ ಕರ್ಮಿಗಳೆತ್ತ ಬಲ್ಲರು!
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಇರವನು ನಿಮ್ಮ ಶರಣರು ಬಲ್ಲರಲ್ಲದೆ,
ಆ ವಾನರನಂತಹ ಮನುಜರೆತ್ತ ಬಲ್ಲರು.

ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದಡೆ, ಕೂಡಲಸಂಗಮದೇವನೆಂತೊಲಿವನಯ್ಯಾ?

ಬಸವಣ್ಣನವರು ನುಡಿಗಳ ತಜ್ಞರು. ಕೇಳಿದ ನುಡಿಗಳೆಲ್ಲ ತನುವಿಗೆ ಮುತ್ತು ಮಾಣಿಕ್ಯ ಸ್ಫಟಿಕದ ಸಲಾಕೆಗಳಾಗಿ ಹೊಳೆಯುತ್ತ ಬಡಿದವು. ಮುತ್ತು ಮಾಣಿಕ್ಯ ಸ್ಫಟಿಕ ವಜ್ರದ ವ್ಯಾಪಾರಿಗಳು ಸಿಕ್ಕುತ್ತಾರೆ. ಅವುಗಳನ್ನು ಪರೀಕ್ಷಿಸುವ ತಜ್ಞರೂ ಸಿಕ್ಕುತ್ತಾರೆ. ಹೊಳೆಯುವ ನುಡಿಗಳನ್ನು ತನುವಿಗೆ ಚೆಲ್ಲಿ ತನುವನ್ನೇ ಮುತ್ತಿನಂತೆ ಬೆಳಗುವ ತಜ್ಞರು ಸಿಕ್ಕುವುದು ದುರ್ಲಭ ! ಹಾಗೆಯೇ ತನು ನುಡಿದ ನುಡಿಗಳನ್ನೆಲ್ಲ ಬೆಳಗುವ ಮುತ್ತು ಮಾಣಿಕ್ಯ ಸ್ಫಟಿಕದಂತೆ ಸ್ವೀಕರಿಸುವ ತಜ್ಞರು ಸಿಕ್ಕುವುದು ಕೂಡಾ ದುರ್ಲಭ !

ಮರ್ಯಾದಾ ಪುರುಷನೆಂದೇ ಖ್ಯಾತಿ ಹೊಂದಿದ ಶ್ರೀ ರಾಮನಿಗೆ ನುಡಿಗಳನ್ನು ಮುತ್ತು ಮಾಣಿಕ್ಯ ಸ್ಫಟಿಕದಂತೆ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಮಡಿವಾಳನ ನುಡಿಕೇಳಿ ಸೀತಾಮಾತೆಯನ್ನು ಕಾಡಿಗೆ ಕಳುಹಿಸಿದ. ಲೋಕದ ಮಾತುಗಳನ್ನು ಲೋಕದಂತೆ ಸ್ವೀಕರಿಸಿ ಲೋಕವನ್ನು ಬೆರಗು ಮಾಡಿ ತೋರುವುದು ಲೋಕದ ಮನ್ನಣೆಯ ಲಕ್ಷಣ. ಲೋಕದ ಮಾತುಗಳನ್ನು ನಪುಂಸಕ ಮಾಡಿ, ಹೊಳೆಯುವ ಮುತ್ತು ಮಾಣಿಕ್ಯ ಸ್ಫಟಿಕದಂತೆ ಸ್ವೀಕರಿಸುವುದು ಬುದ್ಧ ಬಸವಾದಿ ಶರಣರ ದಾಸವರೇಣ್ಯರ ಲಕ್ಷಣ ! ಇವರು ಕೇಳಿದ ನುಡಿಗಳನ್ನೆಲ್ಲ ನಪುಂಸಕ ಮಾಡಿ ಮುತ್ತು ಮಾಣಿಕ್ಯ ಸ್ಫಟಿಕದ ಬೆಳಕಿನಂತೆ ಸ್ವೀಕರಿಸಿದರು. ನುಡಿದ ನುಡಿಗಳೆಲ್ಲ ಬೆಳಗುವ ಮುತ್ತುಗಳೆ ! ಆದರೆ ಕೇಳುವ ಶಿಕ್ಷಣ ಪಡೆಯಬೇಕು.! ಕೇಳಿ ತನು ಬೆಳಗುವಂತೆ ನುಡಿಯುವ ಶಿಕ್ಷಣ ಪಡೆಯಬೇಕು ! ಇದು ಶರಣ ತನುಗಳಿಗೆ ಮಾತ್ರ ಸಾಧ್ಯ ! ಶಿಕ್ಷಣ ಪಡೆದರೆ ಸರ್ವತನುಗಳಿಗೂ ಸಾಧ್ಯ ! ಆದರೆ ತನುವಿಗೆ ಶಿಕ್ಷಣ ಪಡೆಯುವ ಬಯಕೆಯಾಗಬೇಕು.

ಒಬ್ಬ ಮಹಿಳೆ ಬುದ್ದನನ್ನು ವಾಚಾಮಗೋಚರವಾಗಿ ನಿಂದಿಸಿ ನುಡಿದಳು. ಬುದ್ಧ ಪ್ರಸನ್ನವದನನಾಗಿ, ಹಸನ್ಮುಖದಿಂದ ಸ್ವೀಕರಿಸಿದ. ಹೆಂಡತಿ ಮಕ್ಕಳನ್ನು ಬಿಟ್ಟು ಮಗ ಬುದ್ಧನಿಗೆ ಮಾರು ಹೋಗಿದ್ದ ಮೊಮ್ಮಕ್ಕಳನ್ನು ಸೊಸೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಮಹಿಳೆಗೆ ಬಿದ್ದಿತ್ತು. ಬುದ್ಧನ ಮೇಲೆ ಕೋಪಗೊಂಡು ದೇಹ ಸುಡುವಂತೆ ಗುಡುಗಿದಳು. ಬುದ್ಧ ನಗು ನಗುತ್ತಾ ಕೇಳುತ್ತಿದ್ದ. ಮಹಿಳೆಗೆ ಸಿಟ್ಟು ತಡೆಯಲಾಗಲಿಲ್ಲ; ಉಗಿದಳು. ಬುದ್ಧನಿಗೆ ತಂಪನೆಯ ಜಲ ಬಿಂದುಗಳು ತಾಗಿದಂತಾಗಿ ಪುಳಕಿತಗೊಂಡ ! ಇದನ್ನು ಕಂಡು ಮಹಿಳೆಯ ತನುವಿನಲ್ಲಿ ಹೊತ್ತಿದ್ದ ಜ್ವಾಲೆ ತಣ್ಣಗಾಯಿತು. ನೆರೆದ ಜನ ಮಹಿಳೆ ಬುದ್ಧನ ಪಾದಕ್ಕೆರಗಿದರು ಜಯಕಾರ ಮಾಡಿದರು.

ಬುದ್ಧ ಪೂರ್ವಾಶ್ರಯದ ಸಿದ್ಧಾರ್ಥನಾಗಿದ್ದರೆ ಮಹಿಳೆಯ ರುಂಡ ಆತನ ಖಡ್ಗದಿಂದ ನೆಲಕ್ಕುರುಳುತ್ತಿತ್ತು ! ರಾಜ ಅಹಂಕಾರಿ; ರಾಜನ ಖಡ್ಗಕ್ಕೆ ಹೆದರಿ ದಾಸನಾದ ಪ್ರಜೆಯೂ ಅಹಂಕಾರಿ! ರಾಜನೂ ವಾನರ; ಪ್ರಜೆಗಳೂ ವಾನರರೆ ! ತನುಗಳಲ್ಲಿದ್ದ ಮುತ್ತು ಮಾಣಿಕ್ಯ, ತನುವಿನ ನವದ್ವಾರಗಳಲ್ಲಿದ್ದ ನವರತ್ನಗಳನು ಅರಿಯದ ಅವಿವೇಕಿಗಳು; !

ತನುಗಳೆಂದರೆ ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗಳು. ಸಮುದ್ರ ರಾಜ ಹೊರತಂದು ಈ ಪೆಟ್ಟಿಗೆಗಳನ್ನು ಎಲ್ಲೆಂದರಲ್ಲಿ ಚೆಲ್ಲಿದ್ದಾನೆ. ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗಳೆಂದು ತನುಗಳು ಸಾರಹತ್ತಿವೆ. ಮಾಣಿಕ್ಯದಂತೆ ಫಳಫಳನೆ ಹೊಳೆಯುವ ಎರಡು ಕಣ್ಣುಗಳು, ಬೆಳಗುವ ಹಿತ ನುಡಿಗಳನ್ನು ಕೇಳುವ ಎರಡು ಕಿವಿಗಳು, ಪರಿಮಳ ಹೀರುವ ಮೂಗಿನ ಎರಡು ಹೊಳ್ಳೆಗಳು, ನುಡಿದು ಬೆಳಗುವ ಬಾಯಿ, ತನುವಿಗೆ ಜನ್ಮ ನೀಡುವ ದೇವಾಂಗ, ಅನ್ನ ಉಂಡು ಅಮೃತ ಹೊರಚೆಲ್ಲುವ ಮಹಾದ್ವಾರ ಇವು ತನುವಿನ ನವರತ್ನಗಳಲ್ಲವೇ? ಇವು ನವರತ್ನವೆಂದು ಸಾರಿದಡೆ ತನುವಿನ ಮನವೆಂಬ ವಾನರಂಗಳು ಬಲ್ಲವೆ ? ಇದು ಮುತ್ತಿನ ರಕ್ಷಾ ಕವಚವೆಂದು !

ಮನವೆಂಬ ಮರ್ಕಟಗಳು ತನುವೆಂಬ ನವರತ್ನದ ಪೆಟ್ಟಿಗೆಯನು ತೆರೆದು ನೋಡಿದವು. ಹಣ್ಣಲ್ಲವೆಂದು ಮೆದ್ದು ನೋಡಿ ವ್ಯರ್ಥ ಕಳದವು. ತನುವೆಂಬ ಪೆಟ್ಟಿಗೆ ಜಲದಲಿ ಕೊಳೆತು ಹೋಯಿತು. ಮುತ್ತು ಮಾಣಿಕ್ಯ ನವರತ್ನಗಳು ಜಲದಲಿ ಲೀನವಾದವು.!

ಶರಣನ ನಡೆ ನುಡಿ ಚಾರಿತ್ರವ ಮರ್ಕಟವಾನರ ಕರ್ಮಿಗಳೆತ್ತ ಬಲ್ಲರು ! ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಇರುವನು ನಿಮ್ಮ ಶರಣರು ಮಾತ್ರ ಬಲ್ಲರಲ್ಲದೆ ವಾನರನಂತಹ ಮನುಜರೆತ್ತ ಬಲ್ಲರೆಂದು ಅಕ್ಕ ಮುತ್ತಿನಂತೆ ಬೆಳಗುವ ನುಡಿಯಿಂದ ನುಡಿದು ಬೆಳಗಿದ್ದಾಳೆ.

□

**ಅರಿವಿನ ಪರಿಮಳ**

□ ಬಸವಣ್ಣನವರು ನುಡಿಗಳ ತಜ್ಞರು. ಕೇಳಿದ ನುಡಿಗಳೆಲ್ಲ ತನುವಿಗೆ ಮುತ್ತು ಮಾಣಿಕ್ಯ ಸ್ಫಟಿಕದ ಸಲಾಕೆಗಳಾಗಿ ಹೊಳೆಯುತ್ತ ಬಡಿದವು. ಮುತ್ತು ಮಾಣಿಕ್ಯ ಸ್ಫಟಿಕ ವಜ್ರದ ವ್ಯಾಪಾರಿಗಳು ಸಿಕ್ಕುತ್ತಾರೆ. ಅವುಗಳನ್ನು ಪರೀಕ್ಷಿಸುವ ತಜ್ಞರೂ ಸಿಕ್ಕುತ್ತಾರೆ. ಹೊಳೆಯುವ ನುಡಿಗಳನ್ನು ತನುವಿಗೆ ಚೆಲ್ಲಿ ತನುವನ್ನೇ ಮುತ್ತಿನಂತೆ ಬೆಳಗುವ ತಜ್ಞರು ಸಿಕ್ಕುವುದು ದುರ್ಲಭ

## ವೇಷದ ವಿರಕ್ತ -ಸಹಜ ವಿರಕ್ತ

**ವಿರಕ್ತಿ ವಿರಕ್ತಿ ಯೆಂಬವರು**
**ವಿರಕ್ತಿಯ ಪರಿಯೆಂತುಟು ಹೇಳಿರಯ್ಯಾ?**
**ಕಟ್ಟಿದ್ದ ಲಿಂಗವ ಕೈಯಲ್ಲಿ ಹಿಡಿದು**
**ಬತ್ತಲೆಯಿರ್ದಡೆ ವಿರಕ್ತನೆ?**
**ಉಟ್ಟುದ ತೊರದ ಮತ್ತೆ**
**ಕಟ್ಟಿದ ಲಿಂಗವ ಕೈಯಲ್ಲಿ ಹಿಡಿಯಲೇಬೇಕು.**
**ಉಟ್ಟುದ ತೊರೆಯದೆ**
**ಕಟ್ಟಿದ ಲಿಂಗವ ಕೈಯಲ್ಲಿ ಹಿಡಿದ ಭ್ರಷ್ಟರನೇನೆಂಬೆ**
**ಚೆನ್ನಮಲ್ಲಿಕಾರ್ಜುನಾ ?**

ವಿರಕ್ತನೆಂದರೆ ಯಾರು, ಆತ ಹೇಗಿರಬೇಕು, ವಿರಕ್ತನನ್ನು ಮಾಡಲು ಬರುತ್ತದೆಯೇ? ಜನ ತಮಗಾಗಿ ಮಾಡಿಕೊಂಡ ವಿರಕ್ತ ವಿರಕ್ತನಾಗಲು ಸಾಧ್ಯವೆ? ವೇಷಹಾಕಿಕೊಂಡು ತಾನು ವಿರಕ್ತನಾಗಲು ಬರುತ್ತದೆಯೇ ಎನ್ನುವುದಕ್ಕೆ ಅಕ್ಕಮಹಾದೇವಿಯ ಇನ್ನೆರಡು ವಚನಗಳ ಡೆಫಿನಿಷನ್ ನೋಡಬಹುದು :

''ವಿರಕ್ತಿ ವಿರಕ್ತಿ ಎಂಬರು ವಿರಕ್ತಿಯ ಪರಿ ಎಂತುಟು ಹೇಳಿರಯ್ಯಾ. ಕಟ್ಟಿದ ಲಿಂಗವ ಕೈಯಲ್ಲಿ ಹಿಡಿದಿದ್ದರೆ ವಿರಕ್ತನೆ? ಉಟ್ಟು ಕೆತ್ತುವ ಡೊಂಬನಂತೆ ಬಿಟ್ಟ ಮಂಡೆಯ ಕೇಶವ ನುಣ್ಣಿಸಿ ಬಣ್ಣಿಸಿ, ಎಣ್ಣೆಯ ಗಂಟ ಹಾಕಿದಡೆ ವಿರಕ್ತನೆ? ಕಟ್ಟು ಹರಿದ ಪಂಜಿನಂತೆ, ಬಿಟ್ಟ ಮಂಡೆಯ ಕಟ್ಟದಿರ್ದಡೆ ವಿರಕ್ತನೆ? ಹರದನಂತೆ ಹೇಸಿಯಾಗಿರ್ದಡೆ ವಿರಕ್ತನೆ? ಮೂಗನಂತೆ ಮಾತನಾಡದಿರ್ದಡೆ ವಿರಕ್ತನೆ? ಹೊನ್ನು ಹೆಣ್ಣು ಮಣ್ಣು ಬಿಟ್ಟು ಅಡವಿಯಾರಣ್ಯದಲ್ಲಿರ್ದಡೆ ವಿರಕ್ತನೆ? ಅಲ್ಲ, ವಿರಕ್ತನ ಪರಿಯಂತೆಂದೊಡೆ; ಒಡಲ ಹುಡಿಗಟ್ಟಿ, ಮೃಡನೊಳೆಡದೆರಹಿಲ್ಲದಿರ ಬಲ್ಲಡೆ ವಿರಕ್ತನಪ್ಪನು, ಅಲ್ಲದಿರ್ದಡೆ ಮೈಲಾರಿಮಲ್ಲಿ ಗೊರವಿಯಲ್ಲವೆ ಚೆನ್ನಮಲ್ಲಿಕಾರ್ಜುನಾ?''

**ಅಕ್ಕನ ಮತ್ತೊಂದು ವಚನ :**

''ವಿರಕ್ತಿಯೇ ಅವಿರಕ್ತಿ, ವಿರಕ್ತನೆನ್ನದಿರಣ್ಣಾ, ನೋಟದ ಕರುಳ ಕೊಯ್ಯದನ್ನಕ್ಕರ, ಕ್ರೀಯದ ಕರಬೋನಗಳೊಡೆಯದನ್ನಕ್ಕರ, ಅಷ್ಟಮದಾದಿಗಳೆಂಬವ ಹೊಟ್ಟು ಹುರಿಯದನ್ನಕ್ಕರ, ಬೇಕು ಬೇಡಾಯೆಂದು ಪರಿವ ಸರ್ವಸಂದೇಹವ ಹೂಳದನ್ನಕ್ಕರ ವಿರಕ್ತ ವಿರಕ್ತನೆನ್ನದಿರಣ್ಣಾ, ಶ್ರೀಶೈಲ ಚೆನ್ನಮಲ್ಲಿಕಾರ್ಜುನದೇವನೊಬ್ಬನೆ ವಿರಕ್ತ ಕಾಣಿರಣ್ಣಾ''

**ವಿರಕ್ತಿ ವಿರಕ್ತಿಯೆಂಬವರು ವಿರಕ್ತಿಯ ಪರಿಯೆಂತುಟು ಹೇಳಿರಯ್ಯಾ :**

ಮನ, ತನುವಿಗೆ ವೇಷಹಾಕಿ ವಿರಕ್ತನಾಗುವುದು ಅಲ್ಲ. ಇದು ಹರದನಂತೆ ವ್ಯಾಪಾರವಾಗುತ್ತದೆ. ಇರುವಿಕೆಯಲ್ಲಿ ಹೇಸಿಯಾಗಿರುತ್ತದೆ. ಕಟ್ಟಿಕೊಂಡ ಲಿಂಗ ಕೈಯಲ್ಲಿ ಹಿಡಿದು ಪೂಜಿಸುವುದೂ ಅಲ್ಲ, ಉಟ್ಟ ಬಟ್ಟೆ ಕಳೆದು ಕಾವಿ ಧರಿಸುವುದೂ ಅಲ್ಲ, ಧರಿಸಿದುದನ್ನು ತೊರೆದು,

ಕಟ್ಟಿದ ಲಿಂಗವನು ಕಳಚ ಬೇಕು. ಹುಟ್ಟಿನೊಂದಿಗೆ ಕಟ್ಟಿಕೊಂಡು ಬಂದ ಅರಿವೆಂಬ ಲಿಂಗವನು ಪೂಜಿಸಲೇಬೇಕು. ಆತ ವಿರಕ್ತ !

ಮನ ಲಿಂಗವನ್ನು ತನುವಿಗೆ ಕಟ್ಟಿ ಆ ತನುವಿಗೆ ಕಾವಿ ಧರಿಸಿ, ಶರಣರ ವಚನಗಳನ್ನು ಬಳಸಿಕೊಂಡು, ಮೂರು ಹೊತ್ತು ಕಟ್ಟಿಕೊಂಡ ಲಿಂಗಕ್ಕೆ ಪೂಜಿಸಿದಾತ ವಿರಕ್ತನಲ್ಲ, ಅದು ಮನ ಹಾಕಿಕೊಂಡ ತನುವಿನ ವೇಷ. ಮಂಡೆಬೋಳಿಸಿದಾತನು ವಿರಕ್ತನಲ್ಲ; ಬೋಳಿಸದೆ ಮಂಡೆ ಬಿಟ್ಟವನೂ ವಿರಕ್ತನಲ್ಲ; ಮೂಗನಂತೆ ಮಾತನಾಡದೆ ಮೌನಿಯಾದವನೂ ವಿರಕ್ತನಲ್ಲ; ಹೊನ್ನು ಹೆಣ್ಣು ಮಣ್ಣು ಬಿಟ್ಟು ಅಡವಿಯಲ್ಲಿದ್ದವನು ವಿರಕ್ತನಲ್ಲವೇ ಅಲ್ಲ.

ವಿರಕ್ತಿ ಎನ್ನುವ ಪದವೇ ಅವಿರಕ್ತಿ. ನೋಟದ ಕರುಳ ಕೊಯ್ಯದಿದ್ದರೆ, ತನುವಿನ ಕ್ರಿಯೆಗಳು ನಿಲ್ಲದಿದ್ದರೆ, ಅಷ್ಟಮದಗಳು ಅಡಗದಿದ್ದರೆ, ಬೇಕು ಬೇಡ ಎನ್ನುವುದು ನಿಲ್ಲದಿದ್ದರೆ, ತನುವಿನಲ್ಲಿಯ ಸರ್ವಸಂದೇಹಗಳು ಹೂಳದಿದ್ದರೆ ಆತ ವಿರಕ್ತನಲ್ಲ. ಅರಿವಿನ ಒಡಲು ಹುಡಿಗಟ್ಟಿ ತನುವಿನ ಅರಿವೆಂಬ ಮೃಡನೊಳಗಡೆ ತೆರಹಿಲ್ಲದಂತೆ ಇರಬಲ್ಲಡೆ ಆತ ವಿರಕ್ತ !

ವಿರಕ್ತ ಎಂದರೆ ವಿರಾಗಿ, ಸನ್ಯಾಸಿ, ಉದಾಸೀನ ಮನೋಭಾವದವನು, ತಟಸ್ಥನಾದವನು, ಅನಾಸಕ್ತವಾದ, ವಿರಾಗಿ, ವೈರಾಗ್ಯದಿಂದ ಕೂಡಿದವನು, ಬಣ್ಣಹೋದ; ಬಣ್ಣ ಬಿಟ್ಟ ಎನ್ನುವ ಅರ್ಥಗಳು ನಿಘಂಟನಲ್ಲಿವೆ.

ರಕ್ತ ಎಂದರೆ ಕೆಂಪು ಬಣ್ಣದ ಜಲ. ಇದು ತನುವಿಗೆ ಜೀವ ಜಲವೂ ಹೌದು; ಅರಿವಿನ ಜಲವೂ ಹೌದು.

ಗಿಡ ಮರ ಬಳ್ಳಿಗಳಿಗೆ ವಿರಕ್ತ ಅಂದರೆ ಬಣ್ಣವಿಲ್ಲದ ಜೀವ ಜಲ ಹರಿಯುತ್ತದೆ. ಮರ ನೆಲದಲ್ಲಿ ಬೇರುಬಿಟ್ಟು ತನ್ನ ಜಲದಿಂದಲೇ ಮಣ್ಣುವದ್ದೆಮಾಡಿ, ಆಕಾಶ ನೋಡುತ್ತಾ ಬೆಳೆದು, ಎಲೆ ಹೂ ಕಾಯಿ ಹಣ್ಣುಗಳನ್ನಿತ್ತು, ಕೀಟ, ಪಶು, ಪಕ್ಷಿ ಮನುಕುಲಕ್ಕೆ ಆಶ್ರಯ ಕೊಡುತ್ತದೆ. ಹಣ್ಣಿನಲ್ಲಿ ಮರವನ್ನು ತುಂಬಿ ತಾನು ತಿನ್ನದೆ ಜೀವಕುಲಕ್ಕೆ ಕೊಟ್ಟು ಸಹಜ ಧನ್ಯತಾಭಾವ ಮೆರೆಯುತ್ತದೆ. ಇದು ಬಣ್ಣವಿಲ್ಲದ ಜೀವ ಜಲದ ಸಹಜ ಗುಣ. ಕಡಿದರೂ ಮಾರುತ್ತರವಿಲ್ಲದ ತಟಸ್ಥ ಭಾವ ; ಸಹಜ ವಿರುಕ್ತ ಭಾವ !

ಬಣ್ಣವಿಲ್ಲದ ಜೀವಜಲಬಿಂದು ಗರ್ಭಸೇರಿ ಕೆಂಪು ಬಣ್ಣದ ಜಲವಾಯಿತು. ಬಣ್ಣಗಟ್ಟು ಪಿಂಡವಾಯಿತು. ಎಲುಬು ಮಾಂಸ ಮೂಳೆಯಾಗಿ ಮಜ್ಜಾ ಮೇದಸ್ಸು ಆಯಿತು. ಚರ್ಮದ ಕವಚ ಹೊತ್ತು ತನುವಾಗಿ ಹೊರಬಂದಿತು. ರಕ್ತ ವಿರಕ್ತವಾಗಿ ಅರಿವಾಗಿ ಮಾರ್ಪಟ್ಟಿತು. ಈ ಅರಿವು ಕಣ್ಣಿನಲ್ಲಿ ಬೆರೆತು ನೋಟವೆಂಬ ಹೆಸರು ಪಡೆಯಿತು. ಕಿವಿಯಲ್ಲಿ ಬೆರೆತು ಶಬ್ದವೆಂಬ ಹೆಸರು ಪಡೆಯಿತು. ಚರ್ಮದಲ್ಲಿ ಬೆರೆತು ಸ್ಪರ್ಶವೆಂಬ ಹೆಸರು ಪಡೆಯಿತು. ಈ ಅರಿವೆ ಮೂಗಿನಲ್ಲಿ ಬೆರೆತು ಪರಿಮಳವೆಂಬ ಹೆಸರು ಪಡೆಯಿತು. ನಾಲಿಗೆಯಲ್ಲಿ ಬೆರೆತು ರುಚಿಯೆಂಬ ಹೆಸರು ಪಡೆಯಿತು. ಸರ್ವಾಂಗದಲ್ಲಿ ಬೆರೆತು ಲಿಂಗವೆಂಬ ಹೆಸರು ಪಡೆಯಿತು.

ಸರ್ವಾಂಗದಲ್ಲಿ ಬೆಳಗುವ ಅರಿವಿನ ನೆರಳೆ ಮನವೆಂಬ ಹೆಸರು ಪಡೆದು ತನುವನ್ನು ಆವರಿಸಿತು. ನೋಡುವ ನೋಟದಲ್ಲಿ ಮನ ಬೆರೆತು ನೋಡದಂತೆ ಮಾಡಿತು. ಕೇಳುವ ಕಿವಿಯಲ್ಲಿ

ಬೆರೆತು ಕೇಳದಂತೆ ಮಾಡಿತು. ಮೂಗಿನಲ್ಲಿ ಬೆರೆತು ವಾಸಿಸದಂತೆ, ನಾಲಗೆಯಲ್ಲಿ ಬೆರೆತು ರುಚಿಸದಂತೆ, ಚರ್ಮದಲ್ಲಿ ಬೆರೆತು ಸ್ಪರ್ಶಿಸದಂತೆ ಮಾಡಿತು. ಸರ್ವಾಂಗದಲ್ಲಿ ಮನದ ಕರಾಳ ನೆರಳು ಬೆರೆತು ವಿಕಲಾಂಗನನ್ನಾಗಿ ಮಾಡಿತು. ಸಹಜ ವಿರಕ್ತಜ್ಞಾನ ; ಲಿಂಗಾಂಗ ಸಮರಸ ಜ್ಞಾನ ಬಳಕೆಯಾಗದೆ ಅಂಗದಲ್ಲಿ ಹಾಗೆಯೇ ಉಳಿಯಿತು.

ಲಿಂಗಾಂಗ ಸಮರಸ ಸಹಜ ಜ್ಞಾನ ಉಳ್ಳ ಅಂಗಕ್ಕೆ ಮನದ ಕರಾಳ ನೆರಳು ಆವರಿಸಿ ವಿದೂಷಕನಾಯಿತು. ತನುವಿನ ಮನವೆಂಬ ವಿದೂಷಕನೇ ಪಾತ್ರ ಹಾಕಿ ಶಿಕ್ಷಕನಾಗುತ್ತಾನೆ, ರಾಜ ಕಾರಣಿಯಾಗುತ್ತಾನೆ, ಶಾಸಕ-ಮಂತ್ರಿಯಾಗುತ್ತಾನೆ, ವೈದ್ಯ ಅಭಿಯಂತ, ಅಧಿಕಾರಿಯಾಗುತ್ತಾನೆ. ಕಳ್ಳ, ಸುಳ್ಳ, ಹಾದರಿಗ, ಉಗ್ರವಾದಿ, ವೇಶ್ಯೆ-ವಿಟನಾಗುತ್ತಾನೆ.

ಈ ಕರಾಳನೆರಳೆಂಬ ಮನವೇ ಜಗದ್ಗುರು, ಮಠಾಧಿಪತಿ, ಪೀಠಾಧಿಪತಿಯಾಗುತ್ತದೆ. ಹಣ ಆಸ್ತಿ ಕಾರು ಬಂಗಲೆಗಳುಳ್ಳ, ಶಾಲಾ ಕಾಲೇಜುಗಳುಳ್ಳ ಮಠಕ್ಕೆ ಪೀಠಾಧಿಪತಿಯಾಗಿ ವಿರಕ್ತನ ವೇಷ ಹಾಕುತ್ತದೆ. ಮನವೆಂಬುದು ತನುವಿನ ಜೋಕರ್ ! ಅದು ಪಾತ್ರಧಾರಿಯೇ ಹೊರತು ಸಹಜನಲ್ಲ.

ಮನ ಆಯಾ ವೃತ್ತಿಯ ಮಾತುಗಳನ್ನು ಕಲಿತು ಹಾಕುವ ಪಾತ್ರ ಸಹಜವಾಗಿರಲು ಸಾಧ್ಯವೇ ಇಲ್ಲ. ಕುಂಟುತ್ತ ಎಡವುತ್ತ ತೆವಳುತ್ತ ತನುವಿನ ಪಾತ್ರದ ಅವಧಿ ಪೂರೈಸುತ್ತದೆ. ಕೆಲಕಾಲ ಪಾತ್ರ ಹಾಕಿ ಕೆಲಸ ಮಾಡಿದ ತನುವಿನಲ್ಲಿ ಮಾಜಿಯಾಗಿ ಉಳಿದು, ಸಹಜ ತನುವಿಗೆ ರಕ್ಕಸನ ಪಟ್ಟ ಕಟ್ಟಿ; ತನುವಿನೊಂದಿಗೆ ಒಮ್ಮೆ ಇಲ್ಲವಾಗುತ್ತದೆ !

ಜನ, ಸರಕಾರ, ಕೋರ್ಟ, ಪೊಲೀಸರು ನಿತ್ಯಾನಂದನ ಪಾತ್ರಧಾರಿ ಮನಕ್ಕೆ ಶಿಕ್ಷೆ ಕೊಡುವುದಿಲ್ಲ, ತನುವಿಗೆ ಶಿಕ್ಷೆ ಕೊಡುತ್ತಾರೆ. ಮನದ ಪಾತ್ರವೇ ಹಾಗೆ ! ಇದರ ಹಕೀಕತ್ತು ಸ್ವತಹ ತನುವಿಗೇ ಗೊತ್ತಾಗುವುದಿಲ್ಲ ! ತನುವನ್ನು ತನುವಿನ ಅರಿವನ್ನೂ ಮರೆಮಾಚಿ, ಮನ ತನುವಿಗೆ ಪಾತ್ರ ಹಾಕುತ್ತದೆ. ತನುವಿನ ಅರಿವು 24X7 ಮನ ಹಾಕಿದ ಪಾತ್ರಕ್ಕೆ ಛೀ ಥೂ ಎನ್ನುತದೆ. ಜನವೂ ತನುವಿಗೆ ಛೀ ಥೂ ಎನ್ನುತ್ತಾರೆ. ಯಾರೇನೆಂದರೂ ಮನವೆಂಬುದು ಉಗುಳುಮಾರಿ ದೇವರಿದ್ದಂತೆ.

ತನುವಿನಲ್ಲಿ ಅರಿವೆಂಬ ಸಹಜ ದೇವರಿದ್ದಾನೆ; ಮನ ಅರಿವೆಂಬ ದೇವರಿದ್ದ ತನುವಿಗೆ ವೇಷ ಹಾಕುತ್ತದೆ. ಜನ ದೇವರಿದ್ದ ತನುವಿಗೆ ಉಗುಳುತ್ತಾರೆ ಎಂದರೆ ತನು ಉಗುಳುಮಾರಿ ದೇವರಾಗಲಿಲ್ಲವೆ? ತನ್ನ ಅರಿವಿನ ಬೆಳಕಿನಿಂದ ಕರಾಳ ಮನವನ್ನು ಬೆಳಗಬೇಕೆಂಬ ನಿಲುವು ಅರಿವೆಂಬ ದೇವರಿಗಿಲ್ಲ; ಆ ಬೆಳಕಿನಲ್ಲಿ ಮನ ಲೀನವಾಗಿ ವಿರಕ್ತನೆಂಬ ಬೆಳಕೇ ತಾನು ಆಗಿ ಬೆಳಗಬೇಕೆಂಬ ಛಲ ಮನವೆಂಬ ಕರಾಳ ಕತ್ತಲಿಗಿಲ್ಲ. ಹೀಗೆ ತನುವನ್ನು ಮನ ಮುಗ್ಗಲು ಮಾಡುತ್ತಾ ಬೆಳಕು ಕತ್ತಲಿನಾಟ ತನು ಹುಟ್ಟಿದಂದಿನಿಂದ ಸಾಗುತ್ತಲೇ ಬಂದಿದೆ.

□

---

**ಅರಿವಿನ ಪರಿಮಳ**

□ ರಕ್ತ ಎಂದರೆ ಕೆಂಪು ಬಣ್ಣದ ಜಲ. ಇದು ತನುವಿಗೆ ಜೀವ ಜಲವೂ ಹೌದು; ಅರಿವಿನ ಜಲವೂ ಹೌದು. ಗಿಡ ಮರ ಬಳ್ಳಿಗಳಿಗೆ ವಿರಕ್ತ ಎನ್ನುವ ಬಣ್ಣವಿಲ್ಲದ ಜೀವ ಜಲ ಹರಿಯುತ್ತದೆ.

# ಅಕ್ಕ ಮನಕ್ಕೆ ಹೇಳಿದ ಮೂರು ಕತೆಗಳು

**ಶಿವಂಗೆ ತಪ್ಪಿದ ಕಾಲ ಭಕ್ತವಾದುದನರಿಯಾ?**
**ಶಿವಂಗೆ ತಪ್ಪಿದ ಕಾಮನುರಿದುದನರಿಯಾ?**
**ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ?**
**ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ,**
**ಭವಘೋರ ನರಕವೆಂದರಿಯಾ ಮರುಳೆ?**

**ಶಿವಂಗೆ ತಪ್ಪಿದ ಕಾಲ ಭಸ್ಮವಾದುದನರಿಯಾ:**

ಶಿವನನ್ನು ಕುರಿತು ತಪ ಮಾಡಿದ ಕಾಲನ ತಂದೆಯನ್ನು ನಪುಂಸಕನೆಂದು ಜನ ಅಪಹಾಸ್ಯ ಮಾಡಿದರು. ಪುನಃ ತಪ ಮಾಡಿ ಗೊಲ್ಲತಿಯನ್ನು ಸೇರಿ ಕಾಲನನ್ನು ಪಡೆದನು. ಶಿವನ ವರದಿಂದ ಹುಟ್ಟಿದ ಕಾಲ ತಪ್ಪು ಮಾಡಿ ಶಿವನಿಂದಲೇ ಭಸ್ಮವಾದುದನರಿಯೆಯಾ ಎಲೆ ಮನವೆ?

**ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ?:**

ತಾರಕಾಸುರ ಶಿವನನ್ನು ಕುರಿತು ತಪಸ್ಸು ಮಾಡಿದ. ನಮ್ಮ ಗರ್ಭದಲ್ಲಿ ಜನಿಸಿದ ಆರು ಮುಖದ ಬಾಲಕನ ಹೊರತು ಯಾರಿಂದಲೂ ಮರಣ ಬಾರದಂತೆ ಶಿವ ವರ ಕರುಣಿಸಿದ. ದಕ್ಷ ಮಾಡಿದ ಯಜ್ಞದಲ್ಲಿ ಶಿವನ ಸತಿ ದಾಕ್ಷಾಯಣಿ ಆತ್ಮಹತ್ಯೆ ಮಾಡಿಕೊಂಡಳು. ಸತಿ ದಾಕ್ಷಾಯಣಿ ಸತ್ತುದಕ್ಕೆ ತಾರಕಾಸುರನ ಉಪಟಳ ಅಧಿಕವಾಯಿತು. ಇನ್ನೆಂದೂ ಶಿವನಿಗೆ ಮಕ್ಕಳಾಗುವುದಿಲ್ಲವೆಂದು ಸಂತೋಷಪಟ್ಟ ! ಶಿವ ತಪ ಮಾಡಲು ಹೊರಟ. ಶಿವ ಮದುವೆಯಾಗಿ ಷಣ್ಮುಖನಿಗೆ ಜನ್ಮ ನೀಡಲು ದೇವತೆಗಳು ಕಾಮನನ್ನು ಪ್ರಾರ್ಥಿಸಿದರು. ಕಾಮ ಶಿವನನ್ನು ಉದ್ರೇಕಿಸಲು ಹೂ ಬಾಣ ಬಿಟ್ಟ. ಎಚ್ಚರಗೊಂಡು ತಪ್ಪು ಮಾಡಿದ ಕಾಮನನ್ನು ಶಿವ ತನ್ನ ಉರಿಗಣ್ಣಿನಿಂದಲೇ ಭಸ್ಮ ಮಾಡಿದ.

**ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ?:**

ವಿಷ್ಣು ಮತ್ತು ಬ್ರಹ್ಮರಲ್ಲಿ ಯಾರು ದೊಡ್ಡವರೆಂದು ಪಣಕ್ಕೊಡ್ಡಿದರು. ನಾನೇ ದೊಡ್ಡವನೆಂದು ವಿಷ್ಣು, ನಾನೇ ದೊಡ್ಡವನೆಂದು ಬ್ರಹ್ಮ. ಶಿವನ ಪಾದ, ಶಿವನ ನೆತ್ತಿ, ಯಾರು ಮೊದಲು ಮುಟ್ಟುತ್ತಾರೋ ಅವರು ದೊಡ್ಡವರೆಂದು ದೇವತೆಗಳು ತೀರ್ಮಾನಿಸಿದರು. ವಿಷ್ಣು ಪಾದವನ್ನು ಹುಡುಕಲು ಭೂಮಿಯನ್ನು ಅಗೆದು ಅಗೆದು ಸಾಕಾಯಿತು. ಪಾತಾಳದಿಂದತ್ತತ್ತ ಇದ್ದ ಶ್ರೀಚರಣ ಸಿಕ್ಕಲೇ ಇಲ್ಲವೆಂದು ಸೋತುಹೋದ. ಬ್ರಹ್ಮ ಶಿವನ ಶಿರ ಹುಡುಕಲು ಮೇಲೆ ಮೇಲೆ ಹೋದ. ಶಿರ ಬೆಳೆಯುತ್ತಾ ಹೋಯಿತು ಬ್ರಹ್ಮಾಂಡದಿಂದತ್ತತ್ತ ಇದ್ದ ಶಿವನ ತುದಿ ಬ್ರಹ್ಮನಿಗೆ ಸಿಕ್ಕಲೇ ಇಲ್ಲ. ಪಣದಲ್ಲಿ ನಾನು ಸೋಲಬಾರದೆಂದು, ನೋಡಿದೆನೆಂದು ಸುಳ್ಳು ಕೂಡಾ ಆಡಬಾರದೆಂದು ಚತುರ್ಮುಖ ಬ್ರಹ್ಮ ಮತ್ತೊಂದು ತಲೆ ಸೃಷ್ಟಿಸಿಕೊಂಡ . ಆ ತಲೆಯಿಂದ ನಾನು ತುದಿ ನೋಡಿದೆನೆಂದು ಗುರುತಿಗಾಗಿ ಕ್ಯಾದಿಗೆ ಎಸಳೊಂದನ್ನು ತಂದನಂತೆ. ಸುಳ್ಳು ಆಡಿ ತಪ್ಪು ಮಾಡಿದ ಬ್ರಹ್ಮನ ಶಿರವನ್ನು ಶಿವ ಕೂಡಲೇ ಕಡಿದು ಹಾಕಿದ. ಎಲೆ ಮನವೇ ಕೇಳು, ತಪ್ಪು ಮಾಡಿದ ಬ್ರಹ್ಮನ

ಶಿರವನ್ನೂ ಕಡಿದು ಹಾಕಿದ ಶಿವನನ್ನು ನೀನು ತಿಳಿಯದೇ ಹೋದೆಯಾ?

**ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ, ಭವ ಘೋರ ನರಕವೆಂದರಿಯಾ ಮರುಳೆ?:**

ಜಗದಗಲ ಮುಗಿಲಗಲ, ಮಿಗೆಯಗಲ ಎಮ್ಮಗಲ. ಪಾತಾಳದಿಂದ ಅತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀಮುಕುಟ. ಅಗಮ್ಯ ಅಗೋಚರ ಅಪ್ರಮಾಣ ಅಪ್ರತಿಮಲಿಂಗವೇ ಕೂಡಲಸಂಗಮದೇವಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ ಎಂದಿದ್ದಾರೆ ಬಸವಣ್ಣ.

ಕೂಡಲಸಂಗಮದೇವನೆಂಬ ಶಿವ, ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ದೇವರು ತನುವಿನಲ್ಲಿ ಬಂದು ಚುಳುಕಾಗಿದ್ದಾರೆ. ಜಗದಗಲ ಮುಗಿಲಗಲ ಪಾತಾಳದಿಂದತ್ತತ್ತ, ಬ್ರಹ್ಮಾಂಡದಿಂದತ್ತತ್ತ ಇದ್ದ ಅರಿವೆಂಬ ಸಾಕ್ಷಾತ್ ಶಿವನೆ ತನುವಿನಲ್ಲಿ ಬಂದು (ಚುಳುಕು) ನ್ಯಾನೋ ಆಗಿದ್ದಾನೆ. ಆತನನ್ನು ಅಪ್ಪಿಕೊಂಡು ಆತನ ಪಾದಕ್ಕೆ ಶರಣೆನ್ನು ಎಲೆ ಮರುಳು ಮನವೇ. ತಪ್ಪಿದಡೆ ತನು ಇರುವವರೆಗೆ ಭವಘೋರ ನರಕ ನಿನಗೆ ಬಿಟ್ಟಿದ್ದಲ್ಲ ಎಲೆ ಮನವೆ.

ಕಾಲ ಭಸ್ಮನಾದದ್ದು, ಕಾಮ ಉರಿದದ್ದು, ಬಹ್ಮನ ಶಿರ ಹೋದದ್ದು ಕೂಡಾ ಶಿವನೆಂಬ ಅರಿವು ಅರಿಯದಿದ್ದಕ್ಕಾಗಿ ಎಂದು ಅಕ್ಕ ತನುವಿನ ಮನಕ್ಕೆ ಮೂರು ಮಹಾ ಕತೆಗಳನ್ನು ಹೇಳಿದ್ದಾಳೆ.

□

# ತನುವೆಂಬುದು ಅರಿವಿನ ಅಮೃತದ ಬುಗ್ಗೆ

ವೇದ ಶಾಸ್ತ್ರಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ .
ಇವ ಕುಟ್ಟಲೇಕೆ ಕುಸುಕಲೇಕೆ ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚಬಿರಿಯ ಬಯಲು ಚನ್ನಮಲ್ಲಿಕಾರ್ಜುನ .

**ವೇದ ಶಾಸ್ತ್ರಆಗಮ ಪುರಾಣಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ:**

ವೇದ ಶಾಸ್ತ್ರ ಆಗಮ ಪುರಾಣ ಭಗವದ್ಗೀತೆ ಬೈಬಲ್‌ಗಳಿಗೆ ಜನ್ಮ ನೀಡಿದ್ದು ದೇಹ. ಅರಿವು ಪುಸ್ತಕಗಳನ್ನು ದೇಹದ ಮೂಲಕ ಜನ್ಮ ನೀಡುತ್ತದೆ. ಮನ ಪುನಃ ದೇಹದ ಮೂಲಕ ಅವುಗಳನ್ನು ಸಂಗ್ರಹಿಸುತ್ತದೆ. ದೇಹ ಋಷಿಮುನಿ ಗಳದಾದರೇನು, ಬುದ್ಧ ಬಸವ ಮಹಾವೀರ ದಾಸವರೇಣ್ಯರದಾದರೇನು? ಕ್ರಿಷ್ಣ, ಕ್ರಿಸ್ತರದಾದರೇನು? ದೇಹ ದೇಹವೇ. ಅದು ಕೊಟ್ಟಣ. ನೆಲ್ಲು ಬೆಳೆಯುವುದೊಂದೆ ಗದ್ದೆಯ ಕೆಲಸ ಹೇಗೆಯೋ ಹಾಗೆಯೇ ಅರಿವಿನ ಅಮೃತ ಚೆಲ್ಲುವುದೊಂದೇ ದೇಹದ ಕೆಲಸ . ಅದು ಮಾತಾಗಿರಬಹುದು; ಅಕ್ಷರಗಳಿಂದ ಹೊರಚೆಲ್ಲುವ ಕೆಲಸವಾಗಿರಬಹುದು.

ಮಾತಲ್ಲದ ಅಮೃತಸಮಾನವಾದ ಮಾತುಗಳನ್ನು, ಅಕ್ಷರಗಳನ್ನು ಹೊರ ಚೆಲ್ಲಿದಾತ ಅಕ್ಷರೋತ್ತಮ! ದೇಹದ ಮೂಲಕವೇ ಚೆಲ್ಲುತ್ತಾನೆ . ಅಂದಮೇಲೆ ದೇಹ ಚೆಲ್ಲಿದ ಮಾತುಗಳು, ದೇಹ ಚೆಲ್ಲಿದ ಅಕ್ಷರಗಳು ದೇಹಕ್ಕೆ ಎಂಜಲಾಗಲಿಲ್ಲವೇ. ದೇಹ ಉಗುಳಿದ್ದನ್ನು ದೇಹ ಎಂದೂ ಒಳಗೆ ಸೇರಿಸಿಕೊಳ್ಳುವುದಿಲ್ಲ. ಅದು ನಿರಂತರ ನೆಲ್ಲು ಬೆಳೆಯುವಗದ್ದೆ; ನುಚ್ಚು ತೌಡನ್ನು ಏನು ಮಾಡೀತು ! ಇವುಗಳನ್ನು ಕುಟ್ಟಿ ಕೇರುವ ಕೆಲಸ ದೇಹಕ್ಕೆ ನಿರರ್ಥಕ !! ಅದು ಬೇಡಿದಂತೆಲ್ಲ ನಿರಂತರ ಅಮೃತದ ಸುಧೆಯನ್ನು ಕೊಡುವ ಕಾಮಧೇನು ! ಮಥನ ಮಾಡಿ ಮನವನ್ನು ಹೊರತೆಗೆಯಬೇಕಷ್ಟೆ.

**ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚಬಿರಿಯ ಬಯಲು ಚೆನ್ನಮಲ್ಲಿಕಾರ್ಜುನಾ:**

ಮನ ಅರಿವಿನ ದೇಹದಲ್ಲಿ ಆವರಿಸಿಕೊಂಡು ವೇದವನೋದಿ ಹಾರುವನ ವೇಷ ಹಾಕಿದೆ . ಬೈಬಲ್ ಓದಿ ಕ್ರಿಸ್ತನ ವೇಷವ ಹಾಕಿದೆ. ಭಗವದ್ಗೀತೆ ಓದಿ ಕೃಷ್ಣನ ನಾಮವ ಬರೆದಿದೆ.

ಆಗಮ ಪುರಾಣಗಳನ್ನು ಓದಿ ಪಂಡಿತ ಶಾಸ್ತ್ರಿಗಳ ವೇಷಹಾಕಿದೆ. ವಚನಗಳನ್ನು ಓದಿ ದೇಹಕ್ಕೆ ಲಿಂಗಕಟ್ಟಿ ವಿಭೂತಿ ಧರಿಸಿದೆ. ತಿಳಿಯದೆ ಮಂತ್ರಗಳನ್ನು ಓದಿ ಜುಟ್ಟುಬಿಟ್ಟು ಜನಿವಾರಗಳನ್ನು ಹಾಕಿದೆ. ದೇಹದಿಂದ ಬಂದ ಮಂತ್ರ ಗಳನ್ನು ಓದಿ ಪುಳಕಿತಗೊಂಡ ಮನ ದೇಹಕ್ಕೆ ಆಯಾ ವೇಷಗಳನ್ನು ಹಾಕಿ ಜಾತಿ ಮತ ಪಂಥಗಳತ್ತ ಸುಳಿಯುವಂತೆ ಮಾಡಿದೆ .

ಬೈಬಲ್ ಓದಿದ ಮನ ಭಗವದ್ಗೀತೆ ಓದುವ ದೇಹವನ್ನು ಕೊಚ್ಚಿ ಹಾಕುತ್ತದೆ. ವೇದ

ಶಾಸ್ತ್ರ ಆಗಮ ಪುರಾಣಗಳನ್ನು ಓದುವ ಮನ ಬೈಬಲ್ ಓದುವ ದೇಹವನ್ನು ಕೊಚ್ಚಿಹಾಕುತ್ತದೆ. ಪ್ರಾರ್ಥನೆಮಾಡುವ ದೇಹ ಬೈಬಲ್ ಭಗವದ್ಗೀತೆ ವೇದ ಆಗಮ ಪುರಾಣಗಳನ್ನು ಓದುವ ದೇಹವನ್ನು ಕೊಚ್ಚಿ ಹಾಕುತ್ತದೆ.

ಮನವೆಂಬುದು ದೇಹದಲ್ಲಿ ಸೇರಿದ ಪೆಡಂಭೂತ. ಅದಕ್ಕೆ ದೇಹವೇ ಆಹಾರ ! ಹಿಂದು ಮುಸಲ್ಮಾನ ಕ್ರೈಸ್ತ ಫಾರಸಿ ಬೌದ್ಧ ಜೈನ ಲಿಂಗಾಯತರನ್ನಾಗಿ ಮಾಡಿದೆ . ಹೆಣ್ಣು ಗಂಡು,ಜಾತಿ ಮತ ಪಂಥಗಳನ್ನಾಗಿ ವಿಂಗಡಿಸಿದೆ. ಭಾಷೆ ವೇಷ ಬದಲಾದರೇನು ದೇಹದ ಭಾವ ಒಂದಲ್ಲವೆ? ದೇಹವು ಒಂದೇ ಅಲ್ಲವೆ !

ತನುಗಳೆಲ್ಲ ಅರಿವಿಗೆ ಹೋಗಲು; ಕ್ರಿಸ್ತ, ಕ್ರಿಷ್ಣ, ಬುದ್ಧ, ಬಸವ ಅರಿವಿನ ಅಮೃತ ಉಣ್ಣಿಸಿದರು. ಮನವೆಂಬ ಭೂತ ಆ ಅರಿವನುಂಡು ಆ ಅರಿವೇ ತಾನಾಗಬೇಕಿತ್ತು . ಆದರೆ ಹಾಗಾಗಲಿಲ್ಲ; ಆ ಮಹಾನುಭಾವರನ್ನು ಆರಾಧಿಸಿತು. ಅವರನ್ನು ಆರಾಧಿಸದ ತನುಗಳನ್ನೆಲ್ಲ ಕಡಿದುಹಾಕಿತು . ದೇಹದ ಮನವೆಂಬ ದೆವ್ವ ಸಾಯಲೆಂದು ಅವರು ಅರಿವಿನ ಔಷಧಿ ಕೊಟ್ಟರು. ಆ ಔಷಧಿಯನೇ ಉಂಡ ಮನವೆಂಬ ದೆವ್ವ ಬೃಹದಾಕಾರದ ರಾಕ್ಷಸನಾಯಿತು. ಅವರಂತೆ ಅರಿವಾಗಲಿಲ್ಲ.! ರಕ್ಕಸ ಬೀಜಕ್ಕೆ ಅಮೃತದಲೇಪ! ಬಿತ್ತಿದೆಡೆಯೆಲ್ಲೆಲ್ಲ ರಕ್ಕಸ ಬಳ್ಳಿಯೆ ಬೆಳೆಯಿತು.

ತನುವೆಂಬುದು ಕೊಟ್ಟಣ; ಬತ್ತದ ಗದ್ದೆ. ಅದು ಅನ್ನಕ್ಕೆ ಜನ್ಮ ಕೊಡುತ್ತದೆ, ಹಾಗೆಯೇ ತನು ಅರಿವಿಗೆ ಜನ್ಮ ಕೊಡುತ್ತದೆ . ಅನ್ನಕ್ಕೆ ಜನ್ಮ ಕೊಟ್ಟ ಗದ್ದೆ ಹೊಟ್ಟನ್ನು ನುಚ್ಚನ್ನು ಏನು ಮಾಡೀತು? ಹಾಗೆಯೇ ದೇಹದಿಂದ ಬಂದ ವೇದ ಶಾಸ್ತ್ರ ಆಗಮ ಪುರಾಣಗಳನ್ನು ಓದಿ ದೇಹ ಏನು ಮಾಡೀತು? ಮನ ಓದಿ ಪಂಡಿತ ಶಾಸ್ತ್ರಿ ಎಂದು ಬಿರುದು ಪಡೆಯುತ್ತದೆ. ಪಂಡಿತ ಎಂದಾಗ ಹಿಗ್ಗುತ್ತದೆ ಪಾಮರ ಎಂದಾಗ ಕುಗ್ಗುತ್ತದೆ. ಇವೆರಡೂ ಮನಕ್ಕೆ ಬೇಕಾದ ಕೆಲಸ . ಅರಿವಿಗೆ ಇವೆರಡೂ ಬೇಕಿಲ್ಲ. ಮನ ಓದಿ ಪಂಡಿತನಾದರೂ ಅರಿವಿಗೆ ಪಾಮರನೇ, ಓದದೇ ಪಾಮರನೆನಿಸಿಕೊಂಡರು ಅರಿವಿಗೆ ಗಾಸಿಯಿಲ್ಲ , ಅದು ಜಗದಗಲ ಮುಗಿಲಗಲ.

''ನಿತ್ಯ ನಿರಂಜನ ತಾನೆಂದರಿಯದೆ ತತ್ವಮಸಿ ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿಸಾವ. ತಮ್ಮ ತಾವರಿಯದೆ ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ'' ಎಂದು ಅಲ್ಲಮಪ್ರಭುಗಳು ಮನವೆಂಬ ನಾಯಿಯನ್ನು ಎಚ್ಚರಿಸಿದ್ದಾರೆ.

''ಓದಿದಡೇನು, ಕೇಳಿದಡೇನು, ಶಿವ ಪಥವನರಿಯದನ್ನಕ್ಕ? ಓದಿತ್ತು ಕಾಣಿರೋ ಶುಕನು ಶಿವಜ್ಞಾನವನ್ನರಿಯದನ್ನಕ್ಕ; ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು. ಕೂಡಲಸಂಗಮದೇವಾ''

ಓದಿ ಕೆಟ್ಟ ಕೂಚುಭಟ್ಟ ಎನ್ನುವಂತೆ ಓದಿದವನು ಪಂಡಿತನಾಗಬಹುದು ; ಅದು ಗಿಳಿಯ ಓದಿನಂತೆ ಮನದ ವ್ಯಾಪಾರ ! ಗಿಳಿ ಒಂದೇ. ಕಟುಗರ ಮನೆಯಲ್ಲಿದ್ದ ಗಿಳಿಯ ಮಾತುಗಳೇ ಬೇರೆ; ಪಂಡಿತರ ಮನೆಯಲ್ಲಿದ್ದ ಗಿಳಿಯ ಮಾತೇ ಬೇರೆ. ಓದಿ ದುದು ಪಂಡಿತ ಶಾಸ್ತ್ರಿಗಳಿಗೆ ವ್ಯವಹಾರವಾಯಿತು . ಅದೇ ಓದಿದ ಫಲ ಮಾದಾರ ಚೆನ್ನಂಗಾಯಿತ್ತು .ಶರಣ ಚೆನ್ನಯ್ಯನವರು ಓದಿ ಶಿವ ಪಥವನ್ನರಿತರು ಅರಿವಿನ ಮಾರ್ಗದತ್ತ ಸಾಗಿ ಅರಿವೇ ತಾವಾದರು.

ಗದ್ದೆ ಅನ್ನ ಬೆಳೆಯಿತು. ಚನ್ನಯ್ಯನ ತನು ಅರಿವಿನ ಅಮೃತ ಚೆಲ್ಲಿತು. ಆತ ನೋಡಿದ್ದೆಲ್ಲ ಅಮೃತವಾಯಿತು ಕೇಳಿದ್ದೆಲ್ಲ,ಮುಟ್ಟಿದ್ದೆಲ್ಲ,ವಾಸಿಸಿದ್ದೆಲ್ಲ ಅಮೃತವೇ ಆಯಿತು. ಶಿವ ಬಯಕೆಯಿಂದ ಚೆನ್ನಯ್ಯನ ಮನೆಗೆ ಬಂದ ; ಅರಿವೆಂಬ ಅಮೃತ ಸವಿಯುತ್ತ ಆ ಹೃದಯದಲ್ಲಿಯೇ ನಿಂದ.

ವೇದ ಶಾಸ್ತ್ರ ಆಗಮ ಪುರಾಣಗಳು ಬರಿಯ ಮಾತುಗಳು. ಅಲ್ಲಿ ಕಾಣುವುದೆಲ್ಲ ಮಾತಿನ ಮಾಲೆಯ ಹುಸಿಕಾಳಗ. ಅದು ಒಂದು ತನುವಿನಿಂದ ಹೊರಬಂದು ಪ್ರಯೋಗಕ್ಕೆ ಗುರಿಯಾಗಿ ಸೀಳಿಹೋದ ಬಾಣ; ಅದು ಮತ್ತೆ ಪ್ರಯೋಗಕ್ಕೆ ಗುರಿಯಾಗಲಾರದು. ''ವೇದದಂತುಟಲ್ಲ, ಶಾಸ್ತ್ರದಂತುಟಲ್ಲ, ಗೀತಾ ಮಾತಿನಂತುಟಲ್ಲ ಕೇಳಯ್ಯಾ. ಈ ಮಾತಿನ ಮಾತಿನ ಕವಳಗೋಲ ಶ್ರವದಲ್ಲಿ ಸತ್ತವರೂಳರೆ ಅಯ್ಯಾ? ದಿಟದಲಗಿನ ಕಾಳೆಗವಿತ್ತಲಿದ್ದುದೆ ಕೂಡಲ ಸಂಗನ ಶರಣರು ಬಂದಲ್ಲಿ! '' ಎಂದು ಬಸವಣ್ಣನವರು ಮನದ ಮಾತನಳಿಯುವ ಹೃದಯದ ಮಾತನ್ನು ಹೇಳಿದ್ದಾರೆ.

ತನುವೆಂಬುದು ಅರಿವಿನ ಅಮೃತದ ಬುಗ್ಗೆ. ಅದನ್ನು ಯಾರು ಕರುಣಿಸಬೇಕಿಲ್ಲ . ಆಶೀರ್ವದಿಸಬೇಕಿಲ್ಲ. ದೇಶದ ನೂರಾಹತ್ತು ಕೋಟಿ ತನುಗಳು ಹಾಗೆಯೇ ಇವೆ. ಪ್ರಪಂಚದ ತನುಗಳೆಲ್ಲ ಒಂದೇ. ತನುವೇ ಪುಸ್ತಕದ ಕಾರ್ಖಾನೆ. ಅದರೊಡೆಯ ಅರಿವೆಂಬ ಅಕ್ಷರೋತ್ತಮ ! ಆ ಒಡೆಯನಿಂದಲೇ ಸಕಲ ವೇದ ಆಗಮ ಪುರಾಣಗಳು , ಭಗವದ್ಗೀತೆ , ಬೈಬಲ್‌ಗಳು. ''ವೇದ ನಡನಡುಗಿತ್ತು. ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ! ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ ! ಆಗಮ ಹೆರತೊಲಗಿ ಅಗಲಿದ್ದಿತ್ತಯ್ಯಾ ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ ''

ಮಾದರ ಚೆನ್ನಯ್ಯ ಪುಸ್ತಕ ಓದಲಿಲ್ಲ.ಅರಿವಿನ ಅಕ್ಷರೋತ್ತಮನನ್ನೇ ಓದಿದ, ಅವನನ್ನೇ ಉಂಡ, ಅವನನ್ನೇ ತೇಗಿದ. ಅಕ್ಷರೋತ್ತಮನೇ ತಾನಾದ. ಅವನು ತೇಗಿದ ತೇಗಿಗೆ ವೇದಗಳು ಗಡಗಡನೆ ನಡುಗಿದವು. ಶಾಸ್ತ್ರಗಳು ನೆಲ ಕಚ್ಚಿದ್ದವು. ತರ್ಕ ತರ್ಕಿಸಲರಿಯದೆ ಮೂಕನಾಯಿತು. ಆಗಮ ಹೊರ ತೊಲಗಿತು ಎನ್ನುತ್ತಾರೆ ಬಸವಣ್ಣ .

ಬುದ್ಧ ಬುದ್ಧನನ್ನು ಮಾಡ ಹೊರಟ; ಜನ ಆತನ ಪುಸ್ತಕ ಓದಿ ಬೌದ್ಧರಾದರು. ಬುದ್ಧನಿಗೆ ಮಾರಿಯಾದರು. ಕ್ರಿಸ್ತ ಜನರನ್ನು ದೇವಮಾನವರನ್ನಾಗಿ ಮಾಡಲು ಬೈಬಲ್‌ನಲ್ಲಿ ಅರಿವಿನ ಸೂತ್ರಗಳನ್ನು ಹೆಣೆದ. ಅರಿವಿಗೆ ಹೋಗುವ ಮಾರ್ಗಕ್ಕೆ ನೀಲನಕ್ಷೆ ಬರೆದ. ಓದಿದ ಜನ ಬೈಬಲ್ ಮುದ್ರಿಸಿದರು . ಕ್ರಿಶ್ಚಿಯನ್ ಆದರು. ಕೊರಳಿಗೆ ಶಿಲುಬೆ ಕಟ್ಟಿಕೊಂಡರು ಪ್ರಾರ್ಥಿಸಿದರು. ಶಿಲುಬೆ ಹಾಕಿಕೊಳ್ಳದ ಜನರನ್ನು ಕತ್ತರಿಸಿದರು. ಆ ಶಿಲುಬೆಯೇ ಅವರಿಗೆ ಉರುಳಾಯಿತು. ಸೈತಾನರಾದರು ರಾಕ್ಷಸರಾದರು ದೇವಮಾನವರಾಗಲೇ ಇಲ್ಲ. ಜ್ಞಾನಿಯಾಗಬೇಕೋ ಜ್ಞಾನಿಯ ಅನುಯಾಯಿಯಾಗಬೇಕೋ ಎನ್ನುವದನ್ನು ತಿಳಿಯಲೇ ಇಲ್ಲ.

**ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚ ಬರಿಯ ಬಯಲು ಚೆನ್ನ ಮಲ್ಲಿಕಾರ್ಜುನಾ:**

ತನುವಿನ ಕಣ ಕಣದಲ್ಲಿ ಅರಿವಿನ ಅಮೃತವೇ ಧಾರಾಕಾರವಾಗಿ ಹರಿಯುತ್ತಲಿದೆ.

ಕಣ್ಣಿನಲ್ಲಿ ಪ್ರಪಂಚದ ಸೌಂದರ್ಯವೇ ಅಡಗಿದೆ. ಕಿವಿಯಲ್ಲಿ ಶಬ್ದ ಸಂಪತ್ತನ್ನು ತಿಳಿಯುವ ಶಕ್ತಿ ಗರ್ಭೀಕರಿಸಿಕೊಂಡಿದೆ. ಮೂಗಿನಲ್ಲಿ ಸಕಲ ಮಕರಂದದ ಪರಿಮಳವೇ ಅಡಗಿದೆ . ನಾಲಗೆಯಲ್ಲಿ ಪ್ರಸಾದದ ರುಚಿಯೇ ಅಡಗಿದೆ. ಚರ್ಮದಲ್ಲಿ ಸ್ಪರ್ಶಶಕ್ತಿ ಅಡಗಿದೆ. ಅದು ಪರುಷ ಶಕ್ತಿಯೂ ಹೌದು. ತನುವಿನಲ್ಲಿ ಈ ಎಲ್ಲ ಸಾರವನ್ನು ತಿಳಿದು ಸುಖಿಸಿ ನಡೆದಾಡುತ್ತಾ ಪಸರಿಸುವ ಜ್ಞಾನ ಶಕ್ತಿಯೇ ಅಡಗಿದೆ. ತನು ಅರಿವಿನಿಂದ ನುಡಿದದ್ದೇ ವೇದ ಉಪನಿಷತ್ತು ಭಗವದ್ಗೀತೆ, ಬೈಬಲ್, ಶಾಸ್ತ್ರ ಪುರಾಣ ಆಗಮವಾಯಿತು .

ನುಡಿಯುವ ತನು, ತನುವಿನಲ್ಲಿಯ ಅರಿವು ತಿಳಿದು ನುಡಿಯುತ್ತದೆ. ಕೇಳುವ ತನು ಆ ನುಡಿಯನ್ನು ಅರಿವಿನಿಂದ ಕೇಳುತ್ತದೆ. ಒಂದು ತನು ನುಡಿದು ಆನಂದಪಟ್ಟಿತು. ಮತ್ತೊಂದು ತನು ಕೇಳಿ ಆನಂದಪಟ್ಟಿತು . ಎರಡೂ ತನುಗಳು ಒಂದಾಗಲಿಲ್ಲವೆ? ನುಡಿಯುವ ಅರಿವಿನ ಜಾಡು ನುಡಿಯುವ ಬಾಯಿಗೆ ಗೊತ್ತಿದೆ. ಆ ಅರಿವಿನ ಜಾಡು ಕೇಳುವ ಕಿವಿಗೆ ಗೊತ್ತಿದೆ. ಆದರೆ ನುಡಿಯುವ ಬಾಯಿಯಲ್ಲಿ ಕೇಳುವ ಕಿವಿಯಲ್ಲಿ ನೋಡುವ ಕಣ್ಣಿನಲ್ಲಿ ರುಚಿಸುವ ನಾಲಗೆಯಲ್ಲಿ ವಾಸಿಸುವ ಮೂಗಿನಲ್ಲಿ ಸ್ಪರ್ಶಿಸುವ ಚರ್ಮದಲ್ಲಿ ಮನ ಬೆರೆತಿದೆ . ಅದು ಸೈತಾನ ; ತನುವನ್ನು ಅತ್ತಲಿತ್ತ ಹರಿ ಯುವಂತೆ ಮಾಡುತ್ತದೆ .

ಮನ ಶಬ್ದ ಕೇಳಿ ತನುವನ್ನು ಸುಡುವಂತೆ ಮಾಡುತ್ತದೆ . ಕೇಳಿದ ಶಬ್ದ ಸಂಗ್ರಹ ಮಾಡಿಕೊಂಡು ಮತ್ತೆ ಮತ್ತೆ ನೆನಪಿಸಿಕೊಂಡು ಕುಟ್ಟಿಕುಟ್ಟಿ ತನುವಿಗೆ ಪೆಟ್ಟು ಕೊಡುತ್ತದೆ . ಮನದ ಮಾತು ಕೇಳಿ ತನು ರಕ್ಕಸವಾಗುತ್ತದೆ ಇಲ್ಲ ಆತ್ಮಹತ್ಯೆ ಮಾಡಿಕೊಳ್ಳುತ್ತದೆ.ಆಗ ಮನ ತನುವಿನೊಂದಿಗೆ ಇಲ್ಲವಾಗುತ್ತದೆ. ಅರಿವಿನ ತನುವನ್ನು ರಕ್ಕಸನಂತೆ ಆವರಿಸಿದ ಮನ ತನುವಿನ ಅರಿವನ್ನು ಬಳಕೆ ಮಾಡಿಕೊಳುವುದೇ ಇಲ್ಲ .

ಅತ್ತಲಿತ್ತ ಹರಿವ ಮನದ ಶಿರವನ್ನು ಅರಿದು ಕೇಳುವ ಶಬ್ದವನು ಅರಿವಿಗೆ ಚೆಲ್ಲಿದರೆ; ಅರಿವು ಮನ ಕೇಳಿದ ಶಬ್ದವನು ನಿಶಬ್ದ ಮಾಡಿ ತನುವಿಗೆ ಪ್ರಸಾದವಾಗುತ್ತದೆ. ಶಬ್ದ ಪ್ರಸಾದವನುಂಡ ತನು ನಿಶಬ್ದವಾಗಿ ಹಸನ್ಮುಖಿಯಾಗಿ ಬೆಳಗುತ್ತದೆ . ಬಯಲ ಬೀಜವನುಂಡು, ಬಯಲಲ್ಲೇ ಬೆಳೆದು, ಬಯಲಲ್ಲೇ ಬೆರೆತು, ಬಯಲಲ್ಲಿ ಬಯಲಾಗಿ ಬಯಲಾಗುತ್ತದೆ. ಚೆನ್ನಮಲ್ಲಿಕಾರ್ಜುನನೇ ತಾನಾಗುತ್ತದೆ . ಬುದ್ಧ ಬಸವ ಮಹಾವೀರ ಕ್ರಿಸ್ತ ಕ್ರಿಷ್ಣನೇ ತಾನಾಗುತ್ತದೆ. ಜಗದಗಲ ಮುಗಿಲಗಲಕ್ಕೂ ಪಸರಿಸಿ ಪಾತಾಳದಿಂದತ್ತತ್ತ ಚಲಿಸಿ ಬ್ರಹ್ಮಾಂಡದಿಂದತ್ತತ್ತ ಚಿಮ್ಮಿ ತನು ವಿರಾಟ ಸ್ವರೂಪವೇ ಆಗುತ್ತದೆ.

☐

**ಅರಿವಿನ ಪರಿಮಳ**

- ☐ ಮನ ಆಗಮ ಪುರಾಣಗಳನ್ನು ಓದಿ ಪಂಡಿತ ಶಾಸ್ತ್ರಿಗಳ ವೇಷಹಾಕಿದೆ. ವಚನಗಳನ್ನು ಓದಿ ದೇಹಕ್ಕೆ ಲಿಂಗಕಟ್ಟಿ ವಿಭೂತಿ ಧರಿಸಿದೆ. ತಿಳಿಯದೆ ಮಂತ್ರಗಳನ್ನು ಓದಿ ಜುಟ್ಟುಬಿಟ್ಟು ಜನಿವಾರಗಳನ್ನು ಹಾಕಿದೆ. ದೇಹದಿಂದ ಬಂದ ಮಂತ್ರಗಳನ್ನು ಓದಿ ಪುಳಕಿತಗೊಂಡ ಮನ ದೇಹಕ್ಕೆ ಆಯಾ ವೇಷಗಳನ್ನು ಹಾಕಿ ಜಾತಿ ಮತ ಪಂಥಗಳತ್ತ ಸುಳಿಯುವಂತೆ ಮಾಡಿದೆ .
- ☐ ವೇದ ಶಾಸ್ತ್ರ ಆಗಮ ಪುರಾಣಗಳು ಬರಿಯ ಮಾತುಗಳು. ಅಲ್ಲಿ ಕಾಣುವುದೆಲ್ಲ ಮಾತಿನ ಮಾಲೆಯ ಹುಸಿಕಾಳಗ. ಅದು ಒಂದು ತನುವಿನಿಂದ ಹೊರಬಂದು ಪ್ರಯೋಗಕ್ಕೆ ಗುರಿಯಾಗಿ ಸೀಳಿಹೋದ ಬಾಣ; ಅದು ಮತ್ತೆ ಪ್ರಯೋಗಕ್ಕೆ ಗುರಿಯಾಗಲಾರದು.

# ಒಡಲು-ಮನ-ಶಿವಭಕ್ತ-ಶಿವ

**ಶಿವಭಕ್ತರ ರೋಮನೊಂದಡೆ, ಶಿವನು ನೋವ ನೋಡಾ.**
**ಶಿವಭಕ್ತರು ಪರಿಣಾಮಿಸಿದಡೆ, ಶಿವನು ಪರಿಣಾಮಿಸುವ ನೋಡಾ .**
**ಭಕ್ತದೇಹಿಕದೇವನೆಂದು ಶ್ರುತಿ-ಹೊಗಳುವ ಕಾರಣ,**
**ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ.**
**ತಾಯಿನೊಂದಡೆ ಒಡಲಶಿಶು ನೊಂದತೆರನಂತೆ,**
**ಭಕ್ತರು ನೊಂದಡೆ ತಾ ನೋವ ನೋಡಾ ಚನ್ನಮಲ್ಲಿಕಾರ್ಜುನಾ .**

**ಶಿವಭಕ್ತರ ರೋಮನೊಂದಡೆ, ಶಿವನು ನೋವ ನೋಡಾ. ಶಿವಭಕ್ತರು ಪರಿಣಾಮಿಸಿದಡೆ,ಶಿವನು ಪರಿಣಾಮಿಸುವ ನೋಡಾ :**

ಶಿವನಿಗೂ ಭಕ್ತನಿಗೂ ಅವಿನಾಭಾವ ಸಂಬಂಧ. ಶಿವನಿಲ್ಲದೆ ಭಕ್ತನಿಲ್ಲ , ಭಕ್ತನಿಲ್ಲದೆ ಶಿವನಿಲ್ಲ. ಭಕ್ತ ನನ್ನು ಸೃಷ್ಟಿಸಿ ಆತನ ಕಣಕಣದಲ್ಲಿ ಶಿವ ಬೆರೆತಿದ್ದಾನೆ. ಭಕ್ತ ಶಿವನ ಒಡವೆ. ಭಕ್ತನ ದೇಹ ಶಿವನ ಆಭರಣ.!

ಭಕ್ತನ ಕಣ್ಣಿನಲ್ಲಿ ಬೆರೆತು ಶಿವ ದೃಷ್ಟಿಯಾಗಿದ್ದಾನೆ. ಭಕ್ತನ ಕಿವಿಯಲ್ಲಿ ಬೆರೆತು ಶಿವ ಶಬ್ದವಾಗಿದ್ದಾನೆ. ಭಕ್ತನ ಮೂಗಿನಲ್ಲಿ ಬೆರೆತು ಶಿವ ಪರಿಮಳವಾಗಿದ್ದಾನೆ. ಭಕ್ತನ ನಾಲಿಗೆಯಲ್ಲಿ ಬೆರೆತು ಶಿವ ರುಚಿಯಾಗಿದ್ದಾನೆ. ಭಕ್ತನ ಚರ್ಮದಲ್ಲಿ ಬೆರೆತು ಶಿವ ಸ್ಪರ್ಶವಾಗಿದ್ದಾನೆ.

ಶಿವಭಕ್ತನ ಮನೆ ಶಿವನ ವಾಸಸ್ಥಾನ. ಒಡಲಿಗೆ ಪೆಟ್ಟು ಬಿದ್ದರೆ ಒಡೆಯನಿಗೆ ಪೆಟ್ಟು ಬಿದ್ದಂತೆ. ಒಡಲಿನ ರೋಮ ನೊಂದಡೆ ಶಿವ ನೊಂದಂತೆ. ಒಡಲು ಸುಖಿಸಿದರೆ ಒಡೆಯ ಸುಖಿಸಿದಂತೆ.

''ಭಕ್ತನಲ್ಲದೆ ಒಲ್ಲೆವೆಂದೆಂಬಿರಿ; ಭಕ್ತರಿಗಲ್ಲದೆ ಕೈಯಾನೆವೆಂಬಿರಿ,ಇದೇನ ಮಾಡುವಿರಿ? ಇದೆಲ್ಲಿಗೊಯ್ಯುವಿರಿ? ಪಾವನವಾದುದನು ಲಿಂಗಕ್ಕೆ ಮಾಡುವುದೇ ಆಚಾರ. ವಿಷಯಕ್ಕೆ ಇಕ್ಕಿ, ಅಸುಗತಿಗಿಳಿಯದಿರಿ, ಕೂಡಲಸಂಗನ ಶರಣರ ಒಡವೆಯಾ''

ಒಡಲಿಲ್ಲದೆ ಶಿವನಿಲ್ಲ ; ಶಿವನಿಲ್ಲದೆ ಒಡಲಿಲ್ಲ . ಶಿವನಿದ್ದ ಅರಿವಿನ ಒಡಲನು ಏನು ಮಾಡುವಿರಿ? ಲಂಚವಂಚನೆಗೆ ಕೈ ಒಡ್ಡುವುದೆ? ಸೆರೆಮನೆಗೆ ಒಡಲನೊಯ್ದು ಕಂಠ ಪೂರ್ತಿ ಕುಡಿಸುವುದೆ? ಜೂಜಿನ ಮನೆಗೆ ಕರೆದೊಯ್ದು ಜೂಜನಾಡುವುದೆ? ಒಡಲನು ವಿಷಯಕ್ಕೆ ಇಕ್ಕಿ ಶಿವನನ್ನು ಮರೆತು ಶಿವನಿದ್ದ ಮನೆಯನ್ನು ದು:ಖದಲ್ಲಿಕ್ಕುವುದೆ? ಒಡಲೊಡೆಯನಿಗೆ ನೋವಾದೀತೆಂದು ಒಡಲುಳ್ಳ ಭಕ್ತ ತಿಳಿಯಬೇಡವೆ? ಒಡಲು ಒಡಲೊಡೆಯನ ಒಡವೆಯೆಂದು ಒಡಲ ಭಕ್ತ ತಿಳಿಯಬೇಡವೆ?

**ಭಕ್ತದೇಹಿಕ ದೇವನೆಂದು ಶೃತಿ ಹೊಗಳುವ ಕಾರಣ, ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ. :**

''ಭಕ್ತದೇಹಿಕದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ,ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು ಗುಣವೆ? ಹೇಳಾ. ಕೂಡಲ ಸಂಗಮದೇವಾ, ಜಂಗಮರೂಪಾಗಿ

ಸಂಗಯ್ಯ ಬಂದಾನೆಂದು ಎಂದೆಂದೂ ನಾನು ಮಂಚವನೇರದ ಭಾಷೆ.''

ಭಕ್ತನ ದೇಹದ ದೇವನೆಂದು ಶೃತಿ ಹೊಗಳುವ ಕಾರಣ ಶಿವಭಕ್ತನ ಒಳ್ಳೆಯತನ ಹಾಗೂ ಕೆಟ್ಟತನಗಳು ಶಿವನಿಗೆ ಮುಟ್ಟುವವು ನೋಡಾ ಎಂದು ಅಕ್ಕ ಹೇಳುತ್ತಾಳೆ.

ಭಕ್ತ ದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ ; ಆಳುವವನು ಬರಲು ಆಳು ಮಂಚದ ಮೇಲಿರುವುದು ಒಳ್ಳೆಯದೆ? ಯಾರು ಬಂದರೂ ಅವನು ಶಿವದೇಹಿಕನೇ; ಅವನು ಸಂಗಮನಾಥನ ಸ್ವರೂಪನೇ ಅವನಿಗೆ ನಾನು ಅಹಂಕಾರ ತೋರಿಸಲು ಸಾಧ್ಯವೆ?

**ತಾಯಿ ನೊಂದಡೆ ಒಡಲ ಶಿಶು ನೊಂದ ತೆರನಂತೆ, ಭಕ್ತರು ನೊಂದಡೆ ತಾ ನೋವ ನೋಡಾ ಚೆನ್ನಮಲ್ಲಿಕಾರ್ಜುನಾ:**


ಗರ್ಭಧರಿಸಿದ ತಾಯಿ ನೊಂದರೆ ಒಳಗಿರುವ ಶಿಶು ನೊಂದ ತೆರನಂತೆ, ಭಕ್ತ ನೊಂದಡೆ ಒಡಲೊಡೆಯ ಚೆನ್ನಮಲ್ಲಿಕಾರ್ಜುನನೇ ನೊಂದಂತೆ ಎಂದು ಅಕ್ಕ ಮತ್ತು ಬಸವಣ್ಣ ಮಾರ್ಮಿಕವಾಗಿ ವಿವರಿಸಿದ್ದಾರೆ . ಶಿವಭಕ್ತನನ್ನು ಬಿಟ್ಟು ಶಿವನಿಲ್ಲ; ಶಿವನನ್ನು ಬಿಟ್ಟು ಶಿವಭಕ್ತನಿಲ್ಲ. ಅರಿವನ್ನು ಬಿಟ್ಟು ಮನವಿಲ್ಲ; ಮನವನ್ನು ಬಿಟ್ಟು ಅರಿವಿಲ್ಲ. ಅರಿವು ತನುವನ್ನು ಸೃಷ್ಟಿ ಮಾಡಿ, ತನುವಿನ ಕಣಕಣದಲ್ಲಿ ವಾಸಮಾಡಿದೆ. ಈ ಅರಿವಿಗೆ ಅಕ್ಕ ಶಿವನೆಂದು ನಾಮಕರಣ ಮಾಡಿದ್ದಾಳೆ. ಈ ಅರಿವೆಂಬ ಶಿವನ ಬೆಳಕಿನಿಂದ ಮನವೆಂಬ ನೆರಳು ಸೃಷ್ಟಿಯಾಗಿದೆ. ಈ ಮನ ಕೂಡಾ ತನುವನ್ನೇ ಮನೆಮಾಡಿಕೊಂಡು ಆ ಮನೆಯಲ್ಲಿ ವಾಸವಾಗಿದೆ. ಶಿವನಿಗೂ ಮತ್ತು ಭಕ್ತನಿಗೂ ಒಡಲೇ ಮನೆ ! ಇವರಿಬ್ಬರಿಗೂ ಅದು ಮಾಧ್ಯಮ !

ಮನ ಹೊನ್ನು ಹೆಣ್ಣು ಮಣ್ಣು ನೋಡಿ ವಿಷಯಾಸಕ್ತನಾಗಿ ಒಡಲನ್ನು ದುರ್ಬಳಕೆ ಮಾಡಿಕೊಂಡರೆ ಶಿವನ ಮನೆಗೆ ಕೆಟ್ಟ ಹೆಸರು ! ಅವುಗಳ ಆಸೆಗಾಗಿ ಮನ ಶಿವನ ಒಡಲನ್ನು ಹಗಲಿರುಳು ದುಡಿಯ ಹಚ್ಚುತ್ತದೆ ; ಇಲ್ಲ ಕಳುವು ಹಾದರ ಹಲ್ಲೆ ಲಂಚ ಭ್ರಷ್ಟಾಚಾರದಲ್ಲಿ ತೊಡಗಿ ಶಿವನ ಒಡಲನ್ನು ಜೇಲಿಗೆ ತಳ್ಳುತ್ತದೆ . ಶಿವನನ್ನು ನೋಯುವಂತೆ ಮಾಡುತ್ತದೆ . ಮನ ಶಿವನಿಗೆ ಮಾರುಹೋದರೆ ಶಿವ ಮನವನ್ನು ಶಿವಭಕ್ತನನ್ನಾಗಿ ಮಾಡುತ್ತಾನೆ. ಆಗ ಹೊನ್ನು ನೋಡಿದರೆ ಅದು ಹಳದಿ ಲೋಹವಾಗಿ ಕಾಣುತ್ತದೆ.ಹೆಣ್ಣು ನೋಡಿದರೆ ಅದು ತನ್ನಂತಹ ತನುವಾಗಿ ಕಾಣುತ್ತದೆ. ಮಣ್ಣು ನೋಡಿದರೆ ಜಲ ಕುದ್ದು ಪಾಕವಾಗಿ ಒಡಲಿಗೆ ಆಶ್ರಯ ನೀಡಿದ ಮಣ್ಣಾಗಿ ಕಾಣುತ್ತದೆ. ಒಡಲು ಹೊನ್ನು ಮಣ್ಣಿಗೆ ಜನ್ಮ ನೀಡಿದ್ದು ಜಲ! ಜಲಬಿಂದು ಗರ್ಭ ಸೇರಿ ಒಡಲಾಯಿತು. ಜಲಕುದ್ದು ಪಾಕವಾಗಿ ಮಣ್ಣಾಯಿತು. ಖನಿಜವಾಯಿತು . ಮಣ್ಣ ಗರ್ಭದಿಂದ ಹೊರಬಂದ ಹಳದಿ ಲೋಹ ಹೊನ್ನಾಯಿತು. ಒಡಲಿಗೂ ಹೊನ್ನಿಗೂ ಮಣ್ಣಿಗೂ ಜನ್ಮನೀಡಿದ್ದು ಜಲವಲ್ಲವೆ? ಆಮ್ಲಜನಕ ಜಲಜನಕಕ್ಕೆ ಜನ್ಮ ನೀಡಿದ್ದು ಬಯ ಲಲ್ಲವೆ? ಆ ಬಯಲೊಡೆಯನೇ ಜೀವಜಲವಾಗಿ ಗರ್ಭ ಸೇರಿ ಒಡಲಾದ; ಒಡಲೊಳಗೆ ತಾನಿದ್ದು ಶಿವನಾದ. ಆ ಶಿವನ ಬೆಳಕಿನಿಂದಲೇ ಮನ ಹುಟ್ಟಿ ಶಿವ ಭಕ್ತನಾದ. ಶಿವಭಕ್ತ ಶಿವನನ್ನು ಸೇರಿದರೆ ತಾನೇ ಶಿವ. ಶಿವಭಕ್ತನಿಗೂ ಶಿವನಿಗೂ ಭೇದವಿಲ್ಲ. ಶಿವೆಗೂ ಶಿವನಿಗೂ ಭೇದವಿಲ್ಲ. ಶಿವನು ತಾನೇ ಒಡಲೂ ತಾನೇ ಅರ್ಧನಾರೀಶ್ವರನೂ ತಾನೇ. ಮನ ಅಕ್ಕಮಹಾದೇವಿಯಾದರೆ ಅರಿವು ಚೆನ್ನ ಮಲ್ಲಿಕಾರ್ಜುನ ! ತಾನು ಶಿವಭಕ್ತೆ ,ಆತ ಶಿವ ! ಅರಿವಿನಲ್ಲಿ ಮನ ಬೆರೆತು ಅರಿವಿನೊಡಲಾಗುವ ಸೂತ್ರವನ್ನು ಅಕ್ಕ , ಬಸವಣ್ಣ ಓದುಗರಿಗೆ ಮನದಟ್ಟಾಗುವಂತೆ ವಿವರಿ ಸಿದ್ದಾರೆ.

□

# ವಚನಾನುಕ್ರಮಣಿಕೆ

| ಕ್ರ. | ವಚನ | | ಪುಟ |
|---|---|---|---|



ರೂಹಿಲ್ಲದ ಚೆಲುವೆ

## ಶುದ್ಧ ಶ್ರದ್ಧೆಯ ಸಿದ್ಧ ಕೃತಿ

ಉಪನಿಷತ್ತಿನ ಒಂದು ಪ್ರಸಂಗ: ಯಾಜ್ಞವಲ್ಕ್ಯನನ್ನು ಜನಕ ಕೇಳುತ್ತಾನೆ: ಮನುಷ್ಯನ ಬೆಳಕು ಯಾವುದು? ಸೂರ್ಯ ಎನ್ನುತ್ತಾನೆ ಯಾಜ್ಞವಲ್ಕ್ಯ. ಜನಕನ ಪ್ರಶ್ನೆ: ಸೂರ್ಯ ಮುಳುಗಿದ ನಂತರ? ಉತ್ತರ ಚಂದ್ರ. ಅದೂ ಮುಳುಗಿದ ನಂತರ? ಅಗ್ನಿ. ಅದೂ ಆರಿ ಹೋದಾಗ? ಮಾತು. ಮಾತು ನಿಂತಾಗ? ಆತ್ಮ ಎಂದ ಯಾಜ್ಞವಲ್ಕ್ಯ. ಅದು ನಮ್ಮ ಹೃದಯದೊಳಗೆ ಹೊಳೆಯುವ ಬೆಳಕು. ಆಸೆ, ಅನಿಷ್ಟ , ಅಂಜಿಕೆಗಳಿಂದ ಮುಕ್ತವಾದ ಒಂದು ಅವಸ್ಥೆ. ನಮ್ಮ ಚಿಂತನೆಗೆ ಒಂದು ಪ್ರೇರಣೆ! ಅಂತಹ ಅಂತಃ ಪ್ರೇರಣೆಯಿಂದ ಮೂಡಿ ಬಂದ ಒಂದು ಅರಿವಿನ ಬೆಳಕು ಶ್ರೀ ಬಸವರಾಜ ಸ್ವಾಮಿ ಅವರ ಈ ರೂಹಿಲ್ಲದ ಚೆಲುವೆ. ಇದು ತನುವಿನಲ್ಲೇ ಮನೆ ಮಾಡಿರುವ ಜ್ಞಾನದ ಬೆಳಕಿನ ಒಂದು ಗಂಭೀರ ಚಿಂತನ; ಗಹನ ಮಂಥನ! ಆರಂಭದಲ್ಲಿ ಲೇಖಕರು ಬರೆದಿರುವ ಓದುವ ಮುನ್ನದ ಮಾತುಗಳು ಅನುಭಾವಿ ಪ್ರೊ. ಸಂ.ಶಿ. ಭೂಸನೂರ ಮಠ ಅವರು ತಮ್ಮ ಸಂಪಾದನೆಯ ವಚನ ಸಾಹಿತ್ಯ ಸಂಗ್ರಹಕ್ಕೆ ಬರೆದಿರುವ ಒಳಗೆ ಪ್ರವೇಶದ ನುಡಿಗಳನ್ನು ನೆನಪು ಮಾಡಿಕೊಡುತ್ತವೆ. ಬಯಲಿನ ಪರಮರಹಸ್ಯ ಭೇದಿಸಿರುವ ಶರಣರ ವಚನಗಳನ್ನು ಕಂಡು ಅವರು ಸೋಜಿಗಗೊಂಡಿರುವಂತೆ, ಬಸವರಾಜ ಸ್ವಾಮಿ ಅವರು ಅಕ್ಕನ ಅಂತರಂಗದ ಬೆಳಕನ್ನು ಕಂಡು ಬೆಕ್ಕಸಗೊಂಡಿದ್ದಾರೆ. ಆ ಅರಿವಿನ ಬೆಳಕಿನ ನೆರಳಾಗಿದ್ದಾರೆ! ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ ಅಲ್ಲಮಪ್ರಭುದೇವರ ವಚನ-ನಿರ್ವಚನದ ಹಾದಿಯಲ್ಲೇ ನಡೆದಿರುವ ಬಸವರಾಜ ಸ್ವಾಮಿ ಅವರು ವಚನ ಸಾಹಿತ್ಯದ ಅಧ್ಯಯನಕಾರರಿಗೆ, ವ್ಯಾಖ್ಯಾನಕರರಿಗೆ ರೂಹಿಲ್ಲದ ಚೆಲುವೆಯ ಮೂಲಕ ಮರು ಚಿಂತನೆಯ ಹಣತೆ ಹಚ್ಚಿದ್ದಾರೆ. ಅತ್ಮ ಪ್ರಜ್ಞಾ ಜಾಗೃತಿಯ ಒಂದು ಅನುಪಮ ಅನುಭವ ನೀಡುವ ಒಂದು ಅನನ್ಯ ಕೃತಿಯನ್ನು ನಮಗೆ ನೀಡಿರುವ ಶ್ರೀ ಬಸವರಾಜ ಸ್ವಾಮಿ ಅವರನ್ನು ಅಭಿನಂದಿಸುತ್ತೇನೆ. ಮಾತು ಮನಂಗಳ ಮೀರಿದ ಮಹಾಘನದ ಅರಿವು ಸಾಮಾನ್ಯವಲ್ಲ. ಅದಕ್ಕೆ ಬೇಕಾದುದು ಬುದ್ಧಿಯಲ್ಲ; ಶ್ರದ್ಧೆ. ಅಂತಹ ಶ್ರದ್ಧೆಯ ಒಂದು ಸಿದ್ಧಿ ಈ ಕೃತಿ!

ಗೊ.ರು. ಚನ್ನಬಸಪ್ಪ
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು